

ಮುಸ್ಸಂಜೆಯ
ಮುನ್ನ
ಪದ್ಮಾ ಶ್ರೀಧರ್

[illegible]

[illegible]

[illegible]

[illegible]

[illegible]

[illegible]

ಮುಸ್ಸಂಜೆಯ ಮುನ್ನ

(ಸಾಮಾಜಿಕ ಕಾದಂಬರಿ)

ಪದ್ಮಾ ಶ್ರೀಧರ್

ಮಂಜುಶ್ರೀ ಪ್ರಕಾಶನ
೧೬ನೇ ಮೆಯಿನ್, ಕುವೆಂಪು ಹೈಸ್ಕೂಲ್ ಹಿಂಭಾಗ,
ಸರಸ್ವತಿಪುರಂ, ಮೈಸೂರು ೫೭೦೦೦೯

Mussanjey Munna- A social novel by Smt Padma Shreedar, 'CHIGURU', No. 1248, 7th B Cross, Yalahanka Upanagara, Bangalore560064, and Published by MANJUSHREE PRAKASHANA, 16th Main, Behind Kuvempu High School, Saraswathipuram - 570009.

Pp. 368+4=372.
Printed on 70 GSM Maplitho Paper.

First Publication 2011

PRICE Rs. **240/-** Maplitho Paper.

DTP: Smt. Asha Nayak

Impression at- Harshini Offset Printers, BANGALORE.

ಪ್ರಿಯ ಓದುಗರೇ,

ನಮಸ್ಕಾರಗಳು. 'ತರಂಗ' ವಾರಪತ್ರಿಕೆಯಲ್ಲಿ ಮೂವತ್ತೇಳು ಕಂತುಗಳಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡ **'ಮುಸ್ಸಂಜೆಯ ಮುನ್ನ'** ಎಂಬ ಕಾದಂಬರಿಯು ಈಗ ಪುಸ್ತಕ ರೂಪದಲ್ಲಿ ಪ್ರಕಟಗೊಂಡಿದೆ.

ದರ್ಪವನ್ನು ಸಾಧನವಾಗಿಟ್ಟುಕೊಂಡು, ಮನೆ ಮಂದಿಯನ್ನೆಲ್ಲಾ ತನ್ನ ಹದ್ದು ಬಸ್ತಿನಲ್ಲಿಟ್ಟುಕೊಳ್ಳಬಲ್ಲೆ ಎಂಬ ಅಹಂಕಾರದಿಂದ ಮೆರೆದ ವ್ಯಕ್ತಿ ವೃತ್ತಿಯಲ್ಲಿ ವಕೀಲ. ಕಾನೂನು ಬದ್ಧವಾಗಿ, ನ್ಯಾಯ ನಿಷ್ಠೆಗಳಿಗೆ ಕೋರ್ಟಿನಲ್ಲಿ ವಾದಿಸಿ, ಹೆಸರನ್ನು ಹಣವನ್ನು ಗಳಿಸಿದವನಾದರೂ, ಮಡದಿ ಮನಸಾರೆ ಮೆಚ್ಚುವ ಪತಿಯಾಗಲಿಲ್ಲ. ಸ್ವಂತ ಮಕ್ಕಳಿಗೆ ಹೆಮ್ಮೆಯ ತಂದೆಯಾಗಲಿಲ್ಲ. ಗಂಡನ ಬಗ್ಗೆ ಎಂದೂ ಸುಮಧುರ ಭಾವನೆಗಳು ಮೂಡಲೇ ಇಲ್ಲ. ಮಕ್ಕಳಿಗೆ ತಂದೆಯ ಬಗ್ಗೆ ಭಯಮಿಶ್ರಿತ ಉದಾಸೀನ. ತನ್ನ ಇಚ್ಛೆಯಂತೆಯೇ ಎಲ್ಲವೂ ನಡೆಯಲೇಬೇಕೆಂಬ ಹಠದ ಹುನ್ನಾರದಲ್ಲಿ ಅವನು ಯಾರಿಗೂ ಹತ್ತಿವಾಗಲೇ ಇಲ್ಲ. ಗಂಡಹೆಂಡಿರ ಭಾವನೆಗಳಲ್ಲಿ ಬಿರುಕು.. ತಂದೆಮಕ್ಕಳಲ್ಲಿ ಬೀಡುಬಿಟ್ಟ ಅಂತರ... ಈ ದೆಸೆಯಲ್ಲೇ ದಿನಗಳು ಉರುಳಿ ಹೋಗುತ್ತವೆ. ಹಗಲು ಕಳೆದು ಸಂಜೆಯ ಕಡೆಗೆ ದಿನಗಳು ಸರಿಯುವಾಗ ಅವನ ಜವಾಬ್ದಾರಿಗಳು ಹೆಚ್ಚುತ್ತವೆ... ಆದರೆ ತುಮುಲಗಳನ್ನು ಹೊರಗೆಡಹುವುದಿಲ್ಲ. ಆದರೆ ಸಂಜೆಯ ಬಾನಿನಲ್ಲಿ ಅವನಿಗಾಗಿ ಏನೂ ಉಳಿದಿಲ್ಲವೆಂಬ ಅರಿವು ಮೂಡಿದಾಗ, ಕೆಂಪು ಕಿರಣಗಳ ಮಬ್ಬು ಬೆಳಕಿನಲ್ಲಿ ಹುಡುಕಾಟವನ್ನು ನಡೆಸುತ್ತಾನೆ. ಸ್ವಾರ್ಥಿಯಾಗುತ್ತಾನೆ. ಆದರೆ ವ್ಯಥೆಯು, ಪರಿತಾಪದ ನಿಟ್ಟುಸಿರು ಹೊರಬರುವುದಿಲ್ಲ. ಆಸೆ ನಿರಾಸೆಗಳ ನಡುವೆ ತೂಗುವಾಗ ಸೋಲುವ ಅನುಭವವನ್ನು ವ್ಯಕ್ತಗೊಳಿಸುವುದಿಲ್ಲ.

ಈ ಸಾಮಾಜಿಕ ಕಾದಂಬರಿಯಲ್ಲಿ ರಚಿತಗೊಂಡ ಪಾತ್ರಗಳು, ಸನ್ನಿವೇಶಗಳು, ಸಂಭಾಷಣೆಗಳು ಕಲ್ಪನೆಯ ಲತಾಮಂಟಪದಲ್ಲಿ ಬೆಳೆದು, ಬಳ್ಳಿಯಾಗಿ ಹಬ್ಬಿಕೊಂಡು ಅತ್ತ ಇತ್ತ ಸುತ್ತಿಕೊಳ್ಳುವ ಗತಿ ದೀರ್ಘವಾಗುತ್ತದೆ.

ಈ ಕಾದಂಬರಿಯನ್ನು ಧಾರಾವಾಹಿಯಾಗಿ ಪ್ರಕಟಿಸಿದ 'ತರಂಗ' ವಾರಪತ್ರಿಕೆಯ ಸದಸ್ಯವರ್ಗದವರಿಗೆ, ಮತ್ತೊಮ್ಮೆ ಕೃತಜ್ಞತೆಗಳನ್ನು ತಿಳಿಸುತ್ತೇನೆ. ಹಾಗೆಯೇ ಕಾದಂಬರಿಯನ್ನು ಪುಸ್ತಕರೂಪದಲ್ಲಿ ಹೊರತರುವ ಹೊಣೆಯನ್ನು ಹೊತ್ತಿರುವ **'ಸೇನ್ ಪಬ್ಲಿಕೇಷನ್ಸ್'** ಬಳಗದವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಅಭಿಮಾನಿ ಓದುಗರಿಗೆ ವಂದನೆಗಳು.

೨೫-೧೧-೨೦೧೧ — *ಪದ್ಮಾ ಶ್ರೀಧರ್*

ಬೆಂಗಳೂರು

ಹೂರಣ

ಅಧ್ಯಾಯ–ಒಂದು		
ಅಧ್ಯಾಯ–ಎರಡು	ಮಕ್ಕಳಿರಲಪ್ಪಾ ಮನೆತುಂಬಾ	೧
ಅಧ್ಯಾಯ–ಮೂರು	ದೊಡ್ಡವವರಾಗುತ್ತಿರುವವರ ಗೋಳು	೨೫
ಅಧ್ಯಾಯ–ನಾಲ್ಕು	ಮನೆ ಬಿಟ್ಟು ಹೋದ ಮಗ	೩೪
ಅಧ್ಯಾಯ–ಐದು	ಮಗಳ ಪ್ರೇಮ ಪ್ರಕರಣ	೪೩
ಅಧ್ಯಾಯ–ಆರು	ಭಟ್ಟನ ಉಪಾಯ ಫಲಿಸಿತು	೫೪
ಅಧ್ಯಾಯ–ಏಳು	ಮನದಿಂ ಮರೆಯಾದನೇ ಕಿಶೋರ	೬೨
ಅಧ್ಯಾಯ–ಎಂಟು	ಉಪಾಯದಿಂದ ಹೆಣ್ಣು ತೋರಿಸಿದರು	೭೨
ಅಧ್ಯಾಯ–ಒಂಬತ್ತು	ನಂದಿಬೆಟ್ಟದಲ್ಲಿ ನಲಿವೋ ನಲಿವು	೮೧
ಅಧ್ಯಾಯ–ಹತ್ತು	ಹತ್ತಿರವಾದಷ್ಟೂ ದೂರ	೯೨
ಅಧ್ಯಾಯ–ಹನ್ನೊಂದು	ಕಿಶೋರನ ನಿಜ ಸ್ವರೂಪ	೧೦೩
ಅಧ್ಯಾಯ–ಹನ್ನೆರಡು	ತೂಗುಯ್ಯಾಲೆಯಲ್ಲಿ ವಿದ್ಯಾಳ ಮನಸ್ಸು	೧೧೩
ಅಧ್ಯಾಯ–ಹದಿಮೂರು	ಬೆಕ್ಕಿಲ್ಲದ ಮನೆಯ ಇಲಿಗಳು	೧೨೪
ಅಧ್ಯಾಯ–ಹದಿನಾಲ್ಕು		೧೩೩
ಅಧ್ಯಾಯ–ಹದಿನೈದು		೧೪೫
ಅಧ್ಯಾಯ–ಹದಿನಾರು	ಸದ್ದಿಲ್ಲದೆ ಬಂದಿಳಿದ ಗಂಡಿನ ಮನೆಯವರು	೧೫೨
ಅಧ್ಯಾಯ–ಹದಿನೇಳು	ಅಂತೂ ನಿಶ್ಚಿತಾರ್ಥ ಮುಗಿಯಿತು	೧೬೧
ಅಧ್ಯಾಯ–ಹದಿನೆಂಟು	ಪ್ರಶಾಂತನ ಪತ್ತೆಯಾಯಿತು	೧೭೨
ಅಧ್ಯಾಯ–ಹತ್ತೊಂಬತ್ತು	ಕಿಶೋರನಿಂದ ಧಮಕಿ	೧೮೩
ಅಧ್ಯಾಯ–ಇಪ್ಪತ್ತು	ಮದುವೆಮನೆಯಲ್ಲಿ ರಂಪ	೧೯೪
ಅಧ್ಯಾಯ–ಇಪ್ಪತ್ತೊಂದು	ಮದುವೆ ಮನೆಯಲ್ಲಿ ರಂಪ	೨೦೪
ಅಧ್ಯಾಯ–ಇಪ್ಪತ್ತೆರಡು	ಅನಾವಶ್ಯಕ ಹೆದರಿಕೆ	೨೧೫
ಅಧ್ಯಾಯ–ಇಪ್ಪತ್ತಮೂರು	ರಿಸೆಪ್ಷನ್‌ನಲ್ಲಿ ಭಟ್ಟನ ಸಂಸಾರ	೨೨೭

ಅಧ್ಯಾಯ–ಇಪ್ಪತ್ತನಾಲ್ಕು	ಚಿನ್ಮಯೀ ಒಗಟಾದಳೇ?	೨೩೭
ಅಧ್ಯಾಯ–ಇಪ್ಪತ್ತೈದು	ಪ್ರೇಮಳ ಹೊಸ ಹೆದರಿಕೆ	೨೪೯
ಅಧ್ಯಾಯ–ಇಪ್ಪತ್ತಾರು	ಚಿನ್ಮಯಿಗೆ ಕಿಶೋರನ ಸೆಳೆತ	೨೬೦
ಅಧ್ಯಾಯ–ಇಪ್ಪತ್ತೇಳು	ಕಿಶೋರನಿಗೆ ಮೈಸೋತಳು ಚಿನ್ಮಯಿ	೨೭೦
ಅಧ್ಯಾಯ–ಇಪ್ಪತ್ತೆಂಟು	ಮತ್ತೆ ಕಿಶೋರ ಲಾಕಪ್ಪಿಗೆ	೨೮೧
ಅಧ್ಯಾಯ–ಇಪ್ಪತ್ತೊಂಬತ್ತು	ಕಿಶೋರನ ಉಪಾಯ ಫಲಿಸಿತೇ?	೨೯೪
ಅಧ್ಯಾಯ–ಮೂವತ್ತು	ಚಿನ್ಮಯಿ ಗರ್ಭಿಣಿ	೩೦೭
ಅಧ್ಯಾಯ–ಮೂವತ್ತೊಂದು	ಚಾಣಕ್ಯ ತಂತ್ರ ಫಲಕೊಟ್ಟಿತು	೩೧೬
ಅಧ್ಯಾಯ–ಮೂವತ್ತೆರಡು	ಚಿನ್ಮಯಿಯ ಮದುವೆ	೩೨೬
ಅಧ್ಯಾಯ–ಮೂವತ್ತಮೂರು	ತಂದೆ ಸತ್ತರೂ ವೈರ ಸಾಯಲಿಲ್ಲ	೩೩೪
ಅಧ್ಯಾಯ–ಮೂವತ್ತನಾಲ್ಕು	ಪ್ರೇಮಳಿಗೆ ಹೃದಯಾಘಾತ	೩೪೩
ಅಧ್ಯಾಯ–ಮೂವತ್ತೈದು	ಕಾಮಾಕ್ಷಿಯ ಕುಟಿಲೋಪಾಯ	೩೫೦
ಅಧ್ಯಾಯ–ಮೂವತ್ತಾರು	ಭಟ್ಟನ ಮರುಮದುವೆ	೩೫೬
ಅಧ್ಯಾಯ–ಮೂವತ್ತೇಳು	ನಾಟಕವೇ ನಿಜವಾಯಿತು	೩೬೪–೩೬೮

*　*　*

ಮುಸ್ಸಂಜೆಯ ಮುನ್ನ

ಅಧ್ಯಾಯ–ಒಂದು

ಎರಡು ವರ್ಷಗಳ ಹಿಂದೆ, ಸೀತಾರಾಮ ಭಟ್ಟ ಈ ಬಂಗಲೆಯನ್ನು ಕೇವಲ ಒಂದು ಲಕ್ಷ ರೂಪಾಯಿಗಳಿಗೆ ಕೊಂಡುಕೊಂಡಿದ್ದ. ಯಾವುದೋ ಕಾಲದಲ್ಲಿ, ಯಾವುದೋ ಇಲಾಖೆಯವರು ಅತಿಥಿಗೃಹವನ್ನಾಗಿ ಕಟ್ಟಿಸಿದ್ದ ಬಂಗಲೆಯಿದು. ಏನಾಯ್ತೋ, ಹೇಗಾಯ್ತೋ, ಹರಾಜಿನಲ್ಲಿ ಕೂಗಿ, ತನ್ನದನ್ನಾಗಿ ಮಾಡಿಕೊಂಡಿದ್ದ. ಎಲ್ಲರ ಬಾಯಲ್ಲೂ ಅದೇ ಮಾತು. 'ಸೀ ಭಟ್ಟ' ಬಂಗ್ಲೇನ ಕೊಂಡುಕೊಂಡಿದಾನಂತೆ ಅಂತ. ಅದಕ್ಕೆ ಸಂಬಂಧಿಸಿದಂತೆ ಅನೇಕ ಮಾತುಗಳೂ ಕೇಳಿ ಬಂದವು.

"ಭಟ್ಟ ವರದಕ್ಷಿಣೆ ತೆಗೆದುಕೊಂಡಿರಬೇಕು. ಇಲ್ಲದಿದ್ದರೆ ಇಷ್ಟೊಂದು ಹಣ ಅವನಿಗೆಲ್ಲಿ ಸಿಗ್ತು ?" ತನ್ನ ಭಾಗದ ಆಸ್ತಿಯನ್ನೆಲ್ಲಾ ಮಾರಿ, ಆ ದುಡ್ಡಿನಲ್ಲಿ ಈ ಬಂಗ್ಲೇನ ಕೊಂಡ್ಕೊಂಡನಂತೆ. ಯಾಕೆ ಬೇಕಪ್ಪಾ ಇಷ್ಟು ದೊಡ್ಡ ಮನೆ ? ಏನು ಉರುಳಾಡಬೇಕೆ ? ಚಿನ್ನ ಬೆಳೆಯುತ್ತಿದ್ದ ತೋಟಗಳನ್ನು ಮಾರಿ ಇಲ್ಲಿ ಆಫೀಸು ತೆಗೀತಾನಂತೆ! ಲಾಯರ್‍ರ ಅದೃಷ್ಟ ಹೀಗೇ ಅಂತ ಹೇಳುಕ್ಕಾಗುಲ್ಲ.... ಎಂಥಾ ಕೇಸುಗಳು ಸಿಗುತ್ತೋ.... ಏನು ಸಂಪಾದಿಸ್ತನೋ... ದೇವನೇ ಬಲ್ಲ. ಈ ಎಲ್ಲಾ ಮಾತುಕತೆಗಳ ನಡುವೆಯೂ ಸೀತಾರಾಮ ಭಟ್ಟ ಈ ಊರಿಗೆ ಬಂದು ನೆಲೆಸಿದ. ಹೊಸ ಸಂಸಾರ ವನ್ನು ಹೂಡಿದ.

ಕೇವಲ ಎರಡು ವರ್ಷಗಳ ಕೆಳಗೆ ಮದುವೆಯಾಗಿತ್ತು. ಹೆಂಡತಿ ಒಂದು ಗಂಡುಮಗುವನ್ನು ಹೆತ್ತಿದ್ದಳು. ಭಟ್ಟನಿಗೆ ಹೆಂಡತಿ ಪ್ರೇಮಳ ಮೇಲೆ ಹೆಚ್ಚಿನ ಪ್ರೀತಿ ಇರಲಿಲ್ಲ. ಹೆಂಡತಿಗೆ ಎಷ್ಟು ಪ್ರೀತಿ ತೋರಿಸಬೇಕೋ ಅಷ್ಟೇ. ಉಳಿದಂತೆ ಯಾವ ಮಾತುಕತೆ ಇಲ್ಲ. ಒಂದು ತರಹ ಗಂಭೀರ. ಸದಾ ಏನೋ ಆಲೋಚನೆಯಲ್ಲಿರು ವವನಂತೆ ಇರುತ್ತಿದ್ದ. ಆದರೆ ಹೆಂಡತಿಯ ಮೇಲೆ ಸಿಟ್ಟು ಬಂದಾಗ ಮಾತ್ರ ನಿಷ್ಕರುಣಾ ಯಿಂದ ಬೈಯುತ್ತಿದ್ದ. ಮನಸಾರೆ ಅಳುವುದಕ್ಕೂ ಅವಳಿಗೆ ಸ್ವಾತಂತ್ರವಿರಲಿಲ್ಲ. ಬಚ್ಚಲು ಮನೆಯೊಳಗೆ ಬಾಗಿಲು ಹಾಕಿಕೊಂಡು, ಜೋರಾಗಿ ಅತ್ತು, ಹೃದಯವನ್ನು ಹಗುರ ಮಾಡಿಕೊಂಡು ಹೊರ ಬರುತ್ತಿದ್ದಳು. ಒಂದು ದಿನವಾದರೂ ಸಮಾಧಾನ

ಗೊಳಿಸಿದವನಲ್ಲ. ಅತ್ತರೆ ಅಳ್ತಾಳೆ, ತನಗೇನು ಅನ್ನುವ ಧೋರಣೆ...

ಮನೆಯಲ್ಲಿ ಯಾವುದಕ್ಕೂ ಕೊರತೆ ಇರಲಿಲ್ಲ. ದಿನನಿತ್ಯದ ಬಳಕೆಗೆ ಬೇಕಾಗುವ ಪ್ರತಿಯೊಂದು ವಸ್ತುವೂ ಮನೆಗೆ ನಿಯಮಿತವಾಗಿ ಬಂದು ಬೀಳುತ್ತಿತ್ತು. 'ಇದಿಲ್ಲ ಎನ್ನುವಂತಿಲ್ಲ. ಒಂದು ವೇಳೆ ಇಲ್ಲದಿದ್ದರೂ ಕೇಳುವಂತಿಲ್ಲ....' ಇವನ ಈ ವರ್ತನೆ ಯನ್ನರಿತ ಗೆಳೆಯರು, ನೆಂಟರಿಷ್ಟರು, ಇವನಿಂದ ದೂರದೂರವೇ ಇರುತ್ತಿದ್ದರು.

ಆ ಊರಿಗೆ ಬಂದು ಪ್ರಾಕ್ಟೀಸ್ ಪ್ರಾರಂಭಿಸಿದ ಮೇಲೆ, ಅವನ ಆದಾಯ ಹೆಚ್ಚಿತ್ತು. ಮನೆಯಲ್ಲೇ ಆಫೀಸನ್ನು ನಡೆಸುತ್ತಿದ್ದ. ಕಕ್ಷಿದಾರರು, ಯಾವಾಗ ಎಂದರೆ ಆವಾಗ ಬರುತ್ತಿದ್ದರು. ಕಕ್ಷಿದಾರರ ಮೇಲೆ ಕೋಪಗೊಳ್ಳುತ್ತಿರಲಿಲ್ಲ. ಎಷ್ಟೋ ಸಾರಿ, ಆ ಕಕ್ಷಿದಾರರು, ಬೇರೆ ಊರಿನವರಾದರೆ, ಅವರುಗಳು ಅವನ ಮನೆಯಲ್ಲೇ ಉಳಿದುಕೊಳ್ಳುತ್ತಿದ್ದರು. ಆದರೆ, ಅವರ ಎದುರಿಗೆ ಹೆಂಡತಿ ಬರುವಂತಿಲ್ಲ. ಮಗುವಿನ ಅಳು ಕೇಳುವಂತಿಲ್ಲ. ರೂಮಿನಲ್ಲೇ ಬಾಗಿಲನ್ನು ಹಾಕಿಕೊಂಡು ಕುಳಿತಿರಬೇಕಾಗುತ್ತಿತ್ತು. ಅಂಥ ಸಮಯದಲ್ಲಿ ತನ್ನ ಊರಿನವಳೇ ಆದ, ಕಾಮಾಕ್ಷಿಯನ್ನು ತನ್ನ ಮನೆಗೆ ಕರೆಸಿಕೊಳ್ಳುತ್ತಿದ್ದ. ಸಮೀಪದಲ್ಲೇ ಎಲ್ಲೋ ಅವಳು ವಾಸವಾಗಿದ್ದಳು.

ಕಾಮಾಕ್ಷಿಗೆ, ತನ್ನ ಗಂಡನಿಗೆ ಯಾವ ರೀತಿಯ ಸಂಬಂಧ ಎಂದು ಪ್ರೇಮ ಎಂದೂ ಕೇಳಿದವಳಲ್ಲ. ಕೇಳಿದ್ದರೂ ಭಟ್ಟ ಹೇಳುತ್ತಿರಲಿಲ್ಲ. ಕಾಮಾಕ್ಷಿಗೆ ಅವಳದೇ ಆದ ಸಂಸಾರವಿತ್ತು. ಗಂಡನಿದ್ದ, ಮಕ್ಕಳಿದ್ದರು. ಆದರೂ ಭಟ್ಟ ಹೇಳಿ ಕಳಿಸಿದೊಡನೆ ಓಡೋಡಿ ಬರುತ್ತಿದ್ದಳು.

ಮೊದಮೊದಲು ಪ್ರೇಮಳಿಗೆ ಕಾಮಾಕ್ಷಿಯ ಬಗ್ಗೆ ಅಸಹನೆ ಇತ್ತು. ಕ್ರಮೇಣ ಅವಳಿಗೆ ಹೊಂದಿಕೊಂಡಿದ್ದಳು. ಕಾಮಾಕ್ಷಿ ಹರಟೆ ಮಲ್ಲಿ; ಕಲ್ಲನ್ನೂ ಮಾತನಾಡಿಸುವ ನಿಪುಣೆ.

"ಪ್ರೇಮಕ್ಕ, ನೀವು ಸುಮ್ನೆ ಆಯಾಸ ಮಾಡ್ಕಂಬೇಡಿ, ನಾನೆಲ್ಲ ಮಾಡ್ತೀನಿ" ತನ್ನೂರಿನ ಧಾಟಿಯಲ್ಲೇ ಹೇಳುತ್ತಿದ್ದಳು. "ಇರಲಿ ಬಿಡಿ ಕಾಮಾಕ್ಷಿ.... ನನ್ನ ಮನೆ ಕೆಲಸ ಮಾಡಿದ್ರೆ ನಂಗೇನು ಆಯಾಸ? ಅಲ್ದೇ ನಂಗೂ ಹೊತ್ತು ಹೋಗಬೇಕಲ್ಲ?" ಕ್ರಮೇಣ ಅವರಿಬ್ಬರೂ ಸ್ನೇಹಿತೆಯರಾಗಿದ್ದರು. ಆಗ ಈಗ ಬಂದು ಕೂತು, ಅವರಿವರ ಮನೆ ಪುರಾಣವನ್ನೆಲ್ಲ ಇವಳ ಮುಂದೆ ಒದರುತ್ತಿದ್ದಳು. ಇದೇ ಪ್ರೇಮಳಿಗೆ ಮನೋ ರಂಜನೆ.

"ಈ ಸೀಭಟ್ಟಂಗೆ ಮಂಡೇಲಿ ಏನಿಲ್ಲ... ಇದೆಂಥಾ ಚೆಂದ... ಸದಾ ಆ ಕಕ್ಷಿ ದಾರ್‍ರ ಮುಂದೆ ಕೂತಿರೋದು. ಒಂದು ಹೋಗಾಣೆಲ್ಲ. ಬರಾಣೆಲ್ಲ. ನೀವ್ ಹೆಂಗಾರ ಸಹಿಸ್ಕೊಂಡ್ರೋ..." ಪ್ರೇಮ ನಗುತ್ತಿದ್ದಳು..

"ನಾನ್ಹೇಳಿದ್ರೆ ಕೇಳ್ಬಿಡ್ತಾರಾ? ನಂಗೆ ಈಗ ಇದೇ ಅಭ್ಯಾಸ್ವಾಗಿ ಹೋಗಿದೆ. ಹೊಸ್ದರಲ್ಲಿ ತುಂಬಾ ಬೇಜಾರಾಗ್ತಿತ್ತು... ಈಗ ಮಗು ಇದೆ. ಕಾಲ ಕಳ್ಯೋದೇ

ಗೊತ್ತಾಗುಲ್ಲ..."

"ನೀವು ಏನೇ ಹೇಳಿ ಪ್ರೇಮಕ್ಕ ನಿಮ್ಗಂಡಂಗೆ...."

"ಕಾಮಾಕ್ಷಿ...." ಭಟ್ಟ ಬಾಗಿಲ ಬಳಿ ಬಂದು ನಿಂತಿದ್ದ. ಕಾಮಾಕ್ಷಿ ನಾಲಗೆ ಕಚ್ಚಿಕೊಂಡಳು.

"ಅದೆಷ್ಟು ಜೋರಾಗಿ ಮಾತಾಡ್ತೀರಿ? ಬಂದೋರು ಏನಂದ್ಕೊಳ್ತಾರೆ. ಎಲ್ರಿಗೂ ಬೆಲ್ಲದ ಪಾನಕ ತಂದ್ಕೊಡು..." ಹೆಂಡತಿಯ ಕಡೆ ತಿರುಗಿ ನೋಡಿರಲಿಲ್ಲ. ಇಷ್ಟು ಬೇಡವಾದವನು, ಹೆಂಡ್ತೀನ್ಯಾಕೆ ಕಟ್ಕೊಂಡ ಎನ್ನೋದು ಪ್ರೇಮಳಿಗೆ ಅರ್ಥ ವಾಗಿರಲಿಲ್ಲ.

ಇದಕ್ಕೂ ಕಾಮಾಕ್ಷಿಯೇ ಉತ್ತರ ತಿಳಿಸಿದ್ದಳು. "ನಿಮ್ಗಂಡಂಗೆ, ಮಗ್ಲಲ್ಲಿ ಮಲಗ್ಲಿಕ್ಕೆ ಒಂದು ಹೆಣ್ಣು ಬೇಕಾಗಿತ್ತು ಅಷ್ಟೇ.... ಹಗ್ಲೆಲ್ಲಾ ಕಕ್ಷಿದಾರ್ರ ಮುಂದೆ ಕೂತಿರ್ತಾನೆ.... ರಾತ್ರಿ ಮಾತ್ರ ಹೆಂಡ್ತಿ ನೆನಪ್ಗೆ ಬರ್ತಾಳೆ... ಏನ್ಗಂಡಸ್ರೋ...?" ಪ್ರೇಮ ಮಾತಾಡಿರಲಿಲ್ಲ. ಮತ್ತೆ ಕಾಮಾಕ್ಷಿಯೇ ಮಾತನ್ನು ಮುಂದುವರೆಸಿದಳು – " ಇವ ನನ್ಮೆಚ್ಚಿದ್ದ... ನಾನೇ ಬ್ಯಾಡ ಅಂದ್ಬಿಟ್ಟೆ..... ತಿಳ್ದೂ ತಿಳ್ದೂ ಇಂಥೋನ್ನ ಲಗ್ನ ಆಗೋದುಂಟಾ ? ಒಂದ್ನಗಾಟಿಲ್ಲ, ತಮಾಷಿಲ್ಲ.... ಗುಂ ಅಂತ ಓಡಾಡೋನ್ನ ಕಟ್ಕೊಂಡಿದ್ರೆ..... ನಾನು ತ್ಯಲೆ ಕೆಟ್ಟು ಓಡ್ಹೋಗ್ಬೇಕಾಗಿತ್ತು.."

ಪ್ರೇಮ ಮುಸಿ ಮುಸಿ ಅತ್ತಳು. "ಅಯ್ಯೋ ಏನಾಗ್ಹೋಯ್ತು ಅಂತ ಅಳ್ತೀರಾ ಪ್ರೇಮಕ್ಕ.... ಅವನು ನನ್ ಮದ್ವೆಯಾಗ್ತೀಯಾಂತ ಕೇಳ್ದ.... ನಾನಿಲ್ಲಾಂತ ತಲೆಯಾಡಿ ಸ್ಬಿಟ್ಟೆ... ಆದ್ರೆ ನಿಮ್ಮಾಣೆ, ಅವ್ನೆಂದೂ ನನ್ನ ಮೈ ಮುಟ್ಟೋನಲ್ಲ, ಅಂಥ ಬಿಗಿ. ಅದಕ್ಕೇ ಮತ್ತೆ ಅವನ್ನರೆದ್ರೆ ನಾನ್ಬರೋದು; ಇಲ್ದಿದ್ರೆ ಅವನ್ಮುಖ ಕೂಡ ನೋಡ್ತಿರ್ತಿರ್ಲಿಲ್ಲ."

"ನನ್ಗಂಡ ಒಳ್ಳೋನು ಅಂತ ಈ ಕಾಮಾಕ್ಷಿ ಹೊಗಳ್ಬೇಕು... ಇವ್ಳಿಗಿಂತ ಎಲ್ಲಾ ವಿಧದಲ್ಲೂ ನಾನು ಮೇಲುಗೈ. ಆದ್ರೂ ನನ್ಗಂಡಂಗೆ ನನ್ಮೇಲೆ ಪ್ರೀತಿ ಇಲ್ವಲ್ಲ ಯಾಕೆ ? ಈಗ್ಲೂ ಕದ್ದು ಮುಚ್ಚಿ ಇವಳನ್ನೇ ಪ್ರೀತಿಸ್ತಿರಬಹುದೇ....?" ಯಾಕೋ ಅಸಹ್ಯವೆನಿಸಿತ್ತು. ಮಗುವನ್ನು ಎತ್ಕೊಂಡು ಎದ್ದು ಒಳಗ್ಹೋಗಿದ್ದಳು. ತೊಟ್ಟಿಲಿಗೆ ಮಗುವನ್ನು ಹಾಕಿ, ತೂಗತೊಡಗಿದಳು.

ಭಟ್ಟ ಕೆಟ್ಟವನಲ್ಲ; ಹೆಂಡತಿಯನ್ನು ಅತಿ ಮುಚ್ಚಟೆ ಮಾಡದಿರಬಹುದು. ಆದರೆ ಎಂದೂ ಹೊಡೆದವನಲ್ಲ. ಸುಮ್ಸುಮ್ನೆ ಬೈದವನಲ್ಲ. ಮನೆಯಲ್ಲಿ ಬೇರೆ ಯಾವುದಕ್ಕೂ ಕಡಿಮೆ ಇರಲಿಲ್ಲ. ತಿಂಗಳಿಗಾಗುವಷ್ಟು ದಿನಸಿ ಸಾಮಾನು ಮನೆಯಲಿ ಯಾವಾಗಲೂ ಬಿದ್ದಿರುತ್ತಿತ್ತು. ಉಡಲು ಬಟ್ಟೆಗಳಿದ್ದವು. ಹೊರಗಿನ ಕೆಲಸಕ್ಕೆ ಕೆಲಸದವಳಿ ದ್ದಳು. ಆದರೂ ಏನೋ ಕೊರತೆ. ಎಲ್ಲಿಗೂ ಹೊರಗೆ ತಿರುಗಾಡಲು ಕರೆದುಕೊಂಡು ಹೋಗುತ್ತಿರಲಿಲ್ಲ. ಹೋಟೆಲ್, ಸಿನೆಮಾ ಇಲ್ಲವೇ ಇಲ್ಲ. ನೆಂಟರಿಷ್ಟರು, ಹಬ್ಬ-ಹುಣ್ಣಿಮೆ ಎಂದು ಕರೆದರ, ತಾನೂ ಹೋಗುವುದಿರಲಿ, ಇವಳನ್ನೂ ಕಳಿಸುತ್ತಿರಲಿಲ್ಲ.

ಹಾಗೊಮ್ಮೆ ಬಲವಂತಕ್ಕೆ ಕಟ್ಟುಬಿದ್ದು, ಕಳಿಸಬೇಕಾಗಿ ಬಂದರೆ, ಕರೆದವರೇ ಬಂದು ಕರೆದುಕೊಂಡು ಹೋಗಿ, ಮತ್ತೆ ವಾಪಸ್ಸು ಕರೆತಂದು ಬಿಡಬೇಕಾಗುತ್ತಿತ್ತು. ಇದನ್ನೆಲ್ಲ ತಿಳಿದೇ ಕಾಮಾಕ್ಷಿ ಮದುವೆಯಾಗಲು ಒಪ್ಪಲಿಲ್ಲವೇನೋ? ನನಗೆಲ್ಲಿ ಗಂಟುಬಿದ್ದ ಈ ಮನುಷ್ಯ ಅಂತ ಒಮ್ಮೊಮ್ಮೆ ರೇಗಿ ಹೋಗುತ್ತಿತ್ತು. ಗಂಡನ ಮೇಲಿನ ಕೋಪಕ್ಕೆ ಮಗುವಿಗೆ ಒಂದೇಟು ಹಾಕುತ್ತಿದ್ದಳು. ಮಗು ಜೋರಾಗಿ ಅಳುವಂತೆಯೂ ಇಲ್ಲ. ಇಂಥೋನಿಗ್ಯಾಕೆ ಸಂಸಾರ ? ಹೆಂಡತಿ, ಮಕ್ಕಳು ? ಇವನನ್ನು ಬಿಟ್ಟು ಯಾಕೆ ಹೋಗಬಾರದು ಅಂತ ಅನೇಕ ಸಾರಿ ಅನ್ನಿಸಿದ್ದುಂಟು! ಆದರೆ ಎಲ್ಲಿಗೆ ? ತವರಿಗೆ ಹೋದರೆ, ಅವರುಗಳಿಗೆ ಕಷ್ಟ... ಈಗ ತಾನೊಬ್ಬಳೇ ಅಲ್ಲ, ಈ ಮಗು.... ಅಲ್ಲದೇ ತಾನೀಗ ಮತ್ತೆ ಬಸುರಿ! ಕಾಮಾಕ್ಷಿ ಹೇಳಿದ್ದ ಮಾತುಗಳು ನೆನಪಾದವು.

ತನ್ನ ಗಂಡನಿಗೆ ತಾನು ಕೇವಲ ಭೋಗದ ವಸ್ತು. ಎಷ್ಟೋ ವೇಳೆ, ಅವನು ಮಲಗಲು ಬರುವ ವೇಳೆಗೆ ಇವಳು ನಿದ್ದೆ ಹೋಗಿರುತ್ತಿದ್ದಳು. ನಿದ್ದೆ ಬಂದವಳನ್ನು ಎಬ್ಬಿಸಿ ತನ್ನ ಮಗ್ಗುಲಿಗೆ ಎಳೆದುಕೊಳ್ಳುತ್ತಿದ್ದ. ಅವನು ಸಿಟ್ಟುಗೊಳ್ಳುವನೆಂದು ಹೆದರಿ ಇವಳು ಎಲ್ಲವನ್ನೂ ಸಹಿಸಿಕೊಳ್ಳುತ್ತಿದ್ದಳು.

* * *

ಭಟ್ಟನಿಗೆ ತಾಯಿ ಇರಲಿಲ್ಲ. ತಂದೆ ಮರುಮದುವೆ ಮಾಡಿಕೊಂಡಿದ್ದರು. ಆಗ ಭಟ್ಟನಿಗೆ ಹದಿನೈದು ವರ್ಷಗಳು ತುಂಬಿದ್ದವು. ತಾಯಿ ತೀರಿಹೋದದ್ದು, ಅವನಿಗೆ ಆಘಾತವನ್ನುಂಟುಮಾಡಿತ್ತು. ಕೆಲವೇ ತಿಂಗಳುಗಳಲ್ಲಿ ತನ್ನ ತಂದೆ ಮರು ಮದುವೆ ಆದದ್ದು ಮನಸ್ಸನ್ನು ಕೆಡಿಸಿತ್ತು. ತಂದೆಯ ಮೇಲೆ ಏನೋ ಆಕ್ರೋಶ. ಅಪರನ್ನು ದ್ವೇಷಿಸಲಾರಂಭಿಸಿದ. ಮಲತಾಯಿ ಇವನಿಗಿಂತ ಆರೇಳು ವರ್ಷ ದೊಡ್ಡ ವಳು. ಅವಳ ಬಗ್ಗೆ ಏನೋ ತಿರಸ್ಕಾರ. ಹೀಗೆ ತೊಳಲಾಟದಲ್ಲಿದ್ದವನು, ಸ್ಕೂಲಿಗೆ ಹೋಗದೇ ಚಕ್ಕರ್ ಹೊಡೆದು, ಎಲ್ಲೆಲ್ಲೋ ಅವಿತಿಟ್ಟುಕೊಂಡು ಸಮಯವನ್ನು ಕಳೆಯು ತ್ತಿದ್ದ. ಇದನ್ನು ತಿಳಿದ ಅವನ ಸೋದರಮಾವ, ಅವನನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಅವನಿಗೆ ತಿಳಿವಳಿಕೆಯನ್ನು ಹೇಳಿ, ತನ್ನ ಊರಿನ ಸ್ಕೂಲಿಗೆ ಸೇರಿಸಿದ. ಆಟವಾಡಿಕೊಂಡು ನಗುನಗುತ್ತಾ ಬೆಳೆಯಬೇಕಾಗಿದ್ದ ಭಟ್ಟ, ಪುಸ್ತಕದ ಹುಳುವಿನಂತೆ, ಓದಿನಲ್ಲಿ ಮುಳುಗಿ ಹೋದ. ಓದುವ ಹವ್ಯಾಸವನ್ನು ಬೆಳೆಸಿಕೊಂಡ. ಆ ಸಮಯದಲ್ಲಿ ಅವನಿಗೆ ಕಾನೂನು ವ್ಯಾಸಂಗ ಮಾಡಬೇಕೆಂಬ ಆಸೆ ಬೆಳೆಯಿತು.

ತನ್ನ ಹಳ್ಳಿಯಲ್ಲಿದ್ದ ಗದ್ದೆ, ತೋಟ, ಮಳೆ-ಬೆಳೆಗಳ ಕಡೆ ಇವನಿಗಿದ್ದ ಆಸಕ್ತಿ ಮಾಯವಾಯಿತು. ಅದೆಲ್ಲಾ ತನಗಲ್ಲ, ತನ್ನದಲ್ಲ ಎಂಬ ಭಾವನೆ ಬೆಳೆಯತೊಡಗಿತು. ಅವನು ಲಾ ಕಾಲೇಜಿಗೆ ಸೇರಿಕೊಳ್ಳುತ್ತೇನೆಂದಾಗ, ಮನೆಯವರ್‍ಯಾರಿಗೂ ಇಷ್ಟವಿರಲಿಲ್ಲ. ಅವರುಗಳು ವಿರೋಧಿಸಿದಷ್ಟೂ ಇವನ ಹಠ ಹೆಚ್ಚಾಗಿತ್ತು.... ಕಡೆಗೆ ಹಿರಿಯರೇ ಸೋಲಬೇಕಾಯ್ತು. ಇವನು ಲಾ ಕಾಲೇಜಿಗೆ ಸೇರಿದ. ಲಾಯರ್ ಪದವಿಯನ್ನು

ಪಡೆದ. ಆ ದಿನಗಳಲ್ಲಿ ಅವನ ವ್ಯಾಸಂಗದ ಒಂದು ವಿಷಯವನ್ನು ಬಿಟ್ಟರೆ, ಉಳಿದಂತೆ ಅವನ ಜೀವನದಲ್ಲಿ ಹೇಳಿಕೊಳ್ಳುವಂಥ ವಿಷಯಗಳು ಏನೂ ಇರಲಿಲ್ಲ.

ಅನಂತರ ನಗರದ ಅಡ್ವೋಕೇಟ್ ಮಹಾಬಲ ಶಾಸ್ತ್ರಿಗಳ ಮಾರ್ಗದರ್ಶನದಲ್ಲಿ ಪ್ರಾಕ್ಟೀಸ್ ಪ್ರಾರಂಭಿಸಿದ. ವಯಸ್ಸಿಗೆ ಮೀರಿದ ಗಾಂಭೀರ್ಯದಿಂದಿರುವವನನ್ನು ಕಂಡು ಶಾಸ್ತ್ರಿಗಳಿಗೆ ಅವನಲ್ಲಿ ಮೆಚ್ಚುಗೆ ಮೂಡಿತ್ತು. ತಮ್ಮೊಂದಿಗೇ ಪ್ರಾಕ್ಟೀಸ್ ಮಾಡುತ್ತಿರುವವನು, ತಮ್ಮ ಅಳಿಯನಾದರೆ ಚೆನ್ನ ಎಂಬ ಹಂಬಲ ಮೂಡಿತು. ಭಟ್ಟನ ತಂದೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದರು. ಆದರೆ ಶಾಸ್ತ್ರಿಗಳ ಮಗಳು ಕಲ್ಯಾಣಿಗೆ ಇವನಲ್ಲಿ ಯಾವ ಆಸಕ್ತಿಯೂ ಇರಲಿಲ್ಲ. ಅದೇ ವಿಷಯವನ್ನು ಭಟ್ಟನಿಗೆ ಹೇಳಿದಳು.

"ನನಗೆ ನಿಮ್ಮನ್ನು ಮದುವೆಯಾಗಲು ಇಷ್ಟವಿಲ್ಲ. ನಾನು ಬೇರೆ ಯಾರನ್ನೋ ಪ್ರೀತಿಸ್ತಿದೀನಿ. ಈ ವಿಷಯವನ್ನು ಅಪ್ಪಯ್ಯಂಗೆ ತಿಳಿಸಿ, ನೀವೇ ನಮ್ಮಿಬ್ಬರ ಮದುವೆಗೆ ಅವರನ್ನು ಒಪ್ಪಿಸಬೇಕು." ಎಂದು ಕೇಳಿಕೊಂಡಿದ್ದಳು. ಭಟ್ಟ ಇದ್ದುದ್ದನ್ನು ಇದ್ದ ಹಾಗೇ ಶಾಸ್ತ್ರಿಗಳಿಗೆ ತಿಳಿಸಿದಾಗ, ಮನೆಯಲ್ಲಿ ಒಂದು ದೊಡ್ಡ ಕೋಲಾಹಲ. ಹೊಡೆತ, ಬೈಗುಳಕ್ಕೆ ಹೆದರದ ಕಲ್ಯಾಣಿ ಮನೆ ಬಿಟ್ಟು ಓಡಿ ಹೋಗಿದ್ದಳು. ಅವಳನ್ನು ಹುಡುಕಿಸಿ, ಅವಳ ಪ್ರಿಯಕರನೊಂದಿಗೇ ವಿವಾಹವನ್ನು ನೆರವೇರಿಸಿದ್ದರು. ತನಗೂ ಮದುವೆಯ ವಯಸ್ಸಾಗಿದೆಯೆಂದು ಭಟ್ಟನಿಗೆ ಅರ್ಥವಾಗಿತ್ತು. ಮತ್ತೆ ಮಹಾಬಲ ಶಾಸ್ತ್ರಿಗಳು ಯಾವುದಾದರೂ ಹೆಣ್ಣನ್ನು ಹೇಳುವ ಮೊದಲೇ ತಾನು ಮದುವೆಯಾಗಿಬಿಡಬೇಕೆಂದು, ಕಾಮಾಕ್ಷಿಗೆ ತನ್ನ ಇಷ್ಟವನ್ನು ತಿಳಿಸಿದ್ದ.

ಕಾಮಾಕ್ಷಿ ಭಟ್ಟನ ಸೋದರಮಾವನ ಮನೆಯ ಸಮೀಪ ಇದ್ದವಳು. ಆಗಾಗ್ಗೆ ಇವರ ಮನೆಗೆ ಬರುತ್ತಿದ್ದಳು. ಸೋದರತ್ತೆಗೆ ಅಡುಗೆ ಕೆಲಸದಲ್ಲಿ, ಮನೆ ಕೆಲಸದಲ್ಲಿ ಸಹಾಯ ಮಾಡುತ್ತಿದ್ದಳು. ನೋಡಲು ಚೆನ್ನಾಗಿದ್ದಳು. ವಿಪರೀತ ಮಾತುಗಳನ್ನಾಡುತ್ತಿದ್ದಳು. ಮನೆಯಲ್ಲಿ ಎಲ್ಲರಿಗೂ ಬೇಕಾದವಳಾಗಿದ್ದಳು. ಆದರೆ ಕಾಮಾಕ್ಷಿ ಇವನನ್ನು ನಿರಾಕರಿಸಿದಾಗ ಇವನಿಗೆ ಆಶ್ಚರ್ಯವಾಗಿತ್ತು. ಅಲ್ಲದೇ ಕಾರಣವೂ ವಿಚಿತ್ರವೆನಿಸಿತು.

"ಸೀಭಟ್ಟ, ನಾನೆಂದೂ ಆ ಭಾವ್ನೇಲಿ ನೋಡ್ಲಿಲ್ಲ ಕಣೋ.... ನಂಗ್ನಿನ್ನ ಮದ್ವೆಯಾಗೋ ಇಷ್ಟಿಲ್ಲ." ಎಂದು ಬಿಟ್ಟಿದ್ದಳು. ಒಂದು ಗಳಿಗೆ ಅವಳ ಮೇಲೆ ರೋಷ ಉಕ್ಕಿದರೂ, ಅವಳ ಮನಸ್ನಲ್ಲಿ ಏನಿದೆ ಅಂತ ತಿಳಿದಂತಾಯ್ತು ಎಂದುಕೊಂಡು ಸುಮ್ಮನಾಗಿದ್ದ. "ಒಂದ್ಸಾರಿ ಮದುವೆಯಾಗುವ ಬಯಕೆ ಹುಟ್ಟಿತೆಂದರೇ, ಅದು ಮದುವೆಯಾದಾಗಲೇ ತೀರುವುದು...!"

"ದಿನಾ ಹೋಗಿ ಬಂದು ಮಾಡೋದು ಕಷ್ಟವಾಗ್ತಿದೆ.... ನಾನು ನಗರದಲ್ಲೇ ಮನೆ ಮಾಡ್ತೀನೆ." ಎಂದಿದ್ದ ಮಾವನೊಡನೆ. "ಒಬ್ನೇ ಏನ್ಮಾಡ್ತೀಯ ? ಒಂದ್ ಬಿಸ್ನೀರು ಕಾಸುಕ್ಕೆ ಬರುಲ್ಲ ನಿಂಗೆ..." ಅತ್ತೆ ತಮಾಷೆ ಮಾಡಿದ್ದಳು. "ಬಿಸ್ನೀರು ಕಾಸುಕ್ಕೆ ಒಂದು ಹೆಂಡ್ತೀನ ತಂದ್ರಾತು." ಮಾಮ ದನಿಗೂಡಿಸಿದ್ದ. ಭಟ್ಟ ಸುಮ್ಮನಿದ್ದ.

"ಏನೋ ಸೀತರಾಮ, ಮದ್ವೆಯಾಗ್ತೀಯೇನೋ ? ಹೆಣ್ಣನ್ನು ನೋಡೋದ ?" ಇವನು ಅಲ್ಲಿಯೆ ಓಡಾಡಿಕೊಂಡಿದ್ದ ಕಾಮಾಕ್ಷಿಯ ಕಡೆ ನೋಡಿದ. ಅವಳು ನಕ್ಕಳು. " ಅಲ್ಕಣ್ಮಾಮ.... ಅವನ್ಕೇಳಿದ್ರೆ ಏನ್ಹೇಳಾನು ? ಹೆಣ್ಣ ನೋಡಿ ಮದ್ವೆ ಮಾಡ್ಬೇಕಪ್ಪ." " ನೀ ಸುಮ್ನಿರೇ ಕಾಮಾಕ್ಷಿ. ನಿನ್ನೇನ್ಕೇಳ್ಲಿಲ್ಲ ಯಾರೂ..." "ದಿಟ....ಅಂದ್ರೆ, ಭಟ್ಟಂಗೆ ಆಸೆ ಇರೋದ್ರಿಂದ್ಲೇ ಬೇರೆ ಮನೆ ವಿಷಯ ಎತ್ತಿರೋದು... ನಾ ಮದ್ವೆಯಾಗ್ತೀನಿ ಅಂತ ಹೆಂಗೆ ಹೇಳ್ಕೋಂಡಾನು ?" "ಹೌದೇನೋ... ಕಾಮಾಕ್ಷಿ ಹೇಳೋದು ದಿಟಾನ?" ಭಟ್ಟ ಸುಮ್ಮನಿದ್ದ.

"ಸರಿ ಬಿಡು ಅರ್ಥಾತು. 'ಮೌನಂ ಸಮ್ಮತಿ ಲಕ್ಷಣಂ' ಅಂತ. ನಿಮ್ಮಪ್ಪಗೆ ಇವತ್ತೇ ತಿಳಿಸ್ತೀನಿ." "ಬೇಡ್ಮಾವ, ಅಪ್ಪಗೆ ತಿಳ್ಸೋದೇನೂ ಬ್ಯಾಡ... ನೀವೇ ನೋಡಿ." "ನಿಮ್ಮಪ್ಪಗೆ ಕ್ವಾಪ ಬಂದ್ರೇ..." "ಆಗ ನೋಡ್ಕೊಂಡ್ರಾತು...." ಅಪ್ಪನ ಮೇಲಿನ ಅಸಹನೆ ಈಗಲೂ ಮುಂದುವರಿದಿದೆ ಎನ್ನುವುದನ್ನು ಮಾವ ಬಲ್ಲ. ಆದರೂ, ತನ್ನ ಮೇಲೆ ಆಕ್ಷೇಪಣೆ ಬರಬಾರದೆಂದುಕೊಂಡು ಭಾವನ ಹತ್ತಿರ ಮಾತಾಡಿದ. "ಭಾವ, ಸೀತಾರಾಮಂಗೂ ಮದ್ವೆ ವಯಸ್ಸಾಯ್ತು. ಮನಿಗೆ ಸೊಸೆ ತರೂದಿಲ್ಲೇನು? ಹೆಣ್ಣುಗಳನ್ನು ವಿಚಾರಿಸೋಣೇನು?" "ಅವ್ನೀಗ ನನ್ನ ಮಗನಿಗಿಂತ, ನಿನ್ಗೆ ಸ್ವಂತದವನಾಗಿದಾನೆ. ನಿನ್ಕಡೇದೇ ಯಾವ್ದಾದ್ರೂ ಹುಡ್ಗಿ ಇದ್ರೆ ನೋಡಿ ವಾಲ್ಗಾನೂ ದಿಸು... ನನ್ನೇನು ಕೇಳ್ತಿ?" "ಹಾಗಲ್ಲ ಭಾವ, ಈ ವೇಳೆಗಾದ್ರೂ ಅಪ್ಪ-ಮಗನ ಅಸಮಾಧಾನ ಕಡ್ಮೆಯಾಗ್ಬೇಕು... ಹಿಂಗೇ ಇದ್ರೆ ಏನ್ಚೆನ್ನ? ಹೆಣ್ಮಕ್ಳ ಮದ್ವೆ ಮಾಡ್ಬೇಕು. ಹಿರಿ ಮಗ್ನೇ ದೂರ ಇದ್ರೆ ಜನ ನಗೋಲ್ಲೇನು!" "ಜನ ನಗೋಂಥಾದ್ದೇನಾಗಿದೆ ಈಗ ? ಸೊಸೆ ಬರೋಕಾಲಕ್ಕೆ ಬರ್ತಾಳೆ ಬಿಡು. ಹೆಣ್ಮಕ್ಳು ಇನ್ನೂ ಚಿಕ್ಕೋರು." ಈ ಸಂಭಾಷಣೆಗಳನ್ನು ಕಿರಿಯ ಹೆಂಡತಿ ಸಾವಿತ್ರಿ ಕೇಳಿಸ್ಕೊಂಡಿದ್ದಳು. ಕಾಫಿಯನ್ನು ತಂದು ಕೊಡುವ ನೆವದಲ್ಲಿ ಹೊರಬಂದಳು. "ಭಾವ, ನಮ್ಮತ್ಗೆ ಸಂಬಂಧದ್ದೊಂದು ಹುಡ್ಗಿ ಇದೆ. ಓದಿದಾಳೆ, ಚೆನ್ನಾಗಿದ್ದಾಳೆ, ನಾಜೂಕಾಗಿದಾಳೆ. ನಮ್ಮ ಸೀತಾರಾಮಂಗೆ ಹೇಳಿ ಮಾಡಿಸಿದ ಜೋಡಿ. ನಾನು ಕರೆಸ್ತೀನಿ." "ಹಾಗೇ ಮಾಡು ಸಾವಿತ್ರಮ್ಮ. ಆದರೆ ನಿನ್ಮಗ ಒಪ್ಪದಿದ್ರೆ ಬೇಸರಿಸ್ಬೇಡ..." " ಆದ್ರೆ ಒಂದ್ಮಾತು, ಹುಡ್ಗೀನ ನಿಮ್ಮನೀಗೆ ಕರಸ್ಕೊಳ್ಳಿ... ಈಗ್ಲೇ ಸೀತಾರಾಮ್ಗೆ ತಿಳಿಯೋದು ಬ್ಯಾಡ."

ಸಾವಿತ್ರಿಯ ಮಾತಿನಂತೆ, ಹುಡುಗಿಯನ್ನು ಭಟ್ಟನ ಸೋದರಮಾವನ ಮನೆಗೇ ಕರೆಸಿದರು. ಸೀತಾರಾಮ, ಪ್ರೇಮಳನ್ನು ನೋಡಿ ತತ್ ಕ್ಷಣವೇ ಒಪ್ಪಿಗೆ ಕೊಟ್ಟು ಬಿಟ್ಟ. ಮದುವೆ ನಿಶ್ಚಯವಾಯಿತು. ಮದುವೆಯ ಸಮಯದಲ್ಲಿ, ಅವಳು ತನ್ನ ಚಿಕ್ಕಮ್ಮನ ಸಂಬಂಧದವಳೆಂದು ತಿಳಿದಾಗ ಮನಸ್ಸಿಗೆ ಕಿರಿಕಿರಿ ಆಗಿತ್ತು. ಆದರೆ ಈಗ ಏನೂ ಮಾಡಲಾಗುವುದಿಲ್ಲವೆನ್ನುವುದನ್ನು ಬಲ್ಲ. ಆದರೆ ಹೆಂಡತಿಯಲ್ಲಿ ಸಲುಗೆಯನ್ನು ಪ್ರೀತಿಯನ್ನು ತೋರಿಸಲಾಗಿರಲಿಲ್ಲ. ಯಾವುದೋ ಒಂದು ಅಂತರವನ್ನು

ಬೆಳೆಸಿಕೊಂಡ. ಮನದ ಖಾರವನ್ನು ತನ್ನ ವರ್ತನೆಯಲ್ಲಿ ತೋರುತ್ತಿದ್ದ. ಅವಳೀಗ ತನ್ನ ಪತ್ನಿ. ಅವಳ ಮೇಲಿನ ಸಂಪೂರ್ಣ ಹಕ್ಕು ನನಗಿದೆ. ನನಗೆ ಹೇಗೆ ಬೇಕೋ ಹಾಗೆ ಇಟ್ಟುಕೊಳ್ಳುತ್ತೇನೆಂದುಕೊಂಡು, ಅದೇ ರೀತಿ ನಡೆಯತೊಡಗಿದ್ದ.

"ತಾನು ಬೇರೆ ಮನೆಯನ್ನು ಮಾಡುವವರೆಗೂ, ಅವಳು ತವರುಮನೆಯಲ್ಲೇ ಇರಲಿ." ಎಂದು ಹೇಳಿದ್ದನಾದರೂ, ಮಾವ ಇದಕ್ಕೆ ಒಪ್ಪಿರಲಿಲ್ಲ. "ಮದ್ವೆ ನಡೆದ್ಮೇಲೆ, ಹೆಣ್ಮಕ್ಳು ತವರ್ನಲ್ಲಿರ್ಬಾರ್ದು, ಜನ ಆಡ್ಕೋತಾರೆ... ನಿಂಗ್ಯಾಕೆ ತಿಳಿಯಲ್ಲ!" "ಹಾಗಲ್ಲ ಮಾವ, ನಾನೇ ಈ ಮನೆಗೆ ಭಾರ... ಅಂಥಾದ್ರಲ್ಲಿ..." "ಹೀಗೆಲ್ಲ ಮಾತಾಡಿದ್ರೆ ಸಿಗಿದು ಹಾಕಿ ಬಿಡ್ತೀನಿ. ಮಗನಂತೆ ನೋಡ್ಕೊಂಡಿದೀನೆ. ಸೊಸೆಯಂತೆ ಈ ಮನೇಲಿ ರ್ತಾಳೆ. ಈಗ ನಾವು ಬೇಡವಾದ್ವಾ ನಿಂಗೆ ?" "ಕ್ಷಮ್ಸಿ ಮಾವ..." "ಹೆಂಡ್ತಿ ಸಿಕ್ಮೇಲೆ ದೊಡ್ಮನುಷ್ಯನಾಗ್ಬಿಟ್ಟೆ..." ಅತ್ತೆಯೂ ದನಿಗೂಡಿಸಿದಾಗ, ಅವನು ಕಸಿವಿಸಿಗೊಂಡಿದ್ದ. "ಇಲ್ಲ ಮಾವ, ನಾನು ಅಂಥೋನಲ್ಲ...ಹೇಗೂ ನಗರದಲ್ಲಿ ಮನೆ ಹುಡುಕ್ತಾ ಇದೀನಿ. ಅಲ್ಲೇ ನೇರವಾಗಿ ಸಂಸಾರನ ಹೂಡೋಣ ಅಂತಂದ್ಕೊಂಡೆ. ನಾನು ಆಡಿದ್ನೆಲ್ಲ ಮನಸ್ನಲ್ಲಿಟ್ಕೋಬೇಡಿ.." ಮನಸ್ಸಿಲ್ಲದ ಮನಸ್ಸಿಂದ ಭಟ್ಟ ಹೆಂಡತಿಯನ್ನು ಮಾವನ ಮನೆಗೆ ಕರೆತಂದ. ಈ ವಿಷಯದಲ್ಲಿ ತಂದೆ ಮಗನಿಗೂ, ಭಾವ, ಭಾಮೈದನಿಗೂ ಸಿಕ್ಕಾಬಟ್ಟೆ ಮಾತುಕತೆಗಳಾದವು. ಬೇಸರಗೊಂಡ ಭಟ್ಟ ಹೆಂಡತಿಯನ್ನು ತವರಿಗೆ ಬಿಟ್ಟು ಬಂದ.

"ಆದಷ್ಟು ಬೇಗ ನಾನೊಂದು ಬೇರೆ ಮನೇನ ಮಾಡ್ತೀನಿ. ಅಲ್ಲೀವರೆಗೂ ಅವಳು ನಿಮ್ಮಲ್ಲೇ ಇರಲಿ." ಅಂತ ಹೇಳಿ ಬಿಟ್ಟು ಬಂದಿದ್ದ. ಈ ಸಮಯದಲ್ಲಿ ಪ್ರೇಮ ಗರ್ಭಿಣಿಯಾಗಿದ್ದಳು. ಹೆರಿಗೆ ಆಗಿ, ಬಾಣಂತನ ಮುಗಿಯುವವರೆಗೂ ಪ್ರೇಮ ತವರು ಮನೆಯಲ್ಲೇ ಇರುವುದೆಂದು ತೀರ್ಮಾನಿಸಿದರು. ಹೆಂಡತಿಯನ್ನು ನೋಡಲು, ಅವಳ ತಂದೆಯ ಮನೆಗೆ ಹೋಗುವುದು ಮುಜುಗರವೆಂದೆನಿಸುತ್ತಿತ್ತು ಭಟ್ಟನಿಗೆ. ಅವಳನ್ನು, ಭಟ್ಟನ ಮಾವನ ಮನೆಗೂ ಕರೆ ತರುವಂತಿರಲಿಲ್ಲ. ಈ ಸಮಯದಲ್ಲಿ ಕಾಮಾಕ್ಷಿ ಸಹಾಯಕ್ಕೆ ಒದಗಿದಳು. ಭಟ್ಟನ ಮದುವೆಗೆ ಕೆಲವು ತಿಂಗಳುಗಳ ಮೊದಲೇ ಕಾಮಾಕ್ಷಿಗೆ ಮದುವೆಯಾಗಿತ್ತು. ಅವಳು ನಗರದಲ್ಲಿ ಸಂಸಾರ ಹೂಡಿದ್ದಳು. ಕಾಮಾಕ್ಷಿಯ ಮನೆಗೆ, ಪ್ರೇಮಳನ್ನು ಅವಳ ತಂದೆ ಕರೆತರುತ್ತಿದ್ದರು. ಒಂದೆರಡು ಗಂಟೆಗಳು ಅಲ್ಲಿದ್ದು ವಾಪಸ್ಸು ಹೊರಟು ಹೋಗುತ್ತಿದ್ದರು. ಆಗ ಭಟ್ಟನೂ ಅಲ್ಲಿಗೆ ಬಂದಿರುತ್ತಿದ್ದ. ಆದರೆ, ಕಾಮಾಕ್ಷಿಯ ಸಣ್ಣ ಮನೆಯಲ್ಲಿ ಮಾವನ ಎದುರಿಗೆ ಮಾತನಾಡಲು ಕಷ್ಟವೆನಿಸುತ್ತಿತ್ತು. ಸಂಕೋಚ, ಅಸಹನೆ, ಅಸಹಾಯಕತೆಗಳಿಂದ ಅವನ ಮನ ಕುದಿಯುತ್ತಿತ್ತು. ಮತ್ತಷ್ಟು ರೊಚ್ಚಿಗೇಳುತ್ತಿದ್ದ. ಅಲ್ಲದೇ ಈಗ ಅವಳು ಗರ್ಭಿಣಿಯೆಂದು ನೋಡಿದವರಿಗೆ ತಿಳಿಯುವಂತೆ ಅವಳ ಬಸಿರು ಬೆಳೆಯುತ್ತಿತ್ತು. ಬೇರೆಯವರು, ನೋಡುವ ದೃಷ್ಟಿ ಇವನಿಗೆ ಸಹಿಸುತ್ತಿರಲಿಲ್ಲ. ಹಾಗಾಗಿ ಅವಳು ಬರುವುದೂ

ನಿಂತುಹೋಯಿತು.

ಇವನ ಈ ವರ್ತನೆಗಳಿಂದ ಭಟ್ಟ ಎಲ್ಲರನ್ನೂ ದೂರ ಮಾಡಿಕೊಂಡ. ಪ್ರೇಮ ಗಂಡು ಮಗುವನ್ನು ಹಡೆದಿರುವಳೆಂದು ತಿಳಿದರೂ ನೋಡಲು ಹೋಗಿರಲಿಲ್ಲ. ಮಗುವಿಗೆ ಮೂರು ತಿಂಗಳಾದರೂ ಮಗುವಿನ ಮುಖವನ್ನು ನೋಡಿರಲಿಲ್ಲ. ಒಮ್ಮೊಮ್ಮೆ ತನಗೆ ತಾನೇ ಹಾಕಿಕೊಂಡ ಕಟ್ಟುಪಾಡುಗಳಿಂದ ರೋಸಿ ಹೋಗುತ್ತಿದ್ದ.

* * *

ಅಧ್ಯಾಯ–ಎರಡು

ಮಕ್ಕಳಿರಲಪ್ಪಾ ಮನೆತುಂಬಾ

ಈಗ ಮಗನಿಗೆ ವರ್ಷ ತುಂಬಿದೆ. ಮಗುವಿಗೆ ನಾಮಕರಣ ಶಾಸ್ತ್ರವನ್ನು ಮಾಡಿ, ನೆಂಟರಿಷ್ಟರನ್ನು ಕರೆಯಬೇಕು ಎಂಬ ಆಸೆ ತಂದೆಗೆ. ಒಮ್ಮೆ ಸಮಯ ನೋಡಿ ಆ ಮಾತನ್ನು ಹೇಳಿದ್ದರು. "ಸ್ಕೂಲಿಗೆ ಸೇರಿಸುವಾಗ, ಒಂದು ಹೆಸರನ್ನು ಇಟ್ಟರಾಯ್ತು. ಅದಕ್ಕೆ ಸಮಾರಂಭವೆಲ್ಲಾ ಏಕೆ? ನನಗಿಷ್ಟವಿಲ್ಲ" ಎಂಬ ಕಡ್ಡಿ ತುಂಡು ಮಾಡಿದಂತೆ ಹೇಳಿದ. ಪ್ರೇಮಳಿಗೂ ನಿರಾಸೆ ತುಂಬಿಕೊಂಡಿತ್ತು. ಇದೆಂಥ ಗಂಡನಪ್ಪ, ಒಂದು ಆಸೆ ಇಲ್ಲ; ಅಕ್ಕರಾಸ್ಥೆಯಿಲ್ಲ. ಇನ್ನು ಜೀವಮಾನವಿಡೀ ಇವನೊಡನೆ ಬಾಳ ಬೇಕಲ್ಲ. ಸಾಮಾನ್ಯ ಮನುಷ್ಯನ ಗುಣಗಳೇ ಇವನಲ್ಲಿಲ್ಲ. ಬೇರೆ ಲೋಕದಿಂದ ಬಂದವ ನಂತೆ ಆಡುತ್ತಾನೆ ಅಂತಂದುಕೊಂಡು ಬೇಸರಿಸಿದ್ದಳು. ಇದಕ್ಕೆ ಕಾಮಾಕ್ಷಿಯ ಒಗ್ಗರಣೆ ಮಾತುಗಳು ಬೇರೆ.

"ಸೀಭಟ್ಟನಂಥೋನ್ನ ನ್ನಾನೆಲ್ಲೂ ಕಾಣೆ. ಕೇಳೆ... ಸೀಮೆಗಿಲ್ದೋನ್ನಾಗಾಡ್ತಾನೆ. ಅಲ್ಲ, ಅಪ್ಪಯ್ಯನ ಮಾತ್ನ ಕೇಳಿದ್ರೆ, ಇವನ ಅಜ್ಜಿ ಗಂಟೇನು ಹೋಗುತ್ತಿತ್ತು ಅಂತ...? ನಾ ಝಾಡಿಸ್ಬಿಡ್ತೀನಿ...." "ಹೋಗ್ಲಿ ಬಿಡಿ ಕಾಮಾಕ್ಷಿ, ಅವರವರಿಗೆ ಇಷ್ಟವಾದದ್ದೇ ಮಾಡ್ತಾರಲ್ಲೋ..." "ಹಂಗಾರೆ ನಿಮ್ಮ ಇಷ್ಟ ಏನ್ಹೇಳಿ ಪ್ರೇಮಕ್ಕ?" "ನಂಗ್ಯಾವ ಇಷ್ಟವೂ ಇಲ್ಲ ಬಿಡಿ... ಅಪ್ಪನ ಮನ್ಯಾಗೆ ಅಪ್ಪನಿಷ್ಟ ನಡೀತು. ಇಲ್ಲಿ ನನ್ನಗಂಡಗೇನಿಷ್ಟವೋ ಅದೇ... ಮುಂದೆ ನನ್ನ ಮಗನಿಷ್ಟದಂತೆ ಇದ್ದು ಬಿಡ್ತೀನಿ ಅಷ್ಟೇ...."

"ಇದು ಜೀವ್ನಾನ ? ನರಕ...ನರಕ..." "ನನ್ಹಣೇಲಿ ಇದನ್ನೇ ಬರದಿದ್ರೆ, ಬರೆದ ದೇವ್ರೂ ತಪ್ಪಿಸ್ಲಾಂಗಿಲ್ಲ." " ನಿಮ್ಮ ಸಹನೆ ನಂಗಿಲ್ಲ ಬಿಡಿ ಪ್ರೇಮಕ್ಕ.. ಗಂಡ ಗಂಡಾಂತ ಅದೆಷ್ಟು ಒಪ್ಪ ಮಾಡ್ಕೋತೀರೋ...? ನಿಮ್ಗೂ ಅವ್ನು ಕೊಡೋ ಕಾಣ್ಕೆ ಬೇಕನ್ನಿ" ನಕ್ಕಳು. "ಕಾಣ್ಕೆ ಅದೆಂಥದು? ನಂಗೇನೂ ಕೊಟ್ಟಿಲ್ಲ ಅವ್ರು...?" "ಯಾಕೊಟ್ಟಿಲ್ಲ? ಮುತ್ತು, ರತ್ನ, ಪಚ್ಚೆ.... ಹವಳ ಎಲ್ಲಾ ಅವ್ನು ಕೊಡೋದೇ..." "ಸ್ಸೀ... ನೀವೊಬ್ರು.." ಪ್ರೇಮ ನಾಚಿದಳು. "ನಾನೊಂದು ಮಾತ್ಕೇಳ್ಲಾ ಪ್ರೇಮಕ್ಕ. ಬೇಸರ್ಸಬಾರ್ದು." "ಇಲ್ಲ ಹೇಳಿ...." "ನೀವು ಮತ್ತೆ ಮೈ ತುಂಬ್ಕೊಂಡಂಗಿದೆ.... ಹೌದಾ...?" ಪ್ರೇಮ ಉತ್ತರಿಸಲಿಲ್ಲ! ತಲೆ ತಗ್ಗಿಸಿದಳು. ಅವಳ ಮುಖ ಕೆಂಪಾಗಿತ್ತು. "ಈ ಮಗೀಗೆ ಇನ್ನೂ ವರ್ಷ.... ಆಗ್ಲೇ ಇನ್ನೊಂದು.... ನಿಮಗಾದ್ರೂ ತಿಳೀಬೇಡ್ವಾ! ಇಂಥ ವಿಚಾರದಲ್ಲಿ ಹೆಂಗಸ್ರು ಜಾಣರಾಗಿರ್ಬೇಕು... ಈಗಾಯ್ತಲ್ಲ ಬಿಡಿ.... ಇನ್ಮುಂದೆ

ಹುಷಾರಾಗಿರಿ." "ಈ ವಿಚಾರ್ದಲ್ಲಿ ನಾನೇನ್ಮಾಡೋಕಾಗುತ್ತೆ?" "ಬಿಡಿ, ತಲೆ ಕೆಡಿಸ್ಕೋ ಬೇಡಿ. ಈ ಬಾರಿ ಹೆಣ್ಮಗು ಹೆತ್ಬಿಡಿ. ಆಪರೇಷನ್ ಮಾಡಿಸ್ಕೊಂಬಿಡಿ. ಆಮೇಲೆ ತಲೆ ಬಿಸಿ ಇರುಲ್ಲ." "ಕಾಮಾಕ್ಷಿ..." ಭಟ್ಟ ಕರೆದದ್ದು ಕೇಳಿಸಿತ್ತು. ಕಾಮಾಕ್ಷಿ ಎದ್ದಳು.

"ಈ ಮಾರಾಯ ಒಬ್ಬ, ಹೆಂಡ್ತಿ ಬಂದ್ಮೇಲೂ ನನ್ನೇ ಕರೀತಾನೆ. ಹೋಗ್ಬೋಡಿ ಪ್ರೇಮಕ್ಕ." "ನೀವೇ ಹೋಗಿ ಕಾಮಾಕ್ಷಿ. ನಿಮ್ಹತ್ತಿರಾನೇ ಏನೋ ಕೆಲ್ಸವಿರಬೇಕು..." ಪ್ರೇಮಳಿಗೂ ಪಿಚ್ಚೆನಿಸಿತು. ಮದುವೆಯಾದಾಗ್ನಿಂದ ಒಂದಿನವಾದ್ರೂ ಗಂಡ ಪ್ರೀತಿಯಿಂದ ಪ್ರೇಮಾ... ಎಂದು ಕರೆದಿದ್ದಿಲ್ಲ. ಯಾವುದೋ ಕಾಡು ಜಾತಿಯ ಮನುಷ್ಯ.... ಈ ಮನುಷ್ಯನಿಗೆ ಇವನ ಮಕ್ಕಳೇ ಬುದ್ಧಿ ಕಲಿಸಬೇಕು. ಎರಡಲ್ಲ, ಎಂಟು ಮಕ್ಕಳ್ನ ಹೆರ್ತೀನಿ.. ಮಕ್ಕಳ್ನ ಇವನ್ತಲೆ ಮೇಲೆ ಎತ್ತಿ ಕಟ್ತೀನಿ.... ಆಗ್ಲಾದ್ರೂ ಈ ಮನುಷ್ಯ ಬದ್ಲಾಗಬಹುದು ಎಂದು ತನ್ನಲ್ಲೇ ಹೇಳಿಕೊಂಡಳು. ಒಳಗೊಳಗೇ ಏನೋ ಖುಶಿಯಾದಂತೆನಿಸಿತ್ತು. ಕೆಲವೇ ನಿಮಿಷಗಳಲ್ಲಿ ಕಾಮಾಕ್ಷಿ ಹಿಂದಕ್ಕೆ ಬಂದಳು. "ಯಾರೋ ಒಂದಿಬ್ರು ಕಕ್ಷಿದಾರ್ರು ಹಳ್ಳಿಯಿಂದ ಬಂದಾರಂತೆ. ಅವರ್ಗೆ ತಿಂಡಿ–ಕಾಫಿ ಮಾಡ್ಬೇಕಂತೆ. ರವೆ ಇದ್ರೆ ಉಪ್ಪಿಟ್ಟು ಕೆದಕ್ತೀನಿ. ಹಿಟ್ಟು ಇದ್ರೆ ರೊಟ್ಟಿ ತಟ್ತೀನಿ." "ಅದೇನಿದ್ಯೋ ಇಲ್ವೋ, ಇದೆಲ್ಲಾ ಎಂದಿಗೆ ತಪ್ಪುತ್ತೋ..." "ಇದೆಲ್ಲಾ ಏನ್ತಪ್ಪಲ್ಲ ಬಿಡಿ... ಒಂದಿಬ್ರಿಗೆ ಊಟ ಹಾಕಿದ್ರೆ ಶಿವ ಮೆಚ್ತಾನೆ. ಆ ಪುಣ್ಯ ನಾಳೆ ನಿಮ್ಮಕ್ಳನ್ನ ಕಾಪಾಡುತ್ತೆ." ಇಬ್ಬರೂ ಲಗುಬಗನೆ ಡಬ್ಬಗಳ ಮುಚ್ಚಳಗಳನ್ನು ತೆಗೆದು, ಏನೇನು ಸಾಮಾನುಗಳಿವೆ ಎಂದು ನೋಡಿದರು.

* * *

ಹೀಗೇ ದಿನಗಳು ಉರುಳಿದವು. ಪ್ರೇಮಳ ಹೆರಿಗೆಯ ದಿನಗಳು ಸಮೀಪಿಸಿದ್ದವು. ಅವಳ ತಂದೆ–ತಾಯಿ ಬಂದು ಬಾಣಂತನಕ್ಕೆ ಕರೆದೊಯ್ಯುತ್ತೇನೆಂದಾಗ ಭಟ್ಟ ಒಪ್ಪಿರಲಿಲ್ಲ. "ಹೇಗೋ ಇಲ್ಲೇ ನಡೆಯುತ್ತೆ. ನಾನು ಅವಳನ್ನು ಎಲ್ಲಿಗೂ ಕಳಿಸೊಲ್ಲ." ಎಂದುಬಿಟ್ಟಿದ್ದ. ಈಗಾಗಲೇ ಅವನ ಸ್ವಭಾವದ ಅರಿವಿದ್ದ ಅವರುಗಳು ಹೆಚ್ಚು ಮಾತ್ನಾಡಿರಲಿಲ್ಲ. ಬಾಣಂತನಕ್ಕೆ ತಾಯಿಯೇ ಇಲ್ಲಿ ಬಂದು ನಾಲ್ಕು ದಿನ ಇರುವುದೆಂದು ನಿಶ್ಚಯಿಸಿಕೊಂಡರು. ಪ್ರೇಮ ಹೆಣ್ಣು ಮಗುವನ್ನು ಹೆತ್ತಳು. ತನ್ನ ಕರ್ತವ್ಯವೆಂಬಂತೆ, ಭಟ್ಟ ಮಗುವಿನ ಮುಖವನ್ನು ನೋಡಿದ್ದ. ಮಗುವಿನ ಮುಖದಲ್ಲಿ ತನ್ನ ತಾಯಿಯ ಛಾಯೆಯನ್ನು ಕಂಡಿದ್ದ. ತನ್ನನ್ನು ಅನಾಥನನ್ನಾಗಿ ಮಾಡಿಹೋಗಿದ್ದ ತಾಯಿಯ ನೆನಪು ಬಾಧಿಸತೊಡಗಿತು. ಕಾಮಾಕ್ಷಿಯೊಡನೆ ಹೇಳಿಕೊಂಡ.

"ನಮ್ಮಮ್ಮನ್ನೇ ಹೋಲುತ್ತಿದೆ ಅಲ್ವಾ...!"

"ಇರ್ಬೈದು. ಈಗ್ಲೇ ಏನೂ ಹೇಳುಕ್ಕಾಗುಲ್ಲ. ಪ್ರೇಮಕ್ಕನ್ನ ಮಾತಾಡಿಸಿದ್ಯಾ?"

"ಇಲ್ಲ, ಆಸ್ಪತ್ರೇಲಿ ಏನ್ಮಾತು? ಮನೆಗೆ ಬರ್ಲಿ."

"ಹಂಗಲ್ಲ ಸೀಭಟ್ಟ, ನಿಂಗೊಂಚೂರು ಅರ್ಥಾಗುಲ್ಲ. ಎರ್ಡು ದಿನ್ದಿಂದ ಈ

ಮಗೀಗೋಸ್ಕರ ನೋವುಂಡಿದಾಳೆ. ನಿನ್ಮಗೀನೆಲ್ಲಾ ಅವ್ರು ಹೆತ್ತಿರೋದು."

"ಅದೆಲ್ಲಾ ನೀ ಹೇಳ್ಬ್ಯಾಡ. ನಂಗೆಲ್ಲಾ ಗೊತ್ತು. ನಿನ್ಕೆಲ್ಸ ನೀನ್ನೋಡು."

"ನೀ ಬದ್ಲಾಗೋನೇ ಅಲ್ಲ..." ಹಣೆ ಮುಟ್ಕೊಂಡು ನುಡಿದಳು.

ಭಟ್ಟ ಬದ್ಲಾದ್ನೋ ಇಲ್ವೋ ಆದರೆ, ಆ ಮಗುವಿನ ಬಗ್ಗೆ ಏನೋ ವಿಶೇಷ ಅಕ್ಕರೆ. ಆಗ ಈಗ ಬಂದು ತೊಟ್ಟಿಲಲ್ಲಿ ಮಲಗಿದ ಮಗುವಿನ ಮುಖವನ್ನೇ ಸ್ವಲ್ಪ ಹೊತ್ತು ನೋಡಿ ಹೋಗುತ್ತಿದ್ದ. ಮಗುವಿನ ಕೆನ್ನೆಗಳನ್ನು ಮುಟ್ಟಬೇಕೆಂದೆನಿಸುತ್ತಿತ್ತು. ಆದರೆ ಏನೋ ನಾಚ್ಕೆ, ಏನೋ ಭಯ. ಪ್ರೇಮ ತಾನು ಗಮನಿಸಿದ್ದನ್ನು ಕಾಮಾಕ್ಷಿ ಯೊಡನೆ ಹೇಳಿದಳು. ಕಾಮಾಕ್ಷಿ ತಲೆಯಾಡಿಸಿದಳು.

"ಅವನಮ್ಮನನ್ನೇ ಹೋಲುತ್ತಂತೆ ಈ ಕೂಸು. ಅದಕ್ಕೆ ಅವನ್ಗೆ ಅಕ್ಕರೆ. ಇನ್ನು ಅವ್ನು ಬದ್ಲಾಗ್ತಾನೆ ನೋಡ್ತಿರಿ... ಅಂತೂ ಅವರಮ್ಮನೇ ಬರ್ಬೇಕಾಯ್ತು ಮಗನ್ನ ತಿದ್ದೋಕೆ." ಮಗುವಿನ ಕೆನ್ನೆಗಳನ್ನು ಸವರಿ, ಕೈ ಬೆರಳುಗಳನ್ನು ತನ್ನ ಕಪಾಲಗಳಿಗೆ ಒತ್ತಿಕೊಂಡು ನೆಟ್ಟಗೆಗಳನ್ನು ತೆಗೆದಳು...

"ಭಾರಿ ದೃಷ್ಟಿಯಾಗೈತೆ ಕಂದಗೆ, ಭಟ್ಟನ ದೃಷ್ಟಿಯೇ ಬಿದ್ದಿರಬೇಕು." ನಗುತ್ತಾ ನುಡಿದಳು. ಪ್ರೇಮ ಏನೋ ಆಲೋಚನೆಯಲ್ಲಿದ್ದಳು. ಎರಡು ತಿಂಗಳ ಬಾಣಂತನ ವನ್ನು ಮಾಡಿ ಮುಗಿಸುವಷ್ಟರಲ್ಲಿ ಪ್ರೇಮಳ ತಾಯಿಗೆ ಸಾಕು ಸಾಕೆನಿಸಿತ್ತು. ಮಗಳ ಮೇಲಿನ ಮರುಕ ಹೆಚ್ಚಿತ್ತು. ಮಗಳಿಗೆ ವಿಶ್ರಾಂತಿ ಇಲ್ಲ. ಕೈಕೂಸು, ಅದರ ಮೇಲಿನ ಕೂಸು, ಎರಡ್ಕರ ಸೇವೆಯಲ್ಲೇ ದಿನಗಳು ಕಳೆದು ಹೋಗ್ತಿವೆ. ಜತೆಗೆ, ಮನೆಗೆ ಬಂದು ಹೋಗುವ ಕಕ್ಷಿದಾರರು ಅವರ ಊಟ, ತಿಂಡಿ, ಕಾಫಿ ಇತ್ಯಾದಿ ಆದರೋಪ ಚಾರಗಳು... "ಪ್ರೇಮ ನಿನ್ಗಂಡಂಗ್ಹೇಳು, ಇಲ್ಲೇ ಇದ್ರೆ ನಿಂಗೇನು ಆರಾಮ ಸಿಗುತ್ತೆ! ಬಾಣಂತಿಗೆ ಬೇಕಾಗಿರೋದು ವಿಶ್ರಾಂತಿ. ಅದೇ ಇಲ್ಲ ನಿಂಗೆ ಈ ಮನೇಲಿ.... ಎರಡು ತಿಂಗ್ಳು ನಮ್ಮನೇಲಿ ಇದ್ದು ಬರೂವಂತೆ... ಹಾಗಂತ ಹೇಳು."

"ಅವ್ರೊಪ್ಪಲ್ಲ ಕಣೇ, ನಾನೆಲ್ಲೂ ಬರುಲ್ಲ..ಇಲ್ಲೇ ಸಾಯ್ತೀನಿ." ಏಕೋ ಏನೋ ತಾಯಿಯ ಮಾತುಗಳು ಅವಳನ್ನು ರೇಗಿಸಿದ್ದವು.

"ಸಾಯೋ ಮಾತೇಕೆ ಈಗ? ನಾನ್ಹೇಳಿದ್ರಲ್ಲಿ ತಪ್ಪೇನಿದೆ?"

"ಇಂಥ ಗಂಡನ್ನ ನಂಗೋಸ್ಕರ ಹುಡ್ಕಿ ಮದ್ವೆ ಮಾಡಿದ್ರಲ್ಲ. ಅನುಭವಿಸ್ತೀನಿ ಬಿಡೇ... ನಾನು ಮಾತ್ರ ಎಲ್ಲೂ ಬರುಲ್ಲ." ತಾಯಿ ಮೆತ್ತಗಾದಳು.

ಮಗಳು ನೊಂದಿದ್ದಾಳೆನ್ನುವುದು ನಿಜ. ಮದುವೆಯಾದ ಮೂರು ವರ್ಷದಲ್ಲಿ ಎರಡು ಮಕ್ಕಳು. ಇವ್ಳಿಗೆ ಸುಖವಿಲ್ಲ ಎಂದು ವ್ಯಥೆಗೊಂಡಳು. ಹಾಗೂ-ಹೀಗೂ ಮೂರು ತಿಂಗಳ ಬಾಣಂತನವನ್ನು ಮುಗಿಸಿ, ಆಕೆ ವಾಪಸ್ಸು ಊರಿಗೆ ಹೊರಟಿದ್ದರು.

"ನಾಕ್ದಿನ, ಮಗ್ಳನ್ನು ಮೊಮ್ಮಕ್ಳನ್ನು ನಮ್ಮೂರಿಗೆ ಕರೆದ್ಕೊಂಡು ಹೋಗೋಣ ಅಂತ..." ಆಕೆ ಹೇಳಿದಾಗ, ನಿರಾಕರಿಸಿಬಿಟ್ಟ ಭಟ್ಟ.

"ಈಗಿನ್ಯಾಕೆ? ಚಿಕ್ಕಮಕ್ಳಿಗೆ ಪ್ರಯಾಣ ಕಷ್ಟ ಆಗುತ್ತೆ.... ಬೇಡ." ಎಂದುಬಿಟ್ಟ. ಆಕೆ ಅನಂತರ ಕಾಮಾಕ್ಷಿಯೊಡನೆ ಹೇಳಿದ್ದಳು–

"ನಮಗೇನು ಜವಾಬ್ದಾರಿ ಇಲ್ವೇ, ತಿಳುವಳಿಕೆ ಇಲ್ವೇ? ಅವ್ರಿಗೆ ತಮ್ಮ ಮಕ್ಳಿಗೆ ಕಷ್ಟ ಆಗುತ್ತೆ ಅಂತ ತಿಳೀತು. ನಮ್ಮ ಮಗ್ಳಿಗೆ ಸುಖವಿಲ್ಲ ಅಂತ ಯಾಕೆ ತಿಳೀಲಿಲ್ಲ..?"

"ನೀವು ಸಮಾಧಾನ ಮಾಡ್ಕೊಳಿ. ನಾನು ಭಟ್ಟಂಗೆ ಹೇಳ್ತೀನಿ. ಅವ್ನ ಬಾಯಲ್ಲಿ ಒಂದ್ಮಾತು ಬಂದ್ರೆ ಆಗೋತು. ಜಪ್ಪಯ್ಯ ಅಂತಾದ್ರೂ ಬದ್ಲಾಯಿಸುಲ್ಲ."

"ನೀವೇ ಹೇಳಿ ಕಾಮಾಕ್ಷಿ, ಈಗ ಇವ್ಳ ಆರೋಗ್ಯ ಕೆಟ್ಹೋದ್ರೆ ನಾಳೆ ಏನ್ಗತಿ? ಈ ಮಕ್ಕಳ್ಗತಿ ಏನು?" ಆಕೆ ವ್ಯಥೆಯಿಂದ ಕಣ್ಣೀರು ಸುರಿಸಿದಳು. ಆಕೆ ಊರಿಗೆ ವಾಪಸ್ಸು ಹೊರಟುಹೋಗಿದ್ದಳು. ಅನಂತರ ಕಾಮಾಕ್ಷಿ ಸಮಯ ನೋಡಿ ಜಾಣ್ಮೆ ಯಿಂದ ಅವನೊಡನೆ ಮಾತನಾಡಿದಳು.

"ಭಟ್ಟ, ನೀ ಗಂಡ್ಸು, ನಿಂಗೇನೂ ತಿಳಿಯಾಣಿಲ್ಲ. ಪ್ರೇಮಕ್ಕಗೇನಾದ್ರೂ ಆದ್ರೆ, ಮಕ್ಕಳ್ನ ನೋಡೋರ್ಯಾರು...?"

"ನಂಗೇನ್ ತಿಳಿಯೂದಿಲ್ಲ ಅಂದ್ಕೋಬ್ಯಾಡ... ನಂಗೂ ಜವಾಬ್ದಾರಿ ಇದೆ. ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಆಳುಗಳನ್ನಿಟ್ಕೊಂಡ್ರಾತು... ನಿಂಗಾದ್ರೆ ಎಷ್ಟೋ ಜನ್ರ ಪರಿಚಯವಿದೆ. ನೀನೇ ಗೊತ್ಮಾಡ್ಕೊಡು."

"ನಾನೂ ನೋಡ್ತೀನಪ್ಪ, ಹಾಗೇ ನಿನ್ನ ಕಕ್ಷಿದಾರರಿಗೂ ಹೇಳಿಟ್ಟಿರು. ನಿಮ್ಮ ತ್ತೇನೂ ಊರ್ಗೆ ಹೊಂಟೋದ್ರು... ಹ್ಯಾಗೇಂತ."

"ನೀನಿದೀಯಲ್ಲ...!" ಅಪರೂಪಕ್ಕೆ ನಗುತ್ತಾ ಹೇಳಿದ.

"ಏಯ್ ತೆಗೀ, ನಂಗೇನ್ಮನೆ ಮಠ ಇಲ್ವಾ? ನನ್ಗಂಡ್ನೂ ನಿನ್ಹಂಗೆ ಆಡಿರ್ತಿದ್ರೆ ನಾನು ಹೊಸ್ಲು ದಾಟಿ, ನಿನ್ಮನೇ ತಂಕ ಬರೋಕಾಗ್ತಿರ್ಲಿಲ್ಲ ನೋಡು..."

"ಅದಕ್ಕೇ ನಿನ್ನೇ ಕೇಳ್ದೆ, ನನ್ನ ಮದ್ವೆಯಾಗೇ ಅಂತ, ಜಂಬ ಆಡ್ಬಿಟ್ಟೆ."

"ಅದೇನದು? ಬಹಳ ಖುಷೀಲಿದ್ದಂಗಿದೆ... ಏನ್ಕತೆ?"

"ನನ್ಮಗ್ಳು ಹುಟ್ಟಿದ್ಗಳಿಗೆ ಚೆನ್ನಾಗಿದೆ ಕಾಮಾಕ್ಷಿ. ನಾನು ಒಂದು ಭಾರೀ ಕೇಸ್ನ ಗೆದ್ದಿದೀನಿ. ನೋಡ್ತಿರು, ನಾನೆಷ್ಟು ದೊಡ್ಡ ಅಡ್ವೊಕೇಟ್ ಆಗ್ತೀನಿ, ಎಷ್ಟು ಶ್ರೀಮಂತ ಆಗ್ತೀನಿ ಅಂತ..."

"ಇದನ್ನ ಪ್ರೇಮಕ್ಕಗೂ ಹೇಳು, ಅವ್ರಿಗೂ ಖುಷಿಯಾಗುತ್ತೆ."

"ಹೇಳಿದ್ರಾತು..." ಅವನ ಧೋರಣೆ ಅವಳಿಗೆ ಸರಿ ಎನಿಸಲಿಲ್ಲ.

"ಅಲ್ಕಣೋ ಭಟ್ಟ, ಇಂಥದ್ನೆಲ್ಲಾ ಹೆಂಡ್ತಿಗೆ ಮೊದ್ಲು ಹೇಳ್ಬೇಕು. ನಾನು ಯಾರೂಂತ?"

"ಏನೋ ನಂಗೊತ್ತಿಲ್ಲ. ನಿನ್ನಲ್ಲಿರೋ ಸಲುಗೆ ಅವಳಲ್ಲಿಲ್ಲ..." ಕಾಮಾಕ್ಷಿ ಹೊಟ್ಟೆ ಹಿಡಿದುಕೊಂಡು ನಕ್ಕಳು.

"ಯಾರ್ಗಾದ್ರೂ ಕೇಳಿದ್ರೆ, ಬಡ್ಕೊಂಡು ನಗ್ತಾರೆ ಅಷ್ಟೇ. ಎರಡೆರಡು ಮಕ್ಕಳ್ಗೆ ತಂದೆಯಾಗಿದೀಯ. ಹೆಂಡ್ತಿ ಹತ್ರ ಸಲ್ಗೆ ಇಲ್ಲ ಅಂತೀಯಲ್ಲ."

"ಹೋಗೇ ನೀನು, ನನ್ನ ತಲೆ ಕೆಡಿಸ್ಬೇಡ." ಒಳಬಾಗಿಲಲ್ಲಿ ನಿಂತು, ಅವರಿಬ್ಬರ ಮಾತುಗಳನ್ನು ಕೇಳಿಸಿಕೊಂಡಿದ್ದ ಪ್ರೇಮ, ಗಂಡನನ್ನು ನಿರೀಕ್ಷಿಸಿದಳು. ಅಸಮಾಧಾನ ವಾಗಿತ್ತು. ಆದರೆ ಕಾಮಾಕ್ಷಿಯ ಮೇಲೆ ಅಸೂಯೆ ಉಂಟಾಗಲಿಲ್ಲ. ಆದರೆ ಗಂಡನ ಪ್ರೀತಿಯಲ್ಲಿ ಆಳವೇ ಇಲ್ಲ ಅಂತನ್ನಿಸಿದಾಗ ಕಣ್ಣೀರು ಹರಿಯಿತು.

* * *

ಮಗನನ್ನು ಸ್ಕೂಲಿಗೆ ಸೇರಿಸುವಾಗ ಭಟ್ಟ ಪ್ರಶಾಂತ ಎಂದು ಹೆಸರನ್ನು ಬರೆಸಿದ. ಮಗಳನ್ನು 'ತಾಯೀ' ಎಂದೇ ಕರೆಯುತ್ತಿದ್ದ. ಇದೇ ಹೆಸರು ಉಳಿದು ಬಿಡುತ್ತೆ, ಆಮೇಲೆ ಎಲ್ಲರೂ ತಾಯಮ್ಮ ಎಂದೇ ಕರೆಯುತ್ತಾರೆ ಅಂತ ಮನೆಯವರೆಲ್ಲ ಹೇಳತೊಡಗಿದಾಗ, ಮಗಳಿಗೆ ಶ್ರೀವಿದ್ಯಾ ಎಂದು ಹೆಸರನ್ನಿಟ್ಟ. ಈ ವೇಳೆಗೆ ಪ್ರೇಮ ಇನ್ನೊಬ್ಬ ಮಗನನ್ನು ಹೆತ್ತಿದ್ದಳು. ಗಂಡನೊಡನೆ ಮಾತು ಬೇಡ ಅಂತನ್ನಿಸಿದರೂ ಹೇಳಿದ್ದಳು –

"ನಮಗೆ ಇನ್ನು ಮಕ್ಕಳು ಸಾಕು. ನಾನು ಆಪರೇಷನ್ ಮಾಡ್ಸಿಕೊಳ್ತೀನಿ."

"ಮೊದ್ಲೇ ಹೀಗಿದೀಯ. ಆಪರೇಷನ್ ಮಾಡಿಸ್ಕೊಂಡ್ರೆ ನಿನ್ನ ಆರೋಗ್ಯನೂ ಕೆಡುತ್ತೆ. ಮಕ್ಳನ್ನ ನೋಡ್ಕೋಳ್ಳೋರು ಯಾರು? ಇನ್ನು ನಾಲ್ಕು ಮಕ್ಕಳನ್ನು ನೀನು ಹೆತ್ರೂ ಸಾಕೋ ಶಕ್ತಿ ನನಗಿದೆ. ನಿನಗ್ಯಾಕೆ ಚಿಂತೆ?" ಎಂದು ಹೇಳಿ ಅವಳ ಬಾಯನ್ನ ಮುಚ್ಚಿಸಿದ್ದ. ಇದೇ ಮಾತನ್ನು ಕಾಮಾಕ್ಷಿ ಎತ್ತಿದ್ದಳು.

"ಇದೇನು ಹಿಂದಿನ ಕಾಲ ಕೆಟ್ಹೋಯ್ತಾ. ಮೂರು ಮಕ್ಳು ಸಾಕು. ನಿನ್ನ ಹೆಂಡ್ತಿ ಏನು ಮಕ್ಳನ್ನ ಹೆರೋ ಯಂತ್ರಾನಾ? ಆಪರೇಷನ್ ಮಾಡಿಸ್ಬಿಡು."

"ನಿಂಗ್ಯಾಕೆ ಆ ಸುದ್ದಿ ಎಲ್ಲಾ? ನಮ್ಮಮ್ಮಗೆ ನಾನೊಬ್ನೇ ಮಗ... ಒಂಟಿಯಾಗಿ ಬೆಳ್ದೆ.... ನನ್ನ ಮಕ್ಳು ಜತೆಜತೆಯಾಗಿ ಬೆಳೀಬೇಕು... ಅದೇ ಚೆಂದ..."

"ಇದೇನೋ ಭಟ್ಟ, ಈ ಕಾಲ್ದಾಗೆ ಇಂಥ ಮಾತಾಡ್ತೀ... ಪ್ರೇಮಕ್ಕ ಬಾಳ ನಾಜೂಕು... ಮೊದಲೇ ಸಪೂರ..."

"ಅದೆಲ್ಲಾ ನಿಂಗ್ಯಾಕೆ? ನಾನವಳಿಗೆ ಟಾನಿಕ್ ಕೊಡುಸ್ತೀನಿ. ನಾನು ನೋಡ್ಕೋ ತೀನಿ. ನೀ ಮತ್ತೆ ಈ ಸುದ್ದಿ ಎತ್ಬೇಡ."

"ಆಯ್ತು ಮಾರಾಯ... ನಿಮ್ಮನೆ ಸುದ್ದಿಯೇ ನನಗ್ಬೇಡ. ಏನೋ ಹೆಂಗ್ಸಿಗೆ ಹೆಂಗ್ಸೇ ಸಮಯ್ದಲ್ಲಾಗ್ಬೇಕು ಅಂತ ಪ್ರೇಮಕ್ಕಗೋಸ್ಕರ ಬರ್ತಿದ್ದೆ. ಅದೂ ಬ್ಯಾಡಂತಿದ್ರೆ ಹೇಳ್ಬಿಡು... ಈ ಕಡೆ ದಿಕ್ಕಿಗೆ ತಲೆ ಹಾಕಿ ಮಲಗುಲ್ಲ ನಾನು."

"ಮನೀಗ್ಬರ್ಬೇಡಾಂತೆಲ್ಲಿ ಹೇಳ್ದೆ ನಾನು? ನನ್ನ ಸ್ವಂತ ವಿಷಯಕ್ಕೆ ಬರ್ಬೇಡ ಅಂದೆ. ನೀ ಸ್ವಲ್ಪ ಮಾತ್ಕಡ್ಮೆ ಮಾಡು. ಸರಿ ಹೋಗ್ತಿ."

"ನನ್ರೇಗಿಸ್ಬೇಡ ಭಟ್ಟ. ನಾ ನಿನ್ನ ಹೆಂಡ್ತಿ ಅಲ್ಲ."

"ನೀನೊಪ್ಪಿದ್ರೆ, ನೀನೇ ನನ್ನ ಹೆಂಡ್ತಿ ಆಗಿರ್ತಿದ್ದೆ. ಜಂಭ ಆಡ್ಬಿಟ್ಟೆ.... ಈಗ್ಲೂ ನಿಂಗೆ ಜಂಭಾನೆ.... ಲಾಯರ್‍ರ ಹೆಂಡ್ತಿ ಅಂತ ಮೆರೀಬಹುದಾಗಿತ್ತು. ಅದನ್ನ ತಪ್ಪಿಸ್ಕೊಂಡೆ ನೀನು..."

"ಬ್ಯಾಡಪ್ಪಾ ಬ್ಯಾಡಾ. ನಿನ್ನ ಸಹ್ವಾಸ್ವೇ ಬ್ಯಾಡಾ... ನನ್ನನ್ನ ಹೀಗೇ ಮಕ್ಳನ್ನ ಹೆರೋ ಯಂತ್ರ ಮಾಡ್ತಿದ್ದೆ ನೀನು. ನಂಗೆ ಪ್ರೇಮಕ್ಕನ್ಹಾಗೇ ಸಹ್ನೇನೇ ಇಲ್ಲ. ನಾನು ಮನೆ ಬಿಟ್ಟು ಓಡಿ ಹೋಗಿರ್ತಿದ್ದೆ..."

"ಸಂಸಾರ ಮಾಡೋ ಹೆಂಗ್ಸಿನ ಲಕ್ಷಣಾನೇ ಇಲ್ಲ ನಿಂಗೆ. ನಿನ್ಹತ್ರ ಯಾರ್‍ಮಾತಾಡ್ತಾರೆ...?"

"ಭಟ್ಟ ಒಂದ್ಮಾತು ನಾ ಹೇಳ್ತೀನ್ಕಣಾ.... ಪ್ರೇಮಕ್ಕಗೆ ತ್ರಾಸ ಕೊಡ್ಬೇಡಾ. ಮಕ್ಳೂ ಚಿಕ್ಕೋವ್ರು..."

"ಅಡ್ಗೆಯೋರಿದಾರೆ, ಕೆಲಸ್ದೋರಿದಾರೆ. ಅವಳ್ಗೆ ಆರಾಮವೋ ಆರಾಮ.. ನಿಂದೇನು ಮಧ್ಯ? ನಿನ್ಮಾತ್ನ ಕೇಳ್ತಾ ಕೂತ್ರೆ ಅಷ್ಟೇ." ಎನ್ನುತ್ತಾ ಅಲ್ಲಿಂದ ಸರಿದ. ರೂಮ್ನಲ್ಲಿ ಕೂತಿದ್ದ ಪ್ರೇಮಳಿಗೆ ಈ ಮಾತುಗಳೆಲ್ಲ ಕೇಳ್ಸಿದ್ದವು. ನನ್ಗಿಂತ ಈ ಕಾಮಾಕ್ಷಿಯೇ ನನ್ಗಂಡಂಗೆ ಹತ್ರ ಅಂತ ಅನ್ನಿಸಿದಾಗ, ಒಂದು ಗಳಿಗೆ ಮನಸ್ಸಿಗೆ ಚುಳ್ ಎಂದಿತು. ಆದರೆ ಮರುಗಳಿಗೆಯೇ ಸರಿ ಮಾಡಿಕೊಂಡಳು. ನನ್ನ ಗಂಡನಂಥವನು, ಯಾವ ಹೆಂಗಸನ್ನೂ ಪ್ರೀತಿಸಲು ಸಾಧ್ಯವಿಲ್ಲ. ಕಾಮಾಕ್ಷಿ ಹೇಳಿದ್ದು ಸರಿ, ಅವಳನ್ನು ಮದ್ವೆಯಾಗಿದ್ರೂ ನನ್ನ ಹಾಗೇ ಮಕ್ಳನ್ನ ಹೆರೋಕೆ ಮಾತ್ರ ಬಳಸಿಕೊಳ್ಳುತ್ತಿದ್ದನೇನೋ.. ಈಗ ನನಗಾದ್ರೆ ಗೆಳತಿಯಂತೆ ಕಾಮಾಕ್ಷಿ ಇದ್ದಾಳೆ... ಅವಳಿಗೆ ಯಾರೂ ಇರುತ್ತಿರಲಿಲ್ಲ.. ತೊಟ್ಟಿಲಲ್ಲಿ ಮಲಗಿದ್ದ ಮಗು ಎದ್ದು ಅಳಲು ಪ್ರಾರಂಭಿಸಿತ್ತು. ಎತ್ತಿಕೊಂಡಳು. ಮಂಚದ ಮೇಲೆ ಮಲಗಿದ್ದ ವಿದ್ಯಾಳ ಕಡೆ ನೋಡಿದಳು. 'ಇದು ನನ್ನಂತೆ ಹೆಣ್ಣು. ಇದರ ಹಣೇಲಿ ಏನು ಬರೆದಿದ್ಯೋ...?' ಲೊಚಗುಟ್ಟಿದಳು.

* * *

ಶ್ರೀವಿದ್ಯಾ ಸ್ಕೂಲಿಗೆ ಹೋಗಲು ಪ್ರಾರಂಭಿಸುವ ವೇಳೆಗೆ, ಪ್ರೇಮ ಇನ್ನೂ ಎರಡು ಮಕ್ಕಳನ್ನು ಹೆತ್ತಿದ್ದಳು. ಮೂರನೆಯವನಾದ ಸಂತೋಷ, ತಾನೂ ಅವರಿಬ್ಬರ ಜತೆಯಲ್ಲಿ ಸ್ಕೂಲಿಗೆ ಹೋಗುವುದಾಗಿ ಹಠ ಮಾಡುತ್ತಿದ್ದುದರಿಂದ, ಅವನಿಗೆ ಜಾಸ್ತಿ ವಯಸ್ಸನ್ನು ಕೊಟ್ಟು ಅವನನ್ನು ಸ್ಕೂಲಿಗೆ ಸೇರಿಸಬೇಕಾಗಿ ಬಂದಿತ್ತು. ನಾಲ್ಕನೆಯದು ಹೆಣ್ಣು ಮಗು. ನೋಡಲು ತುಂಬಾ ಮುದ್ದಾಗಿದ್ದಳು. ಅವಳನ್ನು ಭಟ್ಟ ಚೆನ್ನಾ ಎಂದೇ ಕರೆಯುತ್ತಿದ್ದ. ಕಾಮಾಕ್ಷಿ ತಮಾಷೆ ಮಾಡುತ್ತಿದ್ದಳು "ಈ ಭಟ್ಟಂಗೆ, ಒಂದು ತಾಯಮ್ಮ, ಇನ್ನೊಂದು ಚೆನ್ನಮ್ಮ..." ಅಂತ.

ಭಟ್ಟ, ಮಕ್ಕಳ ವಿದ್ಯಾಭ್ಯಾಸಕ್ಕೆ ಬೇಕಾದ ಸಕಲ ಸಾಮಗ್ರಿಗಳನ್ನು ತಂದುಕೊಡು

ತ್ತಿದ್ದ. ಮಕ್ಕಳು ಸರಿಯಾಗಿ ಸ್ಕೂಲಿಗೆ ಹೋಗಿ ಬರುತ್ತಿದ್ದಾರೆಯೇ, ಚೆನ್ನಾಗಿ ವ್ಯಾಸಂಗ ಮಾಡುತ್ತಿದ್ದಾರೆಯೇ ಎಂದೆಲ್ಲ ಸ್ಕೂಲಿಗೆ ಹೋಗಿ ವಿಚಾರಿಸಿಕೊಳ್ಳುತ್ತಿದ್ದ. ಈ ವಿಷಯ ದಲ್ಲಿ ಪ್ರೇಮಳಿಗೆ ಏನೂ ಗೊತ್ತಿಲ್ಲವೆಂದೇ ಅವನ ಭಾವನೆ.

"ನಿಂದೇನೇ ಇದ್ದರೂ ಮಕ್ಕಳ ಊಟ, ತಿಂಡಿ, ನಿದ್ದೆ ಕೆಲಸಾನ ನೋಡಿಕೊ ಳ್ಳೋದು. ಸ್ಕೂಲ್ ಪಾಠ ಎಲ್ಲಾ ನಿಂಗೇನೂ ಗೊತ್ತಿಲ್ಲ." ಎಂದು ಹೇಳಿ, ಮಕ್ಕಳ ಟ್ಯೂಷನ್ನಿಗೆಂದು ಮೇಷ್ಟ್ರನ್ನ ಗೊತ್ತು ಮಾಡಿದ್ದ.

"ಇಂಥ ಚಿಕ್ಕಮಕ್ಕಳಿಗೆಲ್ಲ ಎಂಥಾ ಮನೆ ಪಾಠ... ನಿಂದಂತೂ ಅತಿಯಾಯ್ತು..." ಕಾಮಾಕ್ಷಿ ಗೇಲಿ ಮಾಡಿದ್ದಳು.

"ನಮ್ಮಪ್ಪನ ಮನೇಲಿ, ಯಾರೂ ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚು ಗಮನಾನೇ ತ್ತೊಡ್ತಿರ್ಲಿಲ್ಲ. ನಾವು ಆಟ ಆಡ್ತಿದ್ವೋ, ಓದ್ಕೊಳ್ತಿದ್ವೋ ನೋಡಬೇಕೂಂತ ನಮ್ಮಪ್ಪನಿ ಗೆಂದೂ ಅನ್ನಿಸಿದ್ದೇ ಇಲ್ಲ.... ನಾನು ಮಾತ್ರ ನನ್ನ ಮಕ್ಕಳ್ನ ಹಂಗೆ ಬೆಳೆಸೋಲ್ಲ..."

"ಅದ್ಸರಿ ಕಣೋ ಭಟ್ಟ... ಮಕ್ಳಿಗೆ ಈಗ್ಲಿಂದ ಎಂಥಾ ಶಿಕ್ಷೆ! ಆಟ ಆಡೂ ಸಮಯ್ದಾಗೆ ಆಡ್ಬೇಕು. ಪಾಠದ ಸಮಯಕ್ಕೆ ಪಾಠ... ಈ ಮೇಷ್ಟ್ರು ಎದ್ದು ಹೋಗೋ ಹೊತ್ತಿಗೆ ಮಕ್ಳಿಗೆ ನಿದ್ದೆ ಬಂದು ಬಿಟ್ಟಿರುತ್ತೆ."

"ಪಾಠ ಮೊದಲು, ಆಮೇಲೆ ಆಟ, ಊಟ ಎಲ್ಲಾ.. ಅದೇ ಶಿಸ್ತು."

"ಏನು ಶಿಸ್ತೋ, ನಿಂಗೆ ನಿನ್ಹೆಂಡ್ತಿ ಮಕ್ಳ ಮೇಲೆ ಕರುಣೇನೇ ಇಲ್ಲ." ಅಂತ ಹೇಳಬೇಕೆಂದುಕೊಂಡರೂ ಹೇಳಲಿಲ್ಲ.

"ಚಿನ್ನೂನ ಸ್ಕೂಲಿಗೆ ಸೇರಿಸುವಾಗ ಚಿನ್ಮಯೀ ಎಂಬ ಹೆಸರನ್ನು ತಾನೇ ಆಯ್ಕೆ ಮಾಡಿದ. ಭಟ್ಟನಿಗೆ ಹೆಣ್ಣು ಮಕ್ಕಳ ಮೇಲೆ ಅಕ್ಕರೆ ಜಾಸ್ತಿ. ಕರೆದು ಮುದ್ದಿಸು ತ್ತಿದ್ದ. ಮಾತನಾಡಿಸುತ್ತಿದ್ದ. ಬಾಗಿಲ ಮರೆಯಲ್ಲಿ ನಿಂತು, ಸಂತೋಷ ಅಪ್ಪ ತನ್ನನ್ನು ಕರೆಯ ಬಾರದೇ ಎಂದು ಹಂಬಲಿಸುತ್ತಿದ್ದ. ಪ್ರಶಾಂತನಿಗೆ ಅಪ್ಪನ್ನ ಕಂಡರೆ ಅಷ್ಟಕಷ್ಟೇ. ಅವನಿಗೆ ಅಮ್ಮನ ಮೇಲೆ ಪ್ರೀತಿ ಹೆಚ್ಚು.

"ಅವ್ನು ಗಂಡ್ಹುಡ್ಗ, ಅವನ್ನ ನಿನ್ತೊಡೆ ಮೇಲೆ ಕೂರಿಸ್ಕೊಂಡು, ಮುದ್ದು ಮಾಡೋ ವಯಸ್ಸಲ್ಲ, ಇಳ್ಸು ಕೆಳ್ಗೆ" ಎಂದು ಹೆಂಡತಿಯನ್ನು ದಬಾಯಿಸುತ್ತಿದ್ದ. ಪ್ರಶಾಂತನ ಮನ ಮುದುಡಿ ಹೋಗುತ್ತಿತ್ತು. ಮುಖ ಚಿಕ್ಕದು ಮಾಡಿಕೊಂಡು ಎದ್ದು ಹೋಗುತ್ತಿದ್ದ.

ತೊಟ್ಟಿಲಲ್ಲಿ ಮಲಗುವ ಮಗುವನ್ನು ಬಿಟ್ಟರೆ, ಉಳಿದಂತೆ ಎಲ್ಲಾ ಮಕ್ಕಳನ್ನು ಪಕ್ಕದ ರೂಮಿನಲ್ಲಿ ಮಲಗಿಸಿರುತ್ತಿದ್ದರು. ಚಿನ್ನು ಹಿಂದೆ, ಮತ್ತೆ ಬೇಗ ಬೇಗ ಎರಡು ಮಕ್ಕಳು ಹುಟ್ಟಿದವು. ಒಂದೇ ವರ್ಷದ ಅಂತರವಿದ್ದುದರಿಂದ ಅವಳಿ ಮಕ್ಕಳಂತೆ ಕಾಣುತ್ತಿದ್ದವು. ಚಿನ್ನು ಬೆನ್ನ ಹಿಂದೆಯೇ ಹುಟ್ಟಿದವಳು ಪುಸ್ಸೀ... ಅವಳಿಗೆ ನೀಲಿ ಕಣ್ಣುಗಳಿದ್ದವು. ಒಳ್ಳೆ ಇಂಗ್ಲಿಷರ ಮನೆಯವರಂತೆ ಬೆಳ್ಳಗಿದ್ದ ಮಗುವನ್ನು ನೋಡಿ

ಭಟ್ಟ ಆನಂದಗೊಂಡಿದ್ದ. ಅವಳ ಹಿಂದೆ ಗಂಡು ಮಗು ಹುಟ್ಟಿತು. ಆ ಮಗು ಹುಟ್ಟಿದಾಗ, ಭಟ್ಟನಿಗೆ ತನಗೇ ಏನು ಜ್ಞಾನೋದಯ ಆಯಿತೋ, ತಾನೇ ಆಪರೇಷನ್ ಮಾಡಿಸಿಕೊಂಡಿದ್ದ. ಈ ವಿಷಯವನ್ನು ಹೆಂಡತಿಗೆ ತಿಳಿಸಿರಲಿಲ್ಲ. ಇನ್ನು ತನ್ನ ಹೆಂಡತಿಗೆ ಮಕ್ಕಳಾಗುವುದಿಲ್ಲ ಎಂಬ ನಿರಾತಂಕ ಅವನಿಗೆ. ಈಗಾಗಲೇ ಅರ್ಧ ಡಜನ್ ಮಕ್ಕಳು ಹುಟ್ಟಿವೆ. ಗಂಡನ ಬಯಕೆ ಇನ್ನೂ ಕಡಿಮೆ ಆಗಿಲ್ಲ.... ಮುಂದೇನು ಗತಿ ಎಂಬ ದಿಗಿಲು ಅವಳಿಗೆ. ಆ ಅಂಜಿಕೆಯಲ್ಲೇ ಪ್ರತಿ ರಾತ್ರಿಯನ್ನು ಕಳೆಯುತ್ತಿದ್ದಳು.

* * *

ಅಧ್ಯಾಯ-ಮೂರು

ದೊಡ್ಡವವರಾಗುತ್ತಿರುವವರ ಗೋಳು

ಅಡ್ವೋಕೇಟ್ ಸೀತಾರಾಮ ಭಟ್ಟನ ಪ್ರಾಕ್ಟೀಸ್ ಚೆನ್ನಾಗಿ ನಡೆಯುತ್ತಿತ್ತು. ಕಕ್ಷಿದಾರರು ಇದ್ದೇ ಇರುತ್ತಿದ್ದರು. ಆದಾಯವೂ ಚೆನ್ನಾಗಿದ್ದಿತು. ತನ್ನ ಓಡಾಟಕ್ಕೆ ಒಂದು ಕಾರನ್ನೂ ಕೊಂಡುಕೊಂಡಿದ್ದ. ಹೆಂಡತಿಗೆ ಒಡವೆ ಮಾಡಿಸಿ ಕೊಡಬೇಕೆಂಬ ಆಸೆ ಅವನಿಗಿರಲಿಲ್ಲ. ಪ್ರೇಮಳಿಗೂ ಆ ಹಂಬಲವಿರಲಿಲ್ಲ. ಈಗಲೂ ಹಿಂದಿನಂತೆ, ವರ್ಷದಲ್ಲಿ ಎರಡು ಬಾರಿ, ಮನೆ ಮಂದಿಯವರಿಗೆಲ್ಲ ಹೊಸ ಬಟ್ಟೆಗಳನ್ನು ತಂದು ಕೊಡುತ್ತಿದ್ದ. ಸ್ಕೂಲಿಗೆ ಹೋಗುವ ಮಕ್ಕಳಿಗೆ ಯೂನಿಫಾರಂ ಬಟ್ಟೆಗಳು ಇದ್ದೇ ಇರುತ್ತಿದ್ದವು.

ಅವನ ತಾಯಿ ಸತ್ತು ಹೋದ ಮೇಲೆ, ಅವನಿಗೆ ದೇವರ ಮೇಲಿನ ಭಕ್ತಿ ಹೊರಟು ಹೋಗಿತ್ತು. ಹಬ್ಬ-ಹುಣ್ಣಿಮೆಗಳಲ್ಲಿ ಆಸಕ್ತಿ ಇರಲಿಲ್ಲ. ಹಾಗಾಗಿ ಈಗಲೂ ಅವನ ಮನೆಯಲ್ಲಿ ಹಬ್ಬಗಳ ಆಚರಣೆ ಇರಲಿಲ್ಲ. ಬೀದಿಯವರು, ಊರಿನವರು, ಆ ಹಬ್ಬ ಈ ಹಬ್ಬ ಅಂತ ಸಂಭ್ರಮ ಪಟ್ಟರೆ, ಇವರ ಮನೆಯಲ್ಲಿ ಯಾವ ಸಡಗರವೂ ಇಲ್ಲ. ಪ್ರೇಮ ಅದಕ್ಕೇ ಹೊಂದಿಕೊಂಡಿದ್ದಳು. ಆದರೆ ಈಗ ಮಕ್ಕಳು ಬೆಳೆದ ಮೇಲೆ ತಾಯಿಯನ್ನು ಕೇಳುತ್ತಿದ್ದವು.

"ಸ್ಕೂಲಿಗೆ ರಜ ಕೊಟ್ಟಿದಾರೆ, ಎಲ್ರ ಮನೇಲೂ ಹಬ್ಬ ಮಾಡ್ತಾರೆ. ನಮ್ಮನೇಲಿ ಯಾಕೆ ಯಾವ ಪೂಜೆ, ಹಬ್ಬ ಯಾವುದೂ ಇಲ್ಲ?" ಅಂತ.

"ನಂಗೊತ್ತಿಲ್ಲ.." ವಿದ್ಯಾ ಅದೇ ಪ್ರಶ್ನೆಯನ್ನು ಅಪ್ಪನಿಗೆ ಹಾಕಿದ್ದಳು.

"ಅದೆಲ್ಲಾ ನಿಂಗ್ಯಾಕೆ ? ನೀನಿನ್ನೂ ಚಿಕ್ಕವಳು... ನಿಂಗೊತ್ತಾಗುಲ್ಲ ಸುಮ್ನಿರು" ಗದರಿಸಿದ್ದ. ಅನಂತರ ಹೆಂಡತಿಯೊಡನೆ ಹೇಳಿದ್ದ.

"ಮಕ್ಕಳ್ಗೆ ಸರಿಯಾಗಿ ತಿಳುವಳ್ಕೆ ಹೇಳು... ಹಬ್ಬ-ಹುಣ್ಣಿಮೆ ಇದೆಲ್ಲಾ ಮಾಡುಕ್ಕೆ ಕೆಲ್ಸ ಇಲ್ದೆ ಇದ್ದೋರು ಮಾಡೋದು."

"ಹಾಗ್ಯಾಕೆ ಅಂತೀರಿ....! ನಾನೇನೋ ನನ್ನ ಆಸೇನ ಅದುಮಿಟ್ಟು ಸುಮ್ಮನಿದ್ದೆ. ಮಕ್ಕಳ್ಗೆ ಆಸೆ ಇದ್ದರೆ ನಾವೂ ಹಬ್ಬಗಳನ್ನು ಮಾಡೋಣ."

"ಮಾಡೋಕ್ಕೆ ಕೆಲ್ಸವಿಲ್ಲ. ಇಂಥಾ ಆಸೇನೆಲ್ಲ ನೀನೂ ಇಟ್ಕೋಬೇಡ. ನಿನ್ನ ಮಕ್ಕಳ್ಗೂ ತುಂಬಿಸ್ಬೇಡ... ನಂಗದೆಲ್ಲಾ ಇಷ್ಟವಿಲ್ಲ." ಎಂದು ಆರ್ಭಟಿಸಿದ್ದ.

'ನೀನು ಮನುಷ್ಯನೇ ಅಲ್ಲ ಪಶು.... ಇನ್ನೊಬ್ಬರ ಆಸೆಗೆ ಬೆಲೆ ಕೊಡದವನು.' ಎಂದು ಮನದಲ್ಲೇ ಬೈದುಕೊಂಡಳು. ಎದುರಿಗೆ ಹೇಳುವ ಧೈರ್ಯವಿರಲಿಲ್ಲ. ಪ್ರಶಾಂತ ನಿಗೆ ಸ್ವಲ್ಪ ಸ್ವಲ್ಪ ಅರ್ಥವಾಗುತ್ತಿತ್ತು. ತಂದೆಯ ಶಿಸ್ತು, ತಾಯಿಯ ಮೌನ, ಕಾಮಾಕ್ಷಿಯ ಬಡಬಡಿಕೆಯಿಂದ ತಾವು ಎಲ್ಲರಂತಿಲ್ಲ, ತಮ್ಮ ಮನೆಯ ನಡವಳಿಕೆಯೇ ಬೇರೆ ಎಂದು ತಿಳಿದಿದ್ದ.

ಎಲ್ಲರ ಮನೆಯಲ್ಲೂ, ಬೇಸಗೆಯ ರಜದಲ್ಲಿ ಅಜ್ಜ-ಅಜ್ಜಿಯರ ಮನೆಗೆ ಹೋಗಿ ಬರ್ತಾರೆ. ಇಲ್ಲಿ ಆ ಪದ್ಧತಿಯೇ ಇಲ್ಲ. ಊರಿನಿಂದಲೇ ಆಗೊಮ್ಮೆ-ಈಗೊಮ್ಮೆ ಯಾರಾದರೂ ಬರುತ್ತಿದ್ದದು ಉಂಟು. ಬಂದವರೊಡನೆ ಅಪ್ಪ ಹೆಚ್ಚಿಗೆ ಮಾತನ್ನಾಡು ತ್ತಿರಲಿಲ್ಲ. ತಾಯಿ ಹೆಚ್ಚು ಮಾತನಾಡುವಂತಿಲ್ಲ. ಬಂದವರೂ ಹೆಚ್ಚು ಹೊತ್ತು ಉಳಿದು ಕೊಳ್ಳುತ್ತಿರಲಿಲ್ಲ. ಹೊರಟು ಬಿಡುತ್ತಿದ್ದರು.

"ಅಮ್ಮಾ, ನಾವ್ಯಾಕಮ್ಮ ರಜದಲ್ಲಿ ಎಲ್ಲೂ ಹೋಗುಲ್ಲ? ಅವರು ಯಾರೂ ಬರೊಲ್ಲ?" ಪ್ರಶಾಂತ ಕೇಳುತ್ತಿದ್ದ.

"ಯಾಕೋ ಏನೋ ನಾವು ಆ ಅಭ್ಯಾಸನೇ ಇಟ್ಕೊಂಡಿಲ್ಲ." ಅವಳಿಗೂ ಆ ಬೇಸರವಿತ್ತು. ಬೆಳೆಯುತ್ತಾ ಹೋದಂತೆ ಪ್ರಶಾಂತನಿಗೆ ತಮ್ಮ ಮನೆಯ ಪದ್ಧತಿ, ಆಚರಣೆ, ನಡವಳಿಕೆ ಪ್ರತಿಯೊಂದೂ ಬೇಸರವಾಗತೊಡಗಿತ್ತು. ಪುಟ್ಟ ಮನದಲ್ಲಿ ನಾನಾ ಆಲೋಚನೆಗಳು. ಒಮ್ಮೊಮ್ಮೆ ಓದು-ಬರಹ ಸಹ ಬೇಡವೆನಿಸುತ್ತಿತ್ತು.

ಈಗ ಚಿಕ್ಕವನಾದರೂ, ಅವನ ಮಾತುಕತೆಗಳು, ಆಲೋಚನೆಗಳು, ಪ್ರೇಮಳಲ್ಲಿ ಒಮ್ಮೊಮ್ಮೆ ಭಯವನ್ನು ಹುಟ್ಟುಸುತ್ತಿದ್ದವು. ಮಕ್ಕಳು ಹೀಗೇ ಚಿಕ್ಕವರಾಗಿರುವುದಿಲ್ಲ. ಮುಗ್ಧರಾಗಿ ಉಳಿಯುವುದಿಲ್ಲ. ಈಗಲಾದರೂ ತನ್ನ ಗಂಡನ ವರ್ತನೆ ಬದಲಾದರೆ ಒಳ್ಳೆಯದು. ಇಲ್ಲದಿದ್ದರೆ, ಈ ಮನೆಯಲ್ಲಿ ಕೋಲಾಹಲ, ಕಲಹಗಳು ನಡೆಯುವುದು ಖಂಡಿತಾ ಎಂದು ಗಾಬರಿಗೊಳ್ಳುತ್ತಿದ್ದಳು. ಈ ಕಾಲದಲ್ಲಿ ಹೆಚ್ಚು ಮಕ್ಕಳಿರುವ ಸಂಸಾರವೇ ಕಡಿಮೆ. ನಮಗೋ ಆರು ಜನ ಮಕ್ಕಳು! ಯಾಕೆ ಬೇಕಾಗಿತ್ತು? ಸದ್ಯ ಏನು ಪುಣ್ಯವೋ ತಾನು ಮತ್ತೆ ಬಸುರಿಯಾಗಿಲ್ಲ! ಇಲ್ಲದೇ ಇದ್ದಿದ್ದರೆ, ಇನ್ನೂ ಒಂದೋ ಎರಡೋ ಮಕ್ಕಳು ಹುಟ್ಟಿರುತ್ತಿದ್ದವು... ಹಾಗಾದರೆ, ತಾನು ಮುದುಕಿಯಾಗಿ ಬಿಟ್ಟೆನೆ? ತನ್ನಲ್ಲಿ ಆ ಶಕ್ತಿ ಕುಂದಿ ಹೋಯಿತೆ? ಯಾಕೋ ಏನೋ ಆ ಅನಿಸಿಕೆ ಅವಳಿಗೆ ಹಿತವೆನಿಸಲಿಲ್ಲ. ಇದಕ್ಕೆಲ್ಲಾ ತನ್ನ ಗಂಡನೇ ಕಾರಣ. ತನ್ನ ಯೌವನವನ್ನೂ, ತನ್ನ ದೇಹಬಲವನ್ನೂ ಹಾಳು ಮಾಡಿದವನೂ ಇವನೇ; ನನ್ನ ವಯಸ್ಸಿನ ಹೆಂಗಸರು ಎಷ್ಟು ಲವಲವಿಕೆಯಿಂದ ಓಡಾಡಿಕೊಂಡಿರುತ್ತಾರೆ! ತಾನೋ ಮುದುಕಿಯಂತೆ ಆರು ಮಕ್ಕಳನ್ನು ಸಾಕಿ ಸಲಹುತ್ತಾ ಮನೆಯೊಳಗೆ ಕೈದಿಯಂತೆ ಕೂತಿರುವುದು. ಒಂದು ನೋಟ ನಡಿಗೆ ಇಲ್ಲ; ಹಬ್ಬ-ಹುಣ್ಣಿಮೆ ಇಲ್ಲ. ಬರೋರು-ಹೋಗೋರು ಇಲ್ಲ; ಹರಟೆ ಮಾತುಗಳಿಲ್ಲ. ಇದೆಂಥ ಜೀವನ? ಇದರ ಬದಲು ಆತ್ಮಹತ್ಯೆ ಮಾಡಿ

ಕೊಂಡರೆ? ಗಂಡನೇ ಸಾಕಿ ಬೆಳೆಸಲಿ, ಆಗ ಎಲ್ಲಾ ಜವಾಬ್ದಾರಿಯೂ ತಲೆ ಮೇಲೆ ಬಿದ್ದರೆ ಜೀವನ ಏನೂಂತ ಅರ್ಥವಾಗಬಹುದು.

ಆದರೆ ಆತ್ಮಹತ್ಯೆಯನ್ನೂ ಮಾಡಿಕೊಳ್ಳುವ ಧೈರ್ಯ ಅವಳಲ್ಲಿಲ್ಲ. ಅಲ್ಲದೇ ಮಕ್ಕಳನ್ನು ಅನಾಥರನ್ನಾಗಿ ಮಾಡುವ ಮನಸ್ಸಿಲ್ಲ. ಚಿಕ್ಕವಯಸ್ಸಿನಲ್ಲೇ ತಾಯಿಯನ್ನು ಕಳೆದುಕೊಂಡ, ತನ್ನ ಗಂಡ ಬೆಳೆದ ರೀತಿಯೇ ಸರಿ ಇಲ್ಲ. ಇನ್ನು ಈ ನನ್ನ ಮಕ್ಕಳು? ಆರು ಜನ! ಆರು ಮಕ್ಕಳು ಆರು ದಾರಿಯಲ್ಲಿ ನಡೆದರೆ? ಗಂಡು ಮಕ್ಕಳು ಆರು ದಾರಿಯಲ್ಲಿ ನಡೆದರೆ? ಗಂಡು ಮಕ್ಕಳಿಗಿಂತ, ಹೆಣ್ಣು ಮಕ್ಕಳಿಗೆ ಜೀವನ ಕಷ್ಟ.. ಮೂರು ಹೆಣ್ಣು ಮಕ್ಕಳ ಜೀವನ ಏನಾಗುತ್ತದೋ? ಆ ಅನಿಸಿಕೆಯೇ ಅವಳಲ್ಲಿ ಭಯವನ್ನು ಹುಟ್ಟಿಸಿತ್ತು.

ಈಗ ಈ ಮಕ್ಕಳೂ ದೊಡ್ಡವರಾಗುತ್ತಿದ್ದಾರೆ. ಪ್ರಶಾಂತ ಹಾಗೂ ಶ್ರೀವಿದ್ಯಾ ಹೈಸ್ಕೂಲಿನಲ್ಲಿ ಓದುತ್ತಿದ್ದಾರೆ. ಸಂತೋಷ, ಚಿನ್ಮಯೀ ಇಬ್ಬರೂ ಪ್ರಾಥಮಿಕ ಶಾಲೆಯಲ್ಲಿ ಕಲಿಯುತ್ತಿದ್ದಾರೆ. ಚಿನ್ಮಯಿಯ ಅನಂತರದವಳು ಪುಸ್ಸೀ. ಅವಳನ್ನು ಸ್ಕೂಲಿಗೆ ಸೇರಿಸುವಾಗ ಅವಳಿಗೆ ನಳಿನಿ ಎಂದು ಹೆಸರನ್ನಿಟ್ಟರು. ಈಗಲೂ ತತ್‌ಕ್ಷಣಕ್ಕೆ ಚಿಕ್ಕಮಗು ಕೈಗೂಸೆ. ಅದಕ್ಕೆ ಇನ್ನೂ ಹೆಸರನ್ನಿಡಿಸಿಕೊಳ್ಳುವ ಸೌಭಾಗ್ಯ ಒದಗಿರಲಿಲ್ಲ.

ಆ ದೊಡ್ಡ ಮನೆಯಲ್ಲಿ ಕೆಳಗೆ ಮೂರು ರೂಮುಗಳಿದ್ದವು. ಮೇಲೆ ನಾಲ್ಕು ರೂಮುಗಳಿದ್ದವು. ಒಂದು ರೂಮಿನಲ್ಲಿ ಪ್ರೇಮ ತನ್ನ ಚಿಕ್ಕ ಮಕ್ಕಳೊಂದಿಗೆ ಮಲಗುತ್ತಿದ್ದಳು. ದೊಡ್ಡ ನಾಲ್ಕು ಮಕ್ಕಳೂ ಮತೊಂದು ರೂಮಿನಲ್ಲಿ ಮಲಗುತ್ತಿದ್ದರು. ಈಗ ಪ್ರಶಾಂತನಿಗೆ ಅದು ಸರಿ ಎನಿಸುತ್ತಿರಲಿಲ್ಲ. ತಾನು ಒಬ್ಬನೇ ಮಹಡಿಯ ರೂಮಿನಲ್ಲೇಕೆ ಮಲಗಬಾರದು ಎಂದೆನಿಸುತ್ತಿತ್ತು. ಇದನ್ನೇ ತಾಯಿಗೆ ಹೇಳಿದ.

"ಬೇಡ್ಕಣೋ ಪಚ್ಚು, ಈಗ್ಲಿಂದ ಒಬ್ನೇ ಇರೋದನ್ನ ಅಭ್ಯಾಸ ಮಾಡ್ಕೋಬೇಡ. ಆಮೇಲೆ ಎಲ್ರ ಜತೆ ಇರೋದೇ ಕಷ್ಟಾಂತ ಆಗುತ್ತೆ."

"ಈ ರೂಮ್ನಲ್ಲಿ ಜಾಗ ಸಾಲ್ದು. ಜತೆಗೆ ಇಬ್ಬಿಬ್ರು ಹುಡ್ಗೀರು. ಅವ್ರ ಜಗಳ, ಮಾತುಕತೆ, ಹರಟೆ, ನಗು ಬೇಡಾಂತನ್ನಿಸುತ್ತೆ. ಓದೋಕೆ ಮನಸ್ಸು ಬರೋಲ್ಲ. ಬೇಕಾದ್ರೆ ಸಂತೋಷಾನು ನನ್ನ ರೂಮ್ನಲ್ಲಿ ಮಲಗ್ಲಿ."

"ಅದಿನ್ನೂ ಚಿಕ್ದು ಕಣೋ. ಹೆದರುತ್ತೆ..."

"ಹಾಗಂತ ನಾನೀಗ ದೊಡ್ಡೋನಾಗಿದೀನಿ. ನನಗೆ ಓದೋಕೆ, ಬರೆಯೋಕೆ ಸರಿಯಾದ ಜಾಗ ಇಲ್ಲ. ಹೀಗೇ ಇದ್ರೆ ಫೇಲಾಗಿ ಹೋಗ್ತೀನಿ ಅಷ್ಟೇ..."

"ಯಾರ್ಮನೇಲೂ ಇಷ್ಟು ಜಾಗ ಇರೂಲ್ಲ. ಅವರ್ಮನೆ ಮಕ್ಕಳೆಲ್ಲಾ ಫೇಲಾಗುಲ್ಲ. ಬೇಕಾದ್ರೆ ನನ್ನ ರೂಮ್ನಲ್ಲಿ ಕೂತ್ಕೊಂಡು ಓದ್ಕೋ."

"ಹುಂ, ಅಲ್ಲಿ ಎಲ್ಲಿ ಓದ್ಕೊಳ್ಳೋದು... ಚಿಕ್ಕೋವ್ವು ಎರಡೂ ಅಳ್ತಿರುತ್ವೆ. ನಂಗೆ ಸರಿ ಹೋಗುಲ್ಲ."

"ನಿನ್ನಪ್ಪನ ರೂಮ್ನಲ್ಲಿ ಓದ್ಕೋ... ನಾನು ಅವ್ರಿಗೆ ಹೇಳ್ತೀನಿ."

"ಏನೂ ಬೇಡ. ಆ ಅಪ್ಪಯ್ಯನ ಸುದ್ದೀನೇ ಬೇಡ.... ನಂಗೂ ಅವ್ರಿಗೂ ಸರಿ ಹೋಗುಲ್ಲ."

"ಪಚ್ಚೂ.... ಏನ್ಮಾತು? ಅವ್ರು ನಿನ್ನಪ್ಪ... ತಿಳೀತಾ?" ಅವಳು ಸ್ವಲ್ಪ ಎತ್ತರದ ಧ್ವನಿಯಲ್ಲಿ ಹೇಳಿದಾಗ, ಉಳಿದ ಮಕ್ಕಳೂ ಬಾಗಿಲಿಗೆ ಬಂದು ನಿಂತಿದ್ದವು. "ಏನದು ಗಲಾಟೆ?" ಭಟ್ಟ ತನ್ನ ರೂಮಿನಿಂದ ಹೊರ ಬಂದು ಕೇಳಿದಾಗ, ಎಲ್ಲರೂ ತೆಪ್ಪಗಾದರು.

ಮೇಲಿರುವ ರೂಮುಗಳೂ ನಮ್ಮವೇ. ಅಲ್ಲಿ ಹೋಗಿ ಓದಿಕೊಳ್ಳಲು, ಮಲಗಲು ಅಪ್ಪನ ಅಪ್ಪಣೆ ಯಾಕೆ ಅಂತ ಅನ್ನಿಸಿದರೂ, ಅಪ್ಪ ಏನಾದರೂ ಗಲಾಟೆ ಮಾಡಿದರೇ... ಎಂಬ ಅಂಜಿಕೆ. ಹಾಗಾಗಿ, ಹಾಲಿನಲ್ಲಿ ಕುಳಿತು ಓದಿಕೊಳ್ಳುತ್ತಿದ್ದ. ಅಲ್ಲೇ ಸೋಫಾದ ಮೇಲೆ ಮಲಗುತ್ತಿದ್ದ.

* * *

ಒಂದು ದಿನ ಬೆಳಗ್ಗೆ ಶ್ರೀವಿದ್ಯಾ ತಾನು ಸ್ಕೂಲಿಗೆ ಹೋಗುವುದಿಲ್ಲವೆಂದು ಹೇಳಿದಳು. ಪ್ರೇಮ ಮಗಳನ್ನೇ ಏನೋ ಸಂಶಯದಿಂದ ನೋಡಿದಳು. ಹೌದು, ಮಗಳೀಗ ಚಿಕ್ಕವಳಲ್ಲ. ಯೌವನಕ್ಕೆ ಕಾಲಿಡುತ್ತಿರುವ ಹೆಣ್ಣು ಎಂದು ಅರ್ಥವಾಗಿತ್ತು. ಕಾಮಾಕ್ಷಿಗೆ ಹೇಳಿ ಕಳಿಸಿದಳು.

"ನೋಡಿ ಕಾಮಾಕ್ಷಿ, ಅವಳು ಸ್ಕೂಲಿಗೆ ಹೋಗುಲ್ಲ ಅಂತಿದಾಳೆ. ಎಂದೂ ಹೀಗೆ ಹೇಳಿದ್ದಿಲ್ಲ. ಮುಖವೂ ಸಪ್ಪಗಾಗಿದೆ. ನನಗೇನೋ ಅನುಮಾನ. ನೀವು ಸ್ವಲ್ಪ ವಿಚಾರಿಸ್ತೀರಾ?"

ಕಾಮಾಕ್ಷಿ, ಶ್ರೀವಿದ್ಯಾಳನ್ನು ರೂಮಿನೊಳಕ್ಕೆ ಕರೆದುಕೊಂಡು ಹೋಗಿ ಬಾಗಿಲನ್ನು ಹಾಕಿಕೊಂಡಳು. "ನೀವೆಲ್ಲಾ ನಿಮ್ನಿಮ್ಮ ಪಾಡಿಗೆ ಸ್ಕೂಲಿಗೆ ಹೋಗಿ." ಪ್ರೇಮ ಉಳಿದ ಮಕ್ಕಳನ್ನು ತಯಾರು ಮಾಡಿದಳು.

"ಅಕ್ಕಂಗೇನಾಯ್ತು? ಅವಳ್ಯಾಕೆ ಸ್ಕೂಲ್ಗೆ ಬರೂಲ್ಲ?" ಚಿನ್ಮಯಿ ಕೇಳಿದಾಗ ಗದರಿದಳು–

"ನಿಂಗ್ಯಾಕೆ ಅದೆಲ್ಲಾ... ಹೋಗು ಅಂದ್ರೆ ಹೋಗು.. ಹೋಗೋ ಸಂತೋಷ, ಇಬ್ಬರೂ ಕೈ ಕೈ ಹಿಡಿದ್ಕೊಂಡು ರಸ್ತೆ ಕ್ರಾಸ್ ಮಾಡಿ. ಹುಷಾರಾಗಿ ಹೋಗಿ..." ಅವರಿಬ್ಬರೂ ಅತ್ತ ಮನಸ್ಸಿಲ್ಲದ ಮನಸ್ಸಿಂದ ಮನೆಯಿಂದ ಹೊರಬಿದ್ದರು. ಪ್ರಶಾಂತ ನಿಗೆ ಈ ಕಡೆ ಗಮನವೇ ಇಲ್ಲ. ಅವನಾಗಲೇ ಹೊರಟು ಬಿಟ್ಟಿದ್ದ. ಭಟ್ಟನೂ ಯಾರೊಡನೆಯೋ ಮಾತನಾಡುತ್ತಿದ್ದ. ಪ್ರೇಮ ರೂಮಿನ ಬಾಗಿಲನ್ನು ತಟ್ಟಿದಳು. ಕಾಮಾಕ್ಷಿ ಬಾಗಿಲನ್ನು ತೆರೆದಳು. ಕಣ್ಣು ಸಂಜ್ಞೆಯಲ್ಲಿ 'ಹೌದು' ಎನ್ನುವಂತೆ ಹೇಳಿದಳು. ಪ್ರೇಮಳ ಮುಖದ ಬಣ್ಣ ಬದಲಾಗಿತ್ತು. ರೂಮಿನೊಳಗೆ ಬಗ್ಗಿ ನೋಡಿದಳು.

ಪೆಚ್ಚುಮೋರೆ ಹಾಕಿಕೊಂಡು ಒಂದು ಮೂಲೆಯಲ್ಲಿ ನಿಂತಿದ್ದ ಮಗಳನ್ನು ಕಂಡು, ನಾನಾ ಭಾವನೆಗಳು ಒಟ್ಟಿಗೇ ಧುಮ್ಮಿಕ್ಕಿದವು. ತಾನಿನ್ನೂ ಚಿಕ್ಕ ಮಗು ಎಂದು ಭಾವಿಸಿದ್ದ ಮಗಳು ಇಂದು ದೊಡ್ಡವಳಾಗಿದ್ದಾಳೆ... ಮುಂದೇನು ? ಅವಳನ್ನೇ ನೋಡುತ್ತಿದ್ದ ಕಾಮಾಕ್ಷಿ, ಅವಳಿಗೆ ಧೈರ್ಯ ಹೇಳಿದಳು.

"ನೀವೇ ಹೀಗೆ ಧೈರ್ಯಗೆಟ್ಟರೆ ಹೇಗೆ ಪ್ರೇಮಕ್ಕ. ಅದಿನ್ನೂ ಚಿಕ್ಕದು. ಅದಕ್ಕೆ ಧೈರ್ಯ ಹೇಳ್ಬೇಕು."

"ನಂಗೇನೂ ಗೊತ್ತಾಗ್ತಿಲ್ಲ, ಕಾಮಾಕ್ಷಿ.."

"ಗೊತ್ತಾಗ್ದೇ ಇರೋ ಅಂಥಾದ್ದು ಏನು? ಹೆಣ್ಮಕ್ಳಾಗಿ ಹುಟ್ಟಿದ್ಮೇಲೆ ಇದು ಇದ್ದದ್ದೇ... ನಾನು ನಿನ್ನ ಹುಡ್ಗಿಗೆ ಎಲ್ಲಾ ಹೇಳಿದೀನಿ. ಅದು ಜಾಣೆ. ಒಂದ್ವಾರ ಸ್ಕೂಲ್ಗೆ ಹೋಗೋದೇನು ಬೇಡ. ಮನೀಲೇ ಇರ್ಲಿ."

"ಒಂದ್ವಾರ ಸ್ಕೂಲ್ಗೆ ಹೋಗ್ದಿದ್ರೆ, ಅಪ್ಪ ಬೈಯಲ್ಲೇನು ಅತ್ತೆ?"

"ಅವನ್ಯಾಕೆ ಬೈತಾನೆ? ಅವಂಗೇನು ತಿಳಿಯುತ್ತೆ? ನಾನು ಅವಂಗ್ಹೇಳ್ತೀನಿ." ಹಾಗೆ ಹೇಳಿದ್ರೂ ಈ ಮಾತನ್ನ ಭಟ್ಟನಿಗೆ ಹೇಗೆ ಹೇಳೋದು ಎಂದು ಚಿಂತೆಯೇ.

"ಪ್ರೇಮಕ್ಕ, ನೀವೇ ನಿಮ್ಮ ಗಂಡಗೆ ಹೇಳ್ಬಿಡಿ." ಪ್ರೇಮಳಿಗೆ ಈ ಕೆಲಸವನ್ನು ವಹಿಸಿದಳು.

"ನಾನೊಲ್ಲೆ ಕಾಮಾಕ್ಷಿ. ಅವರೊಂಥರಾ.... ಸುಳುಹು ಸೂಕ್ಷ್ಮ ಒಂದೂ ಇಲ್ಲ. ಯಾರ್ಗಾದ್ರೂ ನೋವಾಗ್ಬಹುದಾ ಅಂತ ಕೂಡ ಯೋಚಿಸುಲ್ಲ."

"ಹಂಗಂದ್ರೆ ಹೆಂಗೇ, ಅವನೀ ಮನೆ ಯಜ್ಮಾನ. ಅವನ್ಗೆ ತಿಳಿಸ್ದೇ ಇದ್ರೆ ಹೇಗೆ..?"

"ಅವ್ರಾಗೇ ಕೇಳ್ಲಿ ಆಗ್ಹೇಳ್ತೀನಿ. ನಾನಾಗೇ ನಾನ್ಹೇಳುಲ್ಲ."

"ಏನಾದ್ರೂ ಮಾಡ್ಕೊಳ್ಳಿ. ನಿಮ್ಮನೇ ವಿಷ್ಯ. ತಾಯೀ... ನಾನು ಮತ್ತೆ ಬರ್ತೀನಿ. ನೀನೇನೂ ಗಾಬ್ರಿ ಆಗ್ಬೇಡ..." ಅವಳ ತಲೆ ಸವರಿ, ಕಾಮಾಕ್ಷಿ ಹೊರಟು ಹೋದ್ದಳು. ಪ್ರೇಮ ಮಗಳ ಮುಖವನ್ನೇ ನೋಡಿದಳು. ಮಗಳು ಅತ್ತಿರುವಂತೆ ಅನ್ನಿಸಿತ್ತು. ಆದರೆ ಏನನ್ನೂ ಹೇಳಲೂ ತೋಚಲಿಲ್ಲ.

ನಾಲ್ಕಾರು ಬಾರಿ ಕಾಮಾಕ್ಷಿ ತನ್ನ ಮನೆಗೆ ಬಂದು ಹೋಗಿದ್ದನ್ನು ಭಟ್ಟ ಗಮನಿಸಿದ್ದ. ಇವತ್ತು ಹಬ್ಬ-ಹುಣ್ಣಿಮೆ, ಏನೂ ವಿಶೇಷ ಇಲ್ಲವೆಂದು ಕಕ್ಷಿದಾರರ ಮಾತಿನಿಂದ ತಿಳಿದಿತ್ತು. ಪ್ರೇಮ ಓಡಾಡಿಕೊಂಡಿದ್ದಾಳೆ. ಅಂದ್ರೆ ಹುಷಾರಾಗಿದ್ದಾಳೆ. ಹಾಗಾದ್ರೆ ಈ ಕಾಮಾಕ್ಷಿಗೇನು ಸಡಗರ?

ಕಕ್ಷಿದಾರರು ಎಲ್ಲೋ ಹೊರಗೆ ಹೋಗಿದ್ದರು. ಕಾಮಾಕ್ಷಿಯನ್ನು ತಾನು ಕೂತಲ್ಲಿಗೇ ಕರೆದ.

"ಏನಿವತ್ತು? ಹೀಗೆ ಓಡಾಡ್ತಾನೇ ಇದೀಯಲ್ಲ..."

"ಏನಿಲ್ಲ, ಸುಮ್ನೆ ಬಂದೆ. ಪ್ರೇಮಕ್ಕನ ಹತ್ರ ಸ್ವಲ್ಪ ಕೆಲ್ಸ ಇತ್ತು."

"ಹಾಗೆಲ್ಲಾ ಸುಮ್ಸುಮ್ನೆ ಬರೋಳಲ್ಲ ನೀನು, ಏನು ವಿಶೇಷ ಅಂತ ಕೇಳ್ದೆ."

"ಏನು ವಿಶೇಷ ಅಂತ ನಿನ್ನ ಹೆಂಡ್ತೀನೇ ಕೇಳು."

ಅವಳು ಸೆರಗಿನ ತುದಿಯನ್ನು ಬಾಯಿಗಿಟ್ಟು, ಮುಸಿ ಮುಸಿ ನಕ್ಕಾಗ, ಭಟ್ಟ ಬೆವತುಹೋದ. ಈ ನಗು! ಹೆಂಡ್ತಿಯನ್ನೇ ಕೇಳೋ ವಿಶೇಷ... ಏನಿರಬಹುದು? ಪ್ರೇಮ ಮತ್ತೆ ಗರ್ಭಿಣಿಯಾಗಿರಬಹುದೇ.... ಆಘಾತವಾದವನಂತೆ ಎದ್ದು ನಿಂತ.... ಇದು ಹೇಗೆ ಸಾಧ್ಯ? ತನ್ನ ಹೆಂಡ್ತಿ ತನಗೆ ಮೋಸ ಮಾಡಿರಬಹುದೇ....? ನಿಂತ ನೆಲ ಕುಸಿದಂತಾಯಿತು. ಊಹಿಸಲೂ ಅಸಾಧ್ಯವಾದ ಮೋಸ ? ಈ ಗಳಿಗೆಯಲ್ಲಿ ಅವಳನ್ನು ಮನೆಯಿಂದಾಚೆ ತಳ್ಳಿ ಬಿಡಬೇಕೆಂಬ ಕೋಪದಿಂದ, ಅವಳು ಇದ್ದೆಡೆಗೆ ಬಂದ. ಅವಳು ಆ ರೂಮಿನಲ್ಲಿರಲಿಲ್ಲ. ಎದುರುಗಡೆಯ ರೂಮಿನಲ್ಲಿ ಯಾರೋ ಇದ್ದಂತೆ ಅನ್ನಿಸಿತು. ಅಲ್ಲಿಗೆ ಧಾವಿಸಿದ. ಅಲ್ಲಿ ಪ್ರೇಮ, ಮಗಳೊಡನೆ ಮಾತನಾಡುತ್ತಾ ಕೂತಿದ್ದಳು. ಇಬ್ಬರನ್ನೂ ದುರದುರನೆ ನೋಡಿದ. ಇಬ್ಬರೂ ಸಾವರಿಸಿಕೊಂಡು ಎದ್ದು ನಿಂತರು.

"ಏನಿದೆಲ್ಲಾ?" ಗುಡುಗಿದ. ಶ್ರೀವಿದ್ಯಾ ಮುಖ ಮುಚ್ಚಿ ಅಳತೊಡಗಿದಳು. ಮಗಳ ಮೇಲೆ ಕರುಣೆ ಉಕ್ಕಲಿಲ್ಲ. ಒಳಬಂದು, ಮಗಳನ್ನು ಸ್ಕೂಲಿಗೆ ಯಾಕೆ ಹೋಗಿಲ್ಲ ಎಂದು ಕೇಳಬೇಕೆಂದುಕೊಂಡು, ಒಂದಡಿ ಹೆಜ್ಜೆ ಇಟ್ಟವನನ್ನು ಅವನ ಹಿಂದೆ ನಿಂತಿದ್ದ ಕಾಮಾಕ್ಷಿ, ಅವನ ತೋಳು ಹಿಡಿದು ನಿಲ್ಲಿಸಿದಳು. ಅವನು ಹಿಂತಿರುಗಿ ಕೆಕ್ಕರಿಸಿ ಅವಳನ್ನೇ ನೋಡಿದ.

"ತಾಯಿನ್ಯಾಕೆ ಸ್ಕೂಲ್ಗೆ ಕಳಿಸಿಲ್ಲ...?" ಗುಡುಗಿದ.

"ಭಟ್ಟ ನೀನೀಕಡೆ ಬಾ... ನಾ ಹೇಳ್ತೀನಿ."

"ನಾನು ನಿನ್ನನ್ನ ಕೇಳ್ತಿಲ್ಲ, ಅವಳ್ನ ಕೇಳ್ತಿದೀನಿ... ಅವಳನ್ಯಾಕೆ ಸ್ಕೂಲ್ಗೆ ಕಳಿಸಿಲ್ಲ? ಏನ್ಮಾಡ್ತಿದೀರಿ ಇಲ್ಲಿ ಇಬ್ರೂ ಸೇರ್ಕೊಂಡು..."

"ಪ್ರೇಮಕ್ಕ ನೀವು ಹೊರಗ್ಬರ್ದು ಮಾತ್ನಾಡಿ. ತಾಯಮ್ಮ ಮೊದ್ಲೇ ಹೆದರಿದೆ. ಇವನೊಬ್ಬ... ಯಾರ್ಹತ್ರ ಹೆಂಗ್ಮಾತಾಡ್ಬೇಕು ಅನ್ನೋದೇ ಗೊತ್ತಿಲ್ಲ ಈ ಪ್ರಾಣಿಗೆ." ಎನ್ನುತ್ತಾ ತಾನು ಅವನನ್ನು ದಾಟಿಕೊಂಡು ರೂಮಿನೊಳಕ್ಕೆ ಬಂದಳು. ಪ್ರೇಮ ಅಂಜುತ್ತಾ ಹೊರಬಂದಳು. ಕಾಮಾಕ್ಷಿ ರೂಮಿನ ಬಾಗಿಲನ್ನು ಹಾಕಿಕೊಂಡಳು.

"ಏನಾಯ್ತು ನಿಂಗೆ? ಕಾಮಾಕ್ಷಿ ಯಾಕೆ ಬಂದಿದಾಳೆ?" ಭಟ್ಟ ಪ್ರೇಮಳನ್ನೇ ದುರುದುರು ನೋಡಿದ. ಪ್ರೇಮ ತಲೆತಗ್ಗಿಸಿ ನುಡಿದಳು.

"ನಮ್ಮ ವಿದ್ಯಾ ಮೈ ನೆರೆದಿದ್ದಾಳೆ...."

"ಏನು ಹಾಗಂದ್ರೆ..?"

"ಅವಳು ದೊಡ್ಡವಳಾಗಿದ್ದಾಳೆ..." ಈಗ ಭಟ್ಟನಿಗೆ ಅರ್ಥವಾಗಿತ್ತು. ಅವಳನ್ನೇ

ಮಿಕಿಮಿಕಿ ನೋಡಿದ. ಅನಂತರ ಸಾವರಿಸಿಕೊಂಡು ನುಡಿದ –

"ಅದಕ್ಕೇ ಏನಾಯ್ತೀಗ...? ಸ್ಕೂಲಿಗೆ ಹೋಗಿದ್ರೇನಾಗ್ತಿತ್ತು?"

"ತಾಯಿ ಹೆದರಿ ಬಿಟ್ಟಿದ್ದಾಳೆ. ಅಷ್ಟು ಗೊತ್ತಾಗುಲ್ವಾ ನಿಮಗೆ ?"

"ಸರಿ ಗೊತ್ತಾಗುತ್ತೆ. ಊರೆಲ್ಲಾ ಡಂಗುರ ಹೊಡಕೊಂಡ್ಬನ್ನಿ. ಕಾಮಾಕ್ಷಿನ ಯಾಕೆ ಕರೆಸ್ದೆ? ಅವಳ ಬಾಯಲ್ಲಿ ಯಾವ ಮಾತೂ ನಿಲ್ಲುಲ್ಲ."

"ಗೊತ್ತಾದ್ರೆ ಏನೀಗ? ಇದೆಲ್ಲಾ ಮುಚ್ಚಿಡೋ ವಿಚಾರನಾ? ಅಕ್ಕ – ಪಕ್ಕದವರಿಗೆಲ್ಲಾ ತಿಳಿದೇ ತಿಳಿಯುತ್ತೆ."

"ಯಾರ್ಗೂ ತಿಳಿಯಕೂಡ್ದು. ಯಾರಿಗೂ ನೀನಾಗ್ಲೀ ಕಾಮಾಕ್ಷಿಯಾಗ್ಲೀ ಹೇಳಕೂಡ್ದು. ತಾಯೀನ ಸ್ಕೂಲ್ಗೆ ಕಳಿಸ್ದೆ ಮನೇಲಿಟ್ಕೊಂಡ್ರೆ ಎಲ್ರಿಗೂ ತಿಳಿಯುತ್ತೆ. ನಾಳೆ ಅವಳು ಸ್ಕೂಲ್ಗೆ ಹೋಗಲೇಬೇಕು."

"ಅದ್ಯಾಕೆ ಹೀಗಾಡ್ತೀರಾ? ಪಾಪ, ಅವಳಿನ್ನೂ ಚಿಕ್ಕೋಳು..."

"ಚಿಕ್ಕೋಳಾದ್ರೇನಂತೆ! ನೀನು ಇರೋದು ಯಾತಕ್ಕೆ? ಸರಿಯಾಗಿ ತಿಳುವಳಿಕೆ ಹೇಳಿ ಕಳಿಸು.... ಹೆಚ್ಚು ಮಾತು ಬೇಡ." ಅವನು ಅಲ್ಲಿ ನಿಲ್ಲದೇ ಹೊರಟು ಹೋದ. ಪ್ರೇಮ, ಗಂಡ ಹೇಳಿದ್ದನ್ನು ಕಾಮಾಕ್ಷಿಗೆ ಹೇಳಿದಳು. ಕಾಮಾಕ್ಷಿ ತಲೆತಲೆ ಚಚ್ಚಿಕೊಂಡಳು.

"ಈ ಭಟ್ಟಗೆ ಯಾವ ಜನ್ಮದಲ್ಲಿ ಬುದ್ಧಿ ಬರುತ್ತೋ ನಾ ಕಾಣೆ... ಬೇರೆಯವ್ರ ಕಷ್ಟಾನೇ ಅರ್ಥಾಗುಲ್ವಲ್ಲ ಈ ಪ್ರಾಣಿಗೆ.." ಆದರೂ ಭಟ್ಟನ ಮಾತನ್ನು ಯಾರೂ ಮೀರುವಂತಿರಲಿಲ್ಲ.

* * *

"ಪ್ರಶಾಂತನಿಗೆ ಮಹಡಿ ಮೇಲಿನ ರೂಮ್ನಲ್ಲಿ ಮಲಕ್ಕಳಕ್ಕೆ ಹೇಳು. ಹುಡ್ಗೀರ ರೂಮ್ನಲ್ಲಿ ಅವನ್ಯಾಕೆ ಮಲಗ್ಬೇಕು?" ಗಂಡ ಬುದ್ಧಿವಾದ ಹೇಳಿದಾಗ ಪ್ರೇಮ ಕಸಿವಿಸಿಗೊಂಡಳು.

"ಅವನೂ ಇನ್ನೂ ಚಿಕ್ಕೋನೇ. ಒಬ್ನಿಗೇ ಭಯವಾಗುಲ್ವಾ! ನಿಮ್ಮ ರೂಮ್ನಲ್ಲೇ ಮಲಗಿಸ್ಕೊಳ್ಳಿ."

"ಏನು ಚಿಕ್ಕೋನು! ಮೀಸೆ ಬರೋ ವಯಸ್ಸಾಗಿದೆ. ನಿನ್ನ ಬುದ್ಧಿಗೆ ಏನು ಹೇಳಲಿ?"

"ನಾನೇನು ಹೇಳಿದೆ? ಒಬ್ನೇ ಮಲಗೋದು ಬ್ಯಾಡ ಅಂತಂದೆ... ನೀವೂ ಮಲಗೋದಾದ್ರೆ ಸೈ."

"ನನಗೆ ಹೇಳ್ಬೇಡ ನೀನು. ಅವನು ಅಭ್ಯಾಸ ಮಾಡ್ಕೊಳ್ಳಲಿ.... ಅವನಿಗೆ ಧೈರ್ಯ ಬರೋದು ಯಾವಾಗ? ಸಂತೋಷನೂ ಅವನ ಜತೆ ಮಲಗಲಿ." ಭಟ್ಟ

ಅಧಿಕಾರವಾಣಿಯಿಂದ ಹೇಳಿದಾಗ, ಬೇರೆ ಮಾರ್ಗವೇ ಇರಲಿಲ್ಲ.

ಪ್ರಶಾಂತನೊಡನೆ ಹೇಳಿದಾಗ, ಅವನಿಗೆ ಖುಶಿಯಾಗಿತ್ತು. ಸರಸರನೆ ತನಗೆ ಬೇಕಾದ ರೂಮನ್ನು ಆಯ್ಕೆ ಮಾಡಿಕೊಂಡು, ತಾನೇ ಕ್ಲೀನ್ ಮಾಡಿಕೊಂಡು ತನ್ನ ಪುಸ್ತಕಗಳನ್ನು, ಹಾಸಿಗೆ ಹೊದ್ದಿಕೆಗಳನ್ನು ಸಾಗಿಸಿದ. ತಮ್ಮನಿಗೂ ಹೇಳಿದ –

"ನೀನೂ ಬೇಕಾದ್ರೆ ನನ್ನ ರೂಮ್ನಲ್ಲಿ ಬಂದಿರು. ಆದರೆ ಒಂದು ಹೊತ್ನಲ್ಲಿ ಅಮ್ಮ ಅಂತ ಅತ್ತರೆ ಮಾತ್ರ ಚಚ್ಚಿ ಹಾಕಿ ಬಿಡ್ತೀನಿ." ಸಂತೋಷನೂ ತನ್ನ ಸಾಮಾನುಗಳನ್ನು ಮೇಲಿನ ರೂಮಿಗೆ ಸಾಗಿಸಿದ. ಆದರೆ ಪ್ರೇಮಳಿಗೆ ಯಾಕೋ ಪಚ್ಚೆನಿಸಿತು. ಮೊದಲೇ ಎಲ್ಲರೂ ಅವರವರ ಪಾಡಿಗೆ, ಮನೆ ತುಂಬ ಮಕ್ಕಳಿದಾರೆ ಅಂತ ಅನ್ನಿಸುವುದೇ ಇಲ್ಲ. ಹಿರಿಯ ಮಗನಾಗಿ, ಪ್ರಶಾಂತ ತನ್ನಿಂದ ದೂರ ಹೊರಟು ಹೋದನೇನೋ ಅಂತೆನ್ನಿಸಿತ್ತು. ಇನ್ನು ಮುಂದೆ ಕಾಫಿಗೆ, ತಿಂಡಿಗೆ, ಊಟಕ್ಕೆ ಇಲ್ಲಿಂದ ಕೂಗು ಹಾಕಬೇಕು ಎಂದುಕೊಂಡಳು.

ಆ ರಾತ್ರಿ ಭಟ್ಟ ಹೆಂಡತಿಯ ರೂಮಿಗೆ ಬರಲಿಲ್ಲ. ಮಕ್ಕಳು ಅಳುತ್ತಿರಲಿ, ಹಾಲು ಕುಡಿಸುತ್ತಿರಲಿ, ತೂಗಿ ಮಲಗಿಸುತ್ತಿರಲಿ, ಭಟ್ಟ ತಾನು ಮಲಗುವ ಮೊದಲು ಹೆಂಡತಿಯ ರೂಮಿಗೆ ಬರುವುದನ್ನು ತಪ್ಪಿಸುತ್ತಿರಲಿಲ್ಲ. ಅವಳಿಗೂ ಅದೊಂದು ತರಹ ಅಭ್ಯಾಸವಾಗಿ ಬಿಟ್ಟಿತ್ತು. ಈ ದಿನ ಗಂಡನ ಬರವನ್ನು ಎದುರು ನೋಡಿ, ಸುಮ್ಮನಾಗಿ ಮಲಗಿದಳು.

ಇವತ್ತೇನಾಯಿತು ನನ್ನ ಗಂಡನಿಗೆ? ತನ್ನ ಜವಾಬ್ದಾರಿ ಹೆಚ್ಚಿತೆಂಬ ಅರಿವಾಯಿತೆ? ಅಥವಾ ತನಗೂ ವಯಸ್ಸಾಯಿತೆಂಬ ಮನವರಿಕೆ ಉಂಟಾಯಿತೆ! ಇದುವರೆಗೂ ಒಂದು ದಿನವಾದರೂ, ಹೆಂಡತಿಯ ಮನಸ್ನಲ್ಲಿ ಏನಿದೆ ಅಂತ ಅರಿಯಲು ಪ್ರಯತ್ನಿಸಿದವನಲ್ಲ. ಕೇವಲ ತಾನು ಭೋಗದವಸ್ತು ಎನ್ನುವಂತೆ, ಭೋಗಿಸಿ ಹೊರಟು ಹೋಗುತ್ತಿದ್ದ. ಒಂದು ದಿನವಾದರೂ ಒಂದು ಪ್ರೀತಿಯ ಮಾತಿಲ್ಲ; ಸರಸ ಸಂಭಾಷಣೆಗಳಿಲ್ಲ. ಅವಳ ನೆನಪಾಗುತ್ತಿದ್ದುದು ರಾತ್ರಿಯಲಿ ಮಾತ್ರ. ಅದೂ ಮಕ್ಕಳೆಲ್ಲ ಮಲಗಿದ ಮೇಲೆ. ಇಂದಿನಿಂದ ಅದೂ ಬೇಡ ವಾಯಿತೇನೋ? ಅವರಿಗೇ ಬೇಡವಾದರೆ, ನನಗೂ ಒಳ್ಳೆಯದೇ... ಹಾಗೆಂದು ಕೊಂಡು ಮಲಗಿ ನಿದ್ರಿಸಲು ಯತ್ನಿಸಿದಳು. ಆದರೆ ನಿದ್ದೆ ಹರಿದೂರ ಹಾರಿ ಹೋಗಿತ್ತು.

ಗಂಡನಿಗೆ ಇನ್ನು ಮುಂದೆ ತನ್ನ ಸಂಗವೂ ಬೇಡವಾಯಿತೆ ಎಂಬ ಸಂಶಯ ವೊಂದು ಕಡೆ, ಮಗಳು ದೊಡ್ಡವಳಾದಳು, ಇನ್ನು ನಮ್ಮೆಲ್ಲರ ಜವಾಬ್ದಾರಿ ಹೆಚ್ಚಿತು ಎಂಬ ಆತಂಕ ಒಂದು ಕಡೆ, ಈ ನೆವದಲ್ಲಿ ಪ್ರಶಾಂತ ನನ್ನಿಂದ ದೂರವಾದನೇನೋ ಎಂಬ ಭೀತಿ... ಈ ಮಕ್ಕಳನ್ನೆಲ್ಲಾ ಬೆಳೆಸಿ, ದೊಡ್ಡವರನ್ನಾಗಿ ಮಾಡಿ, ಒಂದು ನೆಲೆ ಸೇರಿಸುವವರೆಗೆ ತನಗೆ ಸುಖ ನಿದ್ದೆ ಇಲ್ಲ, ಎಂದುಕೊಂಡು ಹೊರಳಾಡಿದಳು.

* * *

ಈಗ ಮನೆಯಲ್ಲಿ ಇಬ್ಬರು ಬೆಳೆದ ಮಕ್ಕಳು. ಮಕ್ಕಳಿಗೆ ಓದು, ವ್ಯಾಸಂಗದ ವಿಷಯದ ಜತೆಗೆ, ಮನೆಯ ಆಗುಹೋಗುಗಳ ಬಗ್ಗೆಯೂ ಅರಿವಿದೆ. ಮನೆಯಲ್ಲಿ ಅಪ್ಪನದೇ ಸರ್ವಾಧಿಕಾರ, ಅಮ್ಮನ ಮಾತಿಗೆ ಬೆಲೆಯೇ ಇಲ್ಲ ಎನ್ನುವುದು ತಿಳಿದಿದೆ. ಅಮ್ಮನ ಬಗ್ಗೆ ಅಯ್ಯೋ ಅಂತೆನ್ನಿಸುತ್ತದೆ. ಅಪ್ಪನ ನೇರ ಮಾತು, ಕುಟುಕು ಮಾತು ಪ್ರಶಾಂತನನ್ನು ರೊಚ್ಚಿಗೆಬ್ಬಿಸುತ್ತದೆ. ವಿದ್ಯಾಳಿಗೆ ಭಯವಾಗುತ್ತದೆ. ತಾಯಿಗೆ ತಮ್ಮ ಕೈಲಾದ ಸಹಾಯವನ್ನು ಮಾಡಬೇಕೆಂದು ಇಬ್ಬರೂ ಬಯಸುತ್ತಾರೆ.

ಸಂತೋಷ ಓದಿನಲ್ಲಿ ಜಾಣ. ಅವನದು ಯಾವ ತಕರಾರೂ ಇಲ್ಲ. ಕ್ಲಾಸಿನಲ್ಲಿ ಅವನೇ ಫಸ್ಟ್. ಅವನ ಬಗ್ಗೆ ಭಟ್ಟನಿಗೆ ಹೆಮ್ಮೆ. ಚಿನ್ಮಯಿಗೆ ನೃತ್ಯ ಕಲಿಯಬೇಕೆಂಬ ಆಸೆ. ಆದರೆ ಇದಕ್ಕೆ ಭಟ್ಟನ ಒಪ್ಪಿಗೆ ಇಲ್ಲ. ನೃತ್ಯ ಕಲಿತು, ಏನು ಮಾಡಬೇಕಾಗಿದೆ? ಅದರಿಂದ ಹೆಣ್ಣುಮಕ್ಕಳಿಗೆ ಏನು ಉಪಯೋಗ ಎನ್ನುವ ಧೋರಣೆ. ಅಪ್ಪನ ಮೇಲೆ ಅವಳಿಗೆ ಕೋಪ. ತಾಯಿ ಅಸಹಾಯಕಳು ಎಂದು ತಿಳಿದಿದ್ದರೂ ತಾಯಿಯ ಮೇಲೆ ಅಸಮಾಧಾನ.

ನಳಿನಿ ಇನ್ನೂ ಚಿಕ್ಕವಳು. ಅವಳಿಗೆ ಸ್ಕೂಲಿಗೆ ಹೋಗಿ ಬರುವುದು, ಹೋಮ್ ವರ್ಕ ಮಾಡುವುದು ಇಷ್ಟೇ ಗೊತ್ತು. ಅವಳ ಹಿಂದೆಯೇ ಕೇವಲ ಒಂದು ವರ್ಷದ ಅಂತರದಲ್ಲಿ ಹುಟ್ಟಿದವನು ಶ್ರೀಕರ. ಅವನು ಬೆರಳು ಚೀಪುತ್ತಾ ಈಗಲೂ ಅಮ್ಮನ ತೊಡೆಯ ಮೇಲೆ ಮಲಗುತ್ತಿದ್ದ. ಎಲ್ಲರಿಗಿಂತ ಚಿಕ್ಕವನಾದುದರಿಂದ, ತಾಯಿಗೂ ಸ್ವಲ್ಪ ಮುದ್ದು. ಪ್ರಶಾಂತ ಒಮ್ಮೊಮ್ಮೆ ರೇಗುತ್ತಿದ್ದ. –

"ಏಳೋ ಸಾಕು. ಚಿಕ್ಕ ಮಗು ತರಹ ಆಡ್ಬೇಡ. ಎದ್ದು ಹೋಮ್ ವರ್ಕ ಮಾಡು." ಅಂತ. ಹೆಬ್ಬೆರಳು ಚೀಪುವ ಆನಂದದಲ್ಲಿ ಮುಳುಗಿರುತ್ತಿದ್ದುದರಿಂದ ಮಾತನಾಡುವ ಗೋಜಿಗೇ ಹೋಗುತ್ತಿರಲಿಲ್ಲ. ಹ್ಞೂಂ... ಹೂಂ ಎಂದು ಅಲ್ಲೇ ಸಾವರಿಸಿಕೊಂಡು ನಿದ್ದೆ ಹೋಗುತ್ತಿದ್ದ. ಎಷ್ಟೋ ಸಾರಿ, ಅವನ ಹೋಮ್ ವರ್ಕನ್ನು ನಳಿನಿ ಮಾಡಿಕೊಡಬೇಕಾಗುತ್ತಿತ್ತು. ಈ ವಿಷಯದಲ್ಲಿ ಅಕ್ಕತಮ್ಮನಿಗೆ ಜಗಳ. ಅವರಿಬ್ಬರ ಜಗಳ, ಹೊರಗೆ ತನ್ನ ಆಫೀಸ್ನಲ್ಲಿ ಕುಳಿತಿದ್ದ ಭಟ್ಟನಿಗೆ ಕೇಳಿಸಿತೆಂದರೆ, ಅನಂತರ, ಕಕ್ಷಿದಾರರು ಹೋದ ಮೇಲೆ ಬಂದು, ಎಲ್ಲರಿಗೂ ಎರಡೆರಡು ಏಟು ಹಾಕುತ್ತಿದ್ದ. ಅಳುವ ಮಕ್ಕಳನ್ನು ಸಮಾಧಾನಗೊಳಿಸುವ ಕೆಲಸವೂ ಪ್ರೇಮಳ ಪಾಲಿಗೆ ಬೀಳುತ್ತಿತ್ತು. ಹಾಗಾಗಿ, ಅವಳು ಸದಾ ಮಕ್ಕಳಿಗೆ, "ಅಪ್ಪ ಬೈತಾರೆ; ಅಪ್ಪ ಹೊಡೀತಾರೆ." ಎಂಬ ಬೆದರಿಕೆಯನ್ನೇ ಹಾಕುತ್ತಿದ್ದಳು.

* * *

ಅಧ್ಯಾಯ–ನಾಲ್ಕು

ಮನೆ ಬಿಟ್ಟು ಹೋದ ಮಗ

ಹತ್ತನೆಯ ತರಗತಿಯ ಪಬ್ಲಿಕ್ ಪರೀಕ್ಷೆಯಲ್ಲಿ ಫಸ್ಟ್ ಕ್ಲಾಸ್ ಪಾಸಾಗಿ, ಪ್ರಶಾಂತ ಪಿ.ಯು.ಸಿ. ತರಗತಿಗೆ ಸೇರಿದ. ಅಪ್ಪನ ಶಹಬ್ಬಾಸ್ ಗಿರಿಯನ್ನು ಅವನು ನಿರೀಕ್ಷಿಸಿರಲಿಲ್ಲವಾದರೂ, ಅಪ್ಪ ಏನನ್ನೂ ಹೇಳಲಿಲ್ಲವೆಂದು ಪೆಚ್ಚಾಗಿತ್ತು. ತಾಯಿ ಮಾತ್ರ ಮಗನ ಬೆನ್ನು ತಡವಿ ತನ್ನ ಸಂತೋಷವನ್ನು ವ್ಯಕ್ತಗೊಳಿಸಿದ್ದಳು.

ಈಗ ವಿದ್ಯಾಳಿಗೆ ಸ್ಕೂಲಿಗೆ ಹೋಗಿಬರುವುದು ಬೇಸರವೆನಿಸುತ್ತಿತ್ತು. ಮನೆಯಲ್ಲಿ ಅಮ್ಮ ಒಂಟಿ. ಅವಳ ಜತೆ ಮನೆಯಲ್ಲೇ ಇರಬೇಕೆನಿಸುತ್ತಿತ್ತು. ಆದರೆ ಅದಕ್ಕೆ ಆಸ್ಪದವಿರಲಿಲ್ಲ. ತಾಯಿಗೂ ಅದು ಇಷ್ಟವಿಲ್ಲ.

"ಈ ಕಾಲದಲ್ಲಿ ಹೆಣ್ಣು ಮಕ್ಕಳು ತುಂಬಾ ಓದಿ, ಕೆಲಸಕ್ಕೆ ಸೇರಿ, ಸಂಪಾದಿಸಿ, ತಮ್ಮ ಕಾಲ ಮೇಲೆ ತಾವು ನಿಲ್ಲುತ್ತಾರೆ. ನನ್ನ ತರಹ ಯಾವ ಸ್ವಾತಂತ್ರ್ಯವೂ ಇಲ್ಲದ ಜೀವನ ನಿಮ್ಮಗಳಿಗೆ ಬೇಡ. ಓದುವ ಕಾಲದಲ್ಲಿ ಚೆನ್ನಾಗಿ ಓದಿ ಬಿಡಬೇಕು."

ಇದು ತಾಯಿಯ ಉಪದೇಶ.

ಹಾಗಾದರೆ ಈ ಅಮ್ಮನಿಗೆ, ತನಗೆ ಮದುವೆ ಮಾಡುವ ಆಸೆ ಇಲ್ಲವೆ? ಅಂತಲೂ ಒಮ್ಮೊಮ್ಮೆ ಅನ್ನಿಸುತ್ತಿತ್ತು. ಆದರೆ ತನಗಿನ್ನೂ ಮದುವೆಯ ವಯಸ್ಸಲ್ಲ. ಈಗಲಿಂದ ಆ ಯೋಚನೆ ಯಾಕೆ? ಎಂದು ತನಗೆ ತಾನೇ ಹೇಳಿಕೊಳ್ಳುತ್ತಿದ್ದಳು.

* * *

ಪ್ರೇಮಳ ತಂಗಿ ಭವಾನಿ. ಅವಳು ಇವಳಿಗಿಂತ ಐದು ವರ್ಷಕ್ಕೆ ಚಿಕ್ಕವಳು. ಅವಳ ಪತಿ ರಾಜ್ಯ ಸರಕಾರದ ಇಲಾಖೆಯೊಂದರಲ್ಲಿ ಉನ್ನತ ಪದವಿಯಲ್ಲಿ ಕೆಲಸ ದಲ್ಲಿದ್ದರು. ಆ ದಂಪತಿಗೆ ಮೂವರು ಮಕ್ಕಳು. ಮೂವರೂ ಗಂಡು ಮಕ್ಕಳೇ. ಭವಾನಿಗೆ ತನಗೆ ಹೆಣ್ಣು ಮಕ್ಕಳಿಲ್ಲ ಎಂಬ ಚಿಂತೆ. ಅವಳಿಗೆ ಅಕ್ಕನ ಈ ಹೆಣ್ಣು ಮಕಳು ಮೇಲೆ ಏನೋ ಪ್ರೀತಿ. ಊರಿಗೆ ಬಂದಾಗಲೆಲ್ಲಾ ಏನಾದರೊಂದು ವಸ್ತುವನ್ನು ತಂದುಕೊಡುತ್ತಿದ್ದಳು. ಇದು ಭಟ್ಟನಿಗೆ ಹಿಡಿಸುತ್ತಿರಲಿಲ್ಲ.

"ನಿನ್ನ ತಂಗಿಗೆ ಹೇಳು, ಏನೇನನ್ನೋ ತಂದು ಕೊಡಬೇಡಾಂತ. ತಾನು ತಂದು ಕೊಡೋದು, ನಾವು ಕೊಡಲಿಲ್ಲ ಅಂತ ಆಡಿಕೊಳ್ಳೋದು, ಇದೆಲ್ಲಾ ಯಾಕೆ? ಏನೂ. ಬೇಡವೇ ಬೇಡ."

"ಏನೋ ಹೆಣ್ಣು ಮಕ್ಕಳನ್ನು ಕಂಡ್ರೆ ಇಷ್ಟ. ಬಳೆ, ರಿಬ್ಬನ್, ಇಂಥದ್ದನ್ನ ತಾನೇ ತಂದು ಕೊಡ್ತಾಳೆ. ಬೇಡಾಂದ್ರೆ ಬೇಸರ ಪಟ್ಕೋತಾಳೆ."

"ಸರಿ ಸರಿ, ನಿನ್ನ ತಂಗಿಗೆ ಬೇಸರ ಆಗುತ್ತೆ ಅಂತ, ಅವಳು ಕೊಟ್ಟದ್ದನ್ನೆಲ್ಲ ಯಾಕೆ ಇಸ್ಕೋಬೇಕು? ಸುಮ್ನೇ ಮನೇಲಿ ಕಸ ಅಷ್ಟೇ. ಈ ಸಾರಿ ಅವಳು ಬಂದಾಗ ನಾನೇ ಹೇಳಿ ಬಿಡ್ತೀನಿ." ಪ್ರೇಮ ಸುಮ್ಮನಾದಳು.

* * *

ಈಚೆಗೆ ಕಾಮಾಕ್ಷಿ ಮುಂಚಿನಂತೆ ಪದೇ ಪದೇ ಬರುತ್ತಿರಲಿಲ್ಲ. ಅವಳ ಮನೆಯ ತಾಪತ್ರಯವೇ ಅವಳಿಗೆ. ಆದರೂ ಪ್ರೇಮಕ್ಕನೊಡನೆ ಯೋಗಕ್ಷೇಮವನ್ನು ವಿಚಾರಿಸಲು ಆಗಾಗ ಬರುತ್ತಿದ್ದಳು. ಮಕ್ಕಳೂ ದೊಡ್ಡವರಾಗಿ ಸ್ಕೂಲಿಗೆ ಹೊರಟು ಹೋಗಿರುತ್ತಿದ್ದುದರಿಂದ, ಪ್ರೇಮಕ್ಕಳಿಗೆ ಸ್ವಲ್ಪ ಬಿಡುವು. ಆದರೂ ಅವಳು ಹರಟೆ ಹೊಡೆಯಲು ಅವರಿವರ ಮನೆಗೆ ಹೋಗುವಂತಿಲ್ಲ. ಇವಳು ಹೋಗದೇ ಇದ್ದುದ ರಿಂದ ಬೇರೆಯವರೂ ಬರುತ್ತಿರಲಿಲ್ಲ. ಅಕ್ಕಪಕ್ಕದವರು, ಅರಸಿನ ಕುಂಕುಮಕ್ಕೆ ಕರೆದಾಗಲೂ ಹೋಗಲು ಮುಜುಗರವೆನಿಸುತ್ತಿತ್ತು. ತಮ್ಮ ಮನೆಯಲ್ಲಿ ಯಾವ ಹಬ್ಬವನ್ನೂ ಆಚರಿಸುವುದಿಲ್ಲ. ಇದುವರೆಗೆ ಒಬ್ಬ ಮುತ್ತೈದೆಯನ್ನೂ ಕರೆದು ಒಂದು ಎಲೆ, ಅಡಿಕೆ ಕೊಟ್ಟಿಲ್ಲ. ಅವರುಗಳು ತನ್ನ ಬಗ್ಗೆ ಏನೆಂದುಕೊಂಡಿರ ಬಹುದು? ಆ ಅನಿಸಿಕೆಯೇ ಅವಳ ಮನಸ್ಸನ್ನು ಮುದುಡಿಸುತ್ತಿತ್ತು. ಒಮ್ಮೊಮ್ಮೆ ತನ್ನ ಮನದ ಅಳಲನ್ನು ಮಗಳ ಮುಂದೆ ಹೇಳಿಕೊಳ್ಳುತ್ತಿದ್ದಳು –

"ನಿಮ್ಮಪ್ಪನ್ನ ನಾನಂತೂ ಒಂದಿಂಚೂ ಬದಲಾಯಿಸುಕ್ಕೆ ಆಗಲಿಲ್ಲ. ನನ್ನ ಆಸೆ, ಆಕಾಂಕ್ಷೆಗಳೆಲ್ಲಾ ಸುಟ್ಟು ಹೋದವು... ನಿಮ್ಮಗಳದ್ದೇ ಚಿಂತೆ ನನಗೆ. ನನ್ನ ತರಹದ ಜೀವನ ನಿಮಗೆ ಸಿಗದಿರಲಿ. ಅದೇ ನನ್ನ ಹಾರೈಕೆ."

"ಇಲ್ಲಮ್ಮ, ನಾನು ಮದುವೇನೇ ಆಗುಲ್ಲ. ಹೀಗೇ ನಿನ್ನ ಜತೇನೇ ಇದ್ದು ಬಿಡ್ತೀನಿ."

"ಸದ್ಯ ಸುಮ್ನಿರು, ನನ್ನ ಜತೇನೇ ಇದ್ದರೆ, ಜೀವನದಲ್ಲಿ ಏನು ಸೊಗಸು ಇರುತ್ತೆ? ನಿಮ್ಮ ನಿಮ್ಮ ಸಂಸಾರದಲ್ಲಿ ನೀವುಗಳು ಸುಖವಾಗಿರಿ."

"ಇಲ್ಲ ಕಣಮ್ಮ. ಮದುವೆ ಅಂದ್ರೇ ನನಗೆ ಭಯ. ನನಗೂ ಅಪ್ಪನಂಥ ಗಂಡ ಸಿಕ್ಕಿ ಬಿಟ್ಟರೇ?" ವಿದ್ಯಾ ಆತಂಕವನ್ನು ಪ್ರಕಟಗೊಳಿಸಿದ್ದಳು.

"ಹಾಗೇನೂ ಆಗುಲ್ಲ. ನನ್ನ ಅದೃಷ್ಟ ಚೆನ್ನಾಗಿಲ್ಲಲ್ಲ. ಎಲ್ಲೋ ಹೋದ ಜನ್ಮದಲ್ಲಿ ಯಾವುದೋ ಕಾಡುಹೂಗಳಿಂದ ದೇವರ ಪೂಜೆ ಮಾಡಿರಬೇಕು. ಅದಕ್ಕೆ ಇಂಥ ಕಾಡು ಮನುಷ್ಯನ ಕೈ ಹಿಡಿದೆ... ನಿನ್ನ ಅದೃಷ್ಟ ಚೆನ್ನಾಗಿದೆ. ನಿನಗೆ ಒಳ್ಳೆಯ ಗಂಡನೇ ಸಿಗ್ತಾನೆ."

"ಅದ್ಹೇಗಮ್ಮ ಸಿಗ್ತಾನೆ? ನಾನು ಯಾವ ಹೂವ್ವಿಂದ್ಲೂ, ಯಾವ ದೇವ್ರಿಗೂ

ಪೂಜೇನೇ ಮಾಡಿಲ್ವಲ್ಲ..? ಏನಿದರ ಅರ್ಥ?"

"ನಾನಿದೀನಿ, ನನ್ನ ಅನುಭವ ನನಗೆ ಪಾಠ ಕಲಿಸಿದೆ. ತುಂಬಿದ ಸಂಸಾರಕ್ಕೆ ನಿನ್ನನ್ನ ಕೊಡ್ತೀನಿ. ಆ ಮನೇಲಿ ಪೂಜೆ ಪುನಸ್ಕಾರ, ಉತ್ಸವ, ಉತ್ಸಾಹ ಎಲ್ಲಾ ಇರ್ಬೇಕು. ಅಂಥ ಮನೇನೇ ಹುಡುಕ್ತೀನಿ..." ಮಗಳ ಮೈದಡವಿದಳು. ವಿದ್ಯಾಳ ಮನದಲ್ಲಿ ಹೊಸ ಆಸೆಯ ಬೀಜವನ್ನು ಬಿತ್ತಿದಳು.

* * *

ಆದರೆ ಈ ಮಗಳು ಅಪ್ಪನಿಗೆ ನಿರಾಸೆಯನ್ನುಂಟುಮಾಡಿದಳು. ಹತ್ತನೆಯ ತರಗತಿಯ ಪಬ್ಲಿಕ್ ಪರೀಕ್ಷೆಯಲ್ಲಿ ಸೆಕೆಂಡ್ ಕ್ಲಾಸಿನಲ್ಲಿ ಪಾಸಾಗಿದ್ದಳು. ಅವಳ ಮಾರ್ಕ್ಸ್ ಕಾರ್ಡ ನೋಡಿ ಭಟ್ಟ ಕೂಗಾಡಿದ –

"ನಿನ್ನನ್ನು ನನ್ನ ಮಗಳು ಅಂತ ಹೇಳಿಕೊಳ್ಳೋಕೇ ನಾಚಿಕೆ ಆಗುತ್ತೆ. ನೀನೆಲ್ಲೋ ನಿಮ್ಮಮ್ಮನ್ನೇ ಹೊತ್ತಿರಬೇಕು.... ದಡ್ಡರ ವಂಶ..."

"ಅಪ್ಪಾ, ಹೀಗೆಲ್ಲಾ ಮಾತಾಡ್ಬೇಡಿ. ಅಮ್ಮ ಏನೂ ದಡ್ಡಿಯಲ್ಲ. ಅವಳನ್ನು ದಡ್ಡಿ ಮಾಡಿರೋರು ನೀವು..."

ಭಟ್ಟ ರೋಷದಿಂದ ಮಗಳ ಕೆನ್ನೆಗೆ ಬಾರಿಸಿದ.

"ಎದುರು ಮಾತಾಡ್ತೀಯ? ಯೋಗ್ಯತೆ ನೋಡಿದ್ರೆ ಇಷ್ಟು... ನಿನಗಿಂತ ಚಿಕ್ಕೋರ ಜತೆ ಕೂತ್ಕೊಂಡು ಹರಟೆ ಹೊಡಿದ್ರೆ... ಇದೇ... ಇದೇ... ಪರಿಣಾಮ. ಮನೇಲಿ ಮುಸುರೆ ತೊಳ್ಕೊಂಡು ಬಿದ್ದಿರು. ನಿನಗ್ಯಾಕೆ ಸ್ಕೂಲು? ವಿದ್ಯೆ...?"

ಎಂದೂ ಹೊಡೆಯದ ಅಪ್ಪ ತನ್ನ ಮೇಲೆ ಕೈ ಎತ್ತಿದ್ದು, ಅವಳಿಗೆ ಅವಮಾನ ವಾದಂತಾಗಿತ್ತು. ಕಣ್ಣೀರು ಬಳಬಳನೆ ಸುರಿಯಿತು. ಅಳುತ್ತಾ ತನ್ನ ರೂಮಿಗೆ ಹೋಗಿ ಬಾಗಿಲನ್ನು ಹಾಕಿಕೊಂಡುಬಿಟ್ಟಳು. ಅವಳನ್ನು ಸಮಾಧಾನಗೊಳಿಸಲು ಕಾಮಾಕ್ಷಿ ಬರಬೇಕಾಯಿತು.

"ಕಂದಾ, ಪುಟ್ಟಾ ಬಾಗಿಲ್ತೆರಿ" ಎಂದು ರಮಿಸಿ ಮಾತನಾಡಿ, ಬಾಗಿಲನ್ನು ತೆರೆಸಿದಳು. ಅತ್ತು ಅತ್ತು ಕಣ್ಣುಗಳು ಊದಿಕೊಂಡಿದ್ದವು. ಕೆನ್ನೆಯ ಮೇಲೆ ಬೆರಳ ಗುರುತುಗಳು ಮೂಡಿದ್ದವು.

"ನೀವೇ ಹೇಳಿ ಅತ್ತೆ... ನಾನೇನು ಫೇಲಾಗಿದ್ದೀನಾ? ಪಾಸಾಗಿಲ್ವಾ!"

"ಅವನು ಸಿಡುಕ. ಅವನ ಎದುರ್ಗೆ ಹೋಗ್ಬೇಡ... ಅವನ್ಗೆ ನಿನ್ನನ್ನ ಕಂಡರೆ ಬಹಳ ಅಕ್ಕರೆ. ತಾನಾಗೇ ಮಾತಾಡಿಸ್ಕೊಂಡು ಬರ್ತಾನೆ, ನೋಡ್ತಿರು. ನೀನು ಅವನ ಮುದ್ದಿನ ತಾಯೀ ಅಲ್ವಾ?"

"ಮತ್ತೇಕೆ ಹೊಡೆಯಬೇಕಾಗಿತ್ತು?"

"ನೀನು ಎದುರು ಮಾತಾಡ್ಬಾರ್ದಾಗಿತ್ತು....."

"ಇದೇನು ಅಪ್ಪನ ರಾಜ್ಯಾನಾ! ನನಗೂ ಎಲ್ಲಾ ತಿಳಿಯುತ್ತೆ. ಅಪ್ಪ

ಹೀಗೇ ಆಡ್ತಿದ್ರೆ ನಾನು ಆತ್ಮಹತ್ಯೆ ಮಾಡ್ಕೊಳ್ತೀನಿ ಅಷ್ಟೇ..."

"ಥೂ ಹೀಗೆಲ್ಲಾ ಮಾತಾಡ್ಬಾರ್ದು. ಕಾಲೇಜ್ಗೆ ಸೇರ್ಕೋ... ಡಿಗ್ರಿ ಆಗಲಿ. ಒಂದು ಒಳ್ಳೆಯ ಗಂಡನ್ನು ನೋಡ್ತೀನಿ. ಜುಂ ಅಂತ ನಿನ್ನ ಪಾಡಿಗೆ ನೀನು ಹೊರಟು ಬಿಡಿ. ನೀನೇನು ಸದಾಕಾಲಕ್ಕೂ ಈ ಮನೇಲಿರ್ಬೇಕಾ?"

"ನಾನೂ ಹೊರಟು ಹೋದ್ರೆ ಅಮ್ಮನ ಗತಿ?"

"ನಿಮ್ಮಮ್ಮಗೆ ಏನೂ ಆಗುಲ್ಲ. ಅವಳಿಗೆ ಎಲ್ಲಾ ಅಭ್ಯಾಸವಾಗಿ ಹೋಗಿದೆ. ಪಚ್ಚು ಇದಾನೆ.... ನಿನ್ನ ತಂಗೀರು, ತಮ್ಮಂದಿರು ಎಲ್ಲಾ ಇದಾರೆ. ನಾನಿದೀನಿ..." ವಿದ್ಯಾಳಿಗೆ ಸಮಾಧಾನ ಹೇಳಿ, ಊಟಕ್ಕೆ ಎಬ್ಬಿಸಿದಳು.

"ಕಾಮಾಕ್ಷಿ ನೀವು ಇರೋ ಹೊತ್ಗೆ ಸರಿ ಹೋಯ್ತು. ಒಂದೊಂದು ದಿನವೂ ಒಂದೊಂದು ತರಹ ಭಯಾನ ಹುಟ್ಟುತ್ತೆ. ಎಂದೂ ಹೆಣ್ಮಕ್ಕಳ್ಮೇಲೆ ಕೈ ಎತ್ತಿರ್ಲಿಲ್ಲ. ಅದ್ಯಾಕೆ ಹೊಡದ್ರೋ?"

ಅವನ್ಗೆ ತಾಯೀನ ಕಂಡ್ರೆ ಇಷ್ಟ. ಅವಳು ಎಲ್ರನ್ನು ಮೀರ್ಸಿ ಇರ್ಬೇಕು ಅಂತ ಅವನ ಆಸೆ. ಆ ಆಸೆಗೆ ಕಲ್ಲು ಬಿತ್ತು ಅಲ್ವಾ!"

"ಹಾಗಂತ ಎಲ್ರೂ ಒಂದೇ ತರ ಇರೋಕಾಗುತ್ತಾ? ಬೆಳೆದ ಹುಡ್ಗೀ ಮೇಲೆ ಕೈ ಮಾಡೋದಾ? ನಾಚಿಕೆಗೇಡು. ನಮ್ಮಪ್ಪ ಒಂದು ದಿನವೂ ನಮ್ಗೆ ಒಂದೇಟು ಹಾಕ್ದೋರಲ್ಲ... ಹಾಗೂ ಇವ್ರು ಹೇಳೋ ಹಾಗೆ ನಾನು ದಡ್ಡೀನೇ. ಬರೀ ಪಾಸಾಗ್ತಿದ್ದೆ ಅಷ್ಟೇ."

"ಅದು ಆ ಕಾಲ, ಇದು ಈ ಕಾಲ. ನನ್ನ ಮಕ್ಳೂ ಇವೆ. ನಲುವತ್ತರ ಮೇಲೆ ಒಂದು ಮಾರ್ಕೂ ತೆಗೆಯೋಲ್ಲ. ಅವರಪ್ಪ ಬೈತಾನೇ ಇರ್ತಾರೆ.. ಅದೂ ಒಂದು ಥರ ಅಭ್ಯಾಸವಾಗಿ ಹೋಗಿದೆ ನನ್ಗೆ." ಅವಳು ನಕ್ಕಳು. ಇವಳು ನಗಲಿಲ್ಲ.

* * *

ಎರಡನೆಯ ವರ್ಷದ ಪಿ.ಯು.ಸಿ.ಯ ಫಲಿತಾಂಶ ಪ್ರಕಟವಾಗಿತ್ತು. ಪ್ರಶಾಂತ ನಿಗೆ ಎಂಬತ್ತೈದು ಪರ್ಸೆಂಟ್ ಸಿಕ್ಕಿತ್ತು. ಅವನಿಗೆ ಅಷ್ಟೇನೂ ಸಮಾಧಾನವಿರಲಿಲ್ಲ. ಆದರೆ ಭಟ್ಟನಿಗೆ ತಾನೇ ಏನನ್ನೋ ಸಾಧಿಸಿದಷ್ಟು ಖುಶಿ.

ಪ್ರಶಾಂತನ ಬೆನ್ನು ತಟ್ಟಿದ. "ನೀನೀಗ, ನನಗೆ ತಕ್ಕ ಮಗ. ನಿನ್ನ ಪರಿಶ್ರಮಕ್ಕೆ ತಕ್ಕ ಫಲ ಸಿಕ್ಕಿದೆ. ಮುಂದೆ ಇನ್ನೂ ಕಷ್ಟ ಪಡಬೇಕಾಗುತ್ತದೆ. ಇಲ್ಲದಿದ್ರೆ ಏನೂ ಉಪಯೋಗವಿಲ್ಲ."

"ಹೌದಪ್ಪಾ, ನನಗೆ ಇನ್ನೂ ಹೆಚ್ಚು ಮಾರ್ಕ್ಸ್ ಸಿಗಬೇಕಾಗಿತ್ತು. ನನಗೆ ತೃಪ್ತಿಯೇ ಇಲ್ಲ. ಮೆಡಿಕಲ್ ಸೀಟು ಸಿಗುತ್ತೋ ಇಲ್ವೋ ಅಂತ ನನಗೆ ಅದೇ ಚಿಂತೆಯಾಗಿದೆ."

"ಏನು? ಮೆಡಿಕಲ್ಲಾ! ನಿನಗ್ಯಾಕೆ ಮೆಡಿಕಲ್! ಬಿ.ಎಸ್ಸಿಗೋ, ಬಿ.ಎ.ಗೋ

ಸೇರ್ಕೋ. ಮುಂದೆ ಲಾ ಓದಬಹುದು.."

"ಲಾ... ನನಗಿಷ್ಟವಿಲ್ಲ. ನಾನದನ್ನು ಓದುಲ್ಲ." ಪ್ರಶಾಂತ ಕೆಟ್ಟ ಮುಖ ಮಾಡಿದ್ದ.

"ಏನು ಹಾಗಂದ್ರೇ... ನೀನು ಲಾ ಓದ್ಲೇಬೇಕು. ನನ್ನ ಹಾಗೆ ನೀನೂ ಹೆಸರಾಂತ ಅಡ್ವೋಕೇಟ್ ಆಗಬೇಕು."

"ಇಲ್ಲ. ನಾನು ಲಾಯರ್ರಾಗುಲ್ಲ. ಡಾಕ್ಟರಾಗಬೇಕೂಂತ ನನ್ನ ಆಸೆ..."

"ಆಸೆ ಆಗ್ಬಿಟ್ರೆ...? ಡಾಕ್ಟರಾಗೋದು ಅಷ್ಟು ಸುಲಭ ಅಲ್ಲ... ನನ್ನ ಮಾತಿಗೆ ಒಪ್ಪಿ ಲಾ ಓದೋದಾದ್ರೆ ಓದಿಸ್ತೀನಿ. ಇಲ್ಲದಿದ್ರೆ, ನಾನು ನಿನ್ನ ಓದಿಗೆ ಒಂದೂ ಪೈಸೆ ಖರ್ಚು ಮಾಡೋಲ್ಲ." ಪ್ರಶಾಂತನ ಆಸೆಗೆ ಕಲ್ಲೆಸೆದಿದ್ದ. ಪ್ರಶಾಂತ ಸಿಟ್ಟು ಗೊಂಡು ತನ್ನ ರೂಮಿಗೆ ಹೊರಟು ಹೋಗಿದ್ದ. ಈಗ ಪ್ರೇಮ ಮಗನಿಗೆ ಸಮಜಾಯಿಷಿ ಹೇಳಿದ್ದಳು –

"ಯಾವುದೂ ಬೇಡ. ನೀನು ಬಿ.ಎಸ್ಸಿ. ಗೆ ಸೇರ್ಕೋ. ಮೂರು ವರ್ಷ ಕಳೆ ಯುವಷ್ಟರಲ್ಲಿ ನಿಮ್ಮಪ್ಪನ ಮನಸ್ಸು ಬದಲಾಗಬಹುದು. ಆಮೇಲೆ ಎಂ.ಬಿ.ಬಿ.ಎಸ್.ಗೆ ಸೇರ್ಕೋವಂತೆ." ತಂದೆಯ ಮನಸ್ಸು ಬದಲಾಗುವುದು, ಒನಕೆ ಚಿಗುರಿದಂತೆ ಎಂದು ಅವನಿಗೆ ಗೊತ್ತು. ಆದರೂ ತಾಯಿಯ ಮನಸ್ಸಿಗೆ ಬೇಜಾರಾಗಬಾರದೆಂದು, ಒಪ್ಪಿ ಕೊಂಡು ಬಿ.ಎಸ್ಸಿ.ಗೆ ಸೇರಿಕೊಂಡ. ಭಟ್ಟ ಮತ್ತೆ ಮಾತನಾಡಿರಲಿಲ್ಲ. ಮಗ ತನ್ನ ದಾರಿಗೇ ಬಂದನೆಂದುಕೊಂಡ. ಬಿ.ಎಸ್ಸಿ.ಯ ನಂತರ ಎಲ್.ಎಲ್.ಬಿ. ಮಾಡಲಿ ಎಂದುಕೊಂಡು ಸುಮ್ಮನಾಗಿದ್ದ. ಮಕ್ಕಳು ತನಗೆ ಎದುರುಬೀಳುತ್ತಿದ್ದಾರೆ, ಇದಕ್ಕೆಲ್ಲಾ ಪ್ರೇಮಳೆ ಕಾರಣ ಎಂದುಕೊಂಡು ಅವಳ ಮೇಲೆ ಕೂಗಾಡಿದ –

"ಮಕ್ಕಳ್ನ ಅತಿ ಮುದ್ದು ಮಾಡಿ ಬೆಳೆಸ್ತಿದೀಯ. ಅವರುಗಳು ಮುಂದೆ ಹೇಗಿರ್ಬೇಕು ಅನ್ನೋದು ನಿನಗೇನು ಗೊತ್ತು? ಇನ್ಮುಂದೆ ಮಕ್ಕಳಿಗೆ ಸರಿ ಯಾಗಿ ತಿಳುವಳಿಕೆ ಹೇಳೋದಾದ್ರೆ ಹೇಳು. ಇಲ್ಲಿದ್ರೆ ತೆಪ್ಪಗಿರು."

"ಯಾಕೆ ಹೀಗೆಲ್ಲಾ ಮಾತಾಡ್ತೀರಿ? ಮಕ್ಳು ಮುಂದೆ ಚೆನ್ನಾಗಿರ್ಲಿ ಅನ್ನೋ ಆಸೆ ನನಗಿಲ್ವಾ?"

"ಇದೆ ಇದೆ. ನಿನ್ನಾಸೆ ಪ್ರಕಾರ ಬೆಳ್ಸಿದ್ರೆ ಒಬ್ರು ಕೈಗೆ ಸಿಗ್ತಿರ್ಲಿಲ್ಲ. ಸಿಕ್ಕಿದ್ರೆ ಏನಾಗ್ತಿತ್ತು ...?" ತಂದೆ ಹೀಗೆ ತಾಯಿಯನ್ನು ಅಂದಾಗ, ಪ್ರಶಾಂತನಿಗೆ. ಏದ್ಯಾಳಿಗೆ ಹಿಚ್ಚೆನ್ನಿಸಿತ್ತು. ಪ್ರಶಾಂತ ತಾಯಿಯ ಬಳಿ ಬಂದು ನಿಂತ.

"ಇನ್ನೊಂದಿಷ್ಟು ವರ್ಷ ತಡ್ಕೊಂಡ್ಬಿಡು... ನಾನು ಸಂಪಾದಿಸುಕ್ಕೆ ಶುರು ಮಾಡಿದ್ಮೇಲೆ, ಬೇರೆ ಮನೆ ಮಾಡಿ ನಿನ್ನನ್ನು ನನ್ನನೆಗೆ ಕರ್ಕೊಂಡು ಹೋಗ್ತೀನಿ. ಆಗ ಅಪ್ಪಂಗೆ ನಮ್ಮ ಬೆಲೆ ತಿಳಿಯುತ್ತೆ."

"ಹಾಗೆಲ್ಲ ಮಾತಾಡ್ಬೇಡ ಪಚ್ಚೂ, ನಿಮ್ಮಪ್ಪ ಹೇಳೋದು ನಿಮ್ಮ ಒಳ್ಳೇದಕ್ಕೇ

ತಾನೇ? ಅವ್ರು ಹೇಳೋದ್ಸರಿ. ನಂಗೇ ತಿಳುವಳ್ಕೆ ಕಡಿಮೆ."

"ಇಲ್ಲಮ್ಮ... ನೀನು ಜಾಣೆ. ನಿನ್ನ ಜಾಣತನ ಅಪ್ಪನಿಗೆ ಬೇಡ. ಅದಕ್ಕೇ ಹೀಗೆಲ್ಲಾ ಆಡ್ತಾರೆ. ಲಾಯರ್ರಾದ ಮಾತ್ರಕ್ಕೇ ಇವರೇ ಜಾಣರು, ಇವರ ಮಾತೇ ನಡೀಬೇಕು ಅಂತೇನಿಲ್ಲ. ಕ್ರಿಮಿನಲ್ ಕೇಸುಗಳನ್ನು ಗೆದ್ದು ಹೆಸ್ರು ಗಳಿಸಿದ್ಮಾತ್ರಕ್ಕೆ ಇವರು ಒಳ್ಳೇವ್ರಾಗಿ ಬಿಡುಲ್ಲ."

"ಪಚ್ಚೂ... ನಿಮ್ಮಪ್ಪನ ಕಿವಿಗೆ ಬಿದ್ರೆ, ಮತ್ತೆ ಅದೇ ರಂಪ ಆಗುತ್ತೆ. ನನ್ನನ್ನವ್ರು ಏನೂ ಅನ್ಬಾರ್ದು ಅನ್ನೋ ಆಸೆ ನಿಮ್ಗಿದ್ರೆ ಹೆಚ್ಚು ಮಾತಾಡ್ಲೇಬೇಡಿ.. ಹೋಗೇ ತಾಯಿ ಓದ್ಕೋ ಹೋಗು... ನೀನು ಹೊರಗ್ಬಂದ್ರೆ ನಿನ್ಹಿಂದೇನೇ ಅವ್ರುಗಳೂ ಬಂದು ನಿಂತ್ಬಿಡುತ್ವೆ..... ನೋಡು..." ವಿದ್ಯಾ ತಿರುಗಿದಳು. ಅವಳ ಹಿಂದೆ ನಿಂತಿದ್ದ ತಮ್ಮ, ತಂಗಿಯರು ರೂಮಿನೊಳಕ್ಕೆ ಓಡಿದರು.

* * *

ಕಾಮಾಕ್ಷಿ, ತನ್ನ ಮಗ ಫಸ್ಟ್ ಕ್ಲಾಸ್ನಲ್ಲಿ ಪಾಸಾದನೆಂದು ತಿಳಿಸಿ, ತಾನೇ ಮಾಡಿ ತಂದಿದ್ದ ಕಾಯಿ ಮಿಠಾಯಿಯನ್ನು ಎಲ್ಲರಿಗೂ ಕೊಟ್ಟಳು. "ಅದೇನೂ ಎಲ್ರೂ ಯಾಕೆ ಹೀಗೆ ಹರ್ಳೆಣ್ಣೆ ಕುಡ್ದೋರ ಹಂಗಿದೀರಿ? ಏನಾತು?"

"ಏನಿಲ್ಲ ಕಾಮಾಕ್ಷಿ, ದಿನಾ ಇದ್ದದ್ದೇ."

"ಸರಿ, ಇವತ್ತಾದ್ರೂ ಸಿಹಿ ತಿಂದು, ಮನಸ್ನ ಖುಷಿ ಮಾಡ್ಕಳಿ.. ನಾನಿನ್ ಬರ್ತೀನೆ ಹೊತ್ತಾತು..." ಅವಳು ಅವಸರಿಸಿದಳು.

* * *

ಎರಡನೇ ವರ್ಷದ ಬಿ.ಎಸ್ಸಿ. ಪರೀಕ್ಷೆಯಲ್ಲಿ ಪ್ರಶಾಂತ ಎರಡು ವಿಷಯಗಳಲ್ಲಿ ಫೇಲಾಗಿದ್ದ. ತಾನು ಫೇಲಾಗಿದ್ದಕ್ಕೆ ಅವನಿಗೆ ಯಾವ ವ್ಯಥೆಯೂ ಇರಲಿಲ್ಲ. ಆದರೆ ಮಗ ಫೇಲಾಗಿದ್ದಾನೆಂದು [illegible] ತಿಳಿದು, [illegible] ನರಸಿಂಹನಾದ [illegible]

[illegible]

[illegible] ಬಿಡ. ಜವಾಬ್ದಾರಿ ಇಲ್ಲ... ನನ್ನ ಹೆಸ್ರನ್ನ ಮುಂದಕ್ಕೆ [illegible] ಹುಟ್ಟಿಲ್ಲ ನೀನು ... ನೀನು ನನ್ನ ಮಗನೇ ಅಲ್ಲ..."

"ಅಪ್ಪಾ.... ನನಗೂ ಗೌರವವಿದೆ... ನಾನು ಬೈಸ್ಕೊಂಡು ಸುಮ್ನೇ ಇರ್ತೀನಿ. ನಿಮ್ಮ ಮಾತ್ನಿಂದ ಅಮ್ಮಂಗೆ ಕಳಂಕ ಬರುತ್ತೆ. ಹೀಗೆಲ್ಲಾ ಮಾತಾಡ್ಬೇಡಿ..."

"ಮತ್ತಿನ್ನೇನು? ಕೂರಿಸಿ ಮಂಗಳಾರತಿ ಎತ್ಲಾ? ನಾನು ಒಂದು ವರ್ಷವೂ ಫೇಲಾದೋನಲ್ಲ. ನಿಮ್ಗಳ್ಗೆ ಹಣದ ಬೆಲೆ ಗೊತ್ತಿಲ್ಲ. ನಾಲ್ಕು ಕಾಸು ಸಂಪಾದಿಸೋ ಯೋಗ್ಯತೆ ಇಲ್ಲ.... ನನ್ನ ಎದುರಿಗೆ ನಿಂತು ಮಾತಾಡ್ತೀಯ?"

"ಏನ್ ಹೀಗೆಲ್ಲಾ ಬೈತೀರಿ? ನನ್ನ ಡಿಗ್ರಿ ಮುಗೀಲಿ, ಕೆಲ್ಸಕ್ಕೆ ಸೇರಿ ನಿಮ್ಮ

ಎರಡರಷ್ಟು ಸಂಪಾದಿಸ್ತೀನಿ... ನೋಡ್ತಿರಿ."

"ಹೂಂ... ಸಂಪಾದಿಸ್ತೀಯ... ಸಂಪಾದಿಸ್ತೀಯ... ಫೇಲಾಗಿರೋನ್ನ ಕರೆದು ಕೆಲಸ ಕೊಡುತ್ತೆ ಸರಕಾರ... ನಾನು ಬೆವರು ಸುರಿಸಿ ಸಂಪಾದಿಸಿರೋ ಹಣಾನ, ಉಡಾಯಿಸುಕ್ಕೆ ಹುಟ್ಟಿರೋರು ನೀವುಗಳು.. ಸಂಪಾದ್ನೋ ತಾಕತ್ತು ಇಲ್ಲದೋರು.."

"ಏನ್ ನೀವೊಬ್ರೇ ಸಂಪಾದ್ನೆ ಮಾಡ್ತಾ ಇರೋರ್ಹಾಗೆ ಮಾತಾಡ್ತೀರಿ? ಸುಳ್ಳು ಪಳ್ಳು ಸಾಕ್ಷಿ ಹೇಳ್ಸಿ, ಕೇಸ್ ಗೆದ್ದು ಸಂಪಾದಿಸ್ತಿರೋ ಹಣ... ನಿಮ್ಮ ಸಂಪಾದನೆ ಏನೂ ನ್ಯಾಯದ್ದಲ್ಲ..."

"ಏನಂದೆ? ಭಡವಾ ಹಲ್ಲುದುರ್ಸಿ ಬಿಡ್ತೀನಿ.... ಇದನ್ನೇನಾ ನೀನು ಕಾಲೇಜ್ನಲ್ಲಿ ಕಲಿತಿರೋದು. ಇವತ್ನಿಂದ ನಿನ್ನ ಓದು ಬಂದ್..... ಹೋಗು ದನ ಕಾಯ್ಹೋಗು. ಅದಕ್ಕೇ ಲಾಯಕ್ಕು ನೀನು..."

"ಏನ್ ಹೀಗೆಲ್ಲಾ ಆಡಿದ್ರೆ ನಾನು ಸುಮ್ಮನಿರೋಲ್ಲ. ನಾನೂ ನಿಮ್ಮ ಮಗ... ನಿಮ್ಮ ಆಸ್ತೀಲಿ ನನಗೂ ಹಕ್ಕಿದೆ. ನನಗೂ ಪಾಲು ಕೊಡಿ... ನಾನು ದನನಾದ್ರೂ ಮೇಯಿಸ್ತೀನಿ, ಎಮ್ಮೆನಾದ್ರೂ ಸಾಕ್ತೀನಿ ನಿಮಗೇನು?"

"ಓ... ಹೋ ಹೋ... ಆಸ್ತೀಲಿ ಪಾಲು ಬೇಕಾ ನಿಂಗೆ? ಒಂದ್ಕಾಸು ಕೊಡುಲ್ಲ ನಿಂಗೆ. ಇದೆಲ್ಲ ನನ್ನ ಸ್ವಂತ ಸಂಪಾದನೆ... ಒಂದು ಬಿಡಿಗಾಸೂ ಸಿಗುಲ್ಲ ನಿಂಗೆ...."

"ಅದ್ಹೇಗೆ ಕೊಡುಲ್ವೋ ನಾನೂ ನೋಡ್ತೀನಿ. ನನಗೂ ಲಾ ಗೊತ್ತಿದೆ. ನಿಮ್ಮ ಮೇಲೆ ದಾವೆ ಹಾಕ್ತೀನಿ..."

"ಹೂಂ. ಹಾಕು ಹಾಕು.... ಒಂದ್ಮಾತು ತಿಳ್ಕೋ.... ಇಂದಿನಿಂದ ನೀನು ನನ್ನ ಮಗನಲ್ಲ. ನಾನು ನಿನ್ನ ತಂದೆಯಲ್ಲ... ಇನ್ನೊಂದ್ಗಳ್ಗೆ ನೀನು ಈ ಮನೇಲಿರ್ಕೂಡ್ದು ಹೊರಟ್ಹೋಗ್ತಿರು."

"ಹೋಗ್ತೀನಿ. ನನ್ಗೂ ಇಲ್ಲಿರ್ಬೇಕೆಂಬ ಆಸೆ ಏನೂ ಇಲ್ಲ. ಅಮ್ಮನ ಕಷ್ಟ ನೋಡ್ಲಾರ್ದೆ ಇಲ್ಲಿದ್ದೆ.... ಅಮ್ಮನನ್ನು ನನ್ಜೊತೆ ಕರ್ಕೊಂಡು ಹೋಗ್ತೀನಿ."

"ಅವ್ಳು ನಿನ್ಜೊತೆ ಬರುಲ್ಲ. ಅವ್ಳು ನನ್ಹೆಂಡ್ತಿ..."

"ಹೆಂಡ್ತೀನ ಎಷ್ಟು ಚೆನ್ನಾಗಿ ನೋಡ್ಕೊಂಡಿದೀರೀಂತ ನನ್ಗೂ ಗೊತ್ತು. ನೀವು ಅವಳ ಗಂಡನಾಗೋಕೆ ಲಾಯಕ್ಕೇ ಇಲ್ಲದ ಮನುಷ್ಯ..." ಭಟ್ಟ ಕೋಪದಿಂದ ನಡುಗಿದ. ಬಾಗಿಲ ಮೂಲೆಯಲ್ಲಿದ್ದ ವಾಕಿಂಗ್ ಸ್ಟಿಕ್ ತೆಗೆದುಕೊಂಡು ಮಗನನ್ನು ಚೆನ್ನಾಗಿ ಥಳಿಸಿದ. ಬಿಡಿಸಲು ಬಂದ ಪ್ರೇಮಳಿಗೂ ನಾಲ್ಕಾರು ಪೆಟ್ಟುಗಳು ಬಿದ್ದವು.

"ಹೊಡೀರಿ ಹೊಡೀರಿ.. ನಿಮ್ಮ ಮಗನಾಗಿ ಹುಟ್ಟಿದ ತಪ್ಪಿಗೆ, ಶಿಕ್ಷೆಯನ್ನು ಅನುಭವಿಸ್ತೀನಿ... ನನ್ನಲ್ಲೂ ರೋಷ ಇದೆ... ಆದರೆ ಅಮ್ಮನಿಗೋಸ್ಕರ ಇದನ್ನೆಲ್ಲ ಸಹಿಸ್ಕೊಳ್ತಿದೀನಿ... ಅಮ್ಮ ಏಳಮ್ಮ. ಇನ್ನು ಈ ಮನೇಲಿ ಒಂದ್ಗಳ್ಗೆ ಕೂಡ ಇರೋದ್ಬೇಡ...."

"ಸಮಾಧಾನ ಮಾಡ್ಕೊಳ್ಳೋ.... ಕೋಪದಲ್ಲಿ ಏನೇನೋ ಆಡ್ಬೇಡಾ... ಇವ್ರು ನಿನ್ನಪ್ಪ. ಅವ್ರಿಗೆ ನಿನ್ನನ್ನು ಬೈಯುವ, ಹೊಡೆಯುವ ಹಕ್ಕು ಇದೆ.."

"ಇಲ್ಲಮ್ಮ ಈ ಹಕ್ಕು ಇವ್ರಿಗಿಲ್ಲ. ನ್ಯಾಯ ಅನ್ಯಾಯದ ಬಗ್ಗೆ ಏನೂ ಗೊತ್ತಿಲ್ಲ. ಲಾಯರ್ರಂತೆ ಲಾಯರ್ರು.. ತಮ್ಮ ದಾರಿಗೇ ನನ್ನನ್ನೂ ಎಳ್ಕೋಕೆ ನೋಡಿದ್ರು, ನಾನೊಪ್ಪಿಲ್ಲ ಅಂತ ಕೋಪ. ಅದಕ್ಕೇ ಹೀಗೆಲ್ಲಾ ಆಡ್ತಾರೆ. ಎಂದಾದ್ರೂ ಪ್ರೀತಿ, ವಿಶ್ವಾಸದಿಂದ ನನ್ನನ್ಮಾತಾಡಿಸಿದ್ದಾರಾ? ಹುಟ್ಟಿಸಿದ್ಮೇಲೆ ಪ್ರೀತಿ, ವಿಶ್ವಾಸವೇ ಇಲ್ಲದ್ಮೇಲೆ ಇವರೆಂಥ ತಂದೆ? ನಾನೇನು ಇವರ್ಮಗನಾಗಿ ಹುಟ್ತೀನಿ ಅಂತ ಕೇಳ್ಕೊಂಡಿದ್ನಾ?"

"ಪಚ್ಚೂ..." ಈಗ ಪ್ರೇಮಳೂ ಅವನ ಕೆನ್ನೆಗೆ ಹೊಡೆದಳು. "ಸಾಕು ನಿಲ್ಸು, ಇದೆಲ್ಲಾ ಚಿಕ್ಕೋರು ಆಡೋ ಮಾತಾ?"

"ನಾನೇನೂ ಚಿಕ್ಕೋನಲ್ಲ. ಚಿಕ್ಕೋನಾಗಿರುಕ್ಕೆ ಇವ್ರೆಲ್ಲಿ ಬಿಟ್ರು? ವಯಸ್ಸಿಗೆ ಮೊದ್ಲೇ ನಿನ್ನನ್ನ ಮುದ್ಕಿ ಮಾಡಿದ್ರು... ಮಕ್ಕಳಂತೆ ಇರುಕ್ಕೆ ನಮ್ಮನ್ನು ಬಿಡ್ಲೇ ಇಲ್ಲ. ನೀನ್ಯಾಕೆ ಇವರ ಪರ ವಹಿಸ್ಕೊಂಡು ಮಾತಾಡ್ತೀಯ? ನಿನಗೆ ಇನ್ನು ಇವರ ಸಹವಾಸ ಬೇಕೂಂತನ್ನಿಸುತ್ತಾ? ನೀನ್ಬೇಕಾದ್ರೆ ಇಲ್ಲೇ ಇರು. ನಾನ್ಮಾತ್ರ ಇರುಲ್ಲ...." ಬಾಗಿಲ ಕಡೆ ಹೆಜ್ಜೆ ಇಟ್ಟವನನ್ನು ತಡೆದಳು.

"ಹೋಗ್ಬೇಡೋ ಪಚ್ಚು. ಮನೆ ಬಿಟ್ಟು ಹೋಗ್ಬೇಡ್ವೋ...."

"ಅಣ್ಣಾ ಹೋಗ್ಬೇಡಣ್ಣಾ..." ವಿದ್ಯಾ ಬಂದು ಅವನ ಕೈ ಹಿಡಿದಳು.

"ಇಲ್ಲ ವಿದ್ಯಾ. ನಾನು ಈಗ ಹೋಗ್ದೇ ಇದ್ರೆ.... ಜೀವಮಾನವೆಲ್ಲಾ ನಿಮ್ಮಪ್ಪನ ಗುಲಾಮನಾಗಿರಬೇಕಾಗುತ್ತೆ. ನೀನಾದ್ರೆ ಹುಡ್ಗಿ. ಒಂದಲ್ಲ ಒಂದಿನ ಮದ್ವೆಯಾಗಿ ಗಂಡನ್ಮನೆಗೆ ಹೊರ್ಟು ಹೋಗ್ತೀಯ... ಈ ಅವಮಾನಗಳನ್ನೆಲ್ಲ ಸಹಿಸ್ಕೊಂಡು ನಾನಿಲ್ಲಿರುಲ್ಲ."

"ನೀನು ಹೊರ್ಟು ಹೋದ್ರೆ ಅಮ್ಮ ಸತ್ಹೋಗ್ತಾಳೆ ಅಷ್ಟೇ..." ಸಂತೋಷ ನುಡಿದ.

"ನೀನೂ ಅವಳ್ಗೆ ಮಗ ತಾನೇ..... ನೀನು ನೋಡ್ಕೋ.... ನಾನು ಒಂದು ಕೆಲಸ ಹುಡ್ಕಿ ಒಂದ್ಮನೆ ಮಾಡಿ ಅಮ್ಮನ ಕರ್ಕೊಂಡು ಹೋಗ್ತೀನಿ. ನಿಮ್ಗೆ ಯಾರ್ಗಾದ್ರೂ ಬರೋಕೆ ಇಷ್ಟವಿದ್ರೆ ನೀವ್ಗಳೂ ಬರಬಹುದು..." ಪ್ರಶಾಂತ ಹಿಂತಿರುಗಿ ನೋಡದೆ ಹೊಸ್ತಿಲನ್ನು ದಾಟಿ ರಸ್ತೆಗಿಳಿದ. ಎಲ್ಲರೂ ಅಳುತ್ತಿದ್ದರು.

ರೂಮಿನಲ್ಲಿ ಶತಪಥ ತಿರುಗುತ್ತಿದ್ದ ಭಟ್ಟ ಬಂದು ಅಬ್ಬರಿಸಿದ –

"ಯಾಕೆ ಅಳ್ತೀರಿ! ಎಲ್ಹೋಗ್ತಾನೆ! ಹೊಟ್ಟೆಗೆ ಹಿಟ್ಟು ಬೇಕಾದಾಗ, ಬಂದೇ ಬರ್ತಾನೆ." ಅಪ್ಪನ ಗದರಿಕೆಗೆ ಹೆದರಿ, ಉಳಿದವರು ಅಳುವುದನ್ನು ನಿಲ್ಲಿಸಿದರು.

ಅವನು ವಾಪಸ್ಸು ಬರುವುದಿಲ್ಲವೆಂದು ಪ್ರೇಮಳಿಗೆ ಮನವರಿಕೆಯಾಗಿತ್ತು. ಎಷ್ಟಾಗಲೀ ಅವನು ಈ ಅಪ್ಪನ ಮಗ. ಅದೇ ಹಠ, ಅದೇ ಛಲ, ಅದೇ ಕೋಪ.

ಅವ್ನು ಹೇಳೋದು ಸರಿ. ಹುಟ್ಸಿಬಿಟ್ರೆ ಆಯ್ತೇ? ಪ್ರೀತಿ, ವಿಶ್ವಾಸ ಬೇಡ್ವೇ? ಈ ದಿನಕ್ಕಾಗಿ ಅವ್ನೂ ಕಾಯ್ತಾ ಇದ್ನೋ ಏನೋ... ಚೆನ್ನಾಗಿ ದಬಾಯಿಸಿದ. ಇನ್ನಾದರೂ ಈ ಮನುಷ್ಯಂಗೆ ಬುದ್ಧಿ ಬರ್ಬೇಕು. ಗಂಡು ಹುಡುಗ, ಎಲ್ಲಾದರೂ ಇರಬಲ್ಲ... ಕಷ್ಟಪಟ್ಟು ಅವನ ಕಾಲ ಮೇಲೆ ಅವನು ನಿಲ್ಲಲಿ. ಮತ್ತೆ ಈ ಮನೆಗೆ ಬಂದು, ಈ ಮನುಷ್ಯನ ಹಂಗಿನಲ್ಲಿ ಮಾತ್ರ ನನ್ನ ಮಗ ಬಾಳುವುದು ಬೇಡ.... ಅವಳು ಹಾರೈಸಿದ್ದಳು. ಆ ಕ್ಷಣದಲ್ಲಿ ಅನ್ನಿಸಿದ್ದು ಹಾಗೇ. ಆದರೂ ಮನೆಯ ವಾತಾವರಣ ಮಂಕಾಗಿತ್ತು. ವಿದ್ಯಾ ಮನಸ್ಸಿಗೆ ವಿಪರೀತ ಹಚ್ಚಿಕೊಂಡಳು. ಹಿರಿಯ ಮಗನಾಗಿ, ಪ್ರಶಾಂತನೇ ಹೀಗೆ ಮನೆ ಬಿಟ್ಟು ಹೋಗಬಾರದಾಗಿತ್ತು ಅಂತ ಒಮ್ಮೆ ಅನ್ನಿಸಿದರೆ, ಮರುಗಳಿಗೆಯೇ ಅಪ್ಪ ಅವನನ್ನು ಹೊಡೆದದ್ದು ಕಣ್ಣ ಮುಂದೆ ಬಂದು ನಿಲ್ಲುತ್ತಿತ್ತು. 'ಅಪ್ಪ ಇಷ್ಟು ಕ್ರೂರಿ ಅಂತ ನನಗೆ ಗೊತ್ತಿರಲಿಲ್ಲ. ಪಾಪ, ಪ್ರಶಾಂತಣ್ಣಂಗೆ ಎಷ್ಟು ನೋವಾಗಿರಬಹುದು? ಹೀಗೇ ಅಪ್ಪ ಒಂದಲ್ಲ ಒಂದು ದಿನ ನಮ್ಮಗಳನ್ನು ಹೊಡೆಯಬಹುದು... ಅಪ್ಪ ಕಟ್ಟವರು... ಮಕ್ಕಳ ಮೇಲೆ ಪ್ರೀತಿ ಇಲ್ಲ' ಒಳಗೊಳಗೇ ಅಪ್ಪನನ್ನು ದ್ವೇಷಿಸ ತೊಡಗಿದಳು.

ಎರಡನೆಯ ವರ್ಷದ ಪಿ.ಯು.ಸಿ. ಪರೀಕ್ಷೆಯಲ್ಲಿ ಪಾಸಾಗಿದ್ದಳು. ಆದರೂ ಮುಂದೆ ಓದಬೇಕೆಂಬ ಹಂಬಲ ಹೊರಟುಹೋಯಿತು. ಕಾಮಾಕ್ಷಿ ಮನೆಗೆ ಬಂದಾಗ, ಅವಳೊಡನೆ ಎಲ್ಲವನ್ನು ಹೇಳಿಕೊಂಡು ಅತ್ತಳು. ಕಾಮಾಕ್ಷಿಗೂ ಕೆಡುಕೆನ್ನಿಸಿತ್ತು. 'ಈ ಭಟ್ಟ ನಿಜಕ್ಕೂ ರಾಕ್ಷಸ. ಮಕ್ಕಳನ್ನು ಹೊಡೆಯೋದು ಅಂದ್ರೇನು? ಅದೂ ತನಗಿಂತ ಎತ್ತರಕ್ಕೆ ಬೆಳೆದು ನಿಂತ ಮಗನ ಮೇಲೆ ಕೈ ಎತ್ತೋದಾ? ಇದು ಅಪರಾಧ ಅಲ್ವಾ! ಇವನೆಂಥ ಲಾಯರ್ರು... ಪ್ರಶಾಂತ ಸರಿ ಕೆಲ್ಸ ಮಾಡ್ದ' ಅಂತ ಒಂದು ಸಾರಿ ಅನ್ನಿಸಿದರೆ, ಪ್ರೇಮಳ ಬಗ್ಗೆ ಮರುಕ ಉಕ್ಕುತ್ತಿತ್ತು.

"ಹಿರಿ ಮಗನನ್ನು ಅತಿ ಮುಚ್ಚಟೆಯಿಂದ ಸಾಕಿದ್ದಳು. ಮಗ ಮನೆ ಬಿಟ್ಟು ಹೋದ ಅನ್ನೋ ಆಘಾತನ ಸಹಿಸ್ಕೊಳ್ಳಕ್ಕೆ ಆಗುತ್ತಾ? [illegible] ಈ ಮಕ್ಕಳ ಗತಿಯೇನು?"

"ತಾಯೀ, [illegible] ಸುಖವಿಲ್ಲ. ಆದ್ರೆ ನಂಗ ಒಂದೇ [illegible] ಕ್ಷೇಮವಾಗಿದೆ ಸಾಕು. [illegible] ನಾದ್ರೂ ಅಪಾಯ [illegible]"

"ಅತ್ತೇ ಹಂಗೆಲ್ಲಾ ಹೇಳ್ಬೇಡಿ. ನಂಗೆ ಭಯ ಆಗುತ್ತೆ"

"ಹುಚ್ಚು ಹುಡ್ಗಿ. ನಮ್ಮ ಪಚ್ಚು ಅಂಥೋನಲ್ಲ. ಧೈರ್ಯವಂತ...ಅಲ್ದೇ ಅಮ್ಮನ ಬಗ್ಗೆ ಅಪ್ಪುಗೂ ಕಾಳಜಿ ಇದೆ...ಅಪ್ಪನ ಮೀರಿಸಿ ಇರಬೇಕೆಂಬ ಛಲ ಇದೆ. ದೇವ್ರು ಅವ್ನನ್ನ ಕಾಪಾಡ್ತಾನೆ."

* * *

ಅಧ್ಯಾಯ–ಐದು

ಮಗಳ ಪ್ರೇಮ ಪ್ರಕರಣ

ವಿದ್ಯಾ ಬಿ.ಎ.ಗೆ ಸೇರಿಕೊಂಡಿದ್ದಳು. ಅವಳಿಗೆ ಓದಿನಲ್ಲಿ ಆಸಕ್ತಿ ಈ ಮುಂಚಿಗಿಂತ ಕಡಿಮೆ ಆಗಿತ್ತು. ಅಪ್ಪನಿಗೆ ತಿಳಿಯದಂತೆ ಲೈಬ್ರರಿಯಿಂದ ಕಥೆ ಪುಸ್ತಕಗಳನ್ನು ತಂದು ಓದುತ್ತಿದ್ದಳು. ಆಗೀಗ ಕಾಮಾಕ್ಷಿ ಅತ್ತೆಯ ಮನೆಗೆ ಹೋಗಿ, ಕಿಶೋರನೊಡನೆ ಹರಟೆ ಹೊಡೆಯುತ್ತಿದ್ದಳು.

"ನಿಮ್ಮಪ್ಪ ಬೈತಾನೆ ಕಣೇ ತಾಯೀ... ನೀನು ನಮ್ಮನೀಗೆ ಬರ್ಬೇಡ... ನಾನೇ ಬರ್ತಾ ಇರ್ತೀನಲ್ಲ." ಕಾಮಾಕ್ಷಿ ನುಡಿಯುತ್ತಿದ್ದಳು.

"ನಾನು ಕಿಶೋರನ ಹತ್ರ ಮಾತಾಡ್ಬೇಕೂಂತ ಬಂದಿದೀನಿ ಅತ್ತೆ...."

"ಅವನ್ಹತ್ರಾನಾ! ಏನ್ಮಾತು?"

"ಈಗ ಮನೇಲಿ ಅಣ್ಣನೂ ಇಲ್ಲ. ಏನೋ ಬೇಜಾರು..."

"ನಿಮ್ಮಪ್ಪಗೆ ಗೊತ್ತಾದ್ರೆ, ನಮ್ಮೆಲ್ರ ಜನ್ಮಾನ ಜಾಲಾಡಿ ಬಿಡ್ತಾನೆ ಅಷ್ಟೇ..."

"ನೀವ್ಯಾಕೆ ಹೆದರ್ಬೇಕು...?"

"ನಂಗೇನ್ಹೆದ್ರಿಕೆ ಇಲ್ಲ ಬಿಡು... ನಿಮ್ಮಗಳ್ಗೋಸ್ಕರ್ವೇ ನಾನು ಹೇಳ್ತಿರೋದು. ಅವ್ನು ನಿಮ್ಮನ್ನೆಲ್ಲಾ ಬೈದ್ರೇ...?"

"ಅಪ್ಪಂಗ್ಹೇಗೆ ಗೊತ್ತಾಗುತ್ತೆ? ನೀವ್ಹೇಳ್ಬೇಕು. ಇಲ್ಲಾ ಕಿಶೋರ ಹೇಳ್ಬೇಕು... ನಾನಂತೂ ಅಪ್ಪನ್ಹತ್ರ ಮಾತಾಡೋದ್ನೇ ಬಿಟ್ಬಿಟ್ಟಿದ್ದೀನಿ."

"ಅಂತೂ ನಿಮ್ಮಪ್ಪ ಎಲ್ರನ್ನೂ ದೂರ ಮಾಡ್ಕತ್ತಿದಾನೆ ಈಗೇನೋ ಕಕ್ಕಿದಾರು ಒಂದೆ - ಮುಂದೆ ಸುತ್ತಾಡ್ತಾರೆ. ವಯಸ್ಸಾದ ಕಾಲಕ್ಕೆ ಈ ಭಟ್ಟ ಏನಾಡ್ತಾನೋ....?"

"ಅತ್ತೆ ನಾ ಬರ್ಲಾ?" ವಿದ್ಯಾ ಹೊರಟು ಹೋಗಿದ್ದಳು. ಕಾಮಾಕ್ಷಿ ಮಗನ ಕಡೆ ತಿರುಗಿದಳು.

"ನೀ ಈ ಹುಡ್ಗೀಯಿಂದ ದೂರ ಇರು ಕಿಶೋರ. ಅವರಪ್ಪ ಸಿಡಿಮದ್ದು ಇದ್ದಂಗೆ. ಎಂದು ಸಿಡಿತಾನೋ? ಕಿಡಿ ತಗಲೋದು ನಿನಗೇ..."

"ನಾನೇನ್ಕರೆದಿದ್ನಾ ಅವಳ್ನ? ಅವ್ಳೇ ಬಂದ್ಳು.."

"ಬಡವಾ ನೀ ಮಡಗ್ದ್ಹಾಂಗಿರು ಅಂತ ಮಾತೇ ಇದೆ. ನಮಗ್ಯಾಕೆ ಬೇಕು ಶ್ರೀಮಂತರ ಸಹ್ವಾಸ..."

"ನೀ ಮತ್ಯಾಕೆ ಹೋಗ್ತೀಯೇ? ಭಟ್ಟರು ನಿನ್ನ ಹಳೇ ದೋಸ್ತ್ ಹೌದೋ ಅಲ್ವೋ?"

"ಹಾಕ್ತಿನ್ನೋಡು. ಅಮ್ಮನ್ಹತ್ರ ಹಿಂಗೆಲ್ಲಾ ಮಾತಾಡ್ತಾರಾ?"

"ನಿಜ ತಾನೇ ಹೇಳಿದ್ದು... ಭಟ್ಟರನ್ನ ಮದ್ವೆಯಾಗಿದ್ರೆ ನಾವೂ ಹಾಂಗೆ ಬಂಗ್ಲೇಲಿರ್‍ಬಹುದಾಗಿತ್ತು. ಕಾರ್‍ನಲ್ಲಿ ಓಡಾಡ್ಬೋದಾಗಿತ್ತು ಅಂತ ನೀನೇ ತಾನೇ ಹೇಳಿದ್ದು."

"ಅವ್ನ ಬಂಗ್ಲೆಯೂ ಬ್ಯಾಡ, ಅವ್ನ ಕಾರೂ ಬ್ಯಾಡ.... ಗಂಜಿ ಉಂಡ್ರೂ ಚಿಂತಿಲ್ಲ. ನಾನು ಹಾಯಾಗಿದೀನಿ. ಪ್ರೇಮಕ್ಕ ಕಣ್ಣೀರಲ್ಲಿ ಕೈ ತೊಳ್ಯೋದನ್ನ ನಾ ನೋಡ್ಲಾರೆ...ಕಟುಕನಾಗ್ಹೋಗಿದಾನೆ ಭಟ್ಟ..."

"ಭಟ್ಟನ ಈ ಮಗಳು, ಅದೇ ನಮ್ತಾಯೀ ಕರುಣಾಮಯಿ ಅಂತ ನೀನೇ ಹೇಳ್ತೀ. ವಿದ್ಯಾ ಒಳ್ಳೇ ಹುಡ್ಗೀ ಅಂತ."

"ಅವ್ಳು ಒಳ್ಯೋಳಾದ್ರೇನು? ಕೆಟ್ಟೋಳಾದ್ರೇನು? ನಮಗೇನಾಗ್ಬೇಕಾಗಿದೆ?"

"ಅಮ್ಮಾ... ನಾನು ಅವಳ್ನೇ ಮದ್ವೆಯಾಗ್ತೀನಿ. ಅವ್ಳೂ ಒಪ್ಕೊಂಡಿದಾಳೆ..."

"ಏನಂದೆ? ಇನ್ನೊಂದ್ಸಾರಿ ಹೇಳು..."

"ನಾವಿಬ್ರೂ ಒಬ್ಬರೊನ್ನೊಬ್ರು ಪ್ರೀತಿಸ್ತಿದೀವಿ... ಮದ್ವೆಯಾಗ್ತೀವಿ." ಬೀದಿ ಎಂಬುದನ್ನು ಮರೆತು ಕಾಮಾಕ್ಷಿ ಮಗನ ಕೆನ್ನೆಗೆ ಹೊಡೆದಳು. ಅವನು ಕೆನ್ನೆಯನ್ನು ಸವರಿಕೊಂಡ. ತಾಯಿಯ ಕಡೆ ಕೆಂಗಣ್ಣಿನಿಂದ ನೋಡಿದ.

"ನೋಡಿದ್ಯಾ, ಭಟ್ಟನ ಮಗಳ ಸಹವಾಸ ಮಾಡಿದ್ರೆ ಏನ್ಗತಿ ಅಂತ... ಮರೆತ್ಬಿಡು ಅವಳನ್ನ ಭಟ್ಟ ಈ ಮದ್ವೆಗೆ ಒಪ್ಪಲ್ಲ."

"ಯಾಕೆ ಒಪ್ಪಲ್ಲ! ನಾನು ಮಾವನ್ನೇ ಕೇಳ್ತೀನಿ."

"ಸ್ವಂತ ಮಗನ್ಗೇ ಕೋಲು ತಗೊಂಡು ಬಾರಿಸಿದಾನೆ. ನಿನ್ನ ಮೇಲೆ ಗುಂಡನ್ನೇ ಹಾರಿಸ್ತಾನೆ ಜೋಕೆ!"

"ನಾನು ಭಟ್ಟರ ಮಗಳನ್ನೇ ಹಾರಿಸ್ಕೊಂಡು ಹೋಗ್ತೀನಿ. ಆಗೇನು ಮಾಡ್ತಾರೆ ನಿನ್ನ ಭಟ್ಟ?"

"ಪೋಲೀಸರನ್ನ ಛೂ ಬಿಡ್ತಾನೆ. ಜೈಲಿಗೆ ಹಾಕಿಸ್ತಾನೆ. ಈ ರಗಳೆಯೆಲ್ಲಾ ಯಾಕೆ? ನಿಂಗಿನ್ನೂ ಮದ್ವೆ ವಯಸ್ಸಿಲ್ಲ ತೆಪ್ಗಿರು. ಆ ವಯಸ್ಗೆ ಬಂದಾಗ, ವಿದ್ಯಗಿಂತ ಚೆನ್ನಾಗಿರೋ ಹುಡ್ಗೀನ ನಾನೇ ನೋಡ್ತೀನಿ."

ಮಗ ತಮಾಷೆಯಾಗಿ ಮಾತನಾಡುತ್ತಿರಬಹುದೆಂದು ಭಾವಿಸಿದರೂ ಏನೋ ಆತಂಕ ಕಾಡಿತ್ತು. ಇದುವರೆಗೂ ಭಟ್ಟ ಎಂದೂ ತನ್ನ ಮೇಲೆ ಹರಿಹಾಯ್ದಿಲ್ಲ. ಅದಕ್ಕೆ ಅವಕಾಶ ಕೊಡಬಾರದು. ಇಲ್ಲಿಗೇ ಈ ವಿಷಯಕ್ಕೆ ಮುಕ್ತಾಯ ಹಾಕಿಬಿಡಬೇಕೆಂದು ಕೊಂಡಳು. ಆ ಸಮಯಕ್ಕಾಗಿ ದಿನಗಳನ್ನು ಕಳೆದಳು.

* * *

"ಪ್ರೇಮಕ್ಕ, ನಿನ್ಮಗಳ್ಗೆ ಬೇಗ ಮದುವೆ ಮಾಡಿ ಬಿಡುವಾ... ಮದ್ವೆಗಾದ್ರೂ ಪ್ರಶಾಂತ ಮನೆಗೆ ಬಂದಾನು. ಏನಂತೀರಿ!"

"ಮಗ್ಳನ್ನ ನಾನೇ ಹೆತ್ತಿರೋಳಾದ್ರೂ, ನಂಗೆ ಯಾವ ಸ್ವಾತಂತ್ರವೂ ಇಲ್ಲ ಕಾಮಾಕ್ಷಿ. ಮದ್ವೆ ಸುದ್ದಿ ಎತ್ತೋಕೇ ಭಯವಾಗುತ್ತೆ."

"ನಾನು ಭಟ್ಟನ ಹತ್ರ ಮಾತಾಡ್ತೀನಿ... ಅವನ್ಗೆ ಒಪ್ಗೆ ಇದ್ರೆ, ನಾವು ಗಂಡುಗಳ್ನ ನೋಡೋಣಂತೆ." ಸಮಯ ಕಾದು ಭಟ್ಟನೊಡನೆ ಮಾತು ತೆಗೆದಳು

"ತಾಯೀಗೆ ಮದ್ವೆ ಮಾಡುಲ್ವೇನೋ ಭಟ್ಟ, ಅವಳ ಹಿಂದೆ ಇನ್ನೂ ಇಬ್ರ ಹೆಣ್ ಮಕ್ಳಿದಾರೆ ನಿನ್ಗೆ."

"ಗೊತ್ತು. ನನ್ಮಕ್ಕಳ ಲೆಕ್ಕಾನ ನನಗೆ ಹೇಳ್ಬ್ಯಾಡ ನೀನು."

"ಸರಿ ಹಾಗಾದ್ರೆ ಯಾವಾಗ ಮದ್ವೆ ಮಾಡ್ಬೇಕೂಂತ ಇದೀಯ....?"

"ಅವಳ ಓದು ಮುಗೀಲಿ. ಮೊದ್ಲು ಬಿ.ಎ. ಮಾಡ್ಲೀ.... ಈಗಿನ್ನೂ ಚಿಕ್ಕೋಳು."

"ಬಿ.ಎ. ಆದ್ಮೇಲೆ ಅದಕ್ ತಕ್ಕಂಥ ಗಂಡನ್ನೇ ಹುಡುಕ್ಬೇಕಾಗುತ್ತೆ."

" ಹುಡುಕಿದ್ರಾತು. ಅವ್ಸರವೇನು?"

"ನಿಂಗ್ಯಾವ್ದಕ್ಕೂ ಅವ್ಸರವಿಲ್ಲ. ಹುಡ್ಗೀರ್ಗೇ ಅವ್ಸರ. ಭಾಳ ಬೇಗ್ಬೇಗ ಬೆಳೆದ್ಬಿಡ್ತಾರೆ.... ನಿಮ್ಮ ಪುಸ್ಸೀನೇ ದೊಡ್ಡದಾಗುಕ್ಕೆ ಬಂದಿದೆ ತಿಳ್ಕ...."

"ನೀನ್ಯಾಕೆ ಇದ್ನೆಲ್ಲ ಆಡ್ತಿದೀ ಈಗ? ಹೊತ್ತು ಹೋಗ್ತಿಲ್ಲೇನು ನಿನಗೆ?"

"ನಿಮ್ಮ ತಾಯೀನ ಕಾಲೇಜ್ಗೆ ಹೊರ್ಟಾಗ ನೋಡ್ದೆ. .. ನಿಂಗೊಂದ್ಮಾತು ತಿಳ್ಸೋಣ ಅಂತನ್ನಿಸ್ತು. ಪಾಪ ಪ್ರೇಮಕ್ಕ ಏನೂ ಆಡುಲ್ಲ."

"ಯಾಕಾಡುಲ್ಲ! ಅವಳು ಹೆತ್ತ ತಾಯೀ. ಅವಳ್ಗಿಲ್ವಾ ಜವಾಬ್ದಾರಿ..."

"ಜವಾಬ್ದಾರಿ ಇದೆ. ಆದ್ರೆ ಸ್ವಾತಂತ್ರ್ಯ ಇಲ್ವಲ್ಲಾ..."

"ಹಾಗಾದ್ರೆ ಅವಳೇ ನಿನ್ನ ಛೂ ಬಿಟ್ಟಿದಾಳೆ ಅನ್ನು."

"ಛೇ ಛೇ, ಪ್ರೇಮಕ್ಕಗೆ ಏನೂ ಗೊತ್ತಿಲ್ಲ. ನಾನೊಂದ್ಮಾತ್ನ ಆಕೆ ಕಿವಿ ಮೇಲೂ ಹಾಕ್ತೀನಿ. ನಿನಗೇ ಮೊದ್ಲು ತಿಳಿಸ್ದೆ."

"ಸರಿ. ಮಾತು ಮುಗಿದಿದ್ರೆ ಹೋಗು. ನಂಗೆ ಸ್ವಲ್ಪ ಕೆಲ್ಸ ಇದೆ...."

"ಹೊರಟೆ, ಹೆಣ್ಮಕ್ಳನ್ನ ಶಾನೇ ವರ್ಷ ಮನೇಲಿಟ್ಕೋಬಾರ್ದು. ಸ್ವಲ್ಪ ಮನೆ ಕಡೇನೂ ಗಮ್ನ ಕೊಡು... ಈ ಕಕ್ಷಿದಾರ್ರ ಕೆಲ್ಸ ಇದ್ದದ್ದೇ..."

"ನೀನು ಹೋಗ್ತೀಯಾ?" ಅವಳು ಅತ್ತ ಹೋದ ಮೇಲೆ, ಅವನಿಗೆ ತನ್ನ ಕೆಲಸದ ಮೇಲೆ ಗಮನವಿರಲಿಲ್ಲ. ಇದ್ದಕ್ಕಿದ್ದಂತೆ ಕಾಮಾಕ್ಷಿ ಬಂದು, ಈ ವಿಷಯವನ್ನು ತನಗೆ ಹೇಳಬೇಕಾದ್ರೆ, ಏನೋ ಗಹನವಾದ ವಿಷಯವಿರಬೇಕೆಂದುಕೊಂಡ. ಈ ನಡುವೆ ತನ್ನ ಸ್ವಂತ ಮಗಳು, ತನ್ನೊಡನೆ ಮುಂಚಿನಂತೆ ಮಾತನಾಡುತ್ತಿಲ್ಲವೆನ್ನುವುದನ್ನು ಗಮನಿಸಿದ್ದ. ಪ್ರಶಾಂತ ಮನೆ ಬಿಟ್ಟು ಹೋದುದು, ನನ್ನದೇ ತಪ್ಪು ಎನ್ನುವಂತೆ

ಎಲ್ಲರೂ ತನ್ನನ್ನು ದೂರ ಮಾಡಿದ್ದಾರೆ... ಅವನು ಮನೆ ಬಿಟ್ಟು ಹೋಗಲಿ ಅಂತ ತಾನೇನೂ ಬಯಸಿರಲಿಲ್ಲ. ನನ್ನ ಇಷ್ಟಕ್ಕೆ ಅವನು ನಡೆಯಲಿಲ್ಲ. ಅಲ್ಲದೇ ಎದುರು ವಾದಿಸಿ ಮಾತಾಡಿದ... ಅವನಿಗೆ ಬುದ್ಧಿ ಬರಲಿ ಅಂತ ನಾಲ್ಕೇಟು ಹೊಡೆದೆ. ಹೋದ್ರೆ ಎಲ್ಲಿಗೆ ಹೋಗ್ತಾನೆ? ನಾಲ್ಕು ದಿನ ಕಳೆದ್ರೆ ವಾಪಸ್ಸು ಬರ್ತಾನೆ ಅಂತ ಅಂದ್ಕೊಂಡೆ. ಬರಲಿಲ್ಲ. ಈಗ ಎಲ್ಲಿದಾನೋ ಅದೂ ಗೊತ್ತಿಲ್ಲ. ಅಮ್ಮ ಮಕ್ಕಳೆಲ್ಲಾ ಒಂದು. ಪ್ರೇಮಳಿಗೆ ತಿಳಿದಿದ್ರೂ ತಿಳಿದಿರಬಹುದು. ನಾನು ಕೇಳಿಲ್ಲ. ಅವಳು ಹೇಳಿಲ್ಲ. ನಾನಾಗಿಯೇ ನಾನಂತೂ ಕೇಳುವುದಿಲ್ಲ. ಬೇಕಾದ್ರೆ ಅವಳಾಗಿಯೇ ಹೇಳಲಿ. ಈಗ ಈ ತಾಯಿಯ ಮದ್ವೆಯ ಮಾತೇಕೆ ಬಂತು? ಹಾಗಾದ್ರೆ ನಿಜಕ್ಕೂ ತಾಯಿ, ಮದ್ವೆ ವಯಸ್ಸಿಗೆ ಬಂದಿದಾಳೆಯೇ! ಅಥವಾ ಇವಳೂ ಏನಾದ್ರೂ ಮನೆ ಬಿಟ್ಟು ಹೋಗುವ ಉಪಾಯ ಮಾಡಿರಬಹುದೇ... ಈ ಅನಿಸಿಕೆಯೇ ಅವನಲ್ಲಿ ಕೋಪವನ್ನು ಬರಿಸಿತು. ಈ ಕ್ಷಣದಲ್ಲಿ ಕರೆದು ಕೇಳಿ ಬಿಡುವ ಎಂದುಕೊಂಡ. ಆದರೆ ಮರುಗಳಿಗೆಯಲ್ಲೇ ತನಗೆ ತಾನೇ ಎಚ್ಚರ ಹೇಳಿಕೊಂಡ.

ಹಾಗೇನೂ ಇರಲಾರದು. ಹೆಣ್ಣು ಹುಡುಗಿಗೆ ಅಂಥ ಧೈರ್ಯ ಎಲ್ಲಿಂದ ಬಂದೀತು! ಆದರೂ ತಾನೊಂದು ಕಣ್ಣನ್ನು ಅವಳ ಚಲನವಲನದ ಮೇಲಿಟ್ಟಿರಬೇಕು. ಕಾಲೇಜಿನ ಸ್ನೇಹಿತರುಗಳ ಜತೆ ಎಲ್ಲಿಯಾದರೂ ತಿರುಗಾಡುತ್ತಾಳೆಯೇ? ಯಾರ ದ್ದಾದರೂ ಸ್ನೇಹವಿದೆಯೇ ತಿಳಿದುಕೊಳ್ಳಬೇಕೆಂದು ಎನಿಸಿತು. ತತ್ ಕ್ಷಣವೇ ಕಾರ್ಯ ಪ್ರವೃತನಾದ. ಅವಳಿಗೆ ತಿಳಿಯದಂತೆ, ಅವಳ ಚಲನವಲನಗಳ ಮೇಲೆ ಕಣ್ಣಿಡಲು ಒಬ್ಬ ಪತ್ತೇದಾರಿ ವ್ಯಕ್ತಿಯನ್ನು ಗೊತ್ತು ಮಾಡಿದ.

ಕೆಲವೇ ದಿನಗಳಲ್ಲಿ ಆ ವ್ಯಕ್ತಿ ತಾನು ಸಂಗ್ರಹಿಸಿದ್ದ ವಿಷಯಗಳನ್ನು ಭಟ್ಟ ನಿಗೆ ಕೊಟ್ಟ. ಅದರ ಪ್ರಕಾರ, ಕಿಶೋರ ಎಂಬ ಹುಡುಗನೊಡನೆ ಅವಳಿಗೆ ಸ್ನೇಹವಿದೆ ಎಂದು ತಿಳಿಯಿತು. ಆ ಕಿಶೋರ ಬೇರೆ ಯಾರೂ ಅಲ್ಲ ಕಾಮಾಕ್ಷಿಯ ಮಗ ಎಂದು ತಿಳಿದಾಗ ಅವುಡುಗಚ್ಚಿದ. ಕಿವಿಗಳು ಬಿಸಿಯಾಗಿದ್ದವು. ಕಾಮಾಕ್ಷಿ ಆಡಿದ್ದ ಮಾತುಗಳು ನೆನಪಾದವು. ಹಾಗಾದ್ರೆ ಅವಳಿಗೆ ಈ ವಿಷಯ ತಿಳಿದಿದೆ... ನಾನು ಒಪ್ಪಿದರೆ, ನಮ್ಮೊಡನೆ ಸಂಬಂಧವನ್ನು ಬೆಳೆಸುವ ಇಚ್ಛೆ ಅವಳಿಗಿದೆ ಎಂದುಕೊಂಡ. ಆದರೆ, ಈ ಸಂಬಂಧಕ್ಕೆ ನಾನಂತೂ ಒಪ್ಪಲ್ಲ. ಕಿಶೋರ ನನ್ನ ಮಗಳಿಗೆ ತಕ್ಕ ವರನಲ್ಲ. ಕಾಮಾಕ್ಷಿಯನ್ನು ನಾನು ಮೊದಲಿನಿಂದ ಬಲ್ಲೆ... ಆದ್ರೂ...

ಕಾಮಾಕ್ಷಿಯನ್ನು ಕರೆಸಿದ. ತನ್ನ ಎದುರಿಗೆ ಕೂರಿಸ್ಕೊಂಡ. ನೇರವಾಗಿ ಕೇಳಿದ. "ಕಿಶೋರಂಗೆ ಎಷ್ಟು ವರ್ಷ?"

"ಇಪ್ಪತ್ಮೂರು.... ಯಾಕೆ?"

"ಅವನಿಗೆ ಮದ್ವೆ ವಯಸ್ಸೇನಲ್ಲ... ಇನ್ನೂ ಚಿಕ್ಕೋನು..."

"ಹೌದು... ಅವನಿನ್ನೂ ಚಿಕ್ಕವನು..."

"ಮತ್ಯಾಕೆ ನಿನಗೆ ಇಂಥ ಆಸೆ?"

"ಆಸೆ? ಎಂಥಾ ಆಸೆ ಮಾರಾಯಾ?" ಕಣ್ಣುಗಳನ್ನು ಕುಣಿಸಿದಳು.

"ನಾಟ್ಕ ಆಡ್ಬೇಡ ನಿಜ ಹೇಳು.. ಕಿಶೋರಂಗೆ ವಿದ್ಯಾಳನ್ನು ಮದುವೆ ಮಾಡಿ ಕೊಡ್ಲಿ ಅನ್ನೋ ಆಸೆ ನಿನಗಿದೆ ಅಲ್ವಾ?"

"ಹಾಗಂತ ನಿನಗ್ಯಾರು ಹೇಳಿದ್ರು?"

"ನಾನೇ ಪತ್ತೆ ಹಚ್ಚಿದೆ. ನಿಜ ತಾನೇ....?"

"ಇಲ್ಲ, ನಿನ್ನ ಮಾತು ಸುಳ್ಳು. ನನಗೆ ಆ ಆಸೆ ಇಲ್ಲ. ಆ ಆಸೆ ಇರೋದು ನಿನ್ನ ಮಗಳಿಗೆ. ನಾನು ನನ್ನ ಮಗನಿಗೆ ತಿಳುವಳಿಕೆ ಹೇಳ್ತೀನಿ. ನಿನಗೆ ಧೈರ್ಯವಿದ್ದರೆ ನಿನ್ಮಗಳ್ಗೆ ತಿಳುವಳ್ಕೆ ಹೇಳಿ, ನಾಲ್ಕು ಏಟು ಕೊಡು.... ಆದ್ರೆ, ನನ್ಮೇಲೆ ಮಾತ್ರ ತಪ್ಪು ಹೊರಿಸ್ಬೇಡ."

"ಅವತ್ತೇ ನೀನ್ಯಾಕೆ ಈ ವಿಷಯಾನ ನನಗೆ ಹೇಳ್ಲಿಲ್ಲ?" ಗುರುಗುಟ್ಟಿದ.

"ನಾನು ಹೇಳಿದ್ರೆ ನೀನು ನಂಬ್ತಿದ್ಯಾ? ಅದಕ್ಕೇ ಬೇರೆ ಥರ ಮಾತಾಡ್ದೇ. ನಿನ್ಮಗಳ್ಗೆ ಮದ್ವೆ ಮಾಡು ಅಂತ ಹೇಳ್ದೆ.. ನನ್ಮಾತು ನಿಂಗೆ ರುಚಿಸ್ಲಿಲ್ಲ."

"ದಿಢೀರ್ ಅಂತ ಹೇಗೆ ಮದ್ವೆ ಮಾಡೋಕಾಗುತ್ತೆ? ಅವ್ಳ ಓದು ಮುಗಿದಿಲ್ವಲ್ಲಾ...?"

"ನಿನ್ನ ಮಗಳ್ಗೆ ಓದು ಬೇಕಾಗಿಲ್ಲ. ನಿನ್ಮನೆಯಿಂದ ಹೊರ್ಗೆ ಹೋದ್ರೆ ಸಾಕು ಅಂತ ಕಾಯ್ತಿದಾಳೆ... ಅವ್ಳು ಕಿಶೋರನ್ನಲ್ಲ, ಕಿಶೋರನ ಅಪ್ಪನ್ನ ಬೇಕಾದ್ರೂ ಮದ್ವೆಯಾಗೋಕೆ ಸಿದ್ಧವಾಗಿದಾಳೆ."

"ಸಾಕು, ಹುಚ್ಚುಚ್ಚಾಗಿ ಮಾತಾಡ್ಬೇಡ. ನೀವೆಲ್ಲಾ ಸೇರಿ, ನನ್ನ ಮಕ್ಕಳನ್ನು ನನ್ನಿಂದ ದೂರ ಮಾಡ್ತಿದೀರಿ. ನನ್ನನ್ನು ಕೆಟ್ಟವನನ್ನಾಗಿ ಮಾಡ್ತಿದೀರಿ..."

"ನಾವ್ಯಾಕೆ ಏನಾದ್ರೂ ಮಾಡೋಣ. ನಿನ್ನ ಮಕ್ಕಳು ಚಿಕ್ಕೋರೇನಲ್ಲ. ಪ್ರಶಾಂತ ಗಂಡು ಹುಡುಗ. ಧೈರ್ಯದಿಂದ ಮನೆಬಿಟ್ಟು ಹೋದ. ನಿನ್ನ ಮಗಳು ಈ ದಾರಿ ತುಳಿತಿದಾಳೆ. ನಿನ್ನ ಮನೆಬಿಟ್ಟು ನನ್ನ ಮನೆಗೆ ಬಂದು ಸೇರಿಕೊಂಡರೆ, ನಾನು ಆಚೆ ತಳ್ಳೋಕ್ಕಾಗುಲ್ಲ. ನಾನು ಸೇರಿಸಿಕೊಳ್ಳದಿದ್ದರೆ, ಆ ಹುಡುಗಿ ತನ್ನ ಜೀವಕ್ಕೆ ಏನಾದ್ರೂ ಅಪಾಯ ಮಾಡಿಕೊಳ್ಳೋದು ಖಂಡಿತ. ಈಗಲೂ ಕಾಲ ಮಿಂಚಿಲ್ಲ. ಏನೂ ಅನಾಹುತ ನಡೆದಿಲ್ಲ. ನಿನ್ನ ಮಗಳಿಗೆ ಎಚ್ಚರಿಕೆ ಹೇಳ್ತೀಯೋ, ಬೆದರಿಕೆ ಹಾಕ್ತೀಯೋ, ಸಿಗಿದು ತೋರಣ ಕಟ್ತೀಯೋ ಅದು ನಿನಗೆ ಸೇರಿದ್ದು.... ಆ ಹುಡುಗಿಗೆ ಇನ್ನೂ ತಿಳುವಳಿಕೆ ಸಾಲದು... ಉಪಾಯವಾಗಿ ಏನಾದರೂ ಹೇಳು."

"ಏನಿದೆ ಉಪಾಯ...? ಯಾಕೆ ಹೀಗ್ಮಾಡ್ತೋವೇ ಈ ಮಕ್ಳು..."

"ತಲೆ ಚಚಿಕೊಂಡ್ರೆ ಏನ್ಬಂತು? ಏನಾದ್ರೂ ಹಗರಣವಾದರೆ, ಅಪವಾದ

ಬರುವುದು ನಿನ್ನ ಮಗಳ ತಲೆಯ ಮೇಲೆ. ಅದು ನನಗೂ ಇಷ್ಟವಿಲ್ಲ."

"ಹಾಗಾದ್ರೆ ನೀನೇ ಏನಾದ್ರೂ ಉಪಾಯ ಹೇಳು."

"ಇದೊಳ್ಳೆ ಫಜೀತಿ ಬಂತಲ್ಲಪ್ಪಾ... ಒಂದ್ಕಾಲ್ದಲ್ಲಿ ನೀನೇ ನನ್ನನ್ನು ಮದ್ವೆಯಾಗೋಕೆ ಬಯಸಿದ್ದೆ. ಹೌದೋ ಅಲ್ವೋ.... ಈಗ ನಿನ್ಮಗ್ಳು, ನನ್ಮಗನ್ನ ಮೆಚ್ಚಿಕೊಂಡಿದಾಳೆ. ಆಗ಼್ೂ ನಾನು ಒಲ್ಲೆ ಅಂದೆ. ಈಗ್ಲೂ ನನಗೆ ಈ ಸಂಬಂಧ ಬೇಡ..."

"ಈ ಹಳೇ ಪುರಾಣವೆಲ್ಲಾ ಬೇಡ. ಉಪಾಯ ಏನಾದರೂ ಇದ್ರೆ ಹೇಳು."

"ಒಂದ್ನಾಲ್ಕು ತಿಂಗ್ಳು ನಿನ್ಮಗ್ಳನ್ನ ಬೇರೆ ಯಾವ್ದಾದ್ರೂ ಊರಿಗೆ ಕಳಿಸು.. ಆ ಸಮಯದಲ್ಲಿ ಸರಿಯಾದ ಗಂಡನ್ನು ಹುಡುಕಿ ಮದುವೆಮಾಡಿ ಕಳಿಸ್ಬಿಡು..."

"ಏಕಾಏಕಿ ಎಲ್ಲಿಗೆ ಕಳಿಸ್ಲಿ? ಅಂಥೋರು ಯಾರಿದಾರೆ?"

"ಅದೇನೋ ನಿಜ. ನಿಂಗಂತೂ ಯಾರಿಲ್ಲ." ಕೈಯಾಡಿಸಿದಳು.

"ಕಾಮಾಕ್ಷಿ ಈಗ ನೀನು ನನ್ನ ಕೈ ಬಿಡ್ಬೇಡ...." ಎನ್ನುತ್ತಾ ಭಟ್ಟ ಅವಳ ಕೈಗಳನ್ನು ಹಿಡಿದುಕೊಂಡ.

"ಇದೆಲ್ಲಾ ಏನೋ ಸೀಭಟ್ಟ, ಬಿಡು ನನ್ನ ಕೈನ... ಯಾರಾದ್ರೂ ನೋಡಿದ್ರೆ ಏನಂದ್ಕೋಳ್ತಾರೆ – ಹೆಸ್ರಿಗೆ, ಹೆಸ್ರಾಂತ ಲಾಯರ್ರು ನೀನು.... ಕೋರ್ಟನಲ್ಲಿ ವಾದ ಮಾಡಿ, ಎದುರಾಳಿಗಳಿಗೆ ಮಣ್ಣು ಮುಕ್ಸೋನು ನೀನು.... ಈಗ ನನ್ನ ಕೈ ಹಿಡಿದು, ಅಂಗಲಾಚ್ತೀಯಲ್ಲ... ಈಗ್ಲಾದ್ರೂ ಗರ್ವ ಇಳೀತ್ತಾ...?" ಕೆಣಕಿದಳು.

"ನನ್ನನ್ನು ರೇಗಿಸ್ಬೇಡ ಕಾಮಾಕ್ಷಿ. ಈ ಮಕ್ಳಿಗೆ ಮರ್ಯಾದೆ ಅಂದರೆ ಏನೂಂತ ತಿಳೀದು. ಆ ಮರ್ಯಾದೆಗೋಸ್ಕರ ನಾನು ನಿನ್ನನ್ನು ಕೇಳ್ತಿದ್ದೀನಿ. ಹೇಳೋದಾದ್ರೆ ಹೇಳು, ಇಲ್ದಿದ್ರೆ ಹೊರಟು ಹೋಗು... ನನ್ನ ಮಗಳ್ಗೆ ಏನು ಶಿಕ್ಷೆ ಕೊಡ್ಬೇಕು ಅಂತ ನನಗೆ ಗೊತ್ತು... ಆದ್ರೆ ಅದ್ರಿಂದ ನಾನು ಜೈಲು ಸೇರ್ತೀನಿ. ಆ ನಿನ್ನ ಪ್ರೇಮಕ್ಕ ವಯಸ್ಸಿಗೆ ಬಂದ ಮಗಳನ್ನು ಕಳ್ಕೊಳ್ತಾಳೆ ಅಷ್ಟೇ..."

"ಮಗಳ್ನ ಕೊಂದು ಜೈಲಿಗೆ ಹೋಗ್ಬೇಕೂಂತ ಆಸೆ ಇದ್ರೆ ಹಾಗೇ ಮಾಡು..."

"ನನ್ನ ಸ್ವಾಭಿಮಾನ ಬಿಟ್ಟು ನಿನ್ನನ್ನ ಕೇಳ್ತಾ ಇದೀನಿ. ಹೀಗೆಲ್ಲ ಹಂಗಿಸಿ ಮಾತಾಡ್ಬೇಡ... ನಿನ್ನನ್ನೇ ನಾನು ಮೊದ್ಲಿಂದ ನಂಬಿದ್ದೋನು... ಸಮಯದಲ್ಲಿ ನೀನು ನನಗೆ ಸಹಾಯ ಮಾಡದಿದ್ರೆ ನೀನು ನನಗೆ ಆಪ್ತಳೇ ಅಲ್ಲ. ಇವತ್ತಿಂದ ನಿನಗೂ ನನಗೂ ಯಾವ ಸಂಬಂಧವೂ ಇಲ್ಲ... ಹೊರಟುಹೋಗು.."

ಕಾಮಾಕ್ಷಿ ಅವನ ಆರ್ಭಟಕ್ಕೆ ಹೆದರಿದಳು. ಅವನನ್ನು ಬಲವಂತವಾಗಿ ಕುರ್ಚಿಯ ಮೇಲೆ ಕೂರಿಸಿದಳು... "ತತ್ ಕ್ಷಣಕ್ಕೆ ನನ್ಗೂ ಏನೂ ತೋಚ್ತಿಲ್ಲ. ಇವತ್ನಾಳೇಲಿ ಏನಾದ್ರೂ ಒಂದು ಉಪಾಯ ಹುಡುಕಿ ಹೇಳ್ತೀನಿ. ಅಲ್ಲಿವರೆಗೂ ನೀನೂ ಶಾಂತವಾಗಿರ್ಬೇಕು. ಪ್ರೇಮಕ್ಕನ್ಮೇಲಾಗಲೀ, ತಾಯಿ ಮೇಲಾಗಲೀ ಕೂಗಾಡಬಾರದು."

ಭಟ್ಟ ಉತ್ತರಿಸಲಿಲ್ಲ. ಕೆನ್ನೆಗೆ ಕೈ ಊರಿ, ತಲೆತಗ್ಗಿಸಿ ಕುಳಿತಿದ್ದ. ಕಾಮಾಕ್ಷಿ ಎದ್ದು ಹೊರಟುಹೋಗಿದ್ದಳು. ಭಟ್ಟ ಹಾಗೇ ಎಷ್ಟೋ ಹೊತ್ತಿನ ತನಕ ಕೂತಿದ್ದ. ಅಡುಗೆಯ ಶಾರದಮ್ಮ ಬಂದು ಊಟಕ್ಕೆ ಎಬ್ಬಿಸಿದರು. ಊಟಕ್ಕೆ ಕುಳಿತಾಗ, ಮಗಳ ಕಡೆ ಒಂದೆರಡು ಬಾರಿ ನೋಡಿದ. ನಿಶ್ಚಿಂತೆಯಾಗಿ ಊಟ ಮಾಡುತ್ತಿದ್ದವಳನ್ನು ಕಂಡು, ಇದೆಲ್ಲಾ ಸುಳ್ಳಿರಬಹುದೇ ಅಂತ ಅನ್ನಿಸಿತ್ತು. ಆದರೂ, ತಾನೀಗ ಬೇರೆ ಯಾವುದಕ್ಕೂ ಆಸ್ಪದ ಕೊಡಬಾರದು. ನನ್ನ ಎಚ್ಚರಿಕೆಯಲ್ಲಿ ನಾನಿರಬೇಕು ಎಂದುಕೊಂಡ. ಏಕೋ ಏನೋ ಹೆಚ್ಚು ಊಟ ಮಾಡಲಾಗಲಿಲ್ಲ. ಕೈ ತೊಳೆದು, ಹೆಂಡತಿಯ ರೂಮಿಗೆ ಬಂದ. ಮಲಗಿದ್ದವಳು ಎದ್ದು ಕೂತಳು.

"ಏನಾದ್ರೂ ಬೇಕಿತ್ತಾ?" ಕೇಳಿದಳು.

"ಮನೆ ಬಿಟ್ಟು ಹೋದ ಮಗನ ಬಗ್ಗೇನೇ ಚಿಂತಿಸ್ತಾ, ಉಳಿದ ಮಕ್ಕಳ ಕಡೆ ನಿನ್ನ ಗಮನವೇ ಇಲ್ಲ. ಯಾರು ಎಲ್ಲಿಗೆ ಹೋಗ್ತಾರೆ, ಏನ್ಮಾಡ್ತಾರೆ ಅನ್ನೋ ಜ್ಞಾನಾ ನಾದ್ರೂ ನಿನಗಿದೆಯಾ?"

"ಯಾಕೆ, ಏನಾಯ್ತು ಈಗ?"

"ಇಲ್ಲ, ಏನೂ ಆಗಿಲ್ಲ, ಸದ್ಯ ಕಾಮಾಕ್ಷಿ ಬಂದು ಹೇಳಿದ್ದರಿಂದ ಸರಿಹೋಯ್ತು. ಇಲ್ದೇ ಇದ್ದಿದ್ರೆ ಬೀದೀಲಿ ತಲೆ ಎತ್ತಿ ತಿರುಗಾಡುಕ್ಕೆ ಆಗ್ತಿರಲಿಲ್ಲ ನಾನು!" ಎನ್ನುತ್ತಾ ಆಚೆ ಬಂದ. ಎದುರು ರೂಮಿನ ಬಾಗಿಲ ಬಳಿ ನಿಂತಿದ್ದ ಮಕ್ಕಳ ಕಡೆ ನೋಡಿದ.

"ಓದು – ಬರಹ ಏನೂ ಇಲ್ವಾ...! ಇಲ್ಲಿ ನಿಂತ್ಕೊಂಡು ಏನ್ಮಾಡ್ತಿದೀರಿ? ನಡೀರಿ ಒಳ್ಗೆ..." ಮಕ್ಕಳು ಹಾಗೇ ಹಿಂದೆ ಹಿಂದಕ್ಕೆ ಹೆಜ್ಜೆಯನ್ನಿಟ್ಟು ರೂಮಿ ನೊಳಕ್ಕೆ ಸರಿದರು.

'ಕಾಮಾಕ್ಷಿ ಬಂದು ಏನು ಹೇಳಿದಳು, ನನಗ್ಯಾಕೆ ಏನನ್ನೂ ಹೇಳದೆ ಹೊರಟು ಹೋದಳು' ಎಂದು ಪ್ರೇಮಳಿಗೆ ಅರ್ಥವಾಗಲಿಲ್ಲ. ಯಾರೋ ಕಕ್ಷಿದಾರರು ಬಂದು ಕೂತಿರುತ್ತಾರೆ ಎಂದುಕೊಂಡು ಯಾರೂ ಆಫೀಸ್ ರೂಮಿನ ಕಡೆ ಇಣುಕಿ ಸಹ ನೋಡುವುದಿಲ್ಲ. ಯಾವ ವಿಷಯವಿರಬಹುದು, ರಾತ್ರಿಯೆಲ್ಲಾ ತಲೆ ಕೆಡಿಸಿಕೊಂಡರೂ, ಪ್ರೇಮಳ ಚಿಂತೆ ಬಗೆಹರಿಯಲಿಲ್ಲ.

ಬೆಳಗ್ಗೆ ಎದ್ದ ಮೇಲೆ, ನಿತ್ಯದಂತೆ ಮಕ್ಕಳು ಸ್ಕೂಲಿಗೆ ಹೋಗಿದ್ದರು. ಭಟ್ಟನೂ ಕಾರಿನಲ್ಲಿ ಎಲ್ಲಿಗೋ ಹೋದುದನ್ನು ಕಂಡು, ಕಾಮಾಕ್ಷಿ ಗಡಬಡಿಸಿ, ಇವರ ಮನೆಗೆ ಬಂದಳು. ಅವಳೇನಾದರೂ ಹೇಳುವ ಮೊದಲೇ ಪ್ರೇಮ ಆಕ್ಷೇಪಣೆ ಮಾಡಿದಳು.

"ನೀವು ಹೀಗ್ಮಾಡ್ಬೊಹುದಾ ಕಾಮಾಕ್ಷಿ? ಅದೇನೂಂತ ನನಗ್ಹೇಳ್ಬಾರ್ದಾಗಿತ್ತಾ? ಮೊದ್ಲೇ ಇವ್ರಿಗೆ ನಾವು ಕೂತ್ರೆ ತಪ್ಪು ನಿಂತ್ರೆ ತಪ್ಪು... ಮಲಗಿದ್ದೋಳನ್ನ ಎಬ್ಬಿಸಿ ಬೈದು ಹೋದ್ರು."

"ಏನೂಂತ ಹೇಳ್ಲಿಲ್ವಾ?"

"ಅವ್ರಂತೂ ಎಂದೂ ಏನನ್ನೂ ಸರ್‍ಯಾಗಿ ಹೇಳ್ತೋರೇ ಅಲ್ಲ. ಬೈಯುವು ದೊಂದೇ ಗೊತ್ತು. ಬಾಯ್ಮಾಡ್ದೇ ಇರೋದ್ರಿಂದ ಹೊಡೆಯುಲ್ಲ. ಒಂದಿನ ಚೆನ್ನಾಗಿ ಅವ್ರ ಕೈಯಲ್ಲಿ ಹೊಡ್ತ ತಿಂದು, ಹಾಗೇ ಮಲಗ್ಬಿಡೋಣ ಅಂತ ಮಾಡ್ಕೊಂಡಿದೀನಿ."

"ಸುಮ್ನಿರಿ ಪ್ರೇಮಕ್ಕ, ಹಾಗೆಲ್ಲಾ ಮಾತಾಡ್ಬೇಡಿ. ನಿಮ್ಗೆ ತಿಳಿಬಾರ್ದಂಥ ವಿಷಯ ವಲ್ಲ. ಮಕ್ಳು ಮನೇಲಿದ್ವಲ್ಲ, ನಾನೇ ಒಳಕ್ಕೆ ಬರ್ಲಿಲ್ಲ." ಎನ್ನುತ್ತಾ ತನಗೂ ಭಟ್ಟನಿಗೂ ನಡೆದ ಮಾತುಗಳನ್ನು ತಿಳಿಸಿದಳು. ಪ್ರೇಮ ಬೆವೆತುಹೋದಳು.

"ನೋಡಿದ್ರಾ, ನಿಮ್ಗಂತೂ ಯಾವ ಮಾತ್ನೂ ತಡ್ಕಳೋ ಶಕ್ತಿಯೇ ಇಲ್ಲ. ನಿಮ್ಗೆ ಹೇಳ್ದೇ ಇದ್ರೆ ನನ್ಮನಸ್ಸು ತಡ್ಯೋಲ್ಲ.."

"ಅಪ್ಪನ ಬುದ್ಧಿ ತಿಳ್ದೂ ಇವಳ್ಯಾಕೆ ಹೀಗ್ಮಾಡಿದ್ಲು? ಬರ್ಲಿ ಇವತ್ತು ಮನಿಗೆ.... ನಾವು ಮಕ್ಳು ಅಂತ ಬೆಳೆಸಿ ಸಾಕೋದು..... ಇವ್ರು ನಮ್ಗೇ ಒಂದು ಸಮಸ್ಯೆಯಾಗಿ ಬಿಡುತ್ತೆ.... ಅಲ್ಲಾ ಇಂಥ ಕೆಟ್ಬುದ್ಧಿ ಯಾಕ್ಬಂತು ಇವಳ್ಗೆ?"

"ಇದ್ರಲ್ಲಿ ಕೆಟ್ಬುದ್ಧಿ ಏನ್ಬಂತು? ಅವಳೇನೂ ಕೆಟ್ಟ ಹಾದಿ ಹಿಡಿದಿಲ್ಲ. ಬೇರೆ ಯಾರೋ ಹುಡ್ಗನ ಸ್ನೇಹ ಮಾಡಿಲ್ಲ. ನನ್ಮಗನ್ನೇ ಅವ್ಳು ಮೆಚ್ಚಿರೋದು. ಆದ್ರಿಂದ್ಲೇ ನನ್ಗೆ ತಿಳಿದದ್ದು.... ಅದಕ್ಕೆ ಧೈರ್ಯವೂ ಇಲ್ಲ ಬೇರೆ ಹುಡುಗ್ರ ಸ್ನೇಹ ಮಾಡೋಕೇ... ನಮ್ಮ ಕಿಶೋರ, ಅವ್ಳಿಗೆ ಲಾಯಖ್ಖಿಲ್ಲ ಪ್ರೇಮಕ್ಕ. ಇಲ್ದಿದ್ರೆ, ನಾನೇ ಇಬ್ರ ಮದ್ವೆ ಪ್ರಸ್ತಾವ ಮಾಡ್ತಿದ್ದೆ..."

"ಈಗೇನ್ಮಾಡೋದು? ಇವ್ರೇನಂದ್ರು?" ಅಸಹಾಯಕತೆಯಿಂದ ಪ್ರಶ್ನಿಸಿದಳು.

"ಅವ್ನಿಗೂ ದಿಕ್ಕು ತೋಚ್ತಿಲ್ಲ. ಒಬ್ಬೊಬ್ಬರಾಗಿ ಮಕ್ಳು ಕೈ ಬಿಟ್ಟು ಹೋಗ್ತಿದಾ ರೇಂತ ಭಯ ಬಿದ್ದಿರಬಹುದು. ನಾನೇ ಏನಾದ್ರು ಉಪಾಯ ಹೇಳ್ಬೇಕು....."

"ಇನ್ನೇನಿದೆ ಉಪಾಯ? ಇಬ್ರಿಗೂ ಮದ್ವೆ ಮಾಡಿದ್ರಾಯ್ತು. ನಿಮ್ಮನೇಲಿ ನಮ್ತಾಯಿ ಸುಖವಾಗಿರ್ತಾಳೆ. ಆ ನಂಬ್ಕೆ ನನ್ಗಿದೆ."

"ಸುಖವಾಗಿರ್ತಾರೆ ಅಂತ ನನ್ಗೆ ನಂಬ್ಕೆ ಇಲ್ಲ ಪ್ರೇಮಕ್ಕ. ಬೇಡ ಬಿಡಿ. ನನ್ಗೇ ಈ ಮದ್ವೆ ಇಷ್ಟವಿಲ್ಲ. ಕಿಶೋರಂಗೆ ಮದ್ವೆಗೆ ಏನೂ ಅವಾಂತರವಿಲ್ಲ. ಮೊದ್ಲು ಆದಷ್ಟೂ ಬೇಗ ನಿಮ್ತಾಯಿಗೆ ಮದ್ವೆ ಮಾಡಿಬಿಡಿ. ಆಮೇಲೆ ಎಲ್ಲಾ ಸರಿ ಹೋಗ್ತದೆ."

"ಗಂಡೆಲ್ಲಿದೆ? ಯಾರು ಇದನ್ನೆಲ್ಲಾ ಮಾಡ್ತಾರೆ? ಪ್ರಶಾಂತನೋ ಮನೆ ಬಿಟ್ಟು ಹೋದೋನು, ಒಂದು ಪತ್ರವಿಲ್ಲ, ಫೋನಿಲ್ಲ......."

"ಅವನೆಲ್ಲೋ ಆರಾಮವಾಗಿರ್ತಾನೆ ಬಿಡಿ. ನಾಲ್ಕು ತಿಂಗ್ಳು ತಾಯಮ್ಮನ್ನು ನಿಮ್ತಂಗಿ ಮನೆಗೆ ಕಳಿಸ್ಬಿಡಿ.... ಅಷ್ಟರಲ್ಲಿ ಒಂದ್ಗಂಡನ್ನು ಹುಡ್ಕಿ. ಎಲ್ಲಾ ಸರಿ ಹೋಗ್ತದೆ."

"ನನ್ಮೈಯಲ್ಲಿ ಶಕ್ತಿಯೇ ಇಲ್ಲದ ಹಾಗಾಗ್ತಿದೆ. ಇವಳ್ಯಾಕೆ ಹೀಗ್ಮಾಡಿದ್ಲು? ನಂಗೊಂದ್ಮಾತಾದ್ರೂ ತಿಳಿಸ್ಬಾರ್ದಾಗಿತ್ತಾ?"

"ಏನಂತ ಹೇಳ್ತಾಳೆ? ನಿಮ್ಗೆ ತಿಳಿಸೋದ್ರಿಂದ, ನಿಮ್ಮ ಆತಂಕ ಹೆಚ್ಚಾಗುತ್ತೆ ಅಂತ ಅವ್ಳಿಗೂ ಗೊತ್ತು..."

"ಈಗ್ಲೂ ನನ್ನ ಹೃದಯ ತಲ್ಲಣದಿಂದ ನಡಗ್ತಿದೆ. ಮುಂದೇನ್ಗತಿ ಕಾಮಾಕ್ಷಿ?"

"ದೇವ್ರಿದ್ದಾನೆ. ಎಲ್ಲಾ ಸರಿ ಹೋಗುತ್ತೆ."

"ಆ ದೇವ್ರು ನನ್ನ ಭಾಗಕ್ಕೆ ಇದಾನೋ ಇಲ್ವೋ.... ನಾವುಗಳೋ ಒಂದು ದಿನವೂ ದೇವ್ರ ಪೂಜೆ, ಪುನಸ್ಕಾರ ಮಾಡ್ದೋರೇ ಅಲ್ಲ... ಹೊಸ ನೆಂಟಸ್ತನಾನ ಹುಡುಕಿದ್ರೆ ನಮ್ಮನೇ ಹುಳುಕೆಲ್ಲ ತಿಳಿಯುಲ್ವಾ! ಅವ್ರುಗಳು ನಗುಲ್ವಾ? ನೀವಾಗಿದ್ರೆ, ನನ್ಗಿಂತ ಹೆಚ್ಚಾಗಿ ಎಲ್ಲಾ ತಿಳ್ದೋರು... ಈಗ್ಲೂ ನೀವು ದೊಡ್ಮನಸ್ಸು ಮಾಡಿ ಕಾಮಾಕ್ಷಿ...."

"ಬೇಡ ಪ್ರೇಮಕ್ಕ, ನಮ್ಮ – ನಿಮ್ಮ ಸಂಬಂಧ ಹೀಗೇ ಇರ್ಲಿ. ನಿನ್ಗಂಡನ್ನೇ ಒಪ್ಪಿಲ್ಲ ನಾನು.... ಸಂಬಂಧ ಬೇರೆ, ಸ್ನೇಹ ಬೇರ... ನಮ್ಮಗನ್ಗಿಂತ ಒಳ್ಳೇ ಹುಡ್ಗ ನಿಮ್ಮಗಳ್ಗೆ ಸಿಕ್ಕೇ ಸಿಗ್ತಾನೆ. ಆ ನಂಬ್ಕೆ ನನ್ಗಿದೆ. ಆ ಹುಡ್ಗಿಗೆ ಯಾವ ಸುಳಿವನ್ನೂ ಕೊಡ್ಬೇಡಿ. ನಾನು ಭಟ್ಟನ ಹತ್ರ ಮಾತಾಡ್ತೀನಿ."

ಕಾಮಾಕ್ಷಿ, ಭಟ್ಟನ ಹತ್ತಿರವೂ ಮಾತಾಡಿದಳು. ಅವನಿಗೂ ಆ ಉಪಾಯ ಹಿಡಿಸಿತು. ಅದೇ ರಾತ್ರಿ ಟ್ರಂಕ್ ಕಾಲ್ ಬುಕ್ ಮಾಡಿ, ಭವಾನಿಯ ಹತ್ತಿರ ಮಾತಾಡಿದ. ಅವಳ ಸಹಕಾರವನ್ನು ಕೇಳಿದ. ಅವಳು ಒಪ್ಪಿಕೊಂಡಿದ್ದಳು. ಮಕ್ಕಳೆಲ್ಲ ಮಲಗಿದ ಮೇಲೆ ಹೆಂಡತಿಯ ರೂಮಿಗೆ ಬಂದ.

"ನಿನ್ತಂಗಿ ಹತ್ರ ಮಾತಾಡಿದೀನಿ. ಇನ್ನೊಂದೆರ್ಡು ದಿನಗಳಲ್ಲಿ ಅವಳು ಅವಳ ಮಗನ್ನ ಕಳಿಸ್ತಾಳೆ. ಅವನ್ಜತೇಲಿ ತಾಯೀನ ಕಳಿಸ್ಬೇಕು..."

"ಈಗ ಹೋದ್ರೆ, ಅವ್ಳ ವಿದ್ಯಾಭ್ಯಾಸಕ್ಕೆ ತೊಂದ್ರೆ ಬರುಲ್ವಾ...?"

"ಈಗ ಅವ್ಳು ಇಲ್ಲೇ ಇದ್ರೆ ಇನ್ನೂ ಹೆಚ್ಚಿನ ತೊಂದ್ರೆ... ಓದಿ ವಿದ್ಯಾವಂತರಾಗಿ, ಮನೆಗೆ ಮರ್ಯಾದೆ ತರೋ ಜಾತಿಯೋವಲ್ಲ ಈ ಮಕ್ಳು. ನನ್ನ ಮುಖಕ್ಕೆ ಮಸಿ ಬಳ್ಯೋ ಜಾತಿಯೋವು. ಹೆಣ್ಣಾಗಿಲ್ದೇ ಇದ್ದಿದ್ರೆ... ಪ್ರಶಾಂತನ ದಾರಿಗೇ ಕಳಿಸ್ತಿದ್ದೆ. ಹೆಣ್ಮಕ್ಳ ಮಾತು ಬೀದಿಗ್ಬಂದ್ರೆ ಮುಗೀತು ಅವ್ರ ಕಥೆ.... ತಿಳೀತಾ?"

"ಇದೆಲ್ಲಾ ಯಾಕೆ? ಕಾಮಾಕ್ಷಿಯೂ ನಿಮ್ಮೋಳೇ. ಕಿಶೋರನ್ನ ನಾವು ದಿನಾ ನೋಡ್ತೀವಿ."

"ಅವ್ನನ್ನ ನನ್ನಳಿಯ ಅಂತ ಹೇಳಿಕೊಳ್ಲಾ... ನಾವೇನು? ನಮ್ಮ ಅಂತ ಸ್ತೇನು... ಕಾಮಾಕ್ಷಿ ನಮ್ಮ ಅಂತಸ್ತಿಗೆ ತಕ್ಕವಳಲ್ಲ..."

"ಒಂದ್ಕಾಲ್ದಲ್ಲಿ ಕಾಮಾಕ್ಷಿ ನಿಮ್ಮ ಅಂತಸ್ತಿಗೆ ಸರಿಯಾಗಿದ್ಲು ಅಲ್ವಾ?"

"ಆ ಮಾತು ಬೇರೆ. ಅದೆಲ್ಲ ನಿನಗ್ಯಾಕೆ? ನಾನು ಅವ್ಳನ್ನ ಮದ್ವೆಯಾಗ್ತೀಯ ಅಂತ ಕೇಳಿದ್ದು ನಿಜ.... ನನ್ಗೆ ಅಡ್ಗೆ ಮಾಡಿ ಬಡಿಸೋಕೆ ಒಂದು ಹೆಣ್ಣು ಬೇಕಾಗಿತ್ತು...."

"ಬರೀ ಅಷ್ಟೇ ಅಲ್ಲ..."

ಭಟ್ಟ ವಿಚಿತ್ರವಾಗಿ ಅವಳನ್ನು ನೋಡಿದ.

"ಬರೀ ಅಷ್ಟೇ ಅಲ್ಲ. ನಿಮ್ಮ ಮಕ್ಳನ್ನ ಹೆರೋಕೆ ಒಬ್ಬ ಹೆಣ್ಣು ಬೇಕಾಗಿತ್ತು ಅಲ್ವಾ?"

"ಆ ಕೆಲ್ಸಾನ ಯಾವ ಹೆಂಗ್ಸನ್ನು ಮದ್ವೆಯಾಗಿದ್ರೂ ಮಾಡ್ತಿದ್ಲು.... ನಿಂದೇನು ಹೆಚ್ಚುಗಾರಿದೆ? ಮಕ್ಳನ್ನೇನೋ ಹೆತ್ತೆ. ಆದ್ರೆ ಸರ್ಯಾಗಿ ಬೆಳೆಸ್ಲಿಲ್ಲ. ನನ್ಮೇಲೆ ಎತ್ತಿ ಕಟ್ಟಿದೀಯ. ನನ್ಮೇಲೆ ಸೇಡು ತೀರಿಸ್ಕೊಳ್ತಿದೀಯ..."

"ಬೆಳೆಸೋಕೆ ನನಗೆ ಯಾವ ಸ್ವಾತಂತ್ರ್ಯ ಇತ್ತು? ನಿಮಗೆ ಹೇಗೆ ಬೇಕೋ ಹಾಗೆ ಬೆಳ್ಸಿದ್ರಿ... ನಿಮ್ಮದೇ ರಕ್ತ ಹರೀತಿದೆ... ನಿಮ್ಮ ವಿರುದ್ಧ ಎದ್ದು ನಿಂತರು."

"ಹಾಗಾದ್ರೆ ನಿನ್ನ ಮಕ್ಳು ಮಾಡ್ತಿರೋದು ಸರಿ ಅಂತೀಯ? ಎದ್ದು ನಿಂತೋರ ಬಾಲಾನ ಹೇಗೆ ಕತ್ತರಿಸ್ಬೇಕೂಂತ ನನ್ಗೂ ಗೊತ್ತು. ಈಗ ಆ ಮಾತು ಬೇಡ. ನಾನು ಹೇಳಿದ ಹಾಗೆ ಕೇಳೋದನ್ನ ಮೊದ್ಲು ಕಲಿ."

"ನಿಮ್ಮ ಮಾತನ್ನ ಎಂದು ಮೀರಿದೀನಿ ನಾನು...?"

"ಈಗ..... ಈಗ.... ನನ್ಮಾತನ್ನ ಮೀರಿ ಮಾತಾಡ್ಬೇಡಾಂದ್ರೂ ಆಡ್ತಿದೀಯ... ನೀನೇ ಜಾಣೆ ಅಂತ ಅಂದ್ಕೋಬೇಡ. ಅದೇನ್ಬೆಳ್ಸಿದಾರೋ ನಿಮ್ಮಪ್ಪ ನಿಮ್ಮಮ್ಮ ನಿನ್ನನ್ನ...."

"ನಮ್ತಂದೆ ತಾಯಿ ವಿಷ್ಯ ಈಗ್ಯಾಕೆ? ಅವ್ರಿಗೇ ಆಗ್ಲಿ, ನಿಮ್ಗೇ ಆಗ್ಲಿ ಅವಮಾನ ಆಗೋ ಅಂತ ಕೆಲಸವನ್ನೂ ನಾನಾಗ್ಲೀ, ನನ್ತಂಗಿ ತಮ್ಮಂದಿರಾಗ್ಲೀ ಎಂದೂ ಮಾಡಿಲ್ಲ. ನೀವೂ ನಿಮ್ಮಪ್ಪನ್ಮನೆ ಬಿಟ್ಟು ಹೋಗಿದ್ರಿ... ಅದನ್ನೇ ಪಚ್ಚು ಮಾಡ್ದ."

"ಮುಚ್ಚು ಬಾಯಿ, ನಿನ್ಮಗನ ತಪ್ಪನ್ನು ಮುಚ್ಕೋಬೇಡ. ನಾನು ನನ್ನ ಸೋದರ ಮಾವನ ಮನೇಲಿ ಬೆಳ್ದೆ. ಓದ್ದೆ, ಲಾಯರ್ರಾದೆ... ಸಂಪಾದಿಸ್ತೀನಿ. ನಿಮ್ಗಳನ್ನೆಲ್ಲಾ ಸಾಕೋ ಶಕ್ತಿ ನನ್ಗಿದೆ. ನಿಮ್ಮಗನ್ಗೆ ಏನಿದೆ, ವಿದ್ಯೆ ಕೂಡ ಪೂರೈಸ್ಲಿಲ್ಲ. ಒಂದು ತುತ್ತಿನ ಅನ್ನಕ್ಕಾಗಿ ಎಲ್ಲಿ ಭಿಕ್ಷೆ ಬೇಡ್ತಾ ಇದಾನೋ? ನನ್ಗಿಂತ ಎತ್ರಕ್ಕೆ ಬೆಳೆದ್ಮಾತ್ರಕ್ಕೆ ನನ್ಗಿಂತ ದೊಡ್ಡ ಮನುಷ್ಯನಾಗಿಬಿಟ್ನಾ? ಕೊಬ್ಬು, ಕೊಬ್ಬು ನಿನ್ಮಕ್ಳಿಗೆ..."

"ಏನ್ ನಿನ್ಮಕ್ಳು, ನಿನ್ಮಕ್ಳು ಅಂತ ಹಂಗಿಸ್ತೀರಿ? ನೀವೇ ತಾನೇ ತಂದೆ..... ನೀವೇ ತಾನೇ ಬೆಳ್ಸಿದ್ದು.... ನಿಮ್ಮ ಈ ನಡ್ವಳ್ಕೆಯಿಂದ ಮಕ್ಕಳ್ನೆಲ್ಲಾ ದೂರ ಮಾಡಿಕೊಳ್ತಾ ಇದೀರಿ..."

"ಅವರ್ಗೆ ನಾನ್ಬೇಡ ಅಷ್ಟೇ... ನನ್ನ ಆಸ್ತಿ ಮಾತ್ರ ಬೇಕು... ನನ್ಮಾತನ್ನ ಮೀರಿ ಈ ಮನೆಯಿಂದ ಹೊರ ಹೋದೋರಿಗೆ ಒಂದು ಪೈಸೆ ಕೊಡುಲ್ಲ ನಾನು... ನನ್ನ ಮಾತ್ಗೆ ಬೆಲೆ ಇಲ್ಲ. ನನ್ನ ಆಸ್ತೀಲಿ ಪಾಲು ಮಾತ್ರ ಬೇಕು. ನಾಲಾಯಕ್ಕುಗಳನ್ನ ತಂದು... ಇದಕ್ಕೆಲ್ಲಾ ನೀನೇ ಕಾರಣ.." ಅವಳ ಮುಖದ ಮುಂದೆ ಬೆರಳನ್ನು ಒತ್ತಿ

ಒತ್ತಿ ಹೇಳಿ, ಅಲ್ಲಿ ನಿಲ್ಲದೆ ಹೊರಟುಹೋದ.

ಪ್ರೇಮ ಒಬ್ಬಳೇ ಕೂತು ಕಣ್ಣೀರು ಹರಿಸಿದಳು. ಈ ದಿನ ತನ್ನ ಮಗಳೊಡನೆ ತನ್ನ ದುಃಖವನ್ನು ಹೇಳಿಕೊಳ್ಳಬೇಕೆಂದೆನಿಸಲಿಲ್ಲ. ನನ್ನ ಮಗಳು ನನಗೆ ಸುಳಿವು ಕೊಡದೇ, ಈ ಮನೆಯಿಂದ ಹೊರಹೋಗುವ ಉಪಾಯವನ್ನು ಮಾಡುತ್ತಿದ್ದಾಳೆ. ಎಲ್ಲಾ ಅಷ್ಟೇ, ಬೆಳೆಯುವವರೆಗೆ ನಾವುಗಳು ಬೇಕು. ರೆಕ್ಕೆ ಪುಕ್ಕ ಬಲಿತ ಮೇಲೆ, ಗೂಡು ಬಿಟ್ಟು ಹಾರಿ ಹೋಗುವ ಆಸೆ.... ಪ್ರಶಾಂತನ ಮೇಲೆ ಜೀವವನ್ನೇ ಇಟ್ಟುಕೊಂಡಿದ್ದೆ. ಹೊರಟು ಹೋದವನಿಗೆ ನನ್ನ ನೆನಪೇ ಇಲ್ಲವೇನೋ... ಇನ್ನು ಈ ವಿದ್ಯಾ... ಯಾರ ಮನೆ ಸೇರುತ್ತಾಳೋ ಹೇಗಿರುತ್ತಾಳೋ? ನನ್ನ ಚಿಂತೆ ಅವಳಿಗೇಕೆ? ಹುಶ್ ಎಂದು ನಿಟ್ಟುಸಿರು ಬಿಟ್ಟಳು. ಪಕ್ಕದ ಹಾಸಿಗೆಯೂ ಖಾಲಿ. ಈಗ ಚಿಕ್ಕ ಮಗ, ಶ್ರೀಕರನೂ ಸಹ ತನ್ನ ಅಣ್ಣ ಸಂತೋಷನೊಟ್ಟಿಗೆ ಮಲಗುತ್ತಿದ್ದ. ಹೆಣ್ಣು ಮಕ್ಕಳು ಮೂರು ಜನವೂ ಎದುರಿಗಿದ್ದ ರೂಮಿನಲ್ಲಿ ಮಲಗುತ್ತಿದ್ದರು. ಗಂಡ ಒಂಟಿಯಾಗಿ ತನ್ನ ರೂಮಿನಲ್ಲಿ! ಇಲ್ಲಿ ಒಂಟಿಯಾಗಿ ತಾನು! ಆರು ಮಕ್ಕಳ ತಾಯಿ ನಾನು, ಆದರೇನು? ನನ್ನ ಗಂಡನ ದಬ್ಬಾಳಿಕೆಯನ್ನು ಸಹಿಸಿಕೊಂಡು, ಆರು ಮಕ್ಕಳನ್ನು ಹೆತ್ತೂ ನಾನಿಂದು ಒಂಟಿ... ಬಹುಶಃ ಒಂದು ದಿನ ಈ ಒಂಟಿತನದಲ್ಲೇ ಯಾರಿಗೂ ತಿಳಿಯದಂತೆ ಉಸಿರು ನಿಂತು ಹೋಗುತ್ತದೇನೋ...? ಶಬ್ದವಾಗದಂತೆ ಬಾಯಿಗೆ ಕೈ ಕೊಟ್ಟು ಅತ್ತಳು.

*   *   *

ಅಧ್ಯಾಯ-ಆರು

ಭಟ್ಟನ ಉಪಾಯ ಫಲಿಸಿತು

ದಿಢೀರನೆ ಬಂದಿಳಿದ ಚಿಕ್ಕಮ್ಮನ ಮಗ ಗೌತಮನನ್ನು ಕಂಡು ವಿದ್ಯಾಳಿಗೆ ಅಚ್ಚರಿಯಾಗಿತ್ತು. ಎಷ್ಟೋ ವರ್ಷಗಳಿಂದ ಯಾರೂ ಬಂದಿರಲೇ ಇಲ್ಲ. ಬಾಯಿ ಬಿಚ್ಚಿ ಮಾತನಾಡಲೂ ಏನೋ ಹಿಂಜರಿಕೆ. ಅಪ್ಪ ಏನನ್ನುವರೋ... ಅಪ್ಪನ ಸ್ವಭಾವ ಇಂದಿಗೂ ಬದಲಾಗಿಲ್ಲ ಅಂತ ಇವನಿಗೆ ತಿಳಿಯದು.

"ಏನಯ್ಯಾ ಗೌತಮ್ ಹೇಗಿದೀಯಾ? ಏನ್ಮಾಡ್ತಿದೀಯ?" ಅಪ್ಪ ಅವನ ಕುಶಲೋಪರಿ ವಿಚಾರಿಸಿದಾಗ ವಿದ್ಯಾ ಅಪ್ಪನನ್ನೇ ವಿಚಿತ್ರವಾಗಿ ನೋಡಿದಳು. ತನ್ನ ಸ್ವಂತ ಮಕ್ಕಳನ್ನು ಎಂದೂ ಹೀಗೆ ವಿಚಾರಿಸಿದವರಲ್ಲ. ಇದೇನು ಇವತ್ತು ಹೀಗೆ....?"

"ಹೋಗು, ಒಳಗೆ ಹೋಗಿ ದೊಡ್ಡಮ್ಮನ್ನ ಮಾತಾಡಿಸ್ಕೊಂಡು ಬಾ...." ವಿದ್ಯಾಳಿಗೆ ಮತ್ತೂ ಅಚ್ಚರಿ.

"ದೊಡ್ಡಮ್ಮ ಹೇಗಿದಾರೆ ವಿದ್ಯಾ?" ಎನ್ನುತ್ತಾ ಅವನ ಒಳಗಿನ ರೂಮಿಗೆ ಬಂದ. ವಿದ್ಯಾಳ ಹಿಂದೆ ನಿಂತಿದ್ದ ಅವಳ ತಂಗಿಯರನ್ನು, ತಮ್ಮನನ್ನು ಮಾತ ನಾಡಿಸಿದ. ಸಂತೋಷನೂ ಮಹಡಿಯಿಂದ ಕೆಳಗಿಳಿದು ಬಂದ. ಮನೆಯೊಳಗೆ ಏನೋ ವಿಶೇಷ ಸಡಗರ.

"ಏನ್ ದೊಡ್ಡಮ್ಮ ಹೇಗಿದೀರಿ?" ಎನ್ನುತ್ತಾ ಅಲ್ಲೇ ಹಾಸಿಗೆಯ ಮೇಲೆ ಕುಳಿತ.

"ಯಾಕೆ ಹೀಗಾಗಿದಾರೆ.... ಡಾಕ್ಟರರಿಗೆ ತೋರಿಸ್ಲಿಲ್ವಾ?"

"ಡಾಕ್ಟ್ರು ಬಂದು ಏನ್ಮಾಡ್ತಾರೆ? ನನ್ನ ದೇಹಕ್ಕೆ ಏನೂ ಕಾಯಿಲೆ ಇಲ್ಲ."

"ಪಚ್ಚೂ ಎಲ್ಲಿ, ಕಾಣ್ತಿಲ್ಲ...." ವಿದ್ಯಾ ಅವನ ಮೊಣಕೈ ತಿವಿದಳು. 'ಆಮೇಲೆ ಹೇಳ್ತೀನಿ' ಎನ್ನುವಂತೆ ಸಂಜ್ಞೆ ಮಾಡಿದಳು. "ಅಮ್ಮ ನಿನಗೊಂದು ಲೆಟರ್ ಕೊಟ್ಟಿ ದ್ದಾಳೆ." ಎನ್ನುತ್ತಾ, ತನ್ನ ಶರ್ಟಿನ ಜೇಬಿನೊಳಗೆ ಮಡಿಸಿಟ್ಟುಕೊಂಡಿದ್ದ ಪತ್ರವನ್ನು ಪ್ರೇಮಳಿಗೆ ಕೊಟ್ಟ.

"ವಿದ್ಯಾ ಸ್ವಲ್ಪ ಓದ್ತೀಯಾ? ಚಿಕ್ಕಮ್ಮ ಏನು ಬರೆದಿದ್ದಾಳೆ ಅಂತ..." ಹೂಂ ಎನ್ನುತ್ತಾ ವಿದ್ಯಾ ಪತ್ರವನ್ನು ಬಿಡಿಸಿ ಓದತೊಡಗಿದಳು.

"ಮಾ॥ ಸೌ॥ ಪ್ರೇಮಕ್ಕನಿಗೆ ನಮಸ್ಕಾರಗಳು. ನೀವುಗಳೆಲ್ಲರೂ ಕ್ಷೇಮವೆಂದು ನಂಬಿದ್ದೇನೆ. ಇಲ್ಲಿ ನನ್ನ ಆರೋಗ್ಯ ಅಷ್ಟು ಸರಿ ಇಲ್ಲ. ಡಾಕ್ಟರ್ ರೆಸ್ಟ್ ತಗೊಳ್ಳಬೇಕೆಂದು ಹೇಳಿದ್ದಾರೆ. ಒಂದೆರಡು ವಾರಗಳಿಗೋಸ್ಕರ, ನಿನ್ನ ಹೆಣ್ಣುಮಕ್ಕಳಲ್ಲಿ ಯಾರನ್ನಾದ್ರೂ ಒಬ್ಬರನ್ನು ನಮ್ಮ ಮನೆಗೆ ಕಳಿಸಿರು. ನಮ್ಮ ಮನೇಲಿ ಬರೀ ಗಂಡು ಮಕ್ಕಳು. ಅವಕ್ಕೆ ಏನೂ ಗೊತ್ತಿಲ್ಲ. ನಿನ್ನ ಮಕ್ಕಳನ್ನಾದರೆ ಭಾವ ಶಿಸ್ತಿನಿಂದ ಬೆಳೆಸಿದ್ದಾರೆ. ಜವಾಬ್ದಾರಿಯ ಅರಿವಿದೆ. ನಿನ್ನ ತಂಗಿಗೋಸ್ಕರ ಇಷ್ಟು ಮಾಡ್ತೀಯಾ! ಭಾವನಿಗೆ ಇಷ್ಟವಿಲ್ಲದಿದ್ದರೆ ಬೇಡ... ಅವರೊಡನೆ ಮಾತನಾಡಲು ಭಯ. ಇಲ್ಲದಿದ್ದರೆ ನಾನೇ ಮಾತಾಡುತ್ತಿದ್ದೆ... ವಿದ್ಯಾ ಬರೋಕೆ ಇಷ್ಟ ಪಡೋದಾದ್ರೆ ಅವಳನ್ನೇ ಕಳಿಸು. ಎಷ್ಟಾಗಲೀ ದೊಡ್ಡವಳು... ಮನೆ ಕೆಲಸ ಕಾರ್ಯದಲ್ಲಿ ನನಗೆ ಸಹಾಯಕಳಾಗ್ತಾಳೆ... ನಿಮ್ಮ ಮನೆಯ ಅನುಕೂಲ ನಮ್ಮ ಮನೇಲಿಲ್ಲ. ಆದ್ರೂ ವಿದ್ಯಾಳಿಗೆ ಬೇಸರವಾಗುವುದಿಲ್ಲ ಅಂತ ಅಂದ್ಕೊಂಡಿದೀನಿ..

"ಇನ್ನು ಹೆಚ್ಚಿನ ವಿಚಾರಗಳನ್ನು ಗೌತಮ ತಿಳಿಸ್ತಾನೆ. ತೀ॥ ಭಾವನವರಿಗೆ ನಮಸ್ಕಾರಗಳು. ಮಕ್ಕಳಿಗೆ ನನ್ನ ಆಶೀರ್ವಾದಗಳು. ಇತಿ ನಿನ್ನ ತಂಗಿ–**ಭವಾನಿ**" ಎಂದು ಸಹಿ ಮಾಡಿ ಪತ್ರವನ್ನು ಮುಗಿಸಿದ್ದಳು.

ಗೌತಮ, ಸಂತೋಷನೊಡನೆ ಮಾತನಾಡಲು ಎದ್ದು ಹೋಗಿದ್ದ. ವಿದ್ಯಾ ಪತ್ರವನ್ನು ಓದಿ ಮುಗಿಸಿ, ತಾಯಿಯ ಮುಖವನ್ನು ನೋಡಿದಳು. ತಾಯಿ ಯಾವ ಭಾವನೆಯನ್ನೂ ತೋರಗೊಡಲಿಲ್ಲ.

"ಅಮ್ಮಾ.... ನಾನು ಹೋಗುಲ್ಲಮ್ಮ. ಇಲ್ಲಿ ನಿಂಗೆ ಕಷ್ಟವಾಗುತ್ತೆ..."

"ಮೊದ್ಲು ಈ ಪತ್ರವನ್ನು ನಿಮ್ಮಪ್ಪಂಗೆ ತೋರ್‍ಸು. ಅವರೇ ಉತ್ರ ಕೊಡ್ಲಿ."

"ಹೋಗೇ ಪುಸ್ಸಿ.... ಈ ಲೆಟರನ್ನು ಅಪ್ಪಂಗೆ ಕೊಡು...."

"ಏನು ಬರೆದಿದಾರೆ ಚಿಕ್ಕಮ್ಮ...?"

"ನಿಂಗ್ಯಾಕೇ ಅದೆಲ್ಲ... ಹೇಳಿದಷ್ಟನ್ನು ಕೇಳು ತಲೆ ಹರಟೆ...."

"ಸುಮ್ನೇ ಹೋಗು ಪುಸ್ಸೀ... ಬೇಜಾರ್ಮಾಡ್ಬೇಡ. ನಿಮ್ಮಪ್ಪಂಗೆ ಈ ಪತ್ರಾನ ಕೊಟ್ಬಾ...." ಪುಸ್ಸೀ ಅತ್ತ ಹೊರಟು ಹೋದ್ಮೇಲೆ ವಿದ್ಯಾ ತಾಯಿಯ ಪಕ್ಕ ಕುಳಿತಳು.

"ಅಮ್ಮಾ.... ನಾನೆಂದೂ ಈ ಮನೆಯಿಂದ ಆಚೆ ಹೋಗೇ ಗೊತ್ತಿಲ್ಲ... ಚಿನ್ನುನ ಕಳಿಸು....."

"ಚಿನ್ನುಗೇನು ತಿಳುವಳಿಕೆ ಇದೆ? ನೀನು ಹೋದ್ರೆ ನಿನ್ನ ಚಿಕ್ಕಮ್ಮನಿಗೆ ಸಹಾಯವಾಗುತ್ತೆ. ಮೊದ್ಲು ನಿಮ್ಮಪ್ಪ ಏನು ಹೇಳ್ತಾರೋ ನೋಡೋಣ...."

"ಸದ್ಯ ಅಪ್ಪ ಗೌತಮನ ಎದುರಿಗೆ ನಮ್ಮನ್ನೆಲ್ಲ ಬೈಯದೇ ಇದ್ರೆ ಸಾಕು. ಅಪ್ಪಂಗೆ ಯಾರನ್ನೂ ಕಳಿಸೋಕೆ ಇಷ್ಟವಿಲ್ಲ. ನನ್ನನ್ನಂತೂ ಖಂಡಿತಾ ಕಳಿಸೋಲ್ಲ."

"ಎಷ್ಟು ವರ್ಷ ಹೀಗೇ ಮನೇಲಿಟ್ಕೋತಾರೆ.... ಮದುವೆ ಮಾಡಿ ಕಳಿಸ್ಬೇಡ್ವೆ?"

"ನಾನು ಮದುವೆಯಾಗುಲ್ಲ. ನನಗೆ ನಿನ್ನನ್ನಿಬಿಟ್ಟು ಹೋಗೋಕೆ ಇಷ್ಟವಿಲ್ಲ."

"ನನಗೋಸ್ಕರ ನೀನೇನೂ ಹಾಗೇ ಉಳ್ಕೋಬೇಕಾಗಿಲ್ಲ. ನಿನ್ನ ಮದುವೆ ಆಗದೇ ಇದ್ರೆ, ನಿನ್ನ ತಂಗೀರೂ ಹಾಗೇ ಉಳಿದು ಬಿಡ್ತಾರೆ ಅಷ್ಟೇ..."

"ಅವ್ರು ಬೇಕಾದ್ರೆ ಮದ್ವೆಯಾಗ್ಲೀ.... ನನಗೋಸ್ಕರ ಅವ್ರು ಹಾಗೇ ಉಳ್ಕೋಬೇಕಾಗಿಲ್ಲ..."

"ಯಾರ್ಗೋಸ್ಕರ ಯಾರೂ ಒದ್ದಾಡ್ಬೇಡಿ. ಪ್ರಶಾಂತ ಮನೆ ಬಿಟ್ಟು ಹೋದ... ಅವ್ನ ಹಿಂದೆ ಯಾರೂ ಹೋಗಿಲ್ಲವಲ್ಲ... ನನ್ನನ್ಮರ್ತು ಎಲ್ಲೊ ತಿರುಗಾಡಿಕೊಂಡಿದಾನಲ್ಲ.... ಅವ್ನ ಬಗ್ಗೆ ಯಾರೂ ಎಂದಾದ್ರೂ ಚಿಂತ್ಸಿದೀರಾ....?" ತಾಯಿಯ ಕಣ್ಣುಗಳಿಂದ ನೀರು ಇಳಿಯುವುದನ್ನು ಕಂಡು ವಿದ್ಯಾ ಸುಮ್ಮನಾದಳು.

"ಅಪ್ಪ ಏನಂದ್ರೇ ಪುಸ್ಸೀ....?"

"ಏನೂ ಹೇಳ್ಲಿಲ್ಲ. ಕಾಗದಾನ ಓದಿ ಪಕ್ಕಕ್ಕಿಟ್ಟು ಬಿಟ್ರು..."

"ನೀನ್ಹೋಗ್ತಿಯೇನೇ ಪುಸ್ಸೀ.... ಚಿಕ್ಕಮ್ಮನ ಮನೆಗೆ?"

"ಇಲ್ಲಪ್ಪಾ.... ನಾನ್ಯಾಕ್ಹೋಗ್ಲೀ.... ನಂಗೆ ಸ್ಕೂಲಿಲ್ವಾ... ಆಬ್ಸೆಂಟ್ ಆದ್ರೆ ಟೀಚರ್ ಫೈನ್ ಹಾಕ್ತಾರೆ..."

"ಯಾರೂ ಹೋಗ್ಬೇಡಿ. ನಾನೇ ಹೋಗ್ತೀನಿ. ನನ್ನ ತಂಗಿ ಮನೆಗೆ ಹೋಗೋಕೆ ನಾನ್ಯಾಕೆ ಚಿಂತಿಸ್ಬೇಕು?" ಪ್ರೇಮ ನುಡಿದಳು.

"ಸರಿ, ಅಪ್ಪ ನಿನ್ನನ್ಕಳಿಸ್ತಾರಾ? ಎಂದಾದ್ರೂ ಯಾರ್ಮನೇಗಾದ್ರೂ ಹೋಗಿದೀಯ? ಅಲ್ದೇ ಈಗ ನಿನಗೆ ಹುಷಾರಿಲ್ಲ. ಅಲ್ಲಿ ನಿನ್ನನ್ಯಾರು ನೋಡ್ಕೋಳ್ತಾರೆ...?"

"ನಂಗೇನಾಗಿದೆ? ಹುಷಾರಾಗಿಯೇ ಇದೀನಿ. ಮನೇಲಿ ಮಾಡುಕ್ಕೆ ಕೆಲ್ಸವಿಲ್ಲ. ಮಲಗಿರ್ತೀನಿ..."

"ಹಾಗಾದ್ರೆ ಮತ್ಯಾಕೆ ಬಂದಿದ್ರು ಡಾಕ್ಟ್ರು...?"

"ಏನೋ ಸ್ವಲ್ಪ ತಲೆ ಸುತ್ತು ಬಂದಿತ್ತು. ಈಗ ಎಲ್ಲಾ ಸರಿಯಾಗಿದೆ. ಹೋಗು ಶಾರದಮ್ಮಂಗೆ ಎಲ್ರಿಗೂ ತಿಂಡಿ ಕೊಡೋಕೆ ಹೇಳು. ಬೇಗ ಬೇಗ ಎಲ್ಲಾ ಸ್ನಾನ ಮಾಡಿ". ಪ್ರೇಮ ಮಕ್ಕಳನ್ನು ಹೊರಕ್ಕೆ ಕಳಿಸಿದಳು. ಮತ್ತೆ ಆಲೋಚನೆಯ ಮಡುವಿಗೆ ಧುಮುಕಿದಳು. ವಿದ್ಯಾಳನ್ನು ಕರೆದೊಯ್ಯಲು ಗೌತಮ ಬಂದಿದ್ದಾನೆ. ಇದೆಲ್ಲಾ ತನ್ನ ಗಂಡನದೇ ಉಪಾಯ. ನನಗೊಬ್ಬಳು ತಂಗಿ ಇದಾಳೆ ಎನ್ನುವುದನ್ನೇ ಮರೆತಿದ್ದ ಮಹಾಶಯನಿಗೆ ಈಗ ಅವಳ ನೆರವು ಬೇಕಾಗಿದೆ. ಎಷ್ಟು ಸ್ವಾರ್ಥಿ! ಗಂಡನ ಮೇಲಿನ ತಿರಸ್ಕಾರ ಮತ್ತೂ ಹೆಚ್ಚಾಯಿತು.

* * *

ಎಲ್ಲರೂ ತಿಂಡಿಯನ್ನು ತಿನ್ನುವಾಗ, ಭಟ್ಟ ಮಾತನ್ನೆತ್ತಿದ. "ನಿಮ್ಮಮ್ಮಂಗೆ ಏನು ಹುಷಾರಿಲ್ಲ? ನಮಗ್ಯಾರಿಗೂ ತಿಳಿಸ್ಲೇ ಇಲ್ಲ?"

"ಏನೋ ನಂಗೊತ್ತಿಲ್ಲ. ದೊಡ್ಡಮ್ಮಂಗ್ಹೂ ಹುಷಾರಿಲ್ವಂತೆ?"

"ಹೂಂ ಸ್ವಲ್ಪ ಹುಷಾರಿರಲಿಲ್ಲ. ಈಗ ಪರವಾಗಿಲ್ಲ. ನಿಮ್ಮಮ್ಮಂಗೆ ಡಾಕ್ಟ್ರು ರೆಸ್ಟ್ ಹೇಳಿದಾರಂತೆ.... ಯಾಕೆ ಅಂತ...?"

"ಏನೋ ಒಂದು ಆಪರೇಷನ್ ಆಯ್ತು... ಈಗ ಪರವಾಗಿಲ್ಲ."

"ಆಪರೇಷನ್ ಮೇಜರ್ರೋ ಮೈನರ್ರೋ...?"

"ಮೇಜರ್ರು, ಅದಕ್ಕೇ ರೆಸ್ಟ್ ಹೇಳಿರುವುದು. ಅಪ್ಪಾನೇ ರಜ ಹಾಕಿ ನೋಡ್ಕೊಂಡ್ರು ಈಗ ಅವ್ರಿಗೂ ರಜ ಇಲ್ಲ. ಅದಕ್ಕೇ...."

"ಸರಿ. ನಮ್ಮ ವಿದ್ಯಾನ್ನ ಕಳಿಸ್ಕೊಡ್ತೀನಿ.... ಯಾವಾಗ್ ಹೊರಡ್ತೀರಿ....?"

"ನಾಳೇನೇ ಹೊರಡ್ತೀನಿ...."

"ಸರಿ ಹಾಗೇ ಮಾಡು.... ತಾಯೀ, ನಿನ್ನ ಬಟ್ಟೆಗಳನ್ನು ಪ್ಯಾಕ್ ಮಾಡ್ಕೋ."

"ಅಪ್ಪ ನಾನ್ ಹೋಗುಲ್ಲ..... ಕಾಲೇಜು ಇದೆ." ವಿದ್ಯಾ ಗೊಣಗಿದಳು.

"ಈಗ ನಿನ್ನ ಚಿಕ್ಕಮ್ಮಂಗೆ ನಿನ್ನ ಅಗತ್ಯವಿದೆ. ಸದ್ಯಕ್ಕೆ ಕಾಲೇಜಿಗೆ ರಜ ಹಾಕು.... ನಾನು ಹೇಳಿದಷ್ಟು ಮಾಡು..."

"ಇಲ್ಲಿ ಅಮ್ಮಂಗೇ..."

"ನಿಮ್ಮಮ್ಮಂಗೆ ನೀನೊಬ್ಬೇ ಮಗ್ಳಲ್ಲ. ಇನ್ನೂ ಇಬ್ರಿದಾರೆ.." ಭಟ್ಟ ಧ್ವನಿ ಏರಿಸಿ ನುಡಿದಾಗ ಎಲ್ರೂ ಮೆತ್ತಗಾದರು. ಮಾತಿಲ್ಲದೇ ತಿಂಡಿ ತಿಂದು ಎದ್ದರು. ಭಟ್ಟ ಎದ್ದು ಹೋಗಿದ್ದ.

"ಗೌತಮ್.... ನಾನು ನಿನ್ಜತೆ ಬರುಲ್ಲ. ಚಿಕ್ಕಮ್ಮಂಗೆ ಹೇಳ್ಬಿಡು.."

"ಏಯ್ ಪೆದ್ದೇ.... ಈ ಜೈಲ್ನಿಂದ ನಾಲ್ಕು ದಿನ ಹೊರಗೆ ಓಡಾಡೋ ಪರ್ಮಿಷನ್ ಸಿಕ್ಕಿದೆ. ಸುಮ್ನೆ ಬಾ.... ಲೈಫು ಬೇರೆ ತರಹಾನೂ ಇರುತ್ತೆ ಅಂತ ತಿಳಿ ಯುತ್ತೆ."

"ನಿಂಗೊತ್ತಿಲ್ಲ ಗೌತಮ್.... ಕಾಲೇಜು ತಪ್ಪುತ್ತಲ್ಲ..."

"ಕಾಲೇಜ್ಗೆ ಬಂಕ್ ಹೊಡ್ಯೋಕೆ ಹುಡ್ಗೀರು ಕಾಯ್ತಿರ್ತಾರೆ. ನೀನೇನು ಹಳ್ಳಿ ಗುಗು ತರಹ ಆಡ್ತೀಯ? ನಾಲ್ಕು ದಿನ ಬೆಂಗಳೂರಿನ ಮೈನ್ ರೋಡಿನಲ್ಲಿ ಓಡಾಡು. ಆಮೇಲೆ ನಿನಗೆ ಈ ಊರಿಗೇ ಬರುಕ್ಕೆ ಮನಸ್ಸಾಗುಲ್ಲ."

"ಅಪ್ಪ ಹೇಲಿದ್ದನ್ನೆಲ್ಲ ಕೇಳ್ಬೇಕೂಂತ ಏನಿಲ್ಲ."

"ಸರಿ ಹಾಗಾದ್ರೆ, ನಿನ್ನ ಚಿಕ್ಕಮ್ಮಂಗೆ ಹೆಲ್ಪ್ ಮಾಡೋಕೆ ನಿನಗಿಷ್ಟವಿಲ್ಲ."

"ಹಾಗೇನಿಲ್ಲ. ನನಗೆ ಏನೂ ಕೆಲಸ ಬರುಲ್ಲ ಗೌತಮ್...."

"ಅಮ್ಮ ಹೇಳಿಕೊಡ್ತಾಳೆ. ಅದೂ ಒಂದು ಥರ ಚೇಂಜ್..... ಹೀಗೇ ಇಲ್ಲೇ ಕೊಳೀಬೇಕೂಂತಿದ್ರೆ ಅದು ನಿನ್ನಿಷ್ಟ. ಈಗ ಒಂದವ್ಕಾಶ ಸಿಕ್ಕಿದೆ. ಸುಮ್ನೇ ಹೊರ್ಡು. ಬಿ.ಎ. ಡಿಗ್ರಿ ತಗೊಂಡು ನೀನೇನ್ಮಾಡ್ಬೇಕಾಗಿದೆ? ಮುಂದೆ ನೀನೂ ಲಾ ಓದಿ

ಲಾಯರ್ರಾಗ್ತೀಯ?" ಅವನು ಕಿಸಿಕಿಸಿ ನಕ್ಕ.

"ಥೂ ನಾನ್ ಲಾಯರ್ರ್ ಮಾತ್ರ ಆಗುಲ್ಲ... ಯಾರ್ಗೆ ಬೇಕಾಗಿದೆ ಈ ಲಾ?"

"ಸರಿ ಮತ್ತೆ. ಬಿ.ಎ. ಪಾಸ್ಮಾಡುಕ್ಕೆ ಏನ್ಕಷ್ಟ ಪಡ್ಬೇಕು? ನನಗೆ ಹಿಸ್ಟರಿ, ಜಾಗ್ರಫಿ, ಸೋಶಿಯಾಲಜಿ ಎಲ್ಲ ಗೊತ್ತಿರೋ ಒಬ್ಬ ಫ್ರೆಂಡ್ ಇದಾನೆ. ಅವ್ನು ಹೇಳ್ಕೊಡ್ತಾನೆ. ಏನೂ ಓದ್ದೇ ಫಸ್ಟ್ ಕ್ಲಾಸ್ನಲ್ಲಿ ಪಾಸಾಗ್ಬಹುದು."

"ಇವ್ನ ಮಾತ್ನ ನಂಬಬೇಡ್ವೇ... ಬರೀ ಡೋಂಗೀ.... ನೀನು ಬರ್ಲಿ ಅಂತ ಹೀಗೆ ಹೇಳ್ತಿದ್ದಾನೆ...." ಸಂತೋಷ ನುಡಿದ.

"ನೀನು ಸುಮ್ನಿರು.... ನಾನ್ಹೋದ್ರೆ ನಿಂಗೇನ್ಕಷ್ಟ...!"

"ಇಲ್ಲಮ್ಮ ನಂಗೇನ್ಕಷ್ಟವಿಲ್ಲ. ಹಾಯಾಗಿರ್ತೀನಿ...."

"ಸರಿ ಮತ್ತೆ, ತೆಪ್ಪಗೆ ಕೂತ್ಕೋ...." ವಿದ್ಯಾ ಗದರಿದಳು.

ಆ ದಿನವೆಲ್ಲಾ ಯೋಚಿಸಿ ಯೋಚಿಸಿ, ಕಡೆಗೂ ಚಿಕ್ಕಮ್ಮನ ಮನೆಗೆ ಹೋಗಿ ಬರುವುದೆಂದು ನಿರ್ಧರಿಸಿದಳು. ಹೊರಡುವ ಮೊದಲು, ಕಿಶೋರನನ್ನೊಮ್ಮೆ ಭೇಟಿ ಮಾಡಿ ಮಾತಾಡಿಸಿಕೊಂಡು ಬರಬೇಕೆಂದು ಹೊರಟಳು. ಮುಂಬಾಗಿಲ ಬಳಿ ಭಟ್ಟ ಅವಳನ್ನು ತಡೆದು ಪ್ರಶ್ನಿಸಿದ. "ಎಲ್ಹೊರ್ಟೆ ಇಷ್ಹೊತ್ನಲ್ಲಿ? ಪ್ಯಾಕ್ ಮಾಡ್ಕೊಂಡಾಯ್ತಾ?"

"ಹುಂ ಆಯ್ತು. ನನ್ ಫ್ರೆಂಡ್ ಮನೆಗ್ಹೋಗಿ ಲೀವ್ ಲೆಟರ್ ಕೊಟ್ಬರ್ತೀನಿ."

"ಈಗ ಹೋಗೋದೇನ್ಬೇಡ. ನಾಳೆ ಬೆಳಿಗ್ಗೆ ಪುಸ್ಸಿ ಕೈಲಿ ಕಳ್ಸಿದರಾಯ್ತು."

"ಸ್ವಲ್ಪ ಕಾಮಾಕ್ಷಿ ಅತ್ತೆ ಮನೆಗ್ಹೋಗ್ಬರ್ತೀನಿ."

"ಅಲ್ಲೇನ್ಕೆಲ್ಸ? ಏನೂ ಬೇಡ. ನಡೀ ಒಳಗೆ." ವಿದ್ಯಾ ಅಸಹನೆಯಿಂದ ಹಲ್ಲು ಕಡಿದಳು. ಮುಖವನ್ನೂದಿಸಿಕೊಂಡು ಒಳಬಂದಳು.

ಆ ರಾತ್ರಿ ಕಳೆಯಿತು. ಬೆಳಗ್ಗಿನ ಮೊದಲ ಬಸ್ಸಿಗೇ ಹೊರಟಿದ್ದರು. ಭಟ್ಟ ತಾನೇ ಬಸ್ ಸ್ಟ್ಯಾಂಡಿಗೆ ಕರೆದುಕೊಂಡು ಹೋಗಿ ಬಸ್ಸು ಹತ್ತಿಸಿದ. "ತಲುಪಿದ್ಕೂಡ್ಲೇ ಫೋನ್ ಮಾಡು." ಭಟ್ಟ ಗೌತಮನಿಗೆ ಹೇಳಿದ. ಮಗಳ ಕಡೆ ನೋಡಿದರೂ, ಅವಳು ಸುಮ್ಮನೆ ಕುಳಿತಿದ್ದಳು. ಅವಳ ಕೋಪ ಇನ್ನೂ ಕಡಿಮೆ ಆಗಿರಲಿಲ್ಲ.

ಭಟ್ಟ ಮನೆಗೆ ವಾಪಸ್ಸಾದ. ಕೆಲವು ಸಮಯದ ಅನಂತರ ಕಾಮಾಕ್ಷಿ ಬಂದಳು. ಸೀದಾ ಭಟ್ಟನ ಎದುರಿಗೆ ನಿಂತಳು. "ಅಂತೂ ಮಗಳ್ನೂ ಮನೆಯಿಂದಾಚೆ ಕಳಿಸ್ದೆ ನೀನು" ಚುಚ್ಚುವಂತೆ ನುಡಿದಳು.

"ನಿಂಗ್ಯಾಕೆ ಬೇಸ್ರ?" ಅಣಕಿಸುವಂತೆ ಕೇಳಿದ.

"ನಂಗೇನು ಬೇಸ್ರವಿಲ್ಲ. ಬೇಸ್ರವೆಲ್ಲಾ ನಿನ್ಹೆಂಡ್ತಿಗೆ. ಒಬ್ಬೊಬ್ರನ್ನಾಗಿ ಮನೆಯಿಂದಾಚೆ ಕಳಿಸ್ತಿದೀಯಲ್ಲ ಅದೇ ಸಂಕ್ಟ ಅವಳ್ಗೆ."

"ಇನ್ನೇನು? ನಿನ್ನ ಮಗನ್ಗೆ ಧಾರೆ ಎರೆದ್ಕೊಡ್ಬೇಕಾಗಿತ್ತಾ?"

"ಆ ಆಸೆ ನಂಗಿಲ್ಲಾಂತ ಅವತ್ತೇ ಹೇಳ್ದೆ..... ಈ ಉಪಾಯಾನೂ ನಂದೇ ತಾನೇ?"

"ತುಂಬಾ ಉಪ್ಕಾರಾಯ್ತು ನಿನ್ನಿಂದ." ವ್ಯಂಗ್ಯವಾಗಿ ನುಡಿದು ಕೈ ಮುಗಿದ.

"ಇನ್ನಾದ್ರೂ ಎಚ್ಚೆತ್ಕೋ... ನಿಮ್ಮಕ್ಳು ನಿಂಗಿಂತ ಪ್ರಚಂಡರು. ನಿನ್ನನ್ನೊಂಟಿಯಾಗಿ ಬಿಟ್ಟು ಎಲ್ರೂ ಹೊರ್ಟು ಹೋಗ್ತಾರೆ. ಮನೆ ಜಂತಿ ಎಣಿಸ್ಕೊಂಡು ಕೂತಿರ ಬೇಕಾಗುತ್ತೆ ಅಷ್ಟೇ!"

"ಇದೇನು ಶಾಪಾನೋ.... ಬೆದರಿಕೇನೋ?" ಮೆಲುವಾಗಿ ನಕ್ಕ.

"ಇದು ನನ್ನೆಚ್ಚರ್ಕೆ ಮಾತು. ನಿನ್ಹೆಂಡ್ತಿ, ನಿಮ್ಮಕ್ಳು ನಿಂಗೆ ಶಾಪ ಹಾಕ್ದೇ ಬಿಟ್ಟಾರಾ? ಇನ್ನಾದ್ರೂ ಬದ್ಲಾಗು."

"ಸಾಕ್ಮಾಡು ನಿನ್ನುಪದೇಶಾನಾ. ಈ ಮಾತ್ನೆಲ್ಲ ಕೇಳೋಕೆ ನಂಗೆ ಸಮ್ಯ ಇಲ್ಲ...."

"ನಂಗೊಬ್ಳಿಗೇ ನಿನ್ನೆದ್ರು ನಿಂತು ಇಷ್ಟು ಹೇಳೋ ಧೈರ್ಯ ಇರೋದು. ನಾನು ಹೇಳೇ ಹೇಳ್ತೀನಿ ಏನ್ಮಾಡ್ತೀಯ?"

"ಏನಾದ್ರೂ ಮಾಡ್ಕೋ... ನೀನೊಂಥರ ಭಂಡ ಹೆಂಗ್ಸು..."

"ಈ ಭಂಡ ಹೆಂಗ್ಸೇ ಬೇಕಿತ್ತಲ್ವ ನಿಂಗೆ? ಈಗನ್ಸುತ್ತೆ.... ನಾ ನಿನ್ನ ಮದ್ವೆಯಾಗಿ ನಿನ್ನ ಸರಿಯಾದ ದಾರಿಗೆ ತರ್ಬೇಕಾಗಿತ್ತು...." ಒಂಥರ ನಕ್ಕಳು.

"ಈಗ ನೀ ಹೋಗ್ತೀಯೋ ಇಲ್ವೋ...." ತೋರು ಬೆರಳನ್ನು ತೋರಿ ಹೇಳಿದ. ಅಲ್ಲಿಂದ ಕಾಮಾಕ್ಷಿ ಪ್ರೇಮಳೊಡನೆ ಮಾತಾಡಲೆಂದು ಒಳಗೆ ಬಂದಳು.

* * *

ಬಸ್ಸಿನಲ್ಲಿ ಕುಳಿತ ವಿದ್ಯಾಳಿಗೆ ಬೆಂಗಳೂರನ್ನು ಯಾವಾಗ ತಲುಪುತ್ತೇವೋ ಎಂಬ ತವಕ. "ಎಷ್ಟೊತ್ತಿಗೆ ಊರು ಸೇರ್ತೀವಿ?" ಎಂದು ಆಗಾಗ್ಗೆ ಗೌತಮನನ್ನು ಕೇಳುತ್ತಾ ಇದ್ದಳು.

"ತಿನ್ನಕ್ಕೇನಾದ್ರೂ ಬೇಕಾ?" ಒಂದು ಕಡೆ ಬಸ್ಸನ್ನು ನಿಲ್ಲಿಸಿದಾಗ ಕೇಳಿದ್ದ.

"ಏನೂ ಬೇಡ. ಅವೆಲ್ಲಾ ಆರೋಗ್ಯಕ್ಕೆ ಒಳ್ಳೇದಲ್ಲ..."

"ಅಡುಗೂಲಜ್ಜಿ ಥರ ಆಡ್ಬೇಡ. ಒಂದಿನ ತಿಂದ್ರೆ ಏನಾಗುಲ್ಲ....." ಎಂದು ಹೇಳಿ ಕೆಳಗಿಳಿದು ಹೋಗಿ ವಡೆಗಳನ್ನು ಚಟ್ನಿಯನ್ನು ಕಟ್ಟಿಸಿಕೊಂಡು ಬಂದ. ಬಸ್ಸಿನಲ್ಲಿ ಕುಳಿತು ತಿನ್ನಲು ನಾಚಿಕೆ ಎನಿಸಿತ್ತು. ಕಾಫಿಯನ್ನು ತಂದುಕೊಟ್ಟ.

"ಥೂ, ಕಾಫಿ ಏನೇನೂ ಚೆನ್ನಾಗಿಲ್ಲ. ಬೇಗ ಮನೆಗ್ಹೋಗಿ ಅಮ್ಮನ ಕೈಯ ಕಾಫಿ ಕುಡಿದ್ರೆ ಸಾಕು ಅಂತನ್ನಿಸ್ತಿದೆ."

"ನಿಮ್ಮನೇಲಿ ಅಡ್ಗೆಯೋರಲ್ವಾ ಗೌತಮ.....?"

"ನಾವು ನಿಮ್ಮಷ್ಟು ಶ್ರೀಮಂತ್ರಲ್ಲ ವಿದ್ಯಾ. ನಮ್ಮನೇಲಿ ನಮ್ಮಮ್ಮ ಕೆಲ್ಸಾನ

ನಾವೇ ಮಾಡ್ಕೊಳ್ತೀವಿ... ನಿಂಗೂ ಅಭ್ಯಾಸವಾಗುತ್ತೆ ನೋಡ್ತಿರು."

"ಅದಕ್ಕೇ ಹೇಳಿದ್ದು. ನಂಗೇನು ಕೆಲ್ಸ ಬರುಲ್ಲ ಅಂತ."

"ಬರ್ದೇ ಇದ್ರೇನಾಯ್ತು? ಕಲಿತ್ರಾಯ್ತು.."

"ನಿಮ್ಮಪ್ಪ ಹೇಗೆ?"

"ಅವರೊಂಥರಾ.... ಕೆಟ್ಟೋರೇನಲ್ಲ.... ಆದ್ರೆ ಮನೆ ಯಜ್ಮಾನಿಕೆ ಎಲ್ಲಾ ಅಮ್ಮಂದೇ.... ಅಪ್ಪ ಯಾವ್ತಂಟೆಗೂ ಬರುಲ್ಲ.... ಆದ್ರೂ ನಮ್ಗೆಲ್ಲ ನಮ್ಮಪ್ಪನ್ಕಂಡ್ರೆ ಭಾಳ ಇಷ್ಟ.... ನಿಮ್ಮನೇಲಿ ನಿಮ್ಮಪ್ಪನ್ಮಾತೇ ನಡೀಬೇಕಂತೆ....? ಶಿಸ್ತಿನ ಸಿಪಾಯಿ ಥರಾ ಆಡ್ತಾರಂತೆ?" ಗೌತಮ ನಕ್ಕ. ಅವಳು ಕೆಟ್ಟ ಮುಖ ಮಾಡಿದಳು.

"ಹೌದು ಗೌತಮ... ಅದ್ರಿಂದ್ಲೇ ಪ್ರಶಾಂತ ಸಿಟ್ಮಾಡ್ಕೊಂಡು ಮನೇನೇ ಬಿಟ್ಹೋದ. ಈಗೆಲ್ಲಿದಾನೋ, ಹೇಗಿದಾನೋ ಒಂದೂ ಗೊತ್ತಿಲ್ಲ."

"ಒಳ್ಳೇ ಕೆಲ್ಸ ಮಾಡ್ದ ಬಿಡು. ಫ್ರೀಯಾಗಿದಾನೆ....."

"ಆಂ....! ಆದ್ರೆ ಅಮ್ಮಂಗವನ್ದೇ ಚಿಂತೆ."

"ಮನೆಗೆ ವಾಪಸ್ಸು ಬಾ.... ಅಮ್ಮಂಗೆ ಹುಶಾರಿಲ್ಲ. ಹಾಗೆ-ಹೀಗೆ ಅಂತ ಪೇಪರ್ನಲ್ಲಿ ಹಾಕಿಸ್ಬೇಕಾಗಿತ್ತು. ವಾಪಸ್ಸು ಬರ್ತಿದ್ನೋ ಏನೋ....."

"ಇಲ್ಲ. ಅವನೂ ಹಠವಾದಿ. ನಾನೂ ಹೆಣ್ಣಾಗಿಲ್ದೇ ಹೋಗಿದ್ದಿದ್ರೆ ನಾನು ಎಂದೋ ಮನೆ ಬಿಟ್ಟು ಹೋಗಿರ್ತಿದ್ದೆ."

"ಈಗ್ಲೂ ಏನೀಗ? ಮನೆ ಬಿಟ್ಟು ಹೇಗೂ ಹೊರಕ್ಕೆ ಬಂದಿದೀಯ. ಬೆಂಗ್ಳೂರ್ಲೇ ಉಳ್ಕೊಂಡ್ಬಿಡು."

"ಇಲ್ಲಪ್ಪಾ... ಅಮ್ಮನ್ಬಿಟ್ಟು ಹೇಗಿರೋದು?"

"ಗಂಡನ್ಮನೆಗೂ ಅಮ್ಮನ್ಕರ್ಕೊಂಡು ಹೋಗ್ತೀಯ?" ಅವನು ತಮಾಷೆ ಮಾಡಿದ. ಆಗ ಅವಳಿಗೆ ಕಿಶೋರನ ನೆನಪಾಗಿತ್ತು. ಇದ್ದಕ್ಕಿದ್ದಂತೆ ಸುಮ್ಮನಾಗಿ ಬಿಟ್ಟಳು. ಬಸ್ಸು ಮತ್ತೆ ಹೊರಟಿತ್ತು. ಬೆಂಗಳೂರನ್ನು ಸೇರುವವರೆಗೂ ಮತ್ತೆ ಹೆಚ್ಚು ಮಾತಾಡಲಿಲ್ಲ.

ಮೆಜೆಸ್ಟಿಕ್ ಬಸ್ ಸ್ಟ್ಯಾಂಡಿನಲ್ಲಿ ಆ ಜನಜಂಗುಳಿಯನ್ನು ನೋಡಿ ವಿದ್ಯಾ ಗಾಬರಿಗೊಂಡು, ಗೌತಮನ ಕೈ ಹಿಡಿದಳು. ತಾನೆಲ್ಲಿ ಕಳೆದು ಹೋಗ್ತೀನೋ ಎನ್ನುವ ಭಯ ಅವಳಿಗೆ. ಅವನು ನಸುನಕ್ಕ. ಒಂದು ಆಟೋರಿಕ್ಷಾ ಹಿಡಿದು ಇಬ್ಬರೂ ಮನೆಗೆ ಬಂದರು. ರಸ್ತೆಯಲ್ಲಿ ಅಲ್ಪಸ್ವಲ್ಪ ಬೆಂಗಳೂರಿನ ಪರಿಚಯವನ್ನು ಮಾಡಿಕೊಟ್ಟ.

ಗೇಟು ತೆರೆದು ಒಳಗೆ ಕಾಲಿಡುತ್ತಿದ್ದಂತೆಯೇ ವಿದ್ಯಾ ಮನೆಯ ಅಂದಚೆಂದ ವನ್ನು ನೋಡಿ ಬೆರಗಾದಳು.

"ನಿಮ್ಮನೆ ತುಂಬಾ ಚೆನ್ನಾಗಿದೆ ಕಣೋ.. ಗೌತಮ."

"ಆದ್ರೆ ನಿಮ್ಮನೆಯಷ್ಟು ದೊಡ್ಡದಲ್ಲ...." ಎನ್ನುತ್ತಾ ಒಳಕ್ಕೆ ಕರೆದೊಯ್ದ. ಚಿಕ್ಕಮ್ಮ ವಿದ್ಯಾಳ ಕೈ ಹಿಡಿದು ತನ್ನ ಪಕ್ಕ ಕೂರಿಸಿಕೊಂಡಳು.

"ಹೇಗಿದೀಯ ವಿದ್ಯಾ! ನಿಮ್ಮಮ್ಮ ಹೇಗಿದಾಳೆ! ಎಷ್ಟೊಂದು ವರ್ಷ ಆಗ್ಹೋಯ್ತು ನಿಮ್ಮನ್ನೆಲ್ಲಾ ನೋಡಿ...."

"ನೀವ್ಹೇಗಿದೀರಿ ಚಿಕ್ಕಮ್ಮ....?"

"ನೀನೇ ನೋಡು. ಹೇಗಿದೀನೀಂತ..."

"ಗೌತಮ ಹೇಳ್ದ, ಏನೋ ಆಪರೇಷನ್ನು ಅಂತ."

"ಹುಂ. ಒಂತಿಂಗಳ್ಮೇಲಾಯ್ತು. ಈಗ ಹುಶಾರಾಗಿದೀನಿ.... ಏಳು ಕೈ ಕಾಲ್ತೊಳ್ಕೋ, ತಿಂಡಿ, ಕಾಫಿ ಕೊಡ್ತೀನಿ." ವಿದ್ಯಾ ಮನೆಯ ಅಂದಚೆಂದವನ್ನು ಹೊಗಳಿದಳು.

"ನಿಮ್ಮನೆ ತುಂಬಾ ಸುಂದರವಾಗಿದೆ ಚಿಕ್ಕಮ್ಮ. ಎಷ್ಟು ಚೆನ್ನಾಗಿಟ್ಕೊಂಡಿದೀರಿ..."

"ಹುಂ. ನಿಧಾನವಾಗಿ ಹೊಗ್ಹೋವಂತೆ. ಮೊದ್ಲು ನಿಮ್ಮನೆ ವಿಷ್ಯಗಳನ್ಹೇಳು..." ತಿಂಡಿಯ ತಟ್ಟೆಯನ್ನು ತಂದಿತ್ತಳು.

"ಏನ್ಹೇಳ್ಲಿ ಚಿಕ್ಕಮ್ಮ.... ಪ್ರಶಾಂತ ಅಪ್ಪನ್ಹತ್ರ ಜಗಳ ಆಡ್ಕೊಂಡು ಮನೆ ಬಿಟ್ಟು ಹೋದ. ಅಮ್ಮ ಅದೇ ಕೊರಗ್ನಲ್ಲಿ ಹಗ್ಲೂ ರಾತ್ರಿ ಅಳ್ತಾಳೆ...."

"ನಿಮ್ಮಪ್ಪನ್ಕೋಪ ಇನ್ನೂ ತಣ್ಣಾಗ್ಗಿಲ್ವಾ?"

"ಅಪ್ಪನ್ಸ್ವಭಾವ ನಿಮಗ್ಗೊತ್ತಿಲ್ವಾ ಚಿಕ್ಕಮ್ಮ.... ಅವ್ರದ್ದೇ ಹಠ ಅವ್ರಿಗೆ... ನಂಗಂತೂ ಅಮ್ಮಂದೇ ಚಿಂತೆ..... ಕೊರ್ಗಿ ಕೊರ್ಗಿ ಹಾಗೇ ಸತ್ಹೋಗ್ತಾಳೆ ಅಷ್ಟೇ." ಗಂಟಲುಬ್ಬಿ ಬಂತು, ಕಣ್ಣೀರಿಳಿಯಿತು.

"ತಾಯಿ ಹೃದಯಾಂದ್ರೆ ಹಾಗೇ.... ನಾನಾದ್ರೂ ಬಂದು ನಾಲ್ಕು ದಿನ ಇರೋಣಾಂತಂದ್ರೆ ನಮ್ಮನೇಲಿ ಯಾರಿದಾರೆ? ಊಟ ತಿಂಡಿಗೆ ಕಷ್ಟವಾಗುತ್ತೆ."

"ನಾನಿಲ್ಲಿ ನಾಲ್ಕು ದಿನ ಇರ್ತೀನಲ್ಲ. ನೀವು ಹೋಗಿ ನೋಡ್ಕೊಂಡ್ಬನ್ನಿ."

"ಚೆನ್ನಾಯ್ತು. ನಿನ್ನನ್ನಿಲ್ಲಿಗೆ ಕರ್ಸಿ, ನಾನ್ಹೋದ್ರೆ ಏನ್ಚೆನ್ನ? ನೋಡೋಣ..." ಅಷ್ಟರೊಳಗೆ ಚಿಕ್ಕಮ್ಮನ ಗಂಡ, ಹಾಗೂ ಗೌತಮನ ತಮ್ಮಂದಿರು ಬಂದರು.

"ಏನಮ್ಮ ಹೇಗಿದೀಯ ಶ್ರೀವಿದ್ಯಾ?" ಚಿಕ್ಕಪ್ಪ ವಿಚಾರಿಸಿದರು. ಗೌತಮ ತನ್ನ ತಮ್ಮಂದಿರನ್ನು ಪರಿಚಯಿಸಿದ. ಇವನು ನವೀನ, ಇವನು ಸುಹಾಸ... ಇಬ್ರೂ ಕಾಲೇಜ್ನಲ್ಲಿ ಓದ್ತಿದಾರೆ.... ಇಬ್ಬರೂ ಮುಗುಳ್ನಕ್ಕು ಹಾಯ್ ಎಂದರು. ವಿದ್ಯಾ ಮುಗುಳ್ನಕ್ಕಳು.

* * *

ಅಧ್ಯಾಯ–ಏಳು

ಮನದಿಂ ಮರೆಯಾದನೇ ಕಿಶೋರ

ಕೆಲವೇ ಗಂಟೆಗಳಲ್ಲಿ ವಿದ್ಯಾ ಆ ಮನೆಯವರಲ್ಲಿ ಒಬ್ಬಳಾಗಿಬಿಟ್ಟಳು. ಅವರುಗಳ ಮಾತುಕತೆ, ನಡವಳಿಕೆ ಅವಳಿಗೆ ಹಿಡಿಸಿತು. ತಾನು ಈ ಮನೆಯಲ್ಲಿ ಹುಟ್ಟಿದ್ದರೇ....? ಎಂದೆನಿಸದೇ ಇರಲಿಲ್ಲ.

"ವಿದ್ಯಾ ಬಾ ಇಲ್ಲಿ." ಚಿಕ್ಕಮ್ಮನ ಧ್ವನಿ ಕೇಳಿ ಬೆಚ್ಚಿಬಿದ್ದಳು.

"ಏನ್ ಯೋಚಿಸ್ತಿದ್ದೆ?"

"ಏನಿಲ್ಲ.." ನಾಚಿದಳು.

"ಪರವಾಗಿಲ್ಲ ಹೇಳು..."

"ನಾನು ಈ ಮನೆಯಲ್ಲಿ ಹುಟ್ಟಿದ್ರೆ ಚೆನ್ನಾಗಿತ್ತು ಅಂತ ಯೋಚಿಸ್ತಿದ್ದೆ..."

"ಈ ಮನೇಲಿ ಹುಟ್ಟದಿದ್ರೇನಾಯ್ತು? ನೀನೂ ನನ್ಮಗ್ಳೇ... ನಿಂಗೇನು ಬೇಕೋ ಕೇಳು ನಾಚ್ಕೋ ಬೇಡ..."

"ನಂಗೇನೂ ಬೇಡ ಚಿಕ್ಕಮ್ಮ. ಈ ವಾತಾವರಣ ನಮ್ಮನೇಲಿಲ್ಲ. ಮಾತುಕತೆ, ಹರಟೆ, ತಮಾಷೆ ಯಾವ್ದೂ ಇಲ್ಲ. ಹೀಗಿದ್ರೆ ಎಷ್ಟು ಚೆನ್ನ ಅಲ್ವಾ?"

"ನಿಮ್ಮಪ್ಪ ತುಂಬಾ ಸ್ಟ್ರಿಕ್ಟು.... ಅದಕ್ಕೇ ಹೀಗೇ... ಅವ್ರ ಮಗ್ಳಾಗಿ ಹುಟ್ಟಿ ಇಷ್ಟು ಬೇಜಾರಾದ್ರೆ.... ಪಾಪ ನಮ್ಮಕ್ಕನ್ಗತಿಯೇನು? ಮದ್ವೆಯಾದಾಗ್ನಿಂದ ಆ ಮನೇಲಿ ಬಂಧಿ ಅವ್ಳು.... ಭಾವ ತಾವೂ ಎಲ್ಲಿಗೂ ಕರ್ಕೊಂಡು ಹೋಗ್ಲಿಲ್ಲ. ಎಲ್ಲಿಗೂ ಕಳಿಸ್ಲೂ ಇಲ್ಲ.... ಅವಳಾಗೋ ಹೊತ್ತಿಗೆ ಭಾವನ್ಜೊತೆ ಬಾಳ್ತಿದಾಳೆ. ನಾನಾಗಿದ್ದಿದ್ರೆ ಎಂದೋ ಬಿಟ್ಟು ಹೋಗಿರ್ತಿದ್ದೆ.." ತಾಯಿಯ ನೆನಪು ಉಕ್ಕಿ ಬಂದು ವಿದ್ಯಾ ಅಳತೊಡಗಿದಳು.

"ಅರೇ! ಅಳೋದ್ಯಾಕೆ? ನಿಮ್ಮಮ್ಮಂಗೂ ಒಳ್ಳೆದಿನಗಳು ಬರ್ಲಿ ಅಂತ ಹಾರೈಸೋಣ.... ನನ್ಮಕ್ಳು ನೀನಳೋದನ್ನ ನೋಡಿದ್ರೆ ಗೇಲಿ ಮಾಡುತ್ವೆ.. ಹೆಣ್ಮಕ್ಳು ಅಂದ್ರೆ ಅಳುಬುರುಕಿಗಳು ಅಂತ ಅವ್ರ ಭಾವನೆ... ಅವುಗಳೆದುರ್ಗೆ ಮರ್ರೂ ಅಳ್ಬೇಡ..."

"ಆಗಲಿ ಚಿಕ್ಕಮ್ಮ..." ವಿದ್ಯಾ ಕಣ್ಣೊರೆಸಿಕೊಂಡಳು.

* * *

ನಾಲ್ಕೈದು ದಿನಗಳು ಕಳೆಯುವಷ್ಟರಲ್ಲಿ ವಿದ್ಯಾ ಅವರುಗಳೊಂದಿಗೆ ಚೆನ್ನಾಗಿ

ಹೊಂದಿಕೊಂಡುಬಿಟ್ಟಳು. ಕ್ಷಣಕ್ಷಣಕ್ಕೂ ತನ್ನ ಮನೆಗೂ, ಇಲ್ಲಿಯ ವಾತಾವರಣಕ್ಕೂ ಇರುವ ವ್ಯತ್ಯಾಸವನ್ನು ಗಮನಿಸುತ್ತಿದ್ದಳು. ಇಲ್ಲಿ ಒಬ್ಬರ ಮೇಲೊಬ್ಬರಿಗೆ ಇರುವ ಪ್ರೀತಿ, ವಿಶ್ವಾಸ, ನಂಬಿಕೆಯನ್ನು; ತಂದೆ ತಾಯಿ ಮಕ್ಕಳಿಗೆ ಕೊಟ್ಟಿರುವ ಸ್ವಾತಂತ್ರ್ಯವನ್ನು ಕಂಡು ಆಶ್ಚರ್ಯಪಟ್ಟಳು. ಚಿಕ್ಕಪ್ಪನಂತೂ, ಚಿಕ್ಕಮ್ಮನ್ನ ಸ್ನೇಹಿತೆಯೆಂಬಂತೆ ಮಾತನಾಡಿಸುತ್ತಿದ್ದರು. ಚಿಕ್ಕಮ್ಮನೂ ಅಷ್ಟೇ, ಗಂಡನೊಡನೆ ಸಲುಗೆಯಿಂದ ತಮಾಷೆ ಮಾಡುತ್ತಿ ದ್ದಳು. ಅವರಿಬ್ಬರ ಸರಸ ಸಂಭಾಷಣೆಗಳಲ್ಲಿ ಮಕ್ಕಳೂ ಪಾಲ್ಗೊಳ್ಳುತ್ತಿದ್ದರು. ಮೊದ ಮೊದಲು ಇವಳಿಗೆ ಮುಜುಗರವೆನಿಸಿತ್ತು. ಆದರೆ, ಅವರುಗಳು ಇವಳನ್ನು ಹೊರಗಿನವಳೆಂದು ಭಾವಿಸುತ್ತಿರಲಿಲ್ಲ. ಗಂಡು ಹುಡುಗರೋ ಅತೀ ಗಲಾಟೆ, ಗುಲ್ಲೆಬ್ಬಿಸಿ ಕುಣಿದಾಡಿದರೂ, ಯಾರೂ ಯಾರನ್ನು ಬೈಯುತ್ತಿರಲಿಲ್ಲ. ಅವರವರ ಪಾಡಿಗೆ ಸಹಜವಾಗಿ ಇರುತ್ತಿದ್ದರು. ಅವಳಿಗೆ ಪ್ರಶಾಂತನ ನೆನಪು ಅತಿ ಕಾಡಿತ್ತು. ಅವಳ ಅನ್ಯಮನಸ್ಕತೆಯನ್ನು ಗಮನಿಸಿ, ಚಿಕ್ಕಮ್ಮ ವಿಚಾರಿಸಿದ್ದಳು –

" ಯಾಕೆ ವಿದ್ಯಾ ಮಂಕಾಗಿದೀಯ? ಮನೆಯವರ ನೆನಪು ಬಂತಾ?"

"ಪ್ರಶಾಂತ ತುಂಬಾ ನೆನ್ಪಿಗೆ ಬರ್ತಿದಾನೆ ಚಿಕ್ಕಮ್ಮ.... ಅವನೂ ನಿಮ್ಮನೆಗೆ ಬಂದಿದ್ರೆ, ನನ್ನಷ್ಟೇ ಖುಶಿ ಅವನ್ಗೂ ಆಗ್ತಿತ್ತು."

"ಅವ್ನೂ ತಪ್ಮಾಡ್ದ ವಿದ್ಯಾ, ಎಲ್ಲಿದೀನಿ ಹೇಗಿದೀನೀಂತ ಅಕ್ಕಂಗಾದ್ರೂ ತಿಳಿಸ್ಬೋದಾಗಿತ್ತಲ್ವಾ? ಅಕ್ಕನ್ಕೊರ್ಗು ಕಮ್ಮಿಯಾಗ್ತಿತ್ತು."

"ಹೌದು ಚಿಕ್ಕಮ್ಮ, ಎಲ್ಲಿದಾನೇಂತ ಗೊತ್ತಾಗಿದ್ರೆ ನಾನೇ ಹೋಗಿ ಮಾತಾಡಿಸ್ಕೊಂಡ್ಬರ್ತಿದ್ದೆ. ಅವನ್ಕೋಪ ಇನ್ನೂ ಕಡ್ಮೆ ಆಗಿಲ್ಲಾಂತ ಕಾಣುತ್ತೆ."

"ನಾನು ನಿನ್ಚಿಕ್ಕಪ್ಪನ್ಹತ್ರ ಮಾತಾಡ್ತೀನಿ. ಪೇಪರ್ನಲ್ಲಿ ಹಾಕ್ಸೋಣ. ಎಲ್ಲೇ ಇದ್ರೂ ನಮ್ಮನೇಗ್ಬರ್ಲಿ... ಏನಂತೀಯಾ?"

"ಹಾಗೇ ಮಾಡಿ ಚಿಕ್ಕಮ್ಮ....."

"ನಾನೊಂದ್ಮಾತು ಹೇಳ್ಲಾ ವಿದ್ಯಾ.... ಬೇಜಾರ್ಮಾಡ್ಕೋಬಾರ್ದು..."

"ಇಲ್ಲ, ಹೇಳಿ ಚಿಕ್ಕಮ್ಮ...."

"ನೀನೋಡೋಕೆ ಎಷ್ಟು ಚೆನ್ನಾಗಿದೀಯ... ನಿಂಗೆ ಅಲಂಕಾರ ಮಾಡ್ಕೊಳ್ಳೋಕೇ ಬರುಲ್ಲ. ಇಲ್ಲಿ ಸ್ಕೂಲು ಕಾಲೇಜ್ಗೆ ಹೋಗೋ ಹುಡುಗೀರ್ನ ನೋಡು. ಎಷ್ಟು ಫ್ಯಾಷನಬಲಾಗಿರ್ತಾರೆ... ನೀನೂ ಹಾಗೆ ಫ್ಯಾಷನಬಲ್ ಆಗಿ, ಮಾಡರ್ನ್ ಆದ್ರೆ ನೋಡ್ತಿರು... ಯಾರಾದ್ರೂ ರಾಜ್ಕುಮಾರ ಬಂದು ಎಗರಿಸಿಕೊಂಡು ಹೋಗ್ತಾನೆ."

ಅವಳು ಮಂಕಾದಳು. "ನೋಡಿದ್ಯಾ ನನ್ಮಾತು ನಿಂಗ್ಹಿಡಿಸ್ಲಿಲ್ಲ... ನಿನ್ನ ಈ ಹಳೇ ಫ್ಯಾಷನಲ್ಲಿ ನಿನ್ನ ಸೌಂದರ್ಯವೇ ಮುಚ್ಹೋಗಿದೆ ಅಂತ ಹೇಳ್ದೆ..."

"ಪರ್ವಾಗಿಲ್ಲ ಬಿಡಿ ಚಿಕ್ಕಮ್ಮ. ನಂಗೇನೂ ಬೇಸರ್ವಿಲ್ಲ. ನಾನು ಬೇರೆ ಏನೋ ಯೋಚ್ನೆ ಮಾಡ್ತಿದ್ದೆ."

"ನೀನು ಜಾಣೆ, ನೋಡ್ತಿದ್ದಾಗೇ ಕಲಿತ್ಬಿಡ್ತೀಯ... ನನ್ನ ಫ್ರೆಂಡ್ಸ ಮಕ್ಳನ್ನ ನಿಂಗೆ ಪರಿಚಯ ಮಾಡಿಸ್ಕೊಡ್ತೀನಿ.... ಅವರೆಂಥಾ ಡ್ರೆಸ್.ಹಾಕ್ಕೋತಾರೆ.... ಹೇಗೆ ತಲೆ ಬಾಚ್ಕೊಂಡಿರ್ತಾರೆ, ಹೇಗೆ ಮೇಕಪ್ ಮಾಡ್ಕೋತಾರೆ, ಅದ್ನೆಲ್ಲಾ ತಿಳ್ಕೋ.... ನಿಂಗೇ ಒಳ್ಳೇದು."

"ಅಪ್ಪಂಗೆ ಇದೆಲ್ಲಾ ಇಷ್ಟವಾಗುಲ್ಲ ಚಿಕ್ಕಮ್ಮ."

"ನಿಮ್ಮಪ್ಪಂಗೆ ಇನ್ನೆಷ್ಟು ವರ್ಷ ಹೆದರ್ತೀಯ? ಮದ್ವೆ ಆದ್ಮೇಲೆ ನಿನ್ಗಂಡೆರಿಗ್ಹೇಗ್ಬೇಕೋ ಹಾಗ್ತಾನೇ ನೀನಿರ್ಬೇಕು."

ವಿದ್ಯಾಳಿಗೆ ಕಿಶೋರನ ನೆನಪಾಗಿತ್ತು. ಅವನ ವಿಷಯವನ್ನು ಹೇಳಲೋ ಬೇಡವೋ ಅಂತ ಅನುಮಾನಿಸುತ್ತಿದ್ದವಳನ್ನು ಚಿಕ್ಕಮ್ಮ ಎಚ್ಚರಿಸಿದಳು –

"ಏನ್ ಯೋಚಿಸ್ತಿದೀಯ ವಿದ್ಯಾ? ನಾನೇನಾದ್ರೂ ತಪ್ಹೇಳಿದ್ನಾ?"

"ಇಲ್ಲ ಚಿಕ್ಕಮ್ಮ, ನಾನೊಂದ್ವಿಷ್ಯ ನಿಮ್ಗೆ ಹೇಳ್ಬೇಕಾಗಿತ್ತು. ಆದ್ರೆ ನೀವು ಯಾರ್ಗೂ ಈಗ್ಲೇ ಹೇಳ್ಬಾರ್ದು."

ತಾನು ಕಿಶೋರನನ್ನು ಮೆಚ್ಚಿರುವುದಾಗಿ ತಿಳಿಸಿದಳು. "ನಾನು ಅವನ್ಮದ್ವೆಯಾದ್ರೆ ಅಲ್ಲೇ ಮನೆ ಹತ್ರಾನೇ ಇರ್ಬಹ್ದು. ಅಮ್ಮನ್ನ ದಿನಾ ನೋಡ್ಬಹ್ದು..."

"ಈ ಕಾರಣಕ್ಕೆ ಕಿಶೋರನ್ನ ಪ್ರೀತಿಸ್ತಿದೀಯಾ? ನೋಡೋಕೆ ಹೇಗಿದಾನೆ...."

"ನನ್ಹತ್ರ ಅವನ ಫೋಟೋ ಇದೆ ತೋರಿಸ್ಲಾ....?" ಎನ್ನುತ್ತಾ ತನ್ನ ಕಿಟ್ ಬ್ಯಾಗಿನಿಂದ ಕಿಶೋರನ ಚಿಕ್ಕದೊಂದು ಫೋಟೋ ತೆಗೆದು ತೋರಿಸಿದಳು. ಚಿಕ್ಕಮ್ಮ ಗಂಭೀರಳಾದಳು.

"ಇವನ್ಗೂ ನಿನ್ಗೂ ಜೋಡಿ ಖಂಡಿತಾ ಚೆನ್ನಾಗಿರುಲ್ಲ ವಿದ್ಯಾ..." ವಿದ್ಯಾ ಪೆಚ್ಚಾದಳು.

"ನಾನು ಹೀಗ್ಹೇಳ್ತೀನೀಂತ ಬೇಜಾರ್ಮಾಡ್ಕೋ ಬೇಡ, ಇವನ್ಗಿಂತ ಸುಂದರನಾದ, ವಿದ್ಯಾವಂತ ಹುಡುಗನ್ನ ನಾನ್ಹೊಗ್ತಾಮ್ಡತೀನಿ, ಇವನನ್ಮರೆತ್ಬಿಡು...."

"ಮರ್ಯೋಕ್ಕೇಗಾಗುತ್ತೆ ಚಿಕ್ಕಮ್ಮ? ಅವ್ನೂ ನನ್ನನ್ ಪ್ರೀತಿಸ್ತಿದಾನೆ. ಕಾಮಾಕ್ಷಿ ಅತ್ತೆ ತುಂಬಾ ಒಳ್ಳೆಯವ್ರು..."

"ನಿಮ್ಮಪ್ಪಂಗಿಷ್ಟವಾಗುತ್ತಾ ಈ ಸಂಬಂಧ? ಖಂಡಿತಾ ಇಲ್ಲ... ನಿಮ್ಮಪ್ಪನ ಪ್ರತಿಷ್ಠೆಗೆ ಈ ಸಂಬಂಧ ಚೂರೂ ಸರಿಇಲ್ಲ."

"ನಮ್ಮಪ್ಪಂಗೆ ಒಣ ಜಂಭ..... ಅವರಿಗ್ಗೊತ್ತಿಲ್ಲ. ಕಿಶೋರ ತುಂಬಾ ಒಳ್ಳೋನು."

"ನಿಮ್ಮ ಪ್ರಶಾಂತನೂ ಏನೂ ಕೆಟ್ಟೋನಲ್ಲ... ಅವ್ನು ಲಾ ಓದೋಕೆ ಇಷ್ಟ ಪಡ್ಲಿಲ್ಲ ಅಂತ ನಿಮ್ಮಪ್ಪಂಗೆ ಕೋಪ ಅಂತ ನೀನೇ ಹೇಳ್ದೆ. ಹಾಗೇ ಅಳಿಯ ಕೂಡಾ ಲಾಯರ್ರೋ, ಇಂಜಿನೀರೋ, ಡಾಕ್ಟ್ರೋ ಆಗಿರ್ಲಿ ಅಂತ ನಿಮ್ಮಪ್ಪ ಬಯಸಿದ್ರೆ ಅದು ತಪ್ಪಲ್ಲ."

"ನಾನು ಲಾಯರ್ರನ್ನ ಮಾತ್ರ ಮದ್ವೆ ಆಗುಲ್ಲ. ಅವ್ರು ಒಳ್ಳೋರಾಗಿರುಲ್ಲ." ಚಿಕ್ಕಮ್ಮ ನಕ್ಕಳು.

"ಎಲ್ಲಾ ಲಾಯರ್ರೂ ಕೆಟ್ಟೋರಲ್ಲ. ನಿಮ್ಮಪ್ಪ ಸಹ ಕೆಟ್ಟೋರಲ್ಲ. ಏನೋ ಶಿಸ್ತು ಜಾಸ್ತಿ. ಅವರ ರೀತಿ – ನೀತಿ ನಿಮ್ಗೆ ಸರಿ ಹೋಗುಲ್ಲ. ನಿಮ್ಮನ್ನೆಲ್ಲ ಅವ್ರೇನೂ ದ್ವೇಷಿಸುಲ್ಲ. ನೀವುಗಳು ಅವ್ರು ಹೇಳಿದ್ದಾಗೆ ಕೇಳ್ಲಿ ಅಂತ ಬಯಸ್ತಾರೆ ಅಷ್ಟೇ."

"ಇದು ತಪ್ಪಲ್ವಾ ಚಿಕ್ಕಮ್ಮ?"

"ತಪ್ಪು ಅಂತ ನಮಗನ್ನಿಸುತ್ತೆ. ಸರಿ ಅಂತ ಅವರ್ಗನ್ನಿಸುತ್ತೆ. ಅವ್ರು ಕಿಶೋರನ್ನ ಒಪ್ದೇ ಇದ್ರೆ ಏನ್ಮಾಡ್ತೀಯ?"

"ಅವನ್ಜೊತೆ ಓಡ್ಹೋಗ್ತೀನಿ..." ಚಿಕ್ಕಮ್ಮ ಪಕಪಕನೆ ನಕ್ಕಳು.

"ಕಿಶೋರ ಇದಕ್ಕೆ ಸಿದ್ಧನಾಗಿದಾನಾ? ಕೇಳಿದೀಯ?"

"ಏನೋ ನಂಗೊತ್ತಿಲ್ಲ."

"ಇದ್ರಿಂದ ನಿಮ್ಮನೆಯವ್ರ, ಕಾಮಾಕ್ಷಿ ಮನೆಯವ್ರ ಸಂಬಂಧ ಕೆಡ್ಬಹುದು. ಕಿಶೋರನ್ನ ನಿಮ್ಮಪ್ಪ ದ್ವೇಷಿಸ್ಬಹ್ದು. ಬಾಯಿಗೆ ಬಂದಂತೆ ಬಯ್ಯಬಹ್ದು. ಅಲ್ಲೇ ಹತ್ರ ದಲ್ಲಿದ್ರೂ ನಿಂಗೆ ನಿಮ್ಮಮ್ಮನ ನೋಡೋಕೆ ಬಿಡ್ದೇ ಇರ್ಬಹುದು... ಆಗ ನಿನ್ನ ಕಿಶೋರ ಕೂಡ ಏನೂ ಮಾಡೋಕ್ಕಾಗುಲ್ಲ. ಅಸಹಾಯಕನಾಗ್ಬಿಡ್ತಾನೆ. ಆಗ ನಿಂಗೆ ಅವನ್ಮೇಲೂ ಅಸಹ್ಯ ಹುಟ್ಟಹುದು. ನಿಮ್ಮಪ್ಪ ಅವನ್ಗೆ ಅವಮಾನ ಮಾಡಿದ್ರೆ ನಿನ್ನಿಂದ ಸಹಿಸುಕ್ಕೆ ಆಗ್ದೇ ಹೋಗ್ಬಹುದು. ಅಥವಾ ಕಿಶೋರ ನಿಮ್ಮಪ್ಪನ್ನ ತಿರಸ್ಕಾರ್ದಿಂದ ನೋಡಿದ್ರೆ ಅದ್ನೂ ನಿನ್ಕೈಲಿ ಸಹಿಸುಕ್ಕಾಗ್ದೆ ಹೋಗ್ಬಹುದು. ಇದನ್ನೆಲ್ಲಾ ಯೋಚ್ಸಿ ದೀಯ?"

ವಿದ್ಯಾ ಮುಖವನ್ನು ಕೈಗಳಿಂದ ಮುಚ್ಚಿಕೊಂಡು ನಿಶ್ಶಬ್ದವಾಗಿ ಅಳತೊಡಗಿ ದಳು. "ಅಳ್ಬೇಡ ವಿದ್ಯಾ ಧೈರ್ಯ ತಂದ್ಕೋ... ನಿಧಾನವಾಗಿ ಯೋಚ್ಸು. ದುಡುಕ್ಬೇಡ. ಕಿಶೋರನ್ಹತ್ರ ಮಾತಾಡು. ಏನೇ ಸಮಸ್ಯೆ ಬಂದ್ರೂ ಇಬ್ರೂ ಒಟ್ಟಾಗಿ ಎದುರಿಸ್ತೀವಿ ಅನ್ನೋ ಧೈರ್ಯ ಇದ್ರೆ ಖಂಡಿತಾ ಮದ್ವೆಯಾಗಿ. ನಾನೇ ಕಾಮಾಕ್ಷಿ ಹತ್ರ ಮಾತಾ ಡ್ತೀನಿ ......"

"ಚಿಕ್ಕಮ್ಮ ನೀವು ತುಂಬಾ ಒಳ್ಳೋರು..." ವಿದ್ಯಾ ಚಿಕ್ಕಮ್ಮನ ಕೈಗಳನ್ನು ಹಿಡಿದಳು.

"ಏಳು, ಮುಖ ತೊಳ್ಕೋ. ಬೇರೆ ಸೀರೆ ಉಟ್ಕೋ.. ಹೊರ್ಗೆಲ್ಲಾದ್ರೂ ಹೋಗಿ ಬರೋಣ."

"ನಿಮ್ಗೆ ಹುಶಾರಿಲ್ವಲ್ಲಾ ಚಿಕ್ಕಮ್ಮ. ಆಯಾಸ ಆಗುಲ್ವಾ?"

"ನಂಗಂತೂ ಮನೇಲಿ ಕೂತಿರೋದೂಂದ್ರೆ ಬೇಜಾರು..... ಗೌತಮಂಗ್ಹೇಳಿದ್ರೆ ಜತೆಗ್ಬರ್ತಾನೆ. ಟಾಕ್ಸೀಲಿ ಹೋಗೋಣ. ಕಬ್ಬನ್ ಪಾರ್ಕ್, ಮ್ಯೂಸಿಯಮ್, ಲಾಲ್

ಬಾಗ್, ಹೀಗೇ ಬೇಕಾದಷ್ಟು ನೋಡೋ ಸ್ಥಳಗಳಿವೆ. ಅಥವಾ ಯಾವ್ದಾದ್ರೂ ದೇವಸ್ಥಾನಕ್ಕೆ ಹೋಗ್ಬರೋಣ. ಎದ್ದು ರೆಡಿಯಾಗು." ವಿದ್ಯಾಳನ್ನು ಎಬ್ಬಿಸಿದಳು.

* * *

ನಾಲ್ಕಾರು ದಿನಗಳಲ್ಲಿ ಹತ್ತಾರು ಸ್ಥಳಗಳಿಗೆ ಹೋಗಿ ಬಂದರು. ಬೆಂಗಳೂರು ಎಷ್ಟು ದೊಡ್ಡದಾಗಿದೆ, ಎಷ್ಟು ಸುಂದರವಾಗಿದೆ, ತಾನಿಲ್ಲಿಗೆ ಬಂದಿರುವುದೇ ಒಂದು ಸೌಭಾಗ್ಯ ಎನ್ನುವಂತೆ ವಿದ್ಯಾ ಸಂತಸವನ್ನು ವ್ಯಕ್ತಪಡಿಸಿದಳು.

"ನಮ್ಮನೇಲಿ ಯಾರೂ ಇದನ್ನೆಲ್ಲಾ ನೋಡೇ ಇಲ್ಲ. ನನ್ನ ತಂಗೀರು, ತಮ್ಮಂದಿರೂ ಬಂದು ನೋಡಿದ್ರೆ ಎಷ್ಟು ಚೆನ್ನಾಗಿರ್ತಿತ್ತು..."

"ಕರ್ಕೊಂಡ್ಬಂದು ತೋರಿಸಿದ್ರಾಯ್ತು."

"ಅಪ್ಪ ಕಳಿಸ್ಬೇಕಲ್ಲ...."

"ಈಗ ನಿನ್ನನ್ ಕಳಿಸ್ಲಿಲ್ವೇ... ಹಾಗೇ ಏನಾದ್ರೂ ಒಂದುಪಾಯ ಹುಡುಕ್ಬೇಕು..."

"ಅಂದ್ರೇ.... ನಿಮ್ಮ ಆಪರೇಷನ್...."

"ಆಪ್ರೇಷನ್ನಾದದ್ದೂ ನಿಜ, ರೆಸ್ಟ್ ಹೇಳಿದ್ದೂ ನಿಜ... ಈ ಸಮಯ ಆಗೋ ಹೊತ್ಗೆ ನಿಮ್ಮಪ್ಪ ಕಳ್ಸಿದ್ದೂ ನಿಜ... ನಮ್ಮ ಗೌತಮಂಗೆ ಆದಷ್ಟೂ ಬೇಗ ಮದ್ವೆ ಮಾಡಿಬಿಡ್ತೀನಿ... ಆಗ ನೀವುಗಳೆಲ್ಲಾ ಬರೋರಂತೆ."

"ಗೌತಮಂಗೆ ಮದ್ವೇಸಾ? ಅವ್ನಿನ್ನೂ ಚಿಕ್ಕೋನಲ್ವಾ!"

"ಹೆಚ್ಚು – ಕಡಿಮೆ ನಿನ್ನ ವಯಸ್ನೋನೇ... ನನ್ಗೊಬ್ಳು ಸೊಸೆ ಬೇಕಲ್ಲ."

"ಹೋಗಮ್ಮ ನಂಗೀಗ್ಲೇ ಮದ್ವೆ ಬೇಡ. ಹೆಂಡ್ತಿ ಬಂದ್ರೆ ಅವಳ್ಮಾತ್ನ ಕೇಳ್ಬೇಕಾಗುತ್ತೆ. ನಿಂಗೆ ಬೇಸ್ರ ಆಗುತ್ತೆ." ಗೌತಮ ಹುಸಿಕೋಪವನ್ನು ನಟಿಸಿದ.

"ನೀನ್ಯಾಕೆ ಇಲ್ಲೇ ಕಾಲೇಜ್ಗೆ ಸೇರ್ಕೋಬಾರ್ದು. ಅಮ್ಮಂಗೆ ಹೆಲ್ಪ್ ಆಗುತ್ತೆ ನಿನ್ನಿಂದ."

"ಹೌದು .... ವಿದ್ಯಾ... ನೀನು ಇಲ್ಲೇ ಯಾವ್ದಾದ್ರೂ ಕಾಲೇಜ್ಗೆ ಸೇರ್ಕೋ... ಈ ವರ್ಷ ನವೀನಾನೂ ಬೇರೆ ಊರ್ಗೆ ಓದೋಕೆ ಹೊರ್ಟು ಹೋಗ್ತಾನೆ..."

"ನಂಗೆ ಓದ್ಬೇಕು ಅನ್ನೋ ಆಸೇನೇ ಇಲ್ಲ. ಕಾಲೇಜೇ ಬೇಜಾರು...."

"ಗಂಡನ್ಜೊತೆ ಜಾಲಿಯಾಗಿ ತಿರುಗಾಡ್ಬೇಕೂಂತ ಆಸೆನಾ?"

"ಗೌತಮ್....! ಹೀಗೆಲ್ಲಾ ಮಾತಾಡ್ಬೇಡ..."

"ಮತ್ತಿನ್ನೇನು? ಹುಡ್ಗೀರ್ಗೆ ಗೊತ್ತಿರೋದು ಅಷ್ಟೇ ತಾನೆ... ಸಿಂಗಾರ ಮಾಡ್ಕೊಂಡು ಕಾಲೇಜ್ಗೆ ಹೋಗೋದು ಅಥವಾ ಕೈ ಕೈ ಹಿಡ್ಕೊಂಡು ಗಂಡನ್ಜೊತೆ ಪಾರ್ಕುಗಳಲ್ಲಿ ಓಡಾಡೋದು..."

"ಥೂ ನಾನಂಥೋಳಲ್ಲಪ್ಪಾ..."

"ನಿನ್ನ ಪತಿ ಮಹಾಶಯಂಗೆ ಆ ಆಸೆ ಇದ್ರೇ...."

"ಅಂಥೋನನ್ನ ನಾನು ಮದ್ವೇನೇ ಆಗುಲ್ಲ..."

"ಪಕ್ಕದ ಬೀದೀಲಿ ಒಬ್ರು ಶಾಸ್ತ್ರಿಗಳಿದಾರೆ. ಅವರ್ಮಗ, ನೀಟಾಗಿ ಜುಟ್ಟು ಬಿಟ್ಕೊಂಡಿದಾನೆ. ಹಣೆಗೆ ಒಂದ್ಗೈಲಿ ದೂರಕ್ಕೆ ಕಾಣೋ ಹಾಗೆ ವಿಭೂತಿ ಹಚ್ಕೋತಾನೆ. ಕಚ್ಚೆ ಪಂಚೆ ಉಟ್ಕೋತಾನೆ. ಹುಡ್ಗೀರ್ನ ಕಂಡ್ರೆ ಮಾರು ದೂರ ಹಾರ್ಬಿಡ್ತಾನೆ. ಅವನೇ ಸರಿ ನಿಂಗೆ."

"ಥೂ ಹೋಗೋ..." ವಿದ್ಯಾ ನಾಚಿದಳು. ಉಳಿದವರೂ ನಕ್ಕರು.

"ನೋಡಿದ್ಯಾ ನಗುನಗ್ತಾ ಇದ್ರೆ ಎಷ್ಟು ಚೆನ್ನಾಗಿ ಕಾಣ್ತೀಯ. ಅದ್ಬಿಟ್ಟು ಸದಾ ಅಳುಮೋರೆ. ತಮಾಷೆ ಮಾಡ್ದೆ ಕಣೇ ಮಾರಾಯ್ತಿ. ನಿಜ ಅಂದ್ಕೋಬೇಡ... ನೀನು ಹೂಂ ಅನ್ನು. ನಮ್ಮಪ್ಪ ಅವರಷ್ಟೇ ಹ್ಯಾಂಡ್ಸಮ್ ಆಗಿರೋ ಹುಡುಗ್ರನ್ನೇ ಸಾಲಾಗಿ ತಂದು ನಿಲ್ಲಿಸ್ತಾರೆ ನಿನ್ನೆದುರ್ಗೆ..."

"ಗೌತಮ್... ನಿನ್ನ ಮಾತಿನಿಂದ ವಿದ್ಯಾ ಗಾಭರಿಯಾಗ್ತಾಳೆ ಅಷ್ಟೇ" ಭವಾನಿ ಮಗನನ್ನು ನಯವಾಗಿ ಗದರಿದಳು. ಮೌನ ಆವರಿಸಿತು. ವಿದ್ಯಾಳ ಮನದ ಪರದೆಯ ಮುಂದೆ ಕಿಶೋರನ ಚಿತ್ರ ಬಂದು ನಿಂತಿತು. ತಾನು ಆದಷ್ಟು ಬೇಗ ಕಿಶೋರನ ಹತ್ರ ಮಾತ್ನಾಡ್ಬೇಕು. ಇಲ್ದಿದ್ರೆ ಇವ್ರುಗಳೆಲ್ಲ ಸೇರಿ ತನಗೆ ಇಲ್ಲೇ ಯಾವ್ದಾದ್ರೂ ಒಬ್ಬ ಹುಡುಗನ್ನೋಡಿ ಮದ್ವೆ ಮಾಡಿ ಬಿಡ್ತಾರೆ ಅಂತಂದುಕೊಂಡಳು.

ಅದೇ ರಾತ್ರಿ ಕಿಶೋರನಿಗೆ ಒಂದು ಪತ್ರ ಬರೆದಳು. ಕಿಶೋರನಿಂದ ಉತ್ತರ ಬರಲಿಲ್ಲ. ಅವಳಿಗೆ ನಿರಾಸೆಯಾಗಿತ್ತು. ತಾನು ಊರು ಬಿಟ್ಟು ಬಂದ ಕೂಡಲೇ ಕಿಶೋರ ತನ್ನನ್ನು ಮರೆತುಬಿಟ್ಟರಬಹುದೇ ಅಂತಂದುಕೊಂಡಾಗ ದುಃಖ ವುಕ್ಕಿತು. ಮತ್ತೂ ಎರಡು ಪತ್ರಗಳನ್ನು ಬರೆದಳು. ಅದಕ್ಕೂ ಉತ್ತರವಿಲ್ಲ. ಹತಾಶಳಾದಳು.

"ಚಿಕ್ಕಮ್ಮ, ನಾನು ಊರಿಗೆ ವಾಪಸ್ಸು ಹೋಗ್ಲಾ? ಈಗ ನೀವು ಹುಶಾರಾಗಿದೀರಲ್ಲ."

"ಹೋಗೂವಂತೆ. ಅವ್ಸರ ಏನು? ಮೆತ್ತೆ ಮತ್ತೆ ಬರೋಕಾಗುಲ್ಲ."

"ಕಾಲೇಜು ಪಾಠ ತಪ್ಹೋಗ್ತಾ ಇದೆ."

"ಮೆಡಿಕಲ್ ಸರ್ಟಿಫಿಕೇಟ್ ಕೊಟ್ರಾಯ್ತು... ಈಗೇನೋ ನಿಮ್ಮಪ್ಪ ಕಳ್ಸಿದ್ರು. ಮತ್ತೆ ಮತ್ತೆ ಕಳಿಸ್ತಾರಾ? ನಿಂಗಿಲ್ಲಿ ಬೇಜಾರೇನಾಗ್ತಿಲ್ಲ ತಾನೇ?""

"ಇಲ್ಲ ಚಿಕ್ಕಮ್ಮ ಬೇಜಾರೇನಿಲ್ಲ. ತುಂಬಾ ಖುಶಿಯಾಗಿಟೀನಿ."

"ಮತ್ತೆ! ಹಾಯಾಗಿರು. ನಾನೇ ಈ ಸಲ ನಿನ್ಜೊತೆ ಬರ್ತೀನಿ. ಅಕ್ಕ, ಭಾವನ್ನ ನೋಡ್ದ್ಹಾಗೂ ಆಗುತ್ತೆ." ಅವರುಗಳು ಮಾತಾಡುತ್ತಾ ಕೂತಿದ್ದಂತೆಯೇ ಭವಾನಿಯ ನಾದಿನಿ ಸುಶೀಲಾ ಹಾಗೂ ಅವಳ ಪತಿ ಗೋಪಾಲ ಅವರ ಮನೆಗೆ ಬಂದರು. ಭವಾನಿ ಎದ್ದು ಅವರುಗಳನ್ನು ಬರಮಾಡಿಕೊಂಡಳು. ಸುಶೀಲಳ

ಕಣ್ಣು ವಿದ್ಯಾಳ ಮೇಲೆ ಕುತೂಹಲದ ನೋಟವನ್ನು ಬೀರಿತು. ಭವಾನಿ ಅವಳನ್ನು ಪರಿಚಯಿಸಿದಳು.

"ಇವಳು ವಿದ್ಯಾ, ಪ್ರೇಮಕ್ಕನ ಮಗಳು." ವಿದ್ಯಾ ಇಬ್ಬರಿಗೂ ಕೈಮುಗಿದಳು.

"ಏನ್ಮಾಡ್ತಾ ಇದ್ದೀಯಮ್ಮ?" ಸುಶೀಲಾ ಆತ್ಮೀಯತೆಯಿಂದ ವಿಚಾರಿಸಿದಳು. ಭವಾನಿ ಅವರಿಬ್ಬರಿಗೂ ಕಾಫಿ – ತಿಂಡಿಯನ್ನು ತಂದಿತ್ತಳು.

"ಅತ್ಗೇ... ಅಣ್ಣ ಎಷ್ಹೊತ್ಗೆ ಬರ್ತಾನೆ?"

"ಏನೋ ಮೀಟಿಂಗ್ ಇದೆ. ಲೇಟಾಗುತ್ತೆ ಅಂತ ಅಂದಿದ್ರು.."

"ಹಾಗಾದ್ರೆ ನಾವಿನ್ನು ಹೊರಡ್ತೀವಿ. ಘನೇಲಿ ದೀಪೂ ಒಬ್ಳೇ ಇದಾಳೆ."

"ದಿನೂ ಯಾವಾಗ್ಬರ್ತಾನೆ?"

"ನಾಳೆ ವಾಪಸ್ಸು ಬರ್ತಿದಾನೆ. ಅವನ್ಗೆ ಇಲ್ಲಿಗೇ ಪೋಸ್ಟಿಂಗ್ ಆಗಿದೆ... ಅದನ್ನೇ ಹೇಳಿ ಹೋಗೋಣ ಅಂತ ಬಂದ್ವು.."

"ನೀವ್ಗಳು ಬರೋದೇ ಅಪ್ರೂಪ್ವಾಗ್ಹೋಗಿದೆ.... ಬಂದ್ರೂ ಏನೋ ಅರ್ಜೆಂಟು."

"ನೀವೇ ಬನ್ನಿ ಅತ್ಗೆ. ಈಗ ಹೇಗಿದೀರಿ...?"

"ಪರ್ವಾಗಿಲ್ಲ. ಏನೋ ಬೇಜಾರು ಅಷ್ಟೇ. ಅದಕ್ಕೆ ಇವ್ಳನ್ನ ಕರೆಸ್ಕೊಂಡೆ... ಅವಳ್ಗೂ ಕಾಲೇಜ್ಗೆ ರಜ ಇಲ್ಲ. ಹೋಗ್ಬೇಕೂಂತ ಅವ್ಳು ಇನ್ನು ನಾಲ್ಕು ದಿನ ಇದ್ಹೋಗು ಅಂತ ನಾನು...."

"ಬಾಮ್ಮ ಮನೆಗೆ... ಅತ್ಗೆ ಕರ್ಕೊಂಡ್ಬನ್ನಿ ಇವ್ಳನ್ನ.... ಎನ್ನುತ್ತಾ ಹೊರಟವಳು ಗೇಟಿನ ಬಳಿ, ಅತ್ತಿಗೆಯನ್ನು ಕೇಳಿದಳು

"ಅತ್ಗೇ.... ಹುಡ್ಗಿ ಹೇಗೆ? ನೋಡೋಕೇನೋ ತುಂಬಾ ಚೆನ್ನಾಗಿದಾಳೆ. ನಮ್ಮ ದಿನೂಗೆ ವಿಚಾರಿಸ್ಬೋದಾ....?"

"ನಿಂಗಿಷ್ಟ ಇದ್ರೆ ವಿಚಾರಿಸ್ತೀನಿ. ಆದ್ರೆ ಅವಳೋದು ಮುಗಿದಿಲ್ವಲ್ಲಾ..."

"ಪ್ರೈವೇಟಿನಲ್ಲಿ ಓದಿದ್ರಾಯ್ತು. ಅದೇಕ್ಸಹಾ.... ನಿಮ್ಮಕ್ಕನ್ನೊಂದು ಕೇಳ್ತೀರಾ?"

"ಮೊದ್ಲು ನಿಮ್ಮ ದಿನೂ ನೋಡ್ಲಿ.... ಅವನ್ಗೆ ಇಷ್ಟವಾದ್ರೆ...... ನಾನು ಪ್ರೇಮಕ್ಕನ ಹತ್ರ ಮಾತಾಡ್ತೀನಿ... ದಿನೂಗೆಷ್ಟು ವರ್ಷ?"

"ಅವನ್ಗೆ ಇನ್ನೂ ಇಪ್ಪತ್ತೈದೇ ವರ್ಷ. ಓದು ಮುಗ್ದಿದೆ. ಕೆಲ್ಸ ಸಿಕ್ಕಿದೆ. ನಮ್ಮ ದೀಪು ಇನ್ನೂ ಚಿಕ್ಕು. ಇವನ್ಗೇ ಬೇಗ ಮದ್ವೆ ಮಾಡಿ ಬಿಡೋಣಾಂತ.... ಮರೀಬೇಡಿ ಅತ್ಗೇ... ವಿದ್ಯಾ ನಮ್ಮ ದಿನೇಶಂಗೆ ಸರಿಯಾದ ಜೋಡಿ ಅಂತನ್ನಿಸುತ್ತೆ."

"ದಿನೇಶನ ಒಪ್ಗೆ ಮುಖ್ಯ. ಮೊದ್ಲು ಅವ್ನು ನೋಡ್ಲಿ.. ಅವನ್ನ ನಮ್ಮನೇಗೆ ಕಳ್ಸು. ನೋಡ್ದ್ಹಾಗಾಗುತ್ತೆ."

"ಅವ್ಳನ್ನೇ ನಮ್ಮನೇಗೆ ಕರ್ಕೊಂಡ್ಬಂದ್ರೇ...."

"ಅವ್ಳಿಗೆ ತುಂಬಾ ಸಂಕೋಚ..... ಮೊದ್ಲು ನಮ್ಮನೇಲೇ ನೋಡ್ಲಿ... ಆಮೇಲೆ

ನಾನೇ ಒಂದಿನ ಕರ್‍ಕೊಂಡ್ಬರ್ತೀನಿ."

"ಹಾಗೇ ಮಾಡಿ. ನಾನಿನ್ನು ಬರ್‍ಲಾ?" ಅವರಿಬ್ಬರೂ ಹೊರಟು ಹೋಗಿದ್ದರು.

* * *

ಮುಂಬಾಗಿಲು ಬೆಲ್ ಆದಾಗ, ಅಲ್ಲೇ ಕುಳಿತು ಏನನ್ನೋ ಓದುತ್ತಿದ್ದವಳು ವಿದ್ಯಾ ಬಂದು ಬಾಗಿಲನ್ನು ತೆರೆದಳು. ಎದುರಿಗೆ ಒಬ್ಬ ಸುಂದರ ಯುವಕ. ಅವನೂ ಗಲಿಬಿಲಿಗೊಂಡ. ಅತ್ತೆಯ ಮನೆಯಲ್ಲಿ ಒಬ್ಬ ಯುವತಿ!

"ಯಾರ್ಬೇಕಾಗಿತ್ತು....?" ಕೋಗಿಲೆಯ ಧ್ವನಿಯಲ್ಲಿ ಕೇಳಿದಳು. ಅವನು ಅವಳನ್ನೇ ಎವೆಯಿಕ್ಕದೇ ನೋಡ್ತಿದ್ದ.

"ನಿಮಗೆ ಯಾರ್ಬೇಕಾಗಿತ್ತು?" ಧ್ವನಿ ಸ್ವಲ್ಪ ಗಡುಸಾಗಿತ್ತು. ಅವನು ಬೆಚ್ಚಿದ.

"ಗೌತಮನ ಮನೆ ತಾನೇ ಇದು!" ಸಂಶಯದಿಂದ ಅತ್ತಿತ್ತ ನೋಡಿ ಕೇಳಿದ.

"ಹೌದು.... ಗೌತಮ ಮನೇಲಿಲ್ಲ. ಎಲ್ಲೋ ಹೊರ್‍ಗೆ ಹೋಗಿದಾನೆ."

"ಅತ್ತೇನೂ ಇಲ್ವಾ?"

"ಇಲ್ಲ. ಅತ್ತೇನೂ ಇಲ್ಲ. ದೇವಸ್ಥಾನಕ್ಕೆ ಹೋಗಿದಾರೆ...."

"ನೀವು ಯಾರೂಂತ ಹೇಳ್ತೀರಾ?"

"ನೀವ್ಯಾರು ಅಂತ ಮೊದಲ್ಹೇಳಿ..."

"ಸಾರಿ.... ನಾನು ದಿನೇಶ್ ಅಂತ. ಅತ್ತೆ ನನ್ನನ್ನೋಡ್ಬೇಕೂಂತಂದ್ರಂತೆ, ಬಂದ್ರೆ ಅವರೇ ಇಲ್ಲ. ಬೇರೆ ಯಾರೂ ಇಲ್ವಾ..?"

"ನವೀನ ಇದಾನೆ ಕರೀಲಾ....?"

"ಪ್ಲೀಸ್ ಕರೀರಿ... ಆದ್ರೇ ನೀವ್ಯಾರು ಅಂತ ಹೇಳ್ಲೇ ಇಲ್ವಲ್ಲಾ...?" ವಿದ್ಯಾ ತಾನು ಯಾರೂಂತ ಹೇಳದೇ ನವೀನನನ್ನು ಕರೆಯಲು ಒಳ ನಡೆದಳು. ಅವಳ ಹಿಂದೆಯೇ ಬಂದ ದಿನೇಶ. ಅವಳ ಬೆನ್ನ ಮೇಲೆ ತೂಗಾಡುವ ಜಡೆಯನ್ನು ನೋಡಿದ. ಅವಳ ಬಳುಕುವ ಶರೀರವನ್ನು ನೋಡಿದ. ಅವನಿಗರಿವಿಲ್ಲದೆಯೇ ಸಣ್ಣಗೆ ಸಿಳ್ಳೆ ಹೊಡೆದ. 'ಯಾರೀ ಹುಡುಗೀ...' ಎಂದುಕೊಳ್ಳುತ್ತಾ ಅಲ್ಲಿದ್ದ ಸೋಫಾದ ಮೇಲೆ ಕುಳಿತ. ಒಳಗಿನಿಂದ ನವೀನ ಬಂದ.

"ಏನೋ ದಿನೂ ಯಾವಾಗ್ಬಂದ್ಯೋ ಊರ್‍ನಿಂದ?"

"ನಿನ್ನೆ ರಾತ್ರಿ ಬಂದೆ. ಅದೇನೋ ಅತ್ತೆ ನನ್ನನ್ನೋಡ್ಬೇಕು, ನಕ್ಷತ್ರ ಮಾತಾಡ್ಬೇಕೂಂತಂದ್ರಂತೆ. ಅತ್ತೆ ಪತ್ತೇನೇ ಇಲ್ಲ. ನಾಪತ್ತೆ! ಎಲ್ಹೋದ್ರು?"

"ದಿನಾ ಒಂದ್ಸಲ ದೇವಸ್ಥಾನಕ್ಕೆ ಹೋಗೋ ಅಭ್ಯಾಸ ಅಮ್ಮಂಗೆ. ಹೋಗಿರ್‍ಬಹುದು. ಇನ್ನೇನ್ಬರ್ತಾಳೆ ಕೂತ್ಕೋ...."

"ಅದ್ಸರೀ.... ಯಾರೀ ಬ್ಯೂಟೀ.... ಎಲ್ಲಿಂದ ಹಾರಿ ಬಂದ್ಲು?"

"ಹಾಗೆಲ್ಲ ಮಾತಾಡ್ಬೇಡ್ವೋ.... ಅವಳು ನಮ್ಮ ಕಸಿನ್..."

"ಕಸಿನ್ನಾ? ಯಾವೂರಿನ ಕಸಿನ್..... ನಾನು ನೋಡೇ ಇರ್ಲಿಲ್ಲ..."

"ನಮ್ಮ ದೊಡ್ಡಮ್ಮನ ಮಗ್ಳು. ಈ ಮುಂಚೆ ಎಂದೂ ನಮ್ಮನೆಗೆ ಬಂದೇ ಇರ್ಲಿಲ್ಲ..."

"ಓ.... ಹೌದಾ? ಯಾರು ನೀವು ಅಂತ ಕೇಳಿದ್ರೆ ಹೇಳ್ಲೇ ಇಲ್ಲ... ಘಾಟಿ ಹುಡುಗೀ...."

"ನಿನ್ನನ್ನೋಡಿ ಹೆದ್ರಿದ್ದಾಳೆ. ಇದೇನವ್ತಾರ ನಿಂದು.... ಇದೆಂಥಾ ಹೇರ್ ಸ್ಟೈಲ್..... ಇದೆಂಥಾ ಡ್ರೆಸ್ಸು..."

"ಅದೇ ಫ್ಯಾಷನ್ನು ಈಗ. ಹೋಗ್ಲಿ ಬಿಡು. ಕಾಫಿ-ಗೀಫಿ ಏನಾದ್ರೂ ಸಿಗುತ್ತಾ..." ಕೇಳಿದ ಒಳಗಡೆ ಕಣ್ಣು ಹಾಯಿಸುತ್ತಾ. ನವೀನ ಎದ್ದು ಒಳಗೆ ಹೋಗಿ ವಿದ್ಯಾಳಿಗೆ ಕಾಫಿ ಮಾಡಿ ಕೊಡುವಂತೆ ಹೇಳಿದ. ವಿದ್ಯಾ ಕಾಫಿಯನ್ನು ತಂದಿತ್ತಳು.

"ಇವನು ದಿನೇಶ ಅಂತ ನನ್ನ ಕಸಿನ್..... ಇವಳು ವಿದ್ಯಾ ಅಂತ ನನ್ನ ಕಸಿನ್" ನವೀನ ಪರಸ್ಪರ ಪರಿಚಯ ಮಾಡಿಸಿದ. "ಹಲೋ..." ಎಂದ ದಿನೇಶ. ವಿದ್ಯಾ ತಬ್ಬಿಬ್ಬಾದಳು. ಕೈ ಜೋಡಿಸಿದಳು. ಕಾಫಿಯ ಬಟ್ಟಲನ್ನು ಎತ್ತಿಕೊಂಡು ರುಚಿ ನೋಡಿದ.

"ಕಾಫಿಗೆ ಸ್ವಲ್ಪ ಸಿಹಿ ಕಡಿಮೆ. ಸಕ್ಕರೆ ಬೇಕಾಗಿತ್ತು." ವಿದ್ಯಾಳನ್ನೇ ನೋಡುತ್ತಾ ಕೇಳಿದ. ಅವಳು ಕೆಂಪಾಗಿದ್ದಳು. ಅಡುಗೆಯ ಮನೆ ಕಡೆ ಹೋದವಳನ್ನೇ ಬಿಟ್ಟ ಕಣ್ಣು ಬಿಟ್ಕೊಂಡು ನೋಡಿದ. ನವೀನ ನಕ್ಕ.

"ಪ್ಲೀಸ್ ಬಿ ಕೇರ್ ಫುಲ್. ಅವ್ಳು ಬೆಂಗ್ಳೂರಿನ ಹುಡ್ಗಿ ಅಲ್ಲ..."

"ಹುಡ್ಗಿ ಯಾವೂರಿನವಳಾದ್ರೇನು. ನೋಡೋಕೆ ಲಾಯಕ್ಕಾಗಿದಾಳೆ."

"ಅಮ್ಮಂಗೆ ಗೊತ್ತಾದ್ರೆ ಅಷ್ಟೇ..."

"ಇದ್ನೆಲ್ಲಾ ಅತ್ತೆಗೆ ಹೇಳ್ಬೇಕಾ? ನಾನ್ಸೆನ್ಸ್.... ನೀನು ಯಾವ ಹುಡ್ಗಿಯನ್ನೂ ಕದ್ದು ಮುಚ್ಚಿ ನೋಡೋಲ್ವಾ?"

"ಅದೆಲ್ಲ ಕಾಲೇಜ್ನಲ್ಲಿ, ಮನೇಲಿ ಅಲ್ಲಾ..." ವಿದ್ಯಾ ಸಕ್ಕರೆ ಡಬ್ಬಿಯನ್ನು ತಂದು ಅವನ ಮುಂದಿಟ್ಟಳು. ಅವನು ತಾನೇ ತನಗೆ ಬೇಕಾದಷ್ಟು ಸಕ್ಕರೆ ಬೆರೆಸಿ ಕೊಂಡು ಕಾಫಿಯನ್ನು ಕುಡಿದ. ಅವಳು ಸಕ್ಕರೆ ಡಬ್ಬಿಯೊಂದಿಗೆ ಮತ್ತೆ ಒಳಗೆ ಹೊರಟು ಹೋಗಿದ್ದಳು. ಅವನು ಪದೇ ಪದೇ ಅವಳು ಮತ್ತೆ ಕಾಣುವಳೇನೋ ಎಂದು ಬಗ್ಗಿ ಬಗ್ಗಿ ನೋಡಿದ. ಅವಳು ಹೊರಬರುವ ಸೂಚನೆಯೇ ಇಲ್ಲದಾಗ ಎದ್ದ.

"ಬೋರ್ ಆಗ್ತಿದೆಯಪ್ಪಾ..... ಮಾವ, ಅತ್ತೆ, ಗೌತಮ ಯಾರೂ ಇಲ್ಲ. ಬರ್ತೀಯ ಅಷ್ಟು ದೂರ ತಿರುಗಾಡಿ ಬರೋಣ."

"ನನಗೆ ನಾಳೆ ಟೆಸ್ಟಿದೆ. ಓದ್ಕೋಬೇಕು. ಟಿ.ವಿ. ಹಾಕ್ಲಾ... ನೋಡ್ತೀಯ?"

"ಟಿ.ವಿ., ಗೀವಿ ಏನೂ ಬೇಡ. ನಾನು ಹೋಗ್ತೀನಿ. ಅತ್ತೆಗೆ ಹೇಳಿಬಿಡು ನನಗೆ ಕೋಪ ಬಂತು ಅಂತ...." ಅವನು ಹೊರಡುವ ಮೊದಲು ಮತ್ತೆ ಒಳ ಬಾಗಿಲ ಕಡೆ ನೋಡಿದ. ಅಲ್ಲಿ ವಿದ್ಯಾ ಕಾಣಲಿಲ್ಲ. ನವೀನ ಅವನನ್ನು ಗೇಟಿನ ತನಕ ಕಳಿಸಿ ಬಂದ. ಬೈಕ್ ಸ್ಟಾರ್ಟ ಮಾಡಿದ ಸದ್ದು ಕೇಳಿಸಿತ್ತು. ವಿದ್ಯಾ ಹೊರ ಬಂದಳು.

ಕೆಲವೇ ನಿಮಿಷಗಳಲ್ಲಿ ಭವಾನಿ ವಾಪಸ್ಸಾಗಿದ್ದಳು. ಬರುತ್ತಿದ್ದಂತೆಯೇ ಖಾಲಿ ಕಾಫಿ ಬಟ್ಟಲನ್ನು ಕಂಡಳು.

"ಯಾರಾದ್ರೂ ಬಂದಿದ್ರಾ ವಿದ್ಯಾ?" ಅಲ್ಲೇ ಕೂತಿದ್ದವಳನ್ನು ಕೇಳಿದಳು.

"ಹೌದು ಚಿಕ್ಕಮ್ಮ.... ಯಾರೋ ದಿನೇಶ ಅನ್ನೋರು ಬಂದಿದ್ರು.."

"ದಿನೂ ಬಂದಿದ್ನಾ? ಏನ್ಹೇಳ್ದ... ನಾನು ಬರೋವರೆಗೂ ಇರ್ಬಹುದಾಗಿತ್ತು."

"ನವೀನ ಮಾತಾಡ್ತಿದ್ದ. ನಾನು ಒಳಗಿದ್ದೆ. ಏನ್ಹೇಳಿದ್ರೋ ನಂಗೊತ್ತಿಲ್ಲ."

"ಅಯ್ಯೋ ಎಂಥಾ ಕೆಲ್ಸ ಆಯ್ತು... ಬರ್ತಾನೆ ಅಂತ ಗೊತ್ತಿದ್ದಿದ್ರೆ ಮನೇಲೇ ಇರ್ತಿದ್ದೆ. ನೀನೇ ಕಾಫೀನ ಮಾಡಿ ಕೊಟ್ಯಾ?"

"ಹುಂ ಚಿಕ್ಕಮ್ಮ. ಕಾಫಿ ಚೆನ್ನಾಗಿತ್ತೋ ಇಲ್ವೋ ಗೊತ್ತಿಲ್ಲ. ಸಕ್ರೇನ ಕೇಳಿ ಹಾಕಿಸ್ಕೊಂಡ್ರು."

"ಅದಕ್ಕೆ ಸಿಹಿ ಅಂದ್ರೆ ಪ್ರಾಣ... ಎಲ್ಲಾದಕ್ಕೂ ಸಿಹಿ ಮುಂದಾಗಿರ್ಬೇಕು. ತಿಂಡಿ ಏನಿರ್ಲಿಲ್ವಾ....?"

"ನಾನ್ನೋಡ್ಲೇ ಇಲ್ಲ ಚಿಕ್ಕಮ್ಮ. ನವೀನ ಕಾಫಿ ಮಾಡ್ಕೊಡ್ತೀಯ ಅಂತ ಕೇಳ್ದ, ನಾನು ಮಾಡ್ಕೊಟ್ಟೆ..."

"ನಾನು ನಾಳೇನೇ ಹೋಗಿ ಮಾತಾಡಿಸ್ಬೇಕು. ಇಲ್ದಿದ್ರೆ ಕೋಪ ಬಂದ್ಬಿಡುತ್ತೆ ಅದಕ್ಕೆ. ನಾಳೆ ನಾವಿಬ್ರೂ ಹೋಗೋಣ..."

"ನಾನಾ? ನಾನ್ಯಾಕೆ?"

"ಸುಶೀಲಾ ನಿಂಗೂ ಬಾ ಅಂತ ಹೇಳಿಲ್ವಾ? ಹೋಗ್ಬಂದ್ರಾಯ್ತು..." ಭವಾನಿ ಸಂಭ್ರಮದಿಂದ ನುಡಿದಾಗ ವಿದ್ಯಾ ಮತ್ತೇನನ್ನೂ ಆಡಲಿಲ್ಲ.

* * *

ಅಧ್ಯಾಯ – ಎಂಟು

ಉಪಾಯದಿಂದ ಹೆಣ್ಣು ತೋರಿಸಿದರು

"ಈ ಸೀರೇನ ಉಟ್ಕೋ. ನಿನ್ನ ಮೈ ಬಣ್ಣಕ್ಕೆ ಇದು ಒಪ್ಪುತ್ತೆ." ಎನ್ನುತ್ತಾ ತನ್ನ ಬಳಿಯಿದ್ದ ತಿಳಿ ಗುಲಾಬಿ ಬಣ್ಣದ ಸೀರೆಯನ್ನು ವಿದ್ಯಾಳಿಗೆ ಉಡಲು ಕೊಟ್ಟಳು.

"ಇದು ಸಿಲ್ಕ್ ಸೀರೆ ಚಿಕ್ಕಮ್ಮ. ಇಷ್ಟು ಭಾರೀ ಸೀರೆ ಯಾಕೆ? ನನ್ಹತ್ರ ನೈಲೆಕ್ಸ್ ಸೀರೆ ಇದೆ. ಅದನ್ನೇ ಉಡ್ತೀನಿ."

"ಈ ಸೀರೇಲಿ ನೀನ್ಹೇಗೆ ಕಾಣ್ತೀಯಾಂತ ನಂಗೆ ನೋಡ್ಬೇಕೂಂತ ಆಸೆ.... ಸುಮ್ನೇ ಉಟ್ಕೋ. ಇದಕ್ಕೆ ಮ್ಯಾಚಿಂಗ್ ಬ್ಲೌಸ್ ನಿನ್ಹತ್ರ ಇದೆ ಅಂತ ನಂಗೊತ್ತು. ಅಳ್ಳಕವಾಗಿ ಜಡೆ ಹಾಕ್ಕೋ. ಬಿಗಿಯಾಗಿ ಹೆಣ್ಕೋಬೇಡ.....ಬೇಕಾದ್ರೆ ಹೇರ್‌ಪಿನ್ ಗಳನ್ನು ಹಾಕ್ಕೋ....ಸಣ್ಣದಾಗಿ ಕುಂಕುಮ ಇಟ್ಕೋ, ನಿನಗೆ ಚೆನ್ನಾಗಿ ಕಾಣುತ್ತೆ."

"ಯಾಕೆ ಚಿಕ್ಕಮ್ಮ ಇದನ್ನೆಲ್ಲಾ ಹೇಳ್ತಿದೀರಿ....? ಅಲ್ಲಿ ನಾನ್ಯಾರನ್ನ ಮೆಚ್ಚಿಸ್ಬೇಕು?" ತಮಾಷೆಯಾಗಿ ಕೇಳಿದಳು.

"ನೀನು ಹೇಗೇ ಅಲಂಕಾರ ಮಾಡ್ಕೊಂಡ್ರೂ ಚೆನ್ನಾಗಿ ಕಾಣ್ತೀಯ..... ಆದ್ರೂ ನಮ್ಮ ಸುಶೀಲಂಗೆ ತಾನೇ ಸುಂದರಿ ಅನ್ನೋ ಜಂಭ, ನಮ್ಮಕ್ಕನ್ಮಗ್ಳು ನಿಂಗಿಂತ ಸುಂದರಿ ಅಂತ ನಾನು ನಿನ್ನನ್ನ ತೋರಿಸ್ಬೇಕು....."

"ಹೋಗಿ ಚಿಕ್ಕಮ್ಮ......ಅವರೇನಂದ್ಕೊಳ್ತಾರೆ?"

"ಅವ್ಳು ಏನೂ ಅಂದ್ಕೊಳ್ಳಲ್ಲ. ಸುಶೀಲಾ ಒಳ್ಳೆಯವಳೇ......ಆದ್ರೆ ನಿನ್ನನ್ನು ಚೆನ್ನ ಅಂತ ಅವರೆಲ್ಲ ಹೊಗಳಿದ್ರೆ ನಂಗೂ ಹೆಮ್ಮೆ ಅಲ್ವಾ! ಪ್ರೇಮಕ್ಕಂಗೂ ಗೊತ್ತಾಗ್ಲಿ ಅಪ್ನ ಮಗ್ಳು ಚೆಲುವೆ ಅಂತ.....ಪ್ರೇಮಾ ಕೂಡ ಎಷ್ಟು ಚೆನ್ನಾಗಿದ್ಲು ಗೊತ್ತಾ? ಯಾಕೋ ಏನೋ ಮದ್ವೇ ಆದ್ಮೇಲೆ ಅವಳು ಬದ್ಲಾಗಿ ಬಿಟ್ಲು."

"ಯಾಕೇಂದ್ರೆ......ಅಮ್ಮ ಆರು ಮಕ್ಳನ್ನ ಹೆತ್ತು ಹಾಳಾಗಿ ಹೋದ್ಲು.....ಒಂದು ಆರೈಕೆ ಇಲ್ಲ. ರೆಸ್ಟಂತೂ ಇಲ್ವೇ ಇಲ್ಲ. ಜತೆಗೆ ಏನೋ ಕೊರಗು."

"ಹೌದು. ನಿಮ್ಮಮ್ಮಂಗೆ ಕೊರಗು ಜಾಸ್ತಿ. ಅವ್ಳನ್ನ ಸಂತೋಷವಾಗಿಡ್ಬೇಕಾದ್ದು ನಿಮ್ಮ ಧರ್ಮ ಅಲ್ವಾ....? ಇವತ್ತು ನಿನ್ನದೊಂಡು ಫೋಟೋ ತೆಗೆಸಿ ನಿಮ್ಮಮ್ಮಂಗೆ ಕೊಡ್ತೀನಿ.....ನೋಡ್ತಿರು ಅವಳ್ಮುಖ ಹೇಗೆ ಅರಳುತ್ತೇಂತ....ಹೊತ್ತಾಯ್ತು, ಬೇಗ ರೆಡಿ ಮಾಡ್ಕೋ. ನಿಧಾನವಾಗಿ ಮಾತಾಡೋಣ." ಎನ್ನುತ್ತಾ ರೂಮ್‌ನಿಂದ ಹೊರ ಬಂದಳು.

ಅಲಂಕರಿಸಿಕೊಂಡು ಚಿಕ್ಕಮ್ಮ ಕೊಟ್ಟ ಸಿಲ್ಕ್ ಸೀರೆಯನ್ನುಟ್ಟು, ಕನ್ನಡಿಯ ಮುಂದೆ ನಿಂತುಕೊಂಡವಳಿಗೆ, ಎದುರಿಗೆ ಕಾಣುತ್ತಿರುವವಳು ತಾನೇ ಹೌದೋ ಅಲ್ಲವೋ ಎಂಬಷ್ಟು ಅನುಮಾನ ಬಂತು. ಮತ್ತೆ ಮತ್ತೆ ತನ್ನನ್ನೇ ತಾನು ನೋಡಿ ಕೊಂಡಳು.

ಹೌದು, ಚಿಕ್ಕಮ್ಮ ಹೇಳೋದು ನಿಜ.....ನನ್ನ ಮೈ ಬಣ್ಣಕ್ಕೆ, ಈ ಬಣ್ಣದ ಸೀರೆ ಚೆನ್ನಾಗಿ ಒಪ್ಪುತ್ತೆ. ಅಳ್ಳಕವಾಗಿ ಜಡೆ ಹಾಕಿಕೊಂಡಿರುವುದರಿಂದ ನಾನು ಚಿಕ್ಕವಳಂತೆ ಕಾಣ್ತೀನಿ. ಈ ದಿನ ಈ ಕನ್ನಡಿ ನನ್ನ ನಿಜವಾದ ರೂಪವನ್ನು ನನಗೆ ತೋರಿಸಿದೆ ಎಂದುಕೊಳ್ಳುತ್ತಾ ಮತ್ತೊಮ್ಮೆ ತೆಳುವಾಗಿ ಪೌಡರನ್ನು ಮುಖಕ್ಕೆ ಲೇಪಿಸಿಕೊಂಡು, ಬಾಗಿಲನ್ನು ತೆರೆದು ಹೊರಬಂದಳು. ಅಲ್ಲೇ ಕೂತಿದ್ದ ಗೌತಮ ಅವಳನ್ನೇ ಬೆರಗಾಗಿ ನೋಡಿದ......ಮುಗುಳ್ನಕ್ಕು ನುಡಿದ –

"ಪರ್ವಾಗಿಲ್ವೇ.....ನೀನು ಬೆಂಗ್ಳೂರಿಗೆ ಬಂದದ್ದಕ್ಕೂ ಸಾರ್ಥಕವಾಯ್ತು.....ಈಗ ಆ ಜುಟ್ಟಿನ ಅರ್ಚಕನ್ನ ಮರೆತು, ಒಬ್ಬ ಫಾರಿನ್ ಹುಡುಗನ್ನ ನೋಡ್ತೀವಿ ನಿನಗೆ."

"ಥೂ ಹೋಗೋ.... ನಿನಗ್ಯಾಕೆ ನನ್ನ ಮದ್ವೆ ಚಿಂತೆ?"

"ನಂಗ್ಯಾಕೆ ನನ್ಮದ್ವೆ ಚಿಂತೆ? ಸುಮ್ನೇ ಹೇಳ್ದೇ....ದಿನಾ ಅದೇನಲಂಕಾರ ಮಾಡ್ಕೋತಿದ್ಯೋ....? ಇವತ್ತಂತೂ ಸೊಗಸಾಗಿ ಕಾಣ್ತಿದೀಯ....." ಬಾಯಿ ತುಂಬಾ ಹೊಗಳಿದ.

ವಿದ್ಯಾ ನಸುನಾಚಿದಳು. ಅವಳ ಕೆನ್ನೆಗಳು ಸೀರೆಯ ಬಣ್ಣವನ್ನು ಪ್ರತಿಫಲಿಸು ತ್ತಿದ್ದವು.

"ಏ ನಾಚ್ಕೋ ಬೇಡ್ವೇ....ನಾನೇನೂ ನಿನ್ನ ಬಾಯ್ ಫ್ರೆಂಡ್ ಅಲ್ಲ" ಅವನು ನುಡಿದಾಗ ಅವಳು ಮತ್ತೂ ನಾಚಿದಳು.

"ಅಮ್ಮಾ ನೀವಿಬ್ರೇ ಹೋಗಿ ಬರ್ತೀರೋ, ನಾನೂ ಬರ್ಬೇಕೋ..... ಪ್ರೇಮಕ್ಕನ ಮಗ್ಳನ್ನ ಕ್ಷೇಮವಾಗಿ ಮನೆಗೆ ವಾಪಸ್ಸು ಕರ್ಕೊಂಡ್ಬರ್ತೀರಿಯಾ ತಾನೇ.....?"

"ನೋಡಿ ಚಿಕ್ಕಮ್ಮಾ, ಹೇಗಾಡ್ತಾನೆ?"

"ಅವ್ನು ಹಾಗೇಯ..... ಅವ್ನಿಗೊಬ್ಬು ತಂಗಿಯೋ ಅಕ್ಕನೋ ಇದ್ದಿದ್ರೆ..... ಹೀಗೇ ಗೋಳು ಹೊಯ್ಕೊಂಡು ತಿಂದಿರೋನು...."

"ಗೌತಮ ಕಣ್ಣು ಹೊಡೆದು ನಕ್ಕ. ಇಬ್ಬರೂ ಬಾಗಿಲನ್ನು ದಾಟಿದರು. ದಾರಿಯಲ್ಲಿ ಭವಾನಿ ನುಡಿದಳು –

"ನಿಂಗೊತ್ತಾ ವಿದ್ಯಾ.....ಮೊದ್ಲೆಲ್ಲಾ ತುಂಬಾ ಹಠ ಮಾಡ್ತಿದ್ದ. ನನಗೊಬ್ಳು ತಂಗಿ ಬೇಕು..... ತಂಗಿ ಬೇಕು.... ಅಂತ. ನಂಗೂ ಈಗನ್ಸುತ್ತೆ. ಮನೇಲಿ ಒಂದು ಹೆಣ್ಮಗು ಇರ್ಬೇಕಾಗಿತ್ತು.... ಭಾವ ಒಪ್ಪಿದ್ರೆ ನಿಮ್ಮ ಪುಸ್ಸೀನ ನಾನೇ ಸಾಕ್ಕೊಳ್ಳೋಣ ಅಂತಂದ್ಕೊಂಡಿದ್ದೆ. ಆದ್ರೆ ಭಾವ ದೊಡ್ಮನಸ್ಸು ಮಾಡ್ಲಿಲ್ಲ."

"ಅಪ್ಪ ಏನಂದ್ರು?"

"ಭಾವ ಏನಂದ್ರು ಗೊತ್ತಾ? ಹೇಳೋಕೆ ನಾಚ್ಕೆಯಾಗುತ್ತೆ.....'ನಮ್ಮಕ್ಳನ್ನ ನಾವೇ ಬೆಳೆಸ್ತೀವಿ... ನಿಮ್ಗೆ ಹೆಣ್ಮಗು ಬೇಕಾಗಿದ್ರೆ ನೀನೇ ಹೆತ್ಕೋಬೇಕು" ಅಂತಂದ್ರು, ನನಗೆಷ್ಟು ನಾಚ್ಕೆಯಾಯ್ತು ಗೊತ್ತಾ? ನೀವು ಮೂರು ಜನ ಹೆಣ್ಮಕ್ಳಲ್ಲಿ ಒಬ್ಳನ್ನ ನಂಗೆ ಕೊಟ್ಟಿದ್ರೆ.....ನಾನೂ ಚೆನ್ನಾಗೇ ಸಾಕ್ತಿದ್ದೆ...."

"ಅಪ್ಪ ಹಾಗಂದ್ರು ಅಂತ ನಿಮ್ಗೆ ಅವ್ರ ಮೇಲೆ ಕೋಪಾನ ಚಿಕ್ಕಮ್ಮ....?"

"ಆಗ ಕೋಪ ಇತ್ತು. ಈಗೇನಿಲ್ಲ ಬಿಡು. ನಿಮ್ಮಪ್ಪ ಹೇಳಿದ್ದೂ ಸರ್ಯೇ..... ಯಾರೂ ತಮ್ಮ ಮಕ್ಳನ್ನ ಇನ್ನೊಬ್ರಿಗೆ ಕೊಡಲ್ಲ ಅಲ್ವಾ.....ನನ್ಗೆ ಮೂರು ಜನ ಗಂಡ್ಮಕ್ಳಿದಾರೆ. ಯಾರಾದ್ರೂ ಕೇಳಿದ್ರೆ ಯಾರೊಬ್ಬನ್ನ ಕೊಡೋಕೂ ನನ್ಮನಸ್ಸು ಒಪ್ಪಲ್ಲ..... ಭಾವನ್ನ ಅನ್ನೋಕೆ ಅಥವಾ ಅವ್ರ ಮೇಲೆ ಕೋಪ ಮಾಡ್ಕೊಳ್ಳೇಕೆ ನನಗ್ಯಾವ ಹಕ್ಕೂ ಇಲ್ಲ."

*   *   *

ಆಟೋ ನಿಂತ ಸದ್ದು ಕೇಳಿ, ದಿನೇಶ ಕಿಟಕಿಯ ಪರದೆ ಸರಿಸಿ ನೋಡಿದ. ಗುಲಾಬಿ ಪಕಳೆಯ ಸುಗಂಧ ಗಾಳಿ ಬೀಸಿದಂತಾಯಿತು. ಗುಲಾಬಿ ವರ್ಣದ ಸೀರೆಯುಟ್ಟ ಗುಲಾಬಿ ರಂಗಿನ ಕೆನ್ನೆ ಗಲ್ಲಗಳ ಸುಂದರಿ, ಇಳಿಯುತ್ತಿದ್ದುದನ್ನು ಕಂಡು ಸಣ್ಣಗೆ ಸಿಳ್ಳೆ ಹಾಕಿದ.

"ಮಮ್ಮಿ....... ಅತ್ತೆ ಬಂದ್ರು....." ಎಂದು ಹೇಳಿ ಮುಂಬಾಗಿಲಿಗೆ ಬಂದ.

"ಹಲೋ....." ವಿದ್ಯಾಳ ಕಡೆ ನೋಡಿ ನಸು ನಕ್ಕ. ಅವಳು ನಾಚಿದಳು. ಅವಳ ಸೌಂದರ್ಯ ಇಮ್ಮಡಿಸಿತ್ತು.

"ಏನೋ ದಿನೂ, ನಿನ್ನೆ ಬಂದಿದ್ಯಂತೆ, ನಾನು ಬರೋವರೆಗೂ ಕಾಯ್ಬಾರ್ದಾಗಿತ್ತಾ?"

"ಕಾಯಬಹುದಾಗಿತ್ತು. ಆದ್ರೆ ಬೋರ್ ಆಗ್ತಿತ್ತಲ್ಲ. ಮಾತಿಗೆ ಯಾರಿರ್ಲಿಲ್ಲ. ವವೀನಂಗೆ ಟೆಸ್ಟು...... ಈ ಮೇಡಂ ಹೊರಕ್ಕೇ ಬರಲಿಲ್ಲ." ವಿದ್ಯಾ ಮುದುರಿ ನಿಂತಳು.

"ಏನ್ ಬಾಗ್ಲಲ್ಲೇ ನಿಲ್ಸಿ ಮಾತಾಡ್ತೀಯೋ ಒಳಕ್ಕೆ ಕರೀತೀಯೋ...."

"ಸಾರಿ ಅತ್ತೆ.....ಬನ್ನಿ ಬನ್ನಿ ಮೇಡಂ....." ಇಬ್ಬರೂ ಅವನ ಹಿಂದೆ ನಡೆದು ಒಳಬಂದರು.

"ಅದೇನತ್ಗೆ.....ಹೀಗೆ ದಿಢೀರನೆ......? ಬಾಮ್ಮಾ ವಿದ್ಯಾ...."

"ವಿದ್ಯಾ ನಾಳೆ – ನಾಡಿದ್ರಲ್ಲಿ ಊರ್ಗೆ ವಾಪಸ್ಸು ಹೊರಟಿದಾಳೆ. ಅದಕ್ಕೆ ಕರ್ಕೊಂಡು ಬಂದೆ. ನಿನ್ನೆ ಬಂದಿದ್ನಂತೆ ನಿನ್ಮಗ ನಮ್ಮನೆಗೆ.....ನಾನ್ಬರೋವರೆಗೂ ಕಾಯ್ಬಾರ್ದಾಗಿತ್ತಾ, ಹಾಗೇ ಬಂದ್ಬಿಟ್ಟಿದಾನೆ. ವಿಚಾರಿಸ್ಕೊಳ್ಳೋಣಾಂತ ಬಂದೆ....."

"ಹೂಂ. ಹೇಳ್ದ. ಹೀಗ್ಹೋಗಿ ಹಾಗ್ವಾಪಸ್ಬಂದ್ಬಿಟ್ಟಿದಾನೆ.....ಈ ಹುಡ್ಗಿ ಕೈಲಿ ಕಾಫಿ ಬೇರೆ ಮಾಡಿಸ್ಕೊಂಡು ಕುಡ್ದಿದಾನೆ."

"ಕಾಫಿಗೆ ಸಕ್ಕರೆ ಸಾಲ್ದಾಗಿತ್ತು. ಕೇಳಿ ಹಾಕಿಸ್ಕೊಂಡೆ....." ಎನ್ನುತ್ತಾ ವಿದ್ಯಾಳ ಕಡೆ ನೋಡಿದ. ಬೆಳದಿಂಗಳು ಚೆಲ್ಲಿದಂತಾಗಿತ್ತು. ಅವಳು ನಸು ನಕ್ಕಿದ್ದಳು.

"ಹೋಗೋ ದಿನೂ, ವಿದ್ಯಾಗೆ ಮನೆ ತೋರಿಸ್ಕೊಂಡ್ಬಾ...." ತಾಯಿ ಹೇಳಿದಾಗ, ತಾಯಿಯನ್ನೇ ಅರ್ಥಗರ್ಭಿತವಾಗಿ ನೋಡಿದ. ವಿದ್ಯಾ ಕಕ್ಕಾಬಿಕ್ಕಿಯಾಗಿದ್ದಳು.

"ಹೋಗು ವಿದ್ಯಾ, ಮನೆ ನೋಡ್ಕೊಂಡ್ಬಾ... ಹಾಗೇ ಗಾರ್ಡನ್ ತೋರ್ಸೋ....."

ವಿದ್ಯಾ ಸಂಕೋಚದಿಂದ ಅವನ ಜತೆ ಹೊರಟಳು. ಮೊದಲು ಗಾರ್ಡನ್‌ಗೆ ಬಂದರು.

"ಇದು ನಮ್ಮನೆ ಹೂದೋಟ. ಇಲ್ಲಿ ಎಷ್ಟು ಥರಾ ಗುಲಾಬಿಗಳಿವೆ ನೋಡಿದ್ರಾ, ಆದ್ರೆ ಯಾವ ಗುಲಾಬಿಯೂ ಈ ಗುಲಾಬಿಯಷ್ಟು ಸುಂದರವಾಗಿಲ್ಲ." ಅವನು ಆಡಿದ್ದು ಅರ್ಥವಾಗದೇ ಅತ್ತಿತ್ತ ನೋಡಿದಳು. ಅವನು ಮೆಲ್ಲನೆ ನಕ್ಕ.

"ಎಸ್ ವಿದ್ಯಾ, ಯಾವ ಗುಲಾಬಿಯೂ ನಿಮ್ಮಷ್ಟು ಸುಂದರವಾಗಿಲ್ಲ."

"ಹೀಗೆಲ್ಲಾ ಹೊಗಳ್ಬೇಡಿ.....ನನಗೆ ನಾಚ್ಕೆ ಆಗುತ್ತೆ."

"ಇರೋ ವಿಚಾರ ಹೇಳ್ತಿದೀನಿ. ನಿಮ್ಮನ್ನ ನೀವೇ ಕನ್ನಡೀಲಿ ನೋಡ್ಕೊಳ್ಳಿ. ನೀವು ಎಷ್ಟು ಸುಂದರವಾಗಿದೀರಿ ಅಂತ ನಿಮಗೇ ಗೊತ್ತಾಗುತ್ತೆ...."

"ನಿಮ್ಮ ಹೂತೋಟ ತುಂಬಾ ಚೆನ್ನಾಗಿದೆ....."

"ಥ್ಯಾಂಕ್ಸ್.....ಈ ಹೂತೋಟದ ಮಾಲಿ ಹೇಗಿದಾನೆ?" ಬೆರಳನ್ನು ತನ್ ಎದೆಗೆ ಸೋಕಿಸಿಕೊಂಡು ಕೇಳಿದ. ಅವಳು ಕಿಲಕಿಲನೆ ನಕ್ಕಳು.

"ಯಾಕ್ ನಗ್ತಿದೀರಿ....?"

"ಯಾಕ್ಹೂ ಇಲ್ಲ....."

"ನೀವು ಹೇಳ್ಲೇ ಬೇಕು" ಎನ್ನುತ್ತಾ ಅವಳ ಕೈ ಹಿಡಿದ. ಅವಳು ಥಟ್ಟನೆ ಕೈ ಬಿಡಿಸಿಕೊಂಡಳು. ಅಲ್ಲಿ ಅವನೆದುರಿಗೆ ನಿಲ್ಲದೆ ಮುಂದೆ ಮುಂದೆ ನಡೆದಳು.

"ಸಾರಿ.... ಮೇಡಂ...... ಬನ್ನಿ ಮನೇನ ನೋಡೋರಂತೆ." ಅವನು ಅವಳನ್ನು ದಾಟಿ ಮುಂದೆ ಮುಂದೆ ನಡೆದ. ಅವಳು ಅವನ ಹಿಂದೆ ನಡೆದಳು.

"ನಾನೊಂದ್ಮಾತು ಕೇಳ್ಲಾ ಮೇಡಂ..." ಬಾಲ್ಕನಿಯಲ್ಲಿ ನಿಂತು ಕೇಳಿದ.

"ನನ್ನನ್ನ ವಿದ್ಯಾ ಅಂತ್ಲೇ ಕರೀರಿ. ಮೇಡಂ ಅಂತ ಯಾಕ್ ಕರೀತೀರಿ.....?"

"ಸರಿ....ವಿದ್ಯಾ.....ವಿದ್ಯಾ ಒಂದ್ಮಾತು ಕೇಳ್ಲಾ...... ತಪ್ಪು ತಿಳ್ಕೋಬಾರ್ದು. ನಾನು ಕೈ ಹಿಡಿದದ್ದಕ್ಕೆ ಕೋಪ ಬಂತಾ?"

"ಪರ್ವಾಗಿಲ್ಲ ಬಿಡಿ.....ಆದ್ರೆ ಅದು ತಪ್ಪಲ್ವಾ...?"

"ಸಾರಿ....ಗೊತ್ತಾಗ್ಲಿಲ್ಲ. ಕೋಪ ಮಾತ್ರ ಮಾಡ್ಕೋಬೇಡಿ...."

"ಯಾಕೆ?"

"ಯಾಕೋ ನಂಗೊತ್ತಿಲ್ಲ.....ನೀವು ನನಗೆ ತುಂಬಾ ಇಷ್ಟವಾಗಿದೀರಿ....." ಅವಳು ನಾಚಿ ತಲೆ ತಗ್ಗಿಸಿದಳು.

"ಹೋಗ್ಲಿ ಹೇಳಿ, ನಾನು ಇಷ್ಟಪಡೋದೂ ತಪ್ಪಾ.....?"

"ಹೌದು ತಪ್ಪು....ನಾನ್ಯಾರೋ ನೀವ್ಯಾರೋ..... ನೀವ್ಯಾಕೆ ನನ್ನನ್ನ ಇಷ್ಟಪಡಬೇಕು...?"

"ಒಂದು ಸುಂದರವಾದ ಹೂವು ಅಥವಾ ವಸ್ತುವನ್ನು ಯಾರಾದ್ರೂ ಇಷ್ಟಪಟ್ಟರೆ ಅದನ್ನು ತಪ್ಪು ಅಂತೀರಾ?"

"ನಾನು ಹೂವೂ ಅಲ್ಲ. ಒಂದು ವಸ್ತುವೂ ಅಲ್ಲ."

"ಆದರೆ ನೀವು ತುಂಬಾ ಸುಂದರವಾಗಿದೀರಿ.... ನೀವು ನನಗೆ ಮೆಚ್ಚುಗೆ ಯಾಗಿದೀರಿ. ನಿಮ್ಗೆ ನಾನು ಒಪ್ಗೇನಾ ಹೇಳಿ.....ನಾನು ನಿಮ್ಮನ್ನ ಮದ್ವೆಯಾಗ್ತೀನಿ."

ವಿದ್ಯಾ ಬೆಚ್ಚಿದಳು. ಅವಳ ಮುಖ ಕಳೆಗುಂದಿತು. ಅವನಿಗೆ ಬೆನ್ನು ಮಾಡಿ ನಿಂತಳು. ಅವನು ಅವಳ ಎದುರಿಗೆ ಬಂದ.

"ಸಾರಿ. ನನ್ನ ಮಾತ್ನಿಂದ ನಿಮ್ಗೆ ಬೇಸರವಾಯ್ತಾ?"

"ಇಲ್ಲ."

"ಮತ್ತೆ ಹಾಗಾದ್ರೆ ಏನಾದ್ರೂ ಉತ್ತರ ಕೊಡಿ...."

"ಇದುವರೆಗೂ ನನ್ನನ್ನು ಯಾರೂ ಹೀಗೆ ಕೇಳಿರ್ಲಿಲ್ಲ. ಅದಕ್ಕೇ ಒಂಥರಾ..... ನಾನೇನ್ಹೇಳ್ಲಿ?"

"ಪರ್ವಾಗಿಲ್ಲ, ಟೈಮ್ ತಗೊಳ್ಳಿ. ಯೋಚಿಸಿ ಉತ್ತರ ಕೊಡಿ. ನಿನ್ನೆ ನಿಮ್ಮನ್ನು ಕಂಡಾಗ್ನಿಂದ ನಿಮ್ಮ ಮೇಲೆ ನನ್ಗೆ ಮನಸ್ಸಾಗಿದೆ."

"ಹೀಗೆಲ್ಲಾ ಮಾತಾಡ್ಬೇಡಿ. ನಂಗಿದೆಲ್ಲ ಅಭ್ಯಾಸವಿಲ್ಲ."

"ನಾನು ನೇರವಾಗಿ ಮಾತಾಡೋನು.... ನನ್ನಿಷ್ಟ ಏನಾದ್ರೂ ತಿಳ್ಕೋಬೇಕಿದ್ರೆ, ನಿಮ್ಮ ಚಿಕ್ಕಮ್ಮನ್ನ ಕೇಳಿ...."

"ಇದನ್ನೆಲ್ಲ ದೊಡ್ಡೋರು ನಿರ್ಧರಿಸಬೇಕಾದ ವಿಷ್ಯ ಅಲ್ವಾ?"

"ಹೌದು. ಆದ್ರೆ ಮದ್ವೆ ಆಗೋನು ನಾನು ತಾನೇ.... ಹಾಗೇ ನೀವೂ ಕೂಡ....ಯಾರನ್ನೋ ನಿಮ್ತಂದೆ ತಾಯಿ ತೋರ್ಸಿ ಮದ್ವೆಯಾಗು ಅಂತ್ಹೇಳಿದ್ರೆ ಮದ್ವೆಯಾಗ್ತೀರಾ? ನಿಮ್ಮದೇ ಸ್ವಂತ ಅಭಿಪ್ರಾಯಗಳಿಲ್ವಾ?"

"ನನ್ನ ವಿದ್ಯಾಭ್ಯಾಸ ಇನ್ನೂ ಮುಗಿದಿಲ್ಲ. ಇನ್ನೂ ಒಂದ್ವರ್ಷ ಬಾಕಿ ಇದೆ."

"ಅದೆಲ್ಲ ಮುಖ್ಯವಾದ ವಿಷ್ಯ ಅಲ್ಲ.... ಮುಖ್ಯವಾದ ವಿಷ್ಯ ನಮ್ಮ ಮದುವೆ. ನಾನು ನಿಮಗೆ ಒಪ್ಪಿಗೇನಾ ಹೇಳಿ..... ಅರ್ಜೆಂಟೇನಿಲ್ಲ. ನಿಧಾನವಾಗಿ ಹೇಳಿ. ನಡೀರಿ ಕೆಳಗೆ ಹೋಗೋಣ." ಮತ್ತೆ ಅವಳಿಗೆ ಮಾತಿಗೆ ಅವಕಾಶ ಕೊಡಲಿಲ್ಲ.

ಇಬ್ಬರೂ ಕೆಳಗಿಳಿದು ಬಂದರು. ಭವಾನಿ, ವಿದ್ಯಾಳನ್ನು ಪಶ್ನಾರ್ಥಕವಾಗಿ ನೋಡಿದಳು. ಸುಶೀಲಾ ಮಾತ್ರ ಮಗನ ಕಡೆ ನೋಡಿ ಮುಗುಳ್ನಕ್ಕಳು.

ಸುಶೀಲಾ ಎಲ್ಲರಿಗೂ ತಿಂಡಿ, ಕಾಫಿ, ಹಣ್ಣು, ಬಿಸ್ಕತ್‌ಗಳನ್ನು ತಂದಿತ್ತಳು. ವಿದ್ಯಾ ಸಂಕೋಚದಿಂದ ಕುಳಿತಿದ್ದಳು.

"ನಿಮ್ಮಕ್ಕನ ಮಗಳ್ಗೆ ತುಂಬಾ ಸಂಕೋಚ ಅತ್ತೆ......ಸರ್ಯಾಗಿ ತಿಂಡೀನೇ ತಿನ್ಲಿಲ್ಲ." ದಿನೇಶ ನುಡಿದ.

"ಏನಮ್ಮಾ ವಿದ್ಯಾ, ಸಂಕೋಚ ಯಾಕೆ? ನಿಮ್ಮ ಚಿಕ್ಕಮ್ಮ ಹೇಗೋ ನಾನೂ ಹಾಗೇ.... ಮನೆ ಹತ್ರ ಇದ್ದಿದ್ರೆ ನಾನೇ ದಿನಾ ಬರ್ತಿದ್ದೆ...." ದಿನೇಶ ತನ್ನನ್ನು ಆಗಾಗ್ಗೆ ಗಮನಿಸುತ್ತಿದ್ದಾನೆಂದು ಅವಳಿಗೆ ತಿಳಿದಿತ್ತು. ಬೇಗ ಎದ್ದು ಹೋದರೆ ಸಾಕೆಂದು ಚಡಪಡಿಸಿದಳು. ಕಡೆಗೂ ಹರಟೆ ಮುಗಿಯಿತು. ಇಬ್ಬರೂ ಹೊರಟರು. ಹೊರಗೆ ಬಂದ ಮೇಲೆ ವಿದ್ಯಾ ಹಾಯಾಗಿ ಉಸಿರಾಡಿದಳು. ಸಮೀಪದ ಆಟೋ ಸ್ಟ್ಯಾಂಡ್‌ಗೆ ಬಂದರು.

"ನಮ್ಮ ಸುಶೀಲಾ ತುಂಬಾ ಒಳ್ಳೇ ಹೆಂಗ್ಸು. ದಿನೂ ಸ್ವಲ್ಪ ಮಾತು ಜಾಸ್ತಿ, ಆದರೆ ಅವನೂ ಒಳ್ಳೆಯವನೇ..... ಅವರ್ಮನೆ ಹೂತೋಟ ಎಷ್ಟು ಚೆನ್ನಾಗಿದೆ ಅಲ್ವಾ! ಎಂತೆಂಥ ಗುಲಾಬಿ ಗಿಡಗಳಿವೆ. ಅವನ್ಗೆ ಗುಲಾಬಿ ಹೂವು ಅಂತಂದ್ರೆ ತುಂಬಾ ಇಷ್ಟ." ವಿದ್ಯಾ ಸುಮ್ಮನೇ ಕುಳಿತಿದ್ದಳು.

ಆ ರಾತ್ರಿ ವಿದ್ಯಾ ಅವನ ಬಗ್ಗೆಯೇ ಚಿಂತಿಸಿದಳು. ಒಳ್ಳೆಯವನೋ ಕೆಟ್ಟವನೋ, ಮಾತಿನಿಂದ ಹೇಗೆ ತಿಳಿಯುತ್ತೆ! ಅಲ್ಲದೇ ನಾನೀಗ ಕಿಶೋರನ್ನ ಮದುವೆಯಾಗೋದು ಅಂತ ನಿರ್ಧರಿಸಿದ್ದೀನ. ಅದನ್ನು ಬದಲಾಯಿಸೋದು ಹೇಗೆ.....? ಎಷ್ಟು ಧೈರ್ಯ ಇವನಿಗೆ? ಕೈ ಹಿಡಿದ.....ಮೆಚ್ಚುಗೆ ಅರ್ಥೂ ಇದೂ ಅಂತ ಮಾತಾಡಿದ. ಚಿಕ್ಕಮ್ಮನ ಮಾತನ್ನು ಕೇಳಿಕೊಂಡು ನಾನು ಹೀಗೆ ಅಲಂಕರಿಸಿಕೊಂಡು ಹೋಗ್ಬಾರ್ದಾಗಿತ್ತು. ಸದ್ಯ ನಾಳೆ ಒಂದು ದಿನ ಕಳೆದರೆ, ನಾಡಿದ್ದು ಊರಿಗೆ ಹೊರಟು ಹೋದರೆ ಸಾಕು. ಮತ್ತೆ ಈ ಮನುಷ್ಯನ್ನ ನಾನಂತೂ ಮತ್ತೆ ನೋಡುಲ್ಲ.

ಮಾರನೆಯ ಬೆಳಗ್ಗೆ ತಲೆ ಸ್ನಾನ ಮಾಡಿ ತಲೆಗೂದಲನ್ನು ಬಿಸಿಲಲ್ಲಿ ಒಣಗಿಸಿಕೊಳ್ಳುತ್ತಾ ನಿಂತಿದ್ದಳು. ಬೈಕು ನಿಂತ ಸದ್ದು ಕೇಳಿ ತಿರುಗಿದಳು. ಅವನೇ! ದಿನೇಶ!! ಗೇಟಿಗೆ ಬೆನ್ನು ಮಾಡಿ ನಿಂತಳು. ಅವನು ಅದನ್ನು ಗಮನಿಸಿದ. ಅತ್ತ ನೋಡಿಯೂ ನೋಡದಂತೆ ಸೀದಾ ಮನೆಯೊಳಕ್ಕೆ ಬಂದ. ಹಾಲ್‌ನ ಕಿಟಕಿಯ ಪರದೆಯನ್ನು ಸರಿಸಿ ಅವಳನ್ನೇ ದಿಟ್ಟಿಸಿದ. ಯಾವ ಶೃಂಗಾರವೂ ಇಲ್ಲದೇ, ಕೇಶ ರಾಶಿಯ ಮಧ್ಯದಲ್ಲಿ ಹೊಳೆಯುವ ಅವಳ ಮುಖವನ್ನೇ ನೋಡಿದ. ಸೂರ್ಯನ ಬಿಸಿಲಿಗೆ ಕೆಂಪಾದ ಮುಖ, ಬೆವರ ಹನಿಗಳಿಗೆ ಅಂಟಿಕೊಂಡ ಮುಂಗುರುಳುಗಳು.

ಮತ್ತೆ ಮತ್ತೆ ನೋಡಬೇಕೆನ್ನಿಸುವ ಚೆಲುವು.....ಹಿಂದೆ ಬಂದು ನಿಂತಿದ್ದ ಭವಾನಿ, ಮೆಲ್ಲಗೆ ಅವನ ಭುಜದ ಮೇಲೆ ಕೈ ಇಟ್ಟಳು. ಅವನು ಬೆಚ್ಚಿ ಹಿಂತಿರುಗಿದ.

"ಏನ್ ನೋಡ್ತಾ ಇದೀಯ?"

"ಅಲ್ಲಿ ನೋಡಿ ಅತ್ತೇ....."

"ಅಲ್ಲಿ ಏನಿದೆ? ವಿದ್ಯಾ ನಿಂತು ತಲೆಗೂದಲನ್ನು ಒಣಗಿಸಿಕೊಳ್ಳುತ್ತಿದ್ದಾಳೆ."

"ಅದೇ...ಅವಳನ್ನೇ ನೋಡ್ತಾ ನಿಂತಿದೀನಿ."

"ಹೀಗೆಲ್ಲಾ ಕಳ್ಳನ ಹಾಗೆ ಪರದೆಯ ಹಿಂದೆ ನಿಂತು, ಕಂಡೋರ ಮನೆಯ ಹುಡ್ಗಿಯರನ್ನ ನೋಡ್ಬಾರ್ದು." ಎನ್ನುತ್ತಾ ಪರದೆಯನ್ನು ಸ್ವಸ್ಥಾನಕ್ಕೆ ಸರಿಸಿದಳು.

"ನಂಗೊತ್ತಿತ್ತು ನೀನು ಮತ್ತೆ ಬರ್ತೀಯಾ ಅಂತ. ನಿನ್ಗೆ ವಿದ್ಯಾ ಒಪ್ಗೆಯಾಗಿದ್ದಾಳೆ ಅಲ್ವಾ?"

"ಹೌದತ್ತೆ.... ಇಂಥ ಹುಡ್ಗೀನೇ ನಾನು ಇದುವರ್ಗೆ ನೋಡಿರ್ಲಿಲ್ಲ. ಎಲ್ಲಿ ಮುಚ್ಚಿಟ್ಟಿದ್ರಿ ಈ ಬ್ಯೂಟೀನ....."

"ನಿಂಗೋಸ್ಕರಾನೇ ಮುಚ್ಚಿಟ್ಟಿದ್ದೆ ಅಂತ ಅಂದ್ಕೋ. ಬಹಳ ಜೋಪಾನವಾಗಿ ಬೆಳೆಸಿದಾರೆ ಅವರಪ್ಪ, ಅಮ್ಮ..... ನೀನು ಹುಶಾರಾಗಿರ್ಬೇಕು."

"ಥ್ಯಾಂಕ್ಸ್ ಅತ್ತೇ. ಆದ್ರೆ ವಿದ್ಯಾ ಫ್ರೀ ಇಲ್ಲ. ಸರ್‍ಯಾಗಿ ಮಾತ್ನೇ ಆಡುಲ್ಲ."

"ಅದೆಲ್ಲ ಅವಳ್ಗೆ ಅಭ್ಯಾಸವಿಲ್ಲ. ಹಾಗಿದ್ದಿದ್ರೆ ನಿನ್ನಂಥ ಪಡ್ಡೆ ಹುಡುಗ್ರು ಅವಳನ್ನ ಬಿಟ್ಟಿರೋರಾ.....?"

"ನನ್ಗೇನೋ ಅವ್ಳು ಒಪ್ಗೆ....ಆದರೆ ಅವಳು ಒಪ್ಪಬೇಕಲ್ಲ."

"ಅವ್ಳು ನಿನ್ನನ್ನ ಒಪ್ಪಬೇಕಾದ್ರೆ, ನಿನ್ನ ನಡೆ – ನುಡಿ, ವೇಷ – ಭೂಷಣಾನ ಬದಲಾಯಿಸ್ಕೋಬೇಕು. ಮೊದ್ಲು ನಿನ್ನ ಹೇರ್‌ಕಟ್‌ನ ಸರಿ ಮಾಡ್ಕೋ......"

"ಏನಾಗಿದೆ? ಸರಿಯಾಗೇ ಇದೆ.......ಇನ್ನೂ ಮೊನ್ನೆ ಮೊನ್ನೆ ಟ್ರಿಮ್ ಮಾಡಿಸ್ಕೊಂಡಿದೀನಿ. ಇನ್ನು ಡ್ರೆಸ್ಸು, ಜೀನ್ಸ್, ಟೀ ಷರ್ಟನ್ನು ಈ ಕಾಲದಲ್ಲಿ ಇಷ್ಟಪಡದ ಹುಡ್ಗೀರು ಯಾರಿಲ್ಲ. ಅವ್ಳು ನನ್ನನ್ನ ಹೀಗೇ ಮೆಚ್ಚಿದರೆ ಮೆಚ್ಚಲಿ, ಇಲ್ಲದಿದ್ದರೆ ಡೋಂಟ್ ಕೇರ್......"

"ಶ್....ಸುಮ್ನೇ ಕೇಳ್ದೆ. ನಿನ್ಗೆ ಅವಳು ಹೇಗೆ ಇದ್ದರೂ ಚೆನ್ನಾಗಿ ಕಾಣ್ತಾಳೆ ಅಲ್ವಾ. ಹಾಗೇ ಅವಳ್ಗೂ ಅಷ್ಟೇ, ನೀನು ಇಷ್ಟವಾದ್ರೇ ಅವಳು ಇದಕ್ಕೆಲ್ಲ ಸೋಲಲ್ಲ."

"ಅವ್ಳಿಗೋಸ್ಕರ ಏನ್ಬೇಕಾದ್ರೂ ಮಾಡ್ತೀನಿ. ಏನ್ಮಾಡ್ಬೇಕು ಹೇಳಿ."

"ಇವತ್ತು ನೀನು ಅವಳ್ನ ಮಾತಾಡಸ್ದೇ ಹಾಗೇ ಹೋಗ್ಬೇಕು..."

"ಯಾಕತ್ತೇ?"

"ನೀನೇನೂ ಅವ್ಳಿಗೋಸ್ಕರ ಬರ್ಲಿಲ್ಲ ಅನ್ನೋ ತರಹ ನಡ್ಕೋಬೇಕು. ಆಗ ಅವಳ ಮನಸ್ನಲ್ಲಿ ಏನಿದೆ ಅಂತ ನನಗೆ ತಿಳಿಯುತ್ತೆ.."

"ಅಂದ್ರೇ ನಾನೀಗ ನಾಟ್ಕ ಆಡ್ಬೇಕು....."

"ಹೂಂ....ನಿನ್ಮೇಲೆ ಮನಸ್ಸಿದ್ರೆ, ನನ್ನನ್ನ ಕೇಳೇ ಕೇಳ್ತಾಳೆ....."

ಅತ್ತೆ ಹೇಳಿದಂತೆ, ಸ್ವಲ್ಪ ಹೊತ್ನಲ್ಲೇ ಹೊರಟು ಬಿಟ್ಟ. ಬೈಕ್ ಸ್ಟಾರ್ಟ್ ಆದ ಸದ್ದು ಕೇಳಿ ವಿದ್ಯಾ ಹಿಂತಿರುಗಿ ನೋಡಿದಳು. ಕಪ್ಪು ಕನ್ನಡಕ ಧರಿಸಿದ್ದ ಅವನು ಅವಳ ಕಡೆ ನೋಡಿದಂತೆ ಮಾಡಿ, ಬೈಕನ್ನು ಓಡಿಸಿದ. ಅವಳಿಗೆ ಪಿಚ್ಚೆನ್ನಿಸಿತ್ತು. 'ಎಲ್ಲೋ ನಿನ್ನೆ ದಿನದ ನನ್ನ ವರ್ತನೆ ಅವನಿಗೆ ಬೇಸರವನ್ನುಂಟು ಮಾಡಿರಬೇಕು, ಅದಕ್ಕೇ ಏನೂ ಮಾತಾಡಿಸದೆ ಹೊರಟು ಹೋದನೆಂದುಕೊಂಡು ಒಳ ಬಂದಳು.

"ಬಿಸ್ಲಲ್ಲಿ ಯಾಕೆ ನಿಂತಿದ್ದೆ! ನೋಡು ಮುಖವೆಲ್ಲಾ ಕೆಂಪಾಗಿದೆ....."

"ಚಿಕ್ಕಮ್ಮ ಅವರ್‍ಯಾಕೆ ಹಾಗೆ ಬೇಗ ಹೊರಟು ಹೋದ್ರು?"

"ಅವರು ಅಂದ್ರೇ...."

"ನಿಮ್ಮ ನಾದಿನಿ ಮಗ..."

"ಓ ದಿನೇಶನಾ? ಅವ್ನು ಹಾಗೇನೇ.....ಬರೀ ಅವಾಂತರ. ನಿಧಾನಾನೇ ಇಲ್ಲ. ಅವರಮ್ಮ ಏನನ್ನೋ ಹೇಳಿ ಕಳ್ಸಿದ್ಲು. ಹೇಳಕ್ಕೆ ಬಂದಿದ್ದ. ಹೇಳಾಯ್ತು ಹೊರ್‍ಟು ಹೋದ." ಭವಾನಿಗೆ ಒಳಗೊಳಗೇ ಖುಶಿಯಾಗಿತ್ತು.

"ನಾಳೆ ನಾನು ಊರ್‍ಗೆ ಹೊರಡ್ತಿದೀನಿ ಅಲ್ವಾ?"

"ನಾಳೆ ಬೇಡ. ನಾಡಿದ್ದು ಹೋಗೋಣ. ನಾಳೆ ಸುಶೀಲನ ಮನೆಯವರೆಲ್ಲ ಪಿಕ್‌ನಿಕ್ ಹೋಗ್ತಾ ಇದಾರಂತೆ. ವ್ಯಾನ್ ಮಾಡಿದಾರಂತೆ. ನಮ್ಮನ್ನು ಕರೆದಿದಾರೆ....."

"ನಾನು ಎಲ್ಲಿಗೂ ಬರುಲ್ಲ ಚಿಕ್ಕಮ್ಮ. ಮನೇಲೇ ಇರ್ತೀನಿ."

"ಚೆನ್ನಾಗಿದೆ. ನಿನ್ನನ್ನ ಮನೇಲ್ಬಿಟ್ಟು ಹೋಗೋಕಾಗುತ್ತಾ? ನಾವ್ಯಾರೂ ಬರುಲ್ಲ ಅಂತ ಹೇಳ್ಬಿಡ್ತೀವಿ."

"ನಂಗೋಸ್ಕರ ನೀವ್ಯಾಕೆ ತಪ್ಪಿಸ್ಕೋಬೇಕು?"

"ನೀನು ಬರೋದಾದ್ರೆ ಎಲ್ರೂ ಹೋಗೋಣ....." ಮನಸ್ಸಿಲ್ಲದ ಮನಸ್ನಲ್ಲಿ ವಿದ್ಯಾ ಒಪ್ಪಿಕೊಂಡಳು. ಅಲ್ಲಿ ಇಲ್ಲಿ ಸುತ್ತಾಡಿ, ದಿನೇಶ ಮತ್ತೆ ವಾಪಸ್ಸು ಬಂದಿದ್ದ. ಭವಾನಿ ಅವನೊಡನೆ ಪಿಕ್‌ನಿಕ್ ವಿಷಯವನ್ನು ಹೇಳಿದಳು.

"ಈಗ ನೀನೇ ವ್ಯಾನನ್ನು ಗೊತ್ತು ಮಾಡ್ಬೇಕು. ನಿಮ್ಮಮ್ಮಂಗೂ ಹೇಳ್ಬೇಕು..... ನಾನು ವಿದ್ಯಾಳನ್ನು ಬಲವಂತವಾಗಿ ಒಪ್ಪಿಸಿದೀನಿ."

"ಯಾಕೆ ಅವ್ರಿಗೆ ನಮ್ಮ ಜತೆ ಬರುಕ್ಕೆ ಇಷ್ಟ ಇಲ್ವಂತಾ?"

"ಹಾಗೇನೂ ಹೇಳ್ಲಿಲ್ಲ. ಏನೋ ಸಂಕೋಚ.... ಆದ್ರೂ ನಿನ್ಮೇಲೆ ಆಸಕ್ತಿ ಇದೆ ಅಂತ ತಿಳೀತು. ನಾಳೆ ಒಪ್ಗೆ ಕೊಟ್ರೂ ಕೊಡ್ಬಹುದು...."

"ಇನ್ನು ನಾನು ಕೇಳುಲ್ಲ. ಒಪ್ಗೆ ಇದ್ರೆ ಅವಳಾಗೇ ಹೇಳ್ಲಿ.... ಆದರೆ ಬಲವಂತವಾಗಿ ಮಾತ್ರ ಒಪ್ಪಿಸ್ಬೇಡಿ."

"ಇಲ್ಲಪ್ಪ, ಯಾರನ್ನೂ ಯಾರೂ ಬಲವಂತ ಮಾಡುಲ್ಲ. ಆದ್ರೆ ಅವ್ಳು ನಿನ್ನನ್ನ ಒಪ್ತಾಳೆ ಅನ್ನೋ ನಂಬ್ಕೆ ನಂಗಿದೆ...." ರೂಮ್‌ನಿಂದ ಇಬ್ಬರೂ ಹೊರ ಬಂದರು. ಏನೋ ಓದುತ್ತಿದ್ದ ವಿದ್ಯಾ ಎದ್ದು ನಿಂತು ಅವನ ಕಡೆ ನೋಡಿದಳು.

"ಬರ್ತೀನಿ ಅತ್ತೆ." ಮತ್ತೆ ಅವಳಿಗೆ ಹೇಳದೇ ಹೊರಟೇ ಹೋದ. ಅವನು ಒಳಗೊಳಗೇ ನಗುತ್ತಿದ್ದುದು ಇವಳ ಗಮನಕ್ಕೆ ಬರಲಿಲ್ಲ.

ಪಿಕ್‌ನಿಕ್‌ಗೆ ಹೋಗಿ ಬರಲು ಭವಾನಿ ಸಿದ್ಧತೆಗಳನ್ನು ಮಾಡಿಕೊಂಡಳು. "ಬೆಳಗ್ಗೆ ಬೇಗ ಎದ್ದು ಒಂದಿಷ್ಟು ಅನ್ನ ಮಾಡಿ, ಮೊಸರನ್ನ ಕಲೆಸಿ ಬಿಡ್ತೀನಿ. ಸುಶೀಲಾ ಹುಳಿಯನ್ನ ಮಾಡ್ಕೊಂಡ್ಬರ್ತಾಳೆ. ಹಾಗೇ ಒಂದಿಷ್ಟು ಖಾರದ ಚಿಪ್ಸ್, ಏನಾದರೂ ಸ್ವೀಟ್ಸ್‌ಗಳನ್ನು ತಂದ್ಬಿಡಿ.... ಹಣ್ಣು, ಬಿಸ್ಕತ್ತುಗಳನ್ನು ಸುಶೀಲಾ ತರ್ತಾಳೆ." ಭವಾನಿ ಗಂಡನಿಗೆ ಹೇಳಿದಳು.

"ಎಲ್ರೂ ಬೇಗ್ಮಲ್ಕೊಳ್ಳಿ, ಬೆಳಗ್ಗೆ ಬೇಗೇಳ್ಬೇಕು." ಎಲ್ಲರನ್ನೂ ಸೇರಿಸಿ ಹೇಳಿದಳು.

"ಅದೇನೀಗ ಇದ್ದಕ್ಕಿದ್ದಾಗೇ ಪಿಕ್‌ನಿಕ್.....ಎಲ್ಲಿಗ್ಹೋಗ್ತಿದೀವಿ?"

"ನಂದಿ ಹಿಲ್ಸ್‌ಗೆ ಹೋಗ್ಬರೋಣ ಅಂತ ಹೇಳ್ದ.....ಕ್ಯಾಮರಾ ಇದೆಯಲ್ಲ ಮರೀದೇ ತೆಗೆದಿಟ್ಕೊಳ್ಳಿ.....ಫಿಲ್ಮ್ ಇಲ್ದಿದ್ರೆ ಹಾಕಿಸ್ಕೊಂಡ್ಬನ್ನಿ." ಭವಾನಿಯ ಉತ್ಸಾಹ ವನ್ನು ಕಂಡು ವಿದ್ಯಾ ಚಕಿತಳಾದಳು. ಅಮ್ಮ ಎಂದೂ ಹೀಗೆ ಸಡಗರ ಪಟ್ಟಿದ್ದನ್ನೇ ಕಂಡಿಲ್ಲ. ಬಹುಶಃ ಮುಂದೆಂದೂ ಅವಳಿಗೆ ಇಂಥ ದಿನಗಳು ಬರಲಾರವು ಅಂತಂದುಕೊಂಡಾಗ, ವಿದ್ಯಾಳ ಮುಖ ಕಳೆಗುಂದಿತ್ತು.

"ಏನೇ ವಿದ್ಯಾ ಹೀಗೆ ಕೂತ್ಬಿಟ್ಟಿದೀಯ.....ಏನ್ ಯೋಚಿಸ್ತಿದೀಯ?"

"ಏನಿಲ್ಲ ಕಣ್ರೋ..... ಹೀಗೇ ಕೂತು, ನಿಮ್ಮಗಳ ಸಡ್ಗರಾನ ನೋಡ್ತಿದ್ದೆ."

"ನೀನಿದೀಯಾಂತ ನಾನೂ ಹೊರ್ಟಿದೀನಿ. ಇಲ್ದಿದ್ರೆ, ಈ ಪಿಕ್‌ನಿಕ್, ಈ ಟ್ರಿಪ್ ಎಲ್ಲಾ ಬೋರ್..... ನಂದಿ ಹಿಲ್ಸ್‌ಗೆ ಈಗಾಗ್ಲೇ ಎರಡ್ಸಾರಿ ಹೋಗ್ಬಂದಿದೀನಿ ಫ್ರೆಂಡ್ಸ್ ಜತೆ."

"ಇದು ಫ್ಯಾಮಿಲಿ ಟ್ರಿಪ್.... ನಿನ್ ಫ್ರೆಂಡ್ಸ್‌ಗೆ ಹೇಳ್ಬೇಡಪ್ಪಾ" ಚಿಕ್ಕಪ್ಪ ನುಡಿದರು.

"ನಂಗಷ್ಟು ಗೊತ್ತಾಗುಲ್ವೇನಪ್ಪಾ?" ಗೌತಮ ವಿದ್ಯಾಳ ಕಡೆ ನೋಡಿದ.

* * *

ಅಧ್ಯಾಯ – ಒಂಬತ್ತು

ನಂದಿಬೆಟ್ಟದಲ್ಲಿ ನಲಿವೋ ನಲಿವು

ಬೆಳಗ್ಗೆ ಅಲರಾಂ ಇಟ್ಟುಕೊಂಡು ಬೇಗ ಎದ್ದು ಸ್ನಾನ ಇತ್ಯಾದಿಗಳನ್ನು ಮುಗಿಸಿ ರೆಡಿಯಾಗಿದ್ದರು. ಡಬ್ಬಿಗಳಲ್ಲಿ ಮೊಸರನ್ನವನ್ನು ತುಂಬಿಸಿಟ್ಟಾಗಿತ್ತು. ಕುಡಿಯಲು ನೀರು ತುಂಬಿಸಿಕೊಂಡಿದ್ದರು. ಅದೂ ಇದೂ ಕುರುಕಲು ತಿಂಡಿಗಳನ್ನು ತೆಗೆದಿಟ್ಟು ಕೊಂಡಿದ್ದರು. ವಿದ್ಯಾ ತನ್ನ ಬಳಿಯಿದ್ದ ಗುಲಾಬಿ ಬಣ್ಣದ, ಹಳದಿ ಪ್ರಿಂಟ್‌ಗಳಿರುವ ನೈಲೆಕ್ಸ್ ಸೀರೆಯನ್ನುಟ್ಟಿದ್ದಳು. ಅದಕ್ಕೆ ಹಳದಿ ಬಣ್ಣದ ರವಿಕೆ ತೊಟ್ಟುಕೊಂಡಿದ್ದಳು.

"ಇದಕ್ಕೆ ಈ ರವಿಕೆ ಮ್ಯಾಚ್ ಆಗುಲ್ಲ. ಗುಲಾಬಿ ಬಣ್ಣದ ರವಿಕೆಯನ್ನೇ ತೊಟ್ಕೋ" ಭವಾನಿ ಆದೇಶವಿತ್ತಳು. ವಿದ್ಯಾ ಒಂದು ಗಳಿಗೆ ಅನುಮಾನಿಸಿದರೂ, ರವಿಕೆಯನ್ನು ಬದಲಾಯಿಸಿದ್ದಳು. "ಈಗ್ನೋಡು ಎಷ್ಟು ಸರಿಯಾಯ್ತು. ಈಗ ಅದೇ ಫ್ಯಾಷನ್......ಸೀರೆ ಬಣ್ಣದ ರವಿಕೇನೇ ಎಲ್ರೂ ಹೊಲಿಸಿಕೊಳ್ಳೋದು."

"ನಿನಗೊಬ್ಬಳು ಮಗಳಿದ್ದಿದ್ರೆ ಎಷ್ಟು ಚೆನ್ನಾಗಿ ಎಲ್ಲಾ ಹೇಳಿಕೊಡ್ತಿದ್ದೆ ನೀನು ಅಂತ ನನಗೀಗ ಅರ್ಥವಾಗ್ತಿದೆ..." ಭವಾನಿಯ ಗಂಡ ನುಡಿದಾಗ, ಅವಳು ನಸುನಕ್ಕಳು.

"ಹೌದೂರೀ, ನನಗೂ ಈಗ ಹಾಗೆ ಅನ್ನಿಸ್ತಿದೆ. ಈ ಮೂರೂ ಗಂಡಾಗಿ ಹುಟ್ಟೋ ಬದ್ಲು ಒಂದಾದ್ರೂ ಹೆಣ್ಣಾಗ್ಬಾರ್ದಾಗಿತ್ತಾ......?"

"ಹೌದು, ನಮ್ಮ ಸುಹಾಸ ಹೆಣ್ಣಾಗಿ ಹುಟ್ಟಿದ್ರೆ ಚೆನ್ನಾಗಿತ್ತು. ಸುಹಾಸಿನಿ ಅಂತ ಹೆಸರಿಡ್ಬಹುದಾಗಿತ್ತು, ಅವನಂತೂ ನೋಡೋಕೆ ಥೇಟ್ ಹುಡುಗಿ ಇದ್ದಾಗೇ ಇದಾನೆ." ಗೌತಮ ನಕ್ಕ. ಸುಹಾಸ ಬಂದು ಅವನ ಬೆನ್ನ ಮೇಲೆ ಗುದ್ದಿದ.

"ನೀನೇ ಹುಡುಗಿ ಥರ ಇರೋನು....ಈ ಮೀಸೆ, ಇರೋದ್ರಿಂದ ಗಂಡು ವೇಷ ಹಾಕ್ಕೊಂಡ ಹುಡ್ಗೀ ಥರ ಕಾಣ್ತೀಯ....."

"ಅದೇನು ನೀವಿಬ್ರೂ ಹುಡ್ಗೀರ ಥರ ಜಗಳ ಆಡ್ತೀರಿ......ನೀನು.....ನೀನು ಅಂತ...... ನಂಗ್ಯಾಕೋ ಅನ್ಲುಮಾನ ಬರ್ತಿದೆ." ನವೀನ ಮಧ್ಯೆ ಆಡಿದ.

"ನಿಂಗೂ ಬೇಕಾ ಗುದ್ದು?" ಇಬ್ಬರೂ ಒಟ್ಟಿಗೆ ಕೇಳಿದಾಗ ಎಲ್ಲರೂ ನಕ್ಕರು. ಮನೆ ಮುಂದೆ ವ್ಯಾನ್ ನಿಂತ ಸದ್ದು ಕೇಳಿದಾಗ ನಗುವುದನ್ನು ನಿಲ್ಲಿಸಿ ಎದ್ದು ಮುಂಬಾಗಿಲಿಗೆ ಬಂದರು. ಅಷ್ಟರಲ್ಲಿ ದಿನೇಶ ವ್ಯಾನ್‌ನಿಂದ ಕೆಳಗಿಳಿದಿದ್ದ. ಒಮ್ಮೆ

ಸುತ್ತಲೂ ಕಣ್ಣು ಹಾಯಿಸಿದ. ವಿದ್ಯಾಳನ್ನು ಮೇಲಿನಿಂದ ಕೆಳಗೆ ಸುಮ್ಮನೆ ಎಂಬಂತೆ ನೋಡಿದ.

"ಅತ್ತೇ..... ಇದೆಲ್ಲಾ ತಗೊಳ್ಳೋದಾ?" ಎನ್ನುತ್ತಾ ಬ್ಯಾಗುಗಳನ್ನೆತ್ತಿಕೊಂಡ.

"ಗೌತಮ......ನೀನೊಂದು ತಗೊಳ್ಳೋ....." ಎಂದು ಹೇಳಿ ಮುನ್ನಡೆದ. ಒಬ್ಬೊಬ್ಬರಾಗಿ ವ್ಯಾನ್ ಹತ್ತಿದರು. ಚಿಕ್ಕಮ್ಮ ಮನೆ ಬಾಗಿಲಿಗೆ ಬೀಗ ಹಾಕುವವರೆಗೂ, ಅಲ್ಲಿಯೇ ನಿಂತಿದ್ದ ಚಿಕ್ಕಮ್ಮನ ಪಕ್ಕದಲ್ಲಿ ವಿದ್ಯಾ ನಿಂತಿದ್ದಳು.

"ಏ.... ವಿದ್ಯಾ...... ಹತ್ತೊಲ್ವೇನೇ......?" ಗೌತಮ ಕೂಗು ಹಾಕಿದ.

"ನಿನ್ನ ಕಸಿನ್‌ಗೆ ಬಿಗುಮಾನ ಜಾಸ್ತಿ" ದಿನೇಶ ನುಡಿದು ವ್ಯಾನನ್ನೇರಿದ.

"ಎಲ್ಲೋ ನೀನೇ ಕರೀಲಿ ಅಂತ ಕಾಯ್ತಾ ಇರಬಹುದು.... ಕರಿಯಪ್ಪಾ...."

"ಹಾಗಂತೀಯ? ಕರ್ದೇ ಬಿಡ್ಲಾ.....?"

"ಹೂಂ ಕಣಿ ಕೇಳು.... ಇಳಿ ಕೆಳ್ಗೆ....." ಗೌತಮ ಅವನನ್ನು ಕೆಳಕ್ಕೆ ತಳ್ಳಿದ.

"ಏಯ್ ತಳ್ಬೇಡ್ವೋ.... ಬಿದ್ಬಿಡ್ತೀನಿ."

"ಈಗಾಗ್ಲೇ ಬಿದ್ದಾಗಿದೆ..... ಎಬ್ಬಿಸ್ಬೇಕು ಅಷ್ಟೇ...." ಅವನ ಮಾತಿಗೆ ಉಳಿದವರು ನಕ್ಕರು.

"ಆಡ್ಕೋ ಆಡ್ಕೋ..... ನಿಂಗೂ ಆ ಕಾಲ ಬರುತ್ತೆ. ಆಗ ನಾವಿಬ್ರೂ ಸೇರಿ ಚುಡಾಯಿಸ್ತೀವಿ." ಮತ್ತೆ ಎಲ್ಲರೂ ನಕ್ಕರು. ದಿನೇಶ ಕೆಳಗಿಳಿಯುವ ಹೊತ್ತಿಗೂ, ವಿದ್ಯಾ ವ್ಯಾನ್‌ನ ಬಾಗಿಲ ಬಳಿಗೆ ಬರುವ ಹೊತ್ತಿಗೂ ಸರಿ ಹೋಯ್ತು. ಅವನ ತಲೆ ಅವಳ ತಲೆಗೆ ಬಡಿಯಿತು. "ಆಂ...." ಎಂದಳು.

ಅವಳು ಹಿಂದಕ್ಕೆ ಸರಿದಳು. ಅವನು ಆಯತಪ್ಪಿ ಅವಳ ಮೇಲೆ ವಾಲಿದ...... "ಕ್ಯಾಮೆರಾ ಎಲ್ಲಿ? ಕ್ಯಾಮೆರಾ ಎಲ್ಲಿ?" ನವೀನ ಕೂಗು ಹಾಕಿದ. ದಿನೇಶ ಸಾವರಿಸಿಕೊಂಡು 'ಸಾರಿ' ಎಂದ. ತನ್ನ ಎದುರಿಗೆ ಅತ್ಯಂತ ಸನಿಹದಲ್ಲಿ ನಿಂತಿದ್ದ ದಿನೇಶನನ್ನು ಕಂಡು, ಮೈಯ ರಕ್ತವೆಲ್ಲಾ ಮುಖಕ್ಕೆ ಚಿಮ್ಮಿತು. ನಾಚಿಕೆಯಿಂದ ತಲೆ ತಗ್ಗಿಸಿದಳು. ಅವನು ಅವಳಿಗೆ ಜಾಗವನ್ನು ಬಿಟ್ಟು ಕೊಟ್ಟ. ಅವಳು ವ್ಯಾನನ್ನು ಹತ್ತಿದಳು. ಅವಳ ಹಿಂದೆಯೇ ದಿನೇಶನೂ ಹತ್ತಿದ.....

"ಸ್ವಾಗತ..... ಇಬ್ಬರಿಗೂ ಸುಸ್ವಾಗತ....." ಸುಹಾಸ ರಾಗವಾಗಿ ಹಾಡಿದ.

"ನಮ್ಮ ಸುಹಾಸ ತುಂಬಾ ಚೆನ್ನಾಗಿ ಹಾಡ್ತಾನೆ.... ನಮ್ಮನೆ ಲತಾ ಮಂಗೇಶ್ಕರ್.... ಅಲ್ಲ ಅಲ್ಲ ನಮ್ಮನೆ ಸುಹಾಸಿನಿ....."

"ಗೌತಮೀ.... ಮತ್ತೆ ಬೇಕಾ?" ಮುಷ್ಟಿಯನ್ನು ತೋರಿದ.

ವಿದ್ಯಾ ಕಿಟಕಿಯ ಬಳಿಯ ಸೀಟಗಾಗಿ ಹುಡುಕಿದಳು. ನವೀನ ಎದ್ದು ಅವಳಿಗೆ ತನ್ನ ಸೀಟನ್ನು ಬಿಟ್ಟು ಕೊಟ್ಟ. ಆ ಸೀಟಿನ ಹಿಂಬದಿಯ ಸೀಟಿನಲ್ಲಿ ದಿನೇಶ ಕುಳಿತ. ಗೌತಮ ಕಣ್ಣು ಹೊಡೆದು ಚುಡಾಯಿಸಿದ.

"ಬೋಲೋ ಸಿದ್ಧಿ ವಿನಾಯಕ್ ಜೀ ಕೀ......" ಗೌತಮ ಹೇಳುತ್ತಿದ್ದಂತೇ ಉಳಿದವರು ಜೈ ಎಂದು ಜಯಕಾರ ಮಾಡಿದರು. ವ್ಯಾನು ಹೊರಟಿತು. ಬಾಗಿಲ ಬಳಿ ನಿಂತಿದ್ದ ಗೌತಮ ಎಲ್ಲರ ಗಮನ ಸೆಳೆದ.

"ಲೇಡೀಸ್ ಅಂಡ್ ಜಂಟಲ್ ಮೆನ್... ಈಗ ಎಲ್ರೂ ಅಲ್ಲಲ್ಲೇ ಎದ್ದು ನಿಂತು ನಿಮ್ಮ ನಿಮ್ಮ ಪರಿಚಯ ಹೇಳ್ಕೋಬೇಕು.... ನಿಮ್ನಿಮ್ಮ ಬಗ್ಗೆ ಒಂದೆರಡು ಮಾತುಗಳನ್ನು ಹೇಳ್ಬೇಕು....."

"ಹುಂ...... ಅತ್ತೇ ನಿಮ್ಮಂದ್ಲೇ ಪ್ರಾರಂಭವಾಗ್ಲೀ....."

"ವ್ಯಾನು ಓಡ್ತಿದೆಯಲ್ಲೋ ಹೇಗೆ ನಿಂತ್ಕೊಳ್ಳೋದು....."

"ನಿಮ್ ಪಕ್ಕ ಮಾವ ಇರೋದ್ಯಾಕೆ? ಹಿಡ್ಕೊಳ್ಳಿ ಮಾವ ಅತ್ತೇನಾ.." ಗೋಪಾಲ ಅವಳ ಸೊಂಟವನ್ನು ಬಳಸಿ ಹಿಡಿದ.

"ನಾನು, ಸುಶೀಲಾ ಗೋಪಾಲ್..... ನಾನು ಬಿ.ಎ. ಗ್ರಾಜುಯೇಟ್... ಗೃಹಿಣಿ. ಇಬ್ಬರು ಮಕ್ಕಳ ತಾಯಿ, ಮನೆಕೆಲಸ, ಅಡುಗೆ ಕೆಲಸ ನನ್ನ ಹವ್ಯಾಸ....."

"ಬಿಡುವಿದ್ದಾಗ ಮಾಡಿದ ತಿಂಡಿಗಳ ರುಚಿಯನ್ನು ನೋಡುವುದು.." ಗೋಪಾಲ ಹೆಂಡತಿಯನ್ನು ಚುಡಾಯಿಸಿದ. ಸುಶೀಲಾ ಗಂಡನ ಭುಜವನ್ನು ಬೆರಳಿನಿಂದ ಚಿವುಟಿದಳು. "ಆಗ ಈಗ ಗಂಡನಿಗೆ ಹೀಗೆ ಶಿಕ್ಷೆಯನ್ನು ಕೊಡುವುದು ಇವಳ ಅಭ್ಯಾಸ" ಅವನು ಮತ್ತೆ ಗೇಲಿ ಮಾಡಿದ. ಎಲ್ಲರೂ ಚಪ್ಪಾಳೆ ತಟ್ಟಿ ನಕ್ಕರು.

"ನಾನು ಗೋಪಾಲ..... ಸುಶೀಲಳ ಪತಿ. ಆಫೀಸ್‌ನಲ್ಲಿ ಬಾಸ್.... ಆದ್ರೆ ಮನೇಲಿ, ನನ್ನ ಹೆಂಡ್ತಿಯ ಗುಲಾಮ..." ಅವನು ನಕ್ಕು ಹೆಂಡತಿಯ ಕಡೆ ನೋಡಿದ.

"ಸುಳ್ಳು ಸುಳ್ಳು..." ಸುಶೀಲಾ ಕೂಗು ಹಾಕಿದಳು.

"ಅಮ್ಮಾ.... ಈಗ ನಿನ್ನ ಸರದಿ" ಭವಾನಿ ಎದ್ದು ನಿಂತು ಗಂಡನ ಕೈ ಹಿಡಿದು ಕೊಂಡಳು.

"ನಾನು ಭವಾನಿ ಪ್ರಸಾದ್.... ನಾನು ಗೃಹಿಣಿ.... ಮೂರು ಮಕ್ಕಳ ತಾಯಿ... ಮನೆ ಕೆಲಸ, ಅಡುಗೆ ಕೆಲಸದ ನಡುವೆ ಬಿಡುವು ಮಾಡ್ಕೊಂಡು, ಫ್ರೆಂಡ್ಸ್‌ಗಳ ಮನೆಗೆ ಹೋಗಿ ಬರುವುದು ನನ್ನ ಹವ್ಯಾಸ....."

"ಹರಟೆ ಹೊಡೆಯೋದನ್ನ ಹವ್ಯಾಸ ಅಂತೀಯಲ್ಲೇ ಭವಾನಿ....." ಪ್ರಸಾದ ಹೆಂಡ್ತಿಯ ಕಡೆ ನೋಡಿ ಕೇಳಿದ.

"ಮತ್ತಿನ್ನೇನ್ಮಾಡ್ಲೀ..... ಮನೇಲಿ ನಾನೊಬ್ಬೇ..... ನೀವೆಲ್ಲಾ ಬೆಳಗ್ಗೆ ಮನೆ ಬಿಟ್ಟು ಹೊರಟ್ರೆ ಸಾಯಂಕಾಲವೇ ಮನೆಗ್ಬರೋದು......"

"ಅಪ್ಪ ಎದ್ದು ನಿಂತ್ಕೊಂಡು ಮಾತಾಡಿ."

"ನಾನು, ಶಿವ ಪ್ರಸಾದ್, ಆದರೆ ಮದ್ವೆ ಆದ್ಮೇಲೆ ನಾನು ಈ ಭವಾನಿಯ ಪ್ರಸಾದನಾಗ್ಬಿಟ್ಟಿದ್ದೀನಿ....." ಹೆಂಡತಿಯ ಕಡೆ ನೋಡಿ ನಕ್ಕ.

"ಸುಳ್ಳು..... ಸುಳ್ಳು...." ಭವಾನಿ ಗಂಡನ ಬಾಯಿ ಮೇಲೆ ಕೈಯನ್ನಿಟ್ಟಳು.

"ಅಮ್ಮ ನೀನು ಸುಮ್ನಿರಮ್ಮ. ಅಪ್ಪಂಗ್ಮಾತಾಡುಕ್ಕೆ ಬಿಡು." ಭವಾನಿ ಗಂಭೀರಳಾದಳು.

"ನಾನು ಭವಾನಿ ಕೇಳಿ ಕೇಳಿದ್ದನ್ನೆಲ್ಲಾ ತೆಗೆಸಿಕೊಟ್ಟೆ. ಸೀರೆ ಒಡವೆಯಂತೂ ಲೆಕ್ಕವೇ ಇಲ್ಲ."

"ನೋಡು ಸುಶೀಲಾ, ನಿಮ್ಮಣ್ಣ ಎಷ್ಟು ಸುಳ್ಳು ಹೇಳ್ತಾರೆ......"

"ಆದ್ರೆ ಒಂದೇ ಒಂದನ್ನ ಕೊಡುಕ್ಕಾಗ್ಲಿಲ್ಲ.... ಅವಳಿಗೆ ಒಂದು ಹೆಣ್ಣು ಮಗು ಬೇಕಿತ್ತು..... ಅದನ್ನು ಕೊಡುಕ್ಕಾಗ್ಲಿಲ್ಲ. ಅದಕ್ಕೆ ಈ ಗೌತಮಂಗೆ ಆದಷ್ಟು ಬೇಗ ಮದುವೆ ಮಾಡಿ ಸೊಸೇನ ಗಿಫ್ಟ್ ಆಗಿ ಕೊಡೋಣಾಂತ ಅಂದ್ಕೊಂಡಿದೀನಿ."

"ಏನಪ್ಪಾ.... ನಿಮ್ಮ ವಿಷ್ಯ ಹೇಳಿ ಅಂದ್ರೆ..... ನನ್ವಿಷ್ಯ ಯಾಕೆ?"

"ಅಲ್ಲಾ ಸಾರ್...... ನೀವು ಈಗ್ಲೂ ಯಂಗ್ ಆಗಿದೀರಿ..... ಯಾಕೆ ಟ್ರೈ ಮಾಡ್ಬಾರ್ದು?.." ಗೋಪಾಲ ಹೇಳಿದಾಗ ಎಲ್ಲರೂ ನಕ್ಕರು. ಭವಾನಿ ನಾಚಿದಳು.

"ಏನಂತೀಯಾ?" ಎನ್ನುವಂತೆ ಕಣ್ಣುಗಳನ್ನು ಏರಿಸಿ ಕೇಳಿದ ಗೋಪಾಲ......

"ಈಗ ಬ್ಯಾಕ್ ಸೀಟ್‌ನವ್ರು... ಅಲ್ಲಿ ಕಿಟಕಿ ಪಕ್ಕ ಕೂತಿರೋರು.. ಏಳಿ ಮಿಸ್."

ದಿನೇಶನ ತಂಗಿ ಎದ್ದು ನಿಂತಳು. ಎಲ್ಲರೂ ಅತ್ತ ಕತ್ತನ್ನು ಹೊರಳಿಸಿದರು.

"ನಾನು ದೀಪಾ. ಸೆಕೆಂಡ್ ಪಿ.ಯು.ಸಿ. ಯಲ್ಲಿ ಓದ್ತಾ ಇದ್ದೀನಿ.... ಸಂಗೀತಾನ ಕಲಿತಿದೀನಿ.... ಒಳ್ಳೆಯ ಸಂಗೀತಾನ ಕೇಳೋಕೆ ಇಷ್ಟ."

"ನೆಕ್ಸ್ಟ್ ಐಟಂ..... ನಿನ್ನ ಹಾಡುಗಾರಿಕೆ...." ದೀಪಾ ಕುಳಿತಳು.

"ಪ್ಲೀಸ್.... ನೀವು ಗೆಟಪ್......" ಸುಹಾಸನ ಕಡೆ ನೋಡಿದ.

"ನಾನು ಸುಹಾಸ್. ಈ ಗೌತಮನ ತಮ್ಮ ಅಂತ ನನಗೆ ಹೇಳ್ಕೊಳ್ಳೊಕೆ ಇಷ್ಟವಿಲ್ಲ. ಆದ್ರೇನ್ಮಾಡ್ಲೀ..... ಅವ್ನು ನನ್ನ ಅಣ್ಣನಾಗಿ ಈ ಮೊದ್ಲೇ ಹುಟ್ಟಿ ಬಿಟ್ಟಿದ್ದ. ನಾನೂ ಸೆಕೆಂಡ್ ಪಿ.ಯು.ಸಿ. ಯಲ್ಲಿ ಓದ್ತಾ ಇದೀನಿ....."

"ನಾನು ನವೀನ್. ಇಂಜಿನಿಯರಿಂಗ್ ಕೋರ್ಸ್‌ಗೆ ಸೇರಿಕೊಂಡಿದೀನಿ. ನಾನು ಮಧ್ಯಮ. ನನಗೆ ಹಿರಿಯ ಮಗನ ಪಟ್ಟವಿಲ್ಲ. ಕಿರಿಯ ಮಗನ ಮುದ್ದು ಇಲ್ಲ.... ಆದ್ರೂ ನನಗೇನೂ ಬೇಸ್ರವಿಲ್ಲ."

"ಇದಪ್ಪಾ ಮಾತು......" ಗೌತಮ ಶಹಬ್ಬಾಸ್‌ಗಿರಿಯನ್ನು ಕೊಟ್ಟ. ದಿನೇಶನ ಕಡೆ ಕಣ್ಣು ಹೊರಳಿಸಿದ. ದಿನೇಶ ಎದ್ದು ನಿಂತು, ಕೈಯನ್ನು ಕೊಳವೆಯಂತೆ ಮಾಡಿ ಬಾಯಿ ಮುಂದೆ ಹಿಡಿದ.

"ನಾನು ದಿನೇಶ ಅಂತ ನಿಮಗೆಲ್ಲಾ ಗೊತ್ತೇ ಇದೆ. ನಾನು ಇಂಜನಿಯರ್ ಆಗಿ ಒಂದು ಕಂಪೆನಿಯಲ್ಲಿ ಕೆಲಸಕ್ಕೆ ಸೇರಿಕೊಂಡಿದೀನಿ. ನನಗೆ ಹೂವುಗಳೆಂದರೆ ಬಹಳ ಇಷ್ಟ. ಅದರಲ್ಲೂ ಗುಲಾಬಿ ಹೂಗಳೆಂದರೆ ಪ್ರಾಣ. ಗಾರ್ಡನಿಂಗ್, ನನ್ನ

ಹವ್ಯಾಸ..... ಒಳ್ಳೊಳ್ಳೆಯ ಕಥೆ ಪುಸ್ತಕಗಳನ್ನು ಓದ್ತೀನಿ......"

ಕಿಟಕಿಯಿಂದಾಚೆ ನೋಡುತ್ತಿದ್ದ ವಿದ್ಯಾಳ ಹೆಸರನ್ನು ಕರೆದ. "ಮಿಸ್ ವಿದ್ಯಾ ಪ್ಲೀಸ್....." ವಿದ್ಯಾ ಇತ್ತ ತಿರುಗಿ ನಕಾರ ಸೂಚಕವಾಗಿ ತಲೆ ಆಡಿಸಿದಳು.

"ವಿದ್ಯಾ...... ವಿದ್ಯಾ....." ಹಿಂದಿನಿಂದ ನವೀನ, ಸುಹಾಸನ ಧ್ವನಿ ಕೇಳಿಸಿತು. ಅವಳು ದಿನೇಶನ ಕಡೆ ನೋಡಿದಳು. ಅವನು ತುಂಟತನದಿಂದ ನಗುತ್ತಿರುವನೆಂದೆನಿಸಿತ್ತು. ಎದ್ದು ನಿಂತು, ಕರ್ಚೀಫ್‌ನಿಂದ ಮುಖವನ್ನೊರೆಸಿಕೊಂಡಳು.

"ನಾನು ವಿದ್ಯಾ....." ಗಂಟಲಿನಿಂದ ಸ್ವರವೇ ಹೊರಡಲಿಲ್ಲ.

"ಮೈಕ್ ಸರಿಯಾಗಿಲ್ಲ. ಸ್ವಲ್ಪ ಜೋರಾಗಿ ಹೇಳಿ.." ದಿನೇಶನೆಂದ.

"ನಾನು ವಿದ್ಯಾ..... ಸೆಕೆಂಡ್ ಬಿ.ಎ...." ಮುಂದೆ ಹೇಳದೇ ಕುಳಿತುಬಿಟ್ಟಳು...

"ಅಷ್ಟೇನಾ! ಇನ್ನೇನಿಲ್ವಾ?" ಗೌತಮ ಕೇಳಿದ್ದಕ್ಕೆ ಇಲ್ಲವೆನ್ನುವಂತೆ ತಲೆಯಾಡಿಸಿದಳು..

"ನಾನು ಗೌತಮ..... ಬರೀ ಗೌತಮ. ಗೌತಮ ಬುದ್ಧನಲ್ಲ. ನನ್ನವರನ್ನೆಂದೂ ನಾನು ಬಿಟ್ಟು ಹೋಗುಲ್ಲ. ಯಾಕೆಂದ್ರೇ ನನಗೆ ಯಾವ ಜ್ಞಾನವೂ ಬೇಡ..... ಹೀಗೇ ದಡ್ಡನಾಗಿಯೇ ಇರಲು ಇಷ್ಟಪಡ್ತೀನಿ....." ಎಲ್ಲರು ಗೊಳ್ ಎಂದು ನಕ್ಕರು. ಗೌತಮ ಬಂದು ವಿದ್ಯಾಳ ಪಕ್ಕ ಕುಳಿತ.

"ಯಾಕೇ ನಿನಗಷ್ಟು ಭಯ ಮಾತಾಡುಕ್ಕೆ....."

"ಇದೆಲ್ಲಾ ಅಭ್ಯಾಸವಿಲ್ಲ."

"ಅಭ್ಯಾಸ ಮಾಡ್ಕೋಬೇಕಮ್ಮ..... ಇಲ್ದಿದ್ರೆ ಮುಂದೆ ನಿನ್ಗಂಡ ನಿನ್ನನ್ನ ಅದುಮಿಬಿಡ್ತಾನೆ....." ಅವನ ಮಾತುಗಳನ್ನು ಕೇಳಿಸ್ಕೊಂಡ ದಿನೇಶ, ವಿದ್ಯಾ ಏನು ಹೇಳುವಳೋ ಎಂದು ಕಿವಿ ನಿಮಿರಿಸಿ ಕುಳಿತ. ವಿದ್ಯಾಳ ಧ್ಯಾನ ಇಲ್ಲಿರಲಿಲ್ಲ. ಕಿಶೋರನನ್ನೇ ಕುರಿತು ಚಿಂತಿಸುತ್ತಿದ್ದಳು.

ವ್ಯಾನು ಬೆಂಗಳೂರಿನ ಅಂಚನ್ನು ದಾಟಿ, ನಂದಿ ಬೆಟ್ಟವನ್ನು ಸಮೀಪಿಸುತ್ತಿತ್ತು. ಸುತ್ತಲಿನ ಸುಂದರ ದೃಶ್ಯಗಳನ್ನು ನೋಡಿ, ಅಲ್ಲಲ್ಲೇ ವ್ಯಾನನ್ನು ನಿಲ್ಲಿಸಿ, ದೃಶ್ಯಗಳನ್ನು ಕ್ಯಾಮೆರಾದಲ್ಲಿ ಸೆರೆ ಹಿಡಿದರು....

"ನಿಮ್ಮ ತಲೆಗೂದಲು ತುಂಬಾ ಚೆನ್ನಾಗಿದೆ. ಯಾವ ಶ್ಯಾಂಪೂ ಉಪಯೋಗಿಸ್ತೀರಿ?" ದೀಪಾ ವಿದ್ಯಾಳ ಬಳಿಗೆ ಬಂದು ನಿಂತು ಕೇಳಿದಳು.

"ಎಂತೆಂಥಾ ಶ್ಯಾಂಪೂಗಳಿವೆ ಅಂತ ನನಗ್ಗೊತ್ತೇ ಇಲ್ಲ. ಸೀಗೆಪುಡಿ, ಚಿಗರೆಪುಡಿ, ಕಡ್ಲೇ ಹಿಟ್ಟು ಮಾತ್ರ ಉಪಯೋಗಿಸ್ತೀನಿ."

"ಏನೇ ದೀಪು ಈಗ ಮಾತಾಡಿಸ್ತಿದೀಯ......." ಗೌತಮ ಬಂದು ನಿಂತ.

"ಮೊನ್ನೆ ಇವ್ರು ಬಂದಾಗ, ನಾನು ಮನೇಲಿರ್ಲಿಲ್ಲ. ಪರಿಚಯಾನೇ ಇಲ್ಲ. ಅದಕ್ಕೇ ಈಗ ಮಾತಾಡಿಸ್ದೇ. ಏ ಗೌತೀ.. ನಾನು ಇಲ್ಲಿ ಕಲ್ಲು ಬೆಂಚಿನ್ಮೇಲೆ ನಿಂತ್ಕೋ

ತೀನಿ, ಹಿಂದೆ ಇರೋ ಸೀನ್ ಬರೋ ಹಾಗೆ ನನ್ನ ಫೋಟೋ ತೆಗೀ ತೀಯಾ.....?"

"ತಡೀ ದಿನೇಶನ ಹತ್ರ ಕ್ಯಾಮೆರಾ ಇದೆ. ಕರ್ರೀತೀನಿ, ಲೋ ದಿನೋ ಬೇಗ್ಬಾ ರೋ....." ಅವನ ಕೂಗಿಗೆ ಗಾಭರಿಗೊಂಡು ದಿನೇಶ ಓಡಿ ಬಂದ.

"ಏನೋ ಯಾಕ್ಹಾಗರಚ್ಕೋತೀಯೋ? ಯಾರಿಗೇನಾಯ್ತು?"

"ನಿನ್ತಂಗಿ ಕರೆದ್ಲು..... ಅವಳ ಫೋಟೋ ತೆಗೀಬೇಕಂತೆ......"

"ಅಷ್ಟೇನಾ.....? ನಿಂತ್ಕೊಳ್ಳೇ....." ಎನ್ನುತ್ತಾ ಫೋಕಸ್ ಮಾಡುವವನಂತೆ ನಟಿಸಿ, ಸಮೀಪದಲ್ಲಿ ನಿಂತಿದ್ದ ವಿದ್ಯಾಳ ಕಡೆ ಕ್ಯಾಮೆರಾ ತಿರುಗಿಸಿ ಕ್ಲಿಕ್ ಮಾಡಿದ.

"ತಡೀ ತಡೀ...... ಇನ್ನೊಂದು ತೆಗೀತೀನಿ" ಎನ್ನುತ್ತಾ ತಂಗಿಯ ಕಡೆ ತಿರುಗಿ ಕ್ಲಿಕ್ ಮಾಡಿದ.

"ಬನ್ನಿ ವಿದ್ಯಾ ನಾವಿಬ್ರೂ ಒಟ್ಗೆ ನಿಂತ್ಕೊಂಡು ತೆಗೆಸ್ಕೊಳ್ಳೋಣ....."

"ನಾನಾ?" ವಿದ್ಯಾ ಅನುಮಾನಿಸಿದಳು.

"ಹೂಂ, ನೀವೇ ಬನ್ನಿ..... ಎಲ್ಲಿ ಈ ಜಡೇನ ಮುಂದಕ್ಕೆ ಹಾಕ್ಕೊಳ್ಳಿ.... ನಾನು ನನ್ನ ಫ್ರೆಂಡ್ಸ್‌ಗೆಲ್ಲಾ ತೋರಿಸ್ಬೇಕು..... ಹೂಂ, ತೆಗೆಯೋ......"

"ಜಡೆಗೆ ಫೋಟೋನಾ? ನಾನು ಎಲ್ಲೂ ಕೇಳಿರ್ಲಿಲ್ಲ..... ಸರಿ ಬೇಕಾದ್ರೆ ಬೆನ್ನ ಮೇಲೆ ತೂಗಾಡೋ ಜಡೆಗೂ ತೆಗೀತೀನೀ....." ಆದರೆ ವಿದ್ಯಾ ಅದಕ್ಕೆ ಒಪ್ಪಲಿಲ್ಲ.

"ಯಾಕೆ? ದೃಷ್ಟಿ ಬೀಳುತ್ತೆ ಅಂತ ಭಯಾನಾ?"

"ಅವರ್ಗೆ ಬೇಡಾಂತಂದ್ರೆ ಬೇಡ. ನಿಂದೇನು ಬಲವಂತೆ?" ದಿನೇಶ ರೇಗಿದ.

"ನಿನ್ನ್ಯಾರು ಕೇಳಿದ್ರು?" ದೀಪ ಮೂತಿ ತಿರುಗಿಸಿ ಅತ್ತ ನಡೆದಳು. ಅವಳ ಹಿಂದೆ ತಿರುಗಿದ ವಿದ್ಯಾಳ ಹಿಂದೆ ಹಿಂದೆ ನಡೆದ. ಒಂದು ಕಡೆ ಅವಳು ನಿಂತಾಗ, ಅವಳಿಗೆ ತಿಳಿಯದಂತೆ ಕ್ಲಿಕ್ ಮಾಡಿದ.

"ಎಲ್ರಿಗೂ ಹೊಟ್ಟೆ ಹಸೀತಿದೆ. ಇಲ್ಲೇ ಕೂತು ತಿಂಡಿ ತಿನ್ನೋಣ. ಇಲ್ಲದಿದ್ರೆ ಹತ್ತಿ ಇಳಿಯೋ ಶಕ್ತೀನೇ ಇರುಲ್ಲ." ಗೋಪಾಲ ಹೇಳಿದಾಗ, ಎಲ್ಲರಿಗೂ ಸರಿ ಎಂದೆನ್ನಿಸಿತ್ತು. ಅಲ್ಲಿಯೇ ಇದ್ದ ಒಂದು ಮರದ ಕೆಳಗೆ ಜಮುಖಾನವನ್ನು ಹಾಸಿ ಕೊಂಡು ಕುಳಿತರು. ಸುಶೀಲಾ, ಭವಾನಿ ಎಲ್ಲರಿಗೂ ಬಾಳೆ ಎಲೆಯ ಮೇಲೆ, ಘಮಘಮಿಸುವ ರವೆ ಬಾತ್‌ನ್ನು ಹಾಕಿಕೊಟ್ಟಳು. ಭವಾನಿ ತಾನು ತರಿಸಿದ್ದ ಭರ್ಫಿ ಯನ್ನು ಎಲ್ಲರ ಎಲೆಯ ಮೇಲೂ ಇಟ್ಟಳು. ಅವರವರಲ್ಲೇ ಗುಂಪು ಗುಂಪಾಗಿ ಹರಟುತ್ತಾ ತಿಂಡಿಯನ್ನು ತಿನ್ನತೊಡಗಿದರು. ಒಬ್ಬಳೇ ಮಾತಿಲ್ಲದೇ ತನ್ನ ಪಾಡಿಗೆ ತಾನು ತಿನ್ನುತ್ತಾ ಕುಳಿತಿದ್ದವಳ ಬಳಿಗೆ ಗೌತಮ ಬಂದ.

"ಭಾತ್ ಚೆನ್ನಾಗಿದೆ ಅಲ್ವಾ! ನಮ್ಮತ್ತೆ ತಿಂಡೀನ ತುಂಬಾ ಚೆನ್ನಾಗಿ ಮಾಡ್ತಾರೆ. ನೀನೇನೂ ಸಂಕೋಚ ಪಟ್ಕೋಬೇಡ. ನಮ್ಮತ್ತೇನ, ನಿಮ್ಮತ್ತೆ ಅಂತ್ಲೇ ತಿಳ್ಕೋ.....

ಕೇಳಿ ಹಾಕಿಸ್ಕೋ." ಎಲ್ಲರೂ ಕಾರಣವಿಲ್ಲದೇ ನಕ್ಕರು. ಅವಳ ಮೊಗದಾವರೆ ಕೆಂಪಾಯಿತು. ದಿನೇಶ ಭಾತ್‌ನ ಪಾತ್ರೆ ಹಿಡಿದು ಬಂದ. ಬಡಿಸಲು ಮುಂದಾದ. ಅವಳು ಕೈ ಅಡ್ಡ ಹಿಡಿದು "ಬೇಡ ಬೇಡ....." ಕೀರಲು ದನಿಯಲ್ಲಿ ಹೇಳಿದಳು.

"ಬೇಡಾಂದ್ರೆ ಯಾಕೆ ಬಲವಂತ ಮಾಡ್ತೀಯೋ.....? ಇಲ್ಲಿ ನಂಗೆ ಸ್ವಲ್ಪ ಹಾಕು." ಸ್ವಲ್ಪ ದೂರದಲ್ಲಿ ಕುಳಿತಿದ್ದ ದೀಪಾ ಹೇಳಿದಳು.

"ನೀನೇನು ಗೆಸ್ಟಾ? ನೀನೇ ಹಾಕ್ಕೋ......" ಎನ್ನುತ್ತಾ ಪಾತ್ರೆಯನ್ನು ಅವಳ ಮುಂದೆ ಕುಕ್ಕಿದ. "ಕೊಬ್ಬು ನೋಡು" ಎನ್ನುತ್ತಾ ದೀಪಾ ತನಗೆಷ್ಟು ಬೇಕೋ ಅಷ್ಟನ್ನು ತಾನೇ ಬಡಿಸಿಕೊಂಡಳು. ಆ ಸರಸ – ವಿರಸ, ಗೇಲಿ ತಮಾಷೆಯ ಸಂಭಾಷಣೆಗಳು ಹಿತವೆನಿಸಿದ್ದರೂ, ವಿದ್ಯಾಳಿಗೆ ಸಂಕೋಚವನ್ನುಂಟು ಮಾಡಿತ್ತು. ತಂದೆ – ತಾಯಿಯರ ಎದುರಿಗೆ ಈ ಮಕ್ಕಳು ಹೀಗೆ ಮಾತಾಡುವುದೇ? ಅಥವಾ ಈ ಊರಿನವರೆಲ್ಲಾ ಹೀಗೆಯೋ? ತಮ್ಮ ಮನೆಯಲ್ಲಂತೂ ಇಂಥ ಮಾತುಕತೆ, ಹರಟೆಯೇ ಇಲ್ಲ.

ಫ್ಲಾಸ್ಕ್‌ನಲ್ಲಿ ಹಾಕಿಕೊಂಡು ಬಂದಿದ್ದ ಕಾಫಿಯನ್ನು ಬಟ್ಟಲಿಗೆ ಬಗ್ಗಿಸಿ ಕೊಟ್ಟರು. ಕೈ ತೊಳೆದು ಜಮಖಾನವನ್ನು ಕೊಡವಿ ಅಲ್ಲಿಂದ ಎದ್ದರು. ವ್ಯಾನು ಹೊರಟಿತು. ಅಲ್ಲಿಂದ ನೇರವಾಗಿ ಬೆಟ್ಟಕ್ಕೆ ಬಂದರು. ಎಲ್ಲರೂ ಇಳಿದು ಸುತ್ತಲೂ ಒಮ್ಮೆ ನೋಡಿದರು. "ನಾನು ಇಲ್ಲೇ ಎಲ್ಲಾದ್ರೂ ಕೂತಿರ್ತೀನಿ. ನೀವ್ಗಳು ತಿರ್ಗಾಡಿ ಬನ್ನಿ" ಭವಾನಿ ನುಡಿದಳು.

"ನಾನು ಅತ್ಗೆ ಜತೆ ಇರ್ತೀನಿ. ನೀವೆಲ್ರೂ ಹೋಗ್ಬನ್ನಿ." ಸುಶೀಲಾ ತನ್ನ ಅಣ್ಣನಿಗೆ ಹೇಳಿದಳು. ಭಾವ, ಭಾಮೈದ ಮಾತಾಡುತ್ತಾ ಒಂದು ಪಕ್ಕದ ಕಾಲುದಾರಿಗೆ ತಿರುಗಿದರು.

"ಬನ್ನಿ ವಿದ್ಯಾ, ನಾನೂ ನೀವೂ ಈ ಕಡೆ ಹೋಗೋಣ." ದೀಪಾ ವಿದ್ಯಾಳ ಕೈ ಹಿಡಿದೆಳೆದಳು.

"ನೀವೆಲ್ಲಾ ಹೋಗ್ಬನ್ನಿ ದೀಪಾ..... ನಾನು ಇಲ್ಲಿ ಚಿಕ್ಕಮ್ಮನ್ಜೊತೇಲಿರ್ತೀನಿ."

"ಬೇಡ ಬೇಡ. ಚಿಕ್ಕೋರು ನೀವ್ಗಳು ತಿರ್ಗಾಡಿ ಬನ್ನಿ" ಸುಶೀಲಾ ಮತ್ತೆ ಹೇಳಿ ದಾಗ, ವಿದ್ಯಾ ಅವಳೊಡನೆ ಹೊರಟಳು.

"ಅಲ್ಲೆಲ್ಲಿ ಹೋಗ್ತೀಯೇ? ಟಿಪ್ಪು ಡ್ರಾಪ್ ಇರೋದು ಈ ಕಡೆ... ಬನ್ನಿ ನನ್ಜೊತೆ, ಗೈಡ್ ಮಾಡ್ತೀನಿ."

"ಸರ್‍ಯಾಗಿ ಗೈಡ್ ಮಾಡ್ತೀಯೋ ಅಥವಾ......"

"ಹುಶಾರು ಕಣೇ ದೀಪು. ಹುಡ್ಗೀರು ಇಬ್ಬಿಬ್ರೇ ಎಲ್ಲೆಲ್ಲೋ ತಿರುಗಾಡ್ಬೇಡಿ. ಎಲ್ರೂ ಜತೆಜತೇಲಿ ಹೋಗ್ಬನ್ನಿ." ಸುಶೀಲಾ ಹಿಂದಿನಿಂದ ಒತ್ತಿ ಹೇಳಿದಳು.

"ಗೊತ್ತಾಯ್ತ ಅತ್ತೆ ಹೇಳಿದ್ದು.....? ಎಲ್ಲೆಲ್ಲೋ ಹೋದ್ರೆ, ಕಳ್ದು ಹೋಗ್ತೀರಿ.

ಸುಮ್ನೆ ನಮ್ಜೊತೆ ಬನ್ನಿ." ದೀಪಾ ಮೂತಿ ಸೊಟ್ಟ ಮಾಡಿ ಗೌತಮನ ಹಿಂದೆ ಹೆಜ್ಜೆ ಹಾಕಿದಳು.

"ಎಲ್ರೂ ಸುಮ್ನೇ ಹುಡುಗೀರ್ನ ಹೆದರಿಸ್ತಾರೆ...... ಹಾಗಾದ್ರೆ ನಮ್ಗೆ ಸ್ವಾತಂತ್ರ್ಯವೇ ಇಲ್ವಾ?"

"ಇಲ್ಲ, ಹುಡ್ಗೀರ್ಗೆ ಸ್ವಾತಂತ್ರ್ಯವೇ ಇಲ್ಲ. ನಾವು ಹೇಳ್ದ ಹಾಗೆ ಕೇಳ್ಲೇ ಬೇಕು."

"ಕೇಳ್ದೇ ಇದ್ರೆ?"

"ಅಪಾಯಕ್ಕೆ ಸಿಕ್ಕಿ ಬೀಳ್ತೀರಿ..... ಆಗ಼್ೂ ನಾವು ಬೇಕೇ ಬೇಕು:...."

"ಆಹಾಹಾ..... ಮಹಾ ಧೈರ್ಯವಂತ ನೀನು..... ಈಗ ಎದುರ್ಗೇನಾದ್ರೂ ಹುಲಿ ಬಂದ್ರೆ, ನಮ್ಮನ್ಬಿಟ್ಟು ಓಡಿ ಹೋಗ್ತೀರಿ ಅಷ್ಟೇ....."

ಇಲ್ಲಿ ಹುಲಿ ಇದೆಯಾ ದೀಪಾ?" ಧಿದ್ಯಾ ಭಯದಿಂದ ಪ್ರಶ್ನಿಸಿದಳು.

"ಹುಲಿ, ಸಿಂಹ, ಕರಡಿ, ಹಾವು, ಹಲ್ಲಿ, ದೆವ್ವ, ಭೂತ ಎಲ್ಲಾ ಇದೆ. ನೋಡ್ತೀರಾ?" ದಿನೇಶ ಕೇಳಿದ.

"ಏಯ್ ಸುಮ್ನಿರೋ ಹೆದರಿಸ್ಬೇಡ....." ಗೌತಮನ ಮಾತಿನಿಂದ ಧೈರ್ಯ ಗೊಂಡಳು.

"ನಿಮಗೆ ಕಾಡು ಪ್ರಾಣಿ ಅಂದ್ರೆ ಭಯಾನಾ ವಿದ್ಯಾ?"

"ಇಲ್ಲ ದೀಪಾ, ಪ್ರಾಣಿಗಳನ್ನು ಕಂಡ್ರೇನೂ ಹೆದರ್ಕೆ ಇಲ್ಲ..... ಮನುಷ್ಯರನ್ನ ಕಂಡ್ರೇ ಹೆದರ್ಕೆ." ಆ ಮಾತು ದಿನೇಶನನ್ನು ಕುರಿತುದಾಗಿತ್ತು......

"ಇದು ಟಿಪ್ಪು ಡ್ರಾಪ್..... ಇಲ್ಲಿ ಪ್ರೇಮಿಗಳು ಆತ್ಮಹತ್ಯೆ ಮಾಡ್ಕೋತಾರೆ...."

"ಥೂ ಹಾಗೇನೋ ಹೇಳೋದು? ಎಲ್ಲಾ ಪ್ರೇಮಿಗಳಲ್ಲ. ಭಗ್ನಪ್ರೇಮಿಗಳು ಕೆಲವು ಮಾತ್ರ..... ಎಲ್ರೂ ಅಲ್ಲ."

"ಒಟ್ನಲ್ಲಿ ಪ್ರೇಮಿಗಳೇ ತಾನೇ......?" ದಿನೇಶ ಸಮರ್ಥಿಸಿಕೊಂಡ.

"ನಿಂಗೆ ಸರ್ಯಾಗಿ ಮಾತ್ನಾಡುಕ್ಕೇ ಬರುಲ್ಲ..... ಸುಮ್ನೇ ಹೆದರಿಸ್ತೀಯಾ?"

"ಈ ಜಾಗ ಎಷ್ಟು ಚೆನ್ನಾಗಿದೆ ಅಲ್ವಾ? ಈ ಎತ್ತರದಿಂದ ನೋಡಿದ್ರೆ ಕೆಳ್ಗೆ ಇರುವ ಮನೆ ಎಲ್ಲಾ ಚಿಕ್ಕದಾಗಿ ಕಾಣುತ್ತೆ ಅಲ್ವಾ? ಮನುಷ್ಯರು ಬೊಂಬೆ ಥರ ಕಾಣ್ತಾರೆ....."

"ಏ ದಿನೂ..... ಇಲ್ಲಿಂದ ಒಂದು ಫೋಟೋ ತೆಗೆಯೋ....." ದೀಪಾ ಆಸೆಪಟ್ಟಳು.

"ಮೊದ್ಲು ಬೀಳು..... ಆಮೇಲೆ ತೆಗೀತೀನಿ....."

"ಛೇ..... ತಂಗೀಗೆ ಹೀಗೆಲ್ಲಾ ಯಾರಾದ್ರೂ ಹೇಳ್ತಾರಾ?" ವಿದ್ಯಾ ಕೇಳಿದಳು.

"ತಮಾಷೆ ಮಾಡ್ದೇ...... ಅಷ್ಟೇ...."

"ಹೀಗೆಲ್ಲಾ ತಮಾಷೆ ಮಾಡ್ಬಾರ್ದು."

"ಸಾರಿ ಮೇಡಂ..... ದೀಪಾ ಸಿಟ್ಟು ಬಂತೇನೇ?"

"ನಿನ್ನನ್ನ ಬದ್ಲಾಯಿಸುಕ್ಕೆ ಇವ್ರೇ ಸರಿ.... ಒಂದಿನವಾದ್ರೂ ಪ್ರೀತಿಯಿಂದ ಮಾತಾಡ್ಸಿದೀಯ..... ಇನ್ನಷ್ಟು ಬುದ್ಧಿ ಹೇಳಿ ವಿದ್ಯಾ....." ದಿನೇಶ ತಲೆ ಕೆರೆದು ಕೊಂಡು ನಕ್ಕ. ವಿದ್ಯಾ ಅತ್ತ ತಿರುಗಿದಳು. ಅವಳಿಗೆ ಪ್ರಶಾಂತನ ನೆನಪಾಗಿತ್ತು..... ಒಂದು ವೇಳೆ ಅವನೇನಾದ್ರೂ ಇಲ್ಲಿಗೆ ಬಂದು...... ಮುಂದೆ ಯೋಚಿಸಲೂ ಅವಳ ಮನ ಹಿಂಜರಿಯಿತು.

"ಹಿಂದಕ್ಬನ್ನಿ ವಿದ್ಯಾ..... ಅಷ್ಟು ತುದೀಲಿ ನಿಂತ್ಕೋಬೇಡಿ." ದಿನೇಶ ಅವಳನ್ನು ಹಿಂದಕ್ಕೆ ಎಳೆದ. ಅವಳು ಹಿಂದಕ್ಕೆ ವಾಲಿದಳು. ಅವನು ಅವಳನ್ನು ಹಿಡಿದುಕೊಂಡ. ಅಲ್ಲೇ ನಿಂತಿದ್ದ ಗೌತಮನಿಗೆ ತತ್‌ಕ್ಷಣಕ್ಕೆ ಹೊಳೆದು, ಕ್ಯಾಮೆರಾ ಕ್ಲಿಕ್ ಮಾಡಿದ. ವಿದ್ಯಾ ಸಾವರಿಸಿಕೊಂಡು ಹಿಂದೆ ಸರಿದಳು.

"ಸಾರಿ ವಿದ್ಯಾ..... ನಂಗೊಂದ್ಗಳ್ಗೆ ತುಂಬಾ ಹೆದರ್ಕೆ ಆಗ್ಹೋಯ್ತು..... ನೀವೇ ನಾದ್ರೂ ಕೆಳಕ್ಕೆ ಬಿದ್ದು ಬಿಟ್ಟಿದ್ರೆ......?"

"ಏನಾಗ್ತಿತ್ತು? ಕೈಯೋ ಕಾಲೋ ಮುರಿದಿರ್ತಿತ್ತು....."

"ಪ್ಲೀಸ್, ಇತ್ಲಾಗ್ಬನ್ನಿ. ಹಾಗೆಲ್ಲಾ ಮಾತಾಡ್ಬೇಡಿ...... ನಾನಿನ್ನೂ ಆ ಷಾಕ್‌ನಲ್ಲೇ ಇದೀನಿ" ವಿದ್ಯಾ ಅವನನ್ನೇ ಗಂಭೀರವಾಗಿ ನೋಡಿದಳು.

"ಎಲ್ಲಾ ಇತ್ಲಾಗ್ಬನ್ನಿ. ಈ ಪ್ಲೇಸ್ ನಮ್ಮಂಥೋರ್ಗಲ್ಲ....." ಗೌತಮನ ಮಾತನ್ನು ಅನುಮೋದಿಸುತ್ತ ಎಲ್ಲರೂ ಆ ಜಾಗದಿಂದ ಕದಲಿದರು.

"ಇದು ನೋಡಿ ಟಿಪ್ಪು ಸುಲ್ತಾನನ ಬೇಸಗೆ ಅರಮನೆ. ಮೈಸೂರ್ನಲ್ಲಿ ರಾಜ್ಯಭಾರ ಮಾಡ್ತಿದ್ರೂ, ಬೆಂಗಳೂರು ಅವನಿಗೆ ಇಷ್ಟವಾದ ಸ್ಥಳ. ಇಲ್ಲಿ ಅವನು ಕಟ್ಟಿಸಿದ ಕೋಟೆ ಸಹ ಇದೆ....."

"ಅದನ್ನೆಲ್ಲಾ ಅವ್ಳು ಹಿಸ್ಟರೀಲಿ ಓದಿದಾಳೆ. ಅಲ್ವೇನೇ ವಿದ್ಯಾ?"

"ಓದಿದ್ರೇನಾಯ್ತು? ನೋಡಿದ್ರಾ? ಅದಕ್ಕೇ ಹೇಳ್ದೇ......"

"ಭಾಳ ಇಂಪ್ರೆಸ್ ಮಾಡುಕ್ಕೆ ನೋಡ್ತಿದೀಯ ಏನ್ವಿಷ್ಯ?" ನವೀನ ಕೇಳಿದ.

"ಏನಿಲ್ಲ, ನೀವೆಲ್ಲಾ ಭಾಳ ತಲೆಹರ್ಟೆಗಳು. ಇವರು ಹಾಗಲ್ಲ." ವಿದ್ಯಾಳ ಕಡೆ ಪ್ರೀತಿಯ ನೋಟವನ್ನು ಬೀರಿದ. ಅವಳ ಮೈಯಲ್ಲಿ ಏನೋ ಹೊಸ ಸಂಚಾರವಾ ದಂತಾಯಿತು. ಏನೋ ಹೊಸ ಅನುಭವ, ತಾನು ಈ ಹಿಂದೆ ಎಂದೂ ಅನುಭವಿಸಿ ರದ ಅನುಭವ.....

"ಬೇಗ್ಬೇಗ್ಬನ್ನಿ..... ಹೊಟ್ಟೆ ಹಸೀತಿದೆ....." ದೀಪಾ ಅವಸರಿಸಿದಳು.

"ಇಷ್ಟು ಬೇಗ ಎಂಥಾ ಹಸಿವೇನೇ? ಇಲ್ಲಿಗೆ ಬರೋಕೆ ಮುಂಚೆ ತಿಂಡಿ ತಿಂದಿದ್ಯಲ್ಲಾ....."

"ದಿನಾ ಇದು ನನ್ನ ಲಂಚ್ ಟೈಮ್...... ಅಷ್ಟೊತ್ತಿಗೆ ಸರಿಯಾಗಿ ಹೊಟ್ಟೆ

ಚುರುಗುಟ್ಟುತ್ತೆ..... ಬೇಗ್ಬನ್ರೋ.....?" ಎಲ್ಲರೂ ಇಳಿಜಾರಾಗಿದ್ದ ನೆಲದ ಮೇಲೆ ಸರಸರನೆ ನಡೆದು ಬಂದರು. ದೊಡ್ಡವರು, ಚಿಕ್ಕವರಿಗಾಗಿ ಕಾಯುತ್ತಾ ಇದ್ದರು.

"ಮುಗೀತಾ ಸುತ್ತಾಡಿದ್ದು? ಊಟ ಮಾಡೋಣ್ವಾ....."

"ಹುಂ. ನಂಗಂತೂ ತುಂಬಾ ಹಸಿವಾಗ್ತಿದೆ.."

"ನಿನಗೊಬ್ಬಿಗೇ ಅಲ್ಲ. ಎಲ್ರಿಗೂ ಹಸಿವಾಗ್ತಿದೆ..... ಆದ್ರೆ ನಿನ್ನಾಗೆ ಯಾರೂ ಆಡ್ತಿಲ್ಲ...." ದಿನೇಶ ತಂಗಿಯ ತಲೆಕೂದಲನ್ನು ಜುಂಗಿಸಿದ.

"ಏಯ್ ತೆಗೆಯೋ ಕೈನ... ಕೂದ್ಲೆಲ್ಲಾ ಕೆದರಿ ಹೋಯ್ತು...." ಎನ್ನುತ್ತಾ ಡಬ್ಬಿ ಗಳ ಮುಚ್ಚಳವನ್ನು ತೆರೆದಳು. ಭವಾನಿ, ಸುಶೀಲಾ ಎಲ್ಲರಿಗೂ ತಟ್ಟೆಗಳಲ್ಲಿ ಹುಳಿಯನ್ನ ವನ್ನು, ಮೊಸರನ್ನವನ್ನು ಬಡಿಸಿಕೊಟ್ಟಳು. ಜತೆಗೆ ನೆಂಚಿಕೊಳ್ಳಲು ಉಪ್ಪಿನಕಾಯಿ, ಖಾರದ ಚಿಪ್ಸು. ಎಲ್ಲರೂ ಒಟ್ಟಿಗೆ ಕುಳಿತು, ಹರಟುತ್ತಾ ತಿಂದರು.

* * *

'ತಮ್ಮ ಮನೆಯಲ್ಲಿ ಊಟ ಮಾಡುವಾಗ, ಮಾತುಕತೆ, ಹರಟೆ ಇರಲಿ, ತಟ್ಟೆ, ಲೋಟ ಕೂಡ ಸದ್ದಾಗುವಂತಿಲ್ಲ. ಅಷ್ಟೇ ಭಯ ಅಪ್ಪನದು..... ಇದೆಲ್ಲಾ ಗಲಾಟೆ ಅಂತೆನ್ನಿಸಿದರೂ, ಇಲ್ಲಿ ಪ್ರೀತಿ, ವಿಶ್ವಾಸ, ನಂಬಿಕೆಗಳ ಸಮ್ಮಿಳನ. ಅಲ್ಲಿ ಶಿಸ್ತಿನ ಮುಖವಾಡವನ್ನು ಧರಿಸಿ, ಗಂಭೀರತೆಯ ನಾಟಕವನ್ನಾಡಿ, ಒಬ್ಬರಿಗೊಬ್ಬರು ಹತ್ತಿರವಾಗುವ ಪ್ರಶ್ನೆಯೇ ಇಲ್ಲ. ಆ ಜೀವನ ಕೃತಕ! ಈ ಜೀವನ ನೈಜ!! ಎಲ್ರೂ ಹೇಗೆ ನಗುನಗ್ತಾ ಇದಾರೆ! ನಮ್ಮನೇಲಿ ಎಂದೂ ಹೀಗೆ ಬಾಯಿ ಬಿಟ್ಟು ನಕ್ಕಿದ್ದೇ ಇಲ್ಲ. ಇವರ್ಗಳನ್ನ ನೋಡಿ ಅಪ್ಪ ಹೇಗಿರ್ಬೇಕೂಂತ ಕಲೀಬೇಕು.'

"ವಿದ್ಯಾ..... ಮೊಸರನ್ನ ಹಾಕ್ಲಾ?" ವಿದ್ಯಾ ಎಚ್ಚೆತ್ತಳು.

"ಬೇಡ ಚಿಕ್ಕಮ್ಮ.... ಇದೇ ಜಾಸ್ತಿ ಆಯ್ತು."

"ಇನ್ನು ರಾತ್ರಿಯ ತನಕ ಯಾರ್ಗೂ ಏನಿಲ್ಲ."

"ಹೌದಾ ಅತ್ತೆ? ಹಾಗಾದ್ರೆ ನಂಗೆ ಇನ್ನೊಂದು ಸ್ವಲ್ಪ ಮೊಸರನ್ನ ಹಾಕಿ."

"ಸಿಕ್ಕಾಬಟ್ಟೆ ತಿನ್ಬೇಡ್ವೋ..... ಆಮೇಲೆ ಗೊರಕೆ ಹೊಡೀತಾ ಮಲಗ್ಬಿಡ್ತೀಯ ಅಷ್ಟೇ....."

"ಹೌದು ಹೌದು. ಕುಂಭಕರ್ಣನ ಥರಾ. ಎಬ್ಬಿಸೋಕೆ ರಾಕ್ಷಸರೇ ಬರ್ಬೇಕು."

"ನೀನಿದೀಯಲ್ಲ. ಬೇರೆ ರಾಕ್ಷಸಿ ಯಾಕೆ?"

"ಅಮ್ಮಾ...... ನೋಡಮ್ಮಾ....... ಇವ ನನ್ನ..... ರಾಕ್ಷಸಿ ಅಂತ ಬೈತಾನೆ...."

"ಸುಮ್ನಿರ್ಬಾರ್ದೇನೋ ದಿನೂ..... ಇಲ್ಲೂ ಜಗಳ ಆಡ್ಬೇಕಾ?"

"ಆಟ ಆಡೋಕೆ ಏನನ್ನೂ ತಂದಿಲ್ವಲ್ಲ... ಜಗಳಾನಾದ್ರೂ ಆಡೋಣ ಅಂತ..."

"ಅತಿಯಾಯ್ತು ನಿಂದು..... ಊಟ ಮುಗಿದಿದ್ರೆ ಕೈ ತೊಳ್ಕೋ..... ಪಾತ್ರೆಗಳ ನ್ನೆಲ್ಲ ಎತ್ತಿ ಡಿಕ್ಕಿಲಿಡ್ಬೇಕು."

"ಅಂತಾಕ್ಷರೀ ಆಡೋಣ್ವಾ?" ದೀಪಾ ಉತ್ಸಾಹದಿಂದ ಕೇಳಿದಳು.

"ಅಂತಾಕ್ಷರಿ ಬೇಡ. ಯಾವ ಸಿನೆಮಾ ಹಾಡೂ, ಯಾರ್ಗೂ ಸರಿಯಾಗಿ ಬರುಲ್ಲ..... ಅಕ್ಕಪಕ್ಕದ ಕಾಡಿನ ಪ್ರಾಣಿಗಳೆಲ್ಲ ಓಡಿ ಬಂದು ಬಿಡುತ್ವೆ" ಸುಹಾಸ ನಕ್ಕ.

"ನಾನೊಂದು ಹೊಸ ಆಟ ಹೇಳ್ತೀನಿ. ಎಲ್ರೂ ಜಮಖಾನದ ಮೇಲೆ ರೌಂಡ್ ಆಗಿ ಕೂತ್ಕೊಳ್ಳಿ. ಒಂದಿಷ್ಟು ಚೀಟಿಗಳಲ್ಲಿ ಏನೇನಾದ್ರೂ ಬರೆದು, ಸರದಿ ಪ್ರಕಾರ ಎತ್ತೋಣ. ಆ ಚೀಟೀಲಿ ಏನು ಬರೆದಿರುತ್ತೋ ಅದನ್ನು ಆ ಚೀಟಿ ಸಿಕ್ಕಿದವರು, ಮಾಡಿ ಆಡಿ ತೋರಿಸ್ಬೇಕು..." ಗೌತಮನ ಕಡೆ ನೋಡುತ್ತಾ ನವೀನ ನುಡಿದ.

"ಅದು ಕಷ್ಟ......" ದೀಪಾ ಮೂಗು ಮುರಿದಳು. ಗೌತಮ ಮುಂದಾದ.

"ಕಷ್ಟ ಏನಿಲ್ಲ. ಎಲ್ರಿಗೂ ಗೊತ್ತಿರೋ ಸುಲಭವಾದದ್ದನ್ನೇ ಬರೆದ್ರಾಯ್ತು" ಎನ್ನುತ್ತಾ ತನ್ನ ಬಳಿಯಿದ್ದ ಪೇಪರ್‌ನ್ನು ಚಿಕ್ಕ ಚೂರುಗಳನ್ನಾಗಿ ಹರಿದು, ಎಲ್ಲರಿಗೂ ಕೊಟ್ಟ. "ನೀವುಗಳೇ ಏನು ಬೇಕೋ ಅದನ್ನು ಬರೀರಿ. ಅದು ಬೇರೆ ಯಾರ್ಗಾದ್ರೂ ಸಿಗ್ಬಹುದು. ಅವ್ರು ಅದನ್ನು ಮಾಡ್ಬೇಕು...." ಗೌತಮ ವಿವರಿಸಿದ.

* * *

ಅಧ್ಯಾಯ-ಹತ್ತು

ಹತ್ತಿರವಾದಷ್ಟೂ ದೂರ

ಕೆಲವೇ ನಿಮಿಷಗಳಲ್ಲಿ ಎಲ್ಲರೂ ತಮತಮಗೆ ಅನ್ನಿಸಿದ್ದನ್ನು ಸಂಕ್ಷಿಪ್ತವಾಗಿ ಚೀಟಿಯಲ್ಲಿ ಬರೆದು ಮಡಿಸಿಟ್ಟರು. ಎಲ್ಲವನ್ನೂ ಒಂದು ಡಬ್ಬಿಯೊಳಗೆ ಹಾಕಿ ಚೆನ್ನಾಗಿ ಕಲಕಿ, "ಮೊದಲು ಅಮ್ಮನಿಂದ ಶುರು...." ಎಂದು ಹೇಳಿ, ತಾಯಿಯ ಮುಂದೆ ಆ ಡಬ್ಬಿಯನ್ನು ಹಿಡಿದ. ಭವಾನಿ ಒಂದು ಚೀಟಿಯನ್ನೆತ್ತಿಕೊಂಡಳು. ಮನದಲ್ಲೇ ದೇವರನ್ನು ಸ್ಮರಿಸಿ, ಬಿಡಿಸಿ ಓದಿದಳು– ಒಂದು ಗಳಿಗೆ ಪೆಚ್ಚಾದಳು. ತತ್‌ಕ್ಷಣವೇ ಸಾವರಿಸಿಕೊಂಡು ಸರ‍್ರನೆ ಎದ್ದು ಗಂಡನ ಕಾಲಿಗೆ ನಮಸ್ಕರಿಸಿದಳು. ಎಲ್ಲರೂ ಬೆರಗಾಗಿ ಅವಳನ್ನೇ ನೋಡಿದರು. ಭವಾನಿ ಮುಗುಳ್ನಗುತ್ತಾ ನುಡಿದಳು,

"ಇದರಲ್ಲಿ ಬರೆದಿರೋದೇ ಹೀಗೆ... 'ನಿನಗಿಂತ ಹಿರಿಯರಿಗೆ ನಮಸ್ಕರಿಸಬೇಕು' ಅಂತ. ಇವ್ರೊಬ್ಬರೇ ನಂಗಿಂತ ದೊಡ್ಡವರು..."

"ಪುಣ್ಯಾತ್ಗಿತ್ತಿ ಹೆದರಿಸಿ ಬಿಟ್ಟೆಯಲ್ಲೇ... ಮೊದಲೇ ಹೇಳ್ಬಾರ್ದಾಗಿತ್ತು... ಸರಿಯಾಗಿ ಆಶೀರ್ವಾದ ಮಾಡ್ತಿದ್ದೆ. ಇದ್ದಕ್ಕಿದ್ದಾಗೇ ನೀನು ಕಾಲಿಗ್ಬಿದ್ದಿದ್ದನ್ನು ಕಂಡು ಹೆದರಿದೆ. ಸದ್ಯ ಚೀರಲಿಲ್ಲ." ಯಾರಿಗೂ ನಗುವನ್ನು ತಡೆಯಲಾಗಿರಲಿಲ್ಲ. ಇದನ್ನು ತನ್ನ ಗಂಡನೇ ಬರೆದಿರಬಹುದೇ ಎಂಬ ಅನುಮಾನ ಅವಳಿಗೆ.

"ನೆಕ್ಸ್ಟ್..." ಎನ್ನುತ್ತಾ ಅತ್ತೆಯ ಮುಂದೆ ಹಿಡಿದ. ಸುಶೀಲಾ ಗಾಬರಿಯಿಂದ ಚೀಟಿಯನ್ನೆತ್ತಿಕೊಂಡು ಬಿಡಿಸಿ ಓದಿದಳು. ಗಲಿಬಿಲಿಗೊಂಡಿದ್ದಳು. ಆದರೂ ಮಧ್ಯದಲ್ಲಿ ಬಂದು ನಿಂತು, ತನಗೆ ತಿಳಿದಂತೆ ನರ್ತಿಸಿದಳು.

ದಿನೇಶ ಅಂತೂ ಬಿದ್ದು ಬಿದ್ದು ನಕ್ಕ. "ಈ ಡ್ಯಾನ್ಸನ್ನು ಯಾವಾಗಮ್ಮ ಕಲಿತೆ?"
"ನಿನ್ನನ್ನು ಬೆಳೆಸುವಾಗ." ಎಂದು ಹೇಳಿ ನಗಿಸಿ, ಮತ್ತೆ ತನ್ನ ಸ್ಥಾನಕ್ಕೆ ಬಂದು ಕೂತಳು. ಈಗ ಹಿರಿಯ ಗಂಡಸರ ಸರದಿ. ಗೋಪಾಲ ಸರಸರನೆ ಪಾತ್ರೆಗಳನ್ನು ತೊಳೆಯುವ ಕೆಲಸವನ್ನು ಮಾಡಿ ತೋರಿಸಿದ. ಪ್ರಸಾದ, ಹೆಂಡತಿಯ ಜಡೆಯನ್ನು ಬಿಚ್ಚಿ ಹೆಣೆದ....

"ಈ ಮಕ್ಕಳೆಲ್ಲಾ ಕೆಟ್ಟೋವು... ಅಪ್ಪಂದಿರ ಹತ್ರ ಏನೇನೋ ಕೆಲ್ಸಾನ ಮಾಡಿಸ್ತಿವೆ." ಅಂತ ಹೇಳಿದರೂ ಅದರಲ್ಲಿ ಕ್ರೋಧವಿರಲಿಲ್ಲ.

ನವೀನ, ಗಿಟಾರ್ ನುಡಿಸುವವನಂತೆ ಪೋಸ್ ಕೊಟ್ಟ, ಗೌತಮ ತಾಳ ಹಾಕಿ, ಸಂಗೀತ ಕಛೇರಿ ನಡೆಸಿದ. ಸುಹಾಸ, ಕನ್ನಡಿಯ ಮುಂದೆ ನಿಂತು ಮೇಕಪ್

ಮಾಡಿಕೊಳ್ಳುವವನಂತೆ ನಟಿಸಿದ. ದೀಪಾ.... ಕಷ್ಟಪಟ್ಟು ಕಸ ಗುಡಿಸುವ ಕೆಲಸವನ್ನು ಅಭಿನಯಿಸಿಧಾಗ ಎಲ್ಲರೂ ಶ್ಚು...ಶ್ಚು ಎಂದು ಲೊಚಗುಟ್ಟಿದರು. ಈಗ ಉಳಿದವರು ದಿನೇಶ ಹಾಗೂ ವಿದ್ಯಾ. ದಿನೇಶ ತನಗೆ ಸಿಕ್ಕ ಚೀಟಿಯನ್ನು ಬಿಡಿಸಿ ಓದಿ, ಹಾಗೆ ಜಮಖಾನದ ಮೇಲೆ ಉರುಳಿಕೊಂಡು ಕಣ್ಣು ಮುಚ್ಚಿ ಗೊರಕೆಯ ಸದ್ದನ್ನು ಹೊರಡಿಸಿದ. ಅವನ ಪಾಲಿಗೆ ಬಂದ ಚೀಟಿಯಲ್ಲಿ ನಿದ್ದೆ ಮಾಡಬೇಕು ಎಂದು ಬರೆದಿತ್ತು. ಈಗ ಉಳಿದದ್ದು ಒಂದೇ ಒಂದು ಚೀಟಿ. ಅದರಲ್ಲೇನು ಬರೆದಿದೆಯೋ ಅವಳಿಗೆ ತಿಳಿಯದು. ನಡುಗುವ ಕೈಗಳಿಂದ ಚೀಟಿಯನ್ನೆತ್ತಿಕೊಂಡಳು, ಬರೆದಿದ್ದುದನ್ನು ಓದಿಕೊಂಡಳು. ತುಟಿಯಂಚಿನಲ್ಲಿ ಕಿರುನಗೆ ಮೂಡಿತು. ಎದುರಿಗಿದ್ದ ಚೊಂಬಿನಿಂದ ಲೋಟಕ್ಕೆ ನೀರನ್ನು ಬಗ್ಗಿಸಿಕೊಂಡು ಗಟಗಟನೆ ನೀರನ್ನು ಕುಡಿದಳು. ಎಲ್ಲರೂ ಕುತೂಹಲದಿಂದ ಅವಳೇನು ಅಭಿನಯಿಸುವಳೋ ಎಂಬಂತೆ ಅವಳನ್ನೇ ನೋಡಿದರು. ಅವಳ ಪಾಡಿಗೆ ಅವಳು ಸುಮ್ಮನಿದ್ದುದನ್ನು ಕಂಡು, ದಿನೇಶ ಅವಳ ಕೈಯಲ್ಲಿದ್ದ ಚೀಟಿಯನ್ನು ಕೈಗೆತ್ತಿಕೊಂಡು ಓದಿದ. ಅದರಲ್ಲಿ 'ಗಟಗಟನೆ ಒಂದು ಲೋಟ ನೀರನ್ನು ಕುಡಿಯಬೇಕು' ಅಂತ ಬರೆದಿತ್ತು. ಈಗ ಎಲ್ಲರಿಗೂ, ಅವಳು ಹಾಗೇಕೆ ಮಾಡಿದಳೆಂದು ಅರ್ಥವಾಯಿತು. ಈಗ ಅವರವರಲ್ಲೇ.... ಯಾರ್‍ಯಾರು ಏನೇನು ಬರೆದಿದ್ದರೆಂದು ಚರ್ಚಿಸತೊಡಗಿದ್ದರು.

"ಆಟ ಸಾಕು. ಇನ್ನು ಏಳಿ.... ಘಾಟಿ ಸುಬ್ರಹ್ಮಣ್ಯ ಇಲ್ಲಿಗೆ ಸಮೀಪದಲ್ಲಿದೆ. ಹೇಗೂ ಇಷ್ಟು ದೂರ ಬಂದುದಾಗಿದೆ. ಅಲ್ಲಿಗೂ ಹೋಗ್ಬಿಟ್ಟು ಹೋಗೋಣ."

"ಬೆಳಿಗ್ಗೆ ಮೊದಲೇ ಅಲ್ಲಿಗೆ ಹೋಗ್ಬಹುದಾಗಿತ್ತು....." ಭವಾನಿ ಎಂದಳು.

"ಆಗ್ಲೇ ನೀನ್ಯಾಕೆ ಹೇಳಲಿಲ್ಲ....? ಹೋಗ್ಲೀ ಏನಾಯ್ತೀಗ? ಒಂದಿಷ್ಟು ತಪ್ಪು ಕಾಣಿಕೇನ ಹುಂಡಿಗೆ ಹಾಕಿ ತಪ್ಪಾಯ್ತು ಅಂತ ಕೇಳ್ಕೊಳ್ಳೋಣ..."

ಎಲ್ಲರೂ ಎದ್ದು ಮೈ- ಕೈ ಕೊಡವಿಕೊಂಡರು. ಜಮಖಾನವನ್ನು ಎತ್ತಿ ಕೊಡವಿ ಸುತ್ತಿ, ವ್ಯಾನಿನಲ್ಲಿಟ್ಟರು. ಎಲ್ಲರೂ ಮತ್ತೆ ವ್ಯಾನನ್ನು ಹತ್ತಿದರು. ಘಾಟಿಯಲ್ಲಿ ಇಳಿದು ಮೊದಲು ಕೈ- ಕಾಲು ತೊಳೆದು, ಹೂವು- ಹಣ್ಣು ಕಾಯಿಗಳನ್ನು ಕೊಂಡು, ದೇವಸ್ಥಾನಕ್ಕೆ ಬಂದರು. ಗೋಪಾಲ ಹಾಗೂ ಪ್ರಸಾದ ಅವರಿಬ್ಬರ ಕುಟುಂಬದವರ ಹೆಸರಿನಲ್ಲಿ ಅರ್ಚನೆಯನ್ನು ಮಾಡಿಸಿದರು. ಮಂಗಳಾರತಿ, ತೀರ್ಥ ಪ್ರಸಾದದ ಅನಂತರ, ದೇವಸ್ಥಾನದ ಹಿಂಬದಿಯಲ್ಲೇ ಇರುವ ನಾಗಬನಕ್ಕೆ ಬಂದರು. ಅಲ್ಲೇ ಪಕ್ಕದಲ್ಲಿ ಪುಷ್ಕರಿಣಿ. ನಾಗಬನದಲ್ಲಿ ಕೋತಿಗಳು ಎಗರಿ ಬಂದು, ಹಣ್ಣು ಕಾಯಿಗಳನ್ನು ಕಚ್ಚಿಕೊಂಡು ಓಡಿದವು. ಮೊದಲಿಗೆ ಎಲ್ಲರೂ ಭಯಪಟ್ಟರೂ, ಅನಂತರ ಬಾಯ್ತುಂಬಾ ನಕ್ಕರು. ಅಲ್ಲಿರುವ ಚಿಕ್ಕ ಮಂದಿರಗಳನ್ನು ನೋಡಿ ಮತ್ತೆ ಮೇಲೆ ಬಂದರು.

"ಅಂತೂ ಸುಬ್ರಹ್ಮಣ್ಯೇಶ್ವರನ ಹಾಗೂ ಲಕ್ಷ್ಮೀ ನರಸಿಂಹ ಸ್ವಾಮಿಯ ದರ್ಶನವಾಯ್ತು..." ಎಂದು ಹೇಳಿ ಭವಾನಿ ಗಂಡನಿಂದ ನೋಟನ್ನು ಕೇಳಿ ಪಡೆದು,

ಹುಂಡಿಯೊಳಕ್ಕೆ ಹಾಕಿದಳು. ಸುಶೀಲಳೂ ಮನದಲ್ಲೇ ದೇವರನ್ನು ಸ್ಮರಿಸಿ, ಹುಂಡಿಯೊಳಕ್ಕೆ ನೋಟನ್ನು ತೂರಿಸಿದಳು. ಅಲ್ಲೇ ಒಂದು ಸಣ್ಣ ಹೋಟೆಲಿನಲ್ಲಿ ಎಲ್ಲರೂ ಕಾಫಿಯನ್ನು ಕುಡಿದರು. ಮತ್ತೆ ವ್ಯಾನನ್ನು ಹತ್ತಿದರು. ವ್ಯಾನ್ ಬೆಂಗಳೂರಿನ ಕಡೆಗೆ ಓಡಿತು. ಈಗ ಎಲ್ಲರೂ ಆಯಾಸಗೊಂಡಿದ್ದರು. ಎಲ್ಲರಿಗೂ ಅವರವರದೇ ಏನೋ ಚಿಂತೆ.

ದಿನೇಶ ವಿದ್ಯಾಳನ್ನೇ ಕುರಿತು ಚಿಂತಿಸುತ್ತಿದ್ದ. ವಿದ್ಯಾ ತನ್ನ ಮನೆಯವರನ್ನು ಕುರಿತು ಚಿಂತಿಸುತ್ತಿದ್ದಳು. ನಾಳೆಯಂತೂ ಊರಿಗೆ ಹೋಗುವ ಮಾತಿಲ್ಲ. ಈಗಾಗ್ಲೇ ಇಲ್ಲಿಗೆ ಬಂದು ಹದಿನೈದು ದಿನಗಳ ಮೇಲಾಯ್ತು. ನಮ್ಮ ಮನೆಯವರ್‍ಯಾರಿಗೂ ನನ್ನ ಚಿಂತೆ ಇಲ್ಲವೆ? ಕಿಶೋರನಿಂದಲೂ ಪತ್ರ ಬರಲಿಲ್ಲ. ಹಾಗಾದರೆ ಅವನ ಪ್ರೀತಿ ಸುಳ್ಳೇ... ಏಕೋ ಏನೋ ಅಳು ಬರುವಂತಾಗಿತ್ತು. ಈಗ ಅವಳ ಪಕ್ಕದಲ್ಲಿ ದೀಪಾ ಕುಳಿತಿದ್ದಳು.

"ಯಾಕೆ ಏನಾಯ್ತು? ಅಳ್ತಾ ಇದ್ದೀರಲ್ಲ..." ಈ ಮಾತು ದಿನೇಶನಿಗೆ ಕೇಳಿಸಿತ್ತು. "ಏನಾಯ್ತೇ ದೀಪಾ, ಯಾಕಳ್ತಿದಾರೆ?" ಅವನು ಕೇಳಿದ. ಕ್ಷಣಮಾತ್ರದಲ್ಲಿ ವಿದ್ಯಾ ಅಳುತ್ತಿರುವಳೆಂದು ಎಲ್ಲರಿಗೂ ಗೊತ್ತಾಗಿತ್ತು. ಎಲ್ಲರೂ ಕೇಳುವವರೇ. ಅವಳು ಯಾರಿಗೂ ಉತ್ತರಿಸದೆ ಕೈಗಳಿಂದ ಮುಖ ಮುಚ್ಚಿ ಅತ್ತಳು. ಕೆಲವು ಸಮಯದ ಅನಂತರ ತಾನೇ ಸಮಾಧಾನಗೊಂಡಳು. ಅವಳ ವರ್ತನೆ ಅವಳಿಗೇ ಸಂಕೋಚವನ್ನುಂಟುಮಾಡಿತ್ತು. ವಿದ್ಯಾರಿಗೇನೋ ಬೇಜಾರಾಗಿದೆ. ಎಲ್ಲರಿಗೂ ಅನ್ನಿಸಿದ್ದು ಅಷ್ಟೇ. ಭವಾನಿ ಮಾತ್ರ ಕಾರಣವನ್ನು ಊಹಿಸಿದ್ದಳು.

ಮೊದಲು ಎಲ್ಲರೂ ಇವರ ಮನೆಯಲ್ಲೇ ಇಳಿದರು. "ಬೇಗ ಬೇಗ ಅಡುಗೆ ಮಾಡಿ ಬಿಡ್ತೀನಿ. ಇಲ್ಲೇ ಊಟ ಮಾಡ್ಕೊಂಡು ಹೋಗೋರಂತೆ." ಭವಾನಿ ಅವರುಗಳನ್ನು ಉಳಿಸಿಕೊಂಡಳು. ವಿದ್ಯಾ ತಾನೂ ಅಡುಗೆಮನೆಯನ್ನು ಸೇರಿದಳು. ಅರ್ಧ ಗಂಟೆಯೊಳಗೆ ಬಿಸಿ ಅಡುಗೆ ಸಿದ್ಧವಾಗಿತ್ತು. ಹಾಲು, ಮೊಸರು, ತುಪ್ಪ, ಉಪ್ಪಿನಕಾಯಿ ಎಲ್ಲಾ ಇತ್ತು. ಮೊದಲು ಹೊರಡುವವರು ಊಟಕ್ಕೆ ಕುಳಿತರು. ವಿದ್ಯಾ ತಾನೂ ಬಡಿಸಲು ಮುಂದಾದಳು. ಊಟದ ಅನಂತರ ಅವರುಗಳು ಹೊರಟುಬಿಟ್ಟರು.

ಆ ರಾತ್ರಿ ಕಳೆಯಿತು. ಬೆಳಗ್ಗಿನ ಹೊತ್ತಿಗೆ ಭವಾನಿಯ ಆರೋಗ್ಯದಲ್ಲಿ ಸ್ವಲ್ಪ ಏರುಪೇರಾಗಿತ್ತು. ಆಯಾಸದಿಂದ ಮೈ – ಕೈ ನೋವುಂಟಾಗಿತ್ತು. ಆ ನೋವಿಗೆ ಜ್ವರ ಬಂದಿತ್ತು. ವಿದ್ಯಾ ಆತಂಕಗೊಂಡಿದ್ದಳು.

"ರೆಸ್ಟ್ ತಗೊಂಡ್ರೆ ಸಾಯಂಕಾಲದ ಹೊತ್ತಿಗೆ ಸರಿ ಹೋಗ್ತೀನಿ. ನೀನು ಮುಖಾನ ಚಿಕ್ಕದು ಮಾಡ್ಕೋಬೇಡ."

"ಪಕ್ಕದ ರಸ್ತೆಯಲ್ಲಿರುವ ಹೋಟೆಲ್ನಿಂದ ತಿಂಡಿ ತರಿಸಿದ್ರಾಯ್ತು. ನಿಮ್ಮ ಚಿಕ್ಕಪ್ಪಂಗೆ ಹೇಳಿದ್ರೆ ಕುಕ್ಕರಿನಲ್ಲಿ ಅನ್ನ ಮಾಡ್ತಾರೆ.... ಅಷ್ಟು ಸಾಕು..."

ವಿದ್ಯಾ ಚಿಕ್ಕಮ್ಮನ ಪಕ್ಕದಿಂದ ಅಲುಗಾಡಲಿಲ್ಲ. ಗಂಡ – ಮಕ್ಕಳೆಲ್ಲ ಇದು ಸರ್ವ ಸಾಮಾನ್ಯ ಎಂಬಂತೆ ತಮ್ಮ ಪಾಡಿಗೆ ತಾವು ತಿಂಡಿ ತಿಂದು, ಹೊರಟು ಹೋಗಿದ್ದರು. ತಿಂಡಿ ತಿಂದು, ಮಾತ್ರೆ ನುಂಗಿ ಮಲಗಿದ್ದ ಭವಾನಿಗೆ ನಿದ್ದೆ ಹತ್ತಿತ್ತು.

ಬೈಕ್ ನಿಂತ ಸದ್ದು ಕೇಳಿ, ವಿದ್ಯಾ ಎದ್ದು ಕಿಟಕಿ ಪರದೆ ಸರಿಸಿ ಹೊರಗೆ ನೋಡಿದಳು. ಗೇಟನ್ನು ತೆರೆದು, ಕೈಯಲ್ಲೇ ತಲೆಗೂದಲನ್ನು ಸರಿ ಮಾಡಿಕೊಳ್ಳುತ್ತಾ ಒಳಗೆ ಬರುತ್ತಿರುವ ದಿನೇಶನನ್ನು ಕಂಡಳು. ಅವನು ಕಾಲಿಂಗ್ ಬೆಲ್ ಒತ್ತುವ ಮೊದಲೇ ಹೋಗಿ ಬಾಗಿಲನ್ನು ತೆರೆದಳು. ಅವನು ಮುಗುಳ್ನಕ್ಕು "ಹಲೋ" ಎಂದ.

"ನಾನು ಬಂದಿದ್ದು ನಿಮಗೆ ಹೇಗೆ ಗೊತ್ತಾಯ್ತು?"

"ನಾನು ಕಿಟಕಿಯಿಂದ ನೋಡ್ದೆ."

"ನನಗೋಸ್ಕರ ಕಾಯ್ತಾ ಇದ್ರಾ?"

"ಇಲ್ಲ. ಬೈಕ್ ಸದ್ದು ಕೇಳಿಸ್ತಲ್ಲ...."

"ಮನೇಲಿ ಯಾರ ಸದ್ದೂ ಇಲ್ಲ.... ಅತ್ತೆ ಎಲ್ಲಿ?"

"ಚಿಕ್ಕಮ್ಮಂಗೆ ಹುಷಾರಿಲ್ಲ. ಮಲಗಿದಾರೆ... ಜ್ವರ ಬಂದಿದೆ...."

"ನಿನ್ನೆ ದಿನದ ಆಯಾಸಕ್ಕೆ ಜ್ವರ ಬಂದಿರಬಹುದು. ಡಾಕ್ಟ್ರು ಬಂದಿದ್ರಾ?"

"ಇಲ್ಲ. ಎಲ್ರೂ ಅವರವರ ಪಾಡಿಗೆ ಅವರ್ಗಳು ಹೊರ್ಟು ಹೋದ್ರು...."

"ಗಾಬರಿ ಯಾಕೆ ವಿದ್ಯಾ? ಈಗ ನಾನು ಬಂದಿದೀನಲ್ಲ. ಅತ್ತೇನ ಕೇಳ್ತೀನಿ. ಅವರು ಹೂಂ ಅಂದ್ರೆ ಡಾಕ್ಟ್ರನ್ನ ಕರ್ಕೊಂಡ್ಬಂದ್ರಾಯ್ತು.... ಅಂದ್ಹಾಗೇ ನಿನ್ನೆ ಹೇಗನ್ನಿಸ್ತು? ಬೋರ್ ಆಯ್ತಾ? ಚೆನ್ನಾಗಿತ್ತಾ?"

"ಚೆನ್ನಾಗಿತ್ತು...."

"ಅದ್ಸರಿ.... ವಾಪಸ್ಸು ಬರೋವಾಗ ನೀವು ಅತ್ತಿದ್ಯಾಕೆ?"

"ನಂಗೊತ್ತಿಲ್ಲ."

"ಗೊತ್ತಿಲ್ದೇ ಯಾರಾದ್ರೂ ಅಳ್ತಾರಾ! ದೀಪಾ ಏನಾದ್ರೂ ಬೇಜಾರು ಮಾಡಿದ್ಲಾ?"

"ಛೇ.... ಛೇ... ಏನಿಲ್ಲ."

"ನೀವು ಹೇಳ್ದೇ ಇದ್ರೆ ನಮ್ಮಿಂದ ಏನೋ ತಪ್ಪು ನಡೆದಿದೆ ಅಂತ ತಿಳ್ಕೊಳ್ತೀವಿ. ಸರಿ ತಾನೇ..."

"ಹೇಳ್ತೀನಿ.... ಒಳಗೆ ಬನ್ನಿ" ಎಂದು ಹೇಳಿ ಅವನೆದುರಿಗೆ ತಾನೂ ಕುಳಿತಳು.

ಅಷ್ಟರಲ್ಲಿ ಭವಾನಿ ಕರೆದದ್ದು ಕೇಳಿಸಿತ್ತು. "ಚಿಕ್ಕಮ್ಮ ಎದ್ರೂಂತ ಕಾಣುತ್ತೆ ಕರೀತಿದಾರೆ" ಎಂದು ಎದ್ದಳು. ದಿನೇಶನೂ ಅವಳ ಹಿಂದೆ ಬಂದ.

"ವಿದ್ಯಾ ಯಾರು ಬಂದಿದಾರೆ?" ಅವಳು ಕೇಳಿದ್ದು ಕೇಳಿಸಿತ್ತು.

"ನಾನೂ ಅತ್ತೆ" ತಾನೇ ಮುಂದೆ ಬಂದು ಹೇಳಿದ. "ಡಾಕ್ಟ್ರನ್ನ ಕರ್ಕೊಂಡ್ಬರ್ಲಾ..."

"ಏನೂ ಬೇಡ. ಆಯಾಸಕ್ಕೆ ಜ್ವರ ಬಂದ ಹಾಗಿದೆ. ವಿದ್ಯಾ ನನಗೆ ಸ್ವಲ್ಪ ಬಿಸ್ನೀರನ್ನ ಕಾಯ್ಸಿ ಕೊಡ್ತೀಯಾ?"

"ಹೂಂ ಚಿಕ್ಕಮ್ಮ" ಅವಳು ಅತ್ತ ಹೋದ ಕೂಡ್ಲೇ ಇತ್ತ ಪ್ರಶ್ನಿಸಿದಳು.

"ಏನೋ ದಿನೂ... ಏನು ನಿರ್ಧಾರ ತಗೊಂಡೆ?"

"ನನ್ನ ಕಡೆಯಿಂದ ಒಪ್ಗೆ.... ಆದ್ರೆ.... ವಿದ್ಯಾ ಏನ್ಹೇಳ್ತಾಳೋ...?"

"ಅವ್ಳೂ ಒಪ್ತಾಳೆ. ಹಾಗಾದ್ರೆ ನಾನು ಅವರ್ಮನೆಯವ್ರ ಹತ್ರ ಮಾತಾಡ್ಲಾ... ಊರ್ಗೆ ಹೋಗ್ಬರೋಣಾಂತಿದ್ದೆ. ಈಗ್ನೋಡಿದ್ರೆ, ಆಯಾಸ ಮಾಡ್ಕೋಳ್ಳೋ ಹಾಗಿಲ್ಲ. ವಿದ್ಯಾ ಊರ್ಗೆ ಹೊರಟ್ನಿಂತಿದಾಳೆ....."

"ಅವರ್ಮನೆಯೋರ್ಗೆ ಬರೋಕೆ ಹೇಳಿದ್ರೆ...ಅಥವಾ ನಾವೇ ಹೋದ್ರೇ..."

"ಈಗ್ಲೇ ಬೇಡ...." ಅಷ್ಟಕ್ಕೇ ಮಾತು ನಿಲ್ಲಿಸಿದಳು. ವಿದ್ಯಾ ಒಳಕ್ಕೆ ಬಂದಿದ್ದಳು.

"ವಿದ್ಯಾ ನೀನು ಊಟ ಮಾಡು....ನನಗೀಗ್ಲೇ ಹಸಿವಿಲ್ಲ."

"ನಾನೂ ಆಮೇಲೆ ಮಾಡ್ತೀನಿ." ಅವಳು ಹೊರಬಂದಳು. ನೀನೂ ಹೊರಗೆ ಹೋಗಿ ಅವಳ್ಜೊತೆ ಮಾತನಾಡು ಎನ್ನುವಂತೆ ಭವಾನಿ ಸಂಜ್ಞೆ ಮಾಡಿದಳು. ದಿನೇಶ ಹೊರಬಂದ. ತಾನಾಗಿಯೇ ಮತ್ತೆ ಆ ಮಾತನ್ನು ಪ್ರಾರಂಭಿಸುವುದು ಹೇಗೆ ಎಂದು ಒದ್ದಾಡುತ್ತಿದ್ದವನನ್ನು ಕುರಿತು ಹೇಳಿದ್ದಳು –

"ನಿಮಗೆ ಬಿಡುವಿದ್ರೆ ಕೂತ್ಕೊಳ್ಳಿ. ನಾನು ಸ್ವಲ್ಪ ಮಾತಾಡ್ಬೇಕು." ಅವನು ಕೂತ.

ತನ್ನ ಮನೆಯ ವಿಷಯವನ್ನು ಸಂಕ್ಷಪ್ತವಾಗಿ ಹೇಳಿದಳು. ಅವನು ಕೈಕಟ್ಟಿ ಕುಳಿತು ಮಾತುಗಳನ್ನು ಆಲಿಸಿದ.

"ಈಗ ಹೇಳಿ ನಮ್ಮ ಮನೆಯವರ್ಲೇ ವಿಚಿತ್ರ ಅಂತ ಅನ್ನಿಸುಲ್ವಾ? ಅದಕ್ಕೆ ನಾನೇ ಒಬ್ಬ ಹುಡುಗನನ್ನ ನೋಡ್ಕೊಂಡಿದೀನಿ.. ಅವನನ್ನೇ ಮದ್ವೆಯಾಗ್ಬೇಕೂಂತಂದ್ಕೊಂಡಿದೀನಿ."

ಅವನು ಗಂಭೀರನಾದ. ಇವಳಿಗೆ ಇವನೇ ಒಪ್ಪಿಗೆಯಿಲ್ಲದಿದ್ದ ಮೇಲೆ ತಾನು ಮಾತನಾಡಿ ಏನು ಉಪಯೋಗ ಎಂದೆನ್ನಿಸಿತ್ತು.

"ಪರ್ವಾಗಿಲ್ಲ ಬಿಡಿ.... ನನಗೆ ಈ ವಿಷಯ ಗೊತ್ತಿರಲಿಲ್ಲ. ಅತ್ತೆಗೂ ಗೊತ್ತಿರಲಿಲ್ಲ ಅಂತ ಕಾಣುತ್ತೆ."

"ಇಲ್ಲ, ಅತ್ತೆಗೆ ಹೇಳಿದ್ದೆ... ಅಂದ್ರೆ.... ಚಿಕ್ಕಮ್ಮ ಈ ಮೊದ್ಲೇ ನಿಮ್ಹತ್ರ ಮಾತಾಡಿದ್ರಾ....?"

"ಹೌದು. ಯಾಕೆ ಈ ವಿಷಯ ನಿಮಗೆ ಗೊತ್ತಿಲ್ವಾ?" ವಿದ್ಯಾ ಕಣ್ಣರಳಿಸಿದಳು.

"ಇಲ್ಲ, ನಂಗೇನೂ ಗೊತ್ತಿಲ್ಲ. ಮತ್ತೆ ಚಿಕ್ಕಮ್ಮ ಯಾಕೆ ಹೀಗೆ ಮಾಡಿದ್ರು?"

"ಏನೋ ನಂಗೋಸ್ಕರ ಹೀಗೆ ಮಾಡಿರ್ಬಹ್ದು. ಆದ್ರೆ ನಂಗೆ ನಿರಾಸೆ ಆದದ್ದು ಮಾತ್ರ ನಿಜ. ನಿಮ್ಮಿಬ್ಬರ ಮದುವೆಗೆ ನನ್ನನ್ನು ಕರೆಯುವುದನ್ನು ಮರೀಬೇಡಿ." ಅವನ ನಗೆ ಕೃತಕವಾಗಿ ಕಂಡಿತ್ತು.

"ಇನ್ನು ಮದುವೆ, ಯಾವಾಗ್ಲೋ ಗೊತ್ತಿಲ್ಲ. ನಮ್ತಂದೆಗೆ ವಿಷಯ ತಿಳೀದು..." ಈ ಮಾತಿಗೆ ಇವನೇನೂ ಹೇಳಲಿಲ್ಲ. ಪೆಚ್ಚು ಪೆಚ್ಚಾಗಿ ನಕ್ಕ.

"ನಾನಿನ್ನು ಬರ್ತೀನಿ. ನನ್ನ ನಿಮ್ಮ ಸ್ನೇಹ ಹೀಗೇ ಇರ್ಲಿ..." ಎಂದು ಹೇಳಿ ಹೊರಟೇ ಹೋದ. ಅವನತ್ತ ಹೋದ ಕೂಡಲೇ ಇವಳಿಗೆ ಶೂನ್ಯ ಕವಿದಂತಾಗಿತ್ತು. ತಾನು ತನ್ನ ಮನೆಯ ವಿಷಯವನ್ನು ಇವನೊಡನೆ ಹೇಳಬಾರದಾಗಿತ್ತೆನಿಸಿತ್ತು. ಮೂರು – ನಾಲ್ಕು ದಿನಗಳಿಂದ ಖುಷಿಖುಷಿಯಾಗಿ ಮಾತನಾಡುತ್ತಿದ್ದವನ ಮುಖ ಕ್ಷಣದಲ್ಲಿ ಮಂಕಾಗಿತ್ತು. ತನ್ನಿಂದ ಅವನಿಗೆ ನಿರಾಸೆಯಾಯ್ತು ಅಂತಂದುಕೊಂಡಾಗ ಬೇಸರವೆನಿಸಿತ್ತು. ಒಳಗ್ನಿಂದ ಭವಾನಿ ಕರೆದಿದ್ದಳು.

"ದಿನೂ ಹೊರಟ್ಹೋದ್ನಾ.....?"

"ಹೂಂ.... ಹೊರಟ್ಹೋದ್ರು.... ಊಟ ಮಾಡ್ತೀರಾ ಚಿಕ್ಕಮ್ಮ."

"ಹೂಂ ಹಾಲನ್ನ ಕಲ್ಸಿ ಕೊಡು. ಒಂದುಪ್ಪಿನ್ಕಾಯಿ ಹೋಳು ಹಾಕು ಸಾಕು...." ಅವಳು ಊಟದ ತಟ್ಟೆಯನ್ನು ತರುವುದನ್ನೇ ಕಾದಿದ್ದಳು... ಊಟದ ತುತ್ತು ಎತ್ತುತ್ತಾ ಕೇಳಿದಳು –

"ನಿನ್ಹತ್ರ ಏನ್ಮಾತಾಡ್ದ ಅವನು?"

"ನನ್ನನ್ನು ಮದ್ವೆಯಾಗೋ ಆಸೆ ಅವ್ರಿಗಿದೆ.... ನಾನು ಒಪ್ಪಲಿಲ್ಲ."

"ಯಾಕೆ ? ಕಿಶೋರನಿಗಿಂತ ಇವನು ಕಳಪೆ ಅಂತನ್ನಿಸುತ್ತಾ?"

"ಹಾಗಲ್ಲ ಚಿಕ್ಕಮ್ಮ.... ಕಿಶೋರನ್ನ ಮನಸ್ನಲ್ಲಿಟ್ಕೊಂಡು ಇವ್ರಿಗೆ ಹೇಗೆ ಒಪ್ಗೆ ಕೊಡ್ಲಿ ನೀವೇ ಹೇಳಿ...?"

"ಕಿಶೋರಂಗೆ ನಿನ್ನಂಥ ಹುಡ್ಗಿ ಸಿಗಬಹುದು. ಆದರೆ ನಿನ್ಗೆ ದಿನೇಶನಂಥ ಹುಡ್ಗ ಸಿಗೋದು ಕಷ್ಟ."

"ನಮ್ಮ ಮನೆಯ ವಿಷಯ ಎಲ್ಲಾ ತಿಳಿದ್ಮೇಲೆ ಇವ್ರೂ ನನ್ನನ್ನ ಒಪ್ಪೋಲ್ಲ."

"ದಿನೂಗೆ ಬೇಕಾಗಿರೋದು ನೀನು... ನಿಮ್ಮಪ್ಪ, ನಿಮ್ಮಮ್ಮ, ಯಾರೂ ಅಲ್ಲ.... ಎಂಥಾ ಅವಕಾಶವನ್ನು ನೀನಾಗಿಯೇ ಕಳ್ಕೊಂಡೆ ವಿದ್ಯಾ... ನೀನು ಯಾವುದನ್ನೂ ದಿನೇಶನಿಗೆ ಹೇಳಲೇ ಬಾರದಾಗಿತ್ತು...."

"ನನ್ನ ಹಿಂದೆ ಹಿಂದೇನೇ ಸುತ್ತೋರಿಗೆ ನಾನು ನಿಜ ಹೇಳಬೇಕಲ್ವಾ... ವಿಷಯ ಗೊತ್ತಾದದ್ದು ಒಳ್ಳೇದೇ ಆಯ್ತು ಬಿಡಿ. ಇನ್ನು ಅವ್ರು ನನ್ನ ತಂಟೆಗೆ ಬರುಲ್ಲ."

"ಸರಿ ನಿನ್ನಿಷ್ಟ. ಸುಶೀಲಾ ನಿನ್ನನ್ನೋಡಿ ಮೆಚ್ಚಿ ಕೊಟ್ಳು. ನಾನೂ ಒಪ್ದೆ... ಕಿಶೋರನಿಗಿಂತ ಇವನು ಎಲ್ಲಾ ವಿಧದಲ್ಲೂ ಉತ್ತಮ ಅಂತನ್ನಿಸ್ತು..."

"ಬೇಜಾರು ಮಾಡ್ಕೋಬೇಡಿ ಚಿಕ್ಕಮ್ಮ."

"ನೀನು ಕಿಶೋರಂಗೇನೂ ಮಾತು ಕೊಟ್ಟಲ್ವಲ್ಲ... ಅವನ್ಮನಸ್ನಲ್ಲೇನಿದೆ ಅಂತ ನಿಂಗೆ ಸರ್ಯಾಗಿ ಗೊತ್ತಾ?" ವಿದ್ಯಾ ಸುಮ್ಮನೆ ಕೂತಿದ್ದಳು.

"ಮೊದ್ಲು ಅವ್ನ ಮನಸ್ನಲ್ಲಿ ಏನಿದೆ ಅಂತ ತಿಳ್ಕೋ... ಅವ್ನು ನಿನ್ಗೆ ಎಲ್ಲಾ ರೀತಿಯಿಂದ್ಲೂ ಒಪ್ಗೇನ ವಿಚಾರಿಸು." ಆಗ ಅವಳಿಗೆ ಥಟ್ಟನೆ ಹೊಳೆದಿತ್ತು. ಕಿಶೋರ ತನ್ನ ಪತ್ರಗಳಿಗೆ ಮಾರುತ್ತರ ಕೊಟ್ಟಿಲ್ಲ. ಹೌದು. ಅವನ ಮನಸ್ನಲ್ಲಿ ಏನಿದೆಯೋ? ಆದಷ್ಟು ಬೇಗ ತಿಳಿದುಕೊಳ್ಳಬೇಕೆನ್ನಿಸಿತ್ತು....

"ಚಿಕ್ಕಮ್ಮ.... ನಾನು ನಾಳೇನೇ ಊರ್ಗೆ ಹೋಗ್ತೀನಿ. ಬಸ್ಸು ಹತ್ಸಿದ್ರೆ ಸಾಕು."

"ಒಬ್ಳೇ ಹೋಗೋದು ಬೇಡ. ಭಾವ ಏನಂತಾರೆ? ಇನ್ನೊಂದೆರಡು ದಿನ ಕಳೆದ್ರೆ, ನಾನೇ ನಿನ್ನ ಜತೆಗೆ ಬರ್ತೀನಿ."

"ಬೇಡ ಚಿಕ್ಕಮ್ಮ. ನಿಮ್ಗೆ ಆಯಾಸ ಆಗುತ್ತೆ."

"ನಿಮ್ಮಪ್ಪ ನಮ್ಮನ್ನೆಲ್ಲಾ ಬೈದುಕೊಳ್ತಾರೆ ಅಷ್ಟೇ... ಗೌತಮನಿಗೆ ಏನೋ ಟ್ರೈನಿಂಗ್ ಇದೆ. ಸುಹಾಸ ಇನ್ನೂ ಚಿಕ್ಕೋನು... ನವೀನಂಗೆ ಕಾಲೇಜಿದೆ... ದಿನೇಶನ ಜತೆ ಹೋಗ್ತೀಯಾ? ನಾನು ಅವನ್ಗೆ ಹೇಳ್ತೀನಿ..."

"ಬೇಡ ಚಿಕ್ಕಮ್ಮ. ಅವ್ರಿಗ್ಯಾಕೆ ತೊಂದ್ರೆ? ಅಲ್ಲದೇ..."

"ಅವ್ನಿಗೆ ಬೇಸ್ರವಾಗಿರ್ಬಹುದು. ಆದ್ರೆ ಅದ್ನೆಲ್ಲಾ ಮನಸ್ನಲ್ಲಿಟ್ಕೊಳ್ಳೋ ಹುಡ್ಗ ಅಲ್ಲ. ನಿನ್ನನ್ನ ಬಿಟ್ಟು ಮತ್ತೆ ವಾಪಸ್ಸು ಬರ್ತಾನೆ. ಅವನ್ಗೇನು ಕಷ್ಟ?" ವಿದ್ಯಾ ವಿಧಿ ಇಲ್ಲದೇ ಒಪ್ಪಿಕೊಂಡಳು.

ಅತ್ತಿಗೆಗೆ ಹುಶಾರಿಲ್ಲ ಎಂದು ತಿಳಿದ ಕೂಡಲೇ, ಅವಳನ್ನು ನೋಡಲೆಂದು ಸುಶೀಲಾ, ದಿನೇಶನೊಂದಿಗೆ ಬಂದಳು. ಬಾಗಿಲು ತೆರೆದ ವಿದ್ಯಾಳ ಯೋಗಕ್ಷೇಮ ವನ್ನು ವಿಚಾರಿಸಿದಳು. ವಿದ್ಯಾ ಮುಜುಗರಗೊಂಡಿದ್ದಳು. ಇವರೆಲ್ಲಾ ನನ್ನನ್ನು ಮೆಚ್ಕೊಂಡಿದ್ದಾರೆ... ಅದು ತಿಳಿದೂ ನನಗೆ ಹೆಮ್ಮೆ ಅಂತ ಅನ್ನಿಸ್ತಿಲ್ಲ. ನನಗೂ ನಮ್ಮಪ್ಪನ ಹಾಗೆ ಏನೋ ಒಣ ಅಭಿಮಾನವಿರಬಹುದೇ. ಇವ್ರುಗಳನ್ನು ತಳ್ಳಿ ಹಾಕುವಂಥ ಯಾವ ಕಾರಣವೂ ಇಲ್ಲ. ಆದರೂ ನನ್ನ ಮನಸ್ಸೇಕೋ ಒಪ್ತುತ್ತಿಲ್ಲ....

"ಒಂದ್ಲೋಟ ನೀರು ಬೇಕು. ಕೊಡ್ತೀರಾ?" ದಿನೇಶ ಕೇಳಿದ್ದ. ಅವಳು ತಂದು ಕೊಟ್ಟ ನೀರನ್ನು ಗಟಗಟನೆ ಕುಡಿದ. ಅವಳಿಗೆ ನಗು ಬಂತು. ಹಿಂದಿನ ದಿನ ತಾನು ಗಟಗಟನೆ ನೀರನ್ನು ಕುಡಿದ ನೆನಪಾಗಿತ್ತು....

"ಯಾಕ್ನಗ್ತಾ ಇದೀರಾ?" ವಿದ್ಯಾ ನಗುವಿನ ಕಾರಣವನ್ನು ತಿಳಿಸಿದಳು.

"ಯಾರು ಬರೆದಿದ್ದು ಅಂತ ಗೊತ್ತಾಗ್ಲಿಲ್ಲ... ನಾನು ಏನು ವಿಷಯ ನಂಗೆ

ಸಿಕ್ಕಿ ಬಿಡುತ್ತೋ ಅಂತ ಹೆದರಿದ್ದೆ."

"ನಾನಂತೂ ಅದನ್ನು ಬತೆದಿರಲಿಲ್ಲ.... ಆದರೆ ನಿನ್ನೆ ನಾವೆಲ್ಲ ಒಟ್ಟಾಗಿ, ಮಜವಾಗಿ ಕಾಲ ಕಳೆದೆವು.... ನಿಮ್ಮ ಕಂಪೆನಿ ಚೆನ್ನಾಗಿತ್ತು. ಇದನ್ನೆಲ್ಲಾ ನಾನಂತೂ ಮರೆಯೋಲ್ಲ."

"ನಾನೂ ಅಷ್ಟೇ. ಯಾವತ್ತೂ ಇದನ್ನೆಲ್ಲ ಮರೆಯೋಲ್ಲ. ಮೊದಲ ಬಾರಿಗೆ ಜೀವನದಲ್ಲಿ ನಡೆದ ಒಳ್ಳೆಯ ಅನುಭವಗಳು. ಸದಾಕಾಲ ನನ್ನ ಮನಸ್ನಲ್ಲಿ ತುಂಬ್ಕೊಂಡಿ ರುತ್ತೆ.... ನಿನ್ನೆ ತೆಗೆದಿದ್ರಲ್ಲ ಫೋಟೋಗಳು ಯಾವಾಗ ಸಿಗುತ್ತೆ?"

"ಇನ್ನೊಂದು ಮೂರು- ನಾಲ್ಕು ದಿನಗಳಲ್ಲಿ ಸಿಗಬಹುದು... ಎಲ್ಲಾ ಗೌತಮನ ಹತ್ರಾನೇ ಇದೆ.... ನವೀನಂಗೆ ಹೇಳಿದ್ರೆ... ನಿಮ್ಗೂ ಕಳಿಸಿ ಕೊಡ್ತಾನೆ."

"ನಾನು, ನಾಳೆ ಊರ್ಗೆ ವಾಪಸ್ಸು ಹೋರ್ಟದೀನಿ ದಿನೇಶ್.."

"ಹೌದಾ! ಇಷ್ಟು ಬೇಗ? ಅತ್ತೆ ಮಲಗಿ ಬಿಟ್ಟಿದಾರಲ್ಲ..."

"ಇಲ್ಲಿಗೆ ಬಂದು ಮೂರು ವಾರಗಳಾಯ್ತು. ನಾನೆಂದೂ ಇಷ್ಟು ದಿನ ಮನೆ ಯಿಂದ ಹೊರಗೆ ಇದ್ದೋಳೇ ಅಲ್ಲ."

"ಸ್ವಂತ ಚಿಕ್ಕಮ್ಮನ ಮನೆ ತಾನೇ....?"

"ನಾನು ಒಬ್ಬಳೇ ಹೋಗ್ತೀನಿ ಅಂದ್ರೆ, ಚಿಕ್ಕಮ್ಮಂಗೆ ಒಬ್ಳನ್ನೇ ಕಳ್ಸೋಕೆ ಇಷ್ಟ ವಿಲ್ಲ. ಜತೆಗೆ ಯಾರಿಲ್ಲ... ಅದಕ್ಕೇ... ಅವ್ರು ನಿಮ್ಮನ್ನು ಕೇಳ್ಬೇಕೂಂತ ಅಂದ್ಕೊಂಡಿದಾರೆ. ನೀವು ಒಪ್ಕೋಬೇಡಿ....." ಅವನಿಗೆ ತತ್ ಕ್ಷಣಕ್ಕೆ ಅರ್ಥವಾಗಲಿಲ್ಲ.

"ಯಾಕೆ? ನನ್ನ ಮೇಲೆ ನಿಮ್ಗೆ ನಂಬ್ಕೆ ಇಲ್ವಾ...?"

"ನಂಬ್ಕೆ ಮಾತಲ್ಲ. ನೀವು ನನ್ನ ಜತೆಯಲ್ಲಿ ಬರುವುದು ನನಗಿಷ್ಟವಿಲ್ಲ."

"ನಿಮಗೆ ಇಷ್ಟವಿಲ್ಲದಿದ್ರೆ, ನಾನೇಕೆ ಬರಲಿ? ಆದ್ರೆ ಕಾರಣ ಏನೂಂತ ಕೇಳ ಬಹುದಾ?"

"ಮೊದಲ್ನೆದಾಗಿ ನಮ್ಮಪ್ಪನಿಗೆ ಇಷ್ಟವಾಗುಲ್ಲ.... ಅವ್ರು ನಿಮ್ಮನ್ನು ಆ ದೃಷ್ಟಿಯಿಂದ ನೋಡೋದು ನನಗಿಷ್ಟವಿಲ್ಲ. ಆಮೇಲೆ ನಮ್ಮನೆಯೋರನ್ನ ನೀವು ನೋಡ್ದೇ ಇದ್ರೆ ಏನೂ ನಷ್ಟವಿಲ್ಲ. ಅವ್ರುಗಳ ಪರಿಚಯದಿಂದ ನಿಮಗೆ ಯಾವ ಲಾಭವೂ ಇಲ್ಲ." ದಿನೇಶ ನಕ್ಕು ಬಿಟ್ಟ.

"ಸರಿ. ನಾನು ನಿಮ್ಮ ಜತೆ ಬಂದರೆ, ನಿಮಗೆ ಮುಜುಗರವಾಗುತ್ತೆ ಅಂತಂದ್ರೆ ಬೇಡ. ಆದರೆ ಒಬ್ಬರೇ ಮಾತ್ರ ಪ್ರಯಾಣ ಮಾಡಬೇಡಿ. ಇದು ನನ್ನ ಸಲಹೆ...."

"ನಾನೂ ಧೈರ್ಯ ಕಲಿಯಬೇಕಲ್ಲ... ನಿಮಗೆ ಸಾಧ್ಯವಾದರೆ ಬಸ್ಸಿಗೆ ಹತ್ತಿಸಿ ಬಿಡಿ... ಅಲ್ಲಿ ನಮ್ಮೂರ್ನಲ್ಲಿ ನನಗೆ ಯಾವ ಭಯವೂ ಇಲ್ಲ... ಅಲ್ಲದೇ ಇಲ್ಲಿ ನಿಮ್ಮ ಗಳ ಜತೆಯಲ್ಲಿ ಇದ್ದು, ನನಗೂ ಸ್ವಲ್ಪ ಧೈರ್ಯ ಬಂದಿದೆ. ಹೀಗೇ ಧೈರ್ಯವಾಗಿದ್ದರೆ, ಯಾರ ನೆರವೂ ಬೇಡ: ಯಾರ ಮೇಲೂ ಅವಲಂಬನೆಯಾಗಬೇಕಾಗಿಲ್ಲ... ಇಲ್ಲಿಗೆ

ಬಂದ ಮೇಲೆ, ನಾನೂ ತುಂಬಾ ಬದಲಾಗಿದೀನಿ."

"ಆದರೆ ನೀನು ಅದ್ಯಾವನೋ ಕಿಶೋರನ್ನ ಮರೆತಿಲ್ಲ." ಎಂದು ಹೇಳಬೇಕೆಂದು ಕೊಂಡರೂ ಹೇಳಲಿಲ್ಲ. ಅವಳ ಮಾತುಗಳನ್ನೇ ಮನಗೊಟ್ಟು ಆಲಿಸುತ್ತಿದ್ದ.

ಒಳಗೆ ಅತ್ತಿಗೆ, ನಾದಿನಿಯರು ತಮ್ಮ ಸಂಭಾಷಣೆಗಳಲ್ಲಿ ತೊಡಗಿದ್ದರು. "ಹೇಗೂ, ದಿನೇಶ ಇನ್ನೂ ಕೆಲಸಕ್ಕೆ ಹೋಗಲು ಪ್ರಾರಂಭಿಸಿಲ್ಲವಲ್ಲ.... ಬಿಡುವಾಗಿದಾನೆ. ವಿದ್ಯಾಳ ಜತೆ ಹೋಗಿ ಬರೋಕಾಗುತ್ತಾ? ಹಾಗೇ ಅವಳ ಮನೆಯ ಪರಿಚಯವೂ ಆಗುತ್ತೆ."

"ನಿಮ್ಮ ಭಾವನ್ಗೆ ಯಾವ್ದೂ ಸರಿ ಹೋಗುಲ್ಲ. ಆದರೆ ಹಾಗಂತ, ಅವ್ರು ಹೇಳಿದ್ಹಾಗೇ ನಾವ್ಯಾರೂ ಕುಣಿಯೋಕೆ ಆಗುಲ್ಲ. ಈಗ ವಿದ್ಯಾ ಕೂಡ ಸಾಕಷ್ಟು ಬದಲಾಗಿದಾಳೆ. ಒಬ್ಬಳೇ ಹೋಗಬಲ್ಲಳು. ಆದರೆ ನನಗೇ ಮನಸ್ಸಿಲ್ಲ."

"ದಿನೇಶಂಗೆ ಒಪ್ಗೆ ಇದ್ರೆ ಹೋಗಿ ಬರ್ಲಿ. ನನ್ನದೇನೂ ಅಭ್ಯಂತರವಿಲ್ಲ."

"ಸರಿ ಹಾಗಾದ್ರೆ..... ಅವನ್ನ ಕರಿ. ನಾನು ಮಾತಾಡ್ತೀನಿ."

"ಅತ್ತೆ ಕರೀತಿದಾರೆ..... ಬಾ....." ಒಳಗ್ನಿಂದ ಸುಶೀಲಾ ಹೇಳಿದಾಗ, ದಿನೇಶ ವಿದ್ಯಾಳ ಕಡೆ ನೋಡಿ ನಸುನಕ್ಕ. ಆ ನಗುವಿನಲ್ಲಿ ಸ್ನೇಹವಿತ್ತು. ಕಪಟವಿರಲಿಲ್ಲ. ಆ ಗಳಿಗೆಯಲ್ಲಿ ಅವನು ಅವಳಿಗೆ ತುಂಬಾ ಮೆಚ್ಚಿಗೆಯಾದ.

ಅದೇ ರಾತ್ರಿ ಭವಾನಿ ಟ್ರಂಕ್ ಕಾಲ್ ಬುಕ್ ಮಾಡಿ, ಭಾವನಿಗೆ ದಿನೇಶ ನೊಂದಿಗೆ ವಿದ್ಯಾಳನ್ನು ಊರಿಗೆ ಕಳಿಸುತ್ತಿರುವ ವಿಷಯವನ್ನು ತಿಳಿಸಿದಳು. ವಿದ್ಯಾಳಿಗೆ ತಿಳಿಯದಂತೆ ಭಾವನಿಗೆ ದಿನೇಶನ ಬಗ್ಗೆ ತಿಳಿಸಿದ್ದಳು.

ದಿನೇಶ, ಬಸ್ ಸ್ಟ್ಯಾಂಡಿಗೆ ಕರೆತಂದು, ಅವಳ ಊರಿಗೆ ಹೋಗುವ ಬಸ್ಸಿಗೆ ಅವಳನ್ನು ಹತ್ತಿಸಿದ. ಇನ್ನೇನು ಬಸ್ಸು ಹೊರಡಲಿದೆ ಎನ್ನುವಾಗ, ಅವಳಿಗೆ ತಿಳಿಯದಂತೆ ಹಿಂಬಾಗಿಲಿನಿಂದ ಬಸ್ಸನ್ನು ಹತ್ತಿ, ಅವಳಿಗೆ ಕಾಣಿಸದಂತೆ ಹಿಂದಿನ ಸೀಟೊಂದರಲ್ಲಿ ಕುಳಿತ. ವಿದ್ಯಾ ತನ್ನ ಟಿಕೇಟನ್ನು ತಾನೇ ಖರೀದಿಸಿದಳು. ಈ ಬಸ್ಸಿನಲ್ಲಿ ದಿನೇಶನೂ ಇದ್ದಾನೆ ಎಂಬ ಅನುಮಾನ ಸಹ ಅವಳಿಗೆ ಬರುವಂತಿರಲಿಲ್ಲ.

* * *

ಬಸ್ಸು ನಿಗದಿತ ವೇಳೆಗೆ ಸರಿಯಾಗಿ, ಅವಳ ಊರನ್ನು ತಲುಪಿತು. ಬಸ್ ಸ್ಟ್ಯಾಂಡಿನಲ್ಲಿ ಕೆಳಗಿಳಿದು ಅತ್ತಿತ್ತ ಕಣ್ಣು ಹಾಯಿಸಿದಾಗ, ದಿನೇಶ ಕಣ್ಣಿಗೆ ಬಿದ್ದ. ಒಂದು ಗಳಿಗೆ ನಂಬಲಾಗಲಿಲ್ಲ. ಅವನು ಅವಳ ಕೈಯಲ್ಲಿದ್ದ ಕಿಟ್ ಬ್ಯಾಗನ್ನೆತ್ತಿಕೊಂಡ.

"ಅದೇನು ನೀವು ಇಲ್ಲಿ?"

"ಹೂಂ, ನಿಮ್ಮೂರನ್ನು, ನಿಮ್ಮ ಮನೆಯವರನ್ನು ನೋಡ್ಬೇಕೂಂತ ಅನ್ನಿಸ್ತು. ಬಂದ್ಬಿಟ್ಟೆ.... ನೀವು ಬಂದ ಬಸ್ಸಿನಲ್ಲೇ.... ನಿಮ್ಮ ಹಿಂದೆ ಇದ್ದ ಸೀಟಿನಲ್ಲಿ ಕುಳಿತಿದ್ದೆ, ನಿಮಗೆ ಗೊತ್ತಾಗ್ಲೇ ಇಲ್ಲ."

"ಇದು ಮೋಸ ಅಲ್ವಾ ದಿನೇಶ್?"

"ಮೋಸ ಅಂದ್ರೆ ಮೋಸ.... ಅಲ್ಲ ಅಂದ್ರೆ ಅಲ್ಲ.... ನಿಮಗೆ ನಾನು ನಿಮ್ಮ ಜತೆ ಬರುವುದು ಬೇಕಿರಲಿಲ್ಲ. ಆದರೆ ಅತ್ತೆಗೆ ನಿಮ್ಮನ್ನು ಒಬ್ಬನ್ನೇ ಕಳಿಸೋಕೆ ಸುತರಾಮ್ ಇಷ್ಟವಿರಲಿಲ್ಲ. ಇಬ್ಬರ ಮಾತನ್ನು ನಾನು ಪಾಲಿಸಿದೆ.... ಮೋಸ ಏನ್ಬಂತು?"

"ಹಾಗಾದ ಮತ್ತೆ ಯಾವಾಗ ವಾಪಸ್ಸು ಹೊರಡ್ತೀರಿ!"

"ಮೊದ್ಲು ನಿಮ್ಮನ್ನು ನಿಮ್ಮ ಮನೆ ತಲುಪಿಸ್ತೀನಿ.... ಆಮೇಲೆ ಮುಂದಿನ ಯೋಚನೆ, ನಡೀರಿ." ಎನ್ನುತ್ತಾ ಆಟೋಸ್ಟ್ಯಾಂಡ್ ಬಳಿಗೆ ನಡೆದ.

ಮನೆ ಮುಂದೆ ಆಟೋ ರಿಕ್ಷಾ ನಿಂತಾಗ, ಅವರಿಗಾಗಿ ಯಾರೂ ಕಾಯುತ್ತಾ ನಿಂತಿರುವಂತೆ ಅನ್ನಿಸಲಿಲ್ಲ. ವಿದ್ಯಾ ಆತಂಕ, ಅನುಮಾನಗಳಿಂದ ಗೇಟನ್ನು ಸದ್ದಾಗ ದಂತೆ ತೆಗೆದು, ಮನೆಯೊಳಕ್ಕೆ ಬಂದಳು. ಆಫೀಸ್ನಲ್ಲಿ ಭಟ್ಟ ಯಾರೊಡನೆಯೋ ಮಾತನಾಡುತ್ತಿದ್ದವನು ಎದ್ದು ಬಂದಿರಲಿಲ್ಲ. ದಿನೇಶನೂ ಮುಜುಗರಗೊಂಡಿದ್ದ. ವಿದ್ಯಾ ಅವನನ್ನು ಸೋಫಾದ ಬಳಿ ಬಿಟ್ಟು ಒಳಗೆ ನಡೆದಳು. ಕೆಲವೇ ಕ್ಷಣಗಳಲ್ಲಿ ಭಟ್ಟನ ಹೊರತು ಉಳಿದವರು ಅವನ ಮುಂದೆ ಹಾಜರಾಗಿದ್ದರು.

"ಇವ್ರಿಬ್ಬರೂ ನನ್ನ ತಮ್ಮಂದಿರು, ಸಂತೋಷ, ಶ್ರೀಕರ, ಇವ್ರಿಬ್ಬರೂ ನನ್ನ ತಂಗಿಯರು, ಚಿನ್ಮಯೀ, ನಳಿನಿ... ಇವ್ರು ನನ್ನ ತಾಯಿ... ಪ್ರೇಮಾ..." ದಿನೇಶ ಎದ್ದು ನಿಂತು ಗೌರವ ಸೂಚಿಸಿ ನಮಸ್ಕಾರ ಎಂದ. ಪ್ರೇಮಾ ಅವನನ್ನೇ ಮೆಚ್ಚುಗೆಯಿಂದ ನೋಡಿದಳು.

"ಏಳಿ ಕೈ – ಕಾಲು ತೊಳ್ಕೊಳ್ಳಿ... ತಿಂಡಿ, ಕಾಫಿ ತಗೋಳ್ಳೋರಂತೆ... ಶ್ರೀಕರ ಇವರಿಗೆ ಬಚ್ಚಲು ಮನೆಯನ್ನು ತೋರಿಸೋ....."

"ಎಷ್ಟು ದೊಡ್ಡದಾಗಿದೆ ನಿಮ್ಮ ಮನೆ...."

"ಆದ್ರೆ ನಿಮ್ಮ ಮನೆಯಷ್ಟು ಸುಂದರವಾಗಿಲ್ಲ...."

"ಮನೇನೂ ಚೆನ್ನಾಗಿದೆ. ಈ ಮನೇಲಿರೋರು ನೀವುಗಳು ಒಬ್ಬರಿಗಿಂತ ಒಬ್ಬರು ಸುಂದರವಾಗಿದೀರಿ...." ಬಾಯ್ತುಂಬಾ ಹೊಗಳಿದ. ಈಗ ವಿದ್ಯಾ ನಾಚಲಿಲ್ಲ. ಅವಳಿಗೆ ಆ ಹೊಗಳಿಕೆ ಅಭ್ಯಾಸವಾಗಿತ್ತು. ಚಿನ್ಮಯೀ ನಾಚಿದ್ದಳು.... ನಳಿನಿಯ ಕಡೆ ನೋಡಿ, ಕಣ್ಣು ಸಂಜ್ಞೆಯಲ್ಲೇ ಮಾತಾಡಿದಳು.

ಅವನು ಕೈ– ಕಾಲು ಮುಖವನ್ನು ತೊಳೆದು ಬರುವಷ್ಟರಲ್ಲಿ ಭಟ್ಟ ಒಳಕ್ಕೆ ಬಂದಿದ್ದ. ದಿನೇಶನಿಗಾಗಿಯೇ ಕಾಯುತ್ತಾ ನಿಂತಿದ್ದ. ಕಟಕಟೆಯಲ್ಲಿ ನಿಂತಿರುವ ಆರೋಪಿಯೊಬ್ಬನನ್ನು ಪಾಟೀ ಸವಾಲನ್ನು ಹಾಕಿ, ಗೊಂದಲಗೊಳಿಸುವ ಅಡ್ವೋಕೇಟಿ ನಂತೆ ನಿಂತಿದ್ದವನನ್ನು ಕಂಡು ಗಲಿಬಲಿಗೊಂಡರೂ, ತನಗೇನೂ ಭಯ ಎನ್ನುವಂತೆ "ನಮಸ್ಕಾರ ಸರ್...." ಎಂದು ಕೈ ಮುಗಿದ.

ಕೂತ್ಕೊಳ್ಳಿ ಎನ್ನುವಂತೆ, ಸೋಫಾ ಕಡೆ ಕೈ ತೋರಿದ. ಮೊದಲಿಗೆ ತಿಂಡಿ,

ಕಾಫಿ ಆಯಿತು. ಅಪ್ಪ ಏನಾಡಿಬಿಡುವರೋ, ದಿನೇಶನಿಗೆಲ್ಲಿ ಅವಮಾನವಾಗಿಬಿಡುತ್ತದೋ ಎಂಬಂತೆ ವಿದ್ಯಾ ಚಡಪಡಿಸುತ್ತಿದ್ದಳು.

"ನನ್ನ ಆಫೀಸ್ ರೂಮಿಗೆ ಬನ್ನಿ.... ನಾನು ನಿಮ್ಹತ್ರ ಸ್ವಲ್ಪ ಮಾತಾಡ್ಬೇಕು." ಅಧಿಕಾರದಿಂದ, ದಿನೇಶನ ಕಡೆ ತಿರುಗಿ ಹೇಳಿ, ತಾನು ಎದ್ದು ಹೋಗಿದ್ದ ಭಟ್ಟ, ದಿನೇಶನನ್ನು ಅಸಹಾಯಕತೆಯಿಂದ ನೋಡಿದಳು. ಉಳಿದವರೆಲ್ಲರ ಕಡೆ ನೋಡಿದ. ಎಲ್ಲರ ನೋಟದಲ್ಲೂ ತಾನೊಬ್ಬ ಅಸಹಾಯಕ ಬಲಿಪಶು ಎಂಬ ಅರ್ಥವಿದೆಯೇನೋ ಅಂತೆನ್ನಿಸಿತ್ತು.... ಒಂದು ಗಳಿಗೆ ತಾನು ಈ ಪಂಜರಕ್ಕೆ ಬರಬಾರದಾಗಿತ್ತೆನಿಸಿತ್ತು.... ಆದರೆ ಈಗ ಬಂದುದಾಗಿದೆ.... ಎಂದುಕೊಂಡು ಆಫೀಸ್ ರೂಮಿಗೆ ಹೋದ. ಅವರು ತೋರಿದ ಕುರ್ಚಿಯ ಮೇಲೆ ವಿಧೇಯನಂತೆ ಕುಳಿತ. ಅವರ ಪ್ರಶ್ನೆಗಳು ಪ್ರಾರಂಭವಾದವು.

ಎಲ್ಲಿದ್ದೀರಿ? ಏನ್ಮಾಡ್ತಿದೀರಿ? ಏನು ಓದಿದೀರಿ.. ಎಷ್ಟು ಜನ ಮಕ್ಕಳು? ಅಪ್ಪ ಎಲ್ಲಿ ಕೆಲ್ಸದಲ್ಲಿದಾರೆ. ಏನ್ಮಾಡ್ತಿದಾರೆ... ತಂಗಿ ಓದ್ತಾ ಇದಾಳಾ.. ಸ್ವಂತ ಮನೇನ... ಮನೇಲಿ ನಾಯಿ, ಬೆಕ್ಕುಗಳನ್ನು ಸಾಕಿದೀರಾ... ಇತ್ಯಾದಿ... ಇತ್ಯಾದಿ... ಅವರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿ ಬೇಸರವಾಗಿತ್ತು. ಇಲ್ಲಿ ತಿರುಗಮುರುಗ ವರಪರೀಕ್ಷೆ ನಡೆಯುತ್ತಿದೆ. ಎಂದುಕೊಂಡ. ಅವರ ಪಾಟೀಸವಾಲು ಮುಗಿದಿತ್ತು.

"ನಾನಿನ್ನು ಬರ್ಲಾ? ಈಗ್ಲೇ ವಾಪಸ್ಸು ಊರ್ಗೆ ಹೊರಡ್ತೀನಿ." ಎಂದ.

"ಈಗ್ಯಾಕೆ ಹೋಗ್ಬೇಕು? ರಾತ್ರಿ ಪ್ರಯಾಣ ಒಳ್ಳೇದಲ್ಲ. ರಾತ್ರಿ ನಮ್ಮನೇಲೇ ಇದ್ದು, ಬೆಳಗ್ಗೆ ತಿಂಡಿ ತಿಂದು ಹೊರಡಿ..." ಲಾಯರ್ರು ಸಾಹೇಬ್ರು ಅಪ್ಪಣೆ ಕೊಡಿಸಿದ್ರು... ಒಳಗೊಳಗೇ ಅವನಿಗೆ ಸಂತಸವಾಗಿತ್ತು... ಬಹುಶಃ ತನ್ನನ್ನು ಪಾಸು ಮಾಡಿರಬಹುದೆಂದುಕೊಂಡ.

* * *

ಅಧ್ಯಾಯ–ಹನ್ನೊಂದು

ಕಿಶೋರನ ನಿಜ ಸ್ವರೂಪ

ರಾತ್ರಿಯ ಊಟವನ್ನು ಮನೆಯವರೆಲ್ಲ ಒಟ್ಟಿಗೆ ಕುಳಿತು ಮಾಡಿದರು. ಆದರೆ ಮಾತಿಲ್ಲ, ಹರಟೆ ಇಲ್ಲ. ಬಾಯಿ ಚಪ್ಪರಿಸುವ ಸದ್ದು ಮಾತ್ರ ಕೇಳಿ ಬರುತ್ತಿತ್ತು. ಈ ಮೌನ ಅಸಹನೀಯವೆನಿಸಿತ್ತು. ಆ ಮೌನವನ್ನು ಮುರಿಯಲು ದಿನೇಶನೇ ಮಾತನ್ನಾಡಿದ –

"ಅಡುಗೆ ಎಲ್ಲಾ ತುಂಬಾ ಚೆನ್ನಾಗಿದೆ."

"ನಮ್ಮನೆ ಅಡ್ಗೆ ಯಾವಾಗ್ಲೂ ಚೆನ್ನಾಗಿರುತ್ತೆ. ಆದ್ರೆ ಅಡ್ಗೆಯೋರು ಮಾಡಿದ್ದು." ವಿದ್ಯಾ ಅವನ ಕಡೆ ನೋಡಿ ತುಂಟನಗೆಯನ್ನು ನಕ್ಕಳು.

"ನಿಮಗೆ ಹೊಸ ಜಾಗ, ನಿದ್ದೆ ಬರುತ್ತೋ ಇಲ್ವೋ.....ಇನ್ನೊಂದ್ಸ್ವಲ್ಪ ಪಾಯ್ಸ ಕುಡೀರಿ.... ಚೆನ್ನಾಗಿ ನಿದ್ದೆ ಬರುತ್ತೆ." ಸಂತೋಷ ನುಡಿದ. ಭಟ್ಟ ಕೆಮ್ಮಿದ. ಮತ್ತೆ ಮೌನದ ಶ್ರುತಿಯಲ್ಲಿ ಊಟ ಸಾಗಿತು...

"ಸಂತೋಷ ಮೇಲ್ಗಡೆ ರೂಮ್ನಲ್ಲಿ ಇವ್ರಿಗೆ ಹಾಸ್ಗೆ ಹಾಸ್ಕೊಡು..." ಕೈ ತೊಳೆದು ಬಂದ ಭಟ್ಟ ಮಗನಿಗೆ ಅಪ್ಪಣೆ ಕೊಟ್ಟ. ಸಂತೋಷ ತಲೆಯಾಡಿಸಿದ.

"ಯಾವ್ದಾದ್ರೂ ಕಥೆ ಪುಸ್ತಕ ಇದ್ರೆ ಕೊಡಿ... ನಿದ್ದೆ ಬರೋವರ್ಗೂ ಓದ್ತಾ ಇರ್ತೀನಿ."

"ನಮ್ಮನೇಲಿ ಕನ್ನಡ ಕಾದಂಬರಿಗಳಿವೆ. ಕೊಡ್ಲಾ....?"

"ಕೊಡಿ ಪರವಾಗಿಲ್ಲ. ನನಗೂ ಕನ್ನಡ ಬರುತ್ತೆ.... ನೀವೂ ನಿಮ್ಮ ತಂದೆ ತರ ಹಾನೇ ಮಾತಾಡ್ತೀರಿ..."

"ಇಲ್ಲ ನಿಮಗೆ ಹಾಗನ್ನಿಸುತ್ತೆ ಅಷ್ಟೇ... ನಾವ್ಯಾರೂ ನಮ್ಮಪ್ಪನ ಯಾವ ರೀತಿಯಿಂದ್ಲೂ ಅನುಕರಣೆ ಮಾಡ್ಬಾರ್ದು ಅಂತ ನಿರ್ಧರಿಸಿ ಬಿಟ್ಟಿದೀವಿ... ಯಾಕೆ? ನಮ್ಮಪ್ಪನ ಮಾತು ನಿಮಗೆ ಇಷ್ಟವಾಗಲಿಲ್ವಾ?" ಚುಡಾಯಿಸುವವನಂತೆ ಕೇಳಿದ.

"ಇಷ್ಟಾನಾ? ತುಂಬಾ ಕಷ್ಟ ಆಯ್ತು... ಅವರ ಪ್ರಶ್ನೆಗಳಿಗೆ ಉತ್ತರ ಹೇಳ್ತಾ ಹೇಳ್ತಾ... ನಾನೇನಾದ್ರೂ ತಪ್ಪು ಮಾಡಿರಬಹುದೇ ಎಂಬ ಭಾವನೆ ನನಗೆ ಬರುಕ್ಕೆ ಶುರುವಾಯ್ತು...." ಜೋರಾಗಿ ನಕ್ಕ.

"ಹೌದು ನಮಗೆಲ್ಲರ್ಗೂ ಅನ್ನೋದೇ ಹಾಗೇ.... ಅದೇ ಬೇಜಾರು...."

"ಅವರು ನಿಮ್ಮ ತಂದೆ, ನೀವು ಅವ್ರ ಸ್ವಂತ ಮಕ್ಕಳು ಅನ್ನೋ ಭಾವನೇನೇ

ಬರುಲ್ಲ... ಒಂಥರಾ... ಡಿಸಿಪ್ಲೀನ್ ಜಾಸ್ತಿ... ಸಲುಗೇನೇ ಇಲ್ಲ. ಮನೇಲಿ ನೀವು ಇಷ್ಟು ಜನ ಇದೀರಿ... ತಮಾಷೆ, ಹುಡುಗಾಟ ಒಂದೂ ಇಲ್ಲ. ಕಡೆಗೆ ಒಂದು ಜಗಳ ಕೂಡ ಆಡುಲ್ವ... ನಮ್ಮನೇಲಿ ನಾನು, ನನ್ನ ತಂಗಿ ಇಬ್ರೇ... ಎಷ್ಟು ಕಿತ್ತಾಡ್ತೀವಿ ಗೊತ್ತಾ?"

"ನಾವು ಏನೇ ಆಡಿದ್ರೂ ಅಪ್ಪನ ಪ್ರಶ್ನೆಗಳ್ಗೆ ಉತ್ತರ ಹೇಳಬೇಕಲ್ಲ. ಅದಕ್ಕೇ ಆದಷ್ಟೂ ಮಾತೇ ಆಡುಲ್ಲ.... ನಾನೊಂದು ಮಾತು ಕೇಳ್ಲಾ ದಿನೇಶ್.... ನೀವು ತಪ್ಪು ತಿಳೀಬಾರ್ದು..."

"ಇಲ್ಲ ಹೇಳಿ."

"ನಾನು ವಯಸ್ನಲ್ಲಿ ಚಿಕ್ಕೋನು ಆದರೂ ಮನೆಯ ಪರಿಸ್ಥಿತಿ ಅರ್ಥವಾಗದಿರುವ ದಡ್ಡನಲ್ಲ.... ನಮ್ಮಕ್ಕ ವಿದ್ಯಾ ತುಂಬಾ ಒಳ್ಳೆಯವ್ಳು... ನಿಮ್ಗೆ ಅವಳು ಒಪ್ಗೆಯಾಗಿದ್ರೆ ಮದ್ವೆ ಮಾಡ್ಕೊಂಡು ಈ ಮನೆಯಿಂದ ಬಿಡುಗಡೆ ಮಾಡ್ಬಿಡಿ.... ನಾನು ನಿಮ್ಮನ್ನು ಕೇಳಿಕೊಳ್ತೀನಿ..."

"ನಿಮಗ್ಗೊತ್ತಿಲ್ಲ ಸಂತೋಷ್... ನಿಮ್ಮಕ್ಕ ನನ್ಗೆ ತುಂಬಾ ಹಿಡಿಸಿದಾರೆ. ಆದ್ರೆ ಅವರ್ಗೆ ನಾನೇ ಒಪ್ಗೆ ಇಲ್ಲವಲ್ಲ...."

"ನೀವು ಅವ್ಳ ಹತ್ರ ಮಾತಾಡಿದೀರಾ?"

"ಹೂಂ. ನಾನೇ ಮೊದಲು ಮಾತಾಡಿದ್ದು.... ಆದ್ರೆ ನಿಮಗೆ ಗೊತ್ತಿದೆಯೋ ಇಲ್ವೋ.. ಯಾರೋ ಕಿಶೋರಂತೆ.... ಅವನನ್ನೇ ಮದ್ವೆಯಾಗ್ಬೇಕೂಂತ ಇದೀನಿ ಅಂತಂದ್ರು. ನನಗೆ ನಿರಾಸೆಯಾದದ್ದೇನೋ ನಿಜ. ಆದರೆ ನಾನೇನು ಮಾಡ್ಲೀ...."

"ಅವಳ್ಗೆ ನಮ್ಮನ್ನೆಲ್ಲ ಬಿಟ್ಟು ದೂರ ಹೋಗೋಕೆ ಇಷ್ಟವಿಲ್ಲ. ಪ್ರಶಾಂತ ಮನೆ ಬಿಟ್ಟು ಹೋದ್ಮೇಲೆ, ಅವಳ್ಗೇ ಏನೋ ಒಂಥರಾ ಆತಂಕ... ಅಮ್ಮನಿಗೆ ಹತ್ರದಲ್ಲಿರಬೇ ಕೂಂತ ಅವಳಿಷ್ಟ..."

"ಈ ಕಿಶೋರ ಹೇಗೆ...? ಸುಮ್ನೆ ಕೇಳ್ತಿದೀನಿ."

"ಮೊದ್ಲಿಂದ, ಅವನ ತಾಯಿ ನಮಗೆ ಪರಿಚಯ.... ಅವನ ತಾಯಿ ಒಂಥರಾ ಜೋರು. ಆದ್ರೆ ಒಳ್ಳೇ ಹೆಂಗ್ಸು, ನಮ್ಮ ತಾಯಿಗೆ ತುಂಬಾ ಸಹಾಯ ಮಾಡ್ತಾರೆ. ಒಂಥರಾ ಸ್ನೇಹಿತೆ... ಆದ್ರೆ ಕಿಶೋರ ನಮ್ಮ ವಿದ್ಯಾಳಿಗೆ ತಕ್ಕವನಲ್ಲ."

"ಇದು ನಿಮ್ಮಕ್ಕಂಗೆ ತಿಳೀಬೇಕಿತ್ತಲ್ವಾ...?"

"ತಿಳಿದಿದೆ... ಏನೋ ತನ್ನ ಸುಖವನ್ನು ಅಮ್ಮಂಗೋಸ್ಕರ ತ್ಯಾಗ ಮಾಡ್ತೀನಿ ಅನ್ನೋ ಆದರ್ಶವಿರಬಹುದು. ಆದರೆ ಆ ಆದರ್ಶವೆಲ್ಲಾ ಸುಲಭವಲ್ಲ. ನಂಗೊತ್ತು."

"ನೀವು ತುಂಬಾ ಚೆನ್ನಾಗಿ ಮಾತಾಡ್ತೀರಿ ಸಂತೋಷ್.... ಆದ್ರೆ, ನಿಮ್ಮಕ್ಕನ್ನ ಬಲವಂತವಾಗಿ ಮದ್ವೆಯಾಗೋಕಾಗುಲ್ಲ ಅಲ್ವಾ..?"

"ನೀವು ಆಗಾಗ ನಮ್ಮನೇಗೆ ಬರ್ತಾ ಇರಿ ದಿನೇಶ್... ಆಗ ನಮ್ಮಕ್ಕ ಕ್ರಮೇಣ

ಕಿಶೋರನ ಬಗ್ಗೆ ಯೋಚಿಸದೇ ಇರಬಹುದು..."

"ಆಗಾಗ ಈ ಹೌಸ್ ಕೋರ್ಟ್‌ಗೆ ಬರ್ತಾ ಇದ್ರೆ ನಾನು ಅಪರಾಧಿಯಾಗಿ ಬಿಡ್ತೀನಿ ಅಷ್ಟೇ..." ಮತ್ತೆ ನಕ್ಕ. "ಒಂದ್ಕೆಲ್ಸ ಮಾಡಿ.... ಕಿಶೋರನ ಮನಸ್ನಲ್ಲಿ ಏನಿದೆ? ನಿಜವಾಗಿಯೂ ವಿದ್ಯಾಳ ಮೇಲೆ ಪ್ರೀತಿ ಇದೆಯಾ? ಅಂತ ತಿಳ್ಕೊಳ್ಳಿ..."

"ಪ್ರೀತಿ– ಗೀತಿ ಏನಿಲ್ಲ ದಿನೇಶ್.... ನಾನಿದನ್ನೆಲ್ಲಾ ನಿಮ್ಗೆ ಹೇಳ್ಬಾರ್ದು. ಅಪ್ಪ ಅವರಮ್ಮನ ಮದ್ವೆ ಮಾಡ್ಕೋತೀನಿ ಅಂತ ಆಸೆ ಪಟ್ಟಿದ್ರಂತೆ. ಆದರೆ ಅವರೇ ಒಪ್ಪ ಲಿಲ್ಲವಂತೆ. ಅಮ್ಮನ ಮೇಲೆ ಅವನಿಗೆ ಅಸಡ್ಡೆ... ಹಾಗೇ ನಮ್ಮ ತಂದೆ ಮೇಲೆ ಏನೋ ತಿರಸ್ಕಾರ. ಹೀಗೆಲ್ಲಾ ಏನೇನೋ ಭಾವನೆ ಇರೋನು. ವಿದ್ಯಾಳನ್ನು ಚೆನ್ನಾಗಿ ನೋಡ್ಕೋತಾನಾ? ಸೇಡು ತೀರಿಸ್ಕೊಳ್ಳೋನ ಥರ ಮಾತಾಡ್ತಾನೆ, ಅಸಹ್ಯವಾಗುತ್ತೆ."

"ಇದೆಲ್ಲಾ ನಿಮ್ಮಕ್ಕಂಗೆ ಗೊತ್ತಿಲ್ವಾ...?"

"ಇಲ್ಲ. ಅವಳ್ಹತ್ರ ಹಾಗೆ ಮಾತಾಡುಲ್ಲ..... ಒಂಥರ ಕದೀಮ.... ಅವ್ನು."

"ಇದನ್ನು ನಿಮ್ಮಕ್ಕನಿಗೆ ಹೇಳಬಹುದಲ್ಲ..."

"ಮುಂಚೆ ಅನುಮಾನಿಸ್ತಿದ್ದೆ.... ಒಂದ್ವೇಳೆ ಅಕ್ಕಂಗೆ ಮದ್ವೆಯಾಗ್ದೇ ಹಾಗೇ ಉಳಿದುಬಿಟ್ರೆ ಅಂತ ಭಯವೂ ಇತ್ತು. ಈಗ ನನಗೆ ಯಾವ ಭಯವೂ ಇಲ್ಲ. ನೀವೇ ಅವಳಿಗೆ ಸರಿಯಾದವರು. ಪ್ಲೀಸ್ ಯಾವ್ದೇ ಕಾರಣಕ್ಕೂ ಅವಳ ಕೈ ಬಿಡ ಬೇಡಿ." ದಿನೇಶನ ಕೈ ಹಿಡಿದ.

"ನೀವು ತುಂಬಾ ಯೋಚಿಸ್ತೀರಿ ಸಂತೋಷ. ಇದು ನಿಮ್ಮ ವಯಸ್ಸಿಗೆ ಮೀರಿದ ಆಲೋಚನೆಗಳು.... ಆದ್ರೂ ನಿಮ್ಮ ಮಾತಿಗೆ ಬೆಲೆ ಕೊಡ್ತೀನಿ..."

"ಸಂತೋಷಾ.... ಇನ್ನೂ ಮಲಗಿಲ್ವಾ ನೀನು? ದೀಪ ಆರಿಸಿ ಮಲಕ್ಕೋ..." ಕೆಳಗ್ನಿಂದ ಭಟ್ಟನ ಧ್ವನಿ ಕೇಳಿತು. ಇಬ್ಬರೂ ಮುಖ ಮುಖ ನೋಡಿಕೊಂಡರು. ಸಂತೋಷ ದೀಪವಾರಿಸಿ, ತನ್ನ ರೂಮಿಗೆ ಬಂದ.

ವಿದ್ಯಾಳಿಗೆ ಇನ್ನೂ ನಿದ್ದೆ ಬಂದಿರಲಿಲ್ಲ. ಮೇಲಿನ ರೂಮಿನಲ್ಲಿ ಸಂತೋಷ, ದಿನೇಶ ಏನೋ ಮಾತಾಡುತ್ತಿರುವರೆಂದು ಅಸ್ಪಷ್ಟವಾಗಿ ಕೇಳಿಸಿತ್ತು. ತಾನೂ ಹೋಗಿ ಮಾತಿಗೆ ಸೇರಿಕೊಳ್ಳಲೇ ಎಂದು ಅನ್ನಿಸಿದ್ದರೂ ತಡೆದುಕೊಂಡಿದ್ದಳು. ಅಪ್ಪ ಬಂದು ಅವಳ ರೂಮಿನಲ್ಲಿ ಹಣಕಿದ್ದರು. ಮೂರು ಹಾಸಿಗೆಯ ಮೇಲೆ ಮೂರು ಜನ ಹುಡುಗಿಯರು ಮಲಗಿರುವುದನ್ನು ಖಚಿತ ಮಾಡಿಕೊಂಡಿದ್ದರು. ಅಪ್ಪನಿಗೆ ತನ್ನ ಮೇಲೆ ಏನೋ ಅನುಮಾನ, ಅದಕ್ಕೆ ಪರೀಕ್ಷಿಸಲು ಬಂದಿದ್ದಾರೆಂದು ಗೊತ್ತಾಯಿತು.

ಭಟ್ಟ ಹೆಂಡತಿಯ ರೂಮಿಗೆ ಬಂದ. "ನಿದ್ದೆ ಬಂತಾ ಪ್ರೇಮಾ?" ಅಂತ ಕೇಳಿದ. ಅವಳಿಗೆ ನಿದ್ದೆ ಬಂದಿರಲಿಲ್ಲ. ಆದರೂ ಉತ್ತರಿಸಲಿಲ್ಲ. ಅವಳು ದಿನೇಶನ ಬಗ್ಗೆ ಯೋಚಿಸುತ್ತಿದ್ದಳು. ಗಂಡನೊಡನೆ ಮಾತು ಬೇಕಿರಲಿಲ್ಲ.

* * *

ಬೆಳಿಗ್ಗೆ ತಿಂಡಿ ತಿನ್ನುತ್ತಿದ್ದಾಗ ಕಾಮಾಕ್ಷಿ ಬಂದಿದ್ದಳು. ಅವಳ ಮಾತಿನಿಂದಲೇ ಅವಳ ಕಾಮಾಕ್ಷಿ ಇರಬಹುದೆಂದು ಯೋಚಿಸಿದ್ದ ದಿನೇಶ. ವಿದ್ಯಾ ಅವಳನ್ನು ಪರಿಚಯಿಸಿಕೊಟ್ಟಳು.

"ಇವರು ಕಾಮಾಕ್ಷಿ ಅತ್ತೆ. ಇವರು ದಿನೇಶ ಅಂತ...." ಕಾಮಾಕ್ಷಿ ವಿದ್ಯಾಳ ಮುಖದಲ್ಲಿ ಉತ್ಸಾಹವನ್ನು ಗುರುತಿಸಿದಳು. ಒಂದು ಗಳಿಗೆ ಎಲ್ಲೋ ಚುಳ್ ಎಂದಿತ್ತು.

"ಕಾಮಾಕ್ಷಿ ತಿಂಡಿ ತಿನ್ಬನ್ನಿ." ಪ್ರೇಮಾ ಕರೆದಳು.

"ಇಲ್ಲ ಪ್ರೇಮಕ್ಕ ನಂದಾತು. ಮಕ್ಳಿಗೆ ತಿಂಡಿ ಮಾಡ್ಕೊಟ್ಟು, ನಾನೂ ತಿಂದೇ ಇತ್ಕಡೆ ಬಂದದ್ದು.... ಏನೇ ವಿದ್ಯಾ ನೀ ಅಲ್ಲೇ ಉಳಿದ್ಬಿಡ್ತಿ ಅಂತ ನಾ ಮಾಡಿದ್ದೆ... ಈಗ ನಿಮ್ ಚಿಕ್ಕಮ್ಮ ಆರಾಮಾನಾ?"

"ಹೂಂ. ಪರ್ವಾಗಿಲ್ಲ.... ಆರಾಮಾಗಿದಾರೆ."

"ನಾ ಆಮೇಲೆ ಮತ್ತೆ ಬರ್ತೇನೆ." ಎಂದು ಹೇಳಿ ಹೊರಟು ಹೋಗಿದ್ದಳು. ದಿನೇಶ ಹೊರಟು ನಿಂತಾಗ ವಿದ್ಯಾ ಸ್ವಲ್ಪ ಪೆಚ್ಚಾಗಿದ್ದಳು. ಸಂತೋಷ ಹೇಳಿದ್ದ.

"ನೀವು ಇನ್ನೊಂದೆರ್ಡು ದಿನ ಇದ್ದು ಹೋಗ್ಬಹುದಾಗಿತ್ತು...."

"ಇಲ್ಲ ಸಂತೋಷ... ಮತ್ಯಾವಾಗ್ಲಾದ್ರೂ ಬರ್ತೀನಿ... ಈಗ ಇನ್ನು ಒಂದು ರಾತ್ರಿ ಉಳಿದ್ಕೊಂಡ್ರೂ ನಾನು ಅಪರಾಧಿಯಾಗ್ಬಿಡ್ತೀನಿ." ವಿದ್ಯಾಳ ಕಡೆ ನೋಡಿ ನಕ್ಕ.

"ಯಾಕ್ಹಾಗ್ಹೇಳ್ತೀರಿ? ಏನ್ತಪ್ಪು ಮಾಡಿದೀರಿ?"

"ತಪ್ಪಲ್ವಾ..? ಯಾವ ಸಂಬಂಧ ಹೇಳ್ಕೊಂಡು ಇಲ್ಲಿರ್ಲಿ. ನೀವೇ ಹೇಳಿ...?"

"ಸ್ನೇಹಿತ್ರಾಗಿ ಇರ್ಬಾರ್ದು ಅಂತೇನಿಲ್ಲ...."

"ನಿಮ್ಮನೇಲಿ ಅಪರೂಪಕ್ಕಾದ್ರೂ ಯಾರಾದ್ರೂ ಸ್ನೇಹಿತ್ರು ಬರುಲ್ಲ ಅಂತ ನೀವೇ ಹೇಳಿದ್ರಿ..."

"ಆಗ ನಮಗೆ ಯಾವ ಸ್ನೇಹಿತ್ರೂ ಇರ್ಲೇ ಇಲ್ಲ...."

"ನಿಮ್ಮ ಸ್ನೇಹಿತ ಕಿಶೋರ ಆಗಾಗ್ಗೆ ಬರ್ತಿರ್ತಾರಾ.....?"

"ಇಲ್ಲ ಅವ್ನು ಬರುಲ್ಲ. ಅಪ್ಪಂಗ್ಹೆದರ್ತಾನೆ...."

"ಸ್ನೇಹಿತ್ನಾಗಿ ಹೆದರ್ಕೊಂಡು ಬರ್ದೇ ಇರೋಕ್ಕಿಂತ, ಸಂಬಂಧಿಯಾಗಿ ಧೈರ್ಯವಾಗಿ ಬರೋದ್ರಲ್ಲಿ ಮರ್ಯಾದೆ ಇದೆ...." ಅವಳ ಕಡೆ ಅರ್ಥಗರ್ಭಿತವಾಗಿ ನೋಡಿದ.

"ಆಗ ಈಗ ಲೆಟರ್ ಬರೀರಿ ದಿನೇಶ್" ಎಂದು ಹೇಳಿದ ಸಂತೋಷ್ ತನ್ನ ಮನೆಯ ವಿಳಾಸವನ್ನು ಬರೆದುಕೊಟ್ಟ. ಎಲ್ಲರಿಗೂ ಮತ್ತೊಮ್ಮೆ ಹೇಳಿದ. ಹಿರಿಯರಿಬ್ಬರಿಗೂ ಕೈ ಮುಗಿದು ನಮಸ್ಕಾರವನ್ನು ಹೇಳಿದ. ಸಂತೋಷ ಬಸ್ ಹತ್ತಿಸಿ ಬರಲು ಹೊರಟ. ತಾನೂ ಹೋಗುವಂತಿದ್ದರೇ ಅಂತೆನ್ನಿಸದೇ ಇರಲಿಲ್ಲ

ವಿದ್ಯಾಳಿಗೆ. ಅವನು ಇಲ್ಲದೇ ಇದ್ದುದರಿಂದ ಮನೆ ಬಿಕೋ ಬಿಕೋ ಎನಿಸುತ್ತಿತ್ತು. ಒಂದು ರಾತ್ರಿಯಲ್ಲಿ, ಮನೆಯಲ್ಲಿ ಏನೋ ಒಂದು ಪ್ರಭಾವ ಬೀರಿದ್ದನೆಂದೆನಿಸಿತ್ತು.

ಎಂದಿನಂತೆ ಎಲ್ಲರೂ ಅವರವರ ಪಾಡಿಗೆ, ಶಾಲಾ– ಕಾಲೇಜುಗಳಿಗೆ ಹೊರಟರು. ವಿದ್ಯಾ ರಸ್ತೆತಿರುವಿನಲ್ಲಿ ನಡೆಯುತ್ತಿದ್ದಾಗ, ಹಿಂದಿನಿಂದ ಕಿಶೋರ ಅವಳನ್ನು ಬಂದು ಸೇರಿದ.

"ಏನೇ ವಿದ್ಯಾ.... ಇವತ್ತು ಬರ್ತಿದೀಯಾ....? ಬೆಂಗಳೂರು ನಿಂಗೆ ಅಷ್ಟು ಹಿಡಿಸ್ಬಿಡ್ತಾ?" ವ್ಯಂಗ್ಯದಿಂದ ಕೇಳಿದ್ದ.

"ಬೆಂಗ್ಳೂರು ತುಂಬಾ ಚೆನ್ನಾಗಿದೆ. ದೊಡ್ಡ ಊರು. ನೀನೂ ಯಾವಾಗ್ಲಾದ್ರೂ ಹೋಗಿ ಬಾ.... ನಿಂಗೇ ಗೊತ್ತಾಗುತ್ತೆ."

"ಅಲ್ಲಿ ನಂಗ್ಯಾವ ಚಿಕ್ಕಮ್ಮಾನೂ ಇಲ್ವಲ್ಲಾ.... ತಿಂಗಳಾನುಟ್ಲೆ ನನ್ನನ್ನು ನೋಡ್ಕೋಳ್ಳೋಕೆ...."

"ಹೀಗ್ಯಾಕ್ಮಾತಾಡ್ತೀಯಾ.... ನಾನು ಹೋಗಿದ್ದು ಚಿಕ್ಕಮ್ಮನ್ನ ನೋಡ್ಕೋಳ್ಳೋಕೆ."

"ನೀನು ತುಂಬಾ ಬದ್ಲಾಯಿಸಿ ಹೋಗಿದೀಯ..."

"ಏನಿಲ್ಲ. ಹಾಗೇ ಇದೀನಿ..... ನೀನೇ ಬದ್ಲಾಗಿರೋನು...."

"ನಾನಾ....? ನಾನೇನೇ ಮಾಡ್ದೇ....?"

"ನನ್ನ ಪತ್ರಕ್ಕೆ ನೀನ್ಯಾಕೋ ಉತ್ರ ಬರೀಲಿಲ್ಲ..."

"ಪತ್ರ? ಯಾವ ಪತ್ರ? ನೀನ್ಯಾವಾಗ್ಲೇ ಬರ್ದೆ...?"

"ತಮಾಷೆ ಮಾಡ್ಬೇಡ... ನಾನು ಐದು ಲೆಟರ್ ಬರೆದೆ."

"ಯಾರಿಗೆ, ಯಾವ ಅಡ್ರೆಸಿಗ್ಬರೆದ್ಯೋ.. ನಂಗೇನ್ಗೊತ್ತು..?"

"ನಾನೇನೂ ಅಷ್ಟು ದಡ್ಡಿಯಲ್ಲ. ನೀನು ಬೇಕೂಂತ ಸುಳ್ಳು ಹೇಳ್ತಿದೀಯ..."

"ಸುಳ್ಳು ಹೇಳೋಕೆ ನಂಗೇನ್ಹುಚ್ಚಾ....? ಸುಳ್ಳು ಹೇಳ್ತಾ ಇರೋಳು ನೀನು..."

"ನಾನ್ಯಾಕೆ ಸುಳ್ಹೇಳ್ಲಿ.... ನಮ್ಮನೇಲಿ ಯಾರೂ ಸುಳ್ಳು ಹೇಳುಲ್ಲ."

"ಯಾಕ್ಹೇಳುಲ್ಲ. ಎಲ್ರೂ ಸುಳ್ಳುಗಾರ್ರೇ.... ನಿಮ್ಮಪ್ಪ.... ಹೆಸ್ರಿಗೆ ದೊಡ್ಡ ಲಾಯರ್ರು ಅವ್ರೇನು ಸುಳ್ಳು ಹೇಳುಲ್ವಾ! ಸುಳ್ಳು ಸಾಕ್ಷಿ ಹೇಳಿಸುಲ್ವಾ...?"

"ಅವ್ರ ಕೆಲ್ಸನೇ ಅದು... ಎಲ್ಲಾ ಲಾಯರ್ರು ಮಾಡೋ ಕೆಲ್ಸವೇ ಅದು...."

"ಅಂಥೋರ್ಮನೆ ಮಗ್ಳು ನೀನು. ನಿಂಗೆ ಸುಳ್ಳು ಹೇಳೋದನ್ಹೇಳ್ಕೊಡ್ಬೇಕಾ?"

"ಕಿಶೋರ... ಅಪ್ಪನ ಬಗ್ಗೆ ಹೀಗೆಲ್ಲಾ ಮಾತಾಡ್ಬೇಡ...."

"ಯಾಕಾಡ್ಬಾರ್ದು? ಅವ್ರೇನು ಸನ್ನ ಸ್ವಂತ ಮಾವಾನಾ? ಅಮ್ಮನ ಮದ್ವೆ ಯಾಗ್ತೀನಿ ಅಂತ ಹೇಳ್ಬಿಟ್ಟು.... ನಿಮ್ಮಮ್ಮನ ಮದ್ವೆ ಆದ್ದು ನಂಗೊತ್ತು...."

"ಇದನ್ನ ನಿಂಗ್ಯಾರು ಹೇಳಿದ್ರು...?"

"ಅಮ್ಮಾನೇ... ನನ್ನ ಸ್ವಂತ ಅಮ್ಮನೇ ಹೇಳಿದ್ದು. ಇದು ಸುಳ್ಳೇ?"

"ಸುಳ್ಳೋ ನಿಜ್ವೋ ನಂಗೊತ್ತಿಲ್ಲ ಕಿಶೋರ, ಕಾಮಾಕ್ಷಿ ಅತ್ತೇನೇ ಈ ಮದ್ವೆಗೆ ಒಪ್ಪಲಿಲ್ಲವಂತೆ. ಅದಕ್ಕೆ ನನ್ನನ್ಯಾಕೆ ಬೈತೀಯ?"

"ಯಾಕೆ ಅಂದ್ರೆ? ನನ್ನ ಹೊಟ್ಟೆ ಉರಿದು ಹೋಗ್ತಿದೆ. ಈಗ ನಿಮಗೆ ಇರೋ ಆಸ್ತಿ, ಅಂತಸ್ತು ಎಲ್ಲಾ ನನಗೂ ಇರ್ತಿತ್ತು ಅಲ್ವಾ..? ನಮ್ಮಮ್ಮ ಯಾರೋ ಒಬ್ಬ ಬಡ ಗುಮಾಸ್ತನ್ನ ಮದ್ವೆಯಾಗೋಕೆ ನಿಮ್ಮಪ್ಪನೇ ಕಾರಣ."

"ಅಪ್ಪ ಹೇಗೆ ಕಾರಣ ಆಗ್ತಾರೆ! ಸುಮ್ನೇ ಏನೇನೋ ಒದರ್ಬೇಡ..."

"ಈಗ ನಿನ್ನೆದುರ್ಗೆ ಒದರ್ತಿದೀನಿ. ನಿನ್ನನ್ನ ಮದ್ವೇ ಆದ್ಮೇಲೆ ನಿಮ್ಮಪ್ಪನೆದುರ್ಗು ಒದರ್ತೀನಿ.... ನಿಮ್ಮಪ್ಪನ ಮೇಲಿನ ಸೇಡು ತೀರಿಸ್ಕೊಳ್ಳಲೇಬೇಕು.. ನಿಮ್ಮಪ್ಪಂಗೆ ಬುದ್ಧಿ ಕಲಿಸ್ಲೇಬೇಕು..."

"ಹೀಗೆಲ್ಲಾ ಬೀದೀಲಿ ಮಾತಾಡ್ಬೇಡ ಕಿಶೋರ. ಅಪ್ಪ ಕೆಟ್ಟೋರೇನಲ್ಲ. ಏನೋ ಅವರ ರೀತಿ – ನೀತಿ ನಮಗೆ ಸರಿ ಬರುಲ್ಲ ಅಷ್ಟೇ. ಊರ್‍ನಲ್ಲಿ ಅವ್ರು ಹೆಸ್ರು ಗಳ್ಸಿದಾರೆ.... ನೀನು ಹೀಗೆಲ್ಲಾ ಮಾತಾಡ್ಬಾರ್ದು...."

"ಯಾಕಾಡ್ಬಾರ್ದು...? ನಾಲ್ಕು ದಿನ ಬೆಂಗ್ಳೂರಿಗೆ ಹೋಗ್ಬಂದ ಮಾತ್ರಕ್ಕೆ, ನಿಂಗೇನು ಅಪ್ಪನ್ಮೇಲೆ ಇಷ್ಟು ಪ್ರೀತಿ...? ಪ್ರಶಾಂತ ಮನೆ ಬಿಟ್ಟು ಹೋದ್ದಕ್ಕೆ ನಿಮ್ಮಪ್ಪನೇ ಕಾರಣ ಅಂತ ನೀನೇ ಅತ್ತಿರಲಿಲ್ವಾ....?"

"ಹೌದು. ನಿನ್ಹತ್ರ ಹೇಳ್ಕೊಂಡು ಅತ್ತಿದ್ದೆ. ನೀನು ನನ್ನ ಒಳ್ಳೆಯ ಸ್ನೇಹಿತ ಅಂತ ತಿಳ್ಕೊಂಡು ಎಲ್ಲಾ ಹೇಳ್ದೆ. ತಪ್ಪು ನಂದೇ.... ನಿನ್ನ ಮನಸ್ನಲ್ಲಿ ಹೀಗೆ ಕಹಿ ತುಂಬ್ಕೊಂಡಿದೆ ಅಂತ ನಾನು ತಿಳ್ಕೊಂಡಿರ್ಲಿಲ್ಲ."

"ಏನಾದ್ರೂ ತಿಳ್ಕೋ... ನಿಮ್ಮಪ್ಪನ ಆಸ್ತೀಲಿ ನಂಗೊಂದು ಪಾಲು ಸಿಗೋದಂತೂ ಗ್ಯಾರಂಟೀ.... ವರದಕ್ಷಿಣೆ ಅದೂ ಇದೂಂತ ವಸೂಲು ಮಾಡ್ದೇ ಬಿಡುಲ್ಲ ತಿಳ್ಕೋ..." ಅವನು ವಿಚಿತ್ರವಾಗಿ ನಕ್ಕಾಗ ಅವಳು ಹೆದರಿದಳು. ಕಾಲೇಜಿಗೆ ಹೋಗುವ ಮನಸ್ಸಾಗ ಲಿಲ್ಲ. ಹಿಂದಕ್ಕೆ ತಿರುಗಿ, ಮನೆಗೆ ವಾಪಸ್ಸು ಬಂದುಬಿಟ್ಟಳು. ಕಿಶೋರನಾಡಿದ ಮಾತುಗಳು ಅವಳ ಕಿವಿಯಲ್ಲಿ ಗುಂಯ್ ಗುಟ್ಟುತ್ತಿದ್ದವು. ಯಾರಿಗೂ ತಿಳಿಯದಂತೆ ರೂಮಿ ನೊಳಗೆ ಹೋಗಿ ಮಲಗಿಬಿಟ್ಟಳು. ತಳಮಳ, ಆತಂಕ, ಅವ್ಯಕ್ತ ಭೀತಿಯಿಂದ ತಲ್ಲಣಿಸಿದಳು. ತಾನೆಂಥ ಇಕ್ಕಟ್ಟಿನಲ್ಲಿ ಸಿಕ್ಕಿ ಬಿದ್ದಿರುವಳೆಂದು ಈಗ ಅವಳಿಗೆ ಅರ್ಥ ವಾಗಿತ್ತು. ತಾನು ಕಿಶೋರನನ್ನು ತನ್ನ ಆಪ್ತನೆಂದು ನಂಬಬಾರದಾಗಿತ್ತು. ಅವನಿಗೆ ಪತ್ರಗಳನ್ನು ಬರೆಯಬಾರದಾಗಿತ್ತು... ಅಂದ್ಹಾಗೇ ಆ ಪತ್ರಗಳು ಎಲ್ಲಿವೆ? ಯಾರ ಕೈ ಸೇರಿವೆ...? ಕಾಮಾಕ್ಷಿ ಅತ್ತೆ ಮುಚ್ಚಿಟ್ಟಿರಬಹುದೇ? ಅವರೂ ಇವನ ಜತೆ ಶಾಮೀಲಾಗಿರಬಹುದೇ? ಅವರಿಗೂ ಅಪ್ಪನ ಹಣದ ಮೇಲೆ ಕಣ್ಣಿರಬಹುದೇ.....? ಇದನ್ನೆಲ್ಲ ತಿಳಿದುಕೊಳ್ಳುವುದು ಹೇಗೆ? ಪ್ರಶಾಂತನಾದ್ರೂ ಇದ್ದಿದ್ರೆ? ಈಗ ಸಂತೋಷನೇ ತನಗೆ ಗತಿ ಎಂದುಕೊಂಡು ಅವನು ಬರುವುದನ್ನೇ ಕಾದಳು.

ರಾತ್ರಿ ಎಲ್ಲರ ಊಟದ ಅನಂತರ ಮಲಗುವ ಸಮಯದಲ್ಲಿ ವಿದ್ಯಾ ಮಹಡಿ ಹತ್ತಿ ಸಂತೋಷನ ರೂಮಿಗೆ ಬಂದಳು.

"ಏನೇ ಅಕ್ಕಾ.... ಏನ್ಬೇಕಾಗಿತ್ತೇ?" ಅವಳತ್ತ ನೋಡಿ ಕೇಳಿದ.

"ನಾನು ಸ್ವಲ್ಪ ಮಾತಾಡ್ಬೇಕಾಗಿತ್ತು."

"ಯಾವ ವಿಷಯ? ದಿನೇಶನ ವಿಚಾರಾನಾ?"

"ಅಲ್ಲ ಕಿಶೋರನ ವಿಚಾರ....."

"ಕಿಶೋರಾನಾ? ಅವನೇನ್ಮಾಡ್ದಾ...?" ಆಸಕ್ತಿಯಿಂದ ಇತ್ತ ತಿರುಗಿದ. ವಿದ್ಯಾ ಅವನಾಡಿದ್ದನ್ನೆಲ್ಲ ಸವಿಸ್ತಾರವಾಗಿ ಹೇಳಿದಳು.

"ನಂದೇ ತಪ್ಪು ಸಂತೋಷ... ಮನಸ್ಗೆ ಬೇಜಾರಾಗಿತ್ತು. ಮನೆಯೋರ ಥರ ಅಂತ ಹೇಳ್ಕೊಂಡೆ... ಅವನ್ನೇ ಮದ್ವೇ ಆದ್ರೆ ನಮಗೆಲ್ಲಾ ಅನುಕೂಲ ಅಂತಂದ್ಕೊಂಡೆ... ಈಗ ನೋಡಿದ್ರೆ ಎಷ್ಟು ಹಲ್ಕಾ ಅಂತನ್ಸುತ್ತೆ..."

"ಬಯ್ಸೀ ಬಯ್ಸೀ ಮದ್ವೆಯಾಗೋ ಯಾವ ಗುಣವೂ ಅವನಲ್ಲಿಲ್ಲ. ನಿನಗೆ ಅಷ್ಟೂ ತಿಳೀಬೇಡ್ವೇನಕ್ಕಾ?"

"ಹೇಳಿದ್ನಲ್ಲ. ನಾನಂದ್ಕೊಂಡಿದ್ದೇ ಒಂದು.... ಈಗ ನೋಡಿದ್ರೆ ಯದ್ವಾತದ್ವಾ ಮಾತಾಡ್ದ... ಸದ್ಯ ಮದ್ವೆಗ್ಮುಂಚೆನೇ ಅವನ ಯೋಗ್ಯತೆ ಏನೂಂತ ತಿಳೀತು... ಇಲ್ದಿದ್ರೆ ಆತ್ಮಹತ್ಯೆ ಮಾಡ್ಕೋಬೇಕಾಗಿತ್ತು...."

"ಅಪ್ಪ ಈ ಮದ್ವೆಗೆ ಖಂಡಿತಾ ಒಪ್ತಿರ್ಲಿಲ್ಲ. ನಂಗೊತ್ತು...."

"ಅಪ್ಪ, ಕಾಮಾಕ್ಷಿ ಅತ್ತೇನ್ನೇ ಮದ್ವೆಯಾಗಿದ್ದಿದ್ರೆ ಚೆನ್ನಾಗಿತ್ತು. ಆಗ ಈ ರಗಳೆಯೆಲ್ಲಾ ಇರ್ತಾನೇ ಇರಲಿಲ್ಲ. ಅಮ್ಮನೂ ಸುಖವಾಗಿರುತ್ತಿದ್ದಳು."

"ಆಗ ನಮ್ಮೆಲ್ಲರ ಕಥೆಯೇ ಬೇರೆಯಾಗಿರ್ತಿತ್ತು..... ಈಗ ಆ ಮಾತೇಕೆ? ಕಿಶೋರನಿಂದ ದೂರ ಇರು... ತಾನಾಗೇ ಎಲ್ಲಾ ಸರಿ ಹೋಗುತ್ತೆ."

"ಅವನೇನಾದ್ರೂ ಕಿರುಕುಳ ಕೊಟ್ರೆ..?"

"ಒದ್ದು ಜೈಲಿಗ್ಹಾಕಿಸ್ತೀನಿ... ಅವನು ಬೊಗಳೋ ನಾಯಿ ಜಾತಿಯವನು. ನೀನು ಹುಡ್ಗಿ ಅಂತ ನಿನ್ನೆದುರ್ಗೆ ತನ್ನ ಪೌರುಷಾನ ಕೊಚ್ಕೊಂಡಿದಾನೆ. ಅಪ್ಪನ ಎದುರ್ಗೆ ಬಾಲ ಬಿಚ್ಚೋ ಧೈರ್ಯ ಇದೆಯಾ ಅವನ್ಗೆ!"

"ನಂಗೊತ್ತಿಲ್ಲ ಸಂತೋಷ. ನಂಗೊಂಥರಾ ಭಯ ಆಗ್ತಿದೆ... ನಾನು ಅವನ್ಗೆ ಬರೆದ ಲೆಟರ್ಸ್ ಅವನ ಹತ್ರಾನೇ ಇದೆ. ಅದನ್ನ ಅಪ್ಪಂಗೆ ತೋರ್ಸಿದ್ರೆ.....?"

"ನೀನ್ಯಾಕೆ ಅವನ್ಗೆ ಲೆಟರ್ಸ್ ಬರ್ದೆ....? ಬರೀಬಾರ್ದಾಗಿತ್ತು ನೀನು.... ಹೇಗಾದ್ರೂ ಉಪಾಯವಾಗಿ ಆ ಲೆಟರ್ಸ್ ಕೇಳಿ ಇಸ್ಕೋ."

"ಯಾವ ಲೆಟರ್ರೂ ಇಲ್ಲ. ನೀನು ಬರ್ದೇ ಇಲ್ಲ ಸುಳ್ಳು ಹೇಳ್ತಿದಿಯಾಂತ ಅಂದ್ಬಿಟ್ಟ..."

"ಹೌದಾ? ಅವ್ನು ನಿಜ ಹೇಳ್ತಿದಾನೆ ಅಂತ ಅನ್ನಿಸ್ತಾ?"

"ಏನೋ ನಂಗೊತ್ತಿಲ್ಲ. ಕಾಮಾಕ್ಷಿ ಅತ್ತೆ ಮುಚ್ಚಿಟ್ಟಿರ್ಬಹ್ದಾ....?"

"ಅತ್ತೇನೂ ಅಷ್ಟೇ. ವಿಪರೀತ ಮಾತು. ಗುಟ್ಟು ನಿಲ್ಲೋದಿಲ್ಲ. ಅಮ್ಮಂಗೇನಾದ್ರೂ ಹೇಳಿಬಿಟ್ಟಿದ್ದಾರಾಂತ... ಬೆಳಗ್ಗೆ ಅಮ್ಮನ ಕೇಳಿದ್ರಾಯ್ತು.... ಈಗ ಮಲಕ್ಕೋ ಹೊತ್ತಾಗಿದೆ... ಅಪ್ಪಂಗೆ ಗೊತ್ತಾದ್ರೆ ಅಲ್ಲಿಂದ್ಲೇ ಕೂಗ್ತಾಕ್ತಾರೆ....." ಅಷ್ಟರಲ್ಲಿ ಅಪ್ಪನ ಧ್ವನಿ ಕೇಳಿಸಿತ್ತು.

"ವಿದ್ಯಾ ಅಲ್ಲೇನ್ಮಾಡ್ತಿದೀಯ.... ಸಂತೋಷ ನೀನಿನ್ನೂ ಮಲಗಿಲ್ವಾ?" ವಿದ್ಯಾ ಕೆಳಗಿಳಿದು ಬಂದಳು.

"ಅವನ ಷರಟಿನ ಗುಂಡಿ ಕಿತ್ಹೋಗಿತ್ತು. ಹಾಕಿ ಕೊಡ್ತಿದ್ದೆ..."

"ರಾತ್ರಿ ಹೊತ್ತು ಹೊಲೀಬಾರ್ದು ಅಂತ ನಿಂಗೊತ್ತಿಲ್ವಾ...? ಹೋಗು ಮಲಕ್ಕೋ." ಹೆಂಡತಿಯ ರೂಮಿನ ಬಳಿ ಇಣುಕಿದಂತೆ ಮಾಡಿ, ಭಟ್ಟ ಅಲ್ಲಿಂದ ಸರಿದಿದ್ದ.

"ಅಂತೂ ಈ ಮನುಷ್ಯ ದಿನಾ ರಾತ್ರಿ, ಮಲಗುವ ಮೊದಲು, ಕಾವಲುಗಾರ ನಂತೆ, ಎಲ್ರೂ ಸರಿಯಾಗಿ ಮಲಗಿದಾರೋ ಇಲ್ಲವೋ ಅಂತ ನೋಡ್ದಿದ್ರೆ ನಿದ್ದೆ ಸರ್‍ಯಾಗಿ ಬರುಲ್ಲ ಅಂತ ಕಾಣುತ್ತೆ." ಪ್ರೇಮಾ ತನ್ನಲ್ಲೇ ಹೇಳಿಕೊಂಡು ಮಗ್ಗಲು ಬದಲಾಯಿಸಿದಳು. ವಿದ್ಯಾ ಯಾಕೆ ಸಂತೋಷನ ರೂಮಿಗೆ ಹೋಗಿದ್ದಳು! ಇವತ್ಯಾಕೋ ಮಂಕಾಗಿದ್ದಳು. ಬೆಂಗಳೂರು ಹಿಡಿಸಿದೆ ಅಂತ ಕಾಣಿಸುತ್ತೆ. ಈ ಊರು ಬೇಜಾರಾಗಿರಬಹುದು. ಈ ದಿನೇಶ ಯಾರೋ ಏನೋ? ಅವನ ಜತೆ ಬಂದರೂ, ನನ್ನ ಗಂಡ ತುಟಿ ಪಿಟಕ್ ಅಂದಿಲ್ಲ. ಇದ್ಯಾವ ಪರೀಕ್ಷೆ? ಅದೇನು ರಹಸ್ಯ?

ದಿನೇಶನ ಮಾತುಕತೆ, ಸಭ್ಯತೆ ಅವಳಿಗೂ ಹಿಡಿಸಿತ್ತು. ವಿದ್ಯಾವಂತ, ರೂಪವಂತ, ನಿಗರ್ವಿ, ನನ್ನ ಮಗಳಿಗೆ ತಕ್ಕವನು.... ಆದರೆ ವಿದ್ಯಾ ಅವನ್ನ ಹಿಡಿಸಿದಾಳೋ ಇಲ್ಲವೋ.... ಈ ಭವಾನಿಯೋ, ನನಗೊಂದು ಕಾಗದ ಬರೆಯೋವಷ್ಟು ಪುರುಸೊತ್ತು ಕೂಡ ಇಲ್ವಾ...? ಬೆನ್ನಲ್ಲಿ ಬಿದ್ದ ತಂಗಿಯಾದ್ರೇನು? ಈಗ ನಾನು ಬೇಡವಾಗಿರ ಬಹುದು. ಒಂದ್ನಾಲ್ಕು ತಿಂಗಳು ಅಲ್ಲಿರಲಿ ಅಂತ ಕರೆಸ್ಕೊಂಡಿದ್ದಳು... ನಾಲ್ಕು ವಾರಕ್ಕೆ ಮುಂಚೆಯೇ ಕಳಿಸಿಬಿಟ್ಟಿದ್ದಾಳೆ.... ಅದೂ ಅವರ ನಾದಿನಿಯ ಮಗನ ಜತೆ.... ಇವರಿಗೆ ಇದೆಲ್ಲಾ ಸರಿ ಹೋಗುಲ್ಲಾಂತ್ಲಾದ್ರೂ ತಿಳಿಯಬೇಡವೇ? ತಾನೂ ಬೈಸ್ಕೊಳ್ತಾಳೆ. ನನ್ನನ್ನೂ ಬೈಸ್ತಾಳೆ ಅಷ್ಟೇ... ಈ ದಿನೇಶ ಯಾಕೆ ಬಂದ? ಗೌತಮನೋ, ನವೀನನೋ ಯಾಕೆ ಬರಲಿಲ್ಲ? ಈ ವಿದ್ಯಾ ಕೂಡ ಯಾವ ಧೈರ್ಯದಿಂದ ಇವನೊಟ್ಟಿಗೆ ಬಂದಳು? ಮಗಳನ್ನು ತನ್ನ ರೂಮಿಗೆ ಕರೆದಳು.

"ಅಲ್ಲಾ ಕಣೇ ತಾಯೀ, ಈ ಹುಡ್ಗನ್ನೊಜ್ಜೆ ಯಾಕ್ಬಂದೆ? ನಿಮ್ಮಪ್ಪ ಏನಾದ್ರೂ ಅಂದಾರು ಅನ್ನೋ ಭಯ ಬೇಡ್ವಾ ನಿಂಗೆ?"

"ನಾನೇನ್ಬನ್ನಿ ನಂಜೊತೆ ಅಂತ ಕರೀಲಿಲ್ಲ. ನಾನೊಬ್ಬೇ ಹೋಗ್ತೀನಿ ಅಂತ ಚಿಕ್ಕಮ್ಮಂಗ್ಹೇಳಿದ್ದೆ. ಬಸ್ ಸ್ಟ್ಯಾಂಡಿಗೆ ಬಸ್ ಹತ್ಸೋಕೆ ಅಂತ ಬಂದಿದ್ದೋರು, ನನಗೆ ಗೊತ್ತಿಲ್ದ ಹಾಗೆ ಬಸ್ ಹತ್ತಿದಾರೆ. ಅದಕ್ಕೆ ನಾನೇನ್ಮಾಡ್ಲೀ?"

"ಅಪ್ಪ ಕೇಳಿದ್ರೆ ಏನ್ಹೇಳ್ತೀಯ?"

"ನಿಜಾನೇ ಹೇಳ್ತೀನಿ. ನಂಗೇನ್ಭಯ?"

"ನಿಜ ಯಾವ್ದು, ಸುಳ್ಯಾವ್ದು ತಿಳ್ಕಳೋ ಸಹ್ನೇನೇ ಇಲ್ಲ ನಿಮ್ಮಪ್ಪಂಗೆ.... ನಿನ್ಮಾತನ್ನ ನಂಬ್ತಾರಾ? ಅದ್ಸರಿ... ಅದ್ಯಾಕೇ ಇಷ್ಟು ಬೇಗ ವಾಪಸ್ಸು ಬಂದ್ಬಿಟ್ಟೆ....?"

"ಕಾಲೇಜಿಲ್ವಾ ನಂಗೆ? ಅಟೆಂಡೆನ್ಸ ಕಡ್ಮೆ ಆದ್ರೆ, ಪರೀಕ್ಷೆಗೆ ಕೂರಿಸ್ತಾರಾ? ನೀನೊಳ್ಳೆ ಚೆನ್ನಾಗಿ ಕೇಳ್ತೀಯ....?"

"ಹೋಗ್ಲೀ.... ನಿನ್ನ ಚಿಕ್ಕಮ್ಮ ಹೇಗಿದಾಳೆ....? ಮನೆ, ಊರು ಎಲ್ಲಾ ಹೇಗಿದೆ? ಎಲ್ಲಾದ್ರೂ ಹೊರ್ಗೆ ತಿರ್ಗಾಡೋಕೆ ಹೋಗಿದ್ರಾ?" ವಿದ್ಯಾ ಎಲ್ಲವನ್ನು ಸವಿಸ್ತಾರವಾಗಿ ಹೇಳಿದಳು. "ಅವರ್ಮನೇಲೆ ಬೇಜಾರೇ ಆಗುಲ್ಲಮ್ಮ.... ಎಲ್ಲಾ ಖುಶಿಖುಶಿಯಾಗಿರ್ತಾರೆ.... ಚಿಕ್ಕಪ್ಪ ಅಂತೂ ತುಂಬಾ ಒಳ್ಳೆಯವ್ರು. ಯಾವ ಮಾತ್ಗೂ ಕೋಪ ಮಾಡ್ಕೊಳಲ್ಲ..."

"ಭವಾನಿ ಪುಣ್ಯವಂತೆ. ಅವಳ್ಗಂಡ ಒಳ್ಳೆಯವ್ನು. ನಿಂಗೂ ಅಂಥ ಒಬ್ಬ ಹುಡ್ಗ ಸಿಕ್ಕಿಬಿಟ್ಟರೇ.. ನಂಗೇ ಅಷ್ಟೇ ಸಾಕು.... ಅಂದ್ಹಾಗೇ ಈ ದಿನೇಶ ಹೇಗೆ? ಏನಾದ್ರೂ ಕೆಟ್ಟ ಅಭ್ಯಾಸಗಳಿವೆಯಾ?"

"ಏನೋ ನಂಗೊತ್ತಿಲ್ಲ. ಕೆಟ್ಟ ಅಭ್ಯಾಸ ಅಂದ್ರೇನು.....?"

"ಸಿಗ್ರೇಟು ಗಿಗ್ರೇಟು ಏನಾದ್ರೂ ಸೇದ್ತಾನೇನೇ?"

"ನನ್ನೆದುರ್ಗೆ ಸೇದಿಲ್ಲ. ಅಷ್ಟು ಗೊತ್ತು..."

"ನೋಡಿದ್ರೆ ಒಳ್ಳೇ ಹುಡ್ಗನ ಥರ ಕಾಣ್ತಾನೆ...ಎಷ್ಟು ವಯಸ್ಸೋ....?"

"ಅದನ್ನೆಲ್ಲ ನೀನ್ಯಾಕಮ್ಮ ಕೇಳ್ತೀ... ಅವನ್ವಯಸ್ಸನ್ಕಟ್ಕೊಂಡು ನಿಂಗೇನಾಗ್ಬೇಕಾಗಿದೆ?"

"ಅವನ್ನ ನಿಂಗೆ ವಿಚಾರಿಸೋಣಾಂತ...."

"ನಂಗಾ...? ನಂಗೆ ಮದ್ವೇನೇ ಬೇಡ. ಹೀಗೇ ಇದ್ಬಿಡ್ತೀನಿ... ನಾನಿನ್ನು ಹೋಗ್ಲಾ?" ಅವಸರಿಸಿದಳು.

"ಸುಶೀಲಾ, ಅವಳ್ಗಂಡ ಹೇಗಿದಾರೆ? ನಿನ್ಹತ್ರ ಚೆನ್ನಾಗಿ ಮಾತಾಡಿದ್ಲಾ....?"

"ಹೂಂನಮ್ಮ, ಅವ್ರುಗಳೂ ಒಳ್ಳೋರು.... ಅಲ್ದೇ ಒಂದಿನದಲ್ಲಿ ಏನ್ಗೊತ್ತಾಗುತ್ತೆ?"

"ಅದೂ ಸರಿ.... ನಾನು ಭವಾನಿಗೆ ಒಂದು ಕಾಗದ ಬರೀತೀನಿ. ನೀನು ನಿಮ್ಮಪ್ಪಂಗೆ ತಿಳೀದ ಹಾಗೆ ಪೋಸ್ಟು ಮಾಡಿ ಬಿಡು....."

"ಸರಿ. ಬರೆದು ಕೊಡು. ನಾಳೆ ಕಾಲೇಜಿಗೆ ಹೋಗುವಾಗ ಪೋಸ್ಟ್ ಮಾಡ್ತೀನಿ. ನಾನಿನ್ನು ಹೋಗ್ಲಾ?" ಎನ್ನುತ್ತಾ ರೂಮಿನಿಂದ ಹೊರಬಂದಳು.

"ಚಿ| ಸೌ| ಭವಾನಿಗೆ ಆಶೀರ್ವಾದಗಳು. ಇಲ್ಲಿ ನಾವುಗಳೆಲ್ಲರೂ ಕ್ಷೇಮ. ನೀವುಗಳೆಲ್ಲರೂ ಕ್ಷೇಮವೆಂದು ಚಿ| ಸೌ| ವಿದ್ಯಾಳಿಂದ ತಿಳಿಯಿತು. ಈಗ ನಿನ್ನ ಆರೋಗ್ಯ ಚೆನ್ನಾಗಿ ಸುಧಾರಿಸಿದೆಯೆಂದು ತಿಳಿದು ಸಂತೋಷವಾಯಿತು. ವಿದ್ಯಾಳ ಜತೆ ನಿನ್ನ ನಾದಿನಿಯ ಮಗ ದಿನೇಶ ಬಂದಿದ್ದ. ಈ ವಿಷಯ ನಿನಗೆ ತಿಳಿದಿದೆಯೋ ಇಲ್ಲವೋ ನಂಗೊತ್ತಿಲ್ಲ. ಹುಡುಗ ನೋಡೋಕೆ ಸಭ್ಯ ಅಂತನ್ನಿಸುತ್ತೆ. ನಮ್ಮ ವಿದ್ಯಾಳಿಗೆ ತಕ್ಕವನು ಅಂತನ್ನಿಸುತ್ತೆ. ಆದರೆ ನಿನ್ನ ಭಾವನ ಮನಸ್ನಲ್ಲಿ ಏನಿದೆಯೋ ನನಗೆ ತಿಳೀದು. ಆ ಬಗ್ಗೆ ಪ್ರಸ್ತಾಪ ಮಾಡುಕ್ಕೆ ದಿಗಿಲಾಗುತ್ತೆ. ಆದ್ರೂ ನೀನು ಸ್ವಲ್ಪ ಗಮನದಲ್ಲಿಟ್ಟು ಕೊಂಡಿರು. ಸುಶೀಲಳ ಅಭಿಪ್ರಾಯವನ್ನು ಕೇಳಿ ತಿಳಕೋ. ಎಲ್ಲಾ ವಿಚಾರಕ್ಕೂ ತತ್ ಕ್ಷಣವೇ ಪತ್ರವನ್ನು ಬರಿ. ಮನೆಯಲ್ಲಿ ಎಲ್ಲರಿಗೂ ನನ್ನ ಆಶೀರ್ವಾದಗಳನ್ನು ತಿಳಿಸು. ಇತಿ ನಿನ್ನ ಪ್ರೀತಿಯ ಪ್ರೇಮಕ್ಕ." ಬರೆದ ಕಾಗದವನ್ನು ಮತ್ತೊಮ್ಮೆ ಓದಿ ಮಡಿಚಿಟ್ಟಳು.

ಬೆಳಗ್ಗೆ ಮರೆಯದೇ ಮಗಳ ಕೈಗೆ ಕೊಟ್ಟಳು.

"ಇದನ್ನು ಒಂದು ಕವರಿಗೆ ಹಾಕಿ, ಅಂಟಿಸಿ ಅಡ್ರೆಸ್ ಬರೆದು ಬಿಡು. ಮರೀದೇ ಪೋಸ್ಟ್ ಮಾಡು."

"ಹೂಂನಮ್ಮ" ಎಂಧು ನುಡಿದು, ಕಾಗದವನ್ನು ಎತ್ತಿಟ್ಟುಕೊಂಡಳು. ತಾಯಿಗೆ ಕಾಣಿಸದಂತೆ, ಕಾಗದವನ್ನು ಓದಿಕೊಂಡಳು. ಆದರೆ ಯಾಕೋ ಏನೋ ಪೋಸ್ಟ್ ಮಾಡದೇ ಹಾಗೇ ಮುಚ್ಚಿಟ್ಟು ಬಿಟ್ಟಳು.

* * *

ಅಧ್ಯಾಯ-ಹನ್ನೆರಡು

ತೂಗುಯ್ಯಾಲೆಯಲ್ಲಿ ವಿದ್ಯಾಳ ಮನಸ್ಸು

ದಿನೇಶ, ಸಂತೋಷನಿಗೆ ಪತ್ರವನ್ನು ಬರೆದಿದ್ದ. ಮನೆಯವರನ್ನೆಲ್ಲಾ ವಿಚಾರಿಸಿದ್ದ. ವಿದ್ಯಾಳನ್ನು ಸ್ವಲ್ಪ ಹೆಚ್ಚಾಗಿಯೇ ವಿಚಾರಿಸಿದ್ದ.

"ದಿನೇಶ ಲೆಟರ್ ಬರ್ದಿದಾನೆ.... ನಿನ್ನ ಬಗ್ಗೆ ವಿಚಾರಿಸಿದಾನೆ.... ನಾನು ಅವನಿಗೆ ಲೆಟರ್ ಬರಿತೀನಿ. ನೀನೂ ಏನಾದ್ರೂ ಹೇಳೋದಿದೆಯಾ? ಅಥವಾ ನೀನೇ ಒಂದು ಲೆಟರ್ ಬರೆದು ಕೊಡು. ಒಟ್ಟಿಗೇ ಪೋಸ್ಟ್ ಮಾಡ್ತೀನಿ."

"ನಂಗೇನೂ ವಿಷಯ ಇಲ್ಲ. ನಾನೇನೂ ಬರೆಯಲ್ಲ."

"ಹಾಗೇ ಬರೀಲಾ?"

"ನಾನು ದಿನೇಶಂಗ್ಯಾಕೆ ಲೆಟರ್ ಬರೀಬೇಕು. ನೀನೇ ಹೇಳು?"

"ಬರೆದ್ರೆ ತಪ್ಪೇನು! ನಂಗಿಂತ, ನಿಂಗೇ ಹೆಚ್ಚು ಪರಿಚಯ ಅವನು..." ವಿದ್ಯಾ ಅವನ ಕಿವಿ ಹಿಂಡಿದಳು.

"ಆಂ... ನನ್ನ ಕಿವಿಯಾಕೆ ಹಿಂಡ್ತೀಯ...? ನಾನೇನ್ಹೇಳ್ದೆ ಅಂಥಾದ್ದು. ನಾನು ಇದನ್ನೆಲ್ಲ ಬರೆದಿಡ್ತೀನಿ... ನಂಗೆ ನನ್ನಕ್ಕನ ಕಾಟಾನ ತಡೆಯೋಕೆ ಆಗ್ತಿಲ್ಲ. ಬೇಗ ಮದ್ವೆಯಾಗಿ ಕರ್ಕೊಂಡ್ಹೋಗು ಅಂತ ಹೇಳಿ ಬಿಡ್ತೀನಿ ಅಷ್ಟೇ."

"ನಾನು ಅವನನ್ನ ಮದುವೆಯಾಗಲ್ಲ. ನಂಗೆ ಮದುವೆ ಬೇಕಿಲ್ಲ..."

"ಹಾಗಾದ್ರೆ ಚಿನ್ಮಯೀನ ಕೇಳ್ಲ? ಅವಳಾದ್ರೂ ಅವನನ್ನ ಮದ್ವೆಯಾಗ್ಲಿ."

"ಚಿನ್ನೂ ತುಂಬಾ ಚಿಕ್ಕೋಳು.... ಅವನ ವಯಸ್ಸು ಅವಳ್ಗೆ ಜಾಸ್ತಿ..."

"ಆದ್ರೇನಂತೆ...? ನಮ್ಮ ಚಿನ್ನು ಸುಖವಾಗಿದ್ರೆ ಸಾಕು."

"ಸಾಕು. ಮುದುಕನ್ನ ಥರಾ ಮಾತಾಡ್ಬೇಡ... ನಾವ್ಯಾರೂ ಅವನ್ಗೆ ಸರಿಯಲ್ಲ. ಅವ್ನು ಬೆಳೆದಿರೋ ರೀತೀನೇ ಬೇರೆ. ನಾವ್ಗಳು ಬೆಳೆದಿರೋ ರೀತೀನೇ ಬೇರೆ...ಮುಂದೆ ಒಬ್ಬರಿಗೊಬ್ರು ಸರಿ ಹೋಗೋದಂತೂ ಸುಳ್ಳು...."

"ಹಾಗ್ಯಾಕೆ ಹೇಳ್ತೀಯಾ? ದಿನೇಶ, ಅಪ್ಪನಂಥವರು ಮಾತ್ರ ಖಂಡಿತಾ ಅಲ್ಲ. ಯಾರಗ್ಬೇಕಾದ್ರೂ ಅಡ್ಜಸ್ಟ ಆಗ್ತಾರೆ..."

"ನಿನಗ್ಮಹಾ ಗೊತ್ತು..."

"ಅವತ್ತು ನಾನು ಅವರು ಎಷ್ಟೊತ್ತು ಎಷ್ಟು ವಿಷಯ ಮಾತಾಡಿದ್ವಿ ಗೊತ್ತಾ?"

"ಏನ್ಮಾತಾಡಿದ್ರಿ? ನಂಗೂ ಬಂದು ಮಾತಾಡ್ಬೇಕೂಂತ ಆಸೆ ಇತ್ತು. ಆದರೆ

ಅಪ್ಪಂಗೆ ಇಷ್ಟವಾಗುಲ್ಲ ಅಂತ ಬರ್ಲಿಲ್ಲ...."

"ಅಲ್ಲಿ ಬೆಂಗ್ಳೂರ್ನಲ್ಲಿ ನೀನೂ ಅವರೂ ಏನೂ ಮಾತಾಡ್ಲಿಲ್ವಾ?" ವಿದ್ಯಾ ಸುಮ್ಮನಾಗಿ ಬಿಟ್ಟಳು. ಅವನು ಹೇಳಿದ್ದ ಮಾತುಗಳನ್ನೆಲ್ಲ ಇವನಿಗೆ ಹೇಳೋದು ಹೇಗೆ?

"ಯಾಕೆ ಸುಮ್ಮನಾಗಿ ಬಿಟ್ಟೆ... ನಿನಗೆ ಬೇಜಾರಾಗೋ ಥರಾ ಏನಾದ್ರೂ ಆಡಿದ್ನಾ?"

"ಇಲ್ಲ. ದಿನೇಶ ಅಂಥೋನಲ್ಲ..."

"ಹಾಗಾದ್ರೆ ನಿನ್ನನ್ನು ಹೊಗಳಿರಬೇಕು...." ವಿದ್ಯಾಳ ಕಣ್ಣುಗಳು ಮಿಂಚಿದವು. ಅವನು ಅವಳನ್ನು ಮೆಚ್ಚಿದ್ದ. ಅವಳ ರೂಪವನ್ನು ಹೊಗಳಿದ್ದ... ನಾಚಿಕೆಯಿಂದ ಕೆನ್ನೆ ಕೆಂಪಾಗುವಂತೆ ಮಾತಾಡಿದ್ದ. ಇದನ್ನೆಲ್ಲ ಇವನಿಗೆ ಹೇಗೆ ಹೇಳೋದು?

"ನೀನ್ಯಾಕೆ ಕೆಂಪಾಗಿದೀಯ? ಅಂಥಾದ್ದೇನ್ಮಾಡ್ದ?"

"ಏನೂ ಇಲ್ಲ..." ಅವಳು ನಾಚುತ್ತಾ ಅಲ್ಲಿಂದ ಓಡಿದ್ದಳು. ಸಂತೋಷನಿಗೆ ದಿನೇಶ ಹೇಳಿದ್ದ ಮಾತುಗಳು ನೆನಪಾಗಿದ್ದವು.

"ಲೇ ಅಕ್ಕಾ, ನಿನಗೆ ಸುತರಾಂ ಬುದ್ಧಿ ಇಲ್ಲ.... ದಿನೇಶನಂಥೋನನ್ನ ಮದ್ವೆ ಯಾಗೋದು ಬಿಟ್ಟು, ಕಿಶೋರನಂಥ ನಾಲಾಯಕ್ಕಿನ ಹಿಂದೆ ಹೋಗಿದ್ದೆಯಲ್ಲ?" ಅವನ ಮಾತುಗಳು ಅವಳಿಗೆ ಕೇಳಿಸಲಿಲ್ಲ.

ಸಂತೋಷ ಆಗಲೇ ಕುಳಿತು ದಿನೇಶನಿಗೆ ಪತ್ರವನ್ನು ಬರೆದ. ವಿದ್ಯಾಳನ್ನು ಕುರಿತು ಹೆಚ್ಚು ವಿಷಯಗಳನ್ನೇ ಬರೆದ. ವಿದ್ಯಾ ನಿತ್ಯ ನಿಮ್ಮನ್ನು, ನೀವು ಆಡಿದ ಮಾತುಗಳನ್ನೂ, ನಿಮ್ಮಗಳ ಜತೆ ಕಾಲಕಳೆದುದನ್ನೂ ನೆನಸಿಕೊಳ್ಳುತ್ತಿರುತ್ತಾಳೆ. ನಿಮ್ಮಿಂದ ಪತ್ರವನ್ನು ನಿರೀಕ್ಷಿಸುತ್ತಿದ್ದಾಳೆ. ನೀನ್ಯಾಕೆ ಒಂದು ಲೆಟರ್ ಬರೆಯಬಾರದು ಅವಳಿಗೆ? ಎಂದೂ ಸೇರಿಸಿದ್ದ... ಅವನ ಕಾಗದಕ್ಕೆ ಪ್ರತ್ಯುತ್ತರ ಬಂದಿತ್ತು. ಅದರಲ್ಲಿ ಅವನು, ವಿದ್ಯಾಳಿಗೆಂದು ಪ್ರತ್ಯೇಕ ಪತ್ರವನ್ನು ಬರೆದಿಟ್ಟಿದ್ದ. ಸರತೋಷ ಅದನ್ನು ಅವಳ ಕೈಗೆ ಕೊಟ್ಟ.

"ದಿನೇಶ ನಿಂಗೆ ಲೆಟರ್ ಬರೆದಿದಾರೆ ತಗೋ...."

"ನಂಗಾ?" ಎಂದು ಉತ್ಸಾಹದಿಂದ ಕೇಳಿದವಳು ಇದ್ದಕ್ಕಿದ್ದಂತೆ ಮೆತ್ತಗಾದಳು. "ನಂಗ್ಯಾಕೆ ಬರೆದ್ರೋ..... ಅಪ್ಪಂಗೆ ಗೊತ್ತಾದ್ರೇ...."

"ಅಪ್ಪಂಗೇನೂ ಗೊತ್ತಾಗುಲ್ಲ. ಈ ಲೆಟರ್ ನನ್ನ ಹೆಸರಿಗೇ ಬಂದಿತ್ತು."

"ನೀನು ಓದಿದ್ಯಾ....?"

"ಇಲ್ಲ ಕಣೇ... ನಾನು ಓದಿಲ್ಲ. ನನಗೆ ಅಷ್ಟೂ ಗೊತ್ತಾಗುಲ್ವಾ! ಆದರೆ ಏನು ಬರೆದಿದಾನೆ ಅಂತ, ಸಂಕ್ಷಿಪ್ತವಾಗಿ ಹೇಳ್ಬಿಡು...."

ಕಾಗದವನ್ನು ಅವನ ಕೈಯಿಂದ ಕಿತ್ಕೊಂಡು, ಅವನ ಕೆನ್ನೆಗೆ ಹುಸಿ ಏಟನ್ನು

ಕೊಟ್ಟಳು. "ಹೂಂ.... ಹೇಳ್ತೀನಿ...." ಎನ್ನುತ್ತಾ ರೂಮಿನೊಳಗೆ ಹೋಗಿ ಪತ್ರವನ್ನು ಬಿಡಿಸಿದಳು. ಸಂತಸದ ಅಲೆಗಳು ಹೊಯ್ದಾಡಿದವು.

"ನನ್ನ ಪ್ರೀತಿಯ ವಿದ್ಯಾ...." ಎಂದು ಪ್ರಾರಂಭಿಸಿದ್ದ. ಅದನ್ನೇ ಹತ್ತಾರು ಬಾರಿ ಓದಿಕೊಂಡಳು. "ನಿಮಗೆ ನನ್ನ ನೆನಪು ಬರುತ್ತೋ ಇಲ್ಲವೋ ನನಗೆ ತಿಳಿಯದು. ಆದರೆ ನಾನು ಮಾತ್ರ ದಿನದಲ್ಲಿ ಅನೇಕ ಬಾರಿ ನಿಮ್ಮನ್ನು ನೆನೆಸಿಕೊಳ್ತೀನಿ. ನಮ್ಮನೆಯ ಕೈ ತೋಟದಲ್ಲಿ ಬೇಕಾದಷ್ಟು ಗುಲಾಬಿ ಹೂಗಳು ಅರಳಿವೆ. ಅವುಗಳನ್ನು ನೋಡಿದಾಗಲೆಲ್ಲಾ ನಿಮ್ಮ ನೆನಪು ಅರಳುತ್ತದೆ. ಅತ್ತೆಯ ಮನೆಗೆ ಆಗಾಗ ಹೋಗಿ ಬರ್ತೀನಿ. ಅಲ್ಲಿಯೂ ನಿಮ್ಮ ನೆನಪು ಮರುಕಳಿಸುತ್ತದೆ. ಕಾಫಿ ಕುಡಿಯುವಾಗ, ನಿಮ್ಮ ನೆನಪು ಬಂದೇ ಬರುತ್ತದೆ. ನೀರನ್ನು ಕುಡಿಯುವಾಗ, ನಿಮ್ಮ ನೆನಪು ಬಂದು ಹೊಟ್ಟೆ ತುಂಬಾ ನಕ್ಕು ನೆತ್ತಿ ಹತ್ತಿಸಿಕೊಂಡಿದ್ದೇನೆ."

"ನಿಮಗೆ ನಾನು ಒಪ್ಪಿಗೆಯಿಲ್ಲ ಅಂತ ತಿಳಿದರೂ ನನಗೆ ನಿಮ್ಮನ್ನು ಮರೆಯಲಾಗುತ್ತಿಲ್ಲ. ನಾನೇನ್ಮಾಡ್ಬೇಕೂಂತ ನೀವೇ ತಿಳಿಸ್ಬೇಕು. ನಿಮ್ಮಿಂದ ಉತ್ತರವನ್ನು ಕಾತರದಿಂದ ಕಾಯುತ್ತಿದ್ದೇನೆ. ದಯವಿಟ್ಟು ನಿರಾಶೆಗೊಳಿಸಬೇಡಿ... ಇತಿ ನಿಮ್ಮ ಪ್ರೀತಿಯ ಸ್ನೇಹಿತ ದಿನೇಶ." ಎಂದು ಬರೆದು ಮುಗಿಸಿದ್ದ.

ಹತ್ತಾರು ಬಾರಿ ಪತ್ರವನ್ನು ಓದಿಕೊಂಡಳು. ಪ್ರತಿಬಾರಿಯೂ ಅವನು ತನ್ನ ಮೇಲಿಟ್ಟಿರುವ ಪ್ರೀತಿ, ದ್ವಿಗುಣವಾಗ್ತಿದೆಯೆಂದೆನಿಸುತ್ತಿತ್ತು.... ಆದರೆ ತಾನು ಏನುತ್ತರ ಬರೆಯಬೇಕೆಂದು ತೋಚಲಿಲ್ಲ. ತನಗೆ ಅವನ ನೆನಪೇನೋ ಬರುತ್ತದೆ. ಆದರೆ ಅದನ್ನು ಬರೆದು ತಿಳಿಸುವುದು ಹೇಗೆ...? ತಾನಿನ್ನು ಯಾವ ನಿರ್ಧಾರಕ್ಕೂ ಬಂದಿಲ್ಲ. ತನಗೆ ಯಾವ ಆಪ್ತ ಸ್ನೇಹಿತೆಯೂ ಇಲ್ಲ.... ಈಗ ಕಿಶೋರನೂ ತನಗೆ ಆಪ್ತನಲ್ಲ. ಅಲ್ಲದೆ ದಿನೇಶನ ವಿಷಯವನ್ನು, ಅವನಿಗ್ಯಾಕೆ ತಿಳಿಸಬೇಕು. ದಿನೇಶನಿಂದ ಮತ್ತೊಂದು ಪತ್ರ ಬರಲಿ. ಆಮೇಲೆ ಒಟ್ಟಿಗೆ ಬರೆದರಾಯ್ತು ಎಂದುಕೊಂಡು ಸುಮ್ಮನಾಗಿಬಿಟ್ಟಳು.

ನಾಲ್ಕೈದು ದಿನಗಳ ಅನಂತರ, ದಿನೇಶನಿಂದ ಮತ್ತೆ ಪತ್ರ ಬಂದಿತ್ತು. ಈ ಸಾರಿ ನಾಲ್ಕಾರು ಫೋಟೋಗಳನ್ನು ಕಳಿಸಿದ್ದ. ಸಂತೋಷ ಉತ್ಸಾಹದಿಂದ ವಿದ್ಯಾಳನ್ನು ಕರೆದ.

"ಅಕ್ಕಾ ನೋಡೇ... ಫೋಟೋಗಳನ್ನು ಕಳ್ಸಿದಾರೆ...."

ವಿದ್ಯಾ ಒಂದೊಂದೇ ಫೋಟೋಗಳನ್ನು ಮತ್ತೆ ಮತ್ತೆ ನೋಡಿದಳು. ಒಂದಂತೂ, ವಿದ್ಯಾಳ ಜಡೆಗೇ ತೆಗೆದಿದ್ದ ವಿಶೇಷ ಫೋಟೋ.... ಅವಳಿಗೆ ಅಸಾಧ್ಯ ನಗು ಉಕ್ಕಿತು....

"ಯಾಕೇ ನಗ್ತಿದೀಯ.... ಇದು ಯಾರ ಜಡೆ?"

"ನಂದೇ.... ನಂಗೆ ಗೊತ್ತೇ ಇಲ್ಲ. ಯಾವಾಗ ತೆಗೆದ್ರೋ....?"

"ಮತ್ತೆ ನಕ್ಕಿದ್ಯಾಕೆ....?" ಆ ಸಂದರ್ಭವನ್ನು ವಿವರಿಸಿದಳು.

"ಇಲ್ಲಿ ನನ್ನ ಪಕ್ಕ ನಿಂತಿದಾಳಲ್ಲ.... ಅವಳು ದಿನೇಶನ ತಂಗಿ ದೀಪಾ.... ಅವಳಿಗೆ ನನ್ನ ಈ ಜಡೆ ಮೇಲೇ ಕಣ್ಣು..."

"ಪರವಾಗಿಲ್ಲ. ನೋಡೋಕೆ ಸುಮಾರಾಗಿದಾಳೆ."

"ನಿನಗ್ಯಾಕೆ ಈಗ್ಲಿಂದ ಅವಳ್ಮೇಲೆ ಕಣ್ಣು...?"

"ಕಣ್ಣೂ ಇಲ್ಲ, ಮೂಗೂ ಇಲ್ಲ. ಸುಮ್ಮನೇ ಹೇಳ್ದೇ. ಇದನ್ನೆಲ್ಲ ನೀನು ನನಗೆ ಹೇಳ್ಲೇ ಇಲ್ಲ."

"ನೀವ್ಯಾರೂ ಕೇಳ್ಲಿಲ್ಲ. ನಾನು ಹೇಳ್ಲಿಲ್ಲ. ಇವೆಲ್ಲಾ ನಾವು ನಂದಿ ಬೆಟ್ಟಕ್ಕೆ ಹೋದಾಗ ತೆಗೆದದ್ದು. ಆ ದಿನ ಕಳೆದದ್ದು ಗೊತ್ತಾಗ್ಲೇ ಇಲ್ಲ. ಅಷ್ಟು ಚೆನ್ನಾಗಿತ್ತು. ಅದನ್ನು ಎಂದಿಗೂ ಮರೆಯೋಕೆ ಆಗುಲ್ಲ..."

"ನೀನೇ ಲಕ್ಕಿ ಕಣೇ.... ಒಂದು ದಿನವಾದ್ರೂ ಹಾಗೆ ಸುತ್ತಾಡಿ ಬಂದ್ಯಲ್ಲಾ.... ಪಾಪ... ಚೆನ್ನು, ಪುಸ್ಸೀ ಅಂತೂ ಸ್ಕೂಲ್ನಿಂದ ಹೋಗೋ ಪಿಕ್ನಿಕ್ಗೆ ಸಹ ಹೋಗಿಲ್ಲ."

"ಹೌದು ಸಂತೋಷ, ಅಪ್ಪ ನಮಗೆಲ್ಲ ತುಂಬಾ ಅನ್ಯಾಯ ಮಾಡಿಬಿಟ್ಟರು."

"ನೀನು ದಿನೇಶನ್ನ ಮದ್ವೆ ಆದ್ರೆ, ಅಕ್ಕನ ಮನೆ ಅಂತ ಅವ್ರುಗಳೂ ಬರ್ತಾರೆ. ನೀನೂ ಊರನ್ನೆಲ್ಲ ತೋರಿಸ್ಬಹ್ದು ಅಲ್ವಾ...?"

"ಇಷ್ಟಕ್ಕೋಸ್ಕರ ನಾನು ದಿನೇಶನ್ನ ಮದ್ವೆಯಾಗ್ಬೇಕಾ? ಅದ್ಸರಿ... ಸದಾ ನೀನು ದಿನೇಶನ ವಕಾಲತ್ತು ಯಾಕೆ ವಹಿಸ್ತೀಯ?"

"ಯಾಕೆ ಅಂದ್ರೆ! ನಾನು ವಕೀಲರ ಮಗ....." ತಮಾಷೆಯಾಗಿ ನುಡಿದ.

"ನೀನು ಲಾ ಮಾತ್ರ ಓದಕೂಡದು..." ತಲೆಯನ್ನು ಅಡ್ಡಡ್ಡ ಆಡಿಸಿದಳು.

"ಇಲ್ಲಮ್ಮಾ ಇಲ್ಲಾ.... ನಾನು ಮೆಡಿಕಲ್ನೇ ಓದೋದು ಅಂತ ನಿರ್ಧರಿಸಿದೀನಿ. ಅದನ್ನೇ ಓದ್ತೀನಿ...."

"ಹಾಗೇ ಮಾಡು. ನಿನ್ನ ನಿರ್ಧಾರಾನ ಮಾತ್ರ ಬದಲಾಯಿಸಬೇಡ.... ಅಪ್ಪ ಒಪ್ಪದೇ ಇದ್ರೆ ಮನೆ ಬಿಟ್ಟು ಹೋಗ್ಬೇಡ.... ಇಲ್ಲೇ ಇದ್ದು ನಿನ್ನ ಗುರಿಯನ್ನು ಮುಟ್ಟಬೇಕು...."

"ಅದೆಲ್ಲಾ ಇರಲಿ..... ಈಗ್ಲಾದ್ರೂ ದಿನೇಶಂಗೆ ಲೆಟರ್ ಬರೀತೀ ತಾನೇ....?"

"ಹ್ಞೂಂ ಬರೀತೀನಿ.... ನಂಗೇನೂ ಲೆಟರ್ ಇಲ್ವಾ ಅವರಿಂದ....?"

"ನಿನ್ನ ಉತ್ತರ ಬರದೇ ಅವನ್ಯಾಕೆ ಮತ್ತೆ ಬರೀತಾನೆ? ಎಲ್ಲಿ ಕೊಡು ಇಲ್ಲಿ ಆ ಫೋಟೋಗಳನ್ನು ನಾನು ಸರಿಯಾಗಿ ನೋಡೇ ಇಲ್ಲ." ಎನ್ನುತ್ತಾ ಅವನು ಫೋಟೋಗಳನ್ನು ಕೇಳಿದಾಗ, ಅವಳು ಕೊಡಲಿಲ್ಲ.

"ಇದೆಲ್ಲಾ ನಂದು. ನಾನು ಕೊಡುಲ್ಲ. ದಿನೇಶ ನಂಗೇಂತಾನೇ ಕಳ್ಸಿರೋದು.."

"ಹೌದಮ್ಮ ಹೌದು. ನಿಂಗೇನೇ.... ನೋಡಿ ಕೊಡ್ತೀನಿ ಕೊಡು.... ನಾನೇನೂ ತಿಂದು ಹಾಕಲ್ಲ..." ವಿದ್ಯಾ ಅನುಮಾನಿಸುತ್ತಾ ಕೊಟ್ಟಳು. ಅವನು ಒಂದೊಂದನ್ನೇ

ನೋಡಿ ಅವಳಿಗೆ ವಾಪಸ್ಸು ಕೊಟ್ಟ.

"ಹುಶಾರಾಗಿ ತೆಗೆದಿಟ್ಕೋ... ಇವೆಲ್ಲಾ ಅಮೂಲ್ಯವಾದದ್ದು. ಸಿಹಿ ನೆನಪನ್ನು ತರುವಂಥದ್ದು..."

"ಹೌದು ಕಣೋ.... ಯಾವುದನ್ನೂ ನನ್ನಿಂದ ಮರೆಯುಕ್ಕಾಗುಲ್ಲ. ಅಷ್ಟು ಚೆನ್ನಾಗಿ ಕಾಲ ಕಳೆದೆವು...." ಎನ್ನುತ್ತಾ ಒಂದೊಂದೇ ವಿಷಯಗಳನ್ನು ಅವನಿಗೆ ಹೇಳಿದಳು.

"ಚಿಕ್ಕೋರು, ದೊಡ್ಡೋರು, ಗಂಡಸ್ರು, ಹೆಂಗಸ್ರು ಎಲ್ಲರೂ ಒಟ್ಟಾಗಿ ಎಷ್ಟು ಸಂಭ್ರಮಪಟ್ಟೆವು ಗೊತ್ತಾ....? ಯಾವ ಹಬ್ಬಕ್ಕಿಂತ ಕಡಿಮೆ ಇರಲಿಲ್ಲ...."

"ನೀನೇ ಲಕ್ಕಿ ಕಣೇ ಅಕ್ಕ.... ಈಗ್ಲಾದ್ರೂ ನಿನ್ನ ಒಪ್ಗೇನ ಕೊಡು.... ಇಲ್ದಿದ್ರೆ ಈ ಅವಕಾಶ ಕೈಜಾರಿಹೋಗುತ್ತೆ."

"ಹುಂ ನೋಡೋಣ. ನಂಗೆ ಸ್ವಲ್ಪ ಸಮಯ ಬೇಕು." ಸಂತೋಷನನ್ನ ಅತ್ತ ಕಳಿಸಿ, ದಿನೇಶನಿಗೆ ಪತ್ರ ಬರೆಯಲು ಕುಳಿತಳು. ಆದರೆ ಹೇಗೆ ಪ್ರಾರಂಭಿಸುವುದೆಂದು ತಿಳಿಯಲಿಲ್ಲ. ಪ್ರೀತಿಯ ದಿನೇಶನಿಗೆ, ಅಂತ ಶುರು ಮಾಡಲು ಸಂಕೋಚವೆನಿಸಿತ್ತು. ಬರೀ ದಿನೇಶನಿಗೆ ಎಂದು ಪ್ರಾರಂಭಿಸಲು ಮನ ಒಪ್ಪಲಿಲ್ಲ. ಆದರೆ ಬರೆಯದೇ ಇರಲು ಇಷ್ಟವಾಗಲಿಲ್ಲ. ನಾಳೆ ಮತ್ತೆ ಯೋಚಿಸಿ ಬರೆದರಾಯಿತು ಎಂದುಕೊಂಡು ಪೆನ್ನು, ಕಾಗದಗಳನ್ನು ಅತ್ತ ಎತ್ತಿಟ್ಟು ಮತ್ತೆ ಆ ಫೋಟೋಗಳನ್ನೆತ್ತಿಕೊಂಡಳು.

ಅಷ್ಟರಲ್ಲಿ ತಂಗಿಯರು ಮನೆಗೆ ವಾಪಸ್ಸಾಗಿದ್ದರು. ಎಲ್ಲವನ್ನು ಹಾಸಿಗೆಯ ಕೆಳಗೆ ಮುಚ್ಚಿಟ್ಟಳು. ಎರಡು ದಿನಗಳು ಕಳೆದರೂ, ಅವಳಿಂದ ಪತ್ರವನ್ನು ಬರೆಯಲಾಗಿರಲಿಲ್ಲ.... ಕಡೆಗೆ ಹಿಂದೆ ಮುಂದೆ ಏನೂ ಇಲ್ಲದೆ ಎರಡುಸಾಲು ಗೀಚಿ ಹಾಕಿದ್ದಳು.

* * *

ಈ ಮಧ್ಯೆ ಭಟ್ಟ ಮನೆಯವರ್‍ಯಾರಿಗೂ ತಿಳಿಸದೇ ವಿದ್ಯಾಳ ಮದುವೆಯನ್ನು ನಿಶ್ಚಯಿಸಲು ಬೆಂಗಳೂರಿಗೆ ಹೋಗಿದ್ದ. ಯಾವ ಮುನ್ಸೂಚನೆಯೂ ಇಲ್ಲದೇ, ಬಂದಿಳಿದ ಭಾವನನ್ನು ಕಂಡು ಭವಾನಿಗೆ ಅಚ್ಚರಿ. ಅಲ್ಲದೆ ಈ ಭಾವ, ಹಿಂದೆಂದೂ ಬಂದವನೇ ಅಲ್ಲ. ಉತ್ಸಾಹದಿಂದ ಉಪಚರಿಸಿದಳು.

ಪ್ರಯಾಣದ ಆಯಾಸ ಪರಿಹಾರವಾದ ಮೇಲೆ, ಭಟ್ಟ ನೇರವಾಗಿ ಮಾತಿಗೆ ಬಂದ.

"ನಮ್ಮ ತಾಯಮ್ಮನ ಮದುವೆ ನಿಶ್ಚಯ ಮಾಡೋಕೆ ಅಂತ ಬಂದಿದೀನಿ."

"ಹೌದಾ? ವಿದ್ಯಾಳಿಗೆ ಗಂಡು ಗೊತ್ತಾಯ್ತಾ? ಹುಡುಗ ಯಾರು?" ಮನಸ್ಸಿಗೆ ಸ್ವಲ್ಪ ಪೆಚ್ಚಾಗಿದ್ದರೂ ಕೇಳಿದ್ದಳು.

"ದಿನೇಶ, ನಿಮ್ಮ ಗೋಪಾಲನ ಮಗ..."

"ಹೌದಾ? ಹಾಗಾದ್ರೆ ನಿಮಗೆ ದಿನೇಶ ಒಪ್ಗೆ ಆದ್ನಾ?"

"ತೆಗೆದ್ಹಾಕುವಂಥಾದ್ದೇನಿಲ್ಲ ಆ ಹುಡುಗ್ನಲ್ಲಿ. ಅಲ್ಲದೇ ವಿದ್ಯಾಳ ಮದುವೆ ಬೇಗ ಮಾಡಿ ಬಿಡುವ ಆತುರದಲ್ಲಿದ್ದೀನಿ ನಾನು..."

"ಅವಳನ್ನೊಂದ್ಮಾತು ಕೇಳಿದೀರಾ ಭಾವ...ಅವಳೊಪ್ಗೆ ಇದ್ಯಾ?"

"ಅವಳನ್ನೇನು ಕೇಳೋದು... ಒಪ್ಕೊಳ್ದೆ ಏನು?"

"ಹಾಗಲ್ಲ ಭಾವ..."

"ನೀನು ಸುಮ್ನಿರು ಭವಾನಿ... ಅವಳನ್ನಿಲ್ಲಿಗೆ ಕಳ್ಸಿದೇಕೆ ಅಂತ ನಿಂಗೂ ಗೊತ್ತು... ನೀನು ಮಾತಾಡಿಲ್ವಾ ಅವಳ್ಜೊತೇಲಿ....! ಅಷ್ಟಲ್ದೇ ಅವನ್ಜೊತೆ ವಿದ್ಯಾಳನ್ನ ಕಳಿಸಿದ್ಯಾ....? ಅವಳ್ಗೆ ಒಪ್ಗೆ ಇಲ್ದೇ, ಅವನ್ಜೊತೆ ಬರೋ ಧೈರ್ಯ ಅವ್ಳಿಗಿದ್ಯಾ.....?"

"ಅದು ಹಾಗಲ್ಲ..."

"ಈಗ ಬೇರೆ ಯಾವ ಮಾತೂ ಬೇಡ.... ನಂಗೆ ಹುಡ್ಗ ಹಿಡ್ಸಿದಾನೆ... ಅವನ್ಗೆ ತಾಯಿ ಇಷ್ಟವಾಗಿದಾಳೆ ಅಂತ ನಾನು ಬಲ್ಲೆ. ಇನ್ನು ಕಾಲಹರಣ ಮಾಡೋದ್ರಲ್ಲಿ ಅರ್ಥವಿಲ್ಲ."

"ಅಕ್ಕನ್ನು ಕರ್ಕೊಂಡು ಬರಬಹುದಾಗಿತ್ತಲ್ಲ ಭಾವ...."

"ಅವಳ್ಯಾಕೆ! ಅಲ್ದೇ ಅವ್ಳಿಗೆ ಹುಶಾರಿಲ್ಲ. ಈ ಪ್ರಯಾಣವೆಲ್ಲಾ ಮೈಗಾಗುಲ್ಲ. ಅವ್ಳ ಬದ್ಲಿಗೆ ನೀನಿದೀಯಲ್ಲ ಅಷ್ಟು ಸಾಕು." ಭವಾನಿಗೆ ಒಂಥರ ವ್ಯಸನವಾಗಿತ್ತು. ಈ ಬಾವನ ಧೋರಣೆ ಸರಿ ಎನಿಸಿರಲಿಲ್ಲ. ಯಾಕೋ ಏನೋ ಅಕ್ಕನಿಂದ ಕಾಗದವೂ ಬಂದಿರಲಿಲ್ಲ. ಆದರೂ ಈಗ ಬಾವ ಬಂದಿರುವುದು ಮಗಳ ಮದುವೆ ನಿಷ್ಕರ್ಷೆ ಮಾಡುವುದಕ್ಕೆ ತಾನೇ.... ಸುಶೀಲಾ, ಗೋಪಾಲ ಹೊರಗಿನವರಲ್ಲ. ಅವರಿಗೂ ಕೆಲವು ಸೂಕ್ಷ್ಮಗಳು ಈಗಾಗಲೇ ತಿಳಿದಿದೆ ಎಂದುಕೊಂಡಳು.

ಸಾಯಂಕಾಲದ ವೇಳೆಗೆ, ಬಾವ, ನಾದಿನಿ ಇಬ್ಬರೂ ಗೋಪಾಲನ ಮನೆಗೆ ಬಂದರು. ದಿನೇಶ ಇನ್ನೂ ಆಫೀಸ್ನಿಂದ ಬಂದಿರಲಿಲ್ಲ. ಅಲ್ಲೇ ಓಡಾಡುತ್ತಿದ್ದ ದೀಪಾ ಳನ್ನು ಭಟ್ಟ ನೋಡಿದ. ಮನೆಯನ್ನೆಲ್ಲಾ ಒಮ್ಮೆ ವೀಕ್ಷಿಸಿದ. ಎಲ್ಲಾ ಸರಿಯಾಗಿದೆ ಅಂತೆನಿಸಿತ್ತು..... ನೇರವಾಗಿ ಮಾತಿಗೆ ಪ್ರಾರಂಭಿಸಿದ –

"ನನ್ನ ಮಗಳು ವಿದ್ಯಾಳನ್ನು ನೀವೆಲ್ಲಾ ನೋಡಿದೀರಿ.... ನಿಮ್ಮೆಲ್ರಿಗೂ ಒಪ್ಗೆ ಇದ್ರೆ ಮದುವೆ ನಿಶ್ಚಯಿಸ್ಬಹುದು." ಗೋಪಾಲ, ಸುಶೀಲಾ ಮುಖ ಮುಖ ನೋಡಿಕೊಂಡರು.

"ಯಾಕೆ? ಏನಾದ್ರೂ ಅನುಮಾನಗಳು ಬಾಕಿ ಇವೆಯಾ? ಹಾಗೇನಾದ್ರೂ ಇದ್ದರೆ ಈಗ್ಲೇ ಹೇಳ್ಬಿಡಿ.... ನಂದ್ಯಾವ ಆಬ್ಜೆಕ್ಷನ್ ಇಲ್ಲ."

"ಇಲ್ಲ ಯಾವ ಸಂದೇಹವಿಲ್ಲ.... ನಮ್ಮ ಮಗ ಬರಲಿ. ಆಮೇಲೆ ಮಾತಾಡೋಣ."

"ನಿಮ್ಮ ಮಗನ ಒಪ್ಗೆ ಇದೆ ಅಂತ ಅಂದ್ಕೊಂಡಿದೀನಿ...."

"ಅವ್ನೇನನ್ನೂ ಇನ್ನೂ ಸರ್ಯಾಗಿ ಹೇಳಿಲ್ಲ...."

"ಹಾಗಂದ್ರೇನರ್ಥ...? ಮತ್ತೆ ಅವಳ್ಜೊತೆ ನಮ್ಮೂರಿಗೆ ಬಂದಿದ್ರಲ್ಲ...."

"ಬಾವ..... ಸ್ವಲ್ಪ ಮೆಲ್ಲಗೆ ಮಾತಾಡಿ...."

"ಏನ್ ಭವಾನಿ, ನೀನ್ಯಾಕೆ ಹೀಗೆ ಮಾಡ್ತೆ! ಇವ್ರುಗಳು ಹೀಗೆ ಮಾತಾಡ್ತಾರೆ...."

"ನೀವು ಬರೋ ವಿಷಯಾನ ತಿಳ್ಸಿದ್ರೆ, ನಾವುಗಳು ಮಾತಾಡ್ಕೊಂಡಿರ್ತಿದ್ವಿ... ನೀವು ತಿಳಿಸ್ದೇ ಏಕಾಏಕೀ ಬಂದರೆ....?"

"ಸರಿ. ಈಗ ನಾನು ಬಂದುದಾಗಿದೆ. ಒಂದು ತೀರ್ಮಾನಕ್ಕೆ ಬಂದರೆ ಒಳ್ಳೆಯದು. ನಾನು ಇವತ್ತು ರಾತ್ರಿ, ಇದೇ ಊರ್ನಲ್ಲಿರ್ತೀನಿ..... ನಾಳೆ ಬೆಳಿಗ್ಗೆ ಊರಿಗೆ ಹೊರಡೋದ್ರೊಳ್ಗೆ ತಿಳ್ಸಿದ್ರೆ ಒಳ್ಳೇದು.... ನಾನಿನ್ನು ಬರ್ತೀನಿ... ನಮಸ್ಕಾರ...." ಕೈ ಮುಗಿದ.

"ಕಾಫಿ, ತಿಂಡಿ ತಗೋಳೋರಂತೆ... ಹೇಗೂ ಬಂದಿದೀರಿ...."

"ನನ್ಗೆ ನೂರೆಂಟು ಕೆಲ್ಸ ಇರುತ್ತೆ. ಬಿಡುವಿರಲ್ಲ.... ಕಾಫಿ, ತಿಂಡಿಯೆಲ್ಲಾ ಯಾಕೆ?"

"ಭಾವ, ಇವ್ರೆಲ್ಲಾ ಹೊರಗ್ನೋರಲ್ಲ. ನಮ್ಮವರೇ.... ನಿಮಗ್ಯಾಕೆ ಬಿಗುಮಾನ? ಕಾಫಿ, ತಿಂಡಿ ತಗೊಂಡ್ರೆ, ನೆಂಟಸ್ತಿಕೆ ಬಿದ್ದು ಹೋಗುಲ್ಲ.... ಸುಶೀಲಾ, ನೀನು ಬರೀ ಕಾಫಿ ಕೊಡು ಸಾಕು.... ಮತ್ತೆಂದಾದ್ರೂ ತಿಂಡಿಗೇ ಅಂತ ಬಂದ್ರಾಯ್ತು...."

ಭಟ್ಟ ಅಸಹನೆಯಿಂದ ಕೈ ಕೈ ಹಿಸುಕಿಕೊಂಡ. ಸುಶೀಲಾ ಘಂ ಎನ್ನುವ ಕಾಫಿಯನ್ನು ಜತೆಗೆ ಬಿಸ್ಕತ್ತುಗಳನ್ನು ತಂದಿತ್ತಳು. ಬಿಸಿ ಕಾಫಿಯನ್ನು ಕುಡಿದ ಮೇಲೆ ಭಟನ ಗರಂ ಸ್ವಲ್ಪ ಇಳಿದಿತ್ತು.

"ನಾನಿನ್ನು ಬರ್ತೀನಿ ಸುಶೀಲಾ. ದಿನೇಶ ಬಂದ ಕೂಡಲೇ ಮಾತನಾಡಿ ಒಂದು ಇತ್ಯರ್ಥಕ್ಕೆ ಬನ್ನಿ..." ಎಂದು ಹೇಳಿ ಅಲ್ಲಿಂದ ಇಬ್ಬರೂ ಹೊರಬಿದ್ದರು.

ದಿನೇಶ ತನಗೆ ಬಂದಿದ್ದ ಪೋಸ್ಟ್‌ಗಳನ್ನು ಒಡೆದು ಓದುತ್ತಾ ಮನೆಯೊಳಗೆ ಕಾಲಿಟ್ಟ. ಅವನು ಸ್ವಲ್ಪ ಸುಧಾರಿಸಿಕೊಳ್ಳಲಿ ಎಂದು ಸುಶೀಲಾ ಕಾದಳು. ಅವನು ಒಂದು ಕವರನ್ನು ಬಿಡಿಸಿ ಓದುತ್ತಿದ್ದಂತೆಯೇ ಗಲಿಬಿಲಿಗೊಂಡದ್ದು ಅವನ ಮುಖದಲ್ಲಿ ಎದ್ದು ಕಾಣುತ್ತಿತ್ತು. "ಅರೇ! ಇದೇನಿದು....?" ಎಂದು ಹೇಳಿದ್ದು ಸುಶೀಲಾಳಿಗೆ ಕೇಳಿಸಿತ್ತು.

"ಏನಾಯ್ತೋ.... ಯಾರದ್ದೋ ಕಾಗ್ದ?"

"ಅಮ್ಮ..... ತಡೀ ಈಗ್ಬರ್ತೀನಿ...." ಎನ್ನುತ್ತಾ ತನ್ನ ರೂಮಿಗೆ ಹೋಗಿ, ಮತ್ತೊಮ್ಮೆ ಪತ್ರವನ್ನು ಓದಿದ. ಅದು ಅತ್ತೆಗೆ ಅವರಕ್ಕ ಬರೆದ ಪತ್ರ. ಯಾರದೋ ತಪ್ಪಿನಿಂದಾಗಿ, ಈ ಕಾಗದ ತನಗೆ ಬಂದಿದೆ. ಅಡ್ರೆಸ್ ಬರಹ ಸಂತೋಷನದಲ್ಲ...

ವಿದ್ಯಾ ಇರಬಹುದೇ.... ವಿದ್ಯಾ ಈ ಪತ್ರವನ್ನು ನನ್ನ ಅಡ್ರೆಸ್ಸಿಗೆ ಯಾಕೆ ಬರೆದಿದಾಳೆ? ಅತ್ತೇನ ಕೇಳ್ಬೇಕು.... ಎಂದು ಹೊರಟವನನ್ನು ಸುಶೀಲಾ ತಡೆದಳು.

"ಈಗಿನ್ನೂ ಬರ್ತಿದೀಯ, ಮತ್ತೆಲ್ಲೋ ಹೊರಟ್ಯಲ್ಲೋ.... ತಿಂಡಿ – ಕಾಫಿ ತಗೋ..."

"ಸರಿ ಬೇಗ ಕೊಡು..." ಬೇಗ ಬೇಗ ತಿಂಡಿ– ಕಾಫಿಯನ್ನು ಮುಗಿಸಿ, ಮತ್ತೆ ಬೈಕ್ ಹತ್ತಿದ. ಮನೆ ಮುಂದೆ ಬೈಕ್ ನಿಂತ ಸದ್ದು ಕೇಳಿ ಭವಾನಿ ಹೊರಬಂದಳು.

"ಸದ್ಯ ಬಂದ್ಯಾ? ನಾನು ನಿನಗೋಸ್ಕರಾನೇ ಕಾಯ್ತಿದ್ದೆ..."

"ಹೌದಾ ಅತ್ತೆ... ನಾನೂ ನಿಮ್ಮನ್ನು ಒಂದ್ವಿಷ್ಯ ಕೇಳೋಣಾಂತ ಬಂದೆ..."

"ನಿಮ್ಮಮ್ಮ ನಿಂಗೇನೂ ಹೇಳಲಿಲ್ವಾ....? ವಿದ್ಯಾಳ ತಂದೆ ಊರಿಗೆ ಬಂದಿದಾರೆ..."

"ಹೌದಾ? ಯಾಕೆ?"

"ಅವಳ ಮದ್ವೇನ ನಿಶ್ಚಯ ಮಾಡೋಕೆ ಬಂದಿದಾರೆ..."

"ಓ.... ಹೌದಾ....?" ಅವನ ಪೆಚ್ಚು ಮುಖ ಕಂಡು ನಕ್ಕಳು.

"ಅದ್ಸರಿ... ನೀನ್ಯಾಕೆ ಒಬ್ನೇ ಬಂದೆ...? ಅಮ್ಮ ಬರಲಿಲ್ಲವಲ್ಲ...?"

"ನಾನು ಯಾರ್ಗೂ ಏನೂ ಹೇಳ್ಲೇ ಇಲ್ಲ. ಈ ಕಾಗ್ದಾನ ನೋಡಿದ್ಕೂಡ್ಲೇ ಹಾಗೇ ಬಂದ್ಬಿಟ್ಟೆ" ಎನ್ನುತ್ತಾ ತನ್ನ ಜೇಬಿನಲ್ಲಿದ್ದ ಪತ್ರವನ್ನು ಅತ್ತೆಯ ಕೈಗಿತ್ತ.... ಸಾರಿ ಅತ್ತೆ ನಿಮಗೆ ಬಂದ ಲೆಟರ್ ಅರ್ಧ ಓದ್ಬಿಟ್ಟೆ. ಆದರೆ, ಕವರಿನ ಮೇಲೆ ನನ್ನ ಹೆಸರು ಬರೆದಿತ್ತು...."

"ಹೌದಾ! ಕೊಡು ನೋಡೋಣ." ಎನ್ನುತ್ತಾ ಪತ್ರವನ್ನು ಓದಿದಳು. "ಇದು ಪ್ರೇಮಕ್ಕ ನನಗೆ ಬರೆದಿರುವ ಕಾಗದ..... ಇದನ್ನು ನಿಂಗ್ಯಾಕೆ ಪೋಸ್ಟ್ ಮಾಡಿದಾರೆ!"

"ನಂಗೇನ್ಗೊತ್ತು? ಆದ್ರೆ... ಏನೋ ಅದಲುಬದಲಾಗಿರ್ಬಹುದು ಅನ್ನೋ ಅನುಮಾನ ನಂಗೆ.... ನಿಮ್ಗೇನಾದ್ರೂ ಲೆಟರ್ ಬಂದಿದೆಯಾ...?"

"ನಾನ್ನೋಡೇ ಇಲ್ಲ.... ತಡಿ ನೋಡ್ತೀನಿ." ಎನ್ನುತ್ತಾ ಅವತ್ತಿನ ಪೋಸ್ಟ್ ಹುಡುಕಾಡಿದಳು. ಹೌದು. ಅವನ ಅನುಮಾನ ಸರಿಯಾಗಿತ್ತು. ಅವಳ ಕೈಗೆ ಸಿಕ್ಕಿದ ಕವರಿನೊಳಗೆ ಯಾರಿಗೋ ಬರೆದ ಪತ್ರವಿತ್ತು... ಓದಿಕೊಂಡಳು.

"ಇದೇನೋ ಹಿಂದಿಲ್ಲ, ಮುಂದಿಲ್ಲ, ಫೋಟೋಗಳು ತುಂಬಾ ಚೆನ್ನಾಗಿವೆ. ನಾನು ನಿಮ್ಹತ್ರ ಮಾತಾಡ್ಬೇಕು. ಮತ್ತೆ ಯಾವಾಗ್ಬರ್ತೀರಿ ಅಂತ ಯಾರೋ ಬರೆದಿದಾರೆ. ನಾನು ಯಾರಿಗೂ ಯಾವ ಫೋಟೋಗಳನ್ನು ಕಳಿಸಿಲ್ಲ. ಯಾರಿರಬಹುದು..."

"ಇದು ಸಂತೋಷ ನನಗೆ ಬರೆದಿರೋ ಲೆಟರ್ ಅತ್ತೆ. ನಾನು ಅವನಿಗೆ ಕೆಲವು ಫೋಟೋಗಳನ್ನು ಕಳಿಸಿದ್ದೆ. ಆದರೆ ಇದು ಅವನ ಕೈ ಬರೆಹ ಅಲ್ಲ...

ನಿಮಗೆ ಗೊತ್ತಾಗುತ್ತಾ ಯಾರು ಬರೆದಿರೋದು ಅಂತ...."

"ವಿದ್ಯಾ ಇರಬಹುದು.... ಅವಳ ಕೈ ಬರೆಹ ಇದ್ದಾಗಿದೆ.... ಆದರೆ ಇದು ನನ್ನ ಹೆಸ್ರಿಗ್ಯಾಕೆ ಬಂದಿದೆ?"

"ಎಲ್ಲೋ ಅದಲುಬದಲಾಗಿದೆ.... ಇಲ್ಲಿ ಕೊಡಿ...ಇದು ನಂದು..."

"ಹೆಸರಿಲ್ಲ, ಕುಲವಿಲ್ಲ.... ನಿಂದು ಅಂತ ಹೇಗ್ಹೇಳ್ತೀಯಾ?"

"ನಾನು ವಿದ್ಯಾಳಿಗೆ ಲೆಟರ್ ಬರೆದಿದ್ದೆ. ಯಾಕೋ ಉತ್ತರಾನೇ ಬಂದಿರಲಿಲ್ಲ. ಇದು ವಿದ್ಯಾ ನನಗೆ ಬರೆದಿರೋ ಕಾಗ್ದಾನೇ...." ಎನ್ನುತ್ತಾ ಮಡಚಿ ತನ್ನ ಜೇಬಿಗಿಳಿಬಿಟ್ಟ "ಇದಕ್ಕೂ ಅವರಪ್ಪ ಬಂದಿರೋದಕ್ಕೂ ಏನೋ ಸಂಬಂಧವಿದೆ.... ಅವರು ಗೊತ್ತು ಮಾಡಿರುವ ಗಂಡಿನ ಬಗ್ಗೆ ನನ್ಹತ್ರ ಮಾತಾಡ್ಬೇಕೇನೋ.... ನಾನ್ಯಾಕೆ ಹೋಗ್ಲೀ....?" ಮೂತಿ ಊದಿಸಿದ. ಭವಾನಿ ನಕ್ಕಳು.

"ಅಕ್ಕ ಬರೆದಿದಾಳೆ.... ನೀನು ಅವರ್ಗೆಲ್ಲಾ ಒಪ್ಗೆ ಅಂತ....?"

"ನಿಮ್ಮಕ್ಕ ಹಾಗೆ ಬರ್ದಿದಾರೆ. ಆದ್ರೆ ಭಾವಂಗೆ ಒಪ್ಗೆ ಇಲ್ವೇನೋ....?"

"ಹಾಗೇನಿಲ್ಲ. ಅವರ್ಗೂ ಒಪ್ಗೆ ಇದೆ. ಅದಕ್ಕೇ ಊರಿಗ್ಬಂದಿದಾರೆ. ಒಳಗ್ಬಾ... ಏನಾದರೂ ಸಿಹಿ ತಿಂಡಿ ಮಾಡ್ಕೊಡತೀನಿ..."

"ನಾನು ಬರುಲ್ಲಪ್ಪಾ.... ಆ ಲಾಯರ್ರು ಕ್ರಾಸ್ ಕ್ವೆಶ್ಚನ್ಸ್ ಹಾಕ್ತಾರೆ.... ಅಲ್ದೇ ಈ ಲೆಟರ್ನಿಂದ ವಿದ್ಯಾ ಒಪ್ಪಿದಾಳೆ ಅಂತ ಹೇಳಕ್ಕಾಗುಲ್ಲ.... ನಿಮ್ಮ ಭಾವ ಏನಂದ್ರು?"

"ಅವಳ ಒಪ್ಪಿಗೆಯ ಅಗತ್ಯವಿಲ್ಲ. ನಾನು ಒಪ್ಪಿದ್ಮೇಲೆ ಆಯ್ತು.... ಅಂತಂದ್ರು... ಅವರ್ಮನೇಲಿ ಹಾಗೇನೇ... ಅವರದ್ದೇ ಅಂತಿಮ ತೀರ್ಪು..."

"ಇದು ತಪ್ಪಲ್ವಾ...? ಅವರವರ ಸ್ವಂತ ಅಭಿಪ್ರಾಯಗಳಿಗೆ ಬೆಲೆ ಕೊಡ್ಬೇಕು ಅಲ್ವಾ ಅತ್ತೆ...."

"ಹೋಗ್ಲಿ ಬಿಡು. ಇದ್ರಿಂದ ನಿಂಗೇನೂ ನಷ್ಟವಿಲ್ಲ. ಅವರ ಮನೆಯ ತಿಕ್ಕಾಟದಲ್ಲಿ ನಿನಗೇ ಲಾಭ..... ಹೆದರ್ಬೇಡ ಒಳಗ್ಬಾ.... ಭಾವ ಮನೇಲಿಲ್ಲ. ಹೊರಗೆಲ್ಲೋ ಹೋಗಿದಾರೆ" ಅವನು ಸಣ್ಣಗೆ ಸೀಟಿ ಹೊಡೆಯುತ್ತಾ ಒಳ ಬಂದ.

"ಇನ್ಮುಂದೆ ನೀನಿದನ್ನೆಲ್ಲಾ ಬಿಟ್ಬಿಡ್ಬೇಕಾಗುತ್ತೆ.... ಭಾವಂಗೆ ಇದೆಲ್ಲಾ ಇಷ್ಟವಿಲ್ಲ."

"ಹೋಗಿ ಅತ್ತೆ.... ನಾನೇನು ಅವರ್ಮುಂದೆ ಸೀಟಿ ಹೊಡಿತೀನಾ? ಅವರ ಮಗಳ್ಮುಂದೆ ಹೊಡಿತೀನಿ.... ಅದಕ್ಕೇನು ಅವ್ರು ಫೈನ್ ಹಾಕ್ತಾರಾ? ಕೇಸ್ ಹಾಕ್ತಾರಾ?" ಅವನು ನಕ್ಕ.

"ನಿನಗೆ ಎಲ್ಲಾ ತಮಾಷೆ.... ಭಾವನ್ಜೊತೆ ಇರೋರಿಗೆ ಗೊತ್ತು.... ಅವರೇನೂಂತ..."

"ಅದಕ್ಕೇ ತಾನೇ ವಿದ್ಯಾಳನ್ನು ಆ ಜೈಲಿನಿಂದ ಬಿಡುಗಡೆ ಮಾಡ್ತಾ ಇರೋದು.... ನೀವು ನಿಮ್ಮ ಭಾವಂಗೆ ಹೇಳ್ಬಿಡಿ. ನನ್ನ ಒಪ್ಗೆ ಇದೆ ಅಂತ...."

"ನಿಂದೇನಾದ್ರೂ ಕಂಡೀಷನ್ಸ್, ಡಿಮ್ಯಾಂಡ್ಸ್ ಇದ್ರೆ ಈಗ್ಲೇ ಹೇಳ್ಬಿಡು....."

"ನಂಗೇನೂ ಡಿಮ್ಯಾಂಡ್ಸ್ ಇಲ್ಲ. ಯಾವ ಕಂಡೀಷನ್ನೂ ಇಲ್ಲ. ವರದಕ್ಷಿಣೇನ ಕೇಳಿದ್ರೆ ಅವ್ರು ಕೊಡೋರು ಅಲ್ಲ. ಎಷ್ಟಾಗ್ಲೀ ಲಾ ತಿಳ್ಕೋರು.... ಸರಳವಾಗಿ ಮದುವೆ ಮಾಡಿ ಕೊಟ್ರೆ ಸಾಕು..... ಹಾಗಂತ ಹೇಳಿಬಿಡಿ."

"ನಿಮ್ಮಮ್ಮ ನಿಮ್ಮಪ್ಪ ಇದಕ್ಕೆ ಒಪ್ತಾರಾ.....? ಅವರೇನಂತಾರೋ?"

"ಅಪ್ಪಂಗೆ ಇದೆಲ್ಲಾ ಆಸೆ ಇಲ್ಲ ಅಂತ ನನಗೊತ್ತು... ಅಮ್ಮಂಗೆ ನೀವೇ ಹೇಳ್ಬಿಡಿ. ಅವ್ಳು ನಿಮ್ಮ ಮಾತನ್ನ ಕೇಳ್ತಾಳೆ...."

"ಆಸೆ ಇದ್ರೆ ತಪ್ಪೇನಿಲ್ಲ ದಿನೂ.... ಮನೇಲಿ ಮೊದಲ ಮದುವೆ. ಅದೂ ಮಗನ ಮದುವೆ. ಅವಳ ಆಸೆಗಳಿಗೆ ಅಡ್ಡ ಬರ್ಬೇಡ..."

"ಇದಕ್ಕೆಲ್ಲ ನಾನು ತಲೆ ಹಾಕುಲ್ಲ. ಅವ್ರಿಗೆ ಹೇಗೆ ಇಷ್ಟವೋ ಹಾಗೆ ಮದುವೆ ಮಾಡಿ ಕೊಡ್ಲಿ... ನಂಗೆ ಬೇಕಾಗಿರೋಳು ವಿದ್ಯಾ... ಅವಳನ್ನು ಕರ್ಕೊಂಡುಬರ್ಬಾದಾಗಿತ್ತಾ ಅವಳಪ್ಪ...?"

"ಹೌದು ನೋಡು... ಅಕ್ಕನ್ನ ಸಹ ಕರ್ಕೊಂಡ್ಬಂದಿಲ್ಲ. ನಮ್ಮ ಭಾವಂಗೆ ಪ್ರತಿಷ್ಠೆ ಜಾಸ್ತಿ. ನಮಗೆಲ್ಲಾ ಅದೇ ಬೇಜಾರು...."

"ಸದ್ಯ ವಿದ್ಯಂಗೆ ಅವರಪ್ಪನ ಬುದ್ಧಿ ಇಲ್ವಲ್ಲಾ....?" ಸಂಶಯದಿಂದ ಕೇಳಿದ.

"ನೀನು ಅವಳ್ಜೊತೆ ಮಾತಾಡಿದೀಯ. ತಿರುಗಾಡಿದೀಯ....ಹೇಗೆ ಅಂತ ಗೊತ್ತಿಲ್ವಾ?"

"ಹೂಂ ಸ್ವಲ್ಪ ಸ್ವಲ್ಪ ಗೊತ್ತು. ನಾನೋದ್ಕೆಲ್ಸ ಮಾಡ್ತೀನಿ ಅತ್ತೆ. ನಾನು ಇವತ್ತು ರಾತ್ರಿನೇ ಅವಳೂರ್ಗೆ ಹೊರಡ್ತೀನಿ. ಹೇಗೂ ಲಾಯರ್ರು ಅಲ್ಲಿರುಲ್ಲ.... ನಾನು ನಾಳೇನೇ ವಾಪಸ್ಸು ಬಂದ್ಬಿಡ್ತೀನಿ.... ಅವರ್ಗೆ ಗೊತ್ತಾಗೋದೇ ಇಲ್ಲ."

"ಒಬ್ನೇ ಹೋಗ್ಬೇಡ. ಗೌತಮನ್ನ ಕರ್ಕೊಂಡ್ಹೋಗು. ಇಂಥ ಕಾರ್ಯಗಳಿಗೆಲ್ಲ ಒಬ್ರೇ ಹೋಗುಲ್ಲ." ಭವಾನಿ ಪುಷ್ಟಿ ನೀಡಿದಳು.

"ಮತ್ತೆ ಅವರಪ್ಪ ಒಬ್ರೇ ಬಂದಿದಾರೆ...."

"ಅವ್ರಿಗೆ ಆಚಾರ, ವಿಚಾರ, ಪದ್ಧತಿ, ಸಂಪ್ರದಾಯ ಒಂದ್ರಲ್ಲೂ ನಂಬಿಕೆ ಇಲ್ಲ. ಅವ್ರು ದೇವಸ್ಥಾನಕ್ಕೆ ಹೋಗುಲ್ಲ. ದೇವರನ್ನು ನಂಬುಲ್ಲ. ಒಂದು ದಿನವಾದ್ರೂ ಒಬ್ಬ ದೇವ್ರಿಗೂ ಕೈ ಮುಗ್ದಿಲ್ಲ..."

"ಅದಕ್ಕೇ ಅಂತ ಕಾಣುತ್ತೆ, ಅವರ್ಮನೇಲಿ ಒಂದೇ ಒಂದು ದೇವರ ಪಟ, ಯಾವ ಗೋಡೆ ಮೇಲೂ ಇರ್ಲಿಲ್ಲ.."

"ಎಲ್ರೂ ದೇವರ್ಮನೆ ಕಟ್ಟಿಸಿರ್ತಾರೆ. ಅವರ್ಮನೇಲಿ ದೇವರ್ಮನೇನೇ ಇಲ್ಲ. ಮನೆ ಮಾತ್ರ ದೇಗುಲ ಇದ್ದಾಗಿದೆ. ಈ ನಾಸ್ತಿಕ ಮನುಸ್ಯನ ಜತೆ, ಅಕ್ಕಂಗೆ ಸುಖವಿಲ್ಲ.... ಆದ್ರೆ ವಿದ್ಯಾ ನಿನ್ನೊತೆ ಸುಖವಾರ್ಗಿತಾಳೆ ಅನ್ನೋ ನಂಬ್ಕೆ ನನಗಿದೆ. ದೇವ್ರು ನಿಮ್ಮಿಬ್ಬ

ರನ್ನು ಸದಾಕಾಲ ಚೆನ್ನಾಗಿಟ್ಟಿರಲಿ."

"ಎಲ್ಲಾ ನಿಮ್ಮ ಆಶೀರ್ವಾದ." ಎನ್ನುತ್ತಾ ಭಾವುಕನಾಗಿ ಭವಾನಿಯ ಕಾಲುಗಳನ್ನು ಮುಟ್ಟಿ ನಮಸ್ಕರಿಸಿದ.

"ನಿಮ್ಮ ಲಾಯರ್ ಭಾವ ಬರೋಕ್ಮುಂಚೆ ನಾನು ಹೊರಟು ಬಿಡ್ತೀನಿ. ಅಮ್ಮಂಗೆ ಈಗ್ಲೇ ಅಲ್ಲಿಗೆ ಹೋಗ್ತಿದೀನಿ ಅಂತ ಹೇಳುಲ್ಲ. ಬಂದ್ಮೇಲೆ ಹೇಳ್ತೀನಿ...."

"ಯಾಕೋ....?"

"ಅಮ್ಮಂಗೆ ಇಷ್ಟವಾಗುತ್ತೋ ಇಲ್ವೋ... ಅರ್ಜೆಂಟಾಗಿ ಟೂರ್ ಹೋಗ್ತಿದೀನಿ ಅಂತ ಹೇಳಿರ್ತೀನಿ.... ತಪ್ಪಾಗುತ್ತಾ?"

"ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡು ಅನ್ನೋ ಗಾದೆ ಇದೆ.... ಇಲ್ಲಿ ಯಾವ ಸುಳ್ಳೂ ತಪ್ಪಾಗುಲ್ಲ. ಆದ್ರೇ.... ಅದೇ ಹೆಚ್ಚಾಗಬಾರದು.... ಹೋಗ್ಬಾ.... ಗೌತಮ್ಮನ್ನ ಬಸ್ ಸ್ಟ್ಯಾಂಡಿಗೆ ಕಳಿಸ್ತೀನಿ..." ದಿನೇಶ ಬಂದಷ್ಟೇ ತರಾತುರಿಯಿಂದ ವಾಪಸ್ಸು ಹೊರಟು ಹೋಗಿದ್ದ.

* * *

ಅಧ್ಯಾಯ–ಹದಿಮೂರು

ಬೆಕ್ಕಿಲ್ಲದ ಮನೆಯ ಇಲಿಗಳು

"ಅಮ್ಮಾ.... ನಾನು ಅರ್ಜೆಂಟಾಗಿ ಟೂರ್ ಹೋಗ್ಬೇಕಾಗಿದೆ. ನಾಳೆ ರಾತ್ರಿಯ ಹೊತ್ತಿಗೆ ವಾಪಸ್ಸು ಬಂದ್ಬಿಡ್ತೀನಿ." ತಾಯಿಗೆ ಹೇಳಿದ.

"ವಿದ್ಯಾಳ ತಂದೆ ಊರಿಗೆ ಬಂದಿದ್ದಾರೆ..."

"ಏನಂತೆ....?"

"ಅವಳ ಮದುವೆ ವಿಷಯ ಮಾತ್ನಾಡುಕ್ಕೆ ಬಂದಿದಾರೆ...."

"ಮಾಡ್ಲೀ, ಯಾರು ಬೇಡಾಂದ್ರು....?"

"ಹಾಗಾದ್ರೆ ವಿದ್ಯಾ ನನಗಿಷ್ಟವಿಲ್ಲಾಂತಾಯ್ತು...."

"ನಾನೆಲ್ಲಿ ಹಾಗಂದೆ....?"

"ಸರಿಯಾಗಿ ಉತ್ತರ ಕೊಡು ದಿನೂ... ಅಮ್ಮನ್ನೇಕೆ ಸತಾಯಿಸ್ತೀಯಾ?" ಅಲ್ಲೇ ಕೂತಿದ್ದ ಗೋಪಾಲ ಹೇಳಿದ.

"ಏನುತ್ತರ ಬೇಕಮ್ಮ....?"

"ನಿಂಗೆ ವಿದ್ಯಾ ಒಪ್ಗೇನ, ಇಲ್ವಾ ತಿಳ್ಸು.... ಆತಂಗೆ ನಿನ್ನನ್ನ ಕೇಳಿ ತಿಳಿಸ್ತೀವಿ ಅಂತ ಹೇಳಿದೀವಿ...."

"ಸರಿ ಹಾಗಾದ್ರೆ.... ನನ್ನ ಒಪ್ಗೆ ಇದೆ, ತಿಳ್ಸಿ ಬಿಡಿ.... ನಂಗೆ ಬೇಗ ಊಟ ಹಾಕು ಹೊತ್ತಾಗುತ್ತೆ."

"ನಾಳೆ ಬೆಳಗ್ಗೆ ಹತ್ತು ಗಂಟೆಗೆ ಮತ್ತೆ ಬರ್ತಾರೆ.... ಗೊತ್ತಿದ್ದೂ ನೀನು.... ಅವರನ್ನು ನೋಡಿ ಮಾತಾಡಿಸುಲ್ವಾ! ಅವರೇನಂದ್ಕೊಳ್ತಾರೋ...."

"ಡ್ಯೂಟಿ ಫಸ್ಟ್ ಅಂತ ಹೇಳು.... ಅವರೇನೂ ಅಂದ್ಕೊಳುಲ್ಲ."

"ಹೀಗೆಲ್ಲಾ ಹೇಳಿದ್ರೆ.. ಚೆನ್ನಾಗಿರುತ್ತಾ...?"

"ಸರಿ. ನಿಮಗೇನು ತೋಚುತ್ತೋ ಹಾಗೆ ಹೇಳಿ. ನಾನಂತೂ ಹೋಗ್ಲೇಬೇಕು. ಯಾವುದೇ ಕಾರಣದಿಂದ ಪೋಸ್ಟ್ ಪೋನ್ ಮಾಡುಕ್ಕಾಗಲ್ಲ."

"ಸರಿಯಪ್ಪಾ..... ನಿನ್ನಿಷ್ಟ.... ಆದರೆ, ನಾಳೇನೇ ವಾಪಸ್ಸು ಬಂದ್ಬಿಡು."

"ನಾಳೆ ಅಲ್ಲಿ ಉಳಕೊಳ್ಳೋ ಛಾನ್ಸೇ ಇಲ್ಲ. ನಾವಿಬ್ರೂ ನಾಳೆ ರಾತ್ರಿ ಅಲ್ಲಿಂದ ಹೊರಟೇ ಬಿಡ್ತೀವಿ..."

"ನಿನ್ನೊತೆ ನಿನ್ನ ಫ್ರೆಂಡೂ ಬರ್ತಾನಾ?"

"ಹೂಂ" ಎಂದಷ್ಟೇ ಹೇಳಿದ. ಸರಸರನೆ ಊಟ ಮುಗಿಸಿ, ಒಂದು ಕಿಟ್ ಬ್ಯಾಗನ್ನು ಹೆಗಲಿಗೇರಿಸಿ, ಮತ್ತೊಮ್ಮೆ ಇಬ್ಬರಿಗೂ ಹೇಳಿ ಮನೆಯಿಂದ ಹೊರಟ. ಬಸ್ ಸ್ಟ್ಯಾಂಡಿನಲ್ಲಿ ಇವನಿಗಾಗಿ ಗೌತಮ ಕಾಯುತ್ತಾ ನಿಂತಿದ್ದ.

"ಯಾಕೋ ಲೇಟು? ನಿನಗೋಸ್ಕರ ಕಾದೂ ಕಾದೂ ಸಾಕಾಯ್ತು.... ಇನ್ನು ಹತ್ತು ನಿಮಿಷದಲ್ಲಿ ನೀನು ಬರ್ದೇ ಇದ್ದಿದ್ರೆ ವಾಪಸ್ಸು ಹೊರಟು ಹೋಗ್ತಿದ್ದೆ."

"ಬೇಜಾರೇನೋ ನಂಜೊತೆ ಬರೋಕೆ....? ಹಾಗಿದ್ರೆ ಬರ್ಬೇಡ ಬಿಡು..."

"ದಿಗ್ವಿಜಯಕ್ಕೆ ಹೊರಟಿದೀಯಲ್ಲ.... ಅದೇನೋ ಶಕುನ ಅಂತೆ, ಒಬ್ನೇ ಹೋಗ್ಬಾರ್ದಂತೆ.... ಅಮ್ಮ ಹೇಳಿದ್ದೇ ಹೇಳಿದ್ದು...."

"ಥ್ಯಾಂಕ್ಸ್ ಕಣೋ ಮರೀ.... ನಿನ್ಗೆ ಬೇಕಾದಾಗ, ನನ್ನನ್ನ ಕರಿ... ಒಬ್ನೇ ಮಾತ್ರ ಹೋಗ್ಬೇಡ..."

"ನನಗೀ ಫಜೀತಿಯೆಲ್ಲಾ ಬೇಡಪ್ಪಾ.... ಅಮ್ಮ ನೋಡಿದ ಹುಡ್ಗಿಯನ್ನು ಕಣ್ಮುಚ್ಕೊಂಡು ಮದ್ವೆಯಾಗ್ತೀನಿ..."

"ನೀನೇನು ಧೃತರಾಷ್ಟ್ರನೇನೋ....? ಅಥವಾ ಆ ಹುಡ್ಗಿಯ ಮುಖಾನ ನೋಡೋಕೆ ಹೆದ್ರಿಕೇನೋ....?"

"ನೀನು ಲಕ್ಕಿ ಕಣೋ ದಿನೂ.... ವಿದ್ಯಾಳಂತ ಹುಡ್ಗಿ ನನ್ಗೂ ಸಿಕ್ಕರೆ, ಕಣ್ಮು ಚ್ಕೊಂಡು ಮದ್ವೆಯಾಗ್ಬಹುದು...."

"ಕಣ್ಮುಚ್ಕೊಂಡು ಮದ್ವೆಯಾಗೋಕೆ ಸುಂದರವಾದ ಹುಡ್ಗಿ ಯಾಕ್ಬೇಕು? ಶೂರ್ಪಣಖಾ, ಜಾಂಬವತೀ.... ಯಾರಾದ್ರೂ ಆಯ್ತಲ್ವಾ...?"

"ಕೊಡ್ತಿನ್ನೋಡು... ನಿಂಗೂ ಇಂಥಾ ಹುಡ್ಗೀನ ಹುಡುಕ್ಕೊಡ್ತೀನಿ ಅಂತ ಬಾಯಲ್ಲೇನಾದ್ರೂ ಬಂತಾ ನಿನಗೆ?"

"ಸಾರಿ ಗುರು. ಗೊತ್ತಾಗ್ಲಿಲ್ಲ. ನೋಡೋಣ.... ಯಾವ್ದಾದ್ರೂ ಸುಂದರವಾದ ಹುಡ್ಗಿ ಕಣ್ಣಿಗೆ ಬಿದ್ರೆ... ನಿನಗೆ ತಿಳಿಸ್ತೀನಿ..... ಆದ್ರೆ ಒಂದ್ಮಾತು ಮಾತ್ರ ಗ್ಯಾರಂಟಿ. ಅವ್ಳು ಎಷ್ಟೇ ಸುಂದರಿಯಾಗಿದ್ರೂ, ನಮ್ಮ ಬ್ಯೂಟಿ ಮುಂದೆ ಸಪ್ಪೆ..."

"ಜಂಭ ಆಡ್ಬೇಡ... ಈಗ್ಲೂ ಕಿಶೋರ ನಿನ್ನ ಪ್ರತಿಸ್ಪರ್ಧಿಯಾಗಿದಾನೆ. ಹುಶಾರಾಗಿರು...."

"ಕಿಶೋರನ ಹೆಸರನ್ನೆತ್ಬೇಡ ನನ್ನೆದುರ್ಗೆ... ಮೈಯೆಲ್ಲಾ ಮುಳ್ಳಾಗುತ್ತೆ."

"ಅವ್ಳೇನಾದ್ರೂ ಅವನನ್ನೇ ಮದ್ವೆಯಾಗ್ತೀನಿ ಅಂತ ಹಠ ಹಿಡಿದ್ರೆ..."

"ಕೊಂದು ಹಾಕ್ಬಿಡ್ತೀನಿ ಅವನನ್ನ...." ಮುಷ್ಟಿ ಬಿಗಿ ಮಾಡಿದ.

"ಮೆಲ್ಲಗೆ ಮೆಲ್ಲಗೆ... ಎಲ್ರೂ ನಿನ್ನನ್ನೇ ನೋಡ್ತಿದಾರೆ... ಮೊದ್ಲು ಬಸ್ಸು ಹತ್ತು.."

"ತಮಾಷೆಗೂ ಕಿಶೋರನ ಹೆಸ್ರನ್ನು ನನ್ನೆದುರಿಗೆ ಎತ್ಬೇಡ" ದಿನೇಶ ಭುಸುಗುಟ್ಟುತ್ತಾ ಕಿಟಕಿಯ ಬಳಿ ಸೀಟಿನಲ್ಲಿ ಕುಳಿತ. ಅವನ ಪಕ್ಕ ಗೌತಮ ಕುಳಿತ.

ದಿನೇಶನ ಭುಜದ ಮೇಲೆ ಕೈಯನ್ನಿಟ್ಟ.

"ನಾವು ನಾವು ಯಾಕೆ ಮೂಡ್ ಕೆಡಿಸ್ಕೋಬೇಕು.... ವಿದ್ಯಾ ನನ್ನ ಸ್ವಂತ ಕಸಿನ್. ಅವಳ ಒಳ್ಳೇದನ್ನೇ ಬಯಸೋನು ನಾನು.... ನೀನೇ ಅವ್ಳಿಗೆ ತಕ್ಕವನು ಅಂತ ನನಗೆ ಚೆನ್ನಾಗಿ ಗೊತ್ತು.... ನಾನು ನಿನ್ನ ಜತೆಗಿದೀನಿ.... ಡೋಂಟ್ ವರಿ..."

"ಪರ್ವಾಗಿಲ್ಲ ಬಿಡು... ಈ ನಿನ್ನ ಕಸಿನ್ ನೋಡ್ದಾಗ್ನಿಂದ... ಅವಳು ನನ್ನವಳು ಅನ್ನೋ ಭಾವನೆ ನನಗ್ಬಂದ್ಬಿಟ್ಟಿದೆ... ಅದಕ್ಕೇ ಕಿಶೋರನ ಹೆಸ್ರನ್ನ ಕೇಳಿದ್ರೆ ಸಿಟ್ಟು ಬಂದ್ಬಿಡುತ್ತೆ...."

"ಹಾಗಾದ್ರೆ ಒಂದ್ವಿಷಯಾನ ಈಗ್ಲೇ ಗಟ್ಟಿ ಮಾಡ್ಕೋ... ಮುಂದೆಂದೂ ನಿಮ್ಮಿಬ್ಬರ ಜೀವನದಲ್ಲಿ ಈ ಕಿಶೋರನಿಂದಾಗಿ ಒಡಕು ಮೂಡಬಾರದು... ಅಪ್ಪಿತಪ್ಪಿ ಅವಳೇನಾದ್ರೂ ಅವನ ಬಗ್ಗೆ ಹೇಳಿದ್ರೆ ನೀನು ತಲೆ ಕೆಡಿಸ್ಕೋಬಾರದು."

"ಅವ್ಳು ಅವನನ್ನು ಪೂರ್ತಿಯಾಗಿ ಮರೆತ್ಬಿಡ್ಬೇಕು..."

"ಅದು ನಿನ್ನ ಕೈಲಿದೆ.... ಅವನ ನೆನಪೇ ಅವಳಿಗೆ ಬರದಂತೆ, ನೀನು ಪ್ರೀತಿಯಿಂದ ನೋಡ್ಕೋಬೇಕು.... ನಿನ್ನ ಪ್ರೀತಿ ಎಂದಿಗೂ ಕಮ್ಮಿ ಆಗಬಾರದು...." ಎಂದು ಅವನ ಕೈಗಳನ್ನು ಒತ್ತಿದ. ದಿನೇಶ ಹೌದು ಎನ್ನುವಂತೆ ತಲೆ ಆಡಿಸಿದ. ಬಸ್ಸು ಹೊರಟಿತ್ತು.

* * *

'ತಂದೆ ಹೇಗೂ ಊರಿನಲ್ಲಿಲ್ಲ...' ಎಂದುಕೊಂಡು ಹಾಯಾಗಿ ಹರಟುತ್ತಾ ರಾತ್ರಿ ತಡವಾಗಿ ಮಲಗಿದ್ದರು.... ಬೆಳಿಗ್ಗೆ ಯಾರಿಗೂ ಬೇಗ ಎಚ್ಚರವಾಗಿರಲಿಲ್ಲ. ಆಟೋರಿಕ್ಷಾ ನಿಂತ ಸದ್ದು ಕೇಳಿಸಿತ್ತು. ತತ್ ಕ್ಷಣವೇ ಕಾಲಿಂಗ್ ಬೆಲ್ ಟ್ರಿನ್ ಗುಟ್ಟಿತ್ತು. ವಿದ್ಯಾ, ತಮ್ಮ – ತಂಗಿಯರನ್ನು ಎಬ್ಬಿಸಿದಳು.

"ಅಪ್ಪ ಬಂದ್ರೂಂತ ಕಾಣುತ್ತೆ.... ಎಲ್ಲಾ ಬೇಗ ಏಳಿ. ದಿಂಬು, ಹೊದಿಕೆಗಳನ್ನು ಬೇಗ ಬೇಗ ತೆಗೆದಿಡಿ."

ಎಲ್ಲರೂ ದಿಂಬು, ಹೊದಿಕೆಗಳೊಡನೆ ತಮ್ಮ ತಮ್ಮ ರೂಮಿಗೆ ಹೋಗಿದ್ದರು. ವಿದ್ಯಾ ಜಮಖಾನವನ್ನು ತೆಗೆದಳು. ಸಂತೋಷ ಓಡಿ ಬಂದು ಮುಂಬಾಗಿಲನ್ನು ತೆರೆದ... ಎದುರಿಗೆ ತಂದೆ ನಿಂತಿರಲಿಲ್ಲ. ಒಂದು ಗಳಿಗೆ ತಬ್ಬಿಬ್ಬುಗೊಂಡ.

"ಹಾಯ್.... ಸಂತೋಷ್" ಇಬ್ಬರೂ ಒಟ್ಟಿಗೆ ನುಡಿದಾಗ, ಅವನು ಅಚ್ಚರಿಯ ನಗೆಯನ್ನು ನಕ್ಕ.

"ಇದೇನು ನೀವಿಬ್ರೂ.... ಇಲ್ಲಿ.... ನಾನು ಅಪ್ಪ ಬಂದ್ರು ಅಂತ ಅಂದ್ಕೊಂಡೆ...."

"ಹೂಂ. ನಾವಿಬ್ರೇ.... ಇನ್ನೂ ಯಾರೂ ಎದ್ದಿಲ್ವಾ...?"

"ಹೂಂ. ರಾತ್ರಿ ಲೇಟಾಗಿ ಮಲಗಿದ್ವಿ, ಬೆಳಿಗ್ಗೆ ಬೇಗ ಎಚ್ಚರವಾಗಲಿಲ್ಲ. ಬನ್ನಿ... ದಿನೇಶ್... ಬಾರೋ ಗೌತಮ.... ಅಮ್ಮನ್ನ ಎಬ್ಬಿಸ್ತೀನಿ..."

"ಬೇಡ ಬೇಡ... ದೊಡ್ಡಮ್ಮನ್ನ ಯಾಕೆ ಎಬ್ಬಿಸ್ಬೇಕು....!" ಎನ್ನುತ್ತ ಒಳಗೆ ಬಂದರು. ಅಪ್ಪನ ಧ್ವನಿಯಲ್ಲ, ಬೇರೆ ಯಾರೋ ಬಂದಿರುವರೆಂದು ತಿಳಿದು ಎಲ್ಲರೂ ಹಾಲಿಗೆ ಬಂದರು. ವಿದ್ಯಾ ದಿನೇಶನ್ನ ಕಂಡಳು. ಕೆಂದಾವರೆ ಮುಖ ಅರಳಿತ್ತು.

"ಏನೇ ವಿದ್ಯಾ! ಎಲ್ಲಾ ಹೇಗಿದೀರಿ...? ಸ್ವಲ್ಪ ಬಿಸಿ ಕಾಫಿ ಸಿಗುತ್ತಾ ನಮ್ಗೆ ಬ್ರಿಗೂ.... ಸ್ವಲ್ಪ ಚಳಿ..."

"ಈಗ್ತರ್ತೀನಿ.... ಕೂತ್ಕೊಳ್ಳಿ" ವಿದ್ಯಾ ಒಳಗೋಡಿದ್ದಳು. ಉಳಿದವರೆಲ್ಲಾ ಅವರಿಬ್ಬರನ್ನು ಸುತ್ತುವರಿದಿದ್ದರು.

"ಅಪ್ಪ ಊರ್ನಲ್ಲಿಲ್ಲ. ಯಾವ್ದೋ ಕೆಲಸದ ಮೇಲೆ ಬೆಂಗ್ಳೂರ್ಗೆ ಹೋಗಿದಾರೆ..... ಯಾವಾಗ್ಬರ್ತಾರೋ ಗೊತ್ತಿಲ್ಲ." ಸಂತೋಷ ನುಡಿದ. ದಿನೇಶ, ಗೌತಮ ಮುಖ ಮುಖ ನೋಡಿಕೊಂಡು ಮುಗುಳ್ನಕ್ಕರು.

"ಬರಲಿ ಬಿಡು ನಿಧಾನಕ್ಕೆ. ಅವ್ರೂ ಎಂದೂ ಊರಿಂದ ಹೆಚ್ಚು ಹೊರಗೆ ಹೋಗುಲ್ಲ.... ನೀವ್ಗಳೂ ಹೋಗುಲ್ಲ. ಅಂದ್ಹಾಗೇ ಇವತ್ತಿನ ಪ್ರೋಗ್ರಾಂ ಏನು?"

"ಸ್ಕೂಲು, ಕಾಲೇಜು ಇದೆಯಲ್ಲಪ್ಪಾ...."

"ಇವತ್ತೊಂದಿನ ಯಾರೂ ಹೋಗ್ಬೇಡಿ. ರಜ ಹಾಕ್ಬಿಡಿ...."

"ಹ್ಹಾಂ.... ಅಪ್ಪಂಗೊತ್ತಾದ್ರೆ ಬೈತಾರೆ."

"ನೀವು ಸ್ಕೂಲ್ಗೆ ಹೋಗ್ಬಿಟ್ಟರೆ ನಮಗೆ ಬೇಜಾರಾಗುಲ್ವಾ...?" ಶ್ರೀಕರನ ಭುಜವನ್ನು ಬಳಸಿ ಹಿಡಿದ ಗೌತಮ....

"ಹೌದು, ಒಂದಿನ ಕ್ಲಾಸ್ ತಪ್ಪಿದ್ರೆ....ಏನೂ ಆಗುಲ್ಲ." ಚಿನ್ಮಯಿ ನುಡಿದಳು.

"ನೀನು ಸ್ಕೂಲ್ಗೆ ತಪ್ಪಿಸ್ಕೊಳ್ಳೋಕೆ ಕಾರಣ ಹುಡುಕ್ತಿರ್ತೀಯ..."

"ಸರಿ ಯಾರಿಗ್ಬೇಕೋ ಅವ್ರು ಹೋಗಿ..."

ಅಷ್ಟರಲ್ಲಿ ಪ್ರೇಮಾ ಎದ್ದು ಬಂದಿದ್ದಳು. "ವಿದ್ಯಾ ಯಾರ ಹತ್ರ ಮಾತಾಡ್ತಿದೀರೇ...." ಎಂದು ಕೇಳಿ, ಅವರಿಬ್ಬರನ್ನು ನೋಡಿ ಮಾತನ್ನು ಅಷ್ಟಕ್ಕೇ ನಿಲ್ಲಿಸಿದಳು.

"ಹೇಗಿದೀರಿ ದೊಡ್ಡಮ್ಮ....?" ಗೌತಮ ವಿಚಾರಿಸಿದ.

"ಅದೇನೋ ಇದ್ದಕ್ಕಿದ್ಹಾಗೇ.... ಮತ್ತೆ ವಿದ್ಯಾಳನ್ನು ಕರ್ಕೊಂಡ್ಹೋಗೋಕೆ ಬಂದ್ಯಾ?"

"ಇಲ್ಲ.... ನಿಮ್ಮನ್ನು ನೋಡೋಣ ಅಂತನ್ನಿಸ್ತು. ಬಂದ್ಬಿಟ್ಟೆ, ಜತೆಗೆ ದಿನೇಶನನ್ನು ಕರ್ಕೊಂಡ್ಬಂದಿದೀನಿ."

"ನನ್ನನ್ನೋಡೋಕೆ ಬಂದೆ ಅಂತ ಸುಳ್ಳ್ಯಾಕೆ ಹೇಳ್ತೀಯ? ನನಗೆಲ್ಲಾ ಗೊತ್ತು.... ಅದ್ರೂ ನೀವ್ಗಳು ಬಂದದ್ದು ಸಂತೋಷವಾಯ್ತು.... ಆದರೆ, ನಿನ್ನ ದೊಡ್ಡಪ್ಪನೇ ಊರಲ್ಲಿಲ್ಲ." ಎನ್ನುತ್ತಾ ದಿನೇಶನ ಕಡೆ ನೋಡಿದಳು. ಅವನು ಮುಗುಳ್ನಕ್ಕ....

"ಅಮ್ಮಾ... ನೋಡಮ್ಮ... ಕ್ಲಾಸಿಗೆ ಚಕ್ಕರ್ ಹಾಕಿ ಅಂತ ಹೇಳ್ತಾನೆ..."

"ನಾನೇ ಹೇಳ್ತೀನಿ. ಇವತ್ತೊಂದು ದಿನ ಎಲ್ರೂ ರಜ ಹಾಕಿ.... ನಿಮ್ಮಪ್ಪಂಗೆ ನಾನ್ಹೇಳ್ತೀನಿ..." ತಾಯಿಯಿಂದಲೇ ಈ ಆರ್ಡರ್ ಬಂದಿದ್ದರಿಂದ, ಮಕ್ಕಳೆಲ್ಲಾ ಸಂತಸ ಗೊಂಡರು.

"ಹೋಗೇ ತಾಯೀ, ಶಾರದಮ್ಮನ ಎಬ್ಸು. ಬೇಗ ಬೇಗ ಎಲ್ರಿಗೂ ಕಾಫಿ – ತಿಂಡಿ ಮಾಡಿಕೊಡ್ಲಿ..."

"ನಾನು ಕಾಫಿಗೇಂತ ನೀರನ್ನಿಟ್ಟಿದ್ದೆ.. ಕುದ್ದು ಇಂಗೇ ಹೋಯ್ತೇನೋ." ಎನ್ನುತ್ತಾ ವಿದ್ಯಾ ಒಳಗೋಡಿದ್ದಳು.

ಎಲ್ಲರೂ ಒಬ್ಬೊಬ್ಬರಾಗಿ ಮುಖ ತೊಳೆದು ಬಂದು ಮಾತಿಗೆ ಕೂತರು.

ಶಾರದಮ್ಮ ಮೊದಲಿಗೆ ಎಲ್ಲರಿಗೂ ಕಾಫಿಯನ್ನು ತಂದುಕೊಟ್ಟಳು. ಪ್ರೇಮಾ ಕ್ಷೇಮ ಸಮಾಚಾರದ ಬಗ್ಗೆ ಮಾತನಾಡಿದಳು. ವಿದ್ಯಾ ಉತ್ಸಾಹದಿಂದ ಓಡಾಡುತ್ತಿರುವು ದನ್ನು ದಿನೇಶ ಗಮನಿಸಿ ಮುದಗೊಂಡ.

"ಬಿಸಿ ನೀರು ಕಾದಿದೆ. ಎಲ್ಲರೂ ಸ್ನಾನ ಮಾಡಿ.... ಎಲ್ಲಾದ್ರೂ ಹೊರಗೆ ತಿರುಗಾಡಿ ಬರೋರಂತೆ. ಇದು ಬೆಂಗಳೂರಿನಷ್ಟೇ ದೊಡ್ಡೋರೇನಲ್ಲ.... ಆದ್ರೂ ಸುತ್ತಮುತ್ತ ರಮಣೀಯ ಜಾಗಗಳಿವೆ. ಹೋಗ್ಬನ್ನಿ..."

"ನೀನೂ ಬರೋದಾದ್ರೆ ಹೋಗ್ತೀವಿ." ಸಂತೋಷನೆಂದ.

"ನಂಗೆ ತಿರುಗಾಡಿ ಅಭ್ಯಾಸವೇ ಇಲ್ಲ. ಬೇಗ ಆಯಾಸವಾಗುತ್ತೆ. ನೀವೆಲ್ಲಾ ಹೋಗ್ಬನ್ನಿ. ಇಂಥ ಅವಕಾಶ ಮತ್ತೆ ಸಿಗುತ್ತೋ ಇಲ್ವೋ...."

"ಹೌದು ದೊಡ್ಡಮ್ಮ.... ನಿಮಗೂ ಇಂಥ ಅವಕಾಶ ಈ ಹಿಂದೆ ಸಿಕ್ಕಿಲ್ಲ. ನಾವುಗಳು ಇದೀವಿ. ನಿಮಗೆ ಆಯಾಸವಾಗದಂತೆ ಎತ್ಕೊಂಡು ತಿರುಗಾಡಿಸ್ತೀವಿ...."

ಪ್ರೇಮಾ ನಾಚಿದಳು. "ನೀವೆಲ್ಲಾ ಚಿಕ್ಕೋರು ತಿರುಗಾಡಿ ಬನ್ನಿ. ನಂಗೀಗ ಯಾವ ಆಸಕ್ತಿಯೂ ಇಲ್ಲ."

"ನೀವು ಬಂದ್ರೇ ನಾವು ಹೋಗೋದು.... ಇಲ್ದಿದ್ರೆ ನಾವ್ಯಾರೂ ಹೊರ ಡೋಲ್ಲ...."

"ನಿಮ್ಮ ದೊಡ್ಡಪ್ಪ ಯಾವಾಗ್ಬಂದ್ಬಿಡ್ತಾರೋ.... ಮನೇಲಿ ಯಾರೂ ಇಲ್ಲದಿದ್ರೆ, ಅವ್ರಿಗೆ ಸರಿ ಹೋಗುಲ್ಲ." ಎಲ್ಲರ ಮುಖವೂ ಸಪ್ಪಗಾಯಿತು.

"ಅಮ್ಮಾ.... ನಾನು ಮನೇಲಿರ್ತೀನಿ. ನೀನು ಇವರ್ಗಳ ಜತೆ ಹೋಗ್ಬಾ...." ವಿದ್ಯಾ ನುಡಿದಳು.

"ಸರಿ. ಯಾರೂ ಎಲ್ಲಿಗೂ ಹೋಗೋದು ಬೇಡ. ಸೊಗಸಾಗಿ ಸ್ಪೆಷಲ್ ಆಗಿ ಏನಾದ್ರೂ ಅಡುಗೆ ಮಾಡಿಸ್ಬಿಡಿ ದೊಡ್ಡಮ್ಮ.... ನಮ್ಗೂ ರಾತ್ರಿ ಪ್ರಯಾಣದಿಂದ ಸ್ವಲ್ಪ ಆಯಾಸ ಆಗಿದೆ. ಮಲಗ್ಬೇಕು...."

"ಸರಿ ಹಾಗೇ ಮಾಡಿ.... ಮೊದ್ಲು ಸ್ನಾನ ಮಾಡಿ, ತಿಂಡಿ ತಿನ್ನಿ. ಸ್ವಲ್ಪ

ಹೊತ್ತು ಮಲಕ್ಕೊಳ್ಳಿ.... ಬಿಸಿ ಬೇಳೆ ಭಾತ್, ಬೋಂಡಾ, ಮೊಸರನ್ನ ಮಾಡುಕ್ಕೆ ಹೇಳ್ತೀನಿ. ಅಷ್ಟೇ ಸಾಕೋ ಇನ್ನೇನಾದ್ರೂ ಬೇಕೋ...."

"ಓ... ಸಾಕು. ಬೇಕಾದಷ್ಟು.... ತಿಂಡಿ ಏನ್ಮಾಡಿಸ್ತೀರಿ?"

"ದೋಸೆ ಹಿಟ್ಟಿದೆ. ಎಲ್ರಿಗೂ ದೋಸೆ ಮಾಡಿ ಕೊಡ್ತಾರೆ...."

"ದೋಸೆ!" ಗೌತಮ್ ಬಾಯಿ ಚಪ್ಪರಿಸಿದ.

"ನಾನು ಮೊದಲು ಸ್ನಾನ ಮಾಡ್ತೀನಪ್ಪಾ..... ಶಾರದಮ್ಮನೋರೇ.... ಕಾವಲೀನ ಒಲೆ ಮೇಲಿಡಿ. ಈಗ ಬಂದ್ಬಿಡ್ತೀನಿ." ಎನ್ನುತ್ತಾ ಕಿಟ್ ಬ್ಯಾಗಿನಿಂದ ಬಟ್ಟೆಗಳನ್ನು ತೆಗೆದ... ಎಲ್ಲರೂ ಕಿಸಿಕಿಸಿ ನಕ್ಕರು. ಮಕ್ಕಳು ಹೀಗೆ ನಗ್ಹೋದೇ ಅಪರೂಪ... ಸದಾ ಕಾಲ ಹೀಗೇ ಇದ್ರೆ ಎಷ್ಟು ಚೆನ್ನ ಅಂತಂದ್ಕೊಂಡಳು ಪ್ರೇಮಾ.... ಎಲ್ಲರೂ ಇದಾರೆ. ಪ್ರಶಾಂತ ಮಾತ್ರ ಎಲ್ಲೋ ಪರದೇಶಿ ಥರಾ ಇದಾನೋ... ಅಂತಂದು ಕೊಂಡಾಗ, ಅವಳ ಕಣ್ಣುಗಳು ತುಂಬಿಕೊಂಡವು.

"ದೊಡ್ಡಮ್ಮ.... ಪ್ರಶಾಂತನ ನೆನಪು ಬಂತಲ್ವಾ ನಿಮ್ಗೆ.... ನೋಡ್ತಿರಿ ಆದಷ್ಟು ಬೇಗ ಅವನೆಲ್ಲಿದ್ರೂ ನಿಮ್ಮನ್ನು ನೋಡೋಕೆ ಬರ್ತಾನೆ..." ಪ್ರೇಮಾ ಕಣ್ಣುಗಳನ್ನೊರೆಸಿಕೊಂಡಳು.

"ಅವನು ಮತ್ತೆ ಈ ಮನೆಗೆ ಬರ್ತಾನೋ ಇಲ್ವೋ.... ಆದ್ರೆ, ಎಲ್ಲಿದಾನೇಂತ ತಿಳ್ದಿದ್ರೆ ಸಾಕು.... ನನಗೆ ಅಷ್ಟು ಸಾಕು." ಸಂತೋಷ ಬಂದು ತಾಯಿಯ ಬಳಿ ಕುಳಿತ.... ಪ್ರೇಮಾ ಅವನ ಕೆನ್ನೆ ಸವರಿದಳು.

ಎಲ್ಲರೂ ಒಬ್ಬೊಬ್ಬರಾಗಿ ಸ್ನಾನ ಮಾಡಿ, ಬಿಸಿಬಿಸಿ ದೋಸೆಯನ್ನು ಬೆಣ್ಣೆ ಮತ್ತು ಚಟ್ನಿಯೊಂದಿಗೆ ತಿಂದರು. ಮತ್ತೊಮ್ಮೆ ಎಲ್ಲರೂ ಹರಟುತ್ತಾ ಕುಳಿತರು... ವಿದ್ಯಾ ಗೌತಮನ ಕಿವಿಯಲ್ಲಿ ಉಸುರಿದಳು.

"ಅವತ್ತು ನಂದಿ ಹಿಲ್ಸಿನಲ್ಲಿ ಆಡಿದ್ವಲ್ಲಾ ಆ ಗೇಮ್ ಆಡೋಣ... ಎಲ್ರಿಗೂ ಇಷ್ಟವಾಗುತ್ತೆ." ಗೌತಮ ದಿನೇಶನ ಕಡೆ ನೋಡಿ ಕಣ್ಣು ಹೊಡೆದ. ಏನು ಎನ್ನುವಂತೆ ಕಣ್ಣಿನಲ್ಲೇ ಪ್ರಶ್ನಿಸಿದ ದಿನೇಶ.

"ಗಟಗಟ ನೀರು ಕುಡಿಯುವ ಆಟ ಆಡಬೇಕಂತೆ.... ವಿದ್ಯಾದೇವಿ ಅಪೇಕ್ಷೆ ಪಡ್ತಿದಾರೆ." ನಾಟಕೀಯವಾಗಿ ಹೇಳಿದ.

"ಅದಕ್ಕೇನಂತೆ. ಆಡೋಣ. ನಿಯಮ ಎಲ್ರಿಗೂ ಗೊತ್ತಿದ್ರೆ ಸಾಕು.... ಎಲ್ಲಾ ಎಲ್ಲೆಲ್ಲಿದೀರೋ ಅಲ್ಲಲ್ಲೇ ಕುಳಿತು ಆಡಿದ್ರೆ ಸಾಕು...."

"ಅಮ್ಮನ್ನೂ ಸೇರಿಸ್ಕೊಳ್ಳೋಣ...." ವಿದ್ಯಾ ತನ್ನ ಆಸೆಯನ್ನು ವ್ಯಕ್ತಪಡಿಸಿದಳು.

"ಅದಕ್ಕೇನಂತೆ, ನಾನೇ ಹೋಗಿ ದೊಡ್ಡಮ್ಮನ್ನ ಕರ್ಕೊಂಡ್ಬರ್ತೀನಿ" ಎನ್ನುತ್ತಾ ಎದ್ದು ರೂಮಿಗೆ ಹೋದ. ಪ್ರಶಾಂತನ ಬಗ್ಗೆಯೇ ಚಿಂತಿಸುತ್ತಾ ಕುಳಿತಿದ್ದ ಪ್ರೇಮಾ ಹೊರಬರಲು ಒಪ್ಪಲಿಲ್ಲ. ಆದರೆ ಗೌತಮ ಬಿಡಲಿಲ್ಲ. "ಶಾರದಮ್ಮನನ್ನು ಸೇರಿಸ್ಕೊ

ಳ್ಳೋಣ. ತುಂಬಾ ಜನ ಇದ್ದಷ್ಟು ಮಜವಾಗಿರುತ್ತೆ." ಎಂದು ಹೇಳಿ ಅಡುಗೆ ಮನೆಯ ಕಡೆ ಬಂದ.

"ನನಗೀ ಆಟಗೀಟ ಒಂದೂ ತಿಳೀದು... ನೀವು ಹುಡುಗ್ರು ಆಡ್ಕೊಳ್ಳೀ..."

"ಹಾಗಲ್ಲ ಶಾರದಮ್ಮ. ನೀವು ಬಂದ್ರೆ ದೊಡ್ಡಮ್ಮನೂ ಬರ್ತಾರೆ...."

"ಅಡುಗೆ ಮಾಡಬೇಕಲ್ಲ..."

"ಮಾಡಿದ್ರಾಯ್ತು. ಸಾಯಂಕಾಲದವರೆಗೂ ಟೈಮ್ ಇದೆ. ನೀವು ಮಾಡಿ ಕೊಟ್ಟ ದೋಸೆ ಅರಗಬೇಡ್ವೇ.... ಬನ್ನಿ.... ಹಾಗೇ ದೊಡ್ಡಮ್ಮನ್ನ ಕರ್ಕೊಂಡು ಒಂದು ಹೂವಿನ ಬುಟ್ಟಿಯನ್ನು ತಗೊಂಡ್ಬನ್ನಿ."

"ಹೂವಿನ ಬುಟ್ಟಿ ಇಲ್ವಲ್ಲಾ...?"

"ಪರವಾಗಿಲ್ಲ. ಒಂದು ಪ್ಲಾಸ್ಟಿಕ್ ಡಬ್ಬೀನೇ ತಗೊಂಡ್ಬನ್ನಿ." ಎಂದು ಹೇಳಿ ಹೊರಬಂದ. ಸಂತೋಷ ಕಾಗದವನ್ನು ಚಿಕ್ಕ ತುಂಡುಗಳನ್ನಾಗಿ ಹರಿದು, ಪೆನ್ನುಗಳ ನ್ನಿಟ್ಟುಕೊಂಡು ಸಿದ್ಧನಾಗಿದ್ದ. ಎಲ್ಲರೂ ತಮಗೆ ತೋಚಿದ್ದನ್ನು ಬರೆದರು. ಸಂತೋಷ ಈ ಮೊದಲೇ ತನ್ನ ತಮ್ಮ – ತಂಗಿಯರಿಗೆ ತಿಳಿಸಿದ್ದ.

"ಎಂತೆಂಥದ್ದೋ, ಕೆಟ್ಕೆಟ್ಟಾಗಿ ಬರೀಬಾರ್ದು.... ತಮಾಷೆಯಾಗಿರಬೇಕು. ಆದರೆ ಅದರಿಂದ ಇನ್ನೊಬ್ರಿಗೆ ನೋವಾಗುವ ಹಾಗಿರಬಾರದು." ಅಂತ ವಿದ್ಯಾ, ತಾಯಿ ಹಾಗೂ ಶಾರದಮ್ಮನಿಗೆ ಕುಳಿತಲ್ಲಿಗೇ ಹೋಗಿ ಕೊಟ್ಟಳು.

"ರೆಡೀನಾ....?" ಗೌತಮ ಕೇಳಿದ. 'ಹೂಂ' ಒಟ್ಟಿಗೇ ದನಿಗೂಡಿಸಿದರು ಎಲ್ಲರು.

"ದೊಡ್ಡಮ್ಮ.... ಮೊದಲು ಒಂದು ಗಣಪತಿ ಮೇಲೆ ಶ್ಲೋಕ ಹಾಡಿ ಬಿಡಿ.... ಆಟ ಶುರು ಮಾಡೋಣ."

"ನನಗ್ಯಾವ್ದೂ ಬರುಲ್ಲವಲ್ಲಪ್ಪಾ...."

"ಬರದೇ ಏನು? ಅಮ್ಮಂಗೆ ಬರುತ್ತೆ. ನಿಮಗೆ ಬರುಲ್ವಾ...?"

"ಮರೆತುಹೋಗಿದೆ ಕಣೋ.... ನಿಂಗೆ ಬಂದ್ರೇ ನೀನೇ ಹೇಳ್ಬಿಡು...."

"ಇಲ್ಲ ದೊಡ್ಡಮ್ಮ ನೀವು ಹೇಳಲೇ ಬೇಕು.... ನಂಗೊತ್ತು ನಿಮಗೆ ಬರುತ್ತೆ..."

"ಅಮ್ಮ ಹೇಳಮ್ಮ...." ವಿದ್ಯಾ ಕೇಳಿಕೊಂಡಳು. ಪ್ರೇಮಾ ಕಣ್ಣು ಮುಚ್ಚಿ ಕೈ ಜೋಡಿಸಿದಳು. 'ವಕ್ರತುಂಡ ಮಹಾಕಾಯ! ಕೋಟಿ ಸೂರ್ಯ ಸಮಪ್ರಭಾ! ಅವಿಘ್ನಂ ಕುರು ಮೇ ದೇವ ಸರ್ವ ಕಾರ್ಯೇಷು ಸರ್ವದಾ!' ಎಂದು ಸ್ಪಷ್ಟವಾಗಿ ಹೇಳಿದಳು. ಮಕ್ಕಳೆಲ್ಲಾ ಹೇ ಎಂದು ಚಪ್ಪಾಳೆ ತಟ್ಟಿದರು.

"ಸರಿ ದೊಡ್ಡಮ್ಮನಿಂದಲೇ ಪ್ರಾರಂಭ ಮಾಡೋಣ. ದೊಡ್ಡಮ್ಮ ಒಂದು ಚೀಟಿಯನ್ನು ಎತ್ಕೊಳ್ಳಿ, ಅದರಲ್ಲಿ ಏನು ಬರೆದಿದೆಯೋ ಅದನ್ನು ನೀವು ಮಾಡಿ ತೋರಿಸ್ಬೇಕು."

"ಅಯ್ಯೋ ಗ್ರಹಚಾರವೇ... ನನಗೆ ಈ ನಟನೆ ಗಿಟನೆ ಬರುಲ್ಲಪ್ಪಾ."

"ನಿಮಗೆ ಹೇಗೆ ಬರುತ್ತೋ ಹಾಗೆ ಮಾಡಿ.... ಇಲ್ಲಿ ಯಾವ ಸ್ಪರ್ಧೆಯೂ ಇಲ್ಲ. ಮೊದಲು ಏನು ಬರೆದಿದೆ ಅಂತ ಓದಿ...." ನಿಧಾನವಾಗಿ ಓದಿಕೊಂಡಳು. ತುಟಿಯಂಚಿನಲ್ಲಿ ನಸುನಗೆ ಮೂಡಿತು.

"ನಾನೆಂದೂ ಈ ಕೆಲ್ಸಾನ ಮಾಡೇ ಇಲ್ವಲ್ಲ.... ಏ.... ಶ್ರೀಕರ ಬಾರೋ ಇಲ್ಲಿ" ಎಂದು ಕರೆದಳು.

"ಇಲ್ಲಿ ಕೂತ್ಕೋ.... ಈಗ ನಾನು ಹೇಳಿದ್ಹಾಗೇ ಹೇಳ್ಬೇಕು ನೀನು... ಅ, ಆ....ಇ ಈ... ಹುಂ. ಹೇಳು...."

ಶ್ರೀಕರ ನಗುತ್ತಾ ತಾಯಿ ಹೇಳಿಕೊಟ್ಟದ್ದನ್ನು ಹೇಳಿದ. "ನಾನು ಮಕ್ಕಳಿಗೆಂದೂ ಪಾಠ ಹೇಳಿಕೊಡ್ಲೇ ಇಲ್ಲ. ಇವತ್ತು ಆ ಕೆಲ್ಸ ಮಾಡ್ದೆ...."

"ಶಾರದಮ್ಮ ಈಗ ನಿಮ್ಮ ಸರದಿ... ತಗೊಳ್ಳಿ ಚೀಟಿ. ಬಿಡಿಸಿ ಓದಿ.."

"ಅಯ್ಯೋ ಮಾರಾಯ ನಾನೇನು ಬಲ್ಲೆ! ನಾನೇನ್ಮಾಡ್ಬೇಕೂಂತ ನೀನೇ ಹೇಳ್ಬಿಡು."

"ಇದ್ರಲ್ಲಿ ಬರೆದಿದೆ... ನೀವು ಭತ್ತ ಕುಟ್ಬೇಕು ಅಂತ..."

"ಅಯ್ಯೋ ಶಿವನೇ... ಒರಳೆಲ್ಲಿಂದ ತರ್ಲಿ....? ಒರಳೇನೋ ಅಡುಗೆ ಮನೇಲಿದೆ. ಒನಕೇಗೇನ್ಮಾಡೋದು?"

"ಕೈಯಲ್ಲಿ ಸುಮ್ನೇ ಮಾಡಿ ತೋರಿಸ್ಸಿ ಶಾರದಮ್ಮ..... ಇದು ಬರೀ ಆಟ...."

"ಸರಿಯಪ್ಪಾ.... ಹೀಗೇ ಕುಟ್ಟೇಕು...." ಎನ್ನುತ್ತಾ ಕೈಯಲ್ಲಿ ಒನಕೆಯನ್ನು ಒಂದೇ ಗತಿಯಲ್ಲಿ ಒರಳಿಗೆ ಬೀಳಿಸುವಂತೆ ನಟಿಸಿ, ಬಾಯಲ್ಲಿ ಉಸ್ ಉಸ್ ಎಂದು ಲಯಬದ್ಧವಾಗಿ ಹೇಳಿದಾಗ ಎಲ್ಲರೂ ಚಪ್ಪಾಳೆ ತಟ್ಟಿದರು.

"ನಿಮಗೊಂದು ಲಾವಣಿ ಬಂದ್ರೆ ಹಾಡಿ ಶಾರದಮ್ಮ" ಪ್ರೇಮಾ ಹೇಳಿದಳು.

"ಬರ್ತಿದ್ದ ಹಾಡೆಲ್ಲಾ ಹೇಳ್ದೇ ಹೇಳ್ದೇ ಮರೆತುಹೋಗಿದೆ. ನಾನಿನ್ನು ಬರ್ಲಾ... ಕುಕ್ಕರ್ ಕೂಗ್ತಿದೆ..."

"ಕುಕ್ಕರನ್ನ ಆರಿಸ್ಬಿಟ್ಟು ಬನ್ನಿ. ನಿಧಾನವಾಗಿ ಅಡುಗೆ ಮಾಡಿದ್ರಾಯ್ತು.."

"ನೆಕ್ಸ್ಟ್.... ಸಂತೋಷ.... ನೀನೇನ್ಮಾಡ್ತೀಯಪ್ಪಾ....?"

"ಪಾಲಿಗೆ ಬಂದದ್ದು ಪಂಚಾಮೃತ. ಅದರಲ್ಲಿ ಏನು ಬರೆದಿದೆಯೋ ಅದು..." ಎಂದು ಹೇಳಿ ಓದಿ, ಥೂ ಎಂದು ಚೀಟಿಯನ್ನು ಹರಿದ.

"ಯಾಕೋ ಹರಿದೆ? ಅದರಲ್ಲೇನಿತ್ತು?"

"ನಾನು ಲಾಯರ್ ತರಹ ವಾದ ಮಾಡ್ಬೇಕಂತೆ... ನನಗಿಷ್ಟವಿಲ್ಲ. ಬೇರೆ ಚೀಟಿ ಕೊಡು..."

"ಸರಿ ಹಾಗಾದ್ರೆ, ನಿನ್ನ ಪರವಾಗಿ ಈಗ ನಾನು ಲಾಯರ್ರಾಗ್ತೀನಿ. ಆದರೆ,

ಆಮೇಲೆ ನನ್ನ ಪರವಾಗಿ ಬಂದದನ್ನು ಬಾಯ್ಮುಚ್ಕೊಂಡು ಮಾಡ್ಬೇಕು."

"ಇದು ಮೋಸ... ಮೋಸ" ಚಿನ್ಮಯೀ, ನಳಿನಿ ಕೂಗಿಕೊಂಡರು.

"ಲಾಯರ್ ವೇಷ ಯಾರೂ ಹಾಕೋದ್ಬೇಡ. ಬೇರೆ ಏನಾದ್ರೂ ಬರೆದು ಕೊಡಿ."

"ದೊಡ್ಡಮ್ಮ ನೀವೇ ಬರೆದು ಕೊಡಿ...." ಎನ್ನುತ್ತಾ ಮತ್ತೊಂದು ಖಾಲಿ ಚೀಟಿಯನ್ನು ಕೊಟ್ಟ.

"ಬರೆಯೋದೇನು ಬೇಡ.... ನಾನು ಬಾಯಲ್ಲೇ ಹೇಳ್ತೀನಿ. ಅವನು ಮಾಡ್ಲೀ... ಒಂದು ಪಲ್ಟಿ ಹೊಡಿ ನೋಡೋಣ."

"ಪರ್ವಾಗಿಲ್ಲ ದೊಡ್ಡಮ್ಮ ನೀವೂನು.... ಎಲ್ಲಿ ಪಲ್ಟಿ ಹೊಡಿ ಮರೀ..."

"ನನ್ನ ಸೊಂಟ ಮುರಿದ್ಹೋದ್ರೇ ನೀವೇ ನೋಡ್ಕೋಬೇಕಾಗುತ್ತೆ." ಎನ್ನುತ್ತಾ ಹಾಸಿದ ಜಮಖಾನದ ಮೇಲೆ ಪಲ್ಟಿ ಹೊಡೆದ.

"ಗುಡ್, ವೆರಿಗುಡ್.... ಈಗ ಚೆನ್ನು.... ನೀನು ಏನ್ಮಾಡ್ತೀಯಮ್ಮಾ....?"

"ತಡಿ. ಏನು ಬರೆದಿದೆ ಅಂತ ನೋಡ್ತೀನಿ..." ಎನ್ನುತ್ತಾ ಕೈ ಮುಗಿದು ನಿಂತು "ಸ್ವಾಮಿ ದೇವನೇ ಲೋಕಪಾಲನೇ ತೇ ನಮೋಸ್ತು ನಮೋಸ್ತುತೇ" ಎಂದು ರಾಗವಾಗಿ ಹಾಡಿದಳು. ವಿದ್ಯಾ ಬಂದು ಅವಳ ಬೆನ್ನು ತಟ್ಟಿದಳು. ಅವಳು ಸ್ಕೂಲಿನ ಪ್ರಾರ್ಥನಾ ಗೀತೆಯನ್ನು ಹಾಡಬೇಕಿತ್ತು.

ಶ್ರೀಕರ ತನ್ನ ಚೀಟಿಯನ್ನೆತ್ತಿಕೊಂಡ. ಕೈಯಲ್ಲಿ ಒಂದು ಬಟ್ಟಲನ್ನು ಹಿಡಿದು ಕೊಂಡು, "ಮಿಯಾಂ... ಮಿಯಾಂ...." ಎನ್ನುತ್ತಾ ಬಟ್ಟಲನ್ನು ನೆಕ್ಕಿದ.

"ಏಯ್ ಪುಸ್ಸೀ.... ಪುಸ್ಸೀ.... ಹೋಗು ಹೋಗು....." ಚಿನ್ಮಯೀ ಅಟ್ಟಿದಳು.

"ಈಗ ಮೈ ಡಿಯರ್ ದಿನೇಶ್.... ನಿಮ್ಮ ಸರದಿ.... ನಿಮ್ಮ ಆಯ್ಕೆ ಏನು....?"

"ತಡಿ ತಡಿ...." ಎನ್ನುತ್ತಾ ಕಿಟ್ ಬ್ಯಾಗಿನಿಂದ, ಕ್ಯಾಮೆರಾ ತೆಗೆದು, ಫ್ಲಾಷ್ ಜೋಡಿಸಿಕೊಂಡು, ಕುಳಿತಿದ್ದವರೆಲ್ಲರ ಫೋಟೋ ತೆಗೆದ.

"ಏಯ್.. ಏನ್ಮಾಡ್ತಿದೀಯೋ.... ಈಗ್ಯಾಕೋ ಫೋಟೋ..."

"ಅದರಲ್ಲೇನಿದೆಯೋ..... ಅದನ್ನೇ ಮಾಡಿದ್ದು." ದಿನೇಶ ತನ್ನನ್ನು ತಾನು ಸಮರ್ಥಿಸಿಕೊಂಡು ಹೇಳಿದ.

* * *

ಅಧ್ಯಾಯ-ಹದಿನಾಲ್ಕು

"ಈಗ ಪುಸ್ಸೀ ಡಿಯರ್... ನೀವು" ಎನ್ನುತ್ತಾ ಚೀಟಿಯನ್ನು ಬಿಡಿಸಿ ಮುಂದೆ ಹಿಡಿದ ಶ್ರೀಕರ. ಮೊದಲಿಗೆ ಅವಳು ಕೆಟ್ಟ ಮುಖ ಮಾಡಿದಳು.

"ಕಮಾನ್... ಪುಸ್ಸೀ...." ಎಂದ ಗೌತಮ. ಅವಳು "ಭೌ ಭೌ" ಎಂದು ಬೊಗಳಿದಾಗ ಎಲ್ಲರೂ ಬೆಚ್ಚಿದರು. ಅವಳು ಮುಖ ಮುಚ್ಚಿ ಕುಳಿತಳು.

"ಯಾರೋ ನಾಯಿಯಂತೆ ಬೊಗಳಬೇಕು ಅಂತ ಬರೆದಿದಾರೆ. ಪಾಪ ಇನ್ನೇನ್ಮಾಡ್ತಾಳೆ..." ಗೌತಮ ಅವಳ ಬೆನ್ನನ್ನು ಸವರಿದ.

"ಇನ್ಯಾರು? ಈ ದರಿದ್ರ ಶ್ರೀಕರ...."

"ಬೈದ್ರೆ ನೋಡು ನಿಮ್ಮ ಟೀಚರ್ಸ್ ಹತ್ರ ಹೇಳ್ತೀನಿ.... ನಾನೇನೂ ಬರೆದಿರ್ಲಿಲ್ಲ. ನೋಡು ಅದು ನನ್ನ ಅಕ್ಷರಾನಾ ಅಂತ...."

"ಇರಲಿ ಬಿಡೆ ಪುಸ್ಸೀ. ಅವನು 'ಮಿಯಾಂ' ಅಂತಂದ. ನೀನು ಭೌ ಭೌ ಎಂದೆ. ಮತ್ಯಾಕೆ ನಾಯಿ – ಬೆಕ್ಕುಗಳ ಥರ ಜಗಳ ಆಡ್ತೀರಿ..."

"ಹಾಗಾದ್ರೆ ನೀನಾ.... ಪುಸ್ಸೀ ಥರ ಮಿಯಾಂ ಅಂತ ಹಾಲು ಕುಡೀಬೇಕೂಂತ ಬರ್ದದ್ದು.... ನಾನು ಖಂಡಿತಾ ನಿನ್ನ ಟೀಚರ್ ಹತ್ರ ಹೇಳೇ ಹೇಳ್ತೀನಿ...."

"ಶ್ರೀಕರ ಸುಮ್ನೆ ಕೂತ್ಕೋ... ಆಟ ಆಡುವಾಗ ಯಾರಾದ್ರೂ ಜಗಳ ಆಡ್ತಾರಾ?"

"ಅಷ್ಟು ಗೊತ್ತಾಗುಲ್ಲ ಈ ಬೆಕ್ಕಿಗೆ" ಎನ್ನುತ್ತಾ ತಾಯಿಯ ಬಳಿ ಹೋಗಿ ಕುಳಿತ.

"ಇನ್ನು ಸಾಕು ಈ ಆಟ.... ನೀವೆಲ್ಲಾ ಹೀಗೆ ಕಚ್ಚಾಡ್ತೀರಿ ಅಂತ ಗೊತ್ತಿದ್ದಿದ್ರೆ ನಾನು ಗೌತಮನ ಹತ್ರ ಹೇಳ್ತಾನೇ ಇರ್ಲಿಲ್ಲ..."

"ಹ್ಞಾಂ.... ಅಮ್ಮಣ್ಣೀ... ನಿಮ್ಮ ಸರದಿ ಇನ್ನೂ ಮುಗಿದಿಲ್ಲ.... ಆಟ ಹೇಗೆ ಸಾಕು ಮಾಡೋಕಾಗುತ್ತೆ...."

"ನೀನೂ ಉಳಕೊಂಡಿದೀಯಲ್ಲ...."

"ನಾನು, ನನಗೆ ಏನೇ ಪಾರ್ಟು ಸಿಕ್ಕಿದರೂ ಮಾಡ್ತೀನಿ.... ಈಗ ನೀನು ಮಾಡು...." ದಿನೇಶ ಅವಳನ್ನೇ ನೋಡ್ತಿದ್ದ. ಸಣ್ಣ ಬೆವರಿನ ಹನಿಗಳು ಮುಂಗುರುಳು ಗಳನ್ನು ತೋಯಿಸಿದ್ದವು. ಅವನ ಕಡೆ ಕಳ್ಳ ನೋಟ ಬೀರಿದಳು. ಅವನು ಕಣ್ಣು ಹೊಡೆದ. ಅವಳು ಬೆಚ್ಚಿ ಚೀಟಿಯನ್ನು ಬೀಳಿಸಿಬಿಟ್ಟಳು. ದಿನೇಶ ಅದನ್ನೆತ್ತಿಕೊಂಡ.

ಅವನೆಲ್ಲಿ ಓದಿ ಬಿಡುವನೋ ಎಂದು ಆತುರದಲ್ಲಿ ಅವನ ಕೈಯಿಂದ ಚೀಟಿಯನ್ನು ಕಿತ್ತುಕೊಳ್ಳಲು ನೋಡಿದಳು. ಅರ್ಧ ಚೀಟಿ ಕಿತ್ತು ಬಂತು. ಅವನು ಅಣಕಿಸುವಂತೆ ನಕ್ಕ.

"ಇದರಲ್ಲಿ ಏನೂ ಬರೆದೇ ಇಲ್ಲ. ಖಾಲಿ ಇದೆ...." ಚಪ್ಪಾಳೆ ತಟ್ಟಿ ನುಡಿದಳು.

"ಇದರಲ್ಲಿ ಬರೆದಿದೆ" ತನ್ನ ಕೈಯಲ್ಲಿದ್ದ ಉಳಿದರ್ಧ ಬಾಗವನ್ನು ತೋರಿಸಿದ. ಎಲ್ಲರಿಗೂ ಕುತೂಹಲ.... "ಏನ್ಬರ್ದಿದೆ.... ಏನ್ಬರ್ದಿದೆ?" ದಿನೇಶನನ್ನು ಸುತ್ತುವರಿದರು... ದಿನೇಶ ಸುಕ್ಕುಸುಕ್ಕಾಗಿದ್ದ ಚೀಟಿಯನ್ನು ಬಿಡಿಸಿ ಓದಿದ.....

"ಎಲ್ಲರಿಗೂ ಹಣ್ಣನ್ನು ಹೆಚ್ಚಿ, ಹೋಳುಗಳನ್ನು ಸಮನಾಗಿ ಹಂಚಬೇಕು." ಅಂತ ಬರೆದಿತ್ತು.

"ಇದ್ಯಾರು ಬರೆದಿದ್ದು! ನಿಜ ಹೇಳಿ...." ದಿನೇಶ ಕಿಸಿಕಿಸಿ ನಕ್ಕ....

"ಯಾರು ಬರೆದಿದ್ರೇನು? ಈಗ ಹಣ್ಣು ಹೆಚ್ಚಿ ಕೊಡಿ.... ಇಲ್ಲದಿದ್ರೆ ಗಟಗಟ ಅಂತ ನೀರು ಕುಡಿದ್ಬಿಡಿ."

"ಸರಿ. ಇಲ್ಲಿ ಸೇಬಿನ ಹಣ್ಣುಗಳಿವೆ. ಎಲ್ರಿಗೂ ಎರಡೆರಡು ಹೋಳು ಹೆಚ್ಚಿ ಕೊಡ್ತೀನಿ. ಅದ್ಯಾವ ಮಹಾ ಕಷ್ಟದ ಕೆಲಸ....!" ಎನ್ನುತ್ತಾ ಆವೇಶ ಬಂದವಳಂತೆ ಹಣ್ಣನ್ನು ಕೊಯ್ದಳು. ಎಲ್ಲರಿಗೂ ಹೋಳುಗಳನ್ನು ಹಂಚಿದಳು. ಯಾಕೋ ಏನೋ ಆಟ ಅವತ್ತಿನಷ್ಟು ಮಜವಾಗಿಲ್ಲ ಅಂತೆನ್ನಿಸಿತು. ಆದರೂ ಸಮಯ ಚೆನ್ನಾಗಿ ಕಳೆದಿತ್ತು.

"ಗೌತಮ್.... ಈಗ ನಿನ್ನ ಸರದಿ.... ನಿನ್ನ ಕೆಲ್ಸ ಏನು...?"

"ಒಂದು ಭಾವಗೀತೆ ಹಾಡ್ಬೇಕು ಅಂತ ಇದೆ. ಏನ್ಹಾಡ್ಲೀ... ನನ್ನದು ಕೋಗಿಲೆ ಕಂಠ ಅಲ್ಲ. ನಮ್ಮ ಮನೆ ಲತಾ ಮಂಗೇಶ್ಕರ್ ಇಲ್ಲಿಲ್ಲ.... ಯಾವ್ದು ಹೇಳ್ಲೋ ದಿನೇಶ...?"

"ನಿನಗ್ಯಾವ ಹಾಡು ಬರುತ್ತೆ ಅಂತ ನನಗೇನು ಗೊತ್ತು....?"

"ಹ್ಞಾಂ.... ಬಂತು. ಜ್ಞಾಪ್ಕ ಬಂತು.... ಕಾದಿರುವಳು ಶಬರಿ ರಾಮ ಬರುವನೆಂದೂ, ತನ್ನ ಪೂಜೆಗೊಳುವನೆಂದು...." ಯಾವುದೋ ಪಠ್ಯ ಪುಸ್ತಕದಲ್ಲಿದ್ದ ಕವನದ ಸಾಲುಗಳನ್ನು ತನ್ನದೇ ಆದ ರಾಗದಲ್ಲಿ ಹಾಡಿದ. ಮತ್ತೊಮ್ಮೆ ಎಲ್ಲರೂ ಚಪ್ಪಾಳೆ ತಟ್ಟಿದರು.

"ಏನ್ರೀ ಶಬರೀ.... ಈ ರಾಮರಿಗೆ ಹಣ್ಣನ್ನೇ ಕೊಡ್ಲಿಲ್ಲ ನೀವು...." ದಿನೇಶ ಗೇಲಿ ಮಾಡಿದ. ವಿದ್ಯಾಳ ಬಳಿ ಬಂದು ನಿಂತಿದ್ದ.

"ಕೊಟ್ನಲ್ಲ. ಸುಳ್ಳು ಹೇಳ್ತಿದೀರಾ ನೀವು...." ಗಲಿಬಿಲಿಯಿಂದ ನುಡಿದಳು.

"ಸುಳ್ಳೂ! ಅದೂ ಅಡ್ವೊಕೇಟರ ಮನೆಯಲ್ಲಿ....?" ನಗುತ್ತಾ ನುಡಿದ.

"ನಿಜ ಹೇಳ್ತಿದೀರಾ....?" ಅನುಮಾನದಿಂದ ಕೇಳಿದಳು.

"ನಾನು ಯಾವಾಗ್ಲೂ ನಿಜಾನೇ ಹೇಳೋದು.... ಹೋಗ್ಲೀಬಿಡಿ.... ಹಣ್ಣನ್ನು

ಆಮೇಲೆ ಇಸ್ಕೋತೀನಿ.... ಮೊದಲು ಇದರಲ್ಲಿ ಏನು ಬರೆದಿದೆಯೋ.... ಅದನ್ನು ಓದಿ ಬಿಡಿ..."

"ಐ ಲವ್ ಯೂ.... ಅಂತ.... ಇದೆಲ್ಲಾ ಏನು ತಮಾಷೆ ದಿನೇಶ್... ಯಾರಾದ್ರೂ ಕೇಳಿಸ್ಕೊಂಡ್ರೆ.....?"

"ಇಲ್ಲಿರೋರೆಲ್ಲಾ ನಮ್ಮವರೇ.... ಯಾರ್ಗೂ ಹೆದರಬೇಕಾಗಿಲ್ಲ. ನಾನು ಎಷ್ಟು ಸಲ ಬೇಕಾದ್ರೂ ಓದ್ತೀನಿ. ಐ ಲವ್ ಯೂ ಅಂತ.... ನೀವು ಇನ್ನೊಂದು ಸಾರಿ ಓದಿ ಬಿಡಿ...."

"ನನಗೀಗ ಟೈಮ್ ಇಲ್ಲ...."

"ಸರಿ ಬಿಡಿ. ನಿಮ್ಮಿಷ್ಟ ಏನೂಂತ ನನಗೀಗ ತಿಳೀತು. ಬಾ, ಮಾತಾಡ್ಬೇಕು ಅಂತ ಲೆಟರ್ ಬರೆದಿದ್ರಲ್ಲ. ಅದನ್ನಾದ್ರೂ ಹೇಳ್ತೀರಾ?"

"ಮೊದ್ಲು ಊಟ.... ಆಮೇಲೆ ಮಾತಾಡೋಣ..."

"ಆಟ, ಊಟ ಆಗಲಿ. ಆಮೇಲೆ ಪಾಠಾನಾ....?" ವಿದ್ಯಾ ಅವನಿಗೆ ಉತ್ತರಿಸದೇ ಹೊರಟು ಹೋಗಿದ್ದಳು. ಗೌತಮ ಹತ್ತಿರಕ್ಕೆ ಬಂದ.

"ಏನ್ಮಾತಾಡ್ತೀದ್ಯೋ..... ಏನ್ಹೇಳಿದ್ಲು ವಿದ್ಯಾ......?"

"ನಿನ್ನ ಕಸಿನ್ನಿಗೆ ಜಂಭ.... ಸುಮ್ನೇ ಸತಾಯಿಸ್ತಾರೆ.... ಮಾತಾಡ್ಬೇಕು, ಬನ್ನಿ ಅಂತ ಲೆಟರ್ ಬರೆದು.... ಈಗ ಕೇಳಿದ್ರೆ... ಆಮೇಲೆ ಅಂತ.... ಇಲ್ಲಿ ಈ ಮನೇಲಿ ಎಲ್ರ ಮಧ್ಯೆ ಕೂತ್ಕೊಂಡು ಏನ್ಮಾತಾಡೋದು....! ಸ್ಕೂಲಿಗ್ಬೇರೆ ರಜ ಹಾಕಿದಾರೆ..... ಸಾಯಂಕಾಲದೊಳಗೆ ಮಾತು ಮುಗಿಸ್ಬೇಕು.... ಆ ಲಾಯರ್ರು ಬೇರೆ ಯಾವಾಗ ಬಂಧ್ಬು ಬಿಡ್ತಾರೋ...."

"ತಡಿ... ನಾನು ಸಂತೋಷನ ಹತ್ರ ಮಾತಾಡಿ, ನೀವಿಬ್ರೇ ಕೂತು ಮಾತಾಡೋಕೆ ಏನಾದ್ರೂ ಅರೇಂಜ್ ಮಾಡ್ತೀನಿ... ಅಪ್ಸೆಟ್ ಆಗ್ಬೇಡ...."

"ಅಪ್ಸೆಟ್ ಏನಿಲ್ಲ. ಏನೋ ಟೆನ್ಶನ್..."

"ಟೆನ್ಶನ್ ಯಾಕೋ..... ಅವಳು ಖುಶಿಯಾಗೇ ಇದಾಳಲ್ಲೋ."

"ಏನಾದ್ರೂ ಬೇಕಿತ್ತಾ?" ಸಂತೋಷ ಬಂದು ಕೇಳಿದ.

"ನಾನು ನಿನ್ನ ಹತ್ರ ಸ್ವಲ್ಪ ಮಾತಾಡ್ಬೇಕು ಬಾ" ಎನ್ನುತ್ತಾ ಅವನ ಜತೆ ಮಹಡಿಯ ರೂಮಿಗೆ ಹೋದ ಗೌತಮ. ದಿನೇಶ ಅಲ್ಲೇ ಓಡಾಡುತ್ತಿದ್ದ ಚಿನ್ಮಯಿಯನ್ನು ಕರೆದು ಮಾತನಾಡಿಸಬೇಕೆಂದುಕೊಂಡರೂ ಸುಮ್ಮನಾದ. ಪುಸ್ಸಿಯೊಡನೆ ಮಾತ ನಾಡುವ ಮನಸ್ಸಾಗಲಿಲ್ಲ. ಸೋಫಾದ ಮೇಲೆ ಕುಳಿತು ಕಣ್ಣುಗಳನ್ನು ಮುಚ್ಚಿಕೊಂಡ.

ವಿದ್ಯಾಳನ್ನು ಮದುವೆಯಾದರೆ, ಈ ಮನೆಗೆ ಆಗಾಗ ಬರಬೇಕು, ಈ ಸೈನ್ಯದೊಂದಿಗೆ ಕುಳಿತು ಆಟ ಆಡಬೇಕು.... ಇದೆಲ್ಲಾ ನನ್ನಿಂದ ಸಾಧ್ಯವಿಲ್ಲ ಅಂತ

ವಿದ್ಯಾಳಿಗೆ ಹೇಳಿ ಬಿಡ್ತೀನಿ ಅಂತಂದುಕೊಂಡು ಕಣ್ಣುಗಳನ್ನು ಬಿಟ್ಟ. ಎದುರಿಗೆ ವಿದ್ಯಾ ನಿಂತಿದ್ದಳು. ಕಣ್ಣುಗಳನ್ನು ಉಜ್ಜಿಕೊಂಡು ಮತ್ತೊಮ್ಮೆ ನೋಡಿದ. ಹೌದು ಅವಳೇ....

"ಏನೋ ಕರೆದ್ರಂತೆ.... ಸಂತೋಷ ಹೇಳ್ದ.... ಏನ್ಬೇಕಾಗಿತ್ತು?"

"ಸ್ವಲ್ಪ ಕುಡಿಯೋಕೆ ನೀರು ಬೇಕಾಗಿತ್ತು. ದೋಸೆ ತಿಂದದ್ದು ವಿಪರೀತ ಬಾಯಾರಿಕೆ..."

"ಇಲ್ಲೇ ಇದೆ ತಗೊಳ್ಳಿ..." ಎನ್ನುತ್ತಾ ಲೋಟಕ್ಕೆ ನೀರನ್ನು ಬಗ್ಗಿಸಿಕೊಟ್ಟಳು. ಸ್ವಲ್ಪ ಕುಡಿದ. ಸ್ವಲ್ಪ ತಣ್ಣಗಾದ. ವಿದ್ಯಾ ಅಲ್ಲೇ ಇದ್ದ ಕುರ್ಚಿಯ ಮೇಲೆ ಕುಳಿತಳು. ದಿನೇಶ ಉತ್ಸಾಹಗೊಂಡ.

"ನನ್ನ ಲೆಟರಿಗೆ ಹಾಗಾ ಉತ್ತರ ಬರೆಯೋದು? ಅಲ್ಲದೆ ಅಡ್ರೆಸ್ ಬೇರೆ ಅದಲು ಬದಲು. ನಂಗೆ ಬರ್ದ ಲೆಟರ್ರು ಅತ್ತೆಯ ಹೆಸ್ರಿಗೆ ಹೋಯ್ತು...."

"ಹೌದಾ? ಎಲ್ಲೋ ತಪ್ಪಾಯಿತೂಂತ ಕಾಣುತ್ತೆ."

"ಅದೇ ಯಾಕೇಂತ ನಂಗೊತ್ತಾಗ್ಬೇಕು...."

"ಏನೋ ಮನಸ್ಸೇ ಸರಿಯಾಗಿಲ್ಲ. ಈ ಕಿಶೋರ ನನ್ನ ತಲೆ ತಿಂತಿದಾನೆ.."

"ಕಿಶೋರನ ಸುದ್ದೀನ ಕೇಳುಕ್ಕೆ ನಾನಿಲ್ಲಿಗೆ ಬಂದಿಲ್ಲ. ನಿಮ್ಮ ಸುದ್ದಿ ಹೇಳಿ... ನಿಮ್ತಂದೆ, ನಿಮ್ಗೆ ಬೇರೆ ಗಂಡು ನೋಡ್ತಿದಾರಂತೆ.... ಹಾಗಂತ ಸುದ್ದಿ.... ಈಗ್ಲಾದ್ರೂ ನಿಮ್ಮ ಮನಸ್ನಲ್ಲೇನಿದೆ ಅಂತ ಹೇಳ್ಬಾರ್ದಾ...?"

"ಹೇಳ್ತೀನಿ. ಅದಕ್ಕೇ ಬನ್ನಿ ಅಂತ ಬರ್ದದ್ದು... ನಾನೊಂದು ಫಜೀತಿಗೆ ಸಿಕ್ಕಿ ಬಿದ್ಬಿಟ್ಟಿದ್ದೀನಿ....."

"ಫಜೀತಿನ? ಏನದು....?" ಹೊರಗ್ನಿಂದ ಯಾರೋ

"ಸಾರ್... ಸಾರ್..." ಅಂತ ಕರೆದದ್ದು ಕೇಳಿಸಿತ್ತು. ವಿದ್ಯಾ ಎದ್ದು ಹೊರ ಬಂದಳು. ಹೊರಗೆ ಪೋಸ್ಟ್ ಮ್ಯಾನ್ ನಿಂತಿದ್ದ. "ಒಂದು ರಿಜಿಸ್ಟರ್ಡ ಪೋಸ್ಟ್ ಇದೆ. ಪ್ರೇಮಾ ಅನ್ನೋರು ಯಾರು....?"

"ಪ್ರೇಮಾ ನಮ್ಮ ತಾಯಿ. ಇಲ್ಲಿ ಕೊಡಿ. ಸೈನ್ ಮಾಡಿಸ್ಕೊಂಡು ಬರ್ತೀನಿ." ವಿದ್ಯಾ ಅವನು ಕೊಟ್ಟ ಪೇಪರುಗಳಿಗೆ ತಾಯಿಯ ಸೈನ್ ಮಾಡಿಸ್ಕೊಂಡು ಬಂದಳು. ಪ್ರೇಮಾ ಸಹ ಎದ್ದು ಬಂದಿದ್ದಳು. ವಿದ್ಯಾ ಆ ಕವರನ್ನು ಒಡೆದು ಓದಿದಳು. ಮುಖ ಅಗಲವಾಗಿತ್ತು.

"ಯಾರದ್ದೇ ಕಾಗ್ದ ವಿದ್ಯಾ....?"

"ಪ್ರಶಾಂತನದ್ದಮ್ಮ.... ನಿನಗೆ ಬರ್ದಿದಾನೆ...."

ಪ್ರೇಮಾ ಗೋಡೆಗೆ ಒರಗಿ ನಿಂತಳು. ಇದ್ದಕ್ಕಿದ್ದಂತೆ ಮನೆಯ ವಾತಾವರಣ ಬದಲಾಯಿತು.... ಪ್ರೇಮಾ ಕಾಗದವನ್ನು ಕೈಗೆತ್ತಿಕೊಂಡು ತನ್ನ ರೂಮಿಗೆ ಹೋದಳು.

'ಅಮ್ಮನಿಗೆ ನಮಸ್ಕಾರಗಳು. ನಾನು ಕ್ಷೇಮವಾಗಿದೀನಿ. ಇದರೊಂದಿಗೆ, ನನ್ನ ಮೊದಲ ಸಂಬಳದಲ್ಲಿನ ಸ್ವಲ್ಪ ಹಣವನ್ನು ನಿನಗಾಗಿ ಕಳಿಸುತ್ತಿದ್ದೇನೆ... ಮತ್ತೆ ಯಾವಾಗ್ಲಾದ್ರೂ ಪತ್ರ ಬರೀತೀನಿ....' ಇಷ್ಟೇ ಅದರಲ್ಲಿ ಬರೆದಿದ್ದುದ್ದು. ಜತೆಗೆ, ಐನೂರು ರೂಪಾಯಿಗಳಿಗೆ ಒಂದು ಚೆಕ್. ಪ್ರೇಮಾ ಕಾಗದವನ್ನು ಎದೆಗೊತ್ತಿಕೊಂಡು ಹಾಗೇ ನಿಂತಿದ್ದಳು. ಒಳ ಬಂದ ವಿದ್ಯಾ ತಾಯಿಯ ಬಳಿ ಕುಳಿತು ಮತ್ತೊಮ್ಮೆ ಪತ್ರವನ್ನು ಓದಿದಳು.

"ಎಲ್ಲಿದೀನಿ, ಹೇಗಿದೀನಿ ಅಂತ ಒಂದನ್ನೂ ಬರೆದಿಲ್ವಲ್ಲೇ..." ತಾಯಿ ಅತ್ತಳು.

"ಬೆಂಗ್ಳೂರಲ್ಲೇ ಎಲ್ಲೋ ಇದಾನಮ್ಮ.... ಈಗ ಪತ್ರ ಬರ್ದಿದಾನೆ... ಮುಂದೆಂದಾದ್ರೂ ತಾನೇ ಮನೆಗೆ ಬರ್ತಾನೆ.... ಅಂತೂ ಮನೆಯವರನ್ನು ಮರೆತಿಲ್ಲವಲ್ಲ...."

ದಿನೇಶ ಒಳಗೊಳಗೇ ಚಡಪಡಿಸುತ್ತಿದ್ದ. ತಾನು ಪೂರ್ತಿ ಮಾತನಾಡಲಾಗಲಿಲ್ಲ. ನಿಮಿಷ ನಿಮಿಷಕ್ಕೂ ಸಮಯ ಕಳೆದು ಹೋಗ್ತಿದೆ... ಇವಳಪ್ಪ ಬಂದ್ರೆ ತಾನು ಮೊದಲು ಇಲ್ಲಿಂದ ಓಡ್ಬೇಕಾಗುತ್ತೆ... ಈ ಮನೇಲಿ ಒಂದು ವಾರಪತ್ರಿಕೆ ಇಲ್ಲ. ಕಥೆ ಪುಸ್ತಕ ಇಲ್ಲ. ಈ ಗೌತಮ ಎಲ್ಲಿ ಹೋದ್ನೋ...?

ಅಷ್ಟರಲ್ಲಿ ವಿದ್ಯಾ ಹೊರಕ್ಕೆ ಬಂದಿದ್ದಳು. "ನಾನು ನಿಮ್ಮನೇನೇ ನೋಡಿಲ್ಲ. ನಂಗೆ ನಿಮ್ಮನೇನ ತೋರಿಸುಲ್ವಾ?" ದಿನೇಶ ಅಸಹನೆಯಿಂದ ಪ್ರಶ್ನಿಸಿದ.

"ನೋಡೋಕೆ ವಿಶೇಷವಾದದ್ದು ಏನೂ ಇಲ್ಲ. ಬನ್ನಿ ನೋಡೋರಂತೆ...."

ದಿನೇಶ ಎರಡೂ ಜೇಬುಗಳಲ್ಲಿ ಕೈಗಳನ್ನು ತೂರಿಸಿ, ಅವಳ ಹಿಂದೆ ನಡೆದ. ಬೆನ್ನ ಮೇಲೆ ತೂಗಾಡುವ ಜಡೆಯನ್ನೇ ನೋಡಿದ. ಫೋಟೋ ನೆನಪಾಗಿತ್ತು. ತುಂಟತನದಿಂದ ಜಡೆಯನ್ನು ಎಳೆಯುವ ಮನಸ್ಸಾಗಿತ್ತು... ವಿದ್ಯಾಳ ಹಿಂದೆ ಹಿಂದೆ ಮನೆಯೊಳಗೆಲ್ಲಾ ತಿರುಗಿದ...

ಹಳೆಯ ಶೈಲಿಯ ಮನೆ, ವಿಶಾಲವಾಗಿತ್ತು. ದಿನೇಶ ಮೆಚ್ಚುಗೆಯನ್ನು ಸೂಸಿದ. ಮಹಡಿಯ ಮೇಲೆ ಗೌತಮ, ಸಂತೋಷ ಏನೋ ಹರಟುತ್ತಿದ್ದರು. ಉಳಿದವರು ಸುತ್ತುವರಿದು ಕುಳಿತಿದ್ದರು. ತಾನು ಹಿಂದೊಮ್ಮೆ.... ಒಂದು ರಾತ್ರಿಯನ್ನು ಕಳೆದ ರೂಮಿನಲ್ಲಿ ದಿನೇಶ ಇಣುಕಿದ.

"ಇದು ಪ್ರಶಾಂತನ ರೂಮು.... ಪ್ರಶಾಂತ ಕಾಗ್ದ ಬರ್ದಿದಾನೆ...." ಸಂಭ್ರಮದಿಂದ ನುಡಿದಳು.

"ಆಹಾ.... ಎಲ್ಲಿದಾರಂತೆ....?"

"ಅದನ್ನು ಬರೆದಿಲ್ಲ.... ಅಮ್ಮಂಗೆ ಅದೇ ಬೇಜಾರು... ಆದರೆ ಬೆಂಗ್ಳೂರಲ್ಲೇ ಎಲ್ಲೋ ಇದಾನೆ ಅಂತ, ಕವರಿನ ಸೀಲಿನಿಂದ ತಿಳೀತು..." ವಿದ್ಯಾ ಅಲ್ಲಿದ್ದ ಮಂಚದ ಮೇಲೆ ಕುಳಿತಳು... ಪಕ್ಕದಲ್ಲಿದ್ದ ಕುರ್ಚಿಯ ಮೇಲೆ ದಿನೇಶ ಕೂತ....

"ಇದ್ದಕ್ಕಿದ್ದಾಗೇ ನೀವ್ಯಾಕೆ ಬಂದಿದೀರಿ? ಅಪ್ಪ ಊರ್ನಲ್ಲಿಲ್ಲ ಅಂತ ನಿಮಗ್ಹೇಗೆ ತಿಳೀತು?" ಅವಳ ಪ್ರಶ್ನೆ ಲಾಯರ್ರು ಹಾಕುವ ಪ್ರಶ್ನೆಯಂತಿತ್ತು. ಮನದಲ್ಲೇ ನಕ್ಕ.

"ಮರೆತು ಬಿಟ್ರಾ....? ನೀವೇ ಬನ್ನಿ ಅಂತ ಬರೆದಿದ್ರಲ್ಲ. ತತ್ ಕ್ಷಣವೇ ಬಂದ್ಬಿಟ್ಟೆ...."

"ಕಿಶೋರ ಇಷ್ಟು ಕೆಟ್ಟೋನು ಅಂತ ನಾನಂದ್ಕೊಂಡಿರ್ಲಿಲ್ಲ."

"ಕಿಶೋರನ ವಿಷಯ ನಂಗ್ಬೇಡ..... ನಮ್ಮ ವಿಷ್ಯ ಹೇಳಿ."

"ನಂಗೀಗ ಬೇರೆ ದಾರೀನೇ ಇಲ್ಲ.... ಈ ಊರ್ನಿಂದ, ಈ ರಸ್ತೆಯಿಂದ ಎಲ್ಲಾದ್ರೂ ದೂರ ಹೊರ್ಟು ಹೋಗೋಣ ಅಂತನ್ನಿಸ್ತಿದೆ.... ನನ್ನನ್ನ ಕರ್ಕೊಂಡ್ಹೋಗ್ತೀರಾ?" ದಿನೇಶ ತಬ್ಬಿಬ್ಬಾದ.

"ನಾನಾ? ನಾನೆಲ್ಲಿಗೆ ಕರ್ಕೊಂಡ್ಹೋಗ್ಲಿ.....?"

"ಯಾಕೆ? ನಾನು ನಿಮ್ಗೆ ಒಪ್ಗೆ ತಾನೇ....?"

"ಹೂಂ... ಒಪ್ಗೇನೇ. ಹಾಗಂತ ಸುಮ್ಸುಮ್ನೆ ಕರ್ಕೊಂಡ್ಹೋಗುಕ್ಕಾಗುತ್ತಾ? ಅಲ್ಲಿ ಬೇಜಾರು ಅಂತ ಇಲ್ಲಿಗೆ ವಾಪಸ್ಸು ಬಂದ್ರಿ..."

"ಹೌದು ದಿನೇಶ್.... ನಾನು ತಪ್ಪು ಮಾಡ್ದೆ.... ನನ್ನ ಮನಸ್ನಲ್ಲಿದ್ದುದೇ ಒಂದು.... ಆದದ್ದೇ ಒಂದು. ನಾನೇನ್ಮಾಡ್ಲೀ ನೀವೇ ಹೇಳಿ....?"

"ನನ್ನನ್ನು ಮದ್ವೆಯಾಗೋದಾದ್ರೇ ಮದ್ವೆ ಮಾಡ್ಕೊಂಡು ಕರ್ಕೊಂಡ್ಹೋಗ್ತೀನಿ..."

"ಅದನ್ನೇ.... ಅದನ್ನೇ.... ನಾನು ಕೇಳಿದ್ದು...."

"ಅದಕ್ಕೇ ಇಷ್ಟು ಸಂಕೋಚಾನಾ? ನಾನು ಎಂದೋ ನಿಮ್ಮನ್ನ ಕೇಳಿದ್ದೆ. ನೀವೇ ಸತಾಯಿಸಿದ್ದು..."

"ಹುಡ್ಗೀರ ಮನಸ್ಸು ಹೇಗೆ ಅಂತ ನಿಮಗೆಲ್ಲಿ ತಿಳಿಯುತ್ತೆ?"

"ಬೇರೆ ಯಾವ ಹುಡ್ಗಿಯ ಮನಸ್ನಲ್ಲಿ ಏನಿದೆಯೋ ನಂಗೆ ತಿಳೀದು.... ಆದರೆ ನಿಮ್ಮ ಮನಸ್ನಲ್ಲಿ ನಾನಿದೀನಿ ಅಂತ ನನಗೆ ತಿಳಿದಿತ್ತು..." ದಿನೇಶನ ನೋಟಕ್ಕೆ ನಾಚಿದಳು. ಕತ್ತು ಬಗ್ಗಿಸಿದಳು. ಅವನು ಬೆರಳ ತುದಿಯಿಂದ ಅವಳ ಗಲ್ಲವನ್ನು ಎತ್ತಿ ಹಿಡಿದ.

"ಈಗ್ಲೂ ನಾಚ್ಕೆನಾ?" ಎನ್ನುತ್ತಾ ಅವಳ ಮುಖದಲ್ಲೇ ತನ್ನ ದೃಷ್ಟಿಯನ್ನು ನೆಟ್ಟ.

"ಹೀಗೆ ನೋಡ್ಬೇಡಿ..." ಅವಳು ಮುಖವನ್ನು ಕೈಗಳಿಂದ ಮುಚ್ಚಿಕೊಂಡಳು.

"ನಾನು ಈ ರಾತ್ರಿ ವಾಪಸ್ಸು ಊರಿಗೆ ಹೋಗ್ತೀನಿ.... ಸದ್ಯದಲ್ಲೇ ಮದುಮಗನ ವೇಷ ಹಾಕ್ಕೊಂಡು ಮತ್ತೆ ಬರ್ತೀನಿ.... ಅಲ್ಲೀವರೆಗೂ ನನ್ನ ಈ ನೋಟಕ್ಕಾಗಿ ಕಾತರದಿಂದ ಕಾಯುತ್ತಿರಬೇಕು." ಬಲವಂತವಾಗಿ ಅವಳ ಕೈಗಳನ್ನು ಬಿಡಿಸಿದ. ನಾಚಿಕೆಯಿಂದ ಅವಳ ಸೌಂದರ್ಯ ಇಮ್ಮಡಿಸಿತ್ತು.... ಅವನ ನೋಟದಲ್ಲಿದ್ದ ತುಂಟತನವನ್ನು ಅವಳು ಗಮನಿಸಿ ಎದ್ದು ನಿಂತಳು.

"ಕೂತ್ಕೊಳ್ಳಿ.... ಯಾಕೆ ಎದ್ಬಿಟ್ರಿ?" ಅವನು ಅವಳ ಕೈ ಹಿಡಿದೆಳೆದ.

"ಬಿಡಿ.... ಯಾರಾದ್ರೂ ನೋಡಿದ್ರೆ...."

"ಯಾರು ನೋಡಿದ್ರೂ ನಂಗೀಗ ಭಯವಿಲ್ಲ. ನಾನು ನಿಮ್ಮವನೇ...." ಆದರೂ ಅವಳು ಕೈಯನ್ನು ಬಿಡಿಸಿಕೊಂಡು ಅವನಿಗೆ ಬೆನ್ನು ಮಾಡಿ ನಿಂತಳು. ಅವನು ಮೆಲ್ಲಗೆ ಅವಳ ಜಡೆಯ ತುದಿಯನ್ನು ಹಿಡಿದೆಳೆದ.

"ಹ್ಹಾಂ.... ನೋಯ್ತಿದೆ...." ಅವಳು ಹಿಂದಕ್ಕೆ ಅಡಿಯಿಟ್ಟು ಅವನ ಮೈಗೆ ಮೈ ಸೋಕುವಷ್ಟು ಹತ್ತಿರಕ್ಕೆ ಬಂದಿದ್ದಳು.... ಇನ್ನೇನು ಅವನು ಅವಳನ್ನು ತನ್ನೆಡೆಗೆ ತಿರುಗಿಸಿಕೊಳ್ಳಬೇಕೆನ್ನಿಸುವಷ್ಟರಲ್ಲಿ ಕೆಳಗ್ನಿಂದ ತಾಯಿಯ ಧ್ವನಿ ಕೇಳಿಸಿತ್ತು....

"ತಾಯೀ.... ತಾಯೀ...."

"ಓ... ಬಂದೇ..." ಅವಳು ಮೆಲ್ಲಗೆ ಜಡೆಯನ್ನು ಅವನ ಕೈಯಿಂದ ಬಿಡಿಸಿ ಕೊಂಡಳು....

"ನೀವು ನಿಮ್ಮಮ್ಮಂಗೆ ತಾಯೀನಾ? ತಮಾಷೆಯಾಗಿದೆ...."

"ಮುದ್ದಿಗೆ ಎಲ್ಲಾ ಹಾಗೇ ಕರೀತಾರೆ.... ಆದ್ರೆ ನೀವು ಮಾತ್ರ ಹಾಗೇ ಕರೀ ಬಾರದು. ವಿದ್ಯಾ ಅಂತ್ಲೇ ಕರೀಬೇಕು...."

"ವಿದ್ಯಾ...." ಜೇನಿನಂತೆ ಮಧುರವಾಗಿ ಕರೆದ.... ವಿದ್ಯಾ ಜಡೆಯ ತುದಿಯಿಂದ ಹಗುರವಾದ ಒಂದೇಟನ್ನು ಅವನ ಕೆನ್ನೆಗೆ ಹಾಕಿ, ಅಲ್ಲಿ ನಿಲ್ಲದೆ ಕೆಳಗೆ ಓಡಿದಳು. ದಿನೇಶ ಕೆನ್ನೆಯನ್ನು ಸವರಿಕೊಳ್ಳುತ್ತಾ ಪಕ್ಕದ ರೂಮಿನೊಳಕ್ಕೆ ನುಗ್ಗಿದ.

"ಮುಗೀತಾ ನಿನ್ನ ಏಕಾಂತ?" ಗೌತಮ ಕೇಳಿದ. ಸುಮ್ನಿರು ಎನ್ನುವಂತೆ ದಿನೇಶ ಕಣ್ಣು ಬಿಟ್ಟ.

"ಪುಸ್ಸೀ, ಚೆನ್ನು ಎಲ್ಲಾ ಬನ್ರೇ.... ತಟ್ಟೆ ಹಾಕಿದೆ. ಊಟ ಮಾಡೋರಂತೆ" ವಿದ್ಯಾ ಕೆಳಗ್ನಿಂದ ಎಲ್ರನ್ನೂ ಕರೆದಳು. ದಿನೇಶ ಎದ್ದ.

"ಶ್ರೀಕರ, ಇವರ್ನ ಕರ್ಕೊಂಡ್ಹೋಗು.... ನಾನು ಈಗ್ಬಂದೆ..." ಎಂದ ಗೌತಮ, ಸಂತೋಷನನ್ನು ನಿಲ್ಲುವಂತೆ ಸಂಜ್ಞೆ ಮಾಡಿದ. ದಿನೇಶ ಪ್ರಶ್ನಾರ್ಥಕವಾಗಿ ಅವರಿಬ್ಬ ರನ್ನೇ ನೋಡಿ, ಹೊರ ಬಂದ. ದಿನೇಶ ಅವರುಗಳೊಡನೆ ಮಹಡಿಯಿಂದ ಕೆಳಗಿಳಿದ. ಗೌತಮ ತನ್ನ ಜೇಬಿನಿಂದ ಐದು ಪತ್ರಗಳನ್ನು ತೆಗೆದು ಸಂತೋಷನ ಕೈಗಿತ್ತ. ಅವನು ಹಾಗೇ ಹೀಗೆ ತಿರುಗಿಸಿ ನೋಡಿದ. ಒಡೆದಿರಲಿಲ್ಲ. ಮೇಲೆ ಕಿಶೋರನ ವಿಳಾಸವನ್ನು ಬರೆದಿತ್ತು.

"ಇದು ವಿದ್ಯಾ ಕಿಶೋರಂಗೆ ಬರೆದ ಲೆಟರ್ಸ್. ಇದನ್ನು ಪೋಸ್ಟ್ ಮಾಡುಕ್ಕೆ ಅಂತ ನನಗೆ ಕೊಟ್ಟದ್ದು. ಆದರೆ ಅಮ್ಮ ಬೇಡಾಂತ ಹೇಳಿದ್ದರಿಂದ ಮಾಡಲಿಲ್ಲ...."

"ಒಳ್ಳೇದಾಯ್ತು ಗೌತಮ, ಈ ವಿದ್ಯಾ ದಡ್ಡಿ.... ಅವನು ಯೋಗ್ಯತೆ ಇಲ್ಲ ದೋನು ಅಂತ ಗೊತ್ತಾಗ್ಬೇಡ್ವಾ ಇವಳ್ಗೆ... ಅವನಿಗೆ ಅಪ್ಪನ ಮೇಲೆ ಏನೋ ದ್ವೇಷ. ಅದನ್ನು ತೀರಿಸ್ಕೊಳ್ಳೋಕೆ ಈ ನಾಟ್ಕ ಆಡ್ತಿದಾನೆ. ಸೇಡು ತೀರಿಸ್ಕೊಳ್ಳೋಕೆ ಏನೇನು

ಮಾಡ್ತಿದ್ನೋ...."

"ವಿದ್ಯಾ ದಿನೇಶನನ್ನೇ ಮದ್ವೆಯಾಗ್ಲೀ ಅಂತ ಅಮ್ಮಂಗೆ ಆಸೆ. ಅದಕ್ಕೇ ಈ ಲೆಟರ್ಸನ್ನ ಪೋಸ್ಟ್ ಮಾಡೋದು ಬೇಡ ಅಂದಿರ್ಬೇಕು.."

"ಸದ್ಯ ಚಿಕ್ಕಮ್ಮಂಗೆ ಥ್ಯಾಂಕ್ಸ್ ಹೇಳಬೇಕು..... ಈ ಲೆಟರ್ಸ್ ಏನಾದ್ರೂ ಅವನ ಕೈ ಸೇರಿದ್ದಿದ್ರೆ... ನಮ್ಮೆಲ್ಲರ ಮರ್ಯಾದೆ ಕಳೆದು ಬಿಡ್ತಿದ್ದ..." ಎನ್ನುತ್ತಾ ಆ ಕಾಗದಗಳನ್ನು ಜೋಪಾನವಾಗಿ ಕಬೋರ್ಡಿನಲ್ಲಿ ಪುಸ್ತಕಗಳ ಹಿಂದೆ ಮರೆಸಿಟ್ಟ.

"ಅತ್ಲಾಗೆ ಹರಿಕ್ಹಾಕು.... ಯಾರಾದ್ರೂ ನೋಡಿದ್ರೆ..."

"ಸದ್ಯಕ್ಕೆ ಇರಲಿ.... ನಿಧಾನವಾಗಿ ಹರಿದ್ರಾಯ್ತು...."

"ಒಳ್ಳೇ ಲಾಯರ್ರ ಬುದ್ಧಿ ಕಣಯ್ಯಾ ನಿಂದು... ಈ ಎವಿಡೆನ್ಸ್ ಯಾಕೆ?"

"ವಿದ್ಯಾಳನ್ನು ಚುಡಾಯಿಸೋಕೆ ಒಂದು ಮಂತ್ರ...."

"ನಿನ್ನಿಷ್ಟ..." ಎನ್ನುವಂತೆ ಭುಜವನ್ನೆತ್ತಿ ಕುಣಿಸಿ ನಕ್ಕ.

"ಅದ್ಸರಿ.... ನೀವಿಬ್ರೂ ಈಗ ಬಂದದ್ದೇಕೆ? ಅಪ್ಪ ಊರ್ನಲ್ಲಿಲ್ಲ ಅಂತ ನಿಂಗೆ ತಿಳಿದದ್ದು ಹೇಗೆ?"

"ನೀನು ಯಾರ್ಗೂ ಈಗ್ಲೇ ಹೇಳುಲ್ಲ ಅಂತಂದ್ರೆ ಹೇಳ್ತೀನಿ. ಸದ್ಯಕ್ಕೆ ಇದು ಸಸ್ಪೆನ್ಸ್ ಆಗಿರಲಿ" ಎನ್ನುತ್ತಾ ದೊಡ್ಡಪ್ಪ ತಮ್ಮ ಮನೆಗೆ ಬಂದಿರುವ ವಿಷಯವನ್ನು ತಿಳಿಸಿದ. "ವಿದ್ಯಂಗೆ ಬೇಕಿರಲಿ. ಬೇಡವಾಗಿರ್ಲಿ, ಅವಳ ಮದುವೇನ ದಿನೇಶ ನೊಂದಿಗೆ ನಿಶ್ಚಯಿಸ್ಕೊಂಡು ಬರ್ತಾರೆ.... ನೋಡ್ತಿರು...."

"ಅವರಾಗಿಯೇ ಹೇಳದೇ ನಾವ್ಯಾರೂ ಕೇಳುಲ್ಲ. ಅವರು ಅಮ್ಮಂಗೂ ತಿಳಿಸುಲ್ಲ. ಎಲ್ಲಾ ಸಸ್ಪೆನ್ಸೇ.... ಆದರೆ ಇದು ಒಂಥರಾ ಮೋಸ ಅಲ್ವಾ!?"

"ಲಾಯರ್ರೆಲ್ಲಾ ಸ್ವಲ್ಪ ಹೀಗೇನೇ.... ಸಮಯಕ್ಕಿರಲಿ ಅಂತ ಎಲ್ಲಾ ರಹಸ್ಯ ಗಳನ್ನೂ ತಮ್ಮಲ್ಲೇ ಇಟ್ಕೊಂಡಿರ್ತಾರಂತೆ.... ಹಾಗೇ ನಿಮ್ಮಪ್ಪನೂ.... ಸಮಯ ಬಂದಾಗ ತಿಳಿಸ್ಲೇ ಬೇಕು.... ಏನೇ ಇದ್ರೂ ಹಸೆಮಣೆ ಮೇಲೆ, ಈ ಮದುಮಕ್ಕಳೇ ತಾನೇ ಕೂತ್ಕೋಬೇಕು."

"ನೀನು ತುಂಬಾ ಚೆನ್ನಾಗಿ ಮಾತಾಡ್ತೀಯ ಗೌತಮ.... ಲಾಯರ್ರಾಗೋಕೆ ಲಾಯಕ್ಕು. ಲಾ ಯಾಕೆ ಓದ್ಲಿಲ್ಲ ನೀನು....?"

"ಅಯ್ಯಯ್ಯಪ್ಪಾ.... ನಾನು ಲಾಯರ್ರಾಗಿದ್ರೆ ನೀನು ಹೀಗೆ ಫ್ರೀಯಾಗಿ ಮಾತಾಡ್ತಿದ್ಯಾ?"

"ಇಲ್ಲ ಖಂಡಿತಾ ಇಲ್ಲ" ಸಂತೋಷ ಒಪ್ಪಿಕೊಂಡ. ಇಬ್ಬರೂ ಕೆಳಗಿಳಿದು ಬಂದರು. ದಿನೇಶ ಶ್ರೀಕರಗೆ ಏನೋ ಹೇಳಿಕೊಡುತ್ತಿದ್ದ. ಪುಸ್ಸಿ ನಿಂತು ಮಾತನ್ನಾ ಲಿಸುತ್ತಿದ್ದಳು. ಚೆನ್ನು, ವಿದ್ಯಾ ಬಡಿಸಲು ಸಿದ್ಧರಾಗಿದ್ದರು.

"ಶಾರದಮ್ಮ ಇವತ್ತು ನೀವೂ ಅಮ್ಮನ ಜತೆ ಊಟಕ್ಕೆ ಕೂತ್ಕೊಳ್ಳಿ. ನಾವಿಬ್ರೂ

ಬಡಿಸ್ತೀವಿ."

"ಅಯ್ಯೋ, ಎಲ್ಲಾದ್ರೂ ಉಂಟೆ....? ಬೇಡ....ಬೇಡ..."

"ಪರ್ವಾಗಿಲ್ಲ ಕೂತ್ಕೊಳ್ಳಿ ಶಾರದಮ್ಮ. ಕಷ್ಟಪಟ್ಟು ಅಡುಗೆ ಮಾಡಿದೀರ. ಹುಡ್ಗೀರು ಮನೆ ಕೆಲ್ಸ ಕಲೀಲಿ... ಕೆಲ್ಸ ಗೊತ್ತಿಲ್ದೆ ಇದ್ರೆ ಹೋದ ಮನೇಲಿ ಕಷ್ಟ ಆಗುತ್ತೆ..."

"ಅಡುಗೆ ಹೇಗಿದ್ಯೋ ಏನೋ! ಉಪ್ಪು, ಖಾರ ಸರ್ಯಾಗಿದ್ಯೋ ಇಲ್ವೋ..." ಎನ್ನುತ್ತಾ ಸಂಕೋಚದಿಂದ ಕುಳಿತರು.

"ಮಾಡಿದ್ದುಣ್ಣೋ ಮಾಹಾರಾಯ ಅಂತ.... ಚೆನ್ನಾಗಿಲ್ದೆ ಇದ್ರೇ ನೀವೇ ತಿನ್ನಬೇಕು."

"ಸಂತೋಷ... ಹಾಗೆಲ್ಲಾ ಮಾತಾಡ್ಬಾರ್ದು...." ಪ್ರೇಮಾ ಗದರಿದಳು.

"ಸುಮ್ನೆ ತಮಾಷೆ ಮಾಡ್ದೆ. ನಿಧಾನವಾಗಿ ಕೇಳಿದ್ದನ್ನ ಸರ್ಯಾಗಿ ಬಡಿಸ್ರೇ.... ಶಾರದಮ್ನೋರೇ ನೀವು ಚೆನ್ನಾಗಿ ಸರ್ಯಾಗಿ ಊಟ ಮಾಡಿ.... ಕಡೇಲಿ ನಿಮ್ಗೆ ಉಳ್ಯುತ್ತೋ ಇಲ್ವೋ.... ಅಂತ ಮೊದ್ಲೇ ಕೂರ್ಸಿದಾರೆ...." ಗೌತಮ ನುಡಿದ. ಎಲ್ಲರೂ ನಗುತ್ತಾ ತಟ್ಟೆಗೆ ಕೈ ಹಾಕಿದರು.

"ಪ್ರಶಾಂತ ಕಾಗ್ದ ಬರ್ದಿದಾನೆ..." ಪ್ರೇಮಾ ಸಂಭ್ರಮದಿಂದ ವಾರ್ತೆಯನ್ನು ತಿಳಿಸಿದಳು.

"ಬೆಳಿಗ್ಗೆ ಗೌತಮ ಹೇಳಿದ್ದು ನಿಜವಾಯ್ತು. ಅವ್ನು ಬೆಂಗ್ಳೂರ್ನಲ್ಲೇ ಎಲ್ಲೋ ಇದಾನೆ."

"ಎಲ್ಲಿದಾನಂತೆ? ಅಡ್ರೆಸ್ ಕೊಟ್ಟಿಲ್ವಾ?"

"ಅಡ್ರೆಸ್ಸಿಲ್ಲ. ಒಂದು ಚೆಕ್ ಕಳ್ಸಿದಾನೆ.... ಅವ್ನೇ ಬಂದಿದ್ರೆ ಚೆನ್ನಾಗಿತ್ತು..."

"ಆ ಚೆಕ್ ಯಾವ ಬ್ಯಾಂಕಿಂದು, ಯಾವ ಬ್ರಾಂಚಿನದು ಅಂತ ತಿಳಿದ್ರೆ ಪತ್ತೆ ಹಚ್ಚಬಹುದು." ಸಂತೋಷ ತನ್ನ ಬುದ್ಧಿಯನ್ನು ಓಡಿಸಿದ್ದ.

"ಹೌದು ದೊಡ್ಡಮ್ಮ.... ನನಗೆ ಆ ವಿವರಗಳನ್ನು ಕೊಡಿ. ನಾನು ಪತ್ತೆ ಹಚ್ತೀನಿ."

"ಆಮೇಲೆ, ಇವನಿಗೆ ಆ ಚೆಕ್ ತೋರ್ಸು..."

"ಶಾರದಮ್ಮ ಏನು ಸ್ವೀಟ್ ಮಾಡಿದೀರ... ಇವತ್ತು ಎರಡೆರಡು ಗುಡ್ ನ್ಯೂಸ್...."

"ಎರಡು....! ಯಾವ್ದು?"

"ಸಸ್ಪೆನ್ಸ್...." ದಿನೇಶ ವಿದ್ಯಾಳ ಕಡೆ ನೋಡಿದ...

"ಶಾರದಮ್ಮ ಶಾವಿಗೆ ಪಾಯಸ ಮಾಡಿದಾರೆ. ಬಟ್ಟಲಿಗೆ ಹಾಕಿ ತಂದಿಡೋಣ ಅಂತ ಬಡಿಸಿರಲಿಲ್ಲ. ಹೋಗೇ ಚೆನ್ನು, ಬಟ್ಲಲ್ಗೆ ಪಾಯಸಾನ ಬಡಿಸ್ಕೊಂಡ್ಬಾರೇ...."

"ಎಲ್ರೂ ಬೇಗ ಬೇಗ ಊಟ ಮಾಡಿ... ನಮ್ಮಿಬ್ರಿಗೂ ಹೊಟ್ಟೆ ತುಂಬಾ ಹಸೀತಿದೆ." ಚೆನ್ನು ಹೇಳಿದಾಗ ವಿದ್ಯಾ ಅವಳ ಬೆನ್ನಿನ ಮೇಲೆ ಹುಸಿ ಗುದ್ದು ಗುದ್ದಿದಳು.

"ಹೀಗೇ ಯಾರಾದ್ರೂ ಹೇಳ್ತಾರಾ....?"

"ನಿಂಗೇನೋ ಹೊಟ್ಟೆ ತುಂಬಿರ್ಬಹ್ದು... ನಂಗೆ....?"

"ನಿಂಗೂ ಹೊಟ್ಟೆ ತುಂಬಿಸೋಣ.... ಇನ್ನೊಂದೆರ್ಡು ವರ್ಷ ತಡ್ಕೋ...."

"ಯಾಕೆ? ಮಾಡಿದಡ್ಗೆಯೆಲ್ಲಾ ಮುಗಿದ್ಹೋಯ್ತಾ...?" ಮುಸ್ಸೀ ವ್ಯಥೆಯಿಂದ ಕೇಳಿದಾಗ ವಿದ್ಯಾ ನಕ್ಕಳು.

"ನಿಂಗೆ ಇನ್ಸಲ್ಪ ಪಾಯ್ಸ ಹಾಕ್ಲಾ ಮುಸ್ಸೀ...."

"ನಂಗೂ ಬೇಕು...." ಶ್ರೀಕರ ತನ್ನ ಬಟ್ಟಲನ್ನು ಮುಂದೆ ತಳ್ಳಿದ.

"ಅಡುಗೆ ತುಂಬಾ ರುಚಿಯಾಗಿತ್ತು.... ಬೋಂಡ ಮಿಕ್ಕಿದ್ರೆ ಒಂದ್ನಾಲ್ಕನ್ನ ಕಟ್ಕೊಡಿ. ಬಸ್ನಲ್ಲಿ ತಿಂತೀವಿ..." ಗೌತಮ ಹೇಳಿದ.

"ಮಿಕ್ಕಿಲ್ದೇ ಇದ್ರೆ ಮತ್ತೆ ಮಾಡ್ಕೊಡ್ತೀನಿ.... ಅದ್ಯಾವ ಮಹಾ ಕೆಲ್ಸ... ನೀವು ಕೇಳೋದು ಹೆಚ್ಚೋ.... ನಾವು ಮಾಡೋದು ಹೆಚ್ಚೋ...." ಶಾರದಮ್ಮ ಊಟ ಮುಗಿಸಿ ಎದ್ದರು.

ಈಗ ವಿದ್ಯಾ, ಚೆನ್ನು ಊಟಕ್ಕೆ ಕುಳಿತರು. ಅವರಿಬ್ಬರಿಗೆ ಬಡಿಸಲು ಗೌತಮ ಮುಂದಾದ.... ಅಲ್ಲಿ ಹೆಚ್ಚಿಗೆ ಏನೂ ಉಳಿದಿರಲೇ ಇಲ್ಲ. ಬಳಿ ಬಳಿದು ಗೌತಮ ಬಡಿಸಿದಾಗ ಚೆನ್ನು ಅತ್ತೇ ಬಿಟ್ಟಳು. ವಿದ್ಯಾ ತನ್ನ ತಟ್ಟೆಯಲ್ಲಿದ್ದುದನ್ನು ಅವಳ ತಟ್ಟೆಗೆ ಬಡಿಸಿ, ಲೋಟದಲ್ಲಿದ್ದ ನೀರನ್ನು ಗಟಗಟನೆ ಕುಡಿದು ಎದ್ದಳು. ದಿನೇಶ ಏನೋ ನೆನಪಾದವನಂತೆ ನಕ್ಕ.

"ನನ್ನ ಹೊಟ್ಟೆಯೇನೋ ತುಂಬಿತು.... ನೀನು ನಿಧಾನವಾಗಿ ಊಟ ಮಾಡು." ಎಂದು ಹೇಳಿ ಅಡುಗೆಮನೆಗೆ ಬಂದಳು.

"ಅದಕ್ಕೇ ನಾನು ಹೇಳಿದ್ದು.... ಬಲವಂತ ಮಾಡಿ, ನನ್ನನ್ನ ಊಟಕ್ಕೆ ಕೂರಿಸಿದ್ರಿ, ನಾನೇ ನಿಂತು ಬಡಿಸಿದ್ರೆ ಅಳತೆ ನೋಡ್ಕೊಂಡು ಬಡಿಸ್ತಿದ್ದೆ...."

"ಈಗೇನಾಯ್ತು ಶಾರದಮ್ಮ.... ರಾತ್ರಿಗೆ ಮತ್ತೆ ಸ್ವಲ್ಪ ಸ್ವಲ್ಪ ಮಾಡಿದ್ರಾಯ್ತು.... ನಾನು ನಿಮಗೆ ಸಹಾಯ ಮಾಡ್ತೀನಿ...." ಊಟ ಮಾಡಿ ಎದ್ದ ಚೆನ್ನು ಒಳಗೆ ಬಂದಿದ್ದಳು.

"ಸಾರಿ ಕಣೇ ಅಕ್ಕ.... ಯಾಕೋ ಅಳು ಬಂದ್ಬಿಡ್ತು... ತಡ್ಕೊಳ್ಳೋಕೇ ಆಗ್ಲಿಲ್ಲ."

"ನೀನು ಅರ್ಥಂಬರ್ಥ ಮಾತುಗಳ್ನ ಕೇಳಿಸ್ಕೊಂಡಿತೀರ್ಯ... ಏನೇನೋ ಊಹೆ ಮಾಡ್ಕೋತೀಯ.... ಹಸಿವು ಒಂದು ನೆವ ಅಷ್ಟೇ... ಅತ್ಯಲ್ಲಾ... ಈಗ ಹೃದಯ ಹಗುರವಾಯ್ತು ತಾನೇ.... ತಟ್ಟೆ ತೆಗೆದು ಗೋಮೆ ಹಚ್ಚಿ ನೆಲ ಒರೆಸಿ,

ಜಮಖಾನ ಹಾಸಿಕೊಡು. ಎಲ್ರಿಗೂ ದಿಂಬು ಕೊಡು. ಒಂದ್ಗಳ್ಗೆ ಎಲ್ರೂ ಮಲಗಲಿ..."

ಊಟ ಮಾಡಿ ಎದ್ದವರೆಲ್ಲಾ ಮಹಡಿಯನ್ನೇರಿದ್ದರು. ಚೆನ್ನು ಉಳಿದ ಕೆಲಸಗಳನ್ನು ಮುಗಿಸಿ, ತನ್ನ ರೂಮಿಗೆ ಹೋದಳು. "ನೀನೂ ಹೋಗಮ್ಮ... ನಾನು ನಿಧಾನವಾಗಿ ಎಲ್ಲಾ ಮಾಡ್ತೀನಿ...." ಶಾರದಮ್ಮ ಅಷ್ಟು ಹೇಳಿದ್ದೇ ಸಾಕು ಎನ್ನುವಂತೆ, ವಿದ್ಯಾ ಮೆಟ್ಟಿಲುಗಳನ್ನೇರಿದಳು. ದಿನೇಶ, ಗೌತಮ, ಸಂತೋಷ ಅವರುಗಳೊಡನೆ ಜಮುಖಾನದ ಮೇಲೆ ಮಲಗಿದ್ದ. ಮುಖಕ್ಕೆ ಕೈಯನ್ನು ಅಡ್ಡ ಇಟ್ಟುಕೊಂಡಿದ್ದರಿಂದ, ನಿದ್ದೆ ಬಂದಿತ್ತೋ ಇಲ್ಲವೋ ತಿಳಿಯಲಿಲ್ಲ. ಸದ್ದಾಗದಂತೆ ಕೆಳಗಿಳಿದು ಬಂದು ಚಿನ್ಮಯಿಯ ಪಕ್ಕ ಮಲಗಿದಳು.

"ಇವತ್ತು ಎಷ್ಟು ಚೆನ್ನಾಗಿ ಕಾಲ' ಕಳೆದ್ವು ಅಲ್ವಾ! ದಿನಾ ಹೀಗೇ ಇದ್ದರೆ ಎಷ್ಟು ಚೆನ್ನಾಗಿರುತ್ತೆ ಅಲ್ವಾ...! ಆ ಗೇಮ್ ಅಂತೂ ತುಂಬಾ ಇಷ್ಟವಾಯ್ತು ನನಗೆ....."

"ಎಲ್ಲಾ ತಲೆಹರಟೆಗಳು, ಏನೇನೋ ಬರೆದ್ಬಿಟ್ತೀರಿ.. ಹಾಗಲ್ಲ ಆಟ ಆಡೋದು."

"ನೀನು ದಿನೇಶನ್ನ ಮದ್ವೆಯಾಗಿ ಹೊರ್ಟು ಹೋಗ್ತೀಯೇನೇ ಅಕ್ಕಾ....?"

"ಯಾರ್ಹೇಳಿದ್ರು ಹಾಗಂತ...!"

"ಮತ್ಯಾಕೆ ಅವ್ರು ಬಂದಿದಾರೆ....?"

"ನಂಗೊತ್ತಿಲ್ಲ. ಅವ್ರನ್ನೇ ಕೇಳು. ಈಗ ಸುಮ್ನೇ ಮಲಕ್ಕೋ. ನಿದ್ದೆ ಮಾಡು." ಚಿನ್ಮಯಿ ಚಿಕ್ಕೋಳೇನಲ್ಲ. ಆದರೂ ಅವಳ ಮನಸ್ಸು ಕಲಕಿ ಹೋಗಿತ್ತು. ನಾನೇನೋ ಒಪ್ಗೆ ಕೊಟ್ಟೆ... ಮದ್ವೆ ಆಗಲೂ ಬಹುದು. ಆದರೆ ಉಳಿದಿಬ್ಬರು ತಂಗಿಯರ ಗತಿ..? ದಿನೇಶನಂಥವರು ಎಲ್ಲಿ ಸಿಗ್ತಾರೆ? ಯಾಕೋ ಏನೋ ಅವಳಿಗೂ ದುಃಖ ಒತ್ತರಿಸಿಕೊಂಡು ಬಂದಿತ್ತು. ತಂಗಿಯನ್ನು ತಬ್ಬಿಕೊಂಡು ಅತ್ತಳು.

"ಇವತ್ತಲ್ಲ ನಾಳೆ ನಾನು ಮದ್ವೆಯಾಗಿ ಈ ಮನೆಯಿಂದ ಹೊರಟ್ಹೋಗ್ತೀನಿ. ನಿನ್ನ ಮದುವೆಯಾಗಿ, ನೀನು ಹೋಗೋವರೆಗೂ ಅಮ್ಮನ್ನ ಚೆನ್ನಾಗಿ ನೋಡ್ಕೋಬೇಕು.... ಹಾಗಂತ ಪ್ರಾಮಿಸ್ ಮಾಡು...." ಚಿನ್ಮಯೀ ಅಕ್ಕನ ಕೈ ಮೇಲೆ ಕೈಯನ್ನಿಟ್ಟು ಭಾಷೆಯನ್ನು ಕೊಟ್ಟಳು.

ಎಲ್ಲರೂ ಸಣ್ಣ ನಿದ್ದೆಯನ್ನು ಮುಗಿಸಿ ಏಳುವಷ್ಟರಲ್ಲಿ ಶಾರದಮ್ಮ ಮತ್ತಷ್ಟು ಬಿಸಿ ಬಿಸಿ ಬೋಂಡಗಳನ್ನು ಕರಿದು ತೆಗೆದಿಟ್ಟಿದ್ದಳು. ವಿದ್ಯಾ ಎಲ್ಲರಿಗೂ ಬೋಂಡದೊಂದಿಗೆ ಕಾಫಿಯನ್ನು ತಂದಿತ್ತಳು.

"ಶಾರದಮ್ನೋರೇ... ನಿಮ್ಮ ಈ ಉಪಚಾರವನ್ನು ಎಂದಿಗೂ ಮರೆಯೋಲ್ಲ." ಗೌತಮ ವಿನಮ್ರನಾಗಿ ಹೇಳಿದ.....

"ಇದು ನಿಮ್ಮ ದೊಡ್ಡ ಗುಣವಪ್ಪಾ........ ನನ್ನ ಕೆಲ್ಸವೇ ಇದಲ್ವಾ...!"

"ಶಾರದಮ್ಮ, ನಿಮ್ಗೆ ಅಕ್ಕ – ತಂಗಿ ಯಾರಾದ್ರೂ ಇದ್ದರೆ, ಅರ್ಜೆಂಟಾಗಿ ನಮ್ಮ ಮನೆಗೆ ಒಬ್ಬರು ಬೇಕಾಗಿದ್ದಾರೆ.... ಅಮ್ಮಂಗೂ ವಯಸ್ಸಾಯ್ತು...."

"ನಿಮ್ಮಮ್ಮಂಗೇನೂ ವಯಸ್ಸಾಗಿಲ್ಲ..... ಅಷ್ಟೇ ಬೇಕಾಗಿದ್ರೆ ಬೇಗ ಮದ್ವೆ ಮಾಡ್ಕೋ..... ನಿನ್ನ ಹೆಂಡ್ತಿ ನಿಂಗೆ ಬೇಕು ಬೇಕಾಗಿದ್ದನ್ನೆಲ್ಲ ಮಾಡಿಕೊಡ್ತಾಳೆ.."

"ಅಯ್ಯೋ, ನಿಮಗ್ಗೊತ್ತಿಲ್ಲ ದೊಡ್ಡಮ್ಮ. ಈಗಿನ ಕಾಲ್ದ ಹುಡ್ಗೀರ್ಗೆ ಮನೆ ಕೆಲ್ಸಾ ಅಡ್ಗೆ ಕೆಲ್ಸ, ಅಂದ್ರೆ ಅಷ್ಟಕಷ್ಟೇ...." ವಿದ್ಯಾ ಅವನ ತೋಳು ಚಿವುಟಿಧಳು.

"ನಿಂಗ್ಮಹಾ ಗೊತ್ತಿರೋದು.... ನಾನೊಂದುಪಾಯ ಹೇಳ್ಲಾ.... ನೀನೇ ಕಲಿತ್ಕೋ.... ನಿನ್ಹೆಂಡ್ತಿಗೂ ಮಾಡಿ ಕೊಡಬಹುದು..." ಎಲ್ಲರೂ ಕಿಸಿಕಿಸಿ ನಕ್ಕರು.

"ದಿನೂ.... ಸ್ವಲ್ಪ ಹುಶಾರಾಗಿರಪ್ಪಾ...." ಅವನ ಬೆನ್ನನ್ನು ತಟ್ಟಿದ..... ಎಲ್ಲರೂ ಮನ ಬಂದಂತೆ ಹರಟಿದರು.... ಸಮಯ ಹೋದದ್ದೇ ತಿಳಿಯಲಿಲ್ಲ. ಅವರಿಬ್ಬರೂ ವಾಪಸ್ಸು ಹೊರಡುವ ಘಳಿಗೆ ಬಂದಿತ್ತು. ಶಾರದಮ್ಮ ಮರೆಯದೇ ಬೋಂಡಾ ಹಾಗೂ ಚಟ್ನಿಯನ್ನು ಕಟ್ಟಿಕೊಟ್ಟಳು.

"ನಾನು ಊರಿಗೆ ಹೋದ್ಮೇಲೆ ಕಾಗ್ದ ಬರೀತೀನಿ.... ಈ ಸಾರಿ ಸರ್ಯಾಗಿ ಅಡ್ರೆಸ್ ಬರೀಬೇಕು." ದಿನೇಶ ವಿದ್ಯಾಳನ್ನು ಎಚ್ಚರಿಸಿದ.

"ಮತ್ತೆ ಯಾವಾಗ ಬರ್ತೀರಿ?" ಕೋಗಿಲೆಯಂತೆ ಉಲಿದಳು.

"ನೀವು ಕರೆದಾಗ..." ಅವನೂ ರಾಗವಾಗಿ ನುಡಿದ. ಸಂತೋಷ ಅವರುಗಳೊಡನೆ ಬಸ್ ಸ್ಟ್ಯಾಂಡಿಗೆ ಹೊರಟ. ಹೊರಡುವ ಮೊದಲು, ಎಲ್ಲರಿಗೂ ಅನ್ವಯಿಸುವಂತೆ ಹೇಳಿದ –

"ಇವರಿಬ್ರೂ ಬಂದಿದ್ದನ್ನ ಅಪ್ಪನಿಗೇನೂ ತಿಳಿಸೋದು ಬೇಡ. ಸುಮ್ನೇ ಅಗತ್ಯವಿಲ್ಲದ ಪ್ರಶ್ನೆಗಳಿಗೆ ಉತ್ತರ ಹೇಳ್ಬೇಕಾಗುತ್ತೆ."

"ಅವ್ರು ಕೇಳಿದ್ರೆ...?"

"ಯಾಕೆ ಕೇಳ್ತಾರೆ? ಅವ್ರಿಗೇನಾದ್ರೂ ಕನ್ಸು ಬಿದ್ದಿರುತ್ತಾ.....? ಸುಮ್ನೆ ನೂರೆಂಟು ಪ್ರಶ್ನೆಗಳನ್ನ ಕೇಳ್ತಾರೆ..." ಕಾಯುತ್ತಾ ನಿಂತಿದ್ದವರನ್ನು ಸೇರಿಕೊಂಡ.

* * *

ಅಧ್ಯಾಯ ಹದಿನೈದು

ಅವರುಗಳು ಅತ್ತ ಹೊರಟರು. ಇತ್ತ ಕೆಲವೇ ನಿಮಿಷಗಳಲ್ಲಿ ಭಟ್ಟ ಬಂದಿಳಿದ. ಯಥಾ ಯಥಾ ಕೂತವರು ಜಾಗೃತರಾದರು. ರಿಕ್ಷಾದವನಿಗೆ ದುಡ್ಡನ್ನು ಕೊಟ್ಟು ಒಳಗೆ ಬಂದ. ಅವನಿಗಾಗಿ ಯಾರೂ ಕಾಯುತ್ತಾ ನಿಂತಿಲ್ಲವೆನ್ನುವುದನ್ನು ಗಮನಿಸಿದ.... ಉಸ್ಸೆಂದು ಸೋಫಾದ ಮೇಲೆ ಕುಳಿತ.

"ತಾಯೀ..... ತಾಯೀ...." ಮಗಳನ್ನು ಕರೆದ.

"ಏನಪ್ಪಾ.....?"

"ಒಂದ್ಲೋಟ ನೀರು.... ನಾನು ಬಂದದ್ದೂ ಗೊತ್ತಾಗ್ಲಿಲ್ವಾ... ಮುಂಬಾಗಿಲನ್ನು ಹಾರು ಹೊಡೆದು, ಎಲ್ಲಾ ಒಳಗ್ಸೇರ್ಕೊಂಡು ಏನ್ಮಾಡ್ತಿದೀರಿ?"

"ಓದ್ಕೋತಾ ಇದ್ದೆವು." ಚಿನ್ಮಯಿ ಹೇಳಿದಳು.

"ಅಪ್ಪಾ, ಕಾಫಿ ತಂದ್ಕೊಡ್ಲಾ...?"

"ಕಾಫಿ ಬೇಡ. ಶಾರದಮ್ಮಂಗೆ ಹೇಳು, ಅಡುಗೆಯಾಗಿದ್ರೆ ಬಡಿಸ್ಲಿ. ಊಟಾನೇ ಮಾಡ್ತೀನಿ...." ಎಂದು ಹೇಳಿ ಕೈ – ಕಾಲು ತೊಳೆಯಲು ಹೋದ.

"ಶಾರದಮ್ಮ.... ಈಗೇನ್ಮಾಡೋದು..... ನಮ್ದೆಲ್ಲಾ ಊಟ ಆಗಿ ಹೋಗಿದ್ಯಲ್ಲ... ಅಪ್ಪ ಬೈದರೇ....?"

"ಬೇಗ ಸ್ವಲ್ಪ ಉಪ್ಪಿಟ್ಟು ಮಾಡ್ಬಿಡ್ತೀನಿ... ಕೇಳಿದ್ರೆ ಎಲ್ರಿಗೂ ಕೈ ತುತ್ತು ಹಾಕ್ಬಿಟ್ಟೆ ಅಂತ ಹೇಳ್ಬಿಡ್ತೀನಿ. ಸ್ವಲ್ಪ ಬೋಂಡಾ ಮಿಕ್ಕಿದೆ ಕೊಟ್ಬಿಡ್ತೀನಿ."

"ಬೋಂಡಾ ಯಾಕ್ಮಾಡಿದ್ರಿ ಅಂತ ಕೇಳಿದ್ರೆ...?"

"ಕಾಮಾಕ್ಷಿ ತಂದ್ಕೊಟ್ರು ಅಂತ ಹೇಳ್ತೀನಿ...."

"ನಮಗೋಸ್ಕರ ಸುಳ್ಳು ಹೇಳ್ಬೇಕಾಗಿ ಬಂತಲ್ಲ ನಿಮಗೆ...."

"ನಾನೂ ಮಕ್ಕಳನ್ನ ಬೆಳ್ಸಿದೀನಿ. ಯಾವಾಗ ಸುಳ್ಹೇಳ್ಬೇಕು, ಯಾವಾಗ ನಿಜ ಹೇಳ್ಬೇಕು ಅಂತ ನನಗೆ ಚೆನ್ನಾಗಿ ಗೊತ್ತಿದೆ."

"ಥ್ಯಾಂಕ್ಸ್ ಶಾರದಮ್ಮ, ಅಂತೂ ನಮ್ಮ ಪ್ರಾಣ, ಮಾನ ಎರಡನ್ನೂ ಉಳಿಸ್ತಿದೀರಿ. ನಿಮಗೆ ಅಪ್ಪನ್ನ ಕಂಡ್ರೆ ಭಯ ಇಲ್ವಾ!"

"ಭಯ ಯಾಕೆ? ಸ್ವಲ್ಪ ಕಾಯನ್ನು ತುರಿದುಕೊಡು... ಈರುಳ್ಳಿ ಹೆಚ್ಚಿಕೊಡು. ಬೇಗ ಬೇಗ ಮಾಡ್ಬಿಡ್ತೀನಿ."

ಭಟ್ಟ ಕೈ – ಕಾಲು ತೊಳೆದು ಬಂದು, ತನ್ನ ಆಫೀಸು ರೂಮಿಗೆ ಹೋಗಿ, ಕಾಗದ ಪತ್ರಗಳನ್ನು ನೋಡಿದ. ಆ ದಿನದ ದಿನ ಪತ್ರಿಕೆಯನ್ನು ಹಿಡಿದು, ಊಟದ ಮನೆಗೆ ಬಂದ. ಪ್ರೇಮ ಎದ್ದು ಹೊರಬಂದಳು. ಭಟ್ಟ ಪೇಪರಿನಿಂದ ಕಣ್ಣನ್ನು ಚಲಿಸಿರಲಿಲ್ಲ. ಅವನೇನಾದರೂ ಹೇಳುವನೋ ಎಂದು ಕಾದಳು.

ಶಾರದಮ್ಮ ಬಿಸಿ ಬಿಸಿ ಹೊಗೆಯಾಡುವ ಉಪ್ಪಿಟ್ಟನ್ನು ತಂದಿಟ್ಟಳು. ಭಟ್ಟ ವಿಚಿತ್ರವಾಗಿ ನೋಡಿದ. "ಇದೇನಿದು? ಅಡುಗೆ ಮಾಡಿರಲಿಲ್ವಾ...?"

"ಕಾಮಾಕ್ಷಿ ಒಂದಿಷ್ಟು ಬೋಂಡಾ ತಂದ್ಕೊಟ್ಟಿದ್ರು. ಮಕ್ಕಳಿಗೆ ಹಸಿವಿರಲಿಲ್ಲ. ಬೆಳಗ್ಗಿನ ಅನ್ನ, ಹುಳಿ ಎಲ್ಲ ಕಲೆಸಿ ತುತ್ತು ಹಾಕ್ಬಿಟ್ಟೆ."

"ನಿಮ್ದು ಊಟ ಆಯ್ತಾ ಶಾರದಮ್ಮ.....?"

"ರಾತ್ರಿ ಹೊತ್ತು ನಾನು ಊಟ ಮಾಡುಲ್ಲ....."

"ಇಷ್ಟು ಉಪ್ಪಿಟ್ಟು ನನಗೆ ಜಾಸ್ತಿ.... ನೀವು ಸ್ವಲ್ಪ ತಗೊಳ್ಳಿ."

"ಬೇಡ ಪರವಾಗಿಲ್ಲ. ನನಗೂ ಹಸಿವಿಲ್ಲ..."

"ದಂಡ ಆಗುತ್ತೆ. ಮಕ್ಕಳ್ನೆಲ್ಲಾ ಎಬ್ಬಿಸಿ, ಒಂದೊಂದು ಪಿಡಿಚೆ ಕೈಗೆ ಕೊಟ್ಬಿಡಿ."

ಶಾರದಮ್ಮ ಇನ್ನೊಂದು ತಟ್ಟೆಯನ್ನು ತಂದಿಟ್ಟಳು. ಭಟ್ಟ ತನಗೆ ಬೇಕಾದಷ್ಟನ್ನು ಇಟ್ಕೊಂಡು, ಜಾಸ್ತಿ ಅನ್ನಿಸಿದ್ದನ್ನು ಇನ್ನೊಂದು ತಟ್ಟೆಗೆ ಹಾಕಿದ.

"ಮೊಸರಿದ್ರೆ ಒಂದು ಬಟ್ಟಲು ಮೊಸರು ಕೊಡಿ.... ಇಲ್ದಿದ್ರೆ ಒಂದ್ಲೋಟ ಹಾಲನ್ನು ಬಿಸಿ ಮಾಡಿ ತಂದ್ಕೊಡಿ...." ತಂದೆ ಉಪ್ಪಿಟ್ಟು ತಿಂದು ಮುಗಿಸುವ ವರೆಗೂ ವಿದ್ಯಾ ಹೊರಬಾಗಿಲಲ್ಲೇ ನಿಂತಿದ್ದಳು.... ಸಂತೋಷ ಇನ್ನೂ ಮನೆಗೆ ಬಂದಿರಲಿಲ್ಲ. ಅಪ್ಪ ಅವನೆಲ್ಲಿ ಅಂತ ಕೇಳಿಬಿಟ್ಟರೇ.... ಭಟ್ಟ ಮತ್ತೆ ಕೈ ತೊಳೆಯಲೆಂದು ಎದ್ದು ಹೋಗಿದ್ದ. ಸಂತೋಷ ಗೇಟನ್ನು ತೆರೆದ ಸದ್ದಾದ ಕೂಡಲೇ ವಿದ್ಯಾ ಅವನ ಬಳಿಗೆ ಹಾರಿದಳು....

"ಶ್.... ಮೆಲ್ಲಗೇ.... ಅಪ್ಪ ಬಂದಿದ್ದಾರೆ..."

"ಹೌದಾ? ಎಲ್ಲಿದ್ದಾರೆ?"

"ಕೈ ತೊಳೆಯೋಕೆ ಬಚ್ಚಲ ಮನೆಗೆ ಹೋಗಿದಾರೆ...." ಸಂತೋಷ ಸರ್ರಂತ ಒಳ ಬಂದು ಮಹಡಿಯನ್ನೇರಿ, ನಿಟ್ಟುಸಿರು ಬಿಟ್ಟ. ಆ ದಿನದ ಸಂತಸವೆಲ್ಲಾ ಒಮ್ಮೆಗೇ ಮಾಯವಾಯಿತೆಂದೆನಿಸಿತ್ತು. ಮತ್ತೆ ಅಪ್ಪನ ಧ್ವನಿ ಕೇಳಿಸಿತ್ತು.

"ಸಂತೋಷ ಎಲ್ಲಿ? ಮಲಗಿ ಬಿಟ್ನಾ ಆಗ್ಲೇ..."

"ಇಲ್ಲ, ಅಪ್ಪ ಓದಿಕೊಳ್ತಾ ಇರಬಹುದು..."

"ಅವನ ರೂಮಿನ ದೀಪ ಉರೀತಿಲ್ಲ...."

"ನೋಡ್ಲೇನಪ್ಪಾ....?"

"ಹೂಂ, ನೋಡು, ನಾ ಕರೆದೆ ಅಂತ ಹೇಳು... ಎದ್ದು ಬರ್ಲಿ." ವಿದ್ಯಾ

ಮೆಟ್ಟಿಲುಗಳನ್ನು ಹತ್ತಿ ಸಂತೋಷನ ಬಳಿಗೆ ಬಂದಳು.

"ಹೂಂ, ಕೇಳಿಸ್ತು. ನಾನು ಬರ್ತೀನಿ. ನೀನು ಹೋಗು." ಎಂದು ಕಳಿಸಿದ. ತಂದೆ ಮತ್ತೆ ಆಫೀಸ್ ರೂಮನ್ನು ಸೇರಿದ್ದರು. ಅವರ ಎದುರಿಗೆ ಬಂದು ನಿಂತ.

"ನಿನ್ನ ಪರೀಕ್ಷೆ ಯಾವಾಗ?" ಕತ್ತೆತ್ತದೇ ಪ್ರಶ್ನಿಸಿದ.

"ಇನ್ನೂ ಒಂದೂವರೆ ತಿಂಗಳಿಗೆ..."

"ಟೈಮ್ ಟೇಬಲ್ ಬಂತಾ...?"

"ಇಲ್ಲ, ಇನ್ನೂ ಬಂದಿಲ್ಲ." ಅಪ್ಪ ಇನ್ನೇನೇನು ಕೇಳಿ ಬಿಡುವರೋ ಎಂದು ಆತಂಕದಿಂದ ನಿಂತಿದ್ದ. ನೀನಿನ್ನು ಹೋಗಬಹುದು ಎನ್ನುವಂತೆ ಕೈ ತೋರಿದ್ದನ್ನು ಕಂಡು ಜೋರಾಗಿ ಉಸಿರನ್ನು ಹೊರ ಕೆಡವಿ ಹೊರಬಂದ. ಬಾಗಿಲ ಬಳಿ ಅವನಿಗಾಗಿಯೇ ವಿದ್ಯಾ ಕಾದು ನಿಂತಿದ್ದಳು.

"ಅಪ್ಪ ಏನಂದ್ರು?" ಕುತೂಹಲ ಮಿಶ್ರಿತ ಆತಂಕದಿಂದ ಕೇಳಿದಳು. ಅವರು ಕೇಳಿದ್ದನ್ನು ಹೇಳಿದ.

"ಅಷ್ಟೇನಾ? ಏನು ಕೇಳಿ ಬಿಡ್ತಾರೋ ಅಂತ ನಾನು ಹೆದರಿದ್ದೆ..."

"ನಾನೂ ಅವರ ಮಾತಿಗೆ ಹೆದರಿದ್ದೆ. ನನಗೂ ಪ್ರಶಾಂತನ ಹಾಗೆ, ಲಾ ಓದು, ಅದು ಬೇಡ, ಅದು ಬೇಡ ಅಂತ ಎಲ್ಲಿ ಹೇಳಿ ಬಿಡ್ತಾರೋ ಅಂತ ಭಯ... ನಾನೂ ಮನೆ ಬಿಟ್ಟು ಹೊರಟು ಹೋಗ್ತೀನಿ ಅಷ್ಟೇ..."

"ಥೂ ಬಿಡ್ತು ಅನ್ನು, ಅಮ್ಮ ಏನು ಬದುಕಿರ್ಬೇಕೋ ಬೇಡ್ವೋ?"

"ಮತ್ತೆ? ನಮಗೆ ಸ್ವಂತ ಇಚ್ಛೆ ಅನ್ನೋದೇ ಇಲ್ವಾ?"

"ಈಗ್ಲಿಂದ ಆ ಚಿಂತೆ ಯಾಕೆ? ಆ ಸಮಯ ಬಂದಾಗ ನೋಡ್ಕೊಳ್ಳೋಣ..... ನಡೀ ಮಲಕ್ಕೊಳ್ಳೋಣ. ಅಂದ್ಹಾಗೇ ಕೇಳೋದೇ ಮರೆತ್ಹೋಯ್ತು... ಸರಿಯಾದ ಬಸ್ಸು ಸಿಕ್ತಾ?"

"ಹುಂ. ಬಸ್ಸಿಗೆ ಹತ್ತಿಸೇ ನಾನು ವಾಪಸ್ಸು ಬಂದಿದ್ದು. ಒಂದರ್ಧ ಗಂಟೆ ಹಿಂಚು ಮುಂಚಿನಲ್ಲಿ ಬಚಾವಾದರು. ಅಪ್ಪ ಬರೋದ್ರೊಳ್ಗೆ ಹೋಗ್ದೇ ಇದ್ದಿದ್ರೆ ಇವತ್ತು ಏನೇನು ರಂಪ ಆಗ್ತಿತ್ತೋ....?"

"ಅದ್ಸರಿ.... ಅವರಿಬ್ರಿಗೂ ಅಪ್ಪ ಊರ್ನಲ್ಲಿಲ್ಲ ಅಂತ ತಿಳಿದಿತ್ತಾ....? ಯಾತಕ್ಕೆ ಬಂದಿದ್ರು?"

"ನೀನೇನೋ ಕಾಗ್ದ ಬರೆದಿದ್ಯಂತೆ... ಎಲ್ರಿಗೂ ಅದ್ಯಾಕೆ ಕಾಗ್ದ ಬರೀತೀಯೋ? ಕಿಶೋರಂಗೆ ಬರೆದು, ಈಗ ಪೇಚಾಡ್ತಿದೀಯಲ್ಲ.... ಅಷ್ಟು ಸಾಲ್ದ?"

"ಹೌದು. ಅದೊಂದು ದೊಡ್ಡ ತಪ್ಪಾಗಿ ಹೋಯ್ತು...."

"ಅಪ್ಪಂಗೆ ತಿಳಿದ್ರೆ ಏನ್ಗತಿ ಅಂತ ಭಯವಾದ್ರೂ ಆಗ್ಲಿಲ್ವಾ?"

"ನಾನು ಕಿಶೋರನ್ನ ಅಷ್ಟು ನಂಬಿದ್ದೆ. ನಂಗೇನ್ಗೊತ್ತು ಅವನು ಹಲ್ಕಾ

ಅಂತ...."

"ದಿನೇಶಂಗೆ ಲೆಟರ‍್ರು, ಗಿಟರ‍್ರು ಬರ‍್ಯೋಕೆ ಹೋಗ್ಬೇಡ. ಸುಮ್ನಿದ್ದು ಬಿಡು..." ಅವಳನ್ನು ಓರೆಕಣ್ಣಿನಿಂದ ನೋಡಿದ. ಅವಳು ಏನೋ ಲೆಕ್ಕಾಚಾರ ಹಾಕುತ್ತಿರುವಂತೆ ಅನ್ನಿಸಿತ್ತು. ಮನದಲ್ಲೇ ನಕ್ಕ....

"ದಿನೇಶ, ಕಿಶೋರನಷ್ಟು ಕೀಳು ವ್ಯಕ್ತಿಯಲ್ಲ ಅಂತ ನನಗನ್ನಿಸುತ್ತೆ...."

"ಇರಬಹುದು. ನಂಗೇನ್ಗೊತ್ತು! ನೀನು ತಾನೇ ಅವ್ರ ಜತೆ ನಂದಿಬೆಟ್ಟಕ್ಕೆ ಹೋಗಿದ್ದೆ. ಅವ್ರ ಜತೆ ಊರಿಗೆ ಬಂದೆ.... ಆದರೆ ಅಪ್ಪ ಯಾಕೆ ಸುಮ್ಮನಿದ್ದರು....?"

"ಏನಾದ್ರೂ ಗಲಾಟೆ ಮಾಡಿದ್ರೆ, ಅವರ ಮರ್ಯಾದೇನೇ ಹೋಗುತ್ತೆ ಅಂತ ಸುಮ್ಮನಾಗಿರಬಹುದು. ಏನಂತೀಯ!"

"ಇರಬಹುದು.... ಈಗ ಇದ್ದಕ್ಕಿದ್ದ ಹಾಗೇ ಊರಿಗ್ಯಾಕೆ ಹೋಗಿದ್ರೋ....?"

"ಯಾರಿಗ್ಗೊತ್ತು! ಹೇಳಿದ್ರೆ ತಾನೇ ಗೊತ್ತಾಗೋದು....?"

"ಈ ಅಪ್ಪನಿಗೆ ಮಕ್ಕಳ ಮೇಲೆ ಪ್ರೀತಿ ಇಲ್ಲ. ವಿಶ್ವಾಸವಿಲ್ಲ, ನಂಬಿಕೆಯೂ ಇಲ್ಲ. ಅವರ‍್ಮನೇಲೆಲ್ಲಾ ಹೇಗಿದಾರೆ ಗೊತ್ತಾ? ಅಪ್ಪ, ಮಕ್ಳು ಅಂತ ಅನ್ನೋದೇ ಇಲ್ಲ. ಒಳ್ಳೇ ಸ್ನೇಹಿತರ ತರಾ ಇದಾರೆ. ನೋಡಿದ್ರೆ ಖುಶಿಯಾಗುತ್ತೆ...."

"ಅದಕ್ಕೂ ಎಲ್ಲಾ ಪುಣ್ಯ ಮಾಡಿರಬೇಕು. ನಾವು ಯಾವ ಜನ್ಮದಲ್ಲಿ ಯಾರ ತಂದೆಗೆ ಏನು ತೊಂದರೆ ಮಾಡಿದ್ವೋ ಅದಕ್ಕೇ ಈ ಜನ್ಮದಲ್ಲಿ ನಮಗೆ ಇಂಥ ತಂದೆ ಸಿಕ್ಕಿದ್ದಾರೆ...."

"ನನಗೆ ಈ ಜನ್ಮಾಂತರಗಳಲ್ಲಿ ನಂಬಿಕೆ ಇಲ್ಲ. ಈ ಜನ್ಮದಲ್ಲಿ ನಾವು....ಈ ಜನ್ಮ ನಮ್ಮದು ಅಷ್ಟೇ. ಈ ಜನ್ಮದಲ್ಲಿ ಸುಖವಾಗಿಲ್ಲದಿದ್ರೆ....ಅದು ಯಾವ ಜನ್ಮದ ಪಾಪವೂ ಅಲ್ಲ...."

"ಸಾಕು. ಈ ಪಾಪ- ಪುಣ್ಯ ಸಾಕಷ್ಟಿದೆ. ಮಲಗೋಣ ನಡೀ...." ಇಬ್ಬರೂ ತಮ್ಮ ತಮ್ಮ ರೂಮಿಗೆ ತೆರಳಿದರು.

ವಿದ್ಯಾಳಿಗೆ ನಿದ್ದೆ ಬಂದಿರಲಿಲ್ಲ. ಯಾರೋ ನಡೆದು ಬಂದಂತೆ ಹೆಜ್ಜೆ ಸಪ್ಪಳ ಕೇಳಿಸಿತು. ಎದ್ದು ಕೂತಳು. ಅಪ್ಪ, ತಾಯಿಯ ರೂಮಿನ ಬಾಗಿಲನ್ನು ಸರಿಸಿ, ಒಳ ಹೊಕ್ಕರು... ಅಪ್ಪ, ಇಷ್ಟೊತ್ತಿನಲ್ಲಿ ಅಮ್ಮನ ರೂಮಲ್ಲಿ! ಏಕಿರಬಹುದು? ಪ್ರಶಾಂತನ ಕಾಗದ ಬಂದಿರುವ ವಿಷಯ ತಿಳಿದು, ಕೇಳುಕ್ಕೆ ಬಂದಿರಬಹುದೇ.... ಅಥವಾ ದಿನೇಶ ಬಂದಿದ್ದ ವಿಚಾರ ತಿಳಿದು, ಅದನ್ನು ವಿಚಾರಿಸುಕ್ಕೆ ಬಂದಿರಬಹುದೇ..... ಕುತೂಹಲದಿಂದ ಎದ್ದು ರೂಮಿನ ಬಾಗಿಲ ಬಳಿ ಬಂದು ನಿಂತಳು....

"ನಿದ್ದೆ ಬಂದಿದ್ಯೇನು?" ಅಪ್ಪನ ಧ್ವನಿ. ತಾಯಿ ಮಾತನಾಡಿರಲಿಲ್ಲ.

"ನಿನ್ನನ್ನೇ ಕೇಳಿದ್ದು... ಸ್ವಲ್ಪ ಎಚ್ಚರ ಮಾಡ್ಕೋ. ನಾನು ನಿನ್ಹತ್ರ ಮಾತಾಡ್ಬೇಕು."

"ಈಗೆಂಥ ಮಾತು! ಬೆಳಗ್ಗೆ ಆಡಿದ್ರಾಗುಲ್ವಾ...?" ತಾಯಿ ಗೊಣಗಿದ್ದಳು.

"ಬೆಳಗ್ಗೆ ಬಿಡುವಿರಲ್ಲ.... ಎದ್ದು ಕೂತ್ಕೋ."

"ಅದೇನು ಹೇಳಿ ಕೇಳಿಸುತ್ತೆ...."

"ನಾನು ನಿಂತಿದೀನಿ. ನೀನು ಮಲಗಿರೋದಾ? ಏಳು...."

"ಮುಟ್ಬೇಡಿ.... ಮೈ – ಕೈ ನೋಯುತ್ತೆ." ಎಲ್ಲೋ ಅಪ್ಪ ಬಲವಂತವಾಗಿ ಎಬ್ಬಿಸಿರಬೇಕೆಂದುಕೊಂಡಳು.

"ಅಲ್ಲಾ, ನಿಂಗೇನು ಕಡಿಮೆ ಈ ಮನೇಲಿ.... ನಾನಾಗುವ ಹೊತ್ತಿಗೆ ನಿನ್ನನ್ನ ಮನೇಲಿಟ್ಕೊಂಡಿದೀನಿ. ಬೇರೆ ಯಾರಾದ್ರೂ ಗಂಡಸಾಗಿದ್ದಿದ್ರೆ.... ಏನ್ಮಾಡ್ತಿದ್ರೋ.... ಸದಾ ರೋಗ....."

"ನನ್ನನ್ನ ಮನೆಯಿಂದಾಚೆ ತಳ್ತಿದ್ರು ಅಷ್ಟೇ ತಾನೇ....? ಯಾಕೋ ನಿಮಗೆ ಆ ಧೈರ್ಯ ಇಲ್ಲ. ಯಾಕೇಂದ್ರೆ ಕಾನೂನು ಪ್ರಕಾರ ಅದು ಅಧರ್ಮ ಆಗುತ್ತೆ. ಅಪರಾಧ ಆಗುತ್ತೆ..... ನಾಸೀಗ ಅರೆಜೀವ ಆಗಿದ್ರೆ ಅದಕ್ಕೆ ಕಾರಣ ನೀವೇ..."

"ಬಾಯಿ ದೊಡ್ಡದಾಯ್ತು ನಿಂದು.... ಮಕ್ಕಳು ನಿನ್ನ ಸಪೋರ್ಟಗಿದಾರೆ ಅಂತ. ಆ ಮಕ್ಕಳೂ ನಂಗೆ ಹುಟ್ದೋರೇ..... ಅವರ್ಗಳ ಮೇಲೆ ನನಗೆ ಸಂಪೂರ್ಣ ಹಕ್ಕಿದೆ.... ಬಾಲ ಬಿಚ್ಚಿದ್ರೆ ಬಾಲ ಕತ್ತರಿಸ್ಬಿಡ್ತೀನಿ....." ಅಪ್ಪ ಒರಟಾಗಿ ನುಡಿದದ್ದು ಕೇಳಿಸಿ ಬೆವೆತಳು.

ಗಂಡ ಯಾಕೆ ಈ ಹೊತ್ನಲ್ಲಿ ಯದ್ವಾ ತದ್ವಾ ಮಾತಾಡ್ತಿದಾನೆಂದು ಅರ್ಥ ವಾಗಿರಲಿಲ್ಲ. ಪ್ರಶಾಂತನ ಕಾಗದ ಬಂದ ವಿಷಯ ತಿಳಿಯಿತೆ? ದಿನೇಶ ಬಂದು ಹೋದದ್ದು, ಮಕ್ಕಳು ಕ್ಲಾಸಿಗೆ ಚಕ್ಕರ್ ಹೊಡೆದದ್ದು ತಿಳಿದು, ಅದಕ್ಕೆಲ್ಲಾ ನಾನೇ ಕಾರಣ ಅಂತ ಬೈಯುತ್ತಿರಬಹುದೇ ಎಂದು ಭಾವಿಸಿ ಸುಮ್ಮನೇ ಕೂತಳು.

"ಈ ಕಾಗದಕ್ಕೆ ಒಂದು ಸಹಿ ಹಾಕು." ತನ್ನ ಕೈಲಿದ್ದ ಕಾಗದವನ್ನು ಬಿಡಿಸಿ ಅವಳ ಮುಂದೆ ಹಿಡಿದು, ಪೆನ್ನನ್ನು ನೀಡಿದ.

"ಏನಿದು! ನನ್ನ ಸೈನ್ ಯಾಕೆ?"

"ಹೇಳಿದಷ್ಟು ಕೇಳು...." ಅಬ್ಬರಿಸಿದ.

"ಯಾಕೆ? ನನ್ನ ಸಹಿ ಬೇಕು, ಏನೂಂತ ಕೇಳುವ ಹಕ್ಕು ನನಗಿಲ್ವಾ...?"

"ಇದು ಪ್ರಶಾಂತನಿಗೆ ನೀನು ಬರೆದಿರುವ ಪತ್ರ..... ನಿನ್ನ ಸಹಿ ಇಲ್ಲಿ ಹಾಕು."

ಪ್ರಶಾಂತನ ಹೆಸರನ್ನು ಕೇಳಿದೊಡನೆ ಅವಳ ಮುಖ ಬಣ್ಣ ಕಳೆದುಕೊಂಡಿತು. ಪ್ರಶಾಂತ....

"ಈ ಕಾಗ್ದ ಏನಿದು? ಬಿಡಿಸಿ ಹೇಳಿ...."

"ಪ್ರಶಾಂತ, ನನಗೆ ಸರಿ ಹೋಗದ ಕೆಲ್ಸ ಮಾಡ್ತಿದಾನೆ.... ಅಂಥದ್ದನ್ನು ಮಾಡ್ಬೇಡ ಅಂತ ನೀನು ಅವನಿಗೆ ಕಾಗದ ಬರೆದಿರೋದು...."

"ನಂಗೊಂದೂ ಗೊತ್ತಾಗ್ತಿಲ್ಲ. ಅವನು ನಿಮಗೆಲ್ಲಿ ಸಿಕ್ಕ....? ಹೇಗಿದಾನೆ?"

"ಅದೆಲ್ಲಾ ನಿಂಗೆ ಬೇಡ.... ಇದಕ್ಕೆ ಸೈನ್ ಮಾಡು...."

"ನಾನು ಅವನನ್ನು ನೋಡ್ಬೇಕು.... ನಾನೇ ಖುದ್ದಾಗಿ ಅವನ್ಗೆ ತಿಳುವಳ್ಕೆ ಹೇಳ್ತೀನಿ. ನನ್ನನ್ನ ಅವನ್ಹತ್ರಕ್ಕೆ ಕರ್ಕೊಂಡ್ಹೋಗಿ...?"

"ಅವನೀಗ ದೊಡ್ಡ ಮನುಷ್ಯನಾಗ್ಬಿಟ್ಟಿದಾನೆ. ನಿನ್ಹತ್ರ ಮಾತಾಡ್ತಾನೆ ಅಂತ ಅಂದ್ಕೊಂಡ್ಯಾ?"

"ಅವನು ನನ್ಮಗ.... ನನ್ಹತ್ರ ಮಾತಾಡುಲ್ಲ ಅಂತಂದ್ರೆ ಏನರ್ಥ? ನಾನು ಈ ಕಾಗ್ದಕ್ಕೆ ಸೈನ್ ಹಾಕ್ತೀನಿ.... ನನ್ನನ್ನ ಅವನ್ಹತ್ರಕ್ಕೆ ಕರ್ಕೊಂಡ್ಹೋಗ್ತೀರಾ...."

"ಈ ಕಾಗ್ದಕ್ಕೆ ನೀನು ಸೈನ್ ಹಾಕು..... ಅವನೇ ನಿನ್ನ ಬಳಿಗೆ ಬರೋ ಹಾಗೆ ಮಾಡ್ತೀನಿ...."

"ನಿಜವಾಗಿಯೂ....?"

"ಹೂಂ. ಈ ಕಾಗ್ದಾನ ನೋಡ್ತಿದ್ಹಾಗೇ..... ಅವನೇ ಬರ್ತಾನೆ.... ಹೂಂ ಹಾಕು....." ಪ್ರೇಮ ಅವನು ತೋರಿಸಿದ ಕಡೆ ತನ್ನ ಹೆಸರನ್ನು ಬರೆದಳು.

"ಪ್ರಶಾಂತನ್ನ ನೀವು ನೋಡಿದ್ರಾ? ಮಾತಾಡ್ಸಿದ್ರಾ...?"

"ಇಲ್ಲ...."

"ಮತ್ತೆ....? ಏನೇನೋ ಹೇಳ್ತಿದೀರಿ! ಸರ್‍ಯಾಗಿ ಹೇಳ್ಬಾರ್ದಾ...?"

"ಇಲ್ಕೊಡು...." ಎನ್ನುತ್ತಾ ಕಾಗದವನ್ನು, ಪೆನ್ನನ್ನು ಇಸ್ಕೊಂಡ.... ತನ್ನ ಪಾಡಿಗೆ ತಾನು ತನ್ನ ರೂಮಿಗೆ ಹೊರಟು ಹೋದ. ಪ್ರೇಮಾ ಮುಸಿ ಮುಸಿ ಅತ್ತಳು. ಯಾರಿಗಾದರೂ ಹೇಳೋಣವೆಂದುಕೊಂಡರೆ ಎಲ್ಲರೂ ಮಲಗಿದ್ದಾರೆ.... ಇನ್ನು ನಿದ್ದೆಯಂತೂ ಮಾರು ದೂರ..." ದೇವ್ರೇ...ನಮ್ಮ ಪ್ರಶಾಂತ ಯಾವ ಕಷ್ಟಕ್ಕೂ ಸಿಕ್ಕಿ ಬೀಳದಿರಲಿ." ಎಂದು ದೇವರಲ್ಲಿ ಪ್ರಾರ್ಥಿಸಿ ದಿಂಬಿಗೆ ತಲೆಯನ್ನು ಕೊಟ್ಟಳು.

ಈಗ ತಾಯಿಯನ್ನು ಮಾತನಾಡಿಸುವುದು ಬೇಡವೆಂದುಕೊಂಡು ವಿದ್ಯಾ ತನ್ನ ರೂಮಿಗೆ ಬಂದಳು. ತಂದೆ–ತಾಯಿಯ ಸಂಭಾಷಣೆಯನ್ನು ಕೇಳಿಸಿಕೊಂಡಿದ್ದಳು. ಆ ಮಾತುಗಳನ್ನು ಮತ್ತೆ ಮತ್ತೆ ಮೆಲುಕು ಹಾಕಿದಳು... ಸಂತೋಷನ ರೂಮಿನಲ್ಲಿ ದೀಪ ಉರಿಯುತ್ತಿತ್ತು. ಸದ್ದಾಗದಂತೆ ಮಹಡಿ ಹತ್ತಿ, ಅವನ ರೂಮಿಗೆ ಬಂದಳು.

"ಅದೇನೇ ಅಕ್ಕಾ, ಇಷ್ಹೊತ್ನಲ್ಲಿ? ನಿದ್ದೆ ಬರಲಿಲ್ವಾ....?"

"ಶ್" ಎಂದು ಬಾಯಿ ಮೇಲೆ ಬೆರಳಿಟ್ಟು ಒಳ ಬಂದು, ಬಾಗಿಲನ್ನು ಭದ್ರ ಪಡಿಸಿದಳು. ತಾನು ಕೇಳಿಸಿಕೊಂಡ ಮಾತುಗಳನ್ನು ಅವನಿಗೆ ತಿಳಿಸಿದಳು.

"ಅಪ್ಪಾ, ಪ್ರಶಾಂತನಿಗೆ ಏನು ಬರ್ದಿದಾರೆ ಅಂತ ಪತ್ತೆ ಹಚ್ಚಬೇಕಲ್ಲ... ಅದೂ ಅಮ್ಮನ ಹೆಸರ್ನಲ್ಲಿ....!"

"ಹೌದು..... ಏನೋ ಗುಟ್ಟು ಇರ್ಬೇಕು.... ನಾನು ಹೋಗಿ ಕೇಳ್ಲಾ....?"

"ಪೆದ್ದೇ.... ಕೇಳಿದ್ರೆ ಹೇಳ್ಬಿಡ್ತಾರಾ? ಅವರ್ಗೆ ಗೊತ್ತಿಲ್ದ ಹಾಗೆ ನೋಡ್ಬೇಕು...."

"ಅಮ್ಮಾ..... ಸೈನ್ ಹಾಕುವ ಮೊದಲು ಏನಿದೆ ಅಂತ ಓದ್ಬೇಕಾಗಿತ್ತು...."

"ಅದಕ್ಕೆ ಅವಕಾಶಾನೇ ಕೊಡ್ಲಿಲ್ಲ ಅಪ್ಪ.... ಒಂದ್ಕೆಲ್ಸ ಮಾಡು..... ಅವರ್ಗೆ ತಿಳೀದ ಹಾಗೆ ಆ ಕಾಗ್ದಾನ ತಗೊಂಡ್ಬಾ..... ಇಬ್ರೂ ಓದೋಣ."

"ಈಗ? ಈಗಾಗುಲ್ಲ. ಅಲ್ಲೇ ಮಲಗಿರ್ತಾರಲ್ಲ..... ಬೆಳಗ್ಗೆ ಅವ್ರು ಸ್ನಾನಕ್ಕೆ ಹೋದಾಗ ಹುಡುಕೋಣ.... ಅದಕ್ಕೆ ಮುಂಚೆ ಅವ್ರೇನೂ ಪೋಸ್ಟ್ ಮಾಡುಲ್ಲ."

"ಸಿಗ್ದೇ ಹೋದ್ರೆ....."

"ಸಿಗುತ್ತೇ ಕಣೇ. ಅಲ್ಲೇ ಎಲ್ಲೋ ಇಟ್ಟಿರ್ತಾರೆ. ನೀನೀಗ ಮಲಕ್ಕೋ ಹೋಗು. ಬೆಳಗ್ಗೆ ನೋಡೋಣ." ವಿದ್ಯಾ ಕೆಳಗಿಳಿದು ಬಂದಳು.

* * *

ಅಧ್ಯಾಯ ಹದಿನಾರು

ಸದ್ದಿಲ್ಲದೆ ಬಂದಿಳಿದ ಗಂಡಿನ ಮನೆಯವರು

ಬೆಳಗ್ಗೆ ಭಟ್ಟ ಸ್ನಾನಕ್ಕೆ ಹೋಗುವುದನ್ನೇ ಇಬ್ಬರೂ ಕಾಯುತ್ತಿದ್ದರು. ಅಪ್ಪ ಬಚ್ಚಲು ಮನೆಗೆ ಹೋದ್ರೆ, ಇಪ್ಪತ್ತು ನಿಮಿಷಕ್ಕೆ ಮುಂಚೆ ಆಚೆಗೆ ಬರುವುದಿಲ್ಲ ಎನ್ನುವುದನ್ನು ತಿಳಿದಿದ್ದರು.

"ನೀನು ಈ ರೂಮ್ನಲ್ಲಿ ಹುಡುಕು, ನಾನು ಆಫೀಸ್ ರೂಮ್‌ನಲ್ಲಿ ನೋಡ್ತೀನಿ." ಎಂದು ಹೇಳಿದ. ಟೇಬಲ್ ಮೇಲೆ, ಪುಸ್ತಕಗಳ ಶೆಲ್ಫ್‌ನಲ್ಲಿ, ದಿಂಬಿನ ಕೆಳಗೆ, ಮೆತ್ತೆಯ ಕೆಳಗೆ ಎಲ್ಲಿ ಹುಡುಕಿದರೂ ಸಿಗಲಿಲ್ಲ. ಸಂತೋಷ ಅಪ್ಪನ ಕರಿಯ ಕೋಟಿನ ಜೇಬುಗಳಿಗೆ ಕೈ ಹಾಕಿ ತಡಕಿದ. ಸಿಕ್ಕಿತು.... ಆದರೆ, ಕಾಗದವನ್ನು ಕವರಿನೊಳಗೆ ಇಟ್ಟು ಅಂಟಿಸಿ, ಮೇಲೆ ವಿಳಾಸವನ್ನು ಬರೆದಿಟ್ಟಾಗಿತ್ತು. ಸಂತೋಷ, ವಿದ್ಯಾಳಿಗೆ ತೋರಿಸಿದ. "ಈಗೇನೇ ಮಾಡೋದು.... ಅಂಟಿಸಿಟ್ಟು ಬಿಟ್ಟಿದ್ದಾರಲ್ಲ..."

"ಆ ಅಡ್ರೆಸ್‌ನ್ನು ಬರೆದಿಟ್ಟುಕೊಳ್ಳೋಣ...." ಸಂತೋಷ ಪೆನ್ನಿನಿಂದ ತನ್ನ ಅಂಗೈ ಮೇಲೆ ಅಡ್ರೆಸ್ಸನ್ನು ಬರೆದುಕೊಂಡ.....

"ಒಂದ್ಕೆಲ್ಸ ಮಾಡೋಣ..... ಮೆಲ್ಲಗೆ ಕವರನ್ನು ಬಿಡಿಸಿ, ನೋಡೋಣ...."

"ಬೇಡ ಬೇಡ. ಅದಕ್ಕೀಗ ಸಮಯ ಎಲ್ಲಿದೆ? ಅಪ್ಪಂಗೆ ಗೊತ್ತಾದ್ರೆ ಸಂಶಯ ಬರುತ್ತೆ. ಹೇಗೂ ಈ ಅಡ್ರೆಸ್ ಸಿಕ್ತಲ್ಲ. ಪ್ರಶಾಂತನಿಗೆ ನೀನೇ ಒಂದು ಕಾಗ್ದ ಬರೆದ್ಬಿಡು.... ಆ ಕಾಗ್ದ ಬರ್ದದ್ದು ಅಮ್ಮ ಅಲ್ಲ ಅಂತ ತಿಳಿದ್ರೆ ಸಾಕು."

"ಸರಿ ಹಾಗಾದ್ರೆ ಈಗ್ಲೇ ಬರ್ದು ಕೊಡ್ತೀನಿ" ಎನ್ನುತ್ತಾ ಒಂದು ಮಾರುದ್ದ ಕಾಗದವನ್ನು ಬರೆದಳು. ಅವನ ಕೈಗೆ ಕೊಟ್ಟಳು.

"ಇಷ್ಟು ದೊಡ್ಡ ಕಾಗ್ದ...? ಮೇಲೆ ಸ್ಟಾಂಪ್ ಹಾಕ್ಬೇಕಾಗುತ್ತೋ ಏನೋ... ಅವನ್ಗೆ ಓದೋಕೆ ಅರ್ಧ ಗಂಟೆ ಬೇಕಾಗುತ್ತೆ."

"ಚಿಕ್ಕದ್ಮಾಡ್ಲಾ?"

"ಇರಲಿ ಬಿಡು. ರಿಜಿಸ್ಟರ್ಡ್ ಪೋಸ್ಟ್ ಮಾಡ್ತೀನಿ. ನೇರವಾಗಿ ಅವನ ಕೈಗೇ ಸೇರುತ್ತೆ." ತಂದೆ ಬಚ್ಚಲು ಮನೆಯಿಂದ ಹೊರ ಬರುವಷ್ಟರಲ್ಲಿ ತಮ್ಮ ಕೆಲಸವನ್ನು ಮುಗಿಸಿದ್ದರು. ಸಂತೋಷ ಜ್ಞಾಪಕದಿಂದ ಆ ಪತ್ರವನ್ನು ತೆಗೆದಿಟ್ಟುಕೊಂಡ....

"ಸಂತೋಷ ಬಾಯಿಲ್ಲಿ.... ಸ್ವಲ್ಪ ಮಾತಾಡ್ಬೇಕು."

"ಏನಮ್ಮಾ..... ಸಾಯಂಕಾಲ ಆಡಿದ್ರೆ ಆಗುಲ್ವಾ! ನನ್ಗೆ ಈಗ ಕಾಲೇಜ್ಗೆ

ಹೊತ್ತಾಯ್ತು." ತಾಯಿ ಏನು ಮಾತಾಡಬಹುದೆಂದು ಊಹಿಸಿದ್ದ.

"ಸರಿ.... ಹಾಗಾದ್ರೆ.... ಎಲ್ರದ್ದೂ ತಿಂಡಿ ಆಯ್ತಾ.....?"

"ಹೂಂನಮ್ಮಾ." ಎನ್ನುತ್ತಾ ಸಂತೋಷ ಅಲ್ಲಿಂದ ಸರಿದಿದ್ದ. ತಾಯಿಯ ಮುಖದ ಆತಂಕದ ಗೆರೆಗಳನ್ನು ಕಂಡ. ಅಪ್ಪ ತಮ್ಮ ದಬ್ಬಾಳಿಕೆಯನ್ನು ನಿಲ್ಲಿಸದ ಹೊರತು ಅಮ್ಮನಿಗೆ ಸುಖವಿಲ್ಲ ಅಂತಂದುಕೊಂಡ.

* * *

ಬೇಗ ಹೊತ್ತು ಕಳೆಯಬಾರದೇ ಎಂದು ತವಕದಿಂದ ಮಗ ಕಾಲೇಜಿನಿಂದ ವಾಪಸ್ಸಾಗುವುದನ್ನೇ ಕಾಯುತ್ತಿದ್ದಳು ಪ್ರೇಮಾ. ಅವನು ಪುಸ್ತಕಗಳನ್ನು ತೆಗೆದಿಟ್ಟು ಕೈ – ಕಾಲು ತೊಳೆದು, ತಿಂಡಿ ಕಾಫಿಯನ್ನು ಮುಗಿಸಿ ಬರುವುದನ್ನು ಸಹನೆಯಿಂದ ಕಾದಳು.

"ಹೂಂ... ಈಗ್ಹೇಳಮ್ಮಾ ಏನ್ವಿಷಯ?" ತಾಯಿಯ ಮುಂದೆ ಕೈಕಟ್ಟಿ ನಿಂತ.

"ಕೂತ್ಕೋ...." ತನ್ನ ಪಕ್ಕದ ಜಾಗವನ್ನು ತೋರಿದಳು. ಸಂತೋಷ ಕುಳಿತ.

"ಪ್ರಶಾಂತ ಒಂದು ಚೆಕ್ ಕಳಿಸಿದ್ನಲ್ಲ... ಗೌತಮಂಗೆ ಅದರ ವಿವರಗಳನ್ನು ಕೊಟ್ಟಿದ್ದೆ ತಾನೇ?"

"ಹೂಂನಮ್ಮ ಕೊಟ್ಟಿದ್ದೆ...."

"ಗೌತಮ ಮರೀದೇ ಪತ್ತೆ ಹಚ್ತಾನೆ ಅಲ್ವಾ...?"

"ಹೂಂನಮ್ಮ. ಯಾಕ್ಮರೀತಾನೇ? ಇನ್ನು ಇವತ್ತು ಬೆಳಗ್ಗೆ ಊರು ಸೇರಿ ರ್ತಾರೆ... ತತ್‌ಕ್ಷಣಕ್ಕೆ ಎಲ್ಲಿ ಹುಡುಕ್ತಾನೆ?"

"ನಂಗ್ಯಾಕೋ ಆತಂಕ ಕಣೋ...." ಎನ್ನುತ್ತಾ ರಾತ್ರಿಯ ವಿಷಯವನ್ನು ತಿಳಿಸಿದಳು.

"ಅದೆಂಥಾ ಕಾಗ್ದವೋ.... ಅದಕ್ಯಾಕೆ ನನ್ನ ಸೈನ್ ಬೇಕಿತ್ತೋ....? ನಂಗಂತೂ ಒಂದೂ ಅರ್ಥವಾಗ್ತಿಲ್ಲ."

"ನೀನೂ ಸರಿಯಾಗಿದೀ ಕಣಮ್ಮಾ. ಅಪ್ಪಂಗ್ಹೆದ್ರಿ ಸೈನ್ ಮಾಡಿದೀಯಲ್ಲ. ಅದರಲ್ಲಿ ಯಾರಿಗೆ ಏನು ಬರೆದಿತ್ತು ಅಂತ ಓದದೇ ಹೇಗೆ ಸೈನ್ ಮಾಡ್ದೆ ನೀನು? ಲಾಯ್ರ ಹೆಂಡ್ತಿಯಾಗಿ, ಅಷ್ಟೂ ಗೊತ್ತಾಗ್ಲಿಲ್ವಾ ನಿಂಗೆ?"

"ಹೌದು ಗೊತ್ತಾಗ್ಲಿಲ್ಲ. ಈಗ ಏನ್ಮಾಡ್ಬೇಕೂಂತ ನೀನ್ಹೇಳು" ರೇಗಿ ನುಡಿದಳು.

"ಈಗ ನನ್ಮೇಲೆ ರೇಗಿದ್ರೆ...? ನನ್ನನ್ನಾಗ್ಲೀ ಅಕ್ಕನ್ನಾಗ್ಲೀ ಕರೀಬೇಕಾಗಿತ್ತು. ಅಥವಾ ಬೆಳಗ್ಗೆ ಸೈನ್ ಮಾಡ್ತೀನಿ ಅಂತ ಹೇಳ್ಬೇಕಾಗಿತ್ತು."

"ಅದಕ್ಕೆಲ್ಲಾ ಸಮಯಾನೇ ಕೊಡ್ಲಿಲ್ಲ ನಿಮ್ಮಪ್ಪ.... ಹೋಗ್ಲಿ ಬಿಡು. ಅವ್ನ ಹಣೇಲಿ ಏನೇನು ಬರೆದಿದೆಯೋ ಹಾಗೇ ಆಗುತ್ತೆ. ಆದ್ರೂ ಏನೋ ಸಂಕ್ಟ ಆಗುತ್ತೆ ಕಣೋ...."

"ಸರಿ ಬಿಡು. ಎಷ್ಟೆಷ್ಟೂಂತ ಕೊರಗ್ತೀಯ? ಅವನು ಹುಶಾರಾಗಿದಾನೇಂತ ತಿಳೀತಲ್ಲ.... ನಾನು ಅಪ್ಪನ್ನೇ ನೇರವಾಗಿ ಕೇಳಿ ಬಿಡ್ತೀನಿ ಇದೆಲ್ಲಾ ಏನೂಂತಾ?"

"ಬೇಡ ಬೇಡ. ಅವ್ರಿಗೆ ಕೋಪ ಬರುತ್ತೆ..."

"ಅವ್ರಿಗೆ ಕೋಪ ಬರುತ್ತೆ ಅಂತ ಅವ್ರು ಹೇಳಿ ಹೇಳ್ದಾಗೆಲ್ಲಾ ಕೇಳುಕ್ಕಾಗುತ್ತೇ ನಮ್ಮಾ.... ನಿಂಗೊತ್ತಾಗುಲ್ಲ ಸುಮ್ನಿರು..."

"ನೀನೂ ಪ್ರಶಾಂತನ ಥರ ಎದುರು ಬೀಳ್ಬೇಡ ಕಣೋ. ನಂಗೆ ಭಯ ಆಗುತ್ತೆ."

"ನಾನು ಯಾವ್ದೇ ಕಾರಣಕ್ಕೂ ಮನೆ ಬಿಟ್ಟು ಹೋಗುಲ್ಲಮ್ಮ. ನೀನು ಧೈರ್ಯ ವಾಗಿರು." ತಾಯಿಯ ಭುಜದ ಮೇಲೆ ತಲೆಯನ್ನಿಟ್ಟ. ಮಗನ ತಲೆಯನ್ನು ಪ್ರೀತಿ ಯಿಂದ ಸವರಿದಳು. ಕಣ್ಣುಗಳು ತುಂಬಿದ ಕೊಳಗಳಾಗಿದ್ದವು.

* * *

"ನಾಳೆ ಒಂದ್ನಾಲ್ಕು ಜನ, ಬೆಂಗ್ಳೂರ್ನಿಂದ ನಮ್ಮ ಮನೆಗೆ ಬರ್ತಿದಾರೆ... ಅಡುಗೆಗೆ ಏನಾದ್ರೂ ಸಾಮಾನು ಬೇಕಿದ್ರೆ ಪಟ್ಟಿ ಮಾಡಿ, ಅಂಗ್ಡಿಗೆ ಕಳಿಸ್ಕೊಡಿ...." ಭಟ್ಟ ಶಾರದಮ್ಮನಿಗೆ ಹೇಳಿದ.

"ಏನಡಿಗೆ ಮಾಡ್ಬೇಕು?"

"ಏನಾದ್ರೂ ಮಾಡಿ. ಹೊರಗಿನೋರ್ಗೆ ಸರಿ ಹೋಘುವಂಥಾದ್ದು. ಕಾಯಿ ಮಿಠಾಯಿ ಮಾಡ್ಬಿಡಿ... ನಿಮ್ಮಿಬ್ರಿಗೆ ಆಗ್ದಿದ್ರೆ ಹೇಳ್ಬಿಡಿ.... ಅಡ್ಗೆಯೋರ್ಗೆ ಹೇಳ್ತೀನಿ."

"ಪರ್ವಾಗಿಲ್ಲ ನಾನೇ ಮಾಡ್ತೀನಿ. ಕಾಮಾಕ್ಷಮ್ಮಂಗೆ ಹೇಳಿದ್ರೆ ಬಂದು ಸಹಾಯ ಮಾಡ್ತಾರೆ."

"ಬೇಡ, ಕಾಮಾಕ್ಷಿಗೆ ಹೇಳೋದೇನೂ ಬೇಡ." ಅವನು ಒರಟಾಗಿ ನುಡಿದು ಹೊರಟು ಹೋದ. ಅವನು ಅತ್ತ ಕಡೆ ಹೋದ ಕೂಡ್ಲೇ ಶಾರದಮ್ಮ ಪ್ರೇಮಳ ರೂಮ್‌ಗೆ ಬಂದರು.

"ಅಮ್ಮಾವ್ರೇ.... ನಾಳೆ ದಿನ ಯಾರೋ ಅತಿಥಿಗಳು ಬರ್ತಿದಾರಂತೆ. ನೀವಾದ್ರೂ ಹೇಳಿ ಏನೇನಡ್ಗೆ ಮಾಡ್ಬೇಕೂಂತ?"

"ಹೌದಾ? ಹಾಗಂತ ಯಾರ್ಹೇಳಿದ್ರು?"

"ಯಜಮಾನ್ರು ಹೇಳಿದ್ರು.... ನಿಮಗ್ಗೊತ್ತಿಲ್ವಾ?"

"ಇಲ್ಲ. ನನಗಿನ್ನೂ ಹೇಳಿಲ್ಲ. ಎಷ್ಟು ಜನ ಬರ್ತಾರಂತೆ?"

"ಒಂದ್ನಾಲ್ಕು ಜನ ಅಂತಂದ್ರು. ವಿದ್ಯಾ ಕಾಲೇಜ್ಗೆ ಹೋಗ್ದೆ ಇದ್ರೇ.... ನಂಗೆ ಅಡ್ಗೆ ಕೆಲ್ಸದಲ್ಲಿ ಎಷ್ಟೋ ನಿಸೂರಾಗುತ್ತೆ.."

"ಅವಳ್ನಾಡಿಗೆ ಅವ್ಳು ಕಾಲೇಜ್ಗೆ ಹೋಗ್ಲೀ. ಕಾಮಾಕ್ಷಿಗೆ ಹೇಳಿದ್ರಾತು."

"ಕಾಮಾಕ್ಷಮ್ಮಂಗೆ ಹೇಳೋದ್ಬೇಡಾಂತಂದ್ರು ನಿಮ್ಮೆಜಮಾನ್ರು...."

"ಯಾಕಂತೆ...! ಎಲ್ಲಾದಕ್ಕೂ ಮೊದ್ಲು ಓಡಿ ಬರ್ತಿದ್ದೋರೇ.... ಈ ಕಾಮಾಕ್ಷಿ. ಬಿಡಿ ಆ ಮಾತನ್ನ. ಅವರ್ಮೇಲೂ ಏನೋ ಅಸಮಾಧಾನವಿರ್ಬೇಕು...."

"ಬರೀ ಗಂಡಸ್ರಾದ್ರೆ ಪರ್ವಾಗಿಲ್ಲ.... ಏನೋ ಒಂದು ಅಡ್ಗೆ ಬೇಯಿಸಿದ್ರಾತು."

"ಕಾಯಿ ಮಿಠಾಯಿ ಮಾಡಿ ಅಂತಂದ್ರು. ಇವತ್ತೇ ಮಾಡಿಟ್ಬಿಡ್ತೀನಿ...."

"ನೀವು ಕಾಯಿ ತುರಿದ್ಕೊಡಿ ಶಾರದಮ್ಮ.... ನಾನು ಮಾಡ್ತೀನಿ. ಮಾಡ್ದೇ ಮಾಡ್ದೇ ಎಲ್ಲಾ ಮರೆತು ಹೋಗುತ್ತೆ ಅಷ್ಟೇ.... ಎರಡು ಕಾಯಿ ಒಡೆದರೆ ಸಾಕು ಅಲ್ವಾ....?"

"ಸಾಕಾಗ್ದಿದ್ರೆ ನೋಡ್ಕೊಂಡು ಇನ್ನೆರಡು ಕಾಯಿ ಒಡೆದ್ರಾತು.... ಬನ್ನಿ...." ಇಬ್ಬರೂ ಅಡುಗೆ ಮನೆಗೆ ತೆರಳಿದರು.

* * *

"ಶಾರದಮ್ಮ ಏನ್ತಿಂಡಿ ಮಾಡಿದೀರಿ.... ಮನೆಯೆಲ್ಲಾ ಘಂ ಅಂತ ಸುವಾಸ್ನೆ ತುಂಬ್ಕೊಂಡಿದೆ" ವಿದ್ಯಾ ಅಡುಗೆಮನೆ ಬಾಗಿಲಲ್ಲಿ ನಿಂತು ಕೇಳಿದಳು.

"ಕಾಯಿ ಮಿಠಾಯಿ ಮಾಡಿದೀನಿ. ರುಚಿ ನೋಡ್ತೀಯಾ?"

"ಕಾಯಿ ಮಿಠಾಯೀನಾ? ಏನ್ವಿಷಯ? ಯಾವ ಹಬ್ಬವನ್ನೂ ನಮ್ಮನೇಲಿ ಮಾಡುಲ್ಲ. ಯಾರೂ ಅತಿಥಿಗಳು ಬಂದಿಲ್ಲ...."

"ನಾಳೆ ಬೆಂಗಳೂರ್ನಿಂದ ನಿಮ್ಮಪ್ಪನ ಕಡೆಯವ್ರು ಯಾರೋ ಬರ್ತಾರಂತೆ...."

"ಹೌದೇನಮ್ಮ.... ಇಲ್ಲೇನ್ಮಾಡ್ತಿದೀಯ ನೀನು....? ಕೆಮ್ಮು ಬರುತ್ತೆ ನಿಂಗೆ ಅಷ್ಟೇ...."

"ಅಮ್ನೋರೇ ಈ ಕಾಯಿ ಮಿಠಾಯೀನ ಮಾಡಿದ್ದು.... ರುಚಿ ನೋಡು..." ಎನ್ನುತ್ತಾ ಅವಳ ಕೈಗೆ ಒಂದು ಚೂರನ್ನು ಹಾಕಿದಳು. ವಿದ್ಯಾ ಬಾಯಿಗೆ ಹಾಕ್ಕೊಂಡಳು.

"ತುಂಬಾ ಚೆನ್ನಾಗಿದೆ. ನೀವೂ ಒಂಚೂರು ರುಚಿ ನೋಡಿ..."

"ಇರ್ಲಿ. ನೀನು ಹೇಳಿದ್ಮೇಲೆ ಅದು ರುಚ್ಯಾಗಿಯಾಗಿರುತ್ತೆ...."

"ಕಾಯಿ ತುರಿ, ಸಕ್ಕರೆ, ಏಲಕ್ಕಿ ಪುಡಿ ಸೇರಿದ್ಮೇಲೆ ರುಚಿಯಾಗಿಲ್ದೇ ಏನಾಗುತ್ತೆ?" ಪ್ರೇಮಾ ನಗುತ್ತಾ ನುಡಿದಳು.

"ಖಾರ ಏನ್ಮಾಡ್ತೀಮ್ಮಾ......? ಅಲ್ಲ ಅಲ್ಲ ಶಾರದಮ್ನೋರೇ ಖಾರ ಯಾವ್ದು?"

"ನಿಮ್ತಂದೆ ಬಂದ್ಮೇಲೆ ಅವ್ರೇ ಹೇಳ್ತಾರೆ. ಇನ್ನೂ ತರಕಾರೀನ ತರಿಸಿಲ್ಲ."

"ಅಪ್ಪನ ಕಡೆಯವ್ರು? ಬೆಂಗ್ಳೂರ್ನಿಂದ ಯಾರಿರಬಹುದು?"

"ಇನ್ಯಾರು! ಯಾರೋ ಶ್ರೀಮಂತ ಕಕ್ಷಿದಾರ್ರು..... ಬೇರೆ ಯಾರು ಗೊತ್ತಿದಾರೆ ನಿಮ್ಮಪ್ಪಂಗೆ....? ನೆಂಟ್ರನ್ನೆಲ್ಲಾ ದೂರ ಮಾಡ್ಕೊಂಡಿದಾರೆ! ಯಾರ್ಬರ್ತಾರೆ ನಮ್ಮನೇಗೆ?"

"ಕಕ್ಷಿದಾರ್ರಿಗೆ ಕಾಯಿ ಮಿಠಾಯೀನ.... ಎಲ್ಲೋ ಸ್ಪೆಷಲ್ ಕಕ್ಷಿದಾರ್ರೇ ಇರ್ಬೇಕು....

ಎಷ್ಟೊತ್ತಿಗೆ ಬರ್ತಾರಂತೆ..."

"ಏನೋ ನಂಗೊತ್ತಿಲ್ಲ. ನಂಗೇನೂ ಹೇಳೇ ಇಲ್ಲ ಅವ್ರು."

"ಯಾಕ್ಹೀಗ್ಮಾಡ್ತಾರೆ ಅಪ್ಪ. ನಿಂಗ್ಹೇಳ್ದೇ ಇದ್ಮೇಲೆ ನೀನ್ಯಾಕೆ ಮಾಡ್ದೆ ಈ ಕೊಬ್ಬರಿ ಮಿಠಾಯೀನ?"

"ಅವ್ರು ಹಾಗಾಡ್ತಾರೇಂತ ನಾನೂ ಹಾಗಾಡುಕ್ಕಾಗುತ್ತಾ....? ನಮ್ಮ ಸಂಸಾರದ ಗುಟ್ಟು ನಮ್ಮನಮ್ಮಲ್ಲೇ ಇರ್ಬೇಕು. ಹೊರಗಿನವ್ರಿಗೆ ತಿಳಿದ್ರೆ ಏನ್ಚೆನ್ನ?"

"ಅಪ್ಪ ಏನೇ ತಪ್ಪಾಡಿದ್ರೂ ನೀನು ಒಪ್ಪ ಹಾಕ್ಕೋತೀಯ.... ಅದಕ್ಕೇ ಅವರು ಬದಲಾಗೇ ಇಲ್ಲ."

"ಅವ್ರಿಗ್ಯಾನೇ ಇನ್ಯಾರು? ತನ್ನ ಮನೆಯವ್ರನ್ನೆಲ್ಲಾ ದೂರ ಮಾಡ್ಕೊಂಡಿದಾರೆ..... ನಾನೊಬ್ಳೇ... ಅವ್ರನ್ನ ಕಟ್ಕೊಂಡಿದ್ದಕ್ಕೆ, ಕಟ್ಗೆ ಮೇಲೇರೋವರೆಗೂ ಸರಿ ಹೋಗಿಸ್ಕೋಳ್ಬೇಕು..."

"ನೀನ್ಹೀಗೆಲ್ಲಾ ಮಾತಾಡ್ಬೇಡ. ನಂಗಿಷ್ಟವಾಗುಲ್ಲ." ಎನ್ನುತ್ತಾ ಮತ್ತೊಂದು ಚೂರನ್ನು ಕೇಳಿದಳು.

"ಇನ್ನು ಸಾಕು...... ಒಂದ್ವೇಳೆ ಸಾಕಾಗ್ದೇ ಇದ್ರೆ ಅಸಹ್ಯ...."

"ನಾಕು ಜನಕ್ಕೆ ನಾಕು ಪೀಸು..... ಉಳಿದದ್ದು ನಮಗೇ ತಾನೇ....?"

"ಹೌದು..... ನಿಮ್ಮಗಳಿಗೇ..... ಸ್ಕೂಲ್ನಿಂದ ಬಂದ ಮಕ್ಳಿಗೆ ಕೊಡ್ದೇ ಇರ್ತೀನಾ? ಇವತ್ತೇನು ನೀನು ಬೇಗ ಬಂದ್ಬಿಟ್ಟಿದೀಯಲ್ಲ...."

"ಕ್ಲಾಸಿರ್ಲಿಲ್ಲ. ಸಂತೋಷ ಬಂದ್ನಾ...?"

"ಇಲ್ಲ. ಇನ್ನೂ ಬಂದಿಲ್ಲ. ನಿನ್ನೆಯಿಂದ ನಾನೂ ನೋಡ್ತಾನೇ ಇದೀನಿ, ಅದೇನು ಅಕ್ಕ, ತಮ್ಮ ಅಷ್ಟು ಗುಸುಗುಸು....." ಪ್ರೇಮಾ ಸಣ್ಣಗೆ ಕೆಮ್ಮಿದಳು.

"ನೀವು ಹೋಗಿ ಮಲಕ್ಕೊಳ್ಳಿ ಅಮ್ನೋರೇ... ಉಳಿದದ್ದು ನಾನು ತೆಗೆದಿಡ್ತೀನಿ...."

"ಹೋಗಿ ರೆಸ್ಟ್ ತಗೋ, ಕೆಮ್ಮಿದ್ರೆ ಅಪ್ಪನ ಮಾತುಗಳ್ನ ಕೇಳ್ಬೇಕಾಗುತ್ತೆ." ಪ್ರೇಮಾ ಎದ್ದು ಕೈ ತೊಳೆದು ತನ್ನ ರೂಮ್‌ಗೆ ಬಂದು ಮಂಚದ ಮೇಲೆ ಉರುಳಿ ಕೊಂಡಳು.

* * *

ಬೆಳಗ್ಗೆ ಅಲರಾಂ ಹೊಡೆದ ಅನಂತರ, ಒಬ್ಬೊಬ್ಬರಾಗಿ ಎದ್ದು, ಮುಖ ತೊಳೆದು ಓದಿಕೊಳ್ಳಲು ಕೂತಿದ್ದರು. ಮನೆ ಮುಂದೆ ಟ್ಯಾಕ್ಸಿ ನಿಂತ ಸದ್ದು ಕೇಳಿಸಿತ್ತು. ಅನಂತರ ಗೇಟು ತೆರೆದ ಸದ್ದು.... ಎಲ್ಲರ ಕಿವಿಯೂ ಕರೆಘಂಟೆಯ ಸದ್ದಿಗಾಗಿ ಕಾಯುತ್ತಿತ್ತು. ಹೌದು, ಕರೆಘಂಟೆ ಬಾರಿಸಿತು.

"ಅಮ್ಮಾ.... ಅವ್ರೆಲ್ಲಾ ಬಂದ್ರೂಂತ ಕಾಣುತ್ತೆ." ವಿದ್ಯಾ ತಾಯಿಯನ್ನು ಕರೆದಳು.

"ನಿಮ್ಮಪ್ಪ ನೋಡ್ಕೋತಾರೆ ಬಿಡು...." ಆದರೂ ವಿದ್ಯಾ ಒಳಬಾಗಿಲಲ್ಲಿ

ನಿಂತು ತಂದೆ ಬಾಗಿಲನ್ನು ತೆರೆಯುವುದನ್ನೇ ಕಾದಳು.

"ಬನ್ನಿ ಬನ್ನಿ...." ಅಪ್ಪ ಪಕ್ಕಕ್ಕೆ ಸರಿದರು.

"ಓ ಚಿಕ್ಕಮ್ಮ....! ಅಮ್ಮಾ ಚಿಕ್ಕಮ್ಮ ಬಂದ್ರು.... ಚಿಕ್ಕಮ್ಮನ ಹಿಂದೆ ಚಿಕ್ಕಪ್ಪ!! ಚಿಕ್ಕಪ್ಪನೂ ಬಂದಿದಾರೆ....."

ಪ್ರೇಮಾ ಸಂಪೂರ್ಣವಾಗಿ ಎಚ್ಚರಗೊಂಡಳು.

"ಭವಾನಿ ಬಂದ್ಲಾ....!?"

"ಹೂಂನಮ್ಮ. ಅವರ್ಜತೆ ಇನ್ನು ಯಾರೋ ಇದಾರೆ....."

"ಹೌದೇನೇ.....!" ಎನ್ನುತ್ತಾ ಪ್ರೇಮಾ ಎದ್ದು ಮುಂಗೂದಲನ್ನು ಸರಿ ಮಾಡಿಕೊಂಡಳು.

"ಅಕ್ಕಾ ಇನ್ನೂ ಎದ್ದಿಲ್ವಾ?" ಭವಾನಿಯ ಧ್ವನಿ.

"ಎದ್ದಿದ್ದಾಳೆ. ಒಳಕ್ಕೆ ಬನ್ನಿ ಚಿಕ್ಕಮ್ಮ...."

ಚಿಕ್ಕಮ್ಮನ ಹಿಂದೆ ನಿಂತಿದ್ದ ಸುಶೀಲಳನ್ನು ಕಂಡು ಮತ್ತೂ ಆಶ್ಚರ್ಯ. ಮುಗುಳ್ನಕ್ಕು ನಿಂತವಳನ್ನು ಹಾಗೆ ನೋಡಿ ಮಾತನ್ನಾಡಿಸಿದಳು ಸುಶೀಲಾ,

"ಎಲ್ಲಾ ಚೆನ್ನಾಗಿದೀರಾ....?"

"ಹುಂ. ಎಲ್ಲಾ ಕೂತ್ಕೊಳ್ಳಿ. ಅಮ್ಮನ್ನ ಕರೀತೀನಿ...." ಸುಶೀಲಾ ಮನೆಯ ಒಳಗೆ ಒಮ್ಮೆ ಕಣ್ಣು ಹಾಯಿಸಿದಳು. ಎಲ್ಲರೂ ಕುಳಿತರು. ಭವಾನಿ, ವಿದ್ಯಾಳ ಹಿಂದೆ, ಅವಳಕ್ಕನನ್ನು ನೋಡಲು ಬಂದಳು.

"ಪ್ರೇಮಕ್ಕಾ....." ಕೈ ಚಾಚುತ್ತಾ ಅಕ್ಕನನ್ನು ತಬ್ಬಿಕೊಂಡಳು. ಕೆಲವು ನಿಮಿಷಗಳು ಇಬ್ಬರೂ ಭಾವಸಾಗರದಲ್ಲಿ ಮುಳುಗಿ ಹೋಗಿದ್ದರು....

"ಅಕ್ಕಾ..... ಯಾಕೇ ಹೀಗಾಗಿ ಹೋಗಿದೀಯ....?"

"ನೀನೂ ಅಷ್ಟೇ..... ಮೊದಲ್ನಂತೆ ಇಲ್ವೇ ಇಲ್ಲ....."

"ನಂಗೇನೋ ಆಪರೇಷನ್ ಆಯ್ತು.... ನಿಂಗೆ....? ಹೇಗಿದ್ದೋಳು ಹೇಗಾಗಿ ಹೋಗಿದೀಯ? ಭಾವಂಗಷ್ಟೂ ಗೊತ್ತಾಗುಲ್ವಾ?"

"ನನ್ನ ಗ್ರಹಚಾರಕ್ಕೆ, ನಿಮ್ಮ ಭಾವನ್ನಂದೇನುಪಯೋಗ? ಯಾರ್‍ಯಾರು ಬಂದಿದೀರಿ....?"

"ಹೊರಗೆ ಬಾ...... ಸುಶೀಲಾ, ಗೋಪಾಲ ಕೂಡಾ ಬಂದಿದಾರೆ...."

"ಹೌದೇನು....?" ಅವಳ ಆಶ್ಚರ್ಯವನ್ನು ಭವಾನಿ ಗಮನಿಸಲಿಲ್ಲ. ಪ್ರೇಮಕ್ಕ ನನ್ನು ಹೊರಕ್ಕೆ ಕರೆತಂದಳು.

"ಇವಳು ಸುಶೀಲಾ...... ಇವರು ಅವಳ ಯಜಮಾನರು.... ಇವರು ಯಾರು ಹೇಳು ನೋಡೋಣ....?" ತನ್ನ ಗಂಡನ ಕಡೆ ಕೈ ಮಾಡಿದಳು. ಪ್ರೇಮಾ ಗುರುತಿಸಿ ಮುಗುಳ್ನಕ್ಕಳು.

"ಎಲ್ಲಾ ಹೇಗಿದೀರಿ? ಸುಶೀಲನ್ನ ಭವಾನಿಯ ಮದುವೇಲಿ ನೋಡಿದ್ದು. ಆಗ್ಲೂ ಈಗ್ಲೂ ಬಹಳ ಬದಲಾಗಿದಾಳೆ..... ಪ್ರಯಾಣ ಹೇಗಿತ್ತು? ಎಲ್ಲಾ ಏಳಿ ಕೈ – ಕಾಲು, ಮುಖ ತೊಳ್ಕೊಳ್ಳಿ...." ಅಲ್ಲೇ ಕುಳಿತಿದ್ದ ಗಂಡನ ಕಡೆ ನೋಡಿದಳು. ಅವನ ಮುಖದಲ್ಲಿ ಯಾವ ಅಸಮಾಧಾನವೂ ಇಲ್ಲ..... ಅವ್ರ ಕಡೆಯವ್ರೂ ಯಾರೋ ಬರೋರು ಇದಾರೆ..... ಈಗ ನೋಡಿದ್ರೆ, ದಿಢೀರನೆ ಇವ್ರುಗಳು ಬಂದಿಳ್ದಿದಾರೆ. ಕಸಿವಿಸಿಗೊಂಡಿದ್ದಳು.

"ಬನ್ನಿ...." ಸುಶೀಲಳೆದ್ದು, ವಿದ್ಯಾಳ ಹಿಂದೆ ಬಚ್ಚಲು ಮನೆಯ ಕಡೆ ನಡೆದಳು.

"ಮನೆ ತುಂಬಾ ದೊಡ್ಡದಾಗಿದೆ. ಚೆನ್ನಾಗಿದೆ" ಗೋಪಾಲನ ಮಾತನ್ನು ಪ್ರಸಾದನೂ ಅನುಮೋದಿಸಿದ.

"ಇಲ್ಲೆಲ್ಲಾ ಹಾಗೇನೇ, ದೊಡ್ಡ ದೊಡ್ಡ ಮನೆಗಳು.... ಒಳ್ಳೇ ಹಳೇ ಕಾಲದ ಗೆಸ್ಟ್ ಹೌಸ್ ಇದ್ದ ಹಾಗಿದೆ...." ಅವ್ರುಗಳೂ ಕೈ – ಕಾಲು ತೊಳೆದು ಬಂದರು. ಶಾರದಮ್ಮ ಎಲ್ಲರಿಗೂ ಬಿಸಿಬಿಸಿ ಕಾಫಿಯನ್ನು ತಂದಿತ್ತಳು. ಹಿತವಾದ ಆ ಕಾಫಿಯನ್ನು ಕುಡಿದು, ಗೋಪಾಲ, ಪ್ರಸಾದ ಇಬ್ಬರೂ ಎದ್ದು ನಿಂತರು.

"ಹೀಗೇ ಒಂದು ರೌಂಡ್ ಸುತ್ತಾಕ್ಕೊಂಡು ಬರ್ತೀವಿ.... ಈ ಕಡೆ ಎಲ್ಲಾ ನಾನೆಂದೂ ಬಂದೇ ಇಲ್ಲ...."

"ಸಂತೋಷನ್ನ ಕಳಿಸ್ತೀನಿ. ದಾರಿ ಗೀರಿ ತಪ್ಪಿ ಹೋದ್ರೇ...."

"ನಿಮ್ದೆಸ್ರು ಹೇಳಿದ್ರೆ ಯಾರಾದರೂ ದಾರಿ ತೋರಿಸ್ತಾರೆ...." ಪ್ರಸಾದ ನುಡಿದ. ಭಟ್ಟ ಹ್ಹೆ.. ಹ್ಹೆ.. ಅಂತ ನಕ್ಕ. ಅವರಿಬ್ಬರೂ ಬಾಗಿಲನ್ನು ದಾಟಿದರು. ಉಳಿದವರು ಒಳಬಾಗಿಲಲ್ಲಿ ನಿಂತು ನೋಡುತ್ತಿದ್ದರು, ಚಿಕ್ಕಮ್ಮನನ್ನು ಸುತ್ತುವರಿದಿದ್ದರು.

ಇವನು ಸಂತೋಷ, ಇವಳು ಚಿನ್ಮಯೀ...... ಇವಳು ನಳಿನಿ, ಇವನು ಶ್ರೀಕರ..... ವಿದ್ಯಾ ಎಲ್ಲರನ್ನೂ ಚಿಕ್ಕಮ್ಮನಿಗೆ ಪರಿಚಯಿಸಿದಳು. ಎಲ್ಲರೂ ನಮಸ್ಕಾರ ಎಂದು ಪಿಸುಗುಟ್ಟಿ ಕೈ ಮುಗಿದರು.

"ಅತ್ಗೇ ಈ ಹುಡ್ಗಿಯ ಕಣ್ಣನ್ನು ನೋಡಿ..... ಎಂಥಾ ನೀಲಿ ಕಣ್ಣು...." ಸುಶೀಲಾ ನಳಿನಿಯ ಕಣ್ಣುಗಳನ್ನು ಮೆಚ್ಚಿದಳು.

"ನಿನಗಿನ್ನೊಬ್ಬ ಮಗ ಇದ್ದಿದ್ರೆ, ಈ ಚಿನ್ನೂನ ನಿನ್ಸೊಸೆ ಮಾಡ್ಕೋ ಅಂತ ಹೇಳ್ತಿದ್ದೆ. ಚಿನ್ನು ಬಾಯಿಲ್ಲಿ.... ಈಗ ಏನು ಓದ್ತಾ ಇದೀಯ....?"

"ಹತ್ತನೇ ಸ್ಟ್ಯಾಂಡರ್ಡ್...." ಚಿನ್ಮಯೀ ಚಿಕ್ಕಮ್ಮನ ಪಕ್ಕ ಬಂದು ನಿಂತಳು.

"ಅತ್ಗೇ... ನಿಮ್ಮಕ್ಕನ ಮಕ್ಳು ಒಬ್ಬರಿಗಿಂತ ಒಬ್ಬರು ಚೆನ್ನಾಗಿದಾರೆ....."

"ಹೌದು ಸುಶೀಲಾ..... ನಮ್ಮಕ್ಕ ಕೂಡಾ ತುಂಬಾ ಚೆಲುವಾಗಿದ್ದಳು. ಆರು ಮಕ್ಕಳನ್ನು ಹೆತ್ತು ಹೀಗಾಗಿದಾಳೆ." ಪ್ರೇಮಾ ನಾಚಿದಳು. ಸುಮ್ಮನಿರು ಎನ್ನುವಂತೆ

ಭವಾನಿಯ ಕಡೆ ಸಂಜ್ಞೆ ಮಾಡಿದಳು. ಭವಾನಿ ಎಲ್ಲಾ ಮಕ್ಕಳನ್ನು ಹತ್ತಿರ ಕರೆದು, ಮೈದಡವಿ ಮಾತನಾಡಿಸಿದಳು. ಅವರಿಬ್ಬರೂ ಸ್ವರ್ಗದಿಂದ ಇಳಿದು ಬಂದ ದೇವತೆಯರೋ ಎಂಬಂತೆ, ಆ ಮಕ್ಕಳೆಲ್ಲಾ ಭಾವಪರವಶರಾಗಿದ್ದರು. ಅಷ್ಟಾದರೂ ಇದ್ದಕ್ಕಿದ್ದಂತೆ ಅವರುಗಳೇಕೆ ಬಂದಿದಾರೆ ಎಂದು ತಿಳಿದಿರಲಿಲ್ಲ. ಸುಶೀಲಾ ಮಕ್ಕಳೊಡನೆ ಮಾತಿಗಿಳಿದಿದ್ದಳು.

"ನೀರು ಕಾದಿದೆ.... ಎಲ್ರೂ ಸ್ನಾನ ಮಾಡಿ....." ಪ್ರೇಮಾ ತಂಗಿಗೆ ಹೇಳಿದಳು.

"ಇನ್ನಲ್ಪ ಕಾಫಿ ಇದ್ರೆ ಕೊಡು..... ಕಾಫಿ ತುಂಬಾ ಚೆನ್ನಾಗಿತ್ತು." ವಿದ್ಯಾ ಕಾಫಿ ತರಲೆಂದು ಒಳಗೆ ನಡೆದಳು. ಅವಳ ಹಿಂದೆ ಪ್ರೇಮಾ, ಭವಾನಿಯೂ ಒಳಗೆ ಬಂದರು.

"ಒಂದು ಬೊಟ್ಟು ಎಣ್ಣೇನ ನೆತ್ತಿಗೆ ಒತ್ಕೊಂಡು ನೀರು ಹಾಕ್ಕೊಳ್ಳೋಕೆ ಹೇಳು ಪ್ರೇಮಕ್ಕ.... ವಿದ್ಯಂಗೆ...." ಯಾಕೆ ಎನ್ನುವಂತೆ ನೋಡಿದಳು.

"ನಾವುಗಳು ವಿದ್ಯಾಳ ಮದುವೆ ಪ್ರಸ್ತಾವವನ್ನು ಎತ್ತಿಕೊಂಡು ಬಂದಿದೀವಿ.... ಭಾವ ಹೇಳಿರಬೇಕಲ್ವಾ?" ಭವಾನಿ ಅನುಮಾನದಿಂದ ಪ್ರಶ್ನಿಸಿದಾಗ ಪ್ರೇಮಾ ತಬ್ಬಿಬ್ಬು. ಅವಳ ಕಸಿವಿಸಿ ಕಂಡು ಭವಾನಿ ಎಚ್ಚೆತ್ತಳು.

"ಅದನ್ನೆಲ್ಲಾ ನಿಧಾನವಾಗಿ ಮಾತನಾಡೋಣ...."

"ಬೇಡ ಈಗ್ಲೇ ಹೇಳಿ ಬಿಡು. ನಂಗಂತೂ ಕೈ – ಕಾಲೇ ಆಡದಾಗಿದೆ. ನಿಮ್ಮ ಭಾವ ಯಾಕ ಹೀಗ್ಮಾಡ್ತಾರೋ....?"

"ಅವರ ಸ್ವಭಾವ ಅಂತೂ ಬದಲಾಗಿಲ್ಲ. ನೀನೂ ಕಾಗ್ದ ಬರೆದಿದ್ದೆಯಲ್ಲ... ದಿನೇಶನ್ನ ವಿಚಾರಿಸೋಕೆ.... ವಿದ್ಯಾ ಇವ್ರುಗಳಿಗೆಲ್ಲಾ ಒಪ್ಗೆಯಾಗಿದಾಳೆ. ಹೋದ ವಾರ, ಭಾವ ಕೂಡ ಇದೇ ವಿಷಯವನ್ನು ಮಾತಾಡೋಕೆ ಅಂತ ಬಂದಿದ್ರು...."

"ನಿಮ್ಮ ಭಾವ, ಅಲ್ಲಿಗೆ ಬಂದಿದ್ರಾ? ನಂಗೆ ನಂಬ್ಕೇನೇ ಬರ್ತಿಲ್ಲ."

"ಹೂಂನಕ್ಕ... ಅದೆಲ್ಲ ಒಂದು ದೊಡ್ಡ ಕಥೆ. ಈಗ ಮಾತು ಬೇಡ. ನಮ್ಮ ವಿದ್ಯಾ ಒಳ್ಳೆ ಮನೆಯನ್ನು ಸೇರುತಿದಾಳೆ. ಅದನ್ನೆಲ್ಲ ಮರೆತ್ಬಿಡೋಣ.... ಚಿಂತಿಸ್ಬೇಡಕ್ಕ."

"ಅಂದ್ರೆ.... ನಿಮ್ಮ ಭಾವಾನೇ ಎಲ್ಲಾ ನಿರ್ಧರಿಸಿ ಬಿಟ್ಟಿದ್ದಾರೆ ಅನ್ನು... ನನ್ಗಂತೂ ಒಂದೇ ಒಂದು ಸುಳಿವು ಕೊಟ್ಟಿಲ್ಲ. ನನಗಾದ್ರೂ ತಿಳಿಸ್ಬಾರ್ದಾಗಿತ್ತಾ....?"

"ಎಲ್ಲಾ ಒಗಟಾಗಿ ಕಾಣುತ್ತಕ್ಕ. ಈಗ ಕಡೇ ಗಳಿಗೇಲಿ... ಎನ್ಮಾಡೋಕಾಗುತ್ತೆ?"

"ಏನೂ ಮಾಡುಕ್ಕಾಗುಲ್ಲ. ಈ ಸಂಬಂಧ ಕುರಿತು ನನಗೆ ಯಾವ ಅನುಮಾನವೂ ಇಲ್ಲ. ಎಲ್ಲ ದೈವೇಚ್ಛೆ ಅಂತ ಅಂದ್ಕೊಳ್ತೀನಿ....ನೀನು ಹೇಳಿದ್ದು ಒಳ್ಳೇದಾಯ್ತು. ಇಲ್ದಿದ್ರೆ ದಡ್ಡಿ ಥರ ಏನೇನ್ಮಾತಾಡಿ ಬಿಡ್ತಿದ್ನೋ.... ನಗೆಪಾಟಲಾಗುತ್ತಿತ್ತು."

"ಹಾಗೆಲ್ಲಾ ಏನೂ ಯೋಚಿಸ್ಬೇಡ. ನಾನು ಇಲ್ವಾ? ನಾನು ಎಲ್ಲಾ ನೋಡಿಕೊಳ್ತೀನಿ."

"ನೀನಾದ್ರೂ ಒಂದ್ಮಾತು ಬರೀಬಾರ್ದಾಗಿತ್ತಾ....?"

"ದಿನೇಶ, ಗೌತಮ ಇಬ್ರೂ ಬಂದಿದ್ರಲ್ವಾ? ಅವ್ರೇನೂ ಹೇಳ್ಲಿಲ್ವಾ?"

"ಇಲ್ಲ. ಅವರಿಬ್ರೂ ಈ ಬಗ್ಗೆ ಏನೂ ಹೇಳ್ಲಿಲ್ಲ.... ಯಾಕೆ ಹೀಗ್ಮಾಡಿದ್ರೋ...."

"ಅವಕ್ಕೆ ಹುಡುಗಾಟ... ಇಲ್ಲಿ ಬಂದು ತಿಂದ್ಕೊಂಡು, ಉಂಡ್ಕೊಂಡು ಲಗ್ಗೆ ಎಬ್ಬಿಸಿ ಹೋಗಿದಾರೆ...."

"ಅಂದ್ರೆ ನಮ್ಮನ್ನೆಲ್ಲಾ ಫೂಲ್ ಮಾಡಿದಾರೆ. ನಾನೂ ಸರಿಯಾಗಿ ವಿಚಾರಿಸ್ಕೊಳ್ತೀನಿ" ಅವರುಗಳ ಮಾತನ್ನ ಕೇಳಿಸಿಕೊಂಡ ವಿದ್ಯಾ ನುಡಿದಳು.

"ನೀನು ಸುಮ್ನಿರು ವಿದ್ಯಾ..... ಆದದ್ದಾಯ್ತು. ಆದದ್ದೆಲ್ಲಾ ಒಳ್ಳೇದಕ್ಕೆ ಅಂತಾರೆ .... ಈಗ ನಿನಗೆ ಲಾಭವೋ ಲಾಭ...."

"ಗೌತಮನೂ ಒಂದ್ಮಾತು ಹೇಳಿಲ್ಲವಲ್ಲ ಚಿಕ್ಕಮ್ಮ. ನಮಗಂತೂ ಎಲ್ಲಾ ಈಗ ನಿಮ್ಮಿಂದ್ಲೇ ತಿಳೀತಿರೋದು...."

"ನೀನೊಂದು ಅವಿವೇಕ ಮಾಡ್ಬಿಟ್ಟಿದ್ದೆ ವಿದ್ಯಾ... ನೀನು ದಿನೇಶನಿಗೆ ಬರೆದ ಪತ್ರ ನನ್ನ ಕೈ ಸೇರಿತ್ತು. ಇದ್ದಕ್ಕಿದ್ದಂತೆ ಬಂದ ಭಾವನ್ನ ನೋಡಿ ಅವನ್ಗೂ ಸ್ವಲ್ಪ ಮುಜುಗರವಾಗಿತ್ತು. ನಿನ್ನ ಒಪ್ಗೇನೇ ಕೇಳೇ ಬಿಡ್ತೀನಿ ಅಂತ ಹೊರಟೇ ಬಿಟ್ಟ. ಒಬ್ನೇ ಹೋಗೋದ್ಯಾಕೆ ಅಂತ ನಾನೇ ಗೌತಮನ್ನ ಜತೆಗೇ ಕಳಿಸ್ದೆ. ಎಂಥಾ ಕಿಲಾಡಿಗಳು ನೋಡು...."

"ಇದಕ್ಕೆಲ್ಲಾ ನಿಮ್ಮ ಭಾವನೇ ಕಾರಣ. ಅವ್ರು, ಒಂದ್ಮಾತು ಹೀಗೇ ನಾನು ಇಂಥ ಕೆಲಸಕ್ಕೆ ಭವಾನಿ ಮನೆಗೆ ಹೋಗ್ತಾ ಇದೀನಿ ಅಂತ ಹೇಳಿದ್ದಿದ್ರೇ....? ನಮಗೂ ಗೊತ್ತಿರಲಿಲ್ಲ.... ನಾವು ಪೆದ್ದು ಪೆದ್ದಾಗಿ ಆಟ ಆಡ್ಕೊಂಡು ಕಾಲ ಕಳೆದ್ವಿ.. ನಾನು ದಿನೇಶನ್ನ ಸುಮ್ನೇ ಬಿಡುಲ್ಲ..." ಭವಾನಿ ನಕ್ಕಳು.

"ಇನ್ಮುಂದೆ ದಿನೇಶ ನಿನ್ನವನೇ. ಏನ್ಬೇಕಾದ್ರೂ ಮಾಡು. ಆ ಸ್ವತಂತ್ರ ನಿನ್ಗಿದೆ..."

"ಹೋಗು ಎಣ್ಣೆ ಒತ್ಕೊಂಡು ನೀರು ಹಾಕ್ಕೋ..... ಆಮೇಲೆ ತಲೆಕೂದಲನ್ನ ಚೆನ್ನಾಗಿ ಒರೆಸ್ಕೊಂಡು ಒಣಗಿಸ್ಕೋ..... ಇಲ್ಲದಿದ್ರೆ ಶೀತ ಆಗುತ್ತೆ...." ತಾಯಿ ನುಡಿದಳು.

* * *

ಅಧ್ಯಾಯ – ಹದಿನೇಳು

ಅಂತೂ ನಿಶ್ಚಿತಾರ್ಥ ಮುಗಿಯಿತು

"ನಿಮ್ಮನೆ ಕಡೆ ಇನ್ಯಾರ್‍ಯಾರು ಹಿರಿಯೋರು ಇದಾರೆ? ಎಷ್ಟೊತ್ಗೆ ಬರ್ತಾರೆ?"

"ಇಲ್ಲ. ಯಾರೂ ಬರುಲ್ಲ. ಇದು ನನ್ನ ಮಗಳ ಮದುವೆಯ ನಿಶ್ಚಿತಾರ್ಥ..... ನಾವು ನಾವೇ ಸಾಕು." ಗೋಪಾಲ ಹೆಂಡತಿಯ ಮುಖವನ್ನು ನೋಡಿದ.

"ಅವರೆಲ್ಲಾ ಹಳ್ಳಿಲಿದ್ದಾರೆ.... ಬಿಡುವಿರುತ್ತೋ ಇಲ್ವೋ... ಈಗ ಬರದಿದ್ರೇ ನಾಯ್ತು? ಮದ್ವೆಗೆ ಎಲ್ರೂ ಖಂಡಿತಾ ಬರ್ತಾರೆ... ಅಲ್ವಾ ಭಾವ...?"

"ನಾನು ಈಗ್ಲೇ ಒಂದ್ಮಾತನ್ನು ನಿಖರವಾಗಿ ಹೇಳಿ ಬಿಡ್ತೀನಿ. ನನಗೆ ಹೆಚ್ಚು ನೆಂಟರಿಷ್ಟರಿಲ್ಲ. ಕೇವಲ ಹತ್ತಿರದವರನ್ನು ಮಾತ್ರ ಮದುವೆಗೆ ಆಮಂತ್ರಣ ಕೊಡ್ತೀನಿ. ಇನ್ನು ನಿಮ್ಮ ಕಡೆಯವರನ್ನು ಕರೆಯುವುದು ಬಿಡುವುದು ನಿಮಗೆ ಸೇರಿದ್ದು. ಆದರೆ ಎಷ್ಟು ಜನ ಬರ್ತಾರೆ ಅಂತ ಮೊದಲೇ ತಿಳಿಸ್ಬೇಕು ನೀವು."

"ಹಾಗೇ ಆಗ್ಲೀ..... ಈಗ..... ಈಗೇನು?"

"ಇನ್ನೇನು? ಹುಡ್ಗ ಹುಡ್ಗಿ ಒಪ್ಪಿದಾರೆ.... ನಮ್ಗೂ ನಿಮ್ಮ ಸಂಬಂಧ ಒಪ್ಗೆ ಯಾಗಿದೆ. ನಮ್ಮ ಕಡೆಯಿಂದ ಯಾವ ಮಾತೂ ಇಲ್ಲ. ನೀವುಗಳು ಏನಾದ್ರೂ ಹೇಳೋದಿದ್ರೆ, ಕೇಳೋದಿದ್ರ ಕೇಳಬಹುದು. ಅಭ್ಯಂತರವಿಲ್ಲ."

"ಲಗ್ನಪತ್ರಿಕೆ ಶಾಸ್ತ್ರ..... ಅದನ್ನು ಮಾಡಬೇಡವೇ ಭಾವ....?"

"ಮಾಡ್ಲೇಬೇಕೂಂತ ಇದ್ರೆ ಮಾಡಿದ್ರಾಯ್ತು.... ಆದರೆ ಆ ಕಾರ್ಯಕ್ರಮದ ಅಗತ್ಯವಿದೆಯಾ ಅಂತ ಯೋಚಿಸಿ.... ಮುಂದಿನ ತಿಂಗಳೇ ಮದುವೆ ಮುಹೂರ್ತವಿದೆ. ನಾನು ದಿನಾಂಕಗಳನ್ನು ಗುರುತು ಹಾಕಿಸ್ಕೊಂಡು ಬಂದಿದ್ದೀನಿ. ಇದರಲ್ಲಿ ನಿಮಗೆ ಯಾವುದು ಸೂಕ್ತ ಅನ್ನಿಸುತ್ತೋ ಆ ದಿನಾಂಕಕ್ಕೆ, ಲಗ್ನಪತ್ರಿಕೆ ಪ್ರಿಂಟ್ ಹಾಕಿಸೋಣ."

"ಮುಂದಿನ ತಿಂಗಳೇನಾ? ಸಮಯ ತುಂಬಾ ಕಡಿಮೆ ಆಯ್ತಲ್ಲಾ ಭಾವ....?"

"ಇಂಥ ಕಾರ್ಯಗಳಿಗೆ ಎಷ್ಟು ಸಮಯವಿದ್ದರೂ ಸಾಲದು... ಆದರೆ ಅದು ಸರಿಯಲ್ಲ ಅಂತ ನನ್ನ ಭಾವನೆ. ಶುಭಸ್ಯ ಶೀಘ್ರಂ ಅಂತ: ಶುಭ ಕಾರ್ಯ ಗಳನ್ನು ತಡಮಾಡದೇ ನೆರವೇರಿಸಬೇಕು. ನೀವೇನಂತೀರಿ ಪ್ರಸಾದ್....?"

"ಏನೋ ಇಂಥ ವಿಷಯಗಳಲ್ಲಿ ನನಗೆ ಯಾವ ಅನುಭವವೂ ಇಲ್ಲ. ಎಲ್ರೂ ಹೇಗೆ ಹೇಳ್ತಾರೋ ಹಾಗೆ.... ನೀವೇನಂತೀರಿ ಗೋಪಾಲ್....?"

"ನನ್ನ ಕಡೆಯಿಂದ ಯಾವ ಆಬ್ಜೆಕ್ಷನ್ ಇಲ್ಲ..... ಅಲ್ಲದೇ ಎಲ್ಲಾ ನನ್ನ ಹೆಂಡತಿಗೇ

ಬಿಟ್ಟು ಬಿಟ್ಟಿದೀನಿ. ಅವಳು ಹೇಗೆ ಹೇಳ್ತಾಳೋ ಹಾಗೆ...." ಭಟ್ಟನ ಮುಖದ ಚಹರೆ ಬದಲಾಗಿತ್ತು..... ಭವಾನಿ ಅಕ್ಕನನ್ನೇ ನೋಡಿದಳು. ಪ್ರೇಮಾ ಪೆಚ್ಚಾಗಿದ್ದಳು.

"ದಿನಾಂಕಗಳನ್ನು ಗುರುತು ಮಾಡಿಕೊಳ್ತೀವಿ. ನನ್ನ ಮಗನನ್ನೂ ಒಂದ್ಮಾತು ಕೇಳಬೇಕು. ಅವನೂ ರಜಕ್ಕೆ ಅಪ್ಲೈ ಮಾಡ್ಬೇಕು. ಅವನಿಗೆ ಯಾವ ದಿನ ಸರಿ ಅಂತ ಅನ್ನಿಸುತ್ತೋ, ಅದನ್ನು ನಾವು ತಿಳಿಸ್ತೀವಿ."

"ಸರಿ ಹಾಗೇ ಮಾಡಿ. ಆದರೆ ನಿಧಾನ ಮಾಡಬೇಡಿ. ಬೇಕಾದಷ್ಟು ತಯಾರಿಗಳಿರುತ್ತವೆ." ತನ್ನ ಮಾತುಗಳು ಮುಗಿಯಿತು ಎಂಬಂತೆ ಭಟ್ಟ ಮೌನವಾದ.

ಎಲ್ಲರಿಗೂ ತಿಂಡಿಯನ್ನು ತಂದುಕೊಟ್ಟರು. ಬಿಸಿಬಿಸಿ ಇಡ್ಲಿ, ಚಟ್ನಿ, ಬೆಣ್ಣೆ ಕಾಸಿದ ತುಪ್ಪ, ಜತೆಗೆ ಗಟ್ಟಿ ಮೊಸರು.... ವಿದ್ಯಾ, ಕಾಯಿ ಮಿಠಾಯಿಯ ಚೂರುಗಳನ್ನು ತಂದು ಬಡಿಸಿದಳು. ಸುಶೀಲಾ ತನ್ನ ಭಾವಿ ಸೊಸೆಯನ್ನು ಕಣ್ತುಂಬಾ ನೋಡಿದಳು. ತಿಳಿ ಹಸುರು ಬಣ್ಣದ ರೇಷ್ಮೆ ಸೀರೆ, ಅದಕ್ಕೆ ಒಪ್ಪುವಂತೆ ಅದೇ ಬಣ್ಣದ ರವಿಕೆಯನ್ನು ಧರಿಸಿದ್ದಳು. ಎಣ್ಣೆ ನೀರು ಹಾಕಿಕೊಂಡು, ಕೂದಲನ್ನು ಅಳ್ಳಕವಾಗಿ ಬಾಚಿ ಜಡೆ ಹೆಣೆದುಕೊಂಡಿದ್ದಳು. ಮುಂಗುರುಳುಗಳು ಹಾರಾಡುತ್ತಿದ್ದವು. ಹಣೆಯಲ್ಲಿ ಒಪ್ಪುವ ಸಣ್ಣ ಕುಂಕುಮದ ಬೊಟ್ಟು... ಇಷ್ಟೇ ಅಲಂಕಾರ. ಆದರೂ ಅವಳ ಮುಖ ಸೌಂದರ್ಯ ಎದ್ದು ಕಾಣುತ್ತಿತ್ತು.... ಮುಖದಲ್ಲಿನ ಮಂದಹಾಸವೊಂದೇ ಸಾಕು.... ಇನ್ಯಾವ ಆಭರಣಗಳೂ ಬೇಡ.... ಕಿವಿಯಲ್ಲಿ ಧರಿಸಿದ್ದ ಚಿನ್ನದ ಓಲೆಗಳ ಹೊಳಪನ್ನು ಮೀರಿಸುವಂತಿತ್ತು ಅವಳ ಕೆನ್ನೆಗಳ ಹೊಳಪು.... ಆಕೆಯ ಗಮನ ತನ್ನ ಮೇಲಿದೆ ಎನ್ನುವುದನ್ನು ಅರಿತ ವಿದ್ಯಾ, ಲಜ್ಜೆಯಿಂದ ಕೆಂಪಾದಳು. ಮೆಲ್ಲನೆ ಅಲ್ಲಿಂದ ಸರಿದಳು.

ಭವಾನಿ, ಸುಶೀಲಳ ಮೊಣಕೈಯನ್ನು ತಿವಿದಳು.... "ನೀನೇ ಹೀಗೆ ನೋಡ್ತೀಯಲ್ಲ. ಇನ್ನು ದಿನೇಶನ ಗತಿ....?"

"ಅವನೂ ನಮ್ಮೊಂದಿಗೆ ಬಂದಿದ್ರೆ ಚೆನ್ನಾಗಿತ್ತು." ಹೌದೆನ್ನುವಂತೆ ಭವಾನಿ ತಲೆ ಆಡಿಸಿದಳು.

"ನಾವೂ ಸ್ವಲ್ಪ ಹೀಗೇ ಪೇಟೆ ಸುತ್ತಾಡಿ ಬರ್ತೀವಿ." ಸುಶೀಲಾ, ಗೋಪಾಲರೊಡನೆ ಪ್ರಸಾದನೂ ಹೊರಟಿದ್ದ....

"ಹೇಗೆ ಹೋಗ್ತೀರಿ. ತಡೀರಿ ಡ್ರೈವರ್‌ಗೆ ಹೇಳ್ತೀನಿ. ಅವ್ನು ಕರ್ಕೊಂಡ್ಹೋಗ್ತಾನೆ."

"ಪರ್ವಾಗಿಲ್ಲ ರಿಕ್ಷಾದಲ್ಲಿ ಹೋಗ್ತೀವಿ."

"ನೀವು ಈ ಊರಿಗೆ ಹೊಸಬರು.... ಊರಿನ ಪರಿಚಯವಿಲ್ಲ. ಡ್ರೈವರ್ ಕರ್ಕೊಂಡು ಹೋಗ್ತಾನೆ." ಮತ್ತೆ ಭಟ್ಟ ನುಡಿದಾಗ, ಅವರುಗಳು ಒಪ್ಪಬೇಕಾಯ್ತು. ಭವಾನಿ ಗಂಡನಿಗೆ ಕಿವಿಯಲ್ಲಿ ಏನೋ ಹೇಳಿದಳು.

ಆ ದಿನ ಭಾನುವಾರವಾದುದರಿಂದ, ಮಕ್ಕಳ್ಯಾರಿಗೂ ಸ್ಕೂಲು ಕಾಲೇಜಿಗೆ ಹೋಗುವ ಅವಾಂತರವಿರಲಿಲ್ಲ. ಅಲ್ಲದೆ ಮನೆಗೆ ನೆಂಟರು ಬಂದಿರುವ ಸಂಭ್ರಮ.

ಸ್ನಾನ ಮಾಡಿ ಹೊಸ ಬಟ್ಟೆಗಳನ್ನು ಧರಿಸಿ ಸಿದ್ಧವಾಗಿದ್ದರು. ಆದರೆ ಹೊರಗೆ ದೊಡ್ಡವರಾಡುವ ಮಾತುಗಳ ಮಧ್ಯೆ ಇವರ್‍ಯಾರಿಗೂ ಪ್ರವೇಶವಿರಲಿಲ್ಲ. ಸಂತೋಷನಿಗೆ ಮಾತ್ರ ಎಲ್ಲಾ ತಿಳಿಯಿತು. ತಾನೂ ಸಂಭ್ರಮದಲ್ಲಿ ಪಾಲುಗೊಂಡ. ಭವಾನಿ, ಎಲ್ಲರೊಡನೆ ಕುಳಿತು ತಮಾಷೆಯ ಮಾತುಗಳನ್ನಾಡಿದಳು.

ಪೇಟೆಗೆ ಹೋಗಿದ್ದವರು ಹಿಂತಿರುಗಿದ್ದರು. ಕೈಯಲ್ಲಿ ಏನೇನೋ ದೊಡ್ಡ ದೊಡ್ಡ ಚೀಲಗಳು.... ಸುಶೀಲಾ ಅತ್ತಿಗೆಯನ್ನು ಕರೆದಳು. ಹಣ್ಣುಗಳು, ಹೂವು, ವೀಳ್ಯದೆಲೆ, ಅಡಿಕೆಗಳೊಂದಿಗೆ, ಒಂದು ಸರಳವಾದ ಸಿಲ್ಕ್ ಸೀರೆ. ಎಲೆ ಹಸಿರು ಬಣ್ಣದ ಸೀರೆಗೆ, ಅದಕ್ಕೊಪ್ಪುವ ಕೆಂಪು ಬಣ್ಣದ ಅಂಚು... ಅದೇ ಬಣ್ಣದ ಸೆರಗು.... ಮಧ್ಯೆ ಮಧ್ಯೆ ರೇಷ್ಮೆಯ ದಾರದ ಕೆಂಪು ಬುಟ್ಟಾ ಹೂಗಳು. ಸೀರೆ ತುಂಬಾ ಸುಂದರವಾಗಿತ್ತು.....

"ಸುಂದರವಾದ ಹೆಣ್ಣಿಗೆ ಸುಂದರವಾದ ಸೀರೆ... ನಿನ್ನ ಆಯ್ಕೆ ಚೆನ್ನಾಗಿದೆ." ಭವಾನಿ ಹೊಗಳಿದಳು. ಪ್ರೇಮಳನ್ನು ಕರೆದು, ಸೀರೆಯನ್ನು ತೋರಿಸಿದಳು.

"ಬೆಂಗ್ಳೂರಿಂದ್ಲೇ ತರಬಹುದಾಗಿತ್ತು ಅಲ್ವಾ ಅತ್ತಿಗೆ...?"

"ತರಲಿಲ್ಲ. ಈಗೇನ್ಮಾಡ್ತೀ... ಈ ಸೀರೇನೇ ತುಂಬಾ ಸೊಗಸಾಗಿದೆ...."

"ಅತ್ತಿಗೇ.... ವಿದ್ಯಾಳನ್ನು ಕರೀರಿ.... ಹಣ್ಣು-ಹೂವುಗಳನ್ನು ಕೊಟ್ಟು ಬಿಡೋಣ..." ಭವಾನಿ ವಿದ್ಯಾಳನ್ನು ಹೊರಕ್ಕೆ ಕರೆತಂದಳು. ಅಲ್ಲಿ ಹಾಸಿದ್ದ ಚಾಪೆಯ ಮೇಲೆ ವಿದ್ಯಾ ಕುಳಿತಳು. ಸುಶೀಲಾ ಅರಸಿನ ಕುಂಕುಮವನ್ನು ಕೊಟ್ಟು, ಹೂವು ಮುಡಿಸಿದಳು. ಹಣ್ಣಿನ ತಟ್ಟೆಯೊಂದಿಗೆ ಸೀರೆ, ರವಿಕೆ ಬಟ್ಟೆಯನ್ನಿಟ್ಟು ಕೊಟ್ಟಳು.

"ಇದನ್ನೆಲ್ಲಾ ದೇವರ ಮುಂದೆ ಇಟ್ಟು ದೇವರಿಗೆ ನಮಸ್ಕಾರ ಮಾಡಿ ಬಾ...." ವಿದ್ಯಾ ಗಾಬರಿಯಾದಳು. ತಾಯಿಯ ಕಡೆ ದೈನ್ಯಳಾಗಿ ನೋಡಿದಳು. ಪ್ರೇಮಾ ಬೆವತಿದ್ದಳು.

'ನಮ್ಮ ಮನೆಯಲ್ಲಿ ದೇವರ ಮನೆಯಿಲ್ಲ. ದೇವರ ಪಟವಿಲ್ಲ....' ಎಂಬುದನ್ನು ತಿಳಿಸುವುದು ಹೇಗೆ? ಅವಳ ತಮ್ಮಂದಿರು. ತಂಗಿಯರೂ, ಈಗ ಅವಳೇನು ಹೇಳುವಳೋ, ಏನು ಮಾಡುವಳೋ ಎಂದು ಕಾತರದಿಂದ ನೋಡುತ್ತಿದ್ದರು. ಈಗ ಭವಾನಿ ಅವಳ ಸಹಾಯಕ್ಕೆ ಬಂದಳು.

"ಒಳಗೆ ಹೋಗೋಣ ಬಾ....." ಇಬ್ಬರೂ ಸೀದಾ ಪ್ರೇಮಳ ರೂಮಿಗೆ ಬಂದರು.

"ಅಮ್ಮನಿಗಿಂತ ಮಿಗಿಲಾದ ದೇವರಿಲ್ಲ. ಈ ತಟ್ಟೆಯನ್ನು ಇಲ್ಲಿ, ನಿಮ್ಮಮ್ಮನ ರೂಮ್‌ನಲ್ಲಿ ಇಡು. ಹೊರಗೆ ಬಾ. ಮೊದಲು ನಿಮ್ಮಮ್ಮನಿಗೆ ನಮಸ್ಕಾರ ಮಾಡು. ...." ವಿದ್ಯಾಳ ಕಣ್ಣುಗಳು ತುಂಬಿ ಬಂದಿದ್ದವು.

"ಈಗ ಅತ್ತು ಮನಸ್ಸನ್ನ ಕೆಡಿಸ್ಕೋಬೇಡ. ಬಾ...." ಮತ್ತೆ ಹೊರಕ್ಕೆ ಕರೆ

ತಂದಳು. ವಿದ್ಯಾ ಮೊದಲು ತಾಯಿಯ ಪಾದಗಳನ್ನು ಮುಟ್ಟಿ ಕಣ್ಣಿಗೊತ್ತಿಕೊಂಡಳು. ಅಷ್ಟರಲ್ಲಿ ಭವಾನಿ, ತನ್ನ ಭಾವನನ್ನು ಎಬ್ಬಿಸಿಕೊಂಡು ಬಂದಿದ್ದಳು. ವಿದ್ಯಾ ತನ್ನ ತಂದೆಯ ಕಾಲಿಗೂ ನಮಸ್ಕರಿಸಿದಳು...

"ಇದೆಲ್ಲಾ ಏನಿದು.....?" ಭಟ್ಟ ಗಲಿಬಿಲಿಗೊಂಡು ನುಡಿದ.

"ಆಶೀರ್ವಾದ ಮಾಡಿ ಭಾವ...." ಭವಾನಿ ನೆನಪಿಸಿದಳು. ಭಟ್ಟ ಮಗಳ ತಲೆಯ ಮೇಲೆ ಕೈ ಇಟ್ಟ.... ಅನಂತರ ವಿದ್ಯಾ ಹಿರಿಯರೆಲ್ಲರಿಗೂ ನಮಸ್ಕಾರ ಮಾಡಿ, ಒಳಬಂದಳು. ಅಡುಗೆಮನೆಯ ಬಾಗಿಲಲ್ಲಿ ನಿಂತಿದ್ದ ಶಾರದಮ್ಮನನ್ನು ಕಂಡು ಏನೋ ಅನ್ನಿಸಿತು.

"ಶಾರದಮ್ನೋರೇ ಆಶೀರ್ವಾದ ಮಾಡಿ...." ಎನ್ನುತ್ತಾ ಅವರ ಕಾಲುಗಳಿಗೆರಗಿದಳು.

"ಪರ್ವಾಗಿಲ್ಲ ಬಿಡಮ್ಮ. ನನ್ನ ಆಶೀರ್ವಾದ ಸದಾ ನಿನ್ನ ಮೇಲಿದೆ." ಅವಳ ತಲೆ ಸವರಿದರು.....

"ಅವರು ನಂಗೊಂದು ರೇಷ್ಮೇ ಸೀರೆ ತಂದಿದಾರೆ ತೋರಿಸ್ಲಾ?"

"ಈಗ್ಲೇ ಬೇಡ. ಆಮೇಲೆ ನೋಡ್ತೀನಿ. ಈಗ ನನ್ನ ಕೈ ಜಿಡ್ಡಾಗಿದೆ... ಒಳ್ಳೇ ಲಕ್ಷ್ಮೀ ಕಳೆ ಬಂದಿದೆ.... ನಿನ್ನ ಮುಖಕ್ಕೆ.... ರಾತ್ರಿ ಮರೀದೆ ದೃಷ್ಟಿ ತೆಗೀತೀನಿ..."

"ಹೋಗಿ ಶಾರದಮ್ಮ.." ವಿದ್ಯಾ ನಾಚಿದಳು.

"ಗಂಡನ ಮನೆಗೆ ಹೊರಟು ನಿಂತಿರೋಳು ನೀನು.... ನಾನೆಲ್ಲಿಗೆ ಹೋಗ್ಲೀ.... ನಾನು ಬೇಕಾಗಿದ್ರೆ, ನನ್ನನ್ನು ನಿನ್ನ ಗಂಡನ ಮನೆಗೆ ಕರ್ಕೊಂಡ್ಹೋಗು...."

"ಖಂಡಿತಾ ಕರ್ಕೊಂಡ್ಹೋಗ್ತೀನಿ ಶಾರದಮ್ಮ.... ಆದರೆ, ಇಲ್ಲಿ ನೀವಿಲ್ಲದೇ ಇದ್ದರೆ, ಅಮ್ಮನಿಗೆ ಕಷ್ಟವಾಗುತ್ತಲ್ಲ.... ಅದಕ್ಕೇ ನನಗೆ ಈ ಮದುವೇನೇ ಇಷ್ಟವಿಲ್ಲ."

"ಇದೆಲ್ಲಾ ಬಾಯಿ ತುದಿಯ ಮಾತು. ನಂಗೊತ್ತು ನಿನ್ನ ಮನದೊಳಗೆ ಹೂಗಳು ಅರಳಿವೆ...."

"ಏನಿಲ್ಲ. ನಿಮಗ್ಹೇಗೆ ಗೊತ್ತು....!"

"ನಾನೂ ಹೆಣ್ಣೇ ಕಣೆ ತಾಯೀ..... ನಾನೂ ಒಂದು ಕಾಲದಲ್ಲಿ ನಿನ್ನ ವಯಸ್ಸಿನವಳೇ ಆಗಿದ್ದೆ..."

"ಶಾರದಮ್ಮ ಅಡುಗೆ ಆಯ್ತಾ? ಮಾತಾಡ್ತಾ ನಿಂತ್ಬಿಟ್ರಲ್ಲ..." ಆಗ ತಾನೇ ಒಳಬಂದ ಭಟ್ಟ ಕೇಳಿದ. ಶಾರದಮ್ಮ ಪೆಚ್ಚಾದರು.

"ಆಗಿದೆ. ಎಲ್ಲಾ ಆಗಿದೆ. ಬಡಿಸೋದೊಂದೇ ಬಾಕಿ.... ಎಲೆ ಹಾಕ್ಲಾ.....?"

"ಹೂಂ. ಎಲೆ ಹಾಕಿ.... ತಾಯೀ, ನೀನೂ ಅವರ್ಗಳ ಜತೆ ಊಟಕ್ಕೆ ಕೂತ್ಬಿಡು. ಚೆನ್ನು, ಪುಸ್ಸೀ, ಶಾರದಮ್ಮಂಗೆ ಸಹಾಯ ಮಾಡ್ತಾರೆ...." ವಿದ್ಯಾ ತಲೆ ಯಾಡಿಸಿದಳು.

ಬಂದವರು ದಂಪತಿಗಳ ಜೋಡಿ, ಎಂದು ತಿಳಿದ ಕೂಡಲೇ ಶಾರದಮ್ಮ ಜಾಣತನದಿಂದ, ಔತಣದ ಅಡುಗೆಯನ್ನು ಮಾಡಿದ್ದರು. ಪಾಯಸ, ಚಿತ್ರಾನ್ನ, ಬೋಂಡ, ಪಲ್ಯ, ಕೋಸಂಬರಿ, ಪ್ರತಿಯೊಂದನ್ನು ಒಬ್ಬರೇ ಕುಳಿತು ಮಾಡಿದ್ದರು. ಈಗ ಎಲ್ಲರಿಗೂ ಬಾಳೆ ಎಲೆಯನ್ನು ಹಾಕಿ ಬಡಿಸಲು ಪ್ರಾರಂಭಿಸಿದರು.

ಭವಾನಿ, ತಾನು ಆಮೇಲೆ ಅಕ್ಕನ ಜತೆ ಕೂತ್ಕೊಳ್ಳುವುದಾಗಿ ಹೇಳಿ, ಉಳಿದು ಕೊಂಡಳು. ವಿದ್ಯಾ ಒಬ್ಬಳೇ ಆಗುತ್ತಾಳೆಂದು ಪುಸ್ಸೀ ಅವಳ ಜತೆ ಊಟಕ್ಕೆ ಕೂತಳು. ಶ್ರೀಕರ ಚಿಕ್ಕವನಾದುದರಿಂದ ಅವನೂ ಕುಳಿತ. ಯಾರಿಗೂ ಹೆಚ್ಚಿಗೆ ಮಾತಿಲ್ಲದೆ ಇದ್ದುದರಿಂದ ಮೌನವಾಗಿ ಊಟ ಸಾಗಿತು.

"ಅಡುಗೆ ಎಲ್ಲಾ ಹೇಗಿದೆಯೋ? ಪಾಪ, ಶಾರದಮ್ಮ ಒಬ್ಬರೇ ಎಲ್ಲಾ ಮಾಡಿದಾರೆ. ನಾವುಗಳ್ಯಾರೂ ಸಹಾಯ ಮಾಡ್ಲಿಲ್ಲ..."

"ಎಲ್ಲಾ ತುಂಬಾ ಚೆನ್ನಾಗಿದೆ. ಅವರದ್ದು ಪಳಗಿದ ಕೈ..... ರುಚಿ ನೋಡುತ್ಲೇ ಗೊತ್ತಾಗುತ್ತೆ." ಸುಶೀಲಾ ಹೊಗಳಿದಳು.

ಅರ್ಧ ಊಟ ಮುಗಿದಿದ್ದಾಗ ಕಾಮಾಕ್ಷಿ ಬಂದಳು. "ಪ್ರೇಮಕ್ಕ ಏನ್ಮಾಡ್ತಿದ್ದೀರಿ?" ಎಂದು ಬಾಗಿಲಿನಿಂದಲೇ ಮಾತಾಡಿದಳು. ಎಲ್ಲರೂ ಧ್ವನಿ ಬಂದತ್ತ ತಿರುಗಿದರು. ಭಟ್ಟ ಮುಖ ಸಿಂಡರಿಸಿದ.

"ಓ.... ಭಟ್ಟನ ಮನೆಗೆ ಯಾರೋ ಅತಿಥಿಗಳು ಬಂದ್ಹಂಗಿದೆ?" ಒಳಬಾಗಿಲಿನಲ್ಲಿ ನಿಂತು ಅವರುಗಳತ್ತ ನೋಡಿದಳು.

"ಹೂಂ. ನನ್ತಂಗಿ, ಅವಳ ಯಜಮಾನ್ರು... ಅವಳ ನಾದಿನಿ.... ಅವಳ ಯಜಮಾನ್ರು ಬಂದಿದಾರೆ."

"ಅವ್ಳು ನಮ್ಮ ತಾಯೀ ಹೌದಲ್ಲೋ.... ಅಥವಾ ನಿಮ್ಮ ತಂಗೀನೋ...."

"ನನ್ತಂಗಿ ಒಳಗಿದಾಳೆ. ಅವ್ಳು ವಿದ್ಯಾನೇ...."

"ಏನ್ಬಂದದ್ದು?" ಭಟ್ಟ ಒರಟಾಗಿ ಕೇಳಿದ.

"ಹೀಂಗೇ.... ಪ್ರೇಮಕ್ಕನ್ನ ಮಾತಾಡಿಸುವಾ ಅಂತ ಬಂದೆ.... ನಾನಿನ್ಬರ್ತೀನೆ."

"ಊಟದ ಹೊತ್ಗೆ ಬಂದಿದೀರಿ.... ಊಟಕ್ಕೇಳಿ ಕಾಮಾಕ್ಷಿ."

"ಅವಳದ್ದೂಟ ಆಗಿರ್ಬಹ್ದು..... ನಿಂದೇನು ಬಲವಂತ?"

"ಭಟ್ಟ ಹೇಳಿದ್ದು ದಿಟ. ನನ್ನೂಟ ಆಗ್ಲೇ ಆತು. ಸುಮ್ನೆ ಬಂದಿದ್ದೆ. ಮತ್ತೆ ಬರ್ತೀನಿ." ಕಾಮಾಕ್ಷಿ ಮತ್ತೊಮ್ಮೆ ಎಲ್ಲರನ್ನೂ ನೋಡಿ, ಭಟ್ಟನ ಕಡೆ ಕ್ರೂರ ನೋಟವನ್ನು ಬೀರಿ ಬಿರಬಿರನೆ ಹೊರ ನಡೆದಳು. ಮೊದಲೇ ವಿದ್ಯಾ ಸಂಕೋಚ ಗೊಂಡಿದ್ದಳು. ಈಗ ಇದ್ದಕ್ಕಿದ್ದಂತೆ ಕಾಮಾಕ್ಷಿಯ ಆಗಮನ, ಅವಳಲ್ಲಿ ಆತಂಕದ ನಡುಕವನ್ನು ಹುಟ್ಟಿಸಿದ್ದಿತು. ತುತ್ತು ಗಂಟಲಲ್ಲಿ ಇಳಿಯಲಿಲ್ಲ. ಸುಮ್ಮನೇ ಎಲೆಯ ಮೇಲೆ ಕೈಯಾಡಿಸತೊಡಗಿದಳು.

ಎರಡನೆಯ ಪಂಕ್ತಿಯಲ್ಲಿ ಭವಾನಿ, ಪ್ರೇಮಾ ಉಳಿದವರೊಡನೆ ಊಟಕ್ಕೆ ಕುಳಿತರು. ವಿದ್ಯಾ ಬಡಿಸುತ್ತೇನೆಂದರೂ ಶಾರದಮ್ಮ ಒಪ್ಪಲಿಲ್ಲ.

"ಇವತ್ತೊಂದು ದಿನ ಬೇಡ...." ಎಂದರು.

ವಿದ್ಯಾ ಅಲ್ಲೇ ಎಲ್ಲರೆದುರಿಗೆ ಕುಳಿತರೂ, ಅವಳ ಧ್ಯಾನವೆಲ್ಲಾ ಎಲ್ಲೋ ಇತ್ತು. ಇದ್ದಕ್ಕಿದ್ದಂತೆ ಕಾಮಾಕ್ಷಿ ಅತ್ತೆ ಬಂದು ಮನಸ್ಸನ್ನೇ ಕದಡಿ ಬಿಟ್ರಲ್ಲಾ.....

ಇದ್ದಕ್ಕಿದ್ದಂತೆ ಅವಳ ಮುಖ ಕಳೆಗುಂದಿರುವುದನ್ನು ಸುಶೀಲಾ ಗಮನಿಸಿದಳು. ಆದರೆ ಕೇಳುವುದು ಹೇಗೆ? ಭವಾನಿ ಅಕ್ಕನೊಡನೆ ಹರಟುತ್ತಾ, ನಗುತ್ತಾ ಊಟ ಮಾಡುತ್ತಿದ್ದಳು. ಎಲ್ಲರ ಊಟ ಮುಗಿದಿತ್ತು. ಎಲ್ಲರೂ ಕುಳಿತಲ್ಲೇ ತೂಕಡಿಸುತ್ತಿದ್ದರು. ಔತಣದೂಟದ ಪರಿಣಾಮ. ಚಿನ್ಮಯೀ ಜಮಖಾನವನ್ನು ಹಾಸಿ, ದಿಂಬನ್ನು ಕೊಟ್ಟಳು.

ಮಧ್ಯಾಹ್ನದ ಕಾಫಿಯ ಸುವಾಸನೆ ಎಲ್ಲರನ್ನೂ ಎಚ್ಚರಗೊಳಿಸಿತ್ತು. ಒಬ್ಬೊಬ್ಬ ರಾಗಿ ಎದ್ದು ಬಂದರು. ವಿದ್ಯಾ ಎಲ್ಲರಿಗೂ ಕಾಫಿಯನ್ನು ತಂದಿತ್ತಳು.

ಸಾಯಂಕಾಲವಾಗುತ್ತಿದ್ದಂತೇ ಎಲ್ಲರಲ್ಲೂ ಏನೋ ತುಡಿತ. ಏನೋ ಬೇಸರ. ಹೊರಡುವ ತಯಾರಿ ನಡೆಸಿದರು.

"ನಾವು ವಿದ್ಯಾನ್ನ ನಮ್ಜೊತೆ ಕರ್ಕೊಂಡ್ಹೋಗೋಣಾಂತ.... ಕಳಿಸ್ಕೊಡ್ತೀರಾ?" ಸುಶೀಲಾ ಕೇಳಿದಳು.

"ಭಾವ ಒಪ್ಪಿದ್ರೆ, ಅಕ್ಕಂದೇನಿಲ್ಲ. ಭಾವ ಒಪ್ಪಬೇಕಲ್ಲ.....?"

"ನೀವೇ ಒಂದ್ಮಾತು ಕೇಳಿ ಅತ್ಗೆ...." ಭವಾನಿ ಭಟ್ಟ ಕುಳಿತಿದ್ದೆಡೆಗೆ ಹೋದಳು.

"ವಿದ್ಯಾಳನ್ನು ಕಳಿಸ್ಕೊಡ್ತೀರಾ? ಸುಶೀಲಾ ಕೇಳ್ತಿದಾಳೆ."

"ಇಲ್ಲ ಭವಾನಿ. ಮದ್ವೆ ಆದ್ಮೇಲೆ ಧಾರಾಳವಾಗಿ ಕರ್ಕೊಂಡ್ಹೋಗ್ಲಿ.... ಮದ್ವೆ ಗ್ಮುಂಚೆ ಹೋಗೋದು ಸರಿಯಲ್ಲ."

"ಅದು ನಿಜ ಭಾವ..... ಆದರೇ...."

"ನಾನು ಹೇಳೋ ಮಾತು ನಿಜ ಆದರೆ, ಮತ್ತೇಕೆ ಮಾತು?" ಭವಾನಿ ತೆಪ್ಪಗಾದಳು. ಭಾವ ಹೇಳಿದ್ದನ್ನೇ ಎಲ್ಲರಿಗೂ ಹೇಳಿದಳು. ವಿದ್ಯಾಳ ಮುಖ ಮತ್ತೂ ಕಂದಿಹೋಯಿತು. ಏಕೋ ಏನೋ ಕಾಮಾಕ್ಷಿಯನ್ನು ಕಂಡಾಗ್ನಿಂದ, ಆದಷ್ಟು ಬೇಗ ಇಲ್ಲಿಂದ ಎಲ್ಲಾದ್ರೂ ಹೋದ್ರೆ ಸಾಕೆನ್ನಿಸಿತ್ತು.

ಮತ್ತೊಮ್ಮೆ ರಾತ್ರಿಯ ಊಟದ ಶಾಸ್ತ್ರವನ್ನು ಮಾಡಿದರು. ಪ್ರೇಮಾ ಅವರೆಲ್ಲ ರಿಗೂ ಎಲೆ, ಅಡಿಕೆ ತಾಂಬೂಲವನ್ನು ಮಗಳ ಕೈಯಲ್ಲಿ ಕೊಡಿಸಿದಳು. ಸುಶೀಲಾ ಹಾಗೂ ಭವಾನಿಗೆ ರವಿಕೆಯ ಖಣವನ್ನು ಇಟ್ಟುಕೊಟ್ಟಳು. ಕಡೆಯಲ್ಲಿ ಒಂದು ಪ್ಲಾಸ್ಟಿಕ್ ಕವರನ್ನು ಸುಶೀಲಳಿಗೆ ಕೊಟ್ಟಳು.

"ಇದು ನಮ್ಮ ಅಳಿಯಂದ್ರಿಗೆ ಷರ್ಟು ಬಟ್ಟೆ.. ಅವ್ರೂ ಬಂದಿದ್ರೆ ಚೆನ್ನಾಗಿತ್ತು.... ರಜ ಇದ್ದರೆ ಕಳಿಸ್ಕೊಡಿ...."

"ಇದೆಲ್ಲಾ ಯಾಕೆ ಪ್ರೇಮಕ್ಕ.... ಅವನು ಬಂದಾಗ್ಲೇ ಕೊಡೋರಂತೆ...."

"ಇರಲಿ. ಈ ಗಳಿಗೇಲಿ ಕೊಡೋದು ಶುಭ. ನೀವೆಲ್ಲಾ ಬಂದದ್ದು ತುಂಬಾ ಸಂತೋಷವಾಯ್ತು. ಆಗಾಗ್ಗೆ ಬರ್ತಾ ಇರಿ."

"ಇನ್ನು ನೀವು ಬರ್ಬೇಕು. ನಿಮ್ಮ ಮಗಳು ಸೇರೋ ಮನೆ ಹೇಗಿದೆ? ಎಲ್ಲಾ ಹೇಗಿದಾರೆ? ಅಂತ ನೋಡುವ ಆಸೆ ನಿಮಗಿಲ್ವೇ....?"

"ಬರದೇ ಇರ್ತೀವೆ? ಸಂಬಂಧ ಬೆಳೆದ ಮೇಲೆ...." ಉಪಚಾರದ ಮಾತುಗಳನ್ನು ಆಡಿದಳು. ಆದರೆ ತಾನು ಸ್ವತಂತ್ರವಾಗಿ ಹೋಗಿ ಬರುವುದಿರಲಿ. ಆ ಆಸೆಯನ್ನು ಮನದಲ್ಲಿ ಬೆಳೆಸುವ ಸ್ವತಂತ್ರವೂ ತನಗಿಲ್ಲ ಎಂದುಕೊಂಡಳು.

ಭಟ್ಟ ತಾನೂ ಬಸ್‌ಸ್ಟ್ಯಾಂಡ್‌ಗೆ ಜತೆಯಲ್ಲಿ ಹೋಗಿ, ಬಿಟ್ಟು ಬರುವುದಾಗಿ ಹೊರಟ. ಭವಾನಿ ಮತ್ತೊಮ್ಮೆ ಅಕ್ಕನನ್ನು ಆಲಿಂಗಿಸಿಕೊಂಡಳು. ಅಕ್ಕ–ತಂಗಿಯರ ಕಣ್ಣುಗಳಲ್ಲಿ ನೀರು ಜಿನುಗಿತ್ತು.

"ಯಾಕೇ ಅಕ್ಕಾ ಸಪ್ಪಗಿದೀಯ? ಅವರೆಲ್ಲಾ ಹೊರ್‍ಟ್ಹೋದ್ರು ಅಂತ ಬೇಜಾರಾ?" ಸಂತೋಷ ಕೇಳಿದ.

"ಹಾಗೇನಿಲ್ಲ.... ಸ್ವಲ್ಪ ಬರ್ತೀಯ ಮಾತಾಡ್ಬೇಕು." ಇಬ್ಬರೂ ವರಾಂಡಕ್ಕೆ ಬಂದರು.

"ಊಟದ ಹೊತ್ನಲ್ಲಿ ಇದ್ದಕ್ಕಿದ್ದಾಗೇ ಕಾಮಾಕ್ಷಿ ಅತ್ತೆ ಬಂದಾಗ್ನಿಂದ, ಏನೋ ಒಂಥರಾ ಹೆದರ್‍ಕೆ ಆಗ್ತಿದೆ."

"ಹೆದರ್ಕೇನಾ? ಅಂಥಾದ್ದೇನಂದ್ರು ಅವ್ರು?"

"ಅವರ್‍ಯಾಕೆ ಬಂದಿದ್ರು? ಯಾರೋ ಬಂದಿದಾರೆ, ಯಾತಕ್ಬಂದಿದಾರೆ ಅಂತ, ನೋಡೋಕ್ಬಂದಿದ್ರು ಅಂತ ಅನ್ನಿಸ್ತು."

"ಅವ್ರು ಬರೋದೇನು ಅಪ್ರೂಪನಾ....? ದಿಢೀರ್‍ನೇ ಧೂಮಕೇತು ಬಂದ್ಹಾಗೆ ಬರೋದು ಅವರ ಅಭ್ಯಾಸ...."

"ಇಲ್ಲ. ನಂಗೆ ಹಾಗನ್ನಿಸುಲ್ಲ. ಕಿಶೋರಂಗೆ ಬರ್‍ದ ಲೆಟರ್ಸ್‌ನ್ನೆಲ್ಲಾ ತಾನೇ ಮುಚ್ಚಿಟ್ಕೊಂಡಿದಾರೆ. ಅಪ್ಪಂಗೆ ತೋರ್‍ಸಿ ಗಲಾಟೆ ಮಾಡಿದ್ರೆ?" ಸಂತೋಷ ನಕ್ಕುಬಿಟ್ಟ.

"ಇಲ್ಲ. ಅದು ಸಾಧ್ಯವೇ ಇಲ್ಲ. ಅವರಿಗೆಲ್ಲಿದೆ ಅಷ್ಟು ಧೈರ್ಯ....? ಅವತ್ತೇ ಹೇಳ್ಲಿಲ್ವಾ ಅವನು ಬೊಗಳ್ತಾನೆ ಅಂತ.... ನೀನೇನೂ ಹೆದರ್‍ಬೇಡ... ನಾವೆಲ್ಲಾ ಇದೀವಿ.." ಸಂತೋಷ ಭುಜ ತಟ್ಟಿ ಹೇಳಿದರೂ ಅವಳಿಗೆ ಧೈರ್ಯ ಬರಲಿಲ್ಲ.

* * *

ಎರಡು ದಿನಗಳ ಅನಂತರ ದಿನೇಶನಿಂದ ವಿದ್ಯಾಳ ಹೆಸರಿಗೆ ಒಂದು ಪೋಸ್ಟ್ ಬಂದಿತ್ತು.... ದಿನೇಶ ಬರೆದಿದ್ದ.... ವಿದ್ಯಾಳ ಘೂಮನ ಅರಳಿತು. ಪತ್ರವನ್ನು ಎದೆಗೊತ್ತಿಕೊಂಡು ರೂಮ್‌ಗೆ ಓಡಿದಳು.

"ನನ್ನನ್ನು ಬಿಟ್ಟು..... ನಿನಗೆ ಹೇಗೆ ಊಟ ಸೇರಿತು? ನಾನು ಬರ್ಲಿಲ್ಲ ಅಂತ ನಿನಗೆ ಬೇಜಾರಾಗ್ಲಿಲ್ವಾ? ಒಂಟಿಯಾಗಿ ನನ್ನ ಕೈಗೆ ಸಿಕ್ಕಾಗ ಎಲ್ಲಾ ಸರಿಯಾಗಿ ವಿಚಾರಿ ಸ್ಕೊಳ್ತೀನಿ..." ಹೀಗೆ ಏನೇನೋ, ಎರಡು ಪುಟಗಳಷ್ಟು ಬರೆದಿದ್ದ. ಅವಳ ಸಂಭ್ರಮ ಹೇಳತೀರದು.

"ನೀನು ಅವತ್ತು ಹೇಗೆ ಕಾಣ್ತಿದ್ದೆಯೋ ಅಂತ ನನಗೆ ನೋಡಬೇಕೆನ್ನುವ ಆಸೆ.... ಆ ರೀತಿಯ ಒಂದು ಫೋಟೋ ತೆಗೆದು ಕಳಿಸು...." ಕಡೆಯಲ್ಲಿ ಬರೆದಿದ್ದ. ವಿದ್ಯಾ ಪುಳಕಗೊಂಡಿದ್ದಳು. ತಮ್ಮ ಮನೆಯಲ್ಲೇ ಒಂದು ಕ್ಯಾಮೆರಾ ಇದ್ದಿದ್ದರೇ, ಒಂದು ಫೋಟೋ ತೆಗೆದು ಕಳಿಸಬಹುದಾಗಿತ್ತೆನಿಸಿತ್ತು... ಆ ಕ್ಷಣದಲ್ಲಿ ತಾನೇ ದಿನೇಶನ ಎದುರಿಗೆ ಹೋಗಿ ನಿಲ್ಲುವಂತಿದ್ದರೇ ಎಂದು ಅನೇಕ ಬಾರಿ ಹೇಳಿಕೊಂಡಳು....

"ತಾಯೀ.... ತಾಯೀ..." ಭಟ್ಟ ಕರೆದದ್ದು ಅವಳಿಗೆ ಕೇಳಿಸಿರಲಿಲ್ಲ. ಭಟ್ಟನೇ ಅವಳ ರೂಮ್‌ನ ಬಾಗಿಲ ಬಳಿ ಬಂದ.

"ಅಷ್ಟೊತ್ತಿನಿಂದ ಕೂಗ್ತಾನೇ ಇದೀನಿ ಕೇಳ್ಲಿಲ್ವಾ....? ಯಾರದ್ದು ಕಾಗದ?" ಅವಳ ಗೊಂದಲ ಅವನನ್ನು ಕೆರಳಿಸಿತ್ತು.

"ಕಾಗ್ದ ಯಾರದ್ದೂ ಅಂತ ಕೇಳ್ದೆ... ಕಿವಿ ಕೇಳಿಸ್ಲಿಲ್ವಾ...?" ಮತ್ತೆ ರೇಗಿದ್ದ....

"ಅಪ್ಪಾ... ಇದು ಇದು.... ದಿನೇಶ ಬರ್ದಿದಾರೆ" ಉಗುಳು ನುಂಗಿದಳು.

"ಓ... ಸುಮ್ಮನೇ ದಂಡ... ಪಾಠಗೀಠ ಇಲ್ವಾ ನಿನಗೆ? ಹೀಗೇ ಕಾಲ ಕಳೆದ್ರೆ ಪರೀಕ್ಷೇಲಿ ಫೇಲಾಗ್ತೀಯ ಅಷ್ಟೇ...." ಅವಳಿಗೆ ಅಳು ಬರುವಂತಾಗಿತ್ತು. ಅವಳ ಸಂತೋಷದ ಕೊಳಕ್ಕೆ ಕಲ್ಲೆಸೆದು ಕದಡಿದ್ದ.

"ಇದನ್ನೆಲ್ಲ ಬಿಟ್ಟು ಕೂತ್ಕೊಂಡು ಓದ್ಕೋ...." ಮಗಳಿಗೆ ಆದೇಶ ನೀಡಿ ಹೊರಟು ಹೋಗಿದ್ದ. ವಿದ್ಯಾ ಕಾಗದವನ್ನು ಕೈಯಲ್ಲಿ ಹಿಡಿದು ಹಾಗೇ ಕೂತಳು. ದಿನೇಶನಿಗೆ ಪತ್ರ ಬರೆಯಬೇಡಿ ಅಂತ ಹೇಗೆ ಹೇಳುವುದು! ಅಲ್ಲದೇ ಅವನು ಪ್ರೀತಿಯಿಂದ ಬರೆವ ಪತ್ರವನ್ನು ಓದುವ ಆಸೆ ನನಗೂ ಇಲ್ಲವೇ? ಈ ಅಪ್ಪನಿಗೆ ಯಾಕೆ ಗೊತ್ತಾಗುವುದಿಲ್ಲವೋ.... ತಮ್ಮ ಬಾಳಿನಲ್ಲಿ ಏನೇನೋ ಏರುಪೇರಾಯ್ತು ಅಂತ, ಉಳಿದವರನ್ನು ಖುಶಿಯಾಗಿರಲು ಬಿಡುವುದಿಲ್ಲ.... ಆದರೂ ಇನ್ನೆಷ್ಟು ದಿನಗಳು! ಒಂದು ತಿಂಗಳು, ಅಷ್ಟೇ... ಅಪ್ಪನಿಗೆ ಇಷ್ಟವಾಗುವುದಿಲ್ಲ. 'ನೀವು ಪತ್ರ ಬರೆಯಬೇಡಿ' ಎಂದು ಬರೆದುಬಿಡ್ತೀನಿ ಎಂದುಕೊಂಡು ಪೇಪರು, ಪೆನ್ನನ್ನು ಹಿಡಿದು ಕುಳಿತಳು. ಆದರೆ ಒಂದೇ ಒಂದು ಸಾಲನ್ನು ಬರೆಯಲಾಗಿರಲಿಲ್ಲ. ದುಃಖ ಒತ್ತರಿಸಿ ಕೊಂಡು ಬಂದಿತ್ತು. ಕಣ್ಣೀರು ಹರಿಸಿದಳು.

"ಅಕ್ಕಾ ಅಳ್ತಿದಾಳೆ..." ಎನ್ನುತ್ತಾ ಪುಸ್ಸೀ, ಚಿನ್ಮಯೀ ಇಬ್ಬರೂ ಅವಳ ಅಕ್ಕ ಪಕ್ಕದಲ್ಲಿ ಕುಳಿತರು.

“ಅಕ್ಕಾ ಯಾಕೇ ಅಳ್ತಿದೀಯ?”

“ಏನೂ ಇಲ್ಲ ಪುಸ್ಸೀ..... ನಿಮ್ಮನ್ನೆಲ್ಲ ಬಿಟ್ಟು ಹೋಗ್ಬೇಕಲ್ಲ ಅಂತ ಬೇಜಾರು.” ಕಣ್ಣುಗಳನ್ನೊರೆಸಿಕೊಂಡಳು. ತಂಗಿಯರು ಅತ್ತ ಎದ್ದು ಹೋದ ಮೇಲೆ ಪುನಃ ಬರೆಯಲು ನೋಡಿದಳು.

“ದಿನೇಶನಿಗೆ, ದಯವಿಟ್ಟು ಪತ್ರಗಳನ್ನು ಬರೆಯಬೇಡಿ. ನನಗೆ, ಮುಂದಿನ ತಿಂಗಳ ಕಡೆಯಲ್ಲಿ ಪರೀಕ್ಷೆ ಇದೆ. ಓದ್ಕೋಬೇಕು. ನಾನೇನಾದ್ರೂ ಫೇಲಾದ್ರೆ ಅದಕ್ಕೆ ನೀವೇ ಜವಾಬ್ದಾರರು. ಇತಿ ನಿಮ್ಮ ವಿದ್ಯಾ....” ಎಂದು ಬರೆದು ಮುಗಿಸಿದ್ದಳು.

* * *

ಪತ್ರ ದಿನೇಶನ ಕೈ ಸೇರಿತು. ಕಾತರದಿಂದ ಓದಿದ. ಬರೀ ದಿನೇಶ.... ಒಲವಿನ ದಿನೇಶ ಅಂತ ಕೂಡ ಬರೆದಿಲ್ಲ.... ನನಗಿಂತ, ಇವಳಿಗೆ ಪರೀಕ್ಷೇನೇ ಹೆಚ್ಚಾ.... ಫೇಲಾದ್ರೆ ಫೇಲಾಗಲಿ. ನನಗೇನೂ ನಷ್ಟವಿಲ್ಲ ಅಂತಂದುಕೊಂಡು ಮತ್ತೆ ಪತ್ರವನ್ನು ಬರೆದ...

“ಒಲವಿನ ವಿದ್ಯಾ, ನಿನ್ನ ಪತ್ರವನ್ನು ಓದಿ, ನನಗೆ ತುಂಬಾ ನಿರಾಸೆ ಆಯಿತು. ನನ್ನ ಪತ್ರವನ್ನು ಓದುಕ್ಕೆ ನಿನಗೆ ಸಮಯ ಇಲ್ವಾ? ನಾನಂತೂ ಇಲ್ಲಿ ಸದಾ ನಿನ್ನ ಧ್ಯಾನದಲ್ಲಿ ಕಾಲವನ್ನು ಕಳೆಯುತ್ತಿದೀನಿ.... ಈ ಪತ್ರಕ್ಕೆ ನಿನ್ನಿಂದ, ಪ್ರೀತಿಯ ಪತ್ರ ಬರದೇ ಇದ್ರೆ... ಏನ್ಮಾಡ್ತೀನೀ ನೋಡ್ತಿರು... ನಿನ್ನ ಒಲವಿನ ದಿನೇಶ.” ಪತ್ರ ಮುಗಿದಿತ್ತು.

ಪತ್ರವನ್ನು ಓದಿ ವಿದ್ಯಾಳಿಗೆ ನಗುವೂ ಬಂತು. ವ್ಯಸನವೂ ಆಗಿತ್ತು. ಹಿಂದಿನಂತೆ ಪತ್ರ ದೀರ್ಘವಾಗಿರಲಿಲ್ಲ. ಆದರೆ ಅವನಿಗೆ ನನ್ನ ಪರೀಕ್ಷೆಗಿಂತ ನಾನು ಮುಖ್ಯ.... ಸದಾ ನನ್ನ ಧ್ಯಾನದಲ್ಲೇ ಇರ್ತಾರಂತೆ. ನನಗೂ ಇಲ್ಲಿ ಸದಾ ದಿನೇಶನದೇ ಧ್ಯಾನ.... ಆದರೆ ಇಲ್ಲಿ ಮಧ್ಯೆ ಮಧ್ಯೆ ಭಂಗ ಬರುತ್ತಿದೆ. ಒಂದು ಕಡೆ ಅಪ್ಪನ ಕಾವಲು, ಮತ್ತೊಂದು ಕಡೆ ಈ ದರಿದ್ರ ಪರೀಕ್ಷೆಯ ಭಯ.... ತನಗೆ ಅನ್ನಿಸಿದ್ದನ್ನು ಪತ್ರದಲ್ಲಿ ಬರೆದಳು.

* * *

“ಲಗ್ನ, ಮುಹೂರ್ತ ಎಲ್ಲಾ ಸರಿಯಾಗಿದೆಯೋ ಇಲ್ವೋ ಅಂತ ತಿಳ್ಕೊಂಡು ಲಗ್ನ ಪತ್ರಿಕೇನ ಪ್ರಿಂಟ್ ಹಾಕಿಸ್ಬೇಕು.... ಒಂದ್ಸಾರಿ ವಿದ್ಯಾಳ ತಂದೆಗೆ, ಅದ್ಯಾರೋ ಇದನ್ನೆಲ್ಲ ಗುರುತು ಹಾಕಿಕೊಟ್ರಲ್ಲ ಅವರ್ಮನೆಗೆ ಹೋಗ್ಬನ್ನಿ.” ಸುಶೀಲಾ ಗೋಪಾಲನಿಗೆ ಹೇಳಿದಳು.

“ನನಗೆ ಅದ್ಕೆಲ್ಲಾ ಬಿಡುವಿಲ್ಲ. ನೀನೇ ನಿನ್ನ ಅತ್ತಿಗೆಯ ಜತೆ ಹೋಗ್ಬಾ....” ಆ ದಿನವೇ ಸುಶೀಲಾ ಅತ್ತಿಗೆಯ ಮನೆಗೆ ಬಂದಳು.

“ಭಾವಂಗೆ, ಮುಹೂರ್ತ ಹಾಕಿ ಕೊಟ್ರಲ್ಲ ಅವರ್ಮನೆಗೆ ಹೋಗ್ಬರೋಣ

ಬರ್ತೀರಾ?"

"ಅವರ್ಮನೆ ಎಲ್ಲಿದೆಯೋ ನಂಗೆ ಸರ್ಯಾಗಿ ಗೊತ್ತಿಲ್ಲ ಸುಶೀಲಾ. ಗೌತಮಂಗೆ ಗೊತ್ತು. ಅವನೇ ಅವತ್ತು ಭಾವನ್ನ ಕರ್ಕೊಂಡ್ಹೋಗಿದ್ದ. ಗೌತಮ ಬಂದ್ಮೇಲೆ ಹೋಗೋರಂತೆ."

"ನಿನ್ನ ಸೊಸೆಗೆ ಏನು ಒಡವೆ ಹಾಕ್ತೀಯ? ಎಷ್ಟು ಸೀರೆ ತರ್ತೀಯ?"

"ಕೆಂಪು ಹರಳಿನ ನೆಕ್ಲೇಸ್ ಮಾಡಿಸೋಣಾಂತ ಅಂದ್ಕೊಂಡಿದೀನಿ. ಅವಳ ಮೈ ಬಣ್ಣಕ್ಕೆ ಒಪ್ಪುತ್ತೆ. ಒಂದು ಜತೆ ಬಳೆ, ಕರಿಮಣಿ ಸರ, ಮಾಂಗಲ್ಯ. ಎಲ್ಲಾ ಮಾಮೂಲು. ಮೆಜೆಂಟಾ ಅಥವಾ ಮೆರೂನ್ ಕಲರ್‌ನ ಭಾರೀ ಸೀರೆ ಒಂದು, ಇನ್ನೊಂದೆರಡು ಸಾಧಾರಣವಾದ ಸೀರೆಗಳನ್ನು ತರೋಣ ಅಂತ. ನೀವೂ ನನ್ನ ಜತೆ ಜವುಳಿ ಅಂಗ್ಡಿಗೆ ಬರ್ಬೇಕು."

"ವಿದ್ಯಂಗೆಂಥ ಸೀರೆ ಬೇಕೋ ಅದನ್ನ ಅವ್ಳೇ ಆಯ್ಕೆ ಮಾಡ್ಕೊಳ್ಳಿ.... ಅವಳನ್ನ ಕರೆಸೋಣ... ಏನಂತೀಯ....?"

"ಹೌದು ಅತ್ಗೆ.... ಅದೇ ಸರಿ.... ನೀವು ನಿಮ್ಮಕ್ಕನಿಗೆ, ವಿದ್ಯಾಳನ್ನು ಕಳಿಸ್ಕೊಡಿ ಅಂತ ಪತ್ರ ಬರೀತೀರಾ?"

"ಹೂಂ... ಬರೀತೀನಿ.... ಅದಕ್ಕೇನಂತೆ.... ಗೌತಮ ಬಂದಾಂತ ಕಾಣುತ್ತೆ......"

ಗೌತಮ ಬಂದ. "ಏನತ್ತೆ, ಹೇಗಿದೀರಿ?" ಮುಗುಳ್ನಕ್ಕು ಪ್ರಶ್ನಿಸಿದ.

"ನಿಂಗೊಂದು ಹೆಣ್ಣನ್ನ ನೋಡಿದೀನಿ. ಅದೇ ವಿಷಯಾನ, ನಾನೂ ಅತ್ಗೇ ಇಬ್ರೂ ಚರ್ಚೆ ಮಾಡ್ತಿದ್ವು." ತಮಾಷೆ ಮಾಡಿದಳು.

"ನಂಗೆ ಈಗ್ಲೇ ಮದುವೆ ಬೇಡಪ್ಪಾ.... ಮೊದ್ಲು ದಿನೇಶನ ಮೇಲೆ ಪ್ರಯೋಗ ನಡೀಲಿ. ರಿಸಲ್ಟ್ ಚೆನ್ನಾಗಿದ್ರೆ ನೋಡೋಣ ಆಮೇಲೆ...."

"ಏನೋ ಹಾಗಂದ್ರೇ....?"

"ಮದುವೆ ಅಂದ್ರೆ ಒಂಥರಾ ಬಂಧನ ಅಲ್ವಾ ಅತ್ತೆ. ವಿದ್ಯಾ ಅವನ ಬಂಧನಕ್ಕೆ ಸಿಕ್ಕಿ ಬೀಳ್ತಾಳೋ ಅಥವಾ ದಿನೇಶ ಅವಳ ಬಂಧನಕ್ಕೆ ಸಿಕ್ಕಿ ಬೀಳ್ತಾನೋ ನೋಡ್ಬೇಕಲ್ಲ?"

"ತಲೆಹರಟೆ. ಮದುವೆ ಇಬ್ಬರಿಗೂ ಬಂಧನವೇ. ಆದರೆ ಆ ಬಂಧನದಲ್ಲೇ ತಾನೇ ಜೀವನ?"

"ನನಗೆ ಈ ಬಂಧನ ಬೇಡ ಅತ್ತೇ.... ಪ್ಲೀಸ್..."

"ಬಿಡು... ಬೇಡ್ದೇ ಇದ್ರೇ ಸ್ವಲ್ಪ ನಂಜೊತೆ ಬರ್ತೀಯ?" ಎನ್ನುತ್ತಾ ತಾನು ಹೋಗಬೇಕಾಗಿರುವ ಜಾಗವನ್ನು ಹೇಳಿದಳು.

"ಹುಂ ಬರ್ತೀನಿ.... ನಿಮ್ಮದು ತಿಂಡಿ-ಕಾಫಿ ಆಯ್ತಾ ಅತ್ತೆ...?"

"ಹುಂ ಆಯ್ತು. ನೀನು ತಗೋ." ಅವನು ತಿಂಡಿ-ಕಾಫಿ ಮುಗಿಸಿದ. ಇಬ್ಬರೂ ಹೊರಟರು. ಸುಶೀಲಾ, ಬೈಕ್‌ನ ಹಿಂದಿನ ಸೀಟನ್ನೇರಿದಳು. ಬೈಕ್ ಮುಂದಕ್ಕೆ ಓಡಿತು.

* * *

ಅಧ್ಯಾಯ – ಹದಿನೆಂಟು

ಪ್ರಶಾಂತನ ಪತ್ತೆಯಾಯಿತು

ನಾರಾಯಣ ಶಾಸ್ತ್ರಿಗಳು ಒಂದು ಕಂಪೆನಿಯಲ್ಲಿ ಅಕೌಂಟೆಂಟ್ ಆಗಿ ಕೆಲಸ ನಿರ್ವಹಿಸುತ್ತಿದ್ದರು. ಹಿಂದೆಂದೋ ಅಭ್ಯಾಸ ಮಾಡಿದ್ದ ಜ್ಯೋತಿಷಶಾಸ್ತ್ರವನ್ನು ಪ್ರವೃತ್ತಿಯನ್ನಾಗಿಟ್ಟುಕೊಂಡಿದ್ದರು. ಸಾಯಂಕಾಲದ ಹೊತ್ತು ಅವರನ್ನು ಕೇಳಿಕೊಂಡು ಬಂದವರಿಗೆ, ಜ್ಯೋತಿಷ್ಯಕ್ಕೆ ಸಂಬಂಧಪಟ್ಟ ಸಲಹೆಗಳನ್ನು ಕೊಡುತ್ತಿದ್ದರು.

ಶಾಸ್ತ್ರಿಗಳು ಸೀತಾರಾಮ ಭಟ್ಟನ ಸಹಪಾಠಿಗಳಾಗಿದ್ದರು. ಭಟ್ಟ ತನ್ನ ಸೋದರ ಮಾವನ ಮನೆಯಲ್ಲಿದ್ದುಕೊಂಡು ಓದುತ್ತಿದ್ದಾಗ, ಕೆಲವೇ ಆಪ್ತ ಮಿತ್ರರುಗಳಲ್ಲಿ ಶಾಸ್ತ್ರಿಗಳೂ ಒಬ್ಬರಾಗಿದ್ದರು. ಅನಂತರ, ಸೀತಾರಾಮ ಆ ಊರನ್ನು ಸೇರಿದ. ಶಾಸ್ತ್ರಿ ಈ ಊರನ್ನು ಸೇರಿದ್ದರು. ಅಪರೂಪಕ್ಕೊಮ್ಮೆ ಸೀತಾರಾಮ ಭಟ್ಟ ಬೆಂಗಳೂರಿಗೆ ಬಂದಾಗ, ಶಾಸ್ತ್ರಿಗಳನ್ನು ಭೇಟಿಯಾಗುತ್ತಿದ್ದ.

ಲೋಕಾರೂಢಿಯ ಕೆಲವು ಮಾತುಗಳನ್ನು ಮಾತ್ರ ಆಡುತ್ತಿದ್ದರು. ಆಗ ಶಾಸ್ತ್ರಿಯ ಈ ಹವ್ಯಾಸ ಭಟ್ಟನ ಗಮನಕ್ಕೆ ಬಂದಿತ್ತು. ಅನಂತರ, ಇಷ್ಟು ವರ್ಷಗಳ ಮೇಲೆ ಭಟ್ಟನಿಗೆ ಶಾಸ್ತ್ರಿಯ ಸಹಾಯ ಬೇಕಾಗಿತ್ತು.

"ನನ್ನ ಮಗಳ ಮದುವೆಗೆ ಒಂದು ಒಳ್ಳೆಯ ಮುಹೂರ್ತವನ್ನು ಗೊತ್ತು ಮಾಡಿ ಕೊಡಬೇಕು." ಎಂದಿದ್ದ.

"ಹೆಣ್ಣು, ಗಂಡಿನ ಜಾತಕ ಇದ್ರೆ ಕೊಡು. ಇಬ್ಬರ ತಾರಾಬಲವನ್ನು ನೋಡಿ ದಿನ, ಮುಹೂರ್ತವನ್ನು ಗೊತ್ತು ಮಾಡಿಕೊಡ್ತೀನಿ."

"ಯಾವ ಜಾತಕವೂ ಇಲ್ಲ. ನನಗೆ ಅದರಲಿ ನಂಬಿಕೆ ಇಲ್ಲ. ನಾನು ಬರೆಸಲಿಲ್ಲ."

"ಜಾತಕವೇ ಇಲ್ಲದಿದ್ರೆ ಹೇಗಯ್ಯಾ ಹೇಳೋದು? ಹೋಗಲಿ, ನಕ್ಷತ್ರವಾದರೂ ಯಾವುದು ಅಂತ ಗೊತ್ತಾ!"

"ಇಲ್ಲ. ನಕ್ಷತ್ರ, ಗೋತ್ರ ಯಾವುದೂ ಬೇಡ. ಹಾಗೇ ಯಾವ್ದಾದ್ರೂ ದಿನಾನ ಗೊತ್ತುಮಾಡಿಕೊಡೋ ಹಾಗಿದ್ರೆ ಹೇಳು. ಇಲ್ಲದಿದ್ರೆ ಬಿಡು...."

"ಆ ರೋಷ ಇನ್ನೂ ಕಡಿಮೆ ಆಗಿಲ್ಲವಲ್ಲ ನಿನಗೆ. ಹೋಗ್ಲೀ ನಿನ್ನ ಮಗಳಿಗೆ ಹೆಸರನ್ನಾದ್ರೂ ಇಟ್ಟಿದೀಯ ತಾನೇ?" ಶಾಸ್ತ್ರಿ ನಕ್ಕಿದ್ದರು.

"ಹುಂ ಶ್ರೀವಿದ್ಯಾ ಅಂತ, ಅದು ವ್ಯವಹಾರ ನಾಮ. ಮನೇಲಿ ತಾಯೀ ಅಂತ ಕರೀತೀನಿ...."

"ಹುಡುಗನ ಹೆಸರು....ಅದಾದ್ರೂ ಗೊತ್ತಿದೆಯಾ?" ವ್ಯಂಗ್ಯವಿತ್ತು ಧ್ವನಿಯಲ್ಲಿ.

"ಹುಂ ದಿನೇಶ ಅಂತ....ಇನ್ನೇನೂ ಕೇಳ್ಬೇಡ..." ಶಾಸ್ತ್ರಿ ಕತ್ತೆತ್ತಿ ನೋಡಿದ್ದರು.

"ವಿದ್ಯಾ.... ದಿನೇಶ್... ಹೆಸರುಗಳೇನೋ ಚೆನ್ನಾಗಿವೆ. ವಿದ್ಯಾ, ವಾಗ್ದೇವಿಯ ಹೆಸರು; ದಿನೇಶ, ಸೂರ್ಯ ಭಗವಾನನ ಹೆಸರು. ಇಬ್ಬರೂ ಬೆಳಕನ್ನು ಚೆಲ್ಲುವವರು, ಮಾರ್ಗವನ್ನು ತೋರುವವರು. ಹೊಂದಾಣಿಕೆ ತುಂಬಾ ಚೆನ್ನಾಗಿರುತ್ತೆ. ಮುಂದಿನ ತಿಂಗಳಲ್ಲಿ ಮದುವೆಗೆ ಮುಹೂರ್ತಗಳಿವೆ. ಅದು ಸಾಮಾನ್ಯವಾಗಿ ಯಾವುದೇ ವಧೂ- ವರರಿಗೆ ಹೊಂದುವಂಥ ಮುಹೂರ್ತಗಳು.... ತಗೋ.... ಬರ್ಕ್ಕೋ..." ಎನ್ನುತ್ತಾ ದಿನಾಂಕಗಳ ಪಟ್ಟಿಗಳನ್ನು ಓದಿ ಹೇಳಿದರು. ಭಟ್ಟ ದಿನಾಂಕವನ್ನು ಮಾತ್ರ ಗುರುತಿಸಿಟ್ಟುಕೊಂಡಿದ್ದ.

"ಲಗ್ನಪತ್ರಿಕೆಯನ್ನು ಕಳಿಸಿಕೊಡ್ತೀನಿ. ನೀನೇ ನಿಂತು ಮದುವೆ ನಡೆಸಿ ಕೊಡಬೇಕು. ನಂಗಂತೂ ಏನೂ ಗೊತ್ತಿಲ್ಲ." ಎಂದಿದ್ದ ಭಟ್ಟ.

"ನನಗೆ ರಜ ಇಲ್ಲ. ಯಾಕೆ ನಿಮ್ಮೊರ್ನಲ್ಲಿ ಯಾರೂ ಶಾಸ್ತ್ರಿಗಳು ಸಿಗೋಲ್ವೇ?"

"ನಂಗೊತ್ತಿಲ್ಲ. ನನಗೆ ಯಾರ ಪರಿಚಯವೂ ಇಲ್ಲ."

"ಅದಕ್ಕೆ ಪರಿಚಯ ಯಾಕೆ? ದೇವಸ್ಥಾನಕ್ಕೆ ಹೋಗಿ, ಪೂಜಾರಿಗಳನ್ನ ಕೇಳಿದ್ರೆ ಹೇಳ್ತಾರೆ. ಈಗ ಮದುವೆ ಸೀಸನ್. ಆದಷ್ಟು ಬೇಗ ಗೊತ್ಮಾಡ್ಕೋ. ಇಲ್ಲ ದಿದ್ರೆ ಕಡೇ ಗಳಿಗೇಲಿ ಯಾರೂ ಸಿಗುಲ್ಲ."

"ನನಗೆ ದೇವಸ್ಥಾನಕ್ಕೆ ಹೋಗಿ ರೂಢಿ ಇಲ್ಲ.... ನೀನೇ ಯಾರನ್ನಾದ್ರೂ ಗೊತ್ತು ಮಾಡ್ಕೊಡು..."

"ಇಲ್ಲಿಯೋರು, ಅಲ್ಲಿಗೆ ಬರುಕ್ಕೆ ಒಪ್ತಾರೋ ಇಲ್ಲವೋ. ಒಪ್ಪಿದ್ರೂ, ಅವರಿಗೆ ರೈಲು ಚಾರ್ಜು ಕೊಡ್ಬೇಕಾಗುತ್ತೆ. ಪರ್ವಾಗಿಲ್ವಾ...?"

"ಚಾರ್ಜು ತಾನೇ? ಕೊಟ್ಟರಾಯ್ತು... ಆದರೆ ಒಂದ್ಮಾತು, ನನಗೆ, ಯಾವ ಶಾಸ್ತ್ರ, ಸಂಪ್ರದಾಯ ಒಂದೂ ಗೊತ್ತಿಲ್ಲ. ನನಗೆ ನಂಬಿಕೆಯೂ ಇಲ್ಲ. ಅದನ್ನೆಲ್ಲ ಅವರಿಗೆ ಹೇಳಿ ಬಿಡು. ಆಮೇಲೆ ಫಜೀತಿ ಮಾಡ್ಬಾರ್ದು ಅವರು."

"ಸರಿ ಹೇಳ್ತೀನಿ. ನನ್ನ ಸ್ನೇಹಿತ ನಾಸ್ತಿಕ. ಅವನು ಹೇಗೆ ಹೇಳ್ತಾನೋ ಹಾಗೇ ಮಾಡಿ ಅಂತ. ಆದರೆ ಇದಕ್ಕೆ ಹುಡುಗನ ಮನೆಯವರು ಒಪ್ಪದಿದ್ರೇ....?"

"ಅವರ್ಗೇನೇನು ಬೇಕೋ ಅದನ್ನು ಅವುಗಳು ಮಾಡಿಸ್ಕೊಳ್ಳಲಿ.... ನನ್ನನ್ನು ಮಾತ್ರ ಹಸೆಮಣೆಗೆ ಕರೀದೇ ಇದ್ರಾಯ್ತು...."

"ಕನ್ಯಾದಾನಾನೂ ಮಾಡುಲ್ವಾ!? ಅದು ಅತ್ಯಂತ ಶ್ರೇಷ್ಠವಾದ ದಾನ ಗಳಲ್ಲಿ ಒಂದು...."

"ಕನ್ಯಾದಾನ ಒಂದು ಮಾಡಿದ್ರಾಯ್ತು... ಆದರೆ ಕಲಾಪ ಸಂಕ್ಷಿಪ್ತವಾಗಿರಬೇಕು."

"ಅವರೂ ಎಲ್ಲಾ ಕಾಲಕ್ಕೆ ತಕ್ಕ ಹಾಗೆ ಅನುಸರಿಸಿಕೊಂಡು ಹೋಗೋದನ್ನು

ಕಲಿತಿರ್ತಾರೆ. ನಿಮಗೇ ಬೇಡದಿದ್ದ ಮೇಲೆ, ಅವರ್‍ಯಾಕೆ ಕಂಠ ಶೋಷಣೆ ಮಾಡ್ಕೊಳ್ತಾರೆ? ಅಂಥೋರನ್ನೇ ಗೊತ್ತು ಮಾಡ್ತೀನಿ. ಒಟ್ನಲ್ಲಿ ಮದುವೆ ಕಾರ್ಯ ನೆರವೇರಬೇಕು. ಹೌದಾ?"

"ಹೌದು ಕಣೋ ಶಾಸ್ತ್ರಿ. ಅಷ್ಟು ಸಾಕು...... ನಾನಿನ್ನು ಬರ್ಲಾ....?"

"ತಡೀ ಕಾಫಿ ಕುಡಿದು ಹೋಗೂವಂತೆ. ಅಮ್ಮಾ ಸುಗುಣಾ, ಸ್ವಲ್ಪ ಕಾಫಿ ಮಾಡ್ಕೊಡು. ಹಾಗೇ ಬಾಳೆಹಣ್ಣುಗಳಿವೆ ನೋಡು ತಂದ್ಕೊಡು.... ನನ್ನ ಹೆಂಡ್ತಿ ತವರುಮನೆಗೆ ಹೋಗಿದಾಳೆ. ಇವತ್ತು ಅವರಪ್ಪನ ಶ್ರಾದ್ಧ... ನಿನ್ನೇನೇ ಹೋದ್ಲು. ನಾಳೆ ಬರಬಹುದು. ಅಂದ್ಹಾಗೇ ನಿನ್ನ ಸೋದರಮಾವ ಹೇಗಿದಾರೆ? ಈಗಲೂ ಅಪ್ಪನ ಮನೆಗೆ ನೀನು ಹೋಗುಲ್ವಾ....!"

"ಇಲ್ಲ. ನಾನು ಯಾರ ಮನೆಗೂ ಹೋಗುವ ಪರಿಪಾಠವನ್ನೇ ಇಟ್ಕೊಂಡಿಲ್ಲ."

"ಈಗ ಮದ್ವೆಗಾದ್ರೂ ಅವ್ರುಗಳನ್ನು ಕರೆಯೋಕೆ ಹೋಗ್ತೀ ತಾನೇ?"

"ಎಲ್ರಿಗೂ ಆಹ್ವಾನ ಪತ್ರಿಕೆಯ ಜತೆ ಒಂದು ವಿನಂತಿ ಪತ್ರವನ್ನು ಬರೆಸಿ ಕಳಿಸ್ಬಿಡ್ತೀನಿ. ಎಲ್ಲರ ಮನೆಗೂ ಹೋಗೋಕೆ ಬಿಡುವೆಲ್ಲಿದೆ!"

"ಬಿಡುವು ಮಾಡ್ಕೋಬೇಕಪ್ಪಾ... ಸದಾ ಕೆಲ್ಸ, ಸಂಪಾದ್ನೆ ಇಷ್ಟೇ ಯೋಚ್ನೇನಾ? ಹೆತ್ತವರ್‍ನೆಲ್ಲಾ ದೂರ ಮಾಡ್ಬಿಡುಕ್ಕೆ ಆಗುತ್ತಾ?"

"ನನ್ನನ್ನು ಹೆತ್ತ ತಾಯಿ ಬದುಕಿಲ್ಲ ಅಂತ ನಿನಗೆ ಗೊತ್ತು. ಇನ್ನು ನಮ್ಮಪ್ಪ ಎರಡ್ನೇ ಮದ್ವೆಯಾದ ದಿನವೇ, ನಾನು ಅವರನ್ನು ದೂರ ಮಾಡಿದೆ. ಮಾವ ಒಬ್ಬರು ನನ್ನನ್ನ ಚೆನ್ನಾಗಿ ಅರ್ಥ ಮಾಡ್ಕೊಂಡಿದ್ರು. ಆದ್ರೆ ನನ್ನ ಮದುವೆ ಆದ್ಮೇಲೆ ಅವರೂ ಬದಲಾಗಿಬಿಟ್ರು. ಒಮ್ಮೊಮ್ಮೆ ಅನಿಸುತ್ತೆ – ಮದ್ವೇನಾದ್ರೂ ಆಗ್ದೇ ಇದ್ದಿದ್ರೆ, ಮಾವ ಸರಿಯಾಗಿಯೇ ಇರ್ತಿದ್ರು ಅಂತ..... ಈಗ ನಾನು ಹೆಸರಾಂತ ಅಡ್ವೊಕೇಟ್, ಬಂಗ್ಲೆಯಂಥ ಮನೆ ಇದೆ. ಹಣ, ಗೌರವ ಎಲ್ಲಾ ಇದೆ. ಆದ್ರೂ ನಾನು ಯಾರಿಗೂ ಬೇಡದವನಾಗಿ ಬಿಟ್ಟಿದೀನಿ."

"ಈಗ ಇದೇ ಒಂದು ಅವಕಾಶ, ನೀನು ದಂಪತಿ ಸಮೇತನಾಗಿ ಹೋಗಿ, ನಿನ್ನ ಕಡೆಯವರನ್ನೆಲ್ಲಾ ಮದುವೆಗೆ ಆಮಂತ್ರಿಸಿ ಬಾ..... ಎಲ್ಲಾ ಸರಿ ಹೋಗುತ್ತೆ...."

"ನೋಡೋಣ. ಇದೆಲ್ಲ ನನ್ನ ಮನಸ್ಸಿಗೆ ಒಪ್ಪದ ಕೆಲಸ...."

"ಹಾಗಂದ್ರೆ ಹೇಗೆ.... ನಮಗೋಸ್ಕರ ಅಲ್ಲದೆ ಇದ್ರೂ ಮಕ್ಕಳಿಗೋಸ್ಕರ, ಮಕ್ಕಳ ಶ್ರೇಯಸ್ಸಿಗೋಸ್ಕರ ನಮ್ಮ ಅಹಂನ ಬಿಡಬೇಕಾಗುತ್ತೆ.... ಮದುವೆಯಂಥ ಶುಭ ಕಾರ್ಯಕ್ಕೆ ಆಮಂತ್ರಣ ನೀಡದೆ ಯಾರೂ ಬರುಲ್ಲ.... ಆದರೆ ಜೀವನಪರ್ಯಂತ ಈ ಮಾತು ಮಾತ್ರ ಉಳಿದುಕೊಂಡು ಬಿಡುತ್ತೆ...."

"ನಿನ್ನ ಸಲಹೆಗೆ ಧನ್ಯವಾದಗಳು.... ಆದರೆ ನನ್ನ ಸ್ವಾಭಿಮಾನವನ್ನು ಬಿಟ್ಟು ಹೇಗೆ ಹೋಗೋದು....?"

"ಏನು ಸ್ವಾಭಿಮಾನ....? ನಿನ್ನದು ದುರಭಿಮಾನ...! ದುರಭಿಮಾನ, ದುರಂತಕ್ಕೆ ಎಡೆ ಮಾಡಿ ಕೊಡುತ್ತದೆ. ದುರ್ಯೋಧನನ ಕಥೇನಾ ಕೇಳಿದೀಯೋ ಇಲ್ವೋ.... ದುರಭಿಮಾನದಿಂದ ಅವನು ಸಾಧಿಸಿದ್ದೇನು? ಸ್ವಂತದವರನ್ನೆಲ್ಲ ಕಳೆದುಕೊಂಡ..."

"ಅದನ್ನೆಲ್ಲ ನನಗ್ಯಾಕೆ ಹೇಳ್ತಾ ಇದೀಯ? ನಾನು ಅಭಿಮಾನದಿಂದ, ಅದೂ ಹಳೆಯ ಸ್ನೇಹಿತನೆಂಬ ಅಭಿಮಾನದಿಂದ ನಿಮ್ಮ ಮನೆಗೆ ಬರ್ತೀನಿ. ನಿನ್ನ ಈ ಉಪದೇಶಗಳು ನನಗೆ ಹಿಡಿಸೋಲ್ಲ...."

ಸುಗುಣಾ ಬಂದು, ಕಾಫಿಯ ಬಟ್ಟಲುಗಳನ್ನು ಇಟ್ಟಳು. ಜತೆಯಲ್ಲಿ ಬಾಳೆಹಣ್ಣುಗಳೂ, ಎಂದೋ ಮಾಡಿದ್ದ ಕೋಡುಬಳೆಗಳೂ ಇದ್ದವು.

"ತಗೋ ಕಾಫೀನ.... ಇವಳು ನನ್ನ ಮಗಳು ಸುಗುಣಾ ಅಂತ. ಪಿ.ಯು.ಸಿ. ಓದಿದ್ದಾಳೆ. ಹೊಲಿಗೆ ಕಲಿತಿದ್ದಾಳೆ.... ಇನ್ನೂ ಇಬ್ಬರು ಹೆಣ್ಣು ಮಕ್ಕಳಿದ್ದಾರೆ.... ಹಿರಿ ಮಗ ಡಿಪ್ಲೋಮೋ ಮುಗಿಸಿ, ಕೆಲಸ ಹುಡುಕ್ತಿದಾನೆ...." ಸುಗುಣಾ ಒಳಕ್ಕೆ ಹೋಗಿದ್ದಳು.

ಹೆಣ್ಮಕ್ಳು ಬೆಳೆದ್ಮೇಲೆ, ಎದೆ ಭಾರ ಜಾಸ್ತಿಯಾಗುತ್ತೆ. ಮೂರು ಜನ ಹುಡುಗೀರ್ಗೆ ಮದ್ವೆ ಮಾಡ್ಬೇಕು ನಾನು.... ನಿಂಗೇ ಗೊತ್ತು, ನಾನು ಶ್ರೀಮಂತನಲ್ಲ...."

"ನನ್ನಿಂದ ಏನಾದ್ರೂ ಸಹಾಯ ಬೇಕಿದ್ರೆ ಕೇಳು....?"

"ಬೇಡ, ಸದ್ಯಕ್ಕೆ ನನಗೆ ಆ ಪರಿಸ್ಥಿತಿ ಒದಗಿಲ್ಲ. ಇವಳ್ಗೆ ಒಬ್ಬ ಹುಡುಗನ್ನ ಗೊತ್ತು ಮಾಡಿದೀನಿ. ಆದ್ರೆ ಆ ಹುಡುಗಂಗೆ ಯಾರೂ ಇಲ್ಲ. ಅನಾಥ..... ಸದ್ಯಕ್ಕೆ ನಮ್ಮ ಎಸ್ಟೇಟ್‌ನಲ್ಲಿ ಸೂಪರ್ ವೈಸರ್ ಆಗಿದಾನೆ...."

"ನಿನ್ನ ಎಸ್ಟೇಟ್, ಅದೆಲ್ಲಿದೆ......?"

"ನಮ್ಮೂರಿನ ಹತ್ತಿರ.... ತೆಂಗು, ಮಾವು, ಬಾಳೆ ಎಲ್ಲಾ ಹಾಕ್ಸಿದೀನಿ. ಅದನ್ನ ಮಗನಿಗೆ, ಒಂದು ಉದ್ಯಮವಾಗ್ಲೀ ಅಂತ ತಗೊಂಡಿದ್ದು. ಆದರೆ ನನ್ನ ಮಗ ಬಹಳ ಸೋಮಾರಿ. ತೋಟಗಾರಿಕೇಲಿ ಆಸಕ್ತಿ ಇಲ್ಲ. ಮೈ ಬಗ್ಗಿಸಿ ದುಡಿಯುವ ಉತ್ಸಾಹವಿಲ್ಲ. ಅದೇ ಆ ಹುಡುಗ ಇದಾನೆ ನೋಡು..... ಬಹಳ ಚುರುಕು."

"ಎಲ್ಲಿಯವನು? ನಿನಗೆ ಹೇಗೆ ಸಿಕ್ದ?"

"ನಮ್ಮೂರಿನ ಕಡೆಯವನೇ. ನನ್ನ ಮಗನಿಗೆ ಯಾವಾಗ್ಲೋ ಪರಿಚಯ ಆಗಿದ್ನಂತೆ. ಕೆಲ್ಸವಿಲ್ಲದೇ ಅಲೆದಾಡ್ತಿದ್ದೋನ್ಗೆ ಈಗ ಒಂದು ದಾರಿ ಮಾಡಿ ಕೊಟ್ಟಿದೀನಿ...."

"ಒಳ್ಳೇ ಕೆಲ್ಸ ಮಾಡ್ದೆ ಬಿಡು...."

"ಹುಂ. ನನ್ನ ಒಳ್ಳೆಕೆಲ್ಸಕ್ಕೆ ಪ್ರತಿಫಲವೂ ಸಿಕ್ಕಿದೆ. ಹುಡುಗ ತುಂಬಾ ನಿಷ್ಠಾವಂತ, ಪ್ರಾಮಾಣಿಕ.... ಹೆಸರು ಪ್ರಶಾಂತ, ಹೆಸರಿಗೆ ತಕ್ಕಾಗೇ ಇದಾನೆ...."

"ಪ್ರಶಾಂತ...." ಭಟ್ಟ ತನ್ನೊಳಗೇ ನುಡಿದುಕೊಂಡ. ಮೈಯಲ್ಲಿ ಏನೋ

ಇರುಸುಮುರುಸು.

"ನೋಡೋಕೂ ಅಷ್ಟೇ ತುಂಬಾ ಚೆನ್ನಾಗಿದಾನೆ. ಸಿನೆಮಾ ಹೀರೋ ತರಹ ಇದಾನೆ. ಆದರೆ ನೋಡು ಒಂದೇ ಎಡವಟ್ಟು. ಕುಲಗೋತ್ರ, ಜಾತಿ, ಮತ ಒಂದೂ ಗೊತ್ತಿಲ್ಲ. ಆದರೆ ಬೇರ ಯಾವ ರೀತಿಯಲ್ಲೂ ತೆಗೆದು ಹಾಕುವ ಹಾಗಿಲ್ಲ. ಅದೇ ಸಮಾಧಾನ."

"ಓದಿದಾನಾ.....?" ಈ ಪ್ರಶ್ನೆಯನ್ನು ಕೇಳಲು ತಡವರಿಸಿದ.

"ಬಿ.ಎಸ್ಸಿ. ಪಾಸಾಗಿಲ್ಲವಂತೆ. ಮುಂದೆ ಓದಲು ಅನುಕೂಲವಿಲ್ಲ. ನಮ್ಮ ಸುಗುಣಂಗೆ ಸರಿ ಹೋಗ್ತಾನೆ. ಅವಳು ಪಿ.ಯು.ಸಿ. ಪಾಸು ಮಾಡಿದ್ದಾಳೆ. ಮುಂದೆ ಓದುವ ಆಸೆಯೇ ಇಲ್ಲ.... ಸುಮ್ಮನಾಗಿ ಬಿಟ್ಟೆ. ಹೊಲಿಗೆ ಕಲಿತಿದಾಳೆ. ಮನೆ ಕೆಲಸ ಬರುತ್ತೆ.... ಹುಡುಗೀರ್‍ಗೆ ಇರಬೇಕಾದ ಗುಣಗಳೆಲ್ಲ ಇವೆ.... ನಾನೇ ಹೊಗಳ್ಕೋ ಬಾರದು, ಎಲ್ರೂ ಹೇಳ್ತಾರೆ, ಹೆಸರಿಗೆ ತಕ್ಕ ಹಾಗೇ ಸುಗುಣಾನೇ...."

ಭಟ್ಟನಿಗೆ, ತನ್ನ ಮಗ ಪ್ರಶಾಂತನೇ ಇರಬಹುದೆಂಬ ಅನುಮಾನ ಬಲವಾಗ ತೊಡಗಿತು.

"ಎಷ್ಟು ತಿಂಗಳ್ನಿಂದ ನಿನಗೆ ಈ ಹುಡುಗನ ಪರಿಚಯ?"

"ಈಗೊಂದು ನಾಲ್ಕು ತಿಂಗಳ್ನಿಂದ..... ಅಥವಾ...."

"ಕೇವಲ ನಾಲ್ಕು ತಿಂಗಳ್ನಿಂದ ಪರಿಚಯ ಅಂತ ಹೇಳ್ತೀಯ. ಅದ್ಹೇಗೆ ಅವನನ್ನು ನಂಬ್ತೀಯ?"

"ಯಾರನ್ನ ನಂಬಬೇಕು, ಯಾರನ್ನ ನಂಬಬಾರದು ಅನ್ನೋದು ಮುಖ ನೋಡಿದ ಕೂಡ್ಲೇ ತಿಳಿದುಬಿಡುತ್ತೆ. ಅನ್ನ ಆಗಿದೆಯೋ ಇಲ್ವೋ ಅಂತ ತಿಳ್ಕೋಳ್ಳೋಕೆ ಒಂದು ಅಗುಳು ಸಾಕು ಅಲ್ವಾ..? ಹಾಗೇನೇ..... ಅದ್ಸರಿ, ಈಗ ನಿನ್ನ ಅಳಿಯ ನಾಗೋನನ್ನ ಎಷ್ಟು ತಿಂಗಳ್ನಿಂದ ಬಲ್ಲೆ?"

"ಅವನು ನನ್ನ ಷಡ್ಡಕನ ತಂಗಿಯ ಮಗ.... ದೂರ ಸಂಬಂಧಿ..."

"ಆದ್ರೇನು! ನಿನ್ನ ಷಡ್ಡಕ ಹೇಗೆ ಅಂತ ನಿನಗೆ ಚೆನ್ನಾಗಿ ಗೊತ್ತಾ? ಅವನ ತಂಗಿಯ ಗಂಡನ ಬಗ್ಗೆ ನಿನಗೇನು ಗೊತ್ತು? ಈಗ ನಿನ್ನ ಅಳಿಯನಾಗೋನ್ನ ನೀನು ನೋಡಿದ್ದೇ ಈಚೆಗೆ.... ಹೌದು ತಾನೇ?"

"ಅದೇನೋ ದಿಟ. ಆದರೆ ತಂದೆ–ತಾಯಿ ಯಾರೂ ಇಲ್ಲದ ಹುಡುಗನ್ಗೆ ಅತಿ ಪ್ರಾಶಸ್ತ್ಯ ಕೊಡ್ತಿದೀಯ. ಅವನು ಸುಳ್ಳು ಹೇಳ್ತಿರಬಹುದು ಅಂತ ನಿನಗನ್ನಿ ಸುಲ್ವಾ? ಅಷ್ಟು ಸುಲಭವಾಗಿ ನಂಬಿ ಬಿಟ್ಯಾ!"

"ನೀನು ಲಾ ಪಾಯಿಂಟ್ ಹುಡುಕಿ ತೆಗೀಬೇಡ..... ಇನ್ನು ಮುಂದೆ ನಾವೇ ಅವನಿಗೆ ತಂದೆ – ತಾಯಿ...."

ಭಟ್ಟನಿಗೆ ಇನ್ನು ಅಲ್ಲಿ ಕುಳಿತಿರಲು ಮನಸ್ಸಾಗಲಿಲ್ಲ. ಅವನ ತಳಮಳ

ಅವನಿಗೇ ಅರ್ಥವಾಗಿರಲಿಲ್ಲ. ಎದ್ದ.

"ನಾನಿನ್ನು ಹೊರಡ್ತೀನಿ. ಮದುವೆಗೆ ಬರೋದನ್ನ ಮರೀಬೇಡ." ಎಂದು ಮತ್ತೊಮ್ಮೆ ಹೇಳಿದ.

ಶಾಸ್ತ್ರಿಯ ಮನೆಯಿಂದ ಹೊರಟ ಭಟ್ಟನ ತಲೆಯಲ್ಲಿ, ಹುಳು ಕೊರೆಯ ತೊಡಗಿತ್ತು. ಮನೆ ಬಿಟ್ಟು ಹೋದ ಪ್ರಶಾಂತ, ಇಲ್ಲಿಗೆ ಬಂದು ಸೇರಿಕೊಂಡಿದಾನೆ. ಸದ್ಯದಲ್ಲೇ ಶಾಸ್ತ್ರಿಯ ಅಳಿಯನಾಗಲಿದ್ದಾನೆ... ಈ ಪ್ರಶಾಂತ ನನ್ನ ಮಗನೆಂದು ಈ ಶಾಸ್ತ್ರಿಗೆ ತಿಳಿದಿಲ್ಲ. ತಿಳಿಯುವುದೂ ಬೇಡ. ಹಾಗೇನಾದರೂ ಪ್ರಶಾಂತ ಈ ಮನೆಯ ಸದಸ್ಯನಾಗಿ ಹೋದರೆ, ನನ್ನ ಗೌರವಕ್ಕೆ ಧಕ್ಕೆ ಬರುವುದು ಖಂಡಿತಾ. ಇದನ್ನು ಹೇಗಾದರೂ ತಪ್ಪಿಸಬೇಕು ಎಂದುಕೊಂಡ.

ಊರಿಗೆ ಬಂದವನೇ, ಪ್ರಶಾಂತನಿಗೆ ಒಂದು ಪತ್ರವನ್ನು ಬರೆದು, ಅದಕ್ಕೆ ಪ್ರೇಮಳ ಸಹಿಯನ್ನು ಹಾಕಿಸಿಕೊಂಡು ಪೋಸ್ಟ್ ಮಾಡಿದ. ತಾಯಿಯ ಪತ್ರವೆನ್ನು ಓದಿ, ಪ್ರಶಾಂತ ಮನೆಗೆ ವಾಪಸ್ಸು ಬಂದು ಬಿಡುತ್ತಾನೆಂದು ಭಾವಿಸಿದ.

ಪ್ರಶಾಂತ ಎಂಟು – ಹತ್ತು ದಿನಗಳಿಗೊಮ್ಮೆ ಶಾಸ್ತ್ರಿಗಳ ಮನೆಗೆ ಬರುತ್ತಿದ್ದ. ಹಾಗೇ ಬಂದಿದ್ದಾಗ, ಅವನಿಗೆ ಎರಡು ಪತ್ರಗಳು ತಲುಪಿದ್ದವು. ಮೊದಲಿಗೆ ವಿದ್ಯಾ ಬರೆದಿದ್ದ ಕಾಗಧವನ್ನು ಓದಿಕೊಂಡ.

"ಅಪ್ಪ ಅಮ್ಮನ ಹೆಸರ್ನಲ್ಲಿ, ನಿನಗೆ ಒಂದು ಪತ್ರವನ್ನು ಬರೆದಿದ್ದಾರೆ. ಅದರಲ್ಲಿ ಏನು ಬರೆದಿದೆ ಅಂತ ಅಮ್ಮನಿಗಾಗಲೀ, ನಮಗ್ಯಾರಿಗೇ ಆಗಲಿ ತಿಳಿಯದು. ಅಪ್ಪ ಬಲವಂತವಾಗಿ ಅಮ್ಮನಿಂದ ಸಹಿ ಹಾಕಿಸಿಕೊಂಡಿದ್ದಾರೆ. ಅಮ್ಮನ್ನ ತಪ್ಪಾಗಿ ಭಾವಿಸ ಬೇಡ." ಎಂದು ಬರೆದಿದ್ದಳು. ಜತೆಗೆ ಇನ್ನು ಏನೇನೋ ವಿಷಯಗಳನ್ನು ಬರೆದಿದ್ದಳು.

ಪ್ರಶಾಂತ ಇನ್ನೊಂದು ಕವರನ್ನು ಬಿಡಿಸಿ, ಪತ್ರವನ್ನು ಹೊರ ತೆಗೆದು.

"ಚಿ| ಪ್ರಶಾಂತನಿಗೆ ಆಶೀರ್ವಾದಗಳು. ನೀನು ಕ್ಷೇಮವೆಂದು ತಿಳಿದಿದ್ದೇನೆ. ನಮ್ಮ ಪರಿಚಯದವರೊಬ್ಬರಿಂದ ನೀನು ಶಾಸ್ತ್ರಿ ಎನ್ನುವವರ ಮನೆಯಲ್ಲಿ ಕೆಲಸಕ್ಕಿರುವೆ ಯೆಂದು ತಿಳಿಯಿತು. ಇದು ನಮಗೆಲ್ಲ ಹಿಡಿಸದ ವಿಷಯ. ಈ ಪತ್ರ ತಲುಪಿದ ಕೂಡಲೇ ಮನೆಗೆ ಬಾ.... ನಮಗೆಲ್ಲಾ ಅವಮರ್ಯಾದೆ ತರುವಂಥ ಕೆಲಸವನ್ನು ಮಾಡಬೇಡ. ನೀನು ಲಾಯರ್ರಾಗದಿದ್ದರೂ ಪರವಾಗಿಲ್ಲ. ಶಾಸ್ತ್ರಿಗಳ ಮನೆಯಲ್ಲಿ ಜೀತದಾಳಿನಂತಿರಬೇಡ. ಇದು ನಮ್ಮ ಮನೆತನಕ್ಕೇ ಅವಮಾನ. ನನ್ನ ಮಾತಿಗೆ ನೀನು ಬೆಲೆ ಕೊಟ್ಟು ನೀನು ಬೇಗನೇ ಬರುತ್ತೀಯೆಂದು ನಂಬಿದ್ದೇನೆ. ಇತಿ ನಿನ್ನ ಅಮ್ಮ."

ಪ್ರಶಾಂತ ಯಾವ ಭಾವನೆಗೂ ಒಳಗಾಗದೆ ಪತ್ರವನ್ನು ಓದಿ ಹರಿದು ಹಾಕಿದ.

"ನನಗೆ ಯಾವ ಆಶ್ರಯವೂ ಇಲ್ಲದೆ ಪರದೇಶಿಯಂತೆ ಪರದಾಡಿದರೆ, ಒಂದಲ್ಲ ಒಂದು ದಿನ ಸೋತು, ಮನೆಗೆ ವಾಪಸ್ಸು ಬರುತ್ತೇನೆಂದು ಭಾವಿಸಿದ್ದರೇ

ನೋ? ಈಗ ಆ ಮಾತು ಸುಳ್ಳಾಗುತ್ತಿದೆ. ಅದಕ್ಕೇ ಈ ಸಂಚು! ಇದುವರೆಗೂ ನನ್ನನ್ನೆಂದೂ ಹುಡುಕಿಸುವ ಪ್ರಯತ್ನವನ್ನು ಮಾಡಿದಂತಿಲ್ಲ. ಈಗ ನಾನು ಇಲ್ಲಿರುವೆನೆಂದು ತಿಳಿದ ಕೂಡಲೇ, ನನ್ನನ್ನು ಇಲ್ಲಿಂದ ಓಡಿಸುವ ಉಪಾಯ.... ಅಮ್ಮ ಕಾಗದ ಬರೆ ದರೆ, ತಾನು ಹೊರಟು ಹೋಗ್ತೀನೆಂದು ತಿಳಿದಿರುವಂತಿದೆ.... ಎಂಥಾ ಮೋಸ! ಈ ವ್ಯಕ್ತಿ ನನ್ನ ತಂದೆಯಲ್ಲ. ತಂದೆಯ ರೂಪದ ಶತ್ರು. ಈ ಮನುಷ್ಯನಿಗೆ ಬುದ್ಧಿ ಕಲಿಸ ಲೇಬೇಕು." ಎಂದುಕೊಂಡು ಅಲ್ಲಿ ಇಲ್ಲಿ ತಿರುಗಾಡಿ, ಮತ್ತೆ ಮನೆಗೆ ವಾಪಸ್ಸಾದ.

ಒಳಗೆ ಯಾರೋ ಮಾತನಾಡುತ್ತಿರುವ ಧ್ವನಿಯನ್ನು ಕೇಳಿ, ಹಾಗೇ ಹೊರ ಬಾಗಿಲಲ್ಲಿ ನಿಂತ. ಯಾರೋ ಶಾಸ್ತ್ರವನ್ನು ಕೇಳಲೆಂದೋ, ಮುಹೂರ್ತವನ್ನು ಇಡಿಸಿ ಕೊಳ್ಳಲೋ ಬಂದಿರುವರೆಂದುಕೊಂಡ. ಅವರುಗಳು ಹೊರಟರು. ಅವರುಗಳು ಮುಂಬಾಗಿಲಿಗೆ ಬರುವುದಕ್ಕೂ ಪ್ರಶಾಂತ ತಾನು ನಿಂತಲ್ಲಿಂದ ಮುಂದಕ್ಕೆ ಬರುವುದಕ್ಕೂ ಸರಿ ಹೋಯ್ತು. ಗೌತಮನಿಗೆ ಢಿಕ್ಕಿಯನ್ನು ಕೊಡುವುದರಲ್ಲಿದ್ದ. ಒಂದು ಹೆಜ್ಜೆ ಹಿಂದೆ ಸರಿದು "ಸಾರೀ" ಎಂದ. ಗೌತಮ ಕತ್ತೆತ್ತಿ ನೋಡಿದ.... ಎಲ್ಲೋ ನೋಡಿದ ಮುಖ. ತತ್‌ಕ್ಷಣಕ್ಕೆ ಯಾರೆಂದು ಗುರುತು ಸಿಗಲಿಲ್ಲ. ಅತ್ತೆಯೊಡನೆ, ಬೈಕ್ ನಿಲ್ಲಿಸಿದ್ದ ಕಡೆಗೆ ಬಂದ. ಆದರೂ ತಾನೆಲ್ಲೋ ಕಂಡಿರುವ ಮುಖ. ಆದರೆ ಪರಿಚಯ ವಿಲ್ಲ. ನೆನಪಾಗುತ್ತಿಲ್ಲ.... ಕೇಳಿಯೇ ಬಿಡ್ತೀನಿ ಎಂದುಕೊಂಡು "ಅತ್ತೆ ಒಂದ್ನಿಮಿಷ ಈಗ್ಬಂದೆ" ಎನ್ನುತ್ತಾ ಹಿಂದೆ ಬಂದ....

ಪ್ರಶಾಂತ ಒಳಗೆ ಕುಳಿತು, ಶಾಸ್ತ್ರಿಗಳ ಹತ್ತಿರ ಏನೋ ಮಾತನ್ನಾಡುತ್ತಿದ್ದ. ಇವನು ಹೊರಗಿನಿಂದಲೇ ಮತ್ತೆ ಮತ್ತೆ ನೋಡಿದ.... ಗುರುತು ಸಿಕ್ಕಂತಾಯಿತು. ಪ್ರಶಾಂತ! ಆದರೂ ಖಚಿತವಿಲ್ಲ. ಪ್ರಶಾಂತ ಇಲ್ಲಿ ಬೆಂಗಳೂರಿನಲ್ಲಿ.... ಆಗ ಅವನಿಗೆ ನೆನಪಿಗೆ ಬಂತು. ಪ್ರಶಾಂತ ಕಳಿಸಿದ್ದ ಚೆಕ್ ಮುಖಾಂತರ ಅವನನ್ನು ಪತ್ತೆ ಮಾಡಲು ತಾನು ಹೋಗಿಯೇ ಇಲ್ಲವೆಂದು. ಈಗ ಹೇಗೂ ಎದುರಿಗೇ ಸಿಕ್ಕಿದಾನೆ. ಅವನೇ ಹೌದೋ ಅಲ್ಲವೋ ಖಂಡಿತ ಮಾಡಿಕೊಳ್ಳಬೇಕೆಂದುಕೊಂಡು, ಒಳ ಬಂದ. ಪ್ರಶಾಂತ ಇತ್ತ ತಿರುಗಿದ. ಅವನಿಗೆ ಗೌತಮನ ಗುರುತು ಸಿಕ್ಕಿರಲಿಲ್ಲ....

"ನಾನು ಯಾರೂಂತ ಗೊತ್ತಾಯ್ತಾ....?"

ಪ್ರಶಾಂತ ಕಕ್ಕಾಬಿಕ್ಕಿಯಾಗಿ ಶಾಸ್ತ್ರಿಗಳ ಕಡೆ ನೋಡಿದ.

"ನಾನು ಕಣೋ ಗೌತಮ.... ಗುರುತು ಸಿಗಲಿಲ್ವಾ?" ಮತ್ತೆ ಕೇಳಿದ.

ಈಗ ಪ್ರಶಾಂತ ಎಚ್ಚೆತ್ತ...." ಇಲ್ಲ ನೀವ್ಯಾರೋ ಗೊತ್ತಾಗ್ಲಿಲ್ಲ.... ಬನ್ನಿ ಹೊರಗೆ ಮಾತನಾಡೋಣ." ಅಂತ ಹೊರಕ್ಕೆ ಕರೆದುಕೊಂಡು ಬಂದ.

"ನಿಜ ಹೇಳು. ನಾನ್ಯಾರು ಅಂತ ಗೊತ್ತಾಗ್ಲಿಲ್ವಾ...! ನಾನು ನಿನ್ನ ಚಿಕ್ಕಮ್ಮನ ಮಗ ಗೌತಮ..." ಪ್ರಶಾಂತ ಯಾವ ಸಂತಸವನ್ನೂ ವ್ಯಕ್ತಪಡಿಸಲಿಲ್ಲ. ಬದಲಿಗೆ

ಹೆದರಿದವನಂತೆ ಕಂಡ.

"ನಾನು ನಿನ್ಹತ್ರ ತುಂಬಾ ಮಾತಾಡ್ಬೇಕು.... ನೀನು ಎಲ್ಲಿದೀಯ?"

"ಇಲ್ಲೇ ಇವರ ಮನೇಲಿದೀನಿ...." ಉದಾಸೀನತೆಯಿಂದ ಹೇಳಿದ.

"ಹೌದಾ! ಇಲ್ಲಿದೀಯ? ಇಲ್ಯಾಕೆ ಇರ್ಬೇಕು? ನಮ್ಮ ಮನೆಗೆ ಬಾ...."

"ಅವರ್‍ಯಾರು ಚಿಕ್ಕಮ್ಮನಾ...?"

"ಅಲ್ಲ. ನನ್ನ ಸೋದರತ್ತೆ..... ನಿನಗೊಂದು ವಿಷ್ಯ ಗೊತ್ತಾ ಪ್ರಶಾಂತ್, ವಿದ್ಯಾಳ ಮದುವೆ ಗೊತ್ತಾಗಿದೆ...."

"ಹೌದಾ! ನಮ್ಮ ವಿದ್ಯಾಳಿಗೆ ಮದುವೆ ಗೊತ್ತಾಗಿದೆಯಾ....! ಹುಡುಗ ಯಾರು? ಏನ್ಮಾಡ್ತಿದಾನೆ....! ಅವಳು ತಿಳಿಸಿಯೇ ಇಲ್ಲ."

"ದಿನೇಶ್ ಅಂತ. ಇಂಜಿನಿಯರ್. ನಮ್ಮ ಈ ಅತ್ತೆಯ ಮಗನೇ.... ಮನೆಯೋರ್ಗೆಲ್ಲಾ ನಿನ್ನದೇ ಚಿಂತೆ. ದೊಡ್ಡಮ್ಮನ್ನಂತೂ ನೋಡುಕ್ಕಾಗುಲ್ಲ ಹಾಗಾಗ್ಬಿಟ್ಟಿದ್ದಾರೆ."

ಪ್ರಶಾಂತ ತಲೆ ತಗ್ಗಿಸಿದ. ಅವನ ಕಣ್ಣಂಚಿನಿಂದ ನೀರ ಹನಿ ತೊಟ್ಟಿಕ್ಕಿತು.

"ಮನೆಗೆ ಬಾ ಪ್ರಶಾಂತ್. ನಿನ್ನ ಹತ್ರ ತುಂಬಾ ಮಾತನಾಡ್ಬೇಕು."

"ಇಲ್ಲ ಗೌತಮ್.... ನಾನೆಲ್ಲಿಗೂ ಬರುಲ್ಲ. ನಿಮ್ಮತ್ತೆ ಕಾಯ್ತಾ ಇದಾರೆ. ನೀನು ಹೋಗು."

"ನೀನು ಇಲ್ಲಿದೀಯಾಂತ ದೊಡ್ಡಮ್ಮಂಗೆ ತಿಳಿಸ್ತೀನಿ...." ಪ್ರಶಾಂತ ಸೊಟ್ಟಗೆ ನಕ್ಕ.

"ನಾನು ಇಲ್ಲಿ ಸುಖವಾಗಿದೀನೀಂತ ಅಮ್ಮಂಗೆ ಹೇಳ್ಬಿಡು... ಅಷ್ಟು ಸಾಕು...."

"ಹೀಗ್ಯಾಕೆ ನೋಯಿಸ್ತೀಯೋ ದೊಡ್ಡಮ್ಮನ್ನ....? ಮಗಳಿಗೆ ಮದುವೆ ಗೊತ್ತಾಗಿದೆ ಅನ್ನೋ ಸಂತೋಷಕ್ಕಿಂತ, ನೀನು ಮನೆ ಬಿಟ್ಟು ಹೋದ ದುಃಖವೇ ಹೆಚ್ಚು ಅವರಿಗೆ."

"ಅಮ್ಮಂಗೆ ಕೊರಗಿ ಕೊರಗಿ ಅದೇ ಅಭ್ಯಾಸವಾಗಿ ಹೋಗಿದೆ ಬಿಡು. ನೀನು ಹೋಗು. ಅವರು ಕಾಯ್ತಾ ಇದಾರೆ."

"ನಾನು ಅತ್ತೇನ ಮನೆಗೆ ಬಿಟ್ಟು ಮತ್ತೆ ಬರ್ತೀನಿ.... ತುಂಬಾ ಮಾತಾಡ್ಬೇಕು...."

"ಸರಿ ಹಾಗೇ ಮಾಡು.... ಆದರೆ ಚಿಕ್ಕಮ್ಮಂಗೆ ಹೇಳ್ಬೇಡ.... ಇಲ್ಲೂ ಅಷ್ಟೇ ಶಾಸ್ತ್ರಿಗಳಿಗೆ ನಮ್ಮ ಸಂಬಂಧ ಹೇಳಬೇಡ. ಮತ್ತೆ ಬಾ ಮಾತನಾಡೋಣ...." ಗೌತಮ ಪ್ರಶಾಂತನ ಭುಜವನ್ನು ಒತ್ತಿ, "ಬರ್ತೀನಿ" ಎಂದು ಹೇಳಿ ಬೈಕ್‌ನ್ನು ನಿಲ್ಲಿಸಿದ್ದ ಕಡೆಗೆ ನಡೆದ.

"ಯಾರೋ ಅದು? ನಿನ್ನ ಫ್ರೆಂಡಾ...?"

"ಹೂಂ ಅತ್ತೆ. ಬಹಳ ವರ್ಷಗಳ ಮೇಲೆ ಸಿಕ್ಕಿದ."

"ಮನೆಗೇ ಕರೀಬಹುದಾಗಿತ್ತು..."

"ಕರೆದೆ. ಬಿಡುವಿಲ್ಲವಂತೆ..." ಬೈಕ್ ಸ್ಟಾರ್ಟ್ ಮಾಡಿದ. ಸುಶೀಲನ್ನ ಅವರ ಮನೆಗೆ ಬಿಟ್ಟು, ಅದೇ ವೇಗದಲ್ಲಿ ಹಿಂತಿರುಗಿದ. ಪ್ರಶಾಂತ ಇವನಿಗಾಗಿಯೇ ಕಾಯುತ್ತಾ ಕೂತಿದ್ದ.

"ನೀನೆಲ್ಲಿ ಮತ್ತೆ ಹೊರಟು ಹೋಗ್ತೀಯೋ ಅಂತ ಭಯವಾಗಿತ್ತು...."

"ಈಗ ಹೋಗಿದ್ರೇನು? ನೀನು ಮತ್ತೆ ಹುಡುಕುತ್ತಿದ್ದೆ..... ನಾನು ಸಿಕ್ತಿದ್ದೆ... ಅಷ್ಟೇ ತಾನೇ....? ಇವತ್ತು ನನಗೆ ಬಿಡುವು.... ಬಾ ಒಳಗೆ...."

"ಇಲ್ಲಿ ಬೇಡ ಕಣ್ಲೋ.... ಅಲ್ಲಿ ಹೊರಗೆ ಕಟ್ಟೆ ಮೇಲೆ ಕೂತು ಮಾತನಾಡೋಣ ..." ಇಬ್ಬರೂ ಅಲ್ಲಿದ್ದ ಕಟ್ಟೆಯ ಮೇಲೆ ಕೂತರು.

"ವಿದ್ಯಾ ಸಂತೋಷವಾಗಿದಾಳಾ....? ಈ ಮದ್ವೇನ ಅಪ್ಪನೇ ಗೊತ್ತು ಮಾಡಿದ್ರಾ ಹೇಗೆ?"

"ಅದೆಲ್ಲಾ ಒಂದು ದೊಡ್ಡ ಕಥೆ. ಎಲ್ಲಿಂದ ಶುರು ಮಾಡ್ಬೇಕೂಂತ ತಿಳೀತಿಲ್ಲ. ಮುಂದಿನ ತಿಂಗಳು ಇಪ್ಪತ್ತೆಂಟನೆಯ ತಾರೀಕಿಗೆ ಮದುವೆ... ಬರ್ತೀಯಾ ತಾನೇ...?"

"ನೋಡೋಣ. ನಾನು ಈಗ್ಲೇ ಏನನ್ನೂ ಹೇಳುಲ್ಲ."

"ಶಾಸ್ತ್ರಿಗಳಿಗೆ ಇನ್ನೂ ಗೊತ್ತಾಗಿಲ್ವಾ... ನಿನ್ನ ತಂದೆ ಯಾರೂಂತ....."

"ಇಲ್ಲಾಂತ ಕಾಣಿಸುತ್ತೆ...."

"ಯಾಕೆ ಹೀಗಾಯ್ತು! ನಿಮ್ಮಪ್ಪ ಹೀಗೆ ಮಾಡ್ಬಾರ್ದಾಗಿತ್ತು...."

"ಅವರ ವಿಷಯ ನನಗೆ ಬೇಡ. ಬೇರೆ ಏನಾದ್ರೂ ಹೇಳು...."

"ನಾಳೆ ನಮ್ಮನೆಗೆ ಬಾ.... ವಿದ್ಯಾಳ ಗಂಡನಾಗೋನ್ನ ಪರಿಚಯ ಮಾಡಿಸ್ತೀನಿ."

"ಅವ್ರಿಗೆಲ್ಲ ಈ ವಿಷಯ ಗೊತ್ತಾ?"

"ಹೂಂ. ಗೊತ್ತು. ಆದರೆ ಯಾರೂ ಕೆದಕಿ ಕೇಳುಲ್ಲ. ನಿನ್ನನ್ನ ನೋಡಿ ಎಲ್ರಿಗೂ ಸಂತೋಷವಾಗೋದಂತೂ ನಿಜ.... ಈಗ ಏನು ಮಾಡ್ತಿದೀಯ?"

ಪ್ರಶಾಂತ ತನ್ನ ವಿಷಯವನ್ನೆಲ್ಲಾ ಹೇಳಿದ.... ತನ್ನ ತಂದೆಯ ಮನೆಯಿಂದ ಬಂದ ಪತ್ರದ ವಿಷಯವನ್ನು ತಿಳಿಸಿದ... "ಆದಷ್ಟು ಬೇಗ, ಶಾಸ್ತ್ರಿಗಳ ಮಗಳನ್ನು ಮದುವೆಯಾಗಿ ಬಿಡೋಣ ಅಂತ್ಕೊಂಡಿದೀನಿ... ಆಗ ಅಪ್ಪ ಏನ್ಮಾಡ್ತಾರೆ ನೋಡೋಣ ....?"

"ನೀನು ಹಾಗೆ ನಿರ್ಧರಿಸಿದ್ದರೆ, ಅದು ಸರೀನೇ.... ಆದರೆ ಶಾಸ್ತ್ರಿಗಳಿಗೆ ಈಗ ತಿಳಿಸ್ದೇ ಆಮೇಲೆ ಗೊತ್ತಾದ್ರೆ!?"

"ಆಮೇಲೆ ಯಾರೂ ಏನೂ ಮಾಡುಕ್ಕಾಗುಲ್ಲ. ಆದರೆ ಒಂದೇ ಒಂದು ಬೇಜಾರು, ಹಿರಿಯ ಮಗನಾಗಿ ಅಮ್ಮನಿಗೆ ಆಸರೆಯಾಗಿರಬೇಕಾಗಿತ್ತು ನಾನು. ಆದರ ಆ ಮನೇನೇ ಬಿಟ್ಟು ಬರಬೇಕಾಯ್ತು.... ಸಂತೋಷ ಹೇಗಿದಾನೆ?"

"ಪರೀಕ್ಷೆಗೆ ಕಷ್ಟ ಪಟ್ಟು ಓದುತ್ತಿದ್ದಾನೆ... ಮೆಡಿಕಲ್ ಓದ್ಬೇಕೂಂತ ಅವನ ಆಸೆ...."

"ಅವನ ಆಸೆನಾದ್ರೂ ಈಡೇರಲಿ.... ನನ್ನ ಹಾಗೆ ಅವನನ್ನು ಅಪ್ಪ ಮನೆಯಿಂದಾಚೆ ಹಾಕದಿದ್ದರೆ ಸಾಕು."

"ಈಗ ಅವರಿಗೂ ಪಶ್ಚಾತ್ತಾಪವಾಗಿರಬೇಕು."

"ಏನೂ ಇಲ್ಲ. ಆ ಪ್ರತಿಷ್ಠೆ, ಆ ಅಹಂ... ಇವತ್ತಿಗೂ ಇದೆ. ಶಾಸ್ತ್ರಿಗಳ ಮಗಳನ್ನು ನಾನು ಮದ್ವೆಯಾದರೆ ಅವರ ಗೌರವಕ್ಕೆ ಕಡಿಮೆ. ಶಾಸ್ತ್ರಿಗಳ ಮನೆಯಳಿಯನಾಗಿರುವುದು ಅವರಿಗೆ ಒಪ್ಪದ ವಿಷಯ. ಅವರ ಎಸ್ಟೇಟ್‌ನಲ್ಲಿ ಸೂಪರ್ ವೈಸರ್ ಆಗಿರುವುದು ಅವಮಾನಕರ..... ಅವರ ಬೈಗುಳ ತಿಂದು ಅವರ ಮನೆಯಲ್ಲೇ ಬಿದ್ದಿದ್ದರೆ ಒಂದು ತುತ್ತು ಅನ್ನ ಖಂಡಿತಾ ಸಿಗುತ್ತಿತ್ತು..... ಆದರೆ ನನ್ನ ಸ್ವಾಭಿಮಾನ ಏನಾಗುತ್ತಿತ್ತು? ನೀನೇ ಹೇಳು.... ನಿಂಗ್ಹೇಗೆ ಗೊತ್ತಾಗುತ್ತೆ! ನಿಮ್ಮ ತಂದೆ, ಹೀಗೆ ವರ್ತಿಸಿದವರೇ ಅಲ್ಲಾಂತ ಕಾಣುತ್ತೆ...."

"ಹೌದು ನಿಮ್ಮಪ್ಪನ ಗುಣಕ್ಕೂ, ನಮ್ಮಪ್ಪನ ಗುಣಕ್ಕೂ ತುಂಬಾ ವ್ಯತ್ಯಾಸವಿದೆ. ನಂಗೇನ್ಹೇಳ್ಬೇಕೂಂತ ಗೊತ್ತಾಗ್ತಿಲ್ಲ."

"ಪರ್ವಾಗಿಲ್ಲ. ಏನೂ ಹೇಳ್ಬೇಡ. ನಾನು ನಾಳೆಯ ದಿನ ನಮ್ಮ ಎಸ್ಟೇಟ್‌ಗೆ ಹೋಗ್ತಾ ಇದೀನಿ. ಇದು ಅಲ್ಲಿಯ ಅಡ್ರೆಸ್..... ಏನಾದ್ರೂ ವಿಷಯ ಇದ್ದರೆ, ಅಲ್ಲಿಗೆ ಬರಿ. ಅಥವಾ ಇಲ್ಲಿಗೆ ಬರೆದರೂ ಪರವಾಗಿಲ್ಲ."

"ಒಂದ್ಸಾರಿ ಮನೆಗೆ ಬಂದ್ಹೋಗು ಪ್ರಶಾಂತ್....."

"ಮುಂದಿನ್ಸಲ ಬಂದಾಗ ಬರ್ತೀನಿ. ನನ್ನನ್ನ ಭೇಟಿಯಾದ ವಿಚಾರಾನ ಈಗ್ಲೇ ಯಾರ್ಗೂ ಹೇಳ್ಬೇಡ...."

"ಸರಿ ಹೇಳುಲ್ಲ. ನಾನಿನ್ನು ಬರ್ಲಾ... ಹೊತ್ತಾಯ್ತು..."

"ಹುಂ ಹೋಗ್ಬಾ...." ಪ್ರಶಾಂತ ಕೈಯಾಡಿಸಿದ.

ಪತ್ರಗಳನ್ನು ಓದ್ದಾಗ್ನಿಂದ ಅವನ ಚಿಂತೆ ಹೆಚ್ಚಾಗಿತ್ತು. ಈಗ ಗೌತಮನ್ನ ಕಂಡ ಮೇಲೆ ಮತ್ತೂ ಹೆಚ್ಚಾಗಿತ್ತು. ತನ್ಗೆ ಯಾರೂ ಇಲ್ಲ ಅಂತ ಶಾಸ್ತ್ರಿಗಳೊಡನೆ ಹೇಳಿದ್ದ. ಅವರ ಎಸ್ಟೇಟ್‌ನಲ್ಲಿ ಕೆಲಸಕ್ಕೆ ಸೇರಿ ಕೆಲವು ತಿಂಗಳ ಅನಂತರ, ಅವರು ತಮ್ಮ ಮಗಳ ಬಗ್ಗೆ ಹೇಳಿದ್ದರು.

"ನನ್ನ ಮಗಳದ್ದು ಮೂಲಾ ನಕ್ಷತ್ರ. ಮಾವ ಇಲ್ಲದ ಮನೆಗೆ ಸೊಸೆಯಾಗಿರಬೇಕು... ನಿನಗೆ ಹೇಗೂ ಯಾರೂ ಇಲ್ಲವಲ್ಲ... ನಾನು ಹೀಗೆ ಕೇಳ್ತೀನಿ ಅಂತ ತಿಳ್ಕೋಬೇಡ.... ನಿನಗೆ ಒಪ್ಗೆಯಾದ್ರೆ.... ನಿನಗೆ ಮದುವೆ ಮಾಡಿಕೊಡ್ತೀನಿ...." ಪ್ರಶಾಂತ ಬೆಚ್ಚಿದ.

ಹೀಗೊಂದು ಕಲ್ಪನೆ ಅವರ ಮನಸ್ಸಿನಲ್ಲಿರಬಹುದು ಎಂದು ಇವನು ಊಹಿಸಿ

ರಲಿಲ್ಲ.

"ನಿನಗೆ ಒಪ್ಗೆ ಇಲ್ಲದಿದ್ರೆ ಬಲವಂತವಿಲ್ಲ. ಹಾಗಂತ, ನನಗೆ ಯಾವ ಅಸಮಾಧಾನವೂ ಇಲ್ಲ. ಅವಳು ಹೆಚ್ಚಿಗೆ ಓದಿಲ್ಲ. ಕೆಲಸದಲ್ಲೇನೋ ನಿಪುಣೆ.... ನೀನೂ ಒಬ್ಬಂಟಿಗ, ನಿನ್ನ ಊಟ, ತಿಂಡಿಗೂ ಅನುಕೂಲವಾಗುತ್ತದೆ... ಅಂತ ಈ ಪ್ರಸ್ತಾಪ ಮಾಡಿದೆ ಅಷ್ಟೇ....."

"ನನಗೆ ಸ್ವಲ್ಪ ಸಮಯ ಬೇಕು. ತತ್‌ಕ್ಷಣಕ್ಕೆ ಏನು ಹೇಳಲಿ?" ತಪ್ಪಿಸಿ ಕೊಳ್ಳಲು ನೋಡಿದ. ಅನಂತರ ಮತ್ತೆ ಕೇಳಿರಲಿಲ್ಲ. ಆದರೆ ಆ ಆಸೆಯೂ ಮರೆ ಯಾಗಿರಲಿಲ್ಲ. ಅವನೇನಾದ್ರೂ ಕೆಲ್ಸ ಬಿಟ್ಟು ಹೋಗಿದ್ದಿದ್ರೆ, ಅವನಿಗೆ ಒಪ್ಪಿಗೆಯಿಲ್ಲ ಅಂತ ತಿಳಿಯ ಬಹುದಾಗಿತ್ತು.... ಈಗ ಇಲ್ಲೇ ಇದಾನೆ. ಒಂದಲ್ಲ ಒಂದು ದಿನ ತನ್ನ ಒಪ್ಪಿಗೆಯನ್ನು ಹೇಳಬಹುದು ಎಂದುಕೊಂಡು, ಆ ದಿನಕ್ಕಾಗಿ ಕಾಯುತ್ತಿದ್ದರು.

* * *

ಅಧ್ಯಾಯ – ಹತ್ತೊಂಬತ್ತು

ಕಿಶೋರನಿಂದ ಧಮಕಿ

ಪ್ರಶಾಂತ ತನ್ನ ಮದುವೆಯ ಬಗ್ಗೆ ಯಾವ ಕನಸನ್ನೂ ಕಟ್ಟಿರಲಿಲ್ಲ. ಯಾವ ಆಸೆ, ಆಕಾಂಕ್ಷೆಗಳನ್ನೂ ಹೊಂದಿರಲಿಲ್ಲ. ಈಗ ವಿದ್ಯಾಳಿಗೆ ಮದುವೆ ಗೊತ್ತಾಗಿದೆ ಅಂತ ತಿಳಿದಾಗ, ಇದ್ದಕ್ಕಿದ್ದಂತೆ ತಾನೂ ಏಕೆ ಮದುವೆಯಾಗಬಾರದು, ಅಂತೆನ್ನಿಸಿತು. ತನ್ನ ಅಪ್ಪನಿಗೆ ತಾನು ಬೇಡವಾದವನು, ತನ್ನ ಬಗ್ಗೆ ಅವರಿಗೆ ಯಾವ ಚಿಂತೆಯೂ ಇಲ್ಲ. ತನ್ನನ್ನು ಮನೆಯಿಂದಾಚೆ ಓಡಿಸಿದವರು, ತನ್ನ ಮದುವೆಯ ಬಗ್ಗೆ ಎಂದೂ ಚಿಂತಿಸುವುದಿಲ್ಲ. ಈಗ ನೋಡಿದರೆ, ನನ್ನ ಜೀವನವನ್ನು ಮತ್ತೂ ಹದಗೆಡಿಸು ವಂತಿದೆ. ಹಾಗೇನಾದರೂ ಆಗುವ ಮೊದಲು, ತಾನು ತನ್ನ ನೆಲೆಯನ್ನು ಗಟ್ಟಿ ಮಾಡಿಕೊಳ್ಳಬೇಕೆಂದುಕೊಂಡು ಒಂದು ನಿರ್ಧಾರಕ್ಕೆ ಬಂದ. ಆದರೂ ತನ್ನ ಮದುವೆಯ ಪ್ರಸ್ತಾವವನ್ನು ತಾನೇ ಹೇಗೆ ಪ್ರಾರಂಭಿಸುವುದು ಎಂದು ಹಿಂಜರಿದ.

"ನಿನ್ನ ಸ್ನೇಹಿತ ಯಾರೋ ಬಂದಿದ್ನಲ್ಲ. ಎಲ್ಲಿದಾನೆ! ಏನು ಮಾಡುತ್ತಿದಾನೆ? ತಂದೆ– ತಾಯಿ ಇದಾರಾ?" ಇತ್ಯಾದಿಗಳನ್ನು ಶಾಸ್ತ್ರಿಗಳೇ ವಿಚಾರಿಸಿದಾಗ, ಪ್ರಶಾಂತನಿಗೆ ಅವರ ಮಾತಿನ ಅರ್ಥ ಸಿಕ್ಕಿತ್ತು. ಗೌತಮನ ಬಗ್ಗೆ ವಿಚಾರಿಸುತ್ತಿದ್ದಾರೆ ಎಂದು ಎಚ್ಚೆತ್ತು ಕೂಂಡ.

"ಅವನಿನ್ನೂ ಓದ್ತಾ ಇದಾನೆ. ನಂಗಿಂತ ಚಿಕ್ಕವನು...."

"ಮತ್ತೆ ಅವನ ಪರಿಚಯ.... ನಿನಗೆ ಎಲ್ಲಾಯ್ತು!?" ಆ ಪ್ರಶ್ನೆಗೆ ಏನು ಉತ್ತರ ಹೇಳಬೇಕೆಂದು ತೋಚದೆ ಸುಮ್ಮನಾಗಿ ಬಿಟ್ಟ. ಶಾಸ್ತ್ರಿಗಳು ಅವನನ್ನೇ ವಿಚಿತ್ರವಾಗಿ ನೋಡಿದರು.

"ಯಾಕೋ ಇವತ್ತು ನಿನ್ನ ಮನಸ್ಸು ಎಲ್ಲೋ ಇದೆ. ಏನಾದ್ರೂ ತೊಂದ್ರೇನಾ? ಹಣ ಏನಾದ್ರೂ ಬೇಕಿತ್ತಾ....?"

"ಹಣ ಏನೂ ಬೇಡ.... ಒಂದ್ವಿಷಯ ಹೇಳ್ಬೇಕಾಗಿತ್ತು."

"ಹೇಳಪ್ಪಾ..... ಸಂಕೋಚ, ಅನುಮಾನ ಯಾಕೆ?"

"ಒಂದೊಮ್ಮೆ.... ನೀವು ನನ್ನನ್ನ ಮದ್ವೆ ಬಗ್ಗೆ ಕೇಳಿದ್ರಿ...."

"ಹೂಂ, ಕೇಳಿದ್ದೆ.... ನಿನಗೆ ಇಷ್ಟವಿಲ್ಲದಿದ್ರೆ ಬಲವಂತವಿಲ್ಲ... ನಾನು ಕೇಳಿದ್ದೆ ಅನ್ನೋದನ್ನೇ ಮರೆತ್ಬಿಡು... ನಂಗೇನೂ ಬೇಸರವಿಲ್ಲ."

"ಹಾಗಲ್ಲ ಸಾರ್..... ನಾನು ಒಂದು ನಿರ್ಧಾರಕ್ಕೆ ಬಂದಿದೀನಿ.... ನನಗೆ

ಒಪ್ಪಿಗೆ ಇದೆ." ಸಂಕೋಚದಿಂದ ನುಡಿದ. ಮುಖ ಕೆಂಪಾಗಿತ್ತು......

"ಅಂ.... ಏನಂದೆ? ಯಾವ್ದಾದ್ರೂ ಒತ್ತಡಕ್ಕೆ ಬಂದು... ಒಪ್ಗೆ ಕೊಡ್ತಿಲ್ಲ ತಾನೇ....?"

"ಇಲ್ಲ ಯಾವ ಒತ್ತಡವೂ ಇಲ್ಲ. ನನ್ನ ಸ್ವಂತ ಇಚ್ಛೆಯಿಂದ ಒಪ್ಗೆ ಕೊಡ್ತಿದೀನಿ."

"ಸಂತೋಷ ಕಣಪ್ಪಾ... ಆದ್ರೆ ನನಗೇ ಏಕೋ ಮುಜುಗರವಾಗ್ತಿದೆ. ನೀನೇನಾದ್ರೂ ನನ್ನ ಮಗಳ ಹತ್ರ ಮಾತಾಡ್ಬೇಕಾ?"

"ಏನೂ ಬೇಡ..... ಆದರೆ, ಆದಷ್ಟು ಬೇಗ ಈ ಮದುವೆ ನಡೆದರೆ ಒಳ್ಳೆಯದು. ನನಗೂ ಮನೆಯ ಕೆಲಸ ಕಡಿಮೆ ಆಗುತ್ತೆ....ನನಗೆ ಅಡುಗೆ ಬರುಲ್ಲ.... ಅದಕ್ಕೇ...."

"ಸರಿಯಪ್ಪಾ, ಒಪ್ಪಿದೆ. ನಿನಗೆ ಅಡುಗೆ ಮಾಡಿ ಹಾಕಲು ಒಬ್ಬಳು ಹೆಂಡತಿ ಬೇಕು. ಇದು ನಾನೇ ಹೇಳಿದ್ದ ಮಾತು.... ಆದರೂ ಮತ್ತೊಮ್ಮೆ ಯೋಚಿಸು.... ಹೆಂಡ್ತಿ ಅಂತಂದ್ರೆ ಬರೀ ಅಡುಗೆ ಮನೆ ಕೆಲಸಕ್ಕೆ ಮಾತ್ರ ಸೀಮಿತವಲ್ಲ. ಅವಳು ನಿನ್ನ ಅರ್ಧಾಂಗಿನಿ ಆಗ್ತಾಳೆ. ಅವಳ ಜವಾಬ್ದಾರಿ ನಿನ್ನ ಮೇಲೆ ಬೀಳುತ್ತೆ..... ಇದಕ್ಕೂ ಸಿದ್ಧನಾಗಿರಬೇಕು....."

"ಹುಂ, ನಾನು ಸಿದ್ಧ. ಹೇಗೂ ನಿಮ್ಮ ಸಹಕಾರ ಇದ್ದೇ ಇರುತ್ತೆ ಎಂಬ ನಂಬಿಕೆ ನನಗಿದೆ."

"ನೀನು ತುಂಬಾ ಜಾಣನಪ್ಪಾ.... ನನ್ನ ಮಗಳು ನಿನಗೆ ತಕ್ಕವಳಲ್ಲದಿರಬಹುದು. ಮುಂದೆ ನಿಮ್ಮ ನಿಮ್ಮಲ್ಲಿ ಭಿನ್ನಾಭಿಪ್ರಾಯ ಬರಬಾರದು."

"ನನ್ನ ಮೇಲೆ ನಿಮಗೆ ನಂಬಿಕೆ ಇದೆ ಅಂತಂದ್ಕೊಂಡಿದೀನಿ. ಆದಷ್ಟು ಬೇಗ ಮದುವೆ ಮಾಡಿಕೊಡಿ.... ಇಲ್ಲದಿದ್ದರೆ, ನಾನು ಯಾವುದಾದರೂ ಲಾಡ್ಜ್‌ನಲ್ಲಿರ ಬೇಕಾಗುತ್ತೆ.... ನನ್ನ ಊಟ, ತಿಂಡಿಗೆ ನೀವು ಎಕ್ಸ್‌ಟ್ರಾ ಸಂಬಳ ಕೊಡಬೇಕಾಗುತ್ತೆ...."

"ಚೆನ್ನಾಗಿದೆ ನಿನ್ನ ಲಾಜಿಕ್. ಇದೇನು ಬೆದರಿಕೇನೋ? ನಿವೇದನೇನೋ....?"

"ಸಾರಿ ಸಾರ್. ನನಗೆ ಚೆನ್ನಾಗಿ ಮಾತನಾಡೋಕೆ ಬರುಲ್ಲ. ಅದಕ್ಕೇ ಹೇಳೋದು, ಮದುವೆ ಮಾತನ್ನಾಡುಕ್ಕೆ ಹಿರಿಯರು ಇರಬೇಕು ಅಂತ." ಅವನ ಧ್ವನಿಯಲ್ಲಿ ವ್ಯಥೆಯಿತ್ತು.

"ನೀನ್ಯಾಕೆ ನೊಂದ್ಕೋತೀಯ. ಹಿರಿಯರು ಇಲ್ಲದಿದ್ದರೇನಾಯ್ತು! ನಿನ್ನ ಮನಸ್ನಲ್ಲಿ ಈ ವಿಚಾರವನ್ನು ಹೊಗಿಸಿದವನು ನಾನೇ.... ನಿನಗೆ ಹೇಗೆ ಸರಿ ಅನ್ನಿಸುತ್ತೋ ಹಾಗೇ ಆಗಲಿ... ನಾನು ಈಗ್ಲೇ ಮದುವೆ ಮುಹೂರ್ತವನ್ನು ಗೊತ್ತು ಮಾಡ್ತೀನಿ.." ಎನ್ನುತ್ತಾ ಪಂಚಾಂಗವನ್ನು ತೆಗೆದು ನೋಡಲು ಉಪಕ್ರಮಿಸಿದರು. ಏನೋ ಒಂದು ಗುಣಾಕಾರ ಹಾಕಿ, ಕೈಬೆರಳುಗಳಿಂದ ಎಣಿಸಿ, ಒಂದು ದಿನವನ್ನು ಗೊತ್ತು ಮಾಡಿ ನುಡಿದರು.

"ಇವತ್ತಿಗೆ ಎಂಟು ದಿನಕ್ಕೆ ಸರಿಯಾಗಿ ಒಂದು ಲಗ್ನವಿದೆ.... ಆದರೆ ತಯಾರಿಗೆ

ದಿನಗಳೇ ಸಾಲವು. ಇದನ್ನು ಬಿಟ್ಟರೆ ಇನ್ನು ಇಪ್ಪತ್ತು ದಿನಕ್ಕೆ ಒಂದು ಲಗ್ನವಿದೆ. ಆದರೆ ಅವತ್ತು ನನ್ನ ಸ್ನೇಹಿತನೊಬ್ಬನ ಮಗಳಿಗೆ ಮದುವೆ... ನಾನು ಹೋಗಬೇಕಾಗುತ್ತದೋ ಏನೋ...."

"ಮೊದಲನೆಯ ಲಗ್ನವೇ ಇರಲಿ..... ಯಾವ ತಯಾರಿಯೂ ಬೇಡ. ಆದಷ್ಟು ಸರಳವಾಗಿರಲಿ. ಯಾವ ಆಡಂಬರವೂ ಬೇಡ..."

"ಯಾಕಪ್ಪ ಹೀಗಂತೀಯ....? ಮದ್ವೆಯಾಗೋದು ಒಂದೇ ಸಲ.... ಶಾಸ್ತ್ರ ಸಂಪ್ರದಾಯ ಯಾವುದನ್ನು ಬಿಡೋಕಾಗುತ್ತೆ?"

"ನನ್ಕಡೆಯಿಂದ ಬರೋರು ಯಾರಿಲ್ಲ. ಅದಕ್ಕೇ ಹಾಗಂದೆ...."

"ಸ್ನೇಹಿತರು..... ಯಾರೂ ಬರುಲ್ವಾ?"

"ನನ್ಗೆ ಯಾರನ್ನೂ ಕರೆಯುವ ಮನಸ್ಸಿಲ್ಲ." ಶಾಸ್ತ್ರಿಯೂ ಒಂದು ನಿಮಿಷ ಸುಮ್ಮನಾದ. ಹಿರಿಮಗಳ ಮದುವೆ, ತನ್ನ ಕಡೆ ನೆಂಟರಿಷ್ಟರನ್ನೆಲ್ಲ ಕರೆದು, ತನ್ನ ಕೈಲಾದಷ್ಟು ಅದ್ದೂರಿಯಿಂದ ಮದುವೆ ಮಾಡಬೇಕೆಂದುಕೊಂಡಿದ್ದ. ಆದರೆ ಈಗ....?

ಒಳಗ್ನಿಂದ ಪತ್ನಿ ಕೂಗಿದ್ದಳು. "ಊಟಕ್ಕೆ ಬರ್ತೀರಾ?" ಶಾಸ್ತ್ರಿ ಎದ್ದ. ಪ್ರಶಾಂತನೂ ಎದ್ದ. ಎಲ್ಲರಿಗೂ ಸಾಲಾಗಿ ತಟ್ಟೆಗಳನ್ನು ಹಾಕಿದ್ದರು.

ಊಟದ ಅನಂತರ ಶಾಸ್ತ್ರಿ ಪತ್ನಿ ಸಾವಿತ್ರಿಯೊಡನೆ ಮಾತನಾಡಿದ. ಅವಳು ತನ್ನ ಬುದ್ಧಿವಂತಿಕೆಯನ್ನು ಹೊರಗೆಡವಿದಳು –

"ನಮಗೆ ಇನ್ನೂ ಇಬ್ಬರು ಹೆಣ್ಣುಮಕ್ಕಳಿದ್ದಾರೆ. ಅವರುಗಳ ಮದುವೆಗೆ ನೆಂಟರಿಷ್ಟರನ್ನು ಕರೆದರಾಯ್ತು. ಆ ಹುಡ್ಗ ಹೇಳೋ ಹಾಗೆ, ಅವನ್ಕಡೆಯಲ್ಲಿ ಯಾರೂ ಇಲ್ಲ ಅಂತ ತಿಳಿದ್ರೆ ಎಲ್ಲಾ ತಲಾತಟ್ಟೆ ಮಾತಾಡ್ತಾರೆ. ಅದಕ್ಕೆ ಅವಕಾಶವೇ ಇರುಲ್ಲ.... ನಾವು ನಾವೇ ಸಾಕು. ದೇವಸ್ಥಾನದಲ್ಲಿ ಮದುವೆ ಮಾಡಿಬಿಡೋಣ. ಖರ್ಚು ಉಳಿಯುತ್ತೆ."

"ಇದು ತಪ್ಪು... ನನ್ನ ಮಗಳು ಮುಂದೆ ಹಂಗಿಸ್ದೆ ಇರ್ತಾಳಾ?"

"ಅವಳ್ಗೇನು ಗೊತ್ತಾಗುತ್ತೆ? ಅವಳೇನು ಅತ್ತೆ ಮನೆಗೆ ಹೋಗುಲ್ಲವಲ್ಲ. ಯಾವ ಆಕ್ಷೇಪಣೆಯೂ ಇರುಲ್ಲ. ಅದು ಕೊಡಲಿಲ್ಲ, ಹಾಗ್ಮಾಡಲಿಲ್ಲ ಅಂತ ಹಳಿಯೋ ಅತ್ತೆ, ಮಾವನೇ ಇಲ್ಲದಿದ್ದ ಮೇಲೆ ನಾವೂ ಜಾಣರಾಗಬೇಕು."

ಶಾಸ್ತ್ರಿಗೆ ಅದು ಸಮ್ಮತ ಎನ್ನಿಸಲಿಲ್ಲ. ಆದರೆ ಹೆಂಡತಿಯ ಮಾತನ್ನು ತೆಗೆದು ಹಾಕುವಂತೆಯೂ ಇಲ್ಲ. ಸಂದಿಗ್ಧಕ್ಕೆ ಸಿಕ್ಕಿ ಬಿದ್ದ, ತಲೆಯಾಡಿಸಿದ.

ಪ್ರಶಾಂತನ ಇಚ್ಛೆಯಂತೆಯೇ ಲಗ್ನ ನಿಶ್ಚಯವಾಯಿತು. ಶಾಸ್ತ್ರಿ ತರಾತುರಿಯಲ್ಲಿ ಮುಖ್ಯವಾದ ಕೆಲವು ಸಿದ್ಧತೆಗಳನ್ನು ಮಾಡಿದ. ಯಾರನ್ನೂ ಆಹ್ವಾನಿಸುವುದು ಬೇಡವಾದ ಮೇಲೆ, ಆಮಂತ್ರಣ ಪತ್ರಿಕೆಯ ಅಗತ್ಯವಿರಲಿಲ್ಲ. ಸಮೀಪದ ದೇವ ಸ್ಥಾನದಲ್ಲಿ ಮದುವೆಯ ಶಾಸ್ತ್ರಗಳನ್ನು ಮುಗಿಸಿಕೊಂಡು ಮನೆಗೆ ಬಂದರು.

ಸಾವಿತ್ರಿಯೇ ತನ್ನ ಹೆಣ್ಣು ಮಕ್ಕಳನ್ನು ಸೇರಿಸಿಕೊಂಡು, ಸಿಹಿ ಅಡುಗೆಯನ್ನು ಮಾಡಿದ್ದಳು. ಅಂತೂ ಶಾಸ್ತ್ರಿ ದಂಪತಿ ಪ್ರಶಾಂತನನ್ನು ಗೃಹಸ್ಥನನ್ನಾಗಿ ಮಾಡಿದರು. ಮಾರನೆಯ ದಿನ ಸಂಸಾರ ಸಮೇತರಾಗಿ ತಮ್ಮ ಎಸ್ಟೇಟ್‌ಗೆ ಹೋಗಿ, ಮಗಳ ಸಂಸಾರವನ್ನು ಹೂಡಿಸಿದರು. ಅಂದುಕೊಳ್ಳದೇ ಇದ್ದಷ್ಟು ಸುಲಭದಲ್ಲಿ ಮಗಳ ಮದುವೆ ಮಾಡಿ ಗೆದ್ದಿದ್ದರು.

ಪ್ರಶಾಂತ ನಿರ್ಲಿಪ್ತನಂತೆ ಮೇಲ್ನೋಟಕ್ಕೆ ಕಂಡುಬಂದರೂ, ಅವನ ಮನದೊಳಗೇನಿದೆ ಅನ್ನುವುದು ಅವನಿಗೆ ಮಾತ್ರ ತಿಳಿದಿತ್ತು.

ತಾನು ಯಾವುದೋ ಒಂದು ಸೇಡಿಗೆ ಕಟ್ಟು ಬಿದ್ದು ಸುಗುಣಾಳ ಕೈ ಹಿಡಿದಾಗಿದೆ. ಇವಳು ನನ್ನ ಪತ್ನಿ. ಇವಳೊಡನೆ ಸಹಬಾಳ್ವೆ ನನ್ನ ಧರ್ಮ. ಅಪ್ಪ, ಅಮ್ಮನ ಮೇಲೆ ನಡೆಸಿದಂತೆ, ದಬ್ಬಾಳಿಕೆಯನ್ನು ಮಾತ್ರ ನಾನು ಮಾಡುವುದಿಲ್ಲ. ತನ್ನಲ್ಲೇ ಶಪಥವನ್ನು ಮಾಡಿಕೊಂಡ. ಆದರೂ ತಾಯಿಗೆ ಈ ವಿಷಯ ತಿಳಿದರೆ ನೋವಾಗುವುದು ಖಂಡಿತಾ ಎಂದೆನಿಸಿ ವ್ಯಥೆಗೊಂಡ....

ಮೊದಲ ರಾತ್ರಿಯಂದು, ಹೆಂಡತಿ ಸುಗುಣಾಳಿಗೆ ತನ್ನೆಲ್ಲ ವ್ಯಥೆಯನ್ನು ಹೇಳಿಕೊಂಡು ದುಃಖಿಸಿದ.

"ಮನೆ ಬಿಟ್ಟು ಬಂದ ನನಗೆ, ಆಪ್ತರು ಯಾರೂ ಇರಲಿಲ್ಲ. ನನ್ನ ದುಃಖವನ್ನು ಅರ್ಥಮಾಡಿಕೊಳ್ಳುವ ಸ್ನೇಹಿತರಿರಲಿಲ್ಲ... ನಾನು ಸತ್ಯವನ್ನು ಮುಚ್ಚಿಟ್ಟು ಮೋಸ ಮಾಡಿದೀನಿ ಅಂತ ನಿನಗನ್ನಿಸುತ್ತಾ....? ನಿನಗೆ ಬೇಸರವಾಗಿದ್ದರೆ, ನನಗೆ ಈಗಲೇ ಹೇಳಿ ಬಿಡು. ಅಥವಾ ನನ್ನ ಕಷ್ಟ – ಸುಖದಲ್ಲಿ ಸಮಭಾಗಿಯಾಗಿರ್ತೀನಿ ಅಂತ ಹೇಳಿದ್ರೆ, ನನ್ನಷ್ಟು ಅದೃಷ್ಟಶಾಲಿ ಇನ್ಯಾರಿಲ್ಲ ಅಂತ ಅಂದ್ಕೊಳ್ತೀನಿ...."

ಸುಗುಣಾ ಗೊಂದಲಕ್ಕೊಳಗಾಗಿದ್ದಳು. ಅಪ್ಪ, ಪ್ರಶಾಂತನನ್ನು ತನಗಾಗಿ ಆಯ್ಕೆ ಮಾಡಿದ್ದರು. ಅವನ ರೂಪ, ಅವನ ಪ್ರಾಮಾಣಿಕತೆ ಮನೆಯವರಿಗೆಲ್ಲಾ ಮೆಚ್ಚುಗೆಯಾಗಿತ್ತು. ಅತ್ತೆ ಇಲ್ಲದ ಮನೆಯಲ್ಲಿ ಮಗಳು ಸುಖವಾಗಿರಬಹುದೆಂಬ ಆಸೆಯನ್ನು ಸಾವಿತ್ರಿ ಹುಟ್ಟಿಸಿದ್ದಳು. ತನ್ನದು, ಮಾವನಿಲ್ಲದ ಮನೆಯ ನಕ್ಷತ್ರ, ಈಗ ನೋಡಿದ್ರೆ ಅತ್ತೆ, ಮಾವ ಎಲ್ಲಾ ಇದ್ದಾರೆ. ದೊಡ್ಡ ಸಂಸಾರದಿಂದ ಬಂದಿರುವವನು, ಮನೆ ಬಿಟ್ಟು ಬಂದಿರುವವನು, ಇವನು ಸುಳ್ಳು ಹೇಳಬಾರದಾಗಿತ್ತು ಅಂತೆನ್ನಿಸಿತ್ತು. ಮಾತ ನಾಡುವ ಶಕ್ತಿಯನ್ನೇ ಕಳೆದುಕೊಂಡವಳಂತೆ ಮೂಕಳಾಗಿದ್ದಳು.

"ಏನಾದರೂ ಹೇಳು ಸುಗುಣಾ, ಹೀಗೆ ಮೌನವಾಗಿ ಕೊಲ್ಲಬೇಡ."

"ಈಗೇನ್ಹೇಳಲಿ? ಮದುವೆಗೆ ಮೊದಲಾದ್ರೂ ತಿಳಿಸಿದ್ದಿದ್ರೆ.."

"ತಿಳಿಸಿದ್ದಿದ್ರೆ.... ಬಹುಶಃ ನಮ್ಮಿಬ್ಬರ ಮದುವೆ ನಡೀತಿರ್ಲಿಲ್ಲ...'ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡು' ಅಂತ ಗಾದೆಯಿದೆಯಂತೆ. ನಾನು ಒಂದೇ ಒಂದು ಸುಳ್ಳನ್ನು ಹೇಳಿ ಮದುವೆಯಾಗಿದೀನಿ. ಆದರೆ ಒಂದು ಮಾತು ಮಾತ್ರ

ನಿಜ.... ಕಾಯೇನ ವಾಚಾ ಮನಸಾ, ನಾನು ನಿನಗೆ ದ್ರೋಹ ಮಾಡುಲ್ಲ. ಪ್ರಮಾಣ ಮಾಡಿ ಹೇಳ್ತೀನಿ."

"ನನಗೇನೂ ಗೊತ್ತಾಗ್ತಿಲ್ಲ. ನನಗೇನೋ ಗಾಬರಿಯಾಗ್ತಿದೆ."

"ಗಾಬರಿ? ಯಾಕೆ?"

"ನನ್ನದು ಮೂಲಾ ನಕ್ಷತ್ರ. ಮಾವ ಇಲ್ಲದ ಮನೆ ಆಗ್ಬೇಕು.... ನಿಮ್ಮ ತಂದೆ ಇದಾರಲ್ಲ...."

"ಓ ಅದಾ..... ಅವರೆಲ್ಲಿ ನನ್ನ ಜತೆಗೆ ಇದಾರೆ! ನನಗೂ ಅವರಿಗೂ ಸಂಬಂಧವೇ ಇಲ್ಲ. ಅಲ್ಲದೇ ನಾನಿದನ್ನೆಲ್ಲ ನಂಬೋನಲ್ಲ."

"ಅಪ್ಪಂಗೆ ಗೊತ್ತಾದ್ರೆ....?"

"ಅಪ್ಪಂಗ್ಯಾಕೆ ಹೇಳ್ಬೇಕು.....? ನಿನಗೆ ಹೇಳ್ಬೇಕೂಂತ ಅನ್ನಿಸ್ತು ಹೇಳ್ದೆ."

"ನನ್ನಿಂದ ನಿಮ್ಮಪ್ಪನಿಗೆ ಏನಾದ್ರೂ ತೊಂದರೆ ಆದರೆ....?"

"ತೊಂದರೆ ಏನೂ ಆಗುಲ್ಲ ಸುಗುಣಾ, ಅದನ್ನೆಲ್ಲ ಮನಸ್ಗೆ ಹಚ್ಕೋಬೇಡ.... ಈ ಮೂಢನಂಬಿಕೆಗಳನ್ನು ಬಿಟ್ಟು ಬಿಡ್ಬೇಕು..... ನಮ್ಮಪ್ಪ ನನಗೆ ಕಲಿಸಿದ್ದೂ ಇದನ್ನೇ. ಅವರಿಗೆ ದೇವರಲ್ಲಾಗಲೀ, ಜಾತಕ, ಶಾಸ್ತ್ರಗಳಲ್ಲಾಗಲೀ ನಂಬಿಕೆಯೇ ಇಲ್ಲ... ಅವರಿಗೆ ತಿಳಿದ್ರೂ, ಅವರು ಯಾರ ಮೇಲೂ ಕೋಪ ಮಾಡಿಕೊಳ್ಳುಲ್ಲ...." ಇದ್ದಕ್ಕಿದ್ದಂತೆ ಪ್ರಶಾಂತ ಸುಮ್ಮನಾದ. ತಾನೇಕೆ ಇವಳೊಡನೆ ತನ್ನ ತಂದೆಯ ಬಗ್ಗೆ ಹೇಳ್ತಿದೀನಿ....?

ಸುಗುಣಾ ಅವನ ಕಡೆಗೆ ತಿರುಗಿದಳು.

"ಸರಿ. ನಿಮಗಾಗಲೀ, ನಿಮ್ಮ ಮನೆಯವರಿಗಾಗಲೀ ನಂಬಿಕೆ ಇಲ್ಲದಿದ್ದ ಮೇಲೆ ನಮಗ್ಯಾಕೆ ಚಿಂತೆ....? ಆದರೆ ನನಗೆ ದೇವರ ಮೇಲೆ ನಂಬಿಕೆ ಇದೆ. ಪೂಜೆ, ಪುನಸ್ಕಾರಗಳಲ್ಲಿ ಶ್ರದ್ಧೆ ಇದೆ. ಆಸಕ್ತಿ ಇದೆ. ಅದಕ್ಕೆ ನೀವು ಅಡ್ಡಿ ಮಾಡಬಾರದು. ತಮಾಷೆ ಮಾಡಬಾರದು."

"ಇಲ್ಲ. ನಾನು ಯಾವ ಅಡ್ಡಿ ಮಾಡುಲ್ಲ. ತಮಾಷೆ ಮಾಡುಲ್ಲ. ನಿನ್ನ ಪೂಜೆ, ಪುನಸ್ಕಾರಗಳಿಗೆ ನನ್ನ ಸಹಕಾರವಿದೆ. ಆದರೆ ನನ್ನನ್ನು ಮಾತ್ರ ಅದಕ್ಕೆಲ್ಲ ಎಳೆಯಬೇಡ.... ನನಗೆ ಹೊಂದಿಕೊಳ್ಳಲು ಕಷ್ಟವಾಗುತ್ತೆ. ಯಾಕೆ ಅಂದ್ರೆ ಅಭ್ಯಾಸ ಇಲ್ಲವಲ್ಲ...." ನಕ್ಕಂತೆ ಮಾಡಿದ.... ಸುಗುಣಾಳೂ ತನ್ನಲ್ಲೇ ನಕ್ಕೊಂಡಳು.

'ಕ್ರಮೇಣ ನೀವೂ ನಾಸ್ತಿಕತೆಯನ್ನು ಬಿಟ್ಟು ಆಸ್ತಿಕರಾಗುತ್ತೀರಿ' ತನ್ನಲ್ಲೇ ಹೇಳಿಕೊಂಡಳು.

"ನಿನ್ನ ಈ ಮೌನ ನನಗೆ ಹಿಡಿಸುಲ್ಲ. ಮಾತಾಡ್ಬೇಕು...." ಆಜ್ಞಾಪಿಸಿದ.

"ಇನ್ನೇನಿದೆ ಮಾತು? ಎಲ್ಲಾ ಬಗೆಹರೀತಲ್ಲ...."

"ಇಲ್ಲ. ಏನೂ ಬಗೆಹರಿದಿಲ್ಲ.... ಬೆಳಕು ಹರಿಯೋಕೆ ಇನ್ನು ಸಾಕಷ್ಟು ಸಮಯವಿದೆ. ಆದರೆ ಒಂದು ವಿಷ್ಯಾನ ನಾವಿಬ್ರೂ ಮರೆತೇ ಬಿಟ್ಟಿದೀವಿ...."

"ಏನದು....?"

"ಇದು..." ಎನ್ನುತ್ತಾ ಅವಳನ್ನು ತನ್ನೆಡೆಗೆ ಎಳೆದುಕೊಂಡು ಆಲಿಂಗಿಸಿದ....

"ಏನೇನೋ ಮಾತಿನಲ್ಲಿ, ಇದು ಮೊದಲ ರಾತ್ರಿ ಅನ್ನೋದ್ನೇ ಮರೆತು ಬಿಟ್ಟಿದ್ದೆ.... ಏನೂ ತಿಳ್ಕೋಬೇಡ ಸುಗುಣಾ..... ನಮ್ಮ ಪ್ರೀತಿ ಹೀಗೆ ಸದಾ ಇರಬೇಕು ಅಂತ ನನ್ನ ಆಸೆ. ನಮ್ಮಪ್ಪನಂತೆ ನಾನಾಗಬಾರದು, ನಮ್ಮಮ್ಮನಂತೆ ನೀನು ವ್ಯಸನಿ ಯಾಗ ಬಾರದು... ಅದೇ ನನ್ನ ಆಸೆ...." ಎನ್ನುತ್ತಾ ಅವಳನ್ನು ತನ್ನ ಬಾಹುಬಂಧನದಲ್ಲಿ ಅಡಗಿಸಿಕೊಂಡ.

* * *

ವಿದ್ಯಾಳ ಮದುವೆ ನಿಶ್ಚಯವಾದ ವಿಷಯ ಕಾಮಾಕ್ಷಿಗೆ ತಿಳಿಯಿತು. ಅವಳು ಸಂತಸವನ್ನು ವ್ಯಕ್ತಪಡಿಸಿದರೂ ವ್ಯಂಗ್ಯವಾಡುವುದನ್ನು ಬಿಡಲಿಲ್ಲ.

"ಪ್ರೇಮಕ್ಕ ಇದು ಮೋಸ. ನನಗೊಂದು ಸುಳಿವು ಕೊಡ್ಲಿಲ್ಲ ನೀವು... ಇದು ಮೋಸ.... ಈಗ ನಾನು ದೂರಾಗಿಬಿಟ್ನಾ....? ಹೊಸ ನೆಂಟ್ರು ಸಿಕ್ಕ ಕೂಡ್ಲೇ..."

"ಹಾಗಲ್ಲ ಕಾಮಾಕ್ಷಿ... ನಮ್ಮನೆಯೋರು ತಾವೇ ಹೋಗಿ ಗೊತ್ಮಾಡ್ಕೊಂಡ್ಬಂದ್ರು, ಇನ್ನು ಲಗ್ನಪತ್ರಿಕೆ ಪ್ರಿಂಟಾಗಿ ಬರದಿದೆ ಅಷ್ಟೇ... ಯಾರನ್ನ ಕರೀತಾರೋ, ಯಾರನ್ನ ಬಿಡ್ತಾರೋ ಅದೆಲ್ಲ ಅವ್ರಿಗೇ ಸೇರಿದ್ದು... ನಾನ್ಮಾತ್ರ ನಿಮ್ಗೆ ಈಗ್ಲೇ ಹೇಳ್ಬಿಟ್ಟಿದೀನಿ.... ಸಂಸಾರ ಸಮೇತ ಮದ್ವೆಗೆ ಬಂದು ಮದುಮಕ್ಕಳ್ನ ಹರಸ್ಬೇಕು... ಇದು ನನ್ನ ವಿನಂತಿ...."

"ಏ..... ನಾ ಬರ್ದೇ ಇದ್ರೆ ಹೆಂಗೆ ಈ ಮದ್ವೆ ನಡೆಯುತ್ತೆ ನೀವೇ ಹೇಳಿ.... ಎಷ್ಟಾಗಲೀ ಈ ತಾಯೀನ ನಾನೇ ಅಲ್ವಾ ಬೆಳ್ಸಿದ್ದು....?"

"ಹೌದು ಕಾಮಾಕ್ಷಿ, ನೀವು ಇಲ್ದೆ ಇದ್ದಿದ್ರೆ ನಾನು ಇಷ್ಟು ಮಕ್ಳನ್ನ ಹೆಂಗೆ ಬೆಳೆಸ್ತಿದ್ನೋ ಏನೋ.... ಈಗ ನೆನೆಸ್ಕೊಂಡ್ರೆ ಭಯ ಆಗುತ್ತೆ...."

"ಹುಡ್ಗ ಯಾರು! ಏನ್ಮಾಡ್ತಿದಾನೆ! ಅವ್ರಿಗೆಷ್ಟು ಜನ ಮಕ್ಳು" ಎಲ್ಲವನ್ನೂ ವಿಚಾರಿಸಿಕೊಂಡಳು...... ಮಾತು ಮುಗಿಸಿ ಹೊರಡುವ ಮೊದಲು, ಭಟ್ಟನ ಆಫೀಸ್ನ ರೂಮ್‌ಗೆ ಬಂದಳು.

"ಮಗಳ ಮದ್ವೇನ ಗೊತ್ಮಾಡಿದಿಯಂತೆ.... ನಂಗೊಂದ್ಮಾತು ಹೇಳ್ಲಿಲ್ಲ ನೀನು..... ಯಾಕೆ ಭಯ ಬಿದ್ಯಾ....?"

"ಏನ್ಬೆಯ? ಏನೇನೋ ಆಡ್ಬೇಡ..."

"ಮಗಳ್ನ ಏಕಾಏಕಿ ನಾದ್ನಿ ಮನೆಗೆ ಕಳಿಸ್ದೆ.....? ಅವ್ಳ ನಾದ್ನಿ ಮಗನ್ನೊಜೆ ಅವ್ಸರವಸ್ರಾಗಿ ಲಗ್ನ ನಿಶ್ಚಯಮಾಡಿಬಂದಿದೀಯ.... ಏನೋ ಭಯ ಅಲ್ವಾ ನಿನಗೆ?"

"ತಲೆ ಬುಡ ಇಲ್ಲದ್ಮಾತ್ನಾಡ್ಬೇಡಾ ನೋಡು..... ನಂಗೆ ಸಿಟ್ಟು ಬರುತ್ತೆ."

"ಕೋಪ ನಿಂಗೆ ಎಂದ್ಬರುಲ್ಲ ಭಟ್ಟ! ನಂಗೂ ಎಲ್ಲ ಅರ್ಥವಾಗುತ್ತೆ. ನಾನೇನೂ ದಡ್ಡಿಯಲ್ಲ. ನಿನ್ನ ಬುದ್ಧಿಗೆ ಬೇಸ್ರಾತು ಅಷ್ಟೇ.... ನಂಗೂ ತಾಯಿ

ಮದ್ವೆ ಅಂದ್ರೆ ಸಂತೋಷಾನೇ..... ಆದ್ರೆ ನಂಗೊಂದ್ಮಾತು ಹೇಳ್ಲಿಲ್ಲ ನೀನು ಅಂತ ಬೇಸ್ರಾತು....."

"ನಿಂಗ್ಹೇಳ್ದೆ ಇರ್ತಿದ್ನಾ..... ನೀನೂ ಈ ಕಡೆ ಬಂದಿರ್ಲಿಲ್ಲ..... ಹೇಳ್ಲಿಲ್ಲ ಅಷ್ಟೇ....." ಕಾಮಾಕ್ಷಿ ದುರ್ದಾನ ತಗೊಂಡವಳಂತೆ ಹೊರಟು ಹೋದಳು.

* * *

ವಿದ್ಯಾ ಎಂದಿನಂತೆ ಕಾಲೇಜಿಗೆ ಹೊರಟಿದ್ದಳು. ಬಸ್ ಸ್ಟ್ಯಾಂಡ್ ಬಳಿ ಕಿಶೋರ ಇವಳಿಗೋಸ್ಕರ ಕಾಯ್ತಾ ನಿಂತಿದ್ದ. ಇವಳನ್ನು ಕಂಡೊಡನೆ ಹಲ್ಲು ಕಿರಿದು, ಅವಳ ಬಳಿಗೆ ಬಂದು "ಏನೇ ವಿದ್ಯಾ ಕಾಲೇಜ್ಗೆ ಹೊರಟ್ಯಾ....?"

"ಹುಂ.... ಇನ್ನೆಲ್ಲಿಗೆ ಹೋಗ್ತೀನಿ.....?"

"ಗಂಡನ್ಮನೆಗೆ ಹೊರಡ್ನಿಂತಿದೀಯಂತೆ...."

"ನಿಂಗ್ಯಾರ್ಹೇಳಿದ್ರು....?" ಗಾಬರಿಯಿಂದ ಅವಳ ಮುಖ ಬಿಳುಪಾಗಿತ್ತು.....

"ನೀನ್ಹೇಳ್ದೆ ಇದ್ರೂ ನಂಗೆ ತಿಳಿದೇ ತಿಳಿಯುತ್ತೆ.... ಅಂತೂ ನನಗೆ ಕೈ ಕೊಟ್ಟು, ಇನ್ನೊಬ್ಬನ ಕೈ ಹಿಡಿಯೋಕೆ ಹೊರಟಿದೀಯ. ನಾಚ್ಕೆ ಆಗುಲ್ವಾ ನಿನಗೆ?"

"ನಾನೇನೂ ನಿನ್ನನ್ನೇ ಮದ್ವೆ ಆಗ್ತೀನಿ ಅಂತ ಮಾತು ಕೊಟ್ಟಿರಲಿಲ್ಲ..."

"ಮಾತು ಕೊಟ್ಟಿರಲಿಲ್ವಾ.... ಮತ್ತೆ ಆ ಪತ್ರಗಳು? ಅವು ಸುಳ್ಳು ಹೇಳುತ್ವಾ?" ಕೆಟ್ಟದಾಗಿ ನಕ್ಕ.

"ಪತ್ರ? ಯಾವ ಪತ್ರ? ನಾನು ಯಾವ ಪತ್ರವನ್ನೂ ಬರೆದಿರಲಿಲ್ಲ."

"ಓ.... ಅಷ್ಟು ಸುಲಭವಾಗಿ ಬಿಟ್ಟು ಕೊಡ್ತೀನಾ ನಾನು....?" ಮತ್ತೆ ನಕ್ಕ.

"ಏನ್ಮಾಡ್ಕೋತೀಯೋ ಮಾಡ್ಕೋ ಹೋಗು. ನನಗ್ಯಾವ ಭಯಾನೂ ಇಲ್ಲ."

"ಆ ಲೆಟರ್‌ಗಳನ್ನ ನಿನ್ನ ಗಂಡನಾಗೋನಿಗೆ ತೋರಿಸ್ತೀನಿ.... ಈಗ್ಲಾದ್ರೂ ಭಯ ಆಗ್ಲೇ ಬೇಕು ನಿಂಗೆ...."

"ನಂಗೊತ್ತು ನಿನ್ನ ಹತ್ರ ಯಾವ ಲೆಟರ್ರೂ ಇಲ್ಲ....." ಅವಳು ಆತ್ಮ ವಿಶ್ವಾಸ ದಿಂದ ಹೇಳಿದಾಗ, ಅವನು ಸ್ವಲ್ಪ ಪೆಚ್ಚಾದ. ಆದರೂ ನುಡಿದ.

"ಆ ಲೆಟರ್ಸ್‌ಗಳನ್ನು ನಾನು ಹರಿದು ಹಾಕಿಲ್ಲ.... ನಂಗೆ ನಿನ್ನ ಮೇಲೆ ಸ್ವಲ್ಪ ಅನುಮಾನ ಇದ್ದೇ ಇತ್ತು. ಎಷ್ಟಾಗಲೀ, ಆ ಅಪ್ಪನ ಮಗಳು ನೀನು..... ಸುಳ್ಳು ಹೇಳುವುದು ನಿಮ್ಮ ವಂಶಕ್ಕೆ ಕಷ್ಟವೇನಲ್ಲ... ಆ ಕಾಗದಗಳನ್ನು ನಿನ್ನ ಗಂಡನಿಗೆ ಪೋಸ್ಟ್ ಮಾಡ್ತೀನಿ.... ಆಮೇಲೆ ಅವನು ನಿನ್ನನ್ನ ಮದ್ವೆ ಆಗ್ತಾನೇ ಅಂತ್ಕೊಂಡಿ ದೀಯ? ಈ ಜನ್ಮದಲ್ಲಿ ನಾನೇ ನಿನ್ನ ಗಂಡ...."

"ಸರಿ. ಬೀದೀಲಿ ಈ ಮಾತುಗಳೆಲ್ಲ ಯಾಕೆ? ಮನೆಗೆ ಬಾ.... ನಿನ್ನ ಮನಸ್ನಲ್ಲಿ ಏನೇನು ರೋಷ ಇದೆಯಾ ಅದನ್ನೆಲ್ಲ ಕಕ್ಕುವಂತೆ. ಆದರೆ ರಸ್ತೇಲಿ ನನ್ನ ಮಾನ ಕಳೆಯಬೇಡ."

"ನಿನ್ನ ಮನೆಗೆ ನಾನ್ಯಾಕೆ ಬರ್ಲಿ? ನೀನೇ ಬಾ..... ನಮ್ಮನೆಗೆ... ಮುಂಚೆ ಎಲ್ಲಾ ಬರ್ತಿರಲಿಲ್ವಾ...? ಈಗೇನು ಮಹಾ ಮರ್ಯಾದೆ?"

"ಆದದ್ದು ಆಗಿಹೋಯ್ತು ಕಿಶೋರ್... ಏನೋ ತಪ್ಪಾಗಿ ಹೋಯ್ತು..... ನಿನ್ನ ಮನಸ್ನಲ್ಲಿ ಆಸೇನ ಹುಟ್ಟಿಸ್ಬಿಟ್ಟೆ.... ಎಲ್ಲೋ ಆ ಯೋಗ ಇಲ್ಲಾಂತ ಕಾಣುತ್ತೆ. ನನ್ನನ್ನ ಮರೆತ್ಬಿಡು..... ನನ್ನ ತಂಟೆಗೆ ಬರಬೇಡ...."

"ನಿನ್ನ ಮದುವೆ ನನ್ನ ಜತೇನೇ ನಡೀಬೇಕು. ನಾನು ಯಾವುದನ್ನೂ ಮರೆತಿಲ್ಲ. ಮರೆಯುವುದೂ ಇಲ್ಲ..... ಈ ಮದುವೇನ ಹೇಗೆ ನಿಲ್ಲಸ್ಬೇಕು ಅಂತ ನನಗೆ ಗೊತ್ತು. ನಿನ್ಹತ್ರ ಏನು ಮಾತು?" ಹುಂ ಎಂದು ಹೂಂಕರಿಸಿ, ಅಲ್ಲಿಂದ ಮರೆಯಾದ.

ಕಾಲೇಜಿಗೆ ಹೋಗುವ ಮನಸ್ಸಾಗದೇ ಮನೆಗೆ ವಾಪಸ್ಸು ಬಂದಳು. ಪ್ರೇಮಾ ಮಗಳ ಮುಖ ಕಳಾಹೀನವಾಗಿರುವುದನ್ನು ಕಂಡಳು.

"ಯಾಕೇ ವಿದ್ಯಾ? ಏನಾಯ್ತು? ಮುಖವೆಲ್ಲಾ ಹೇಗಾಗಿದೆ? ಯಾರಾದ್ರೂ ಏನಾದ್ರೂ ಅಂದ್ರೇನೇ?" ವಿದ್ಯಾ ತಾಯಿಯನ್ನು ತಬ್ಬಿಕೊಂಡು ಅತ್ತಳು.....

"ಅಳುವಂಥದ್ದೇನಾಯ್ತು? ಗಂಡನ ಮನೆಗ್ಹೋಗ್ಮುಂಚೆ ಹೀಗೇ ಆಗುತ್ತೆ. ಆಮೇಲೆ ಅಲ್ಲಿಗೆ ಹೋದ್ಮೇಲೆ ನಮ್ಮನ್ನೆಲ್ಲಾ ಮರೆತೇ ಬಿಡ್ತೀಯ.... ನೀನೇನು? ಎಲ್ಲಾ ಹೆಣ್ಮಕ್ಳೂ ಅಷ್ಟೇ...." ಮಗಳಿಗೆ ಸಮಾಧಾನ ಹೇಳಿದಳು. ಕಿಶೋರನ ವಿಷಯವನ್ನು ಅಮ್ಮನೊಡನೆ ಮಾತನಾಡಲು ಹಿಂಜರಿದಳು. ಇನ್ನು ಕೆಲವೇ ದಿನಗಳಲ್ಲಿ ತನ್ನ ಮದುವೆಯಾಗಲಿದೆ, ಅಮ್ಮಂಗೆ ಈ ವಿಷಯ ತಿಳಿದರೆ ಅವಳ ಕೊರಗು ಇನ್ನೂ ಹೆಚ್ಚುತ್ತೆ. ಬೇಡವೆಂದುಕೊಂಡಳು. ಸೀದಾ ಸಂತೋಷನ ರೂಮಿಗೆ ಬಂದಳು. ಆ ದಿನ ಸಂತೋಷ ಕಾಲೇಜಿಗೆ ಹೋಗಿರಲಿಲ್ಲ. ಮನೆಯಲ್ಲೇ ಇದ್ದ.

ವಿದ್ಯಾ ಬಿಕ್ಕುತ್ತಾ ಕಿಶೋರ ಆಡಿದ್ದನ್ನು ಅವನಿಗೆ ಹೇಳಿದಳು. "ನನಗೆ ಯಾಕೋ ತುಂಬಾ ಭಯ ಆಗುತ್ತೆ.... ಅವನೊಂದು ಥರ ರೊಚ್ಚು ಹಿಡಿದವನ ಥರ ಮಾತಾಡ್ದ.... ದಿನೇಶಂಗೆ ಈ ವಿಷಯ ತಿಳಿದ್ರೆ..... ಅಥವಾ ಅಪ್ಪಂಗೆ ಈ ವಿಷಯ ಗೊತ್ತಾದ್ರೆ ಏನು ರಂಪ ಆಗುತ್ತೋ ಅಂತ ಹೆದರ್ಕೆ ಆಗ್ತಿದೆ."

"ಹೆದರ್ಕೆ ಯಾಕೆ? ಆ ಪತ್ರಗಳು ನನ್ನ ಹತ್ತಿರವೇ ಇದೆ. ದಿನೇಶ ಕಿಶೋರನ ಮಾತನ್ನ ಹೇಗೆ ನಂಬ್ತಾರೆ? ಅಲ್ಲದೆ ನೀನೇ ಕಿಶೋರನ ಬಗ್ಗೆ ದಿನೇಶಂಗೆ ಹೇಳಿದ್ದೆ ಅಲ್ವಾ?"

"ಆದರೆ, ಅವರೊಬ್ಬರಿಗೆ ಮಾತ್ರ ಗೊತ್ತು. ಅವರ ಮನೆಯವರ್ಗೆ ಗೊತ್ತಿಲ್ಲ..."

"ದಿನೇಶ ನಿನ್ಕಡೆ ಇದ್ರೆ, ಏನೂ ತೊಂದ್ರೆ ಆಗುಲ್ಲ, ಧೈರ್ಯವಾಗಿರು...."

"ಕಿಶೋರ ಕೋಪದಿಂದ ನನ್ನ ಮುಖಕ್ಕೆ ಆಸಿಡ್ ಎರಚಿ ಬಿಟ್ರೇ...." ವಿದ್ಯಾ ಅವ್ಯಕ್ತ ಭಯದಿಂದ ನಡುಗಿದಳು.

"ಆ ಧೈರ್ಯ ಎಲ್ಲಿದೆ ಅವನಿಗೆ....! ಅಲ್ದೇ ಈ ಭಯ ಯಾಕೆ ಬಂತು ನಿನಗೆ?"

"ಯಾವ್ದೋ ಒಂದು ಕಥೇಲಿ ಓದಿದ ನೆನಪು...."

"ಕಥೇಲಿ ಓದಿದ್ದೆಲ್ಲಾ ಜೀವನದಲ್ಲಿ ನಡೆಯೋಲ್ಲ. ಅದೆಲ್ಲಾ ಅಷ್ಟು ಸುಲಭವಲ್ಲ. ಅವನ್ಗೂ ಭಯ ಇರುತ್ತೆ. ಪೋಲೀಸರ್ಗೆ ಗೊತ್ತಾದ್ರೆ ಚರ್ಮ ಸುಲಿದು ಬಿಡ್ತಾರೆ." ಹಾಗೆ ಅವನು ಹೇಳಿದರೂ, ಅವನಿಗೂ ಒಳಗೊಳಗೇ ಏನೋ ಭೀತಿ ಉಂಟಾಗಿತ್ತು.

ವಿದ್ಯಾ ತಿಳಿಯದೇ ತಪ್ಪು ಮಾಡ್ಬಿಟ್ಟಿದ್ದಾಳೆ. ಈಗ ಅದ್ರಿಂದ ಪಾರಾಗಬೇಕು. ಈಗ ಇದನ್ನು ಅಪ್ಪನಿಗೆ ತಿಳಿಸುವುದು ಒಳ್ಳೆಯದು. ಏನಾದರೂ ಆಗುವ ಮೊದಲೇ ಎಚ್ಚರದಿಂದಿರುವುದು ಒಳ್ಳೆಯದು ಎಂದುಕೊಂಡ. ಕೋರ್ಟ್‌ನಿಂದ ಅಪ್ಪ ವಾಪಸ್ಸು ಬರುವುದನ್ನೇ ಕಾದ. ಅವರು ಊಟ ಮಾಡಿ, ಯಾವುದೋ ಫೈಲ್ ನೋಡಲೆಂದು ಆಫೀಸ್‌ನ ರೂಮನ್ನು ಹೊಕ್ಕಾಗ, ಇವನೂ ಅವರ ಹಿಂದೆ ಹಿಂದೆಯೇ ಬಂದ.

"ಏನ್ಬೇಕಾಗಿತ್ತು....!" ಅಪ್ಪ ಗಡುಸಾಗಿ ಕೇಳಿದಾಗ, ಪುಚ್ ಎಂದ.

"ನಿಮ್ಹತ್ರ ಒಂದು ಮುಖ್ಯವಾದ ವಿಷಯವನ್ನು ಮಾತಾಡ್ಬೇಕು...."

"ನಾನೀಗ ಹೊರಗೆ ಹೋಗ್ಬೇಕು. ಸಾಯಂಕಾಲ ಆಡಿದ್ರೆ ಆಗುಲ್ವಾ! ಏನಾದ್ರೂ ದುಡ್ಡು ಬೇಕಾಗಿತ್ತಾ....!"

"ಇಲ್ಲ ಅಪ್ಪ.... ಅಕ್ಕನ ವಿಷಯ..." ಸಂತೋಷ ವಿವರಿಸಿದ.

"ಅಕ್ಕನ ಬಾಳು ಹಾಳಾಗುಲ್ವೇನಪ್ಪಾ....!"

"ಈಗ ಬಂದು ನನ್ಹತ್ರ ಹೇಳಿದ್ರೇನುಪಯೋಗ.....? ಅವಳ ಬಾಳು ಹಾಳಾಗದೇ ಇರ್ಲಿ ಅಂತ ಅವಸರವಸರವಾಗಿ ಮದುವೆ ಗೊತ್ಮಾಡಿದೆ. ಈಗೇನು ಮಾಡ್ತಾನೆ ಅವನು?"

"ಆಸಿಡ್ ಗೀಸಿಡ್ ಎರಚಿ ಬಿಟ್ರೆ, ಅನ್ನೋ ಭಯ ಹತ್ಬಿಟ್ಟಿದೆ ಅಕ್ಕಂಗೆ.... ಅಳ್ತಾ ಇದಾಳೆ...."

"ಈಗ್ಲೇ ಹೋಗಿ ಕಾಮಾಕ್ಷೀನ ಕರ್‍ಕೊಂಡು ಬಾ.... ನಾನು ಅವಳ ಹತ್ರ ಮಾತಾಡ್ತೀನಿ."

ಸಂತೋಷ ಸೈಕಲ್ಲನೇರಿದ. ಕಾಲು ಗಂಟೆಯೊಳಗೆ ವಾಪಸ್ಸಾಗಿದ್ದ. "ಅತ್ತೇ ಮನೇಲಿರ್‍ಲಿಲ್ಲ. ಅವರ ಮಗಳ್ಗೆ ಹೇಳಿ ಬಂದಿದೀನಿ. ಬಂದ್ಕೂಡ್ಲೇ ಕಳಿಸ್ತಾಳಂತೆ."

"ನಾನು ಸ್ವಲ್ಪ ಹೊರಗೆ ಹೋಗಿ ಬರ್ತೀನಿ. ಕಾಮಾಕ್ಷಿ ಬಂದ್ರೆ ಮಾತಾಡಿಸ್ತಾ ಕೂರಿಸ್ಕೊಂಡಿರಿ. ಏನೂ ಬಾಯಿ ಬಿಡ್ಬೇಡಿ.... ನಾನೇ ಮಾತಾಡ್ತೀನಿ ಅವಳ್ಜತೆ...."

ಸಂಜೆ ಕಾಮಾಕ್ಷಿ ಬಂದಳು.

"ಕಾಮಾಕ್ಷಿ ಇಲ್ಬಾ.... ನಾನಿಲ್ಲಿದೀನಿ" ಒಳಗಿನಿಂದಲೇ ಕರೆದ.

"ಏನೋ ಸೀ ಭಟ್ಟ ಹೇಳಿ ಕಳಿಸಿದ್ಯಂತೆ.... ಏನು ವಿಷ್ಯ!"

"ಮೊದ್ಲು ಬಾಗ್ಲನ್ನ ಸ್ವಲ್ಪ ಮುಂದ್ಮಾಡು. ವಿಷಯ ಸ್ವಲ್ಪ ಮುಖ್ಯವಾದದ್ದೇ." ಕಾಮಾಕ್ಷಿ ಬಾಗಿಲನ್ನು ಮುಂದೆ ಮಾಡಿ ಬಂದು, ಅವನ ಮುಂದೆ ಕುಳಿತಳು.

"ನಿಂಗೆ ಎಷ್ಟು ಹಣ ಬೇಕು....?" ಖಾರವಾದಿ ಕೇಳಿದ.

"ನಂಗೆ ಹಣ ಕೊಡ್ತೀಯಾ.....! ಯಾಕೆ ಹೆಚ್ಚಾಗಿದ್ಯಾ?" ನಕ್ಕಳು.

"ತಮಾಷೆ ಅಲ್ಲ..... ಹಣ ಎಷ್ಟು ಬೇಕು ಅಂತ ಕೇಳ್ತಾ ಇದೀನಿ...."

"ನಂಗೇನೂ ಅರ್ಥವಾಗ್ತಿಲ್ಲ. ನಾನ್ಯಾವಾಗ ನಿನ್ನನ್ನ ಹಣ ಕೇಳ್ದೆ. ನಂಗೆ ನೆನ್ಪಿಲ್ಲ."

"ನೀನೇನು ಕೇಳ್ಲಿಲ್ಲ ನಂಗೊತ್ತು. ಆದರೆ ಹಣಕ್ಕೋಸ್ಕರಾನೇ ತಾನೇ ನೀನು ನಿನ್ನ ಮಗನ ಜತೆ ಸೇರಿ ಹೀಗೆ ಮಾಡ್ತಿರೋದು...."

"ಏ ಭಟ್ಟ, ನಾಲ್ಗೆ ಬಿಗಿ ಹಿಡಿದು ಮಾತಾಡು... ನಾನೇನ್ಮಾಡ್ದೆ ಅಂತ ಹೀಗೆ ಅಪವಾದ ಹೊರಿಸ್ತಾ ಇದೀಯ.... ನಿಂಗೊಬ್ನಿಗೇ ಅಲ್ಲ ಕಾನೂನು ಗೊತ್ತಿರೋದು. ನಂಗೂ ಗೊತ್ತಿದೆ. ಹೀಗೆಲ್ಲ ಸುಳ್ಳು ಅಪವಾದ ಹೊರಿಸಿದ್ರೆ ನಾನು ಸುಮ್ಮನಿರುಲ್ಲ."

"ಹಾಗಾದ್ರೆ ನಿನ್ಮಗಂಗೆ ಒದ್ದು ಬುದ್ಧಿ ಕಲ್ಸು. ನನ್ನ ಮಗಳ ತಂಟೆಗೇನಾದ್ರೂ ಮತ್ತೆ ಬಂದ್ರೆ ಅವನ ಗ್ರಹಚಾರ ನೆಟ್ಟಗಾಗುಲ್ಲ."

"ಅವನೇನಾದ್ರೂ ಮಾಡಿದ್ರೆ, ಅವನ್ನ ಕರೆದು ಬುದ್ಧಿ ಹೇಳು.... ನಂಗ್ಹೇಳಿದ್ರೆ....?"

"ನೀನು ಅವನ ತಾಯಿ, ಅವನೇನ್ಮಾಡ್ತಾನೆ, ಏನಾಡ್ತಾನೆ ನಿಂಗೆ ಗೊತ್ತಿರುಲ್ವಾ?"

"ಅವ್ನು ಮೀಸೆ ಬಂದಿರೋ ಹುಡುಗ, ಎಲ್ಲಾ ನನ್ಗೇ ಹೇಳಿ ಮಾಡ್ತಾನಾ? ಹೋಗ್ಹೋಗು ನಿನ್ಮಾತ್ಗೆ ನಗ್ಬೇಕೋ ಅಳ್ಬೇಕೋ ಒಂದೂ ಗೊತ್ತಾಗ್ತಿಲ್ಲ."

"ಕಾಮಾಕ್ಷಿ ನಾಟ್ಕ ಆಡ್ಬೇಡ... ನನ್ನ ಮಗಳ ಬಾಳನ್ನ ಕೆಡಿಸೋಕೆ ಹೊರಟಿದಾನೆ ನಿನ್ಮಗ. ಅವನ್ಗೆ ಸರ್‍ಯಾಗಿ ತಿಳುವಳ್ಕೇನ ನೀನು ಹೇಳದಿದ್ರೆ... ನಾನು ಪೋಲೀಸ್ ಕಂಪ್ಲೇಂಟ್ ಕೊಡಬೇಕಾಗುತ್ತೆ....."

"ಅಂಥಾದ್ದೇನ್ಮಾಡ್ದ ನನ್ಮಗ? ಅವನ್ಪಾಡಿಗೆ ಅವನು ಹಾಯಾಗಿದ್ದ. ಅವನ ಮನಸ್ಸನ್ನು ಕೆಡಿಸ್ದೋಳೇ ನಿನ್ಮಗ್ಳು. ಆಗ ನಾನೇ ನಿನಗೆ ಹೇಳಿದ್ದನ್ನ ಮರೆತು ಬಿಟ್ಯಾ! ಈಗ ಸುಳ್ಳು ಸುಳ್ಳೇ ಅಪವಾದ ಹೊರಸ್ತಿದೀಯಲ್ಲ. ಅವನ್ಮೇಲ್ಯಾಕೆ ವಿಷ ಕಾರ್‍ತಿದೀಯ ....?"

"ನೀನು ಹೇಳೋ ಹಾಗೆ ಅವನು ಸಭ್ಯನೇ ಆಗಿದ್ದರೆ ಅವನಿಗೇ ಒಳ್ಳೆಯದು. ಅವನು ನನ್ಮಗಳ್ಗೆ ಬೆದರ್ಕೆ ಹಾಕಿದಾನೆ. ಅವನನ್ನ ಮದ್ವೆಯಾಗದಿದ್ರೆ ಹಾಗ್ಮಾಡ್ತೀನಿ ಹೀಗಾಡ್ತೀನಿ ಅಂತ ಹೆದರಿಸಿದಾನಂತೆ.... ನೀನೇ ವಿಚಾರಿಸ್ಕೊಂಡ್ರೆ ನಿನ್ಮಗ ಉಳೀತಾನೆ. ಇಲ್ಲದಿದ್ರೆ ಜೈಲು ಸೇರ್‍ತಾನೆ."

ಕಾಮಾಕ್ಷಿ ಭಟ್ಟನ ಪಾದಗಳನ್ನು ಹಿಡಿದಳು. "ಹಾಗೆಲ್ಲ ಮಾಡ್ಬೇಡ್ವೋ ಭಟ್ಟ, ನನಗಿರೋನು ಅವನೊಬ್ನೇ ಮಗ. ಏನೋ ಅವಿವೇಕಿ, ತಿಳುವಳ್ಕೆಯಿಲ್ಲಷ್ಟೇ

ಮಾತಾಡಿರ್ಬಹುದು. ನಾನೂ ಅವನ್ಗೆ ತಿಳುವಳ್ಕೆ ಹೇಳ್ತೀನಿ. ಕೇಳ್ದಿದ್ರೆ ನಾಲ್ಕು ಬಾರಿಸ್ತೀನಿ. ಆದ್ರೆ ಪೋಲೀಸ್ರು, ಜೈಲು ಅಂತ ಮಾತ್ರ ಹೋಗ್ಬೇಡ... ನಿನ್ನ ದಮ್ಮಯ್ಯ...."

"ಆಯ್ತು..... ಬಿಡು ನನ್ನ ಕಾಲುಗಳನ್ನ. ನಿನ್ನ ಮಾತನ್ನ ನಂಬ್ತೀನಿ. ಆದ್ರೆ ಒಂದ್ಮಾತು ನೆನಪಿರಲಿ; ನಿನ್ಮಗ ಏನಾದ್ರೂ ಈ ಮದ್ವೆಗೆ ಅಡ್ಡಿ ತಂದ್ನೋ.... ಆಗ ನಾನು ಎಲ್ಲಾ ಮರೆತುಬಿಡ್ತೀನಿ. ಆಮೇಲೆ ನೀನು ಎಷ್ಟು ಅಂಗಲಾಚಿ ಬೇಡಿದರೂ ನನ್ನ ಮನಸ್ಸು ಬದಲಾಗುಲ್ಲ.... ಇನ್ನು ನೀನು ಹೋಗು.... ಅದೇನ್ಮಾಡ್ತೀಯೋ ಮಾಡು...."

ಕಾಮಾಕ್ಷಿ ಕಣ್ಣೀರನ್ನು ಒರೆಸಿಕೊಂಡು ಹೊರಟಳು. ಒಳಬಾಗಿಲಲ್ಲಿ ನಿಂತು ಅವರಿಬ್ಬರ ಮಾತುಗಳನ್ನು ಸಂತೋಷ ಕೇಳಿಸಿಕೊಂಡ. ಎಲ್ಲವನ್ನೂ ವಿದ್ಯಾಳಿಗೆ ವರದಿ ಒಪ್ಪಿಸಿದ.

* * *

ಅಧ್ಯಾಯ – ಇಪ್ಪತ್ತು

ಮದುವೆಮನೆಯಲ್ಲಿ ರಂಪ

"ಅಪ್ಪ ಇಷ್ಟು ಒರಟಾಗಿ ಮಾತನ್ನಾಡಬಾರದಾಗಿತ್ತು. ಕಾಮಾಕ್ಷಿ ಅತ್ತೆಯ ಮುಖವಂತೂ ಕೆಟ್ಟು ಹೋಗಿತ್ತು.... ಕಿಶೋರ ಮಾಡಿದ ತಪ್ಪಿಗೆ ಅವರಿಗೆ ಅವಮಾನವಾಯ್ತು. ಪಾಪ ಎಷ್ಟು ಬೇಜಾರಾಯಿತೋ ಏನೋ..." ವಿದ್ಯಾ ಲೊಚಗುಟ್ಟಿದಳು.

"ನೀನು ಸುಮ್ನಿರೇ ಅಕ್ಕ. ಅವರಿಗೆ ಬೇಜಾರಾಗುತ್ತೆ ಅಂತ ಸುಮ್ನಿರೋಕೆ ಆಗುತ್ತಾ? ಅವರೇ ಸರಿ ಅವನಿಗೆ. ಏನಾದ್ರೂ ಮಾಡ್ಕೊಳ್ಳಲಿ. ಆದರೆ ನಮ್ಮ ತಂಟೆಗೆ ಬರದಿದ್ರೆ ಸಾಕು."

ಒಳಗ್ನಿಂದಲೇ ಭಟ್ಟ ಸಂತೋಷನನ್ನು ಕರೆದ. ಸಂತೋಷ ಒಳ ಬಂದ.

"ಆ ಲೋಫರ್‌ಗೆ ಹೆದರಿ, ಕಾಲೇಜ್ಗೆ ಹೋಗ್ದೇ ಮನೇಲೇ ಕೂತಿರ್ಬಾರದಂತೆ ಅಂತ ನಿಮ್ಮಕ್ಕನಿಗೆ ಹೇಳು..... ನಾನು ಒಂದೆರಡು ದಿನ ಊರಿನಲ್ಲಿರುಲ್ಲ... ಅದನ್ನ ಯಾರಿಗೂ ಹೇಳ್ಬೇಡಿ.... ಕಾಮಾಕ್ಷಿ ಬಂದ್ರೆ ಅವಳ್ಗೂ ಗೊತ್ತಾಗಕೂಡ್ದು.... ಇಲ್ಲಿ ಟೇಬಲ್ ಡ್ರಾಯರ್ಸ್‌ನಲ್ಲಿ ದುಡ್ಡಿಡುತ್ತೆ. ಬೇಕಾದ್ರೆ ಖರ್ಚಿಗೆ ತೆಗೀರಿ.... ಆದ್ರೆ ಲೆಕ್ಕ ಕೊಡ್ಬೇಕು..."

ಸಂತೋಷ ತಲೆಯಾಡಿಸಿದ. ಅದೇ ರಾತ್ರಿ ಭಟ್ಟ ಬಸ್ಸನ್ನು ಹತ್ತಿದ. ಸೀದಾ ಭವಾನಿಯ ಮನೆಗೆ ಬಂದ. "ಕಿಶೋರ ಬೆದರಿಕೆ ಹಾಕ್ತಿದಾನೆ. ಮದುವೆಗೆ ಏನಾದರೂ ಅಡ್ಡಿ ಬಂದು, ಮದುವೆ ನಿಂತು ಹೋದರೆ, ಎಲ್ರಿಗೂ ಗೊತ್ತಾಗಿ ಹೋಗುತ್ತೆ. ಅದಕ್ಕೆ ಮದುವೇನ ಇಲ್ಲೇ ಯಾವುದಾದ್ರೂ ಛತ್ರದಲ್ಲಿ ಮಾಡಿ ಬಿಡೋಣ ಅಂತ...." ಎಂದ.

"ತತ್‌ಕ್ಷಣಕ್ಕೆ ಯಾವ ಛತ್ರ ಸಿಗುತ್ತೆ ಭಾವ? ತಿಂಗಳು, ಎರಡು ತಿಂಗಳಿಗೆ ಮೊದಲೇ ಛತ್ರಗಳು ಬುಕ್ ಆಗಿಬಿಟ್ಟಿರುತ್ವೆ" ಭವಾನಿ ಆತಂಕವನ್ನು ವ್ಯಕ್ತಪಡಿಸಿದಳು.

"ಹಾಗಾದ್ರೆ ಶಾಸ್ತ್ರಿ ಹತ್ರ ಮಾತಾಡ್ತೀನಿ. ಬೇರೆ ಯಾವುದಾದ್ರೂ ಮುಹೂರ್ತವನ್ನು ಇಟ್ಕೊಡಲಿ...." ಎಂದು ಹೇಳಿ, ತಿಂಡಿ – ಕಾಫಿಯ ಅನಂತರ, ಶಾಸ್ತ್ರೀಯ ಮನೆಗೆ ಬಂದ. ಶಾಸ್ತ್ರಿ ಆಫೀಸ್‌ಗೆ ಹೊರಡಲಿದ್ದವನು, ಇವನನ್ನು ಕಂಡು ಉಳಿದುಕೊಂಡ. ಭಟ್ಟ ವಿಷಯಕ್ಕೆ ಬಂದ.

"ನಾನೀಗ, ಬೆಂಗಳೂರ್ನಲ್ಲೇ ಯಾವ್ದಾದ್ರೂ ಛತ್ರದಲ್ಲಿ ಮದ್ವೆ ಮಾಡ್ಬೇಕಾಗಿದೆ. ಈ ಮುಹೂರ್ತವನ್ನು ಬಿಟ್ಟು ಯಾವುದಾದ್ರೂ ಮುಂದಿನ ಮುಹೂರ್ತವನ್ನು

ಗುತುತು ಹಾಕ್ಕೊಡು."

"ಯಾಕೆ, ಏನಾಯ್ತು? ಗಂಡಿನವರು ಇಲ್ಲೇ ಮ್ಯಾಡ್ಕೊಡಿ ಅಂತ ಹೇಳಿದ್ರಾ?"

"ಹೂಂ..... ಯಾವ್ದಾದ್ರೂ ಛತ್ರ ಸಿಗಬಹುದು ಅಲ್ವಾ?"

"ಛತ್ರಗಳು ಸಿಗೋದು ಕಷ್ಟ..... ನೀನು ಅವರುಗಳ ಹತ್ರವೇ ಮಾತನಾಡು. ಇನ್ನೆಷ್ಟು ದಿನ ಉಳಿದಿದೆ ಮದುವೆಗೆ? ಒಂದಿಪ್ಪತ್ತು ದಿನ ಕೂಡ ಬಾಕಿ ಇಲ್ಲ... ಎಲ್ಲಾ ಸಿದ್ಧತೆಗಳನ್ನು ಮಾಡ್ಕೊಂಡಿದ್ಯೇನೋ ಅಲ್ವಾ?"

"ಹುಂ..... ಎಲ್ಲಾ ಆಗ್ತಾ ಇತ್ತು. ಲಗ್ನಪತ್ರಿಕೇನ ಹಂಚಿಲ್ಲ.... ಸರಿ ನೀನ್ಹೇಳಿದ್ಹಾಗೇ ಅವರ ಹತ್ರ ಮಾತಾಡ್ತೀನಿ." ಎಂದು ಎದ್ದ....

"ಹೇಗೋ ಬಂದಿದೀಯಲ್ಲ. ಇಲ್ಲೇ ಊಟ ಮಾಡೋವಂತೆ.... ಅರ್ಧ ದಿನ ರಜ ಹಾಕ್ತೀನಿ. ಕೂತು ಮಾತನಾಡೋಣ."

"ಬಿಡುವಿಲ್ಲ. ಮತ್ತೆ ಬಂದಾಗ ಬರ್ತೀನಿ. ಇಲ್ಲೇ ಒಬ್ಬರು ಸೀನಿಯರ್ ಲಾಯರ್‌ನ ನೋಡೋಕೆ ಹೋಗ್ಬೇಕು...." ಏನೋ ಒಂದು ತೋಚಿದ್ದನ್ನು ನುಡಿದ.

"ತಡೀ ನಿಂಕ್ಯೋ ಅವಸರ ಯಾಕೆ? ಈಗ್ಗೊಂದು ವಾರದ ಕೆಳಗೆ ನನ್ನ ಮಗಳ ಮದುವೆ ಆಯ್ತು. ಬಹಳ ಅವಸರದಲ್ಲಿ ಎಲ್ಲಾ ನಡೀತು. ಯಾರನ್ನೂ ಕರೆಯಲಿಲ್ಲ. ಮನೆಮಟ್ಟಿಗೆ ನೆರವೇರಿಸಿದೆವು." ಭಟ್ಟನ ಮುಖದ ಬಣ್ಣ ಇಳಿಯಿತು.

"ಲೇ ಸಾವಿತ್ರಿ..... ಭಟ್ಟ ಬಂದಿದಾನೆ..... ಸ್ವಲ್ಪ ತಿಂಡಿ ತಗೊಂಡು ಬಾ...."

"ನನ್ನ ತಿಂಡಿ ಆಗಿದೆ. ಈಗ ನನಗೇನೂ ಬೇಡ.... ಅಂಥ್ಹಾಗೇ ಹುಡ್ಗ...?" ಕುತೂಹಲ ಬೆರೆತ ಅನುಮಾನದಿಂದ ಕೇಳಿದ.

"ಅದೇ.... ಅವತ್ತೇ ಹೇಳಿದ್ನಲ್ಲ. ಅವನೇ ಹುಡುಗ. ಇನ್ನೂ ಚಿಕ್ಕವನು. ಒಬ್ಬಂಟಿಗ, ಅಡ್ಗೆ ಕೆಲ್ಸ ಏನೂ ಬರುಲ್ಲವೆಂತೆ. ಅದೇ ಕಾರಣಕ್ಕೆ ಒಪ್ಗೆ ಕೊಟ್ಟ. ನಾನೂ ಯೋಚಿಸಿದೆ. ನನ್ನ ಮಗಳದ್ದು ಮೂಲಾ ನಕ್ಷತ್ರ. ಮಾವನಿಗೆ ಆಗದ ನಕ್ಷತ್ರ, ಹುಡ್ಗಂಗೋ ತಂದೆ, ತಾಯಿ ಯಾರೂ ಇಲ್ಲ. ನನಗೂ ಅನುಕೂಲ ಆಯ್ತು. ಮದುವೆ, ಕಾರ್ಯ ಮುಗಿಸಿಬಿಟ್ಟೆ, ಈಗ ಇಬ್ರೂ ಎಸ್ಟೇಟ್ ಮನೇಲಿ ಸಂಸಾರ ಹೂಡಿದಾರೆ..... ನಂಗೆ ಇನ್ನೂ ಇಬ್ಬರು ಹೆಣ್ಣು ಮಕ್ಕಳಿದಾರೆ. ಅವರನ್ನು ಹೀಗೇ ದಡ ದಾಟಿಸಿ ಬಿಟ್ಟರೆ ಕೃತಾರ್ಥನಾಗ್ತೀನಿ."

ಭಟ್ಟನಿಗೆ ಅವನ ಉಳಿದ ಮಾತುಗಳ ಕಡೆ ಗಮನವಿರಲಿಲ್ಲ. ಅಸಮಾಧಾನ ದಿಂದ ಮುಖ ದಪ್ಪಗಾಗಿತ್ತು..... ಪ್ರಶಾಂತನಿಗೆ ತನ್ನ ಪತ್ರ ತಲುಪಿಲ್ಲವೋ ಅಥವಾ ತಲುಪಿದ್ದರೂ ಧಿಕ್ಕರಿಸಿದ್ದಾನೋ..... ಅಂತೂ ತನ್ನ ಮರ್ಯಾದೆ ಕಳೆದುಬಿಟ್ಟ..... ಒಳಗೊಳಗೇ ಚಡಪಡಿಸಿದ.

"ಏನಯ್ಯಾ ಏನು ಯೋಚಿಸ್ತಿದೀಯಾ? ದೇವರಿದಾನೆ. ಕಾರ್ಯಗಳನ್ನು ನೆರವೇರಿಸಿಕೊಡೋನೂ ಅವನೇ..... ಚಿಂತೆ ಯಾಕೆ ಮಾಡ್ತೀಯ, ಕಾಫಿ ಕುಡಿ"

ಭಟ್ಟನಿಗೆ ಶಾಸ್ತ್ರಿಯ ನಯವಾದ ಮಾತುಗಳಾಗಲೀ, ಆದರ, ಉಪಚಾರಗಳಾಗಲೀ ಬೇಕಿರಲಿಲ್ಲ. ಕಾಫಿಯನ್ನು ಬಲವಂತವಾಗಿ ಕುಡಿದು ಎದ್ದ.

"ನಂಗೆ ಹೊತ್ತಾಗುತ್ತೆ. ಇನ್ನು ಬೇಕಾದಷ್ಟು ಕೆಲಸಗಳಿವೆ." ಎಂದು ಹೇಳಿ, ಭವಾನಿಯ ಮನೆಗೆ ಬಂದು, ಲಗೇಜ್‌ನ್ನು ತೆಗೆದುಕೊಂಡು ಸೀದಾ ತನ್ನೂರಿಗೆ ವಾಪಸ್ಸಾದ. 'ಅಂತೂ ನನ್ನ ಮಕ್ಕಳು ನನ್ನ ಮುಖಕ್ಕೆ ಮಸಿ ಬಳಿಯುವಂಥದ್ದನ್ನೇ ಮಾಡ್ತಿದಾರೆ' ಎಂದುಕೊಂಡು ಹಲ್ಲು ಕಡಿದ. ವ್ಯಥೆಗಿಂತ ಅಸಮಾಧಾನವೇ ಅಧಿಕವಾಗಿತ್ತು.

ಎರಡು ದಿನಗಳಿಗೆ ಅಂತ ಹೋಗಿದ್ದ ಅಪ್ಪ ಒಂದು ದಿನದೊಳಗೇ ವಾಪಸ್ಸಾದುದು ಸಂತೋಷನನ್ನು ಯೋಚಿಸುವಂತೆ ಮಾಡಿತ್ತು. ಧುಮುಗುಟ್ಟುತ್ತಿದ್ದ ಮುಖವನ್ನು ಕಂಡು ಆತಂಕವೂ ಆಗಿತ್ತು. ಏನೋ ಆಗಬಾರದ್ದು ನಡೆದಿದೆ ಎಂದುಕೊಂಡ.

ತನ್ನ ಕಡೆಯವರಿಗೆಲ್ಲ ಆಹ್ವಾನ ಪತ್ರಿಕೆಯನ್ನು ಪೋಸ್ಟ್ ಮುಖಾಂತರವೇ ಕಳಿಸಬೇಕೆಂದುಕೊಂಡು ಸಂತೋಷನನ್ನು ಕರೆದ..... " ಈ ಕಾರ್ಡ್‌ಗಳನ್ನು ಪೋಸ್ಟ್ ಮಾಡಬೇಕು. ಕವರುಗಳ ಮೇಲೆ ಈ ಅಡ್ರೆಸ್‌ಗಳನ್ನು ತಪ್ಪಿಲ್ಲದೇ ಬರೆದು, ಸ್ಟ್ಯಾಂಪ್ ಹಾಕಿ ಪೋಸ್ಟ್ ಮಾಡು...." ಸಂತೋಷನಿಗೆ ಆ ಕೆಲಸವನ್ನು ವಹಿಸಿದ.

"ತಾತನ ಮನೆಯವರನ್ನೆಲ್ಲಾ ಕರೆದು ಬರಲು ನಾನು ಹೋಗ್ಲಾ?" ಕೇಳಿದ.

"ಅಧಿಕಪ್ರಸಂಗಿತನ ಬೇಡ. ಯಾರನ್ನೂ ಕರೆಯುಕ್ಕೆ ಯಾರೂ ಹೋಗೋದು ಬೇಡ. ಹೇಳಿದಷ್ಟನ್ನು ಕೇಳು." ಮಗನ ಮೇಲೆ ಸಿಡುಕಿದ.

"ಸ್ವತಃ ಬಂದು ಕರೆಯಲು ಆಗದಿರುಕ್ಕೆ ಕ್ಷಮೆ ಕೇಳುತ್ತೇನೆ. ನನ್ನ ಮಗಳ ವಿವಾಹಕ್ಕೆ, ದಯಮಾಡಿ ಬಂದು ಮದುಮಕ್ಕಳನ್ನು ಆಶೀರ್ವದಿಸಬೇಕು. ಉಡುಗೊರೆಗಳನ್ನು ತರಬಾರದಾಗಿ ವಿನಂತಿ." ಎಂಬ ಕಿರು ಪತ್ರವೊಂದನ್ನು ಪ್ರಿಂಟ್ ಮಾಡಿಸಿ, ಆಹ್ವಾನ ಪತ್ರಿಕೆಗಳಿಗೆ ಅಂಟಿಸಿದ್ದ. ಸಂತೋಷ ಬೇಸರಗೊಂಡ. ಈ ನೆವದಲ್ಲಾದರೂ ತಮ್ಮ ಹಳ್ಳಿಗೆ ಹೋಗಿ, ಹಿರಿಯರನ್ನು ಕಂಡು ಬರುವ ಆಸೆ ಇತ್ತು ಅವನಿಗೆ.

ತಾನೇ ಜವುಳಿ ಅಂಗಡಿಗೆ ಹೋಗಿ, ವಿದ್ಯಾಳಿಗೆ ಎರಡು ಭಾರೀ ಸೀರೆಗಳನ್ನು ಆಯ್ಕೆ ಮಾಡಿದ. ಹಾಗೇ ಮನೆಯವರಿಗೆಲ್ಲ ಸೀರೆ, ರವಿಕೆ ಬಟ್ಟೆ, ಶರ್ಟ್, ಪ್ಯಾಂಟ್‌ನ ಬಟ್ಟೆಗಳನ್ನು ಖರೀದಿಸಿದ. ಒಡವೆ ಅಂಗಡಿಗೆ ಹೋಗಿ ಅಗತ್ಯವಿದ್ದ ಬೆಳ್ಳಿಯ ಸಾಮಾನುಗಳನ್ನು ಕೊಂಡುಕೊಂಡ.

ಬೆಳ್ಳಿಯ ಸಾಮಾನುಗಳನ್ನು ವಿದ್ಯಾಳ ಕೈಗೆ ಕೊಟ್ಟ. "ಇದನ್ನೆಲ್ಲ ಜೋಪಾನವಾಗಿ ಪೆಟ್ಟಿಗೆಯೊಳಗಿಟ್ಟು ಬೀಗ ಹಾಕು. ಸೀರೆ ಬಟ್ಟೆಗಳನ್ನು ತಂದಿದೀನಿ. ತೆಗೆದಿಡು. ಹೊಲಿ ಯುವ ಬಟ್ಟೆಗಳನ್ನು ಹೊಲಿಯಲು ಹಾಕುವಂತೆ ಸಂತೋಷನಿಗೆ ಹೇಳು."

ಪ್ರೇಮಾ ಕೋಪಗೊಂಡಳು. "ಈಗ್ಲಾದ್ರೂ ಗಂಡ ತನಗೆ ಏನನ್ನೂ ಹೇಳುತ್ತಿಲ್ಲವಲ್ಲ. ನನ್ನ ಮೇಲೆ ಯಾಕಿಷ್ಟು ತಿರಸ್ಕಾರ? ಕೈಲಾಗದವಳೆಂದೇ ಅಥವಾ ತನಗೇನೂ

ತಿಳಿಯದು ಎಂದೇ...." ಆದರೂ ಮಗಳ ಮನಸ್ಸಿಗೆ ಬೇಸರವಾಗದಿರಲಿ ಎಂದು ಕೊಂಡು ಜವುಳಿಯ ಗಂಟನ್ನು ಬಿಚ್ಚಿದಳು.

"ಜವುಳಿ ಅಂಗಡಿಗಾದ್ರೂ ನಿನ್ನನ್ನು ಕರ್ಕೊಂಡು ಹೋಗ್ಬಾರ್ದಾಗಿತ್ತಾ. ಈ ಕಲರ್‌ಗಳೋ ದೇವರಿಗೇ ಪ್ರಿಯ. ಬಣ್ಣ, ಅಂಚು, ಸೆರಗು ಇದೆಲ್ಲಾ ಗಂಡಸ್ರಿಗ್ಹೇಗೆ ಗೊತ್ತಾಗುತ್ತೆ? ನೀನಾದ್ರೂ ನಿಮ್ಮಪ್ಪಂಗೆ ಹೇಳು."

"ಬೇಡಮ್ಮ. ಯಾವುದೋ ಒಂದು... ಏನಾದ್ರೂ ಹೇಳಿದ್ರೆ ಅಪ್ಪಂಗೆ ಕೋಪ ಬರುತ್ತೆ." ವಿದ್ಯಾ ಪೆಚ್ಚಾಗಿದ್ದರೂ ನುಡಿದಳು.

"ಅವರಿಗೆ ಯಾವತ್ತು ಕೋಪವಿಲ್ಲ.....! ವರ್ಷದಲ್ಲಿ ಮುನ್ನೂರೈವತ್ತು ದಿನ ಗಳಲ್ಲಿ ಕೋಪವಿಲ್ಲದೇ ಇರುವ ದಿನ ಯಾವುದು? ಈ ಸೀರೇನ ನೀನು ಉಟ್ಟರೆ, ಹಳ್ಳಿ ಹೆಂಗ್ಸಿನ ಥರ ಕಾಣ್ತೀಯ. ಅವರೆಲ್ಲಾ ಪಟ್ಟಣದೋರು, ನಗುಲ್ವೇ... ನಿಶ್ಚಿತಾ ರ್ಥಕ್ಕೆ ಬಂದಾಗ ಕೂಡ ಎಷ್ಟು ಚೆನ್ನಾಗಿರುವ ಸೀರೆಯನ್ನು ತಂದಿದಾರೆ..."

ವಿದ್ಯಾಳಿಗೂ ತಾಯಿಯ ಮಾತು ಸರಿ ಎನಿಸಿತು. ಆದರೆ ಅಪ್ಪನೊಡನೆ ಎಂದೂ ಸೀರೆ, ಬಟ್ಟೆಗಳ ಬಗ್ಗೆ ಮಾತನ್ನಾಡಿರಲಿಲ್ಲ... ಅಸಹಾಯಕಳಂತೆ ತಾಯಿಯ ಕಡೆ ನೋಡಿದಳು. ಚಿನ್ಮಯಿಗೆ ರೇಷ್ಮೆ ಸೀರೆ, ನಳಿನಿಗೆ ರೇಷ್ಮೆ ಲಂಗದ ಬಟ್ಟೆ, ಸಂತೋಷ, ಶ್ರೀಕರನಿಗೆ ಶರ್ಟ್, ಪ್ಯಾಂಟ್‌ನ ಬಟ್ಟೆಗಳು.... ತಾಯಿಗೆ ಏನನ್ನೂ ತಂದಿಲ್ಲವೆನ್ನುವುದನ್ನು ಗಮನಿಸಿದಳು.

"ಅಮ್ಮಾ.... ನಿನಗೆ ಅಂತ ಹೊಸ ಸೀರೇನೇ ತಂದಿಲ್ಲವಲ್ಲಮ್ಮ...." ಪ್ರೇಮ ಳಿಗೂ ಗೊತ್ತಾಗಿತ್ತು. ಮುಖ ಪೆಚ್ಚಾಗಿತ್ತು. "ಪರವಾಗಿಲ್ಲ ಬಿಡು. ನನ್ನ ಹತ್ರ ರೇಷ್ಮೆ ಸೀರೆಗಳಿವೆ. ಉಡದೇ ಹಾಗೇ ಮಡಿಸಿಟ್ಟಿದ್ದೀನಿ... ಅದೇ ಆಗುತ್ತೆ."

"ಇದು ಸರಿಯಲ್ಲ. ನಾನು ಅಪ್ಪನಿಗೆ ಹೇಳ್ತೀನಿ. ಮನೇಲಿ ನಡೆಯುತ್ತಿರುವ ಸಮಾರಂಭವೇ ಮೊದಲ್ನೇದು. ನಿನಗೊಂದು ಒಳ್ಳೇ ಸೀರೆ ತರಬೇಕು ಅಂತ ಅಪ್ಪನಿಗೆ ತಿಳಿಯಬೇಡ್ವಾ.....? ನಾನು ಈಗ್ಲೇ ಕೇಳ್ತೀನಿ." ವಿದ್ಯಾ ಎದ್ದಳು.

"ಬಿಡು ತಾಯೀ.... ಅದಕ್ಯಾಕೆ ಚರ್ಚೆ? ತರದಿದ್ದರೇನಾಯ್ತು? ನಡೆ ಯುವ ಕೆಲಸ ನಿಂತು ಹೋಗುಲ್ಲ. ಆದರೆ, ಬೀಗರಿಗೆ ಕೊಡೋಕೆ ಏನೂ ತಂದಿಲ್ಲ. ಅವರಿಗಾದ್ರೂ ಕೊಡಬೇಡ್ವೇ. ಹಾಗೇ ಭವಾನಿಗೆ, ಶಾರದಮ್ಮಂಗೆ ಸೀರೆ ತಂದಿದ್ರೆ ಚೆನ್ನಾಗಿತ್ತು...."

ವಿದ್ಯಾ ಕೈ ಹೊಸಕುತ್ತಾ ಅಪ್ಪನ ಎದುರಿಗೆ ಬಂದು ನಿಂತಳು. "ಏನ್ಬೇಕಾಗಿತ್ತು?" ತಲೆ ಎತ್ತದೇ ಕೇಳಿದ.

"ಇನ್ನೊಂದೆರಡ್ಮೂರು ಸೀರೆಗಳು ಬೇಕಂತೆ. ಅಮ್ಮ ಹೇಳಿದ್ಲು....."

"ಇನ್ನೆಷ್ಟು ಸೀರೆ! ಯಾರ್ಗಂತೆ?"

"ಶಾರದಮ್ನೋರ್ಗೊಂದು, ಭವಾನಿ ಚಿಕ್ಕಮ್ಮಗೊಂದು, ಹಾಗೇ.... ನನ್ನ ಅತ್ತೆ

ಆಗೋರ್ಗೆ ಒಂದು..." ಭಟ್ಟ ತಲೆ ಎತ್ತಿ ಮಗಳ ಕಡೆ ನೋಡಿದ. ಅವಳು ತಲೆ ತಗ್ಗಿಸಿದಳು.

"ಹೂಂ. ತರಿಸಿದ್ರಾಯ್ತು. ಅರ್ಜೆಂಟೇನಿಲ್ಲವಲ್ಲ...."

"ಅಪ್ಪಾ..... ಹಾಗೇ ಅಮ್ಮಂಗೆ.... ಒಂದು ಹೊಸ ಸೀರೆ...."

"ಅವಳಿಗೆ ಈಗ್ಯಾಕೆ ಸೀರೆ? ಪೆಟ್ಟಿಗೇಲಿರೋದನ್ನೇ ತೆಗೆದು ಉಡೋದಿಲ್ಲ. ಮದ್ವೆ ಆಗ್ತಾ ಇರೋದು ನಿನಗೆ.... ನಿಮ್ಮಮ್ಮಂಗ್ಯಾಕೆ ಈಗ ಸೀರೆ.....?"

"ಎಲ್ರಿಗೂ ಹೊಸ ಬಟ್ಟೇನ ತಂದಿದೀರಲ್ಲಪ್ಪಾ....?"

"ನಂಗೂ ತಗೊಂಡಿಲ್ಲ. ಇನ್ನೇನಾದ್ರೂ ಹೇಳೋದಿದ್ರೆ ಬೇಗ ಹೇಳಿ ಮುಗಿಸು."

"ನೀವೂ ಹೊಸ ಬಟ್ಟೆ ಹೊಲಿಸ್ಕೊಳ್ಳಿ ಅಪ್ಪಾ...."

"ಬೇಕಾದಾಗ ನಾನೇ ಹೊಲಿಸ್ಕೊಳ್ತೀನಿ. ನೀನು ಹೇಳುವ ಅವಶ್ಯಕತೆ ಇಲ್ಲ." ಅವಳ ಮುಖಕ್ಕೆ ಹೊಡೆದಂತಾಗಿತ್ತು. ಕೆಂಪು ಮುಖ ಮಾಡಿಕೊಂಡು ಹೊರಬಂದಳು.

"ಆಯ್ತ ಮಂಗಳಾರತಿ? ದೊಡ್ಡದಾಗಿ ಕೇಳ್ತೀನೀಂತ ಹೋಗಿದ್ದೆ." ಚಿನ್ಮಯಿ ಹಂಗಿಸಿದಳು.

"ನೀನು ಸುಮ್ನಿರು. ನಿನ್ನ ಮದುವೇಲಿ ನಿನಗೂ ಇದೇ ಗತಿ."

"ನಾನು ಮದುವೇನೇ ಮಾಡಿಕೊಳ್ಳಲ್ಲ. ಹೀಗೇ ಇದ್ಬಿಡ್ತೀನಿ."

"ಹೂಂ ಇದ್ಬಿಡ್ತೀಯ.... ಇದ್ಬಿಡ್ತೀಯ... ನಾನೂ ನೋಡ್ತೀನಿ." ಅವಳೂ ಅಣಕಿಸಿದಳು.

"ಚೆನ್ನು ಸುಮ್ನಿರ್ಬಾರ್ದೇನೇ? ಅವಳನ್ಯಾಕೆ ರೇಗಿಸ್ತೀಯ? ಇನ್ನೆಷ್ಟು ದಿನ ಈ ಮನೇಲಿರ್ತಾಳೆ? ಇನ್ನು ಎಂಟು ದಿನ ಅಷ್ಟೇ."

"ಪರೀಕ್ಷೆ ಮುಗಿಸ್ಕೊಂಡೇ ಅವಳು ಗಂಡನ ಮನೆಗೆ ಹೋಗೋದು.... ಅಲ್ವೇನೇ ಅಕ್ಕಾ?"

"ನಾನು ಓದೇ ಇಲ್ಲ. ಫೇಲಾಗ್ತೀನಿ ಅಷ್ಟೇ....."

"ನೀನೊಬ್ಬೇ ಅಲ್ಲ. ನಾವುಗಳೂ ಫೇಲಾಗ್ತೀವಿ ಈ ಸಾರಿ." ನಳಿನಿ ನುಡಿದಳು.

"ಥೂ ಅದೇನು ಫೇಲು ಫೇಲು ಅಂತ ಮಾತನ್ನಾಡ್ತಿದೀರಿ...."

"ಮತ್ತಿನ್ನೇನು! ನಮ್ಮನ್ನೆಲ್ಲ ಓದ್ಕೊಳ್ಳೋಕೆ ಬಿಟ್ಟಿದ್ರೆ ತಾನೇ ಈ ಅಕ್ಕಾ?"

"ಹಾಕ್ತೀನಿ ನೋಡು. ನಾನೇನೇ ಮಾಡ್ದೇ.....?"

"ನಿಮ್ಮ ಭಾವ ಹೀಗಂದ್ರು, ನಿಮ್ಮ ಭಾವ ಹಾಗಂದ್ರು.. ನನ್ನ ಜಡೆ ಚೆನ್ನಾಗಿದೆ ಅಂತಂದ್ರು, ನೋಡು ಈ ಫೋಟೋನ ಅವರೇ ತೆಗೆದದ್ದು. ಈ ಕಾಗ್ದ ನೋಡು ಅವರೇ ಬರೆದದ್ದು. ಅವರು ನನ್ನನ್ನು ತುಂಬಾ ಮೆಚ್ಚಿದ್ದಾರೆ, ತುಂಬಾ ಪ್ರೀತಿಸ್ತಾರೆ..... ಅಂತ ನೀನೇ ತಾನೇ ಬಂದೂ ಬಂದೂ ಹೇಳ್ತಿದ್ದದ್ದು...." ವಿದ್ಯಾ ನಾಚಿಕೆಯಿಂದ

ಂಗು ರಂಗಾದಳು. ತಾಯಿ ಮುಗುಳ್ನಕ್ಕಳು.

"ನೋಡಮ್ಮ ಇವಳನ್ನ.... ಬರೀ ಸುಳ್ಳು.... ನಾನು ಹಾಗೆಲ್ಲಾ ಹೇಳಿಲ್ಲ...."

"ಸುಳ್ಳೇನೇ...ನೀನೇ ಹೇಳು ಚೆನ್ನು...."

"ನೀನೇನೇ ನನ್ನನ್ನು ಚೆನ್ನು ಅಂತ ಕರೆಯೋದು. ಅಕ್ಕಾ ಅಂತ ಕರೆ ಯೋಕಾಗುಲ್ವಾ?" ಚಿನ್ಮಯೀ ತಂಗಿಯ ತಲೆಯ ಮೇಲೆ ಮೊಟಕಿದಳು. ಪ್ರೇಮಾ ುಕ್ಕಳ ಹುಸಿ ಜಗಳವನ್ನೇ ನೋಡಿದಳು.

* * *

"ದರ್ಜಿ ಅಂಗಡಿಗೆ ಹೋಗಿ, ಈ ಬಟ್ಟೆಗಳನ್ನೆಲ್ಲಾ ಕೊಟ್ಟಿಡು..... ಅಳತೆಗೇಂತ ಎಲ್ಲಾರ ಬಟ್ಟೆಗಳನ್ನು ಇಟ್ಟಿದೀನಿ.... ನೋಡಿ ಸರಿಯಾಗಿ ಹೊಲಿಬೇಕಂತೆ ಅಂತ ಹೇಳು....."

"ಇದೇನೇ ಇಷ್ಟೊಂದು..... ಅವನ ತಲೆ ಕೆಟ್ಟು ಹೋಗುತ್ತೆ ಅಷ್ಟೇ... ನನಗಂತೂ ಖಂಡಿತಾ ಗೊತ್ತಾಗುಲ್ಲ...." ಸಂತೋಷ ಗಲಿಬಿಲಿಯಿಂದ ತಲೆಯಾಡಿಸಿದ.

"ಸರಿ ಹಾಗಾದ್ರೆ ದರ್ಜಿನ ಮನೆಗೆ ಕರಕೊಂಡ್ಬಾ.... ನಾನು ಸರಿಯಾಗಿ, ಯಾವ ಯಾವುದು ಯಾರ್‍ಯಾರಿಗೆ ಅಂತ ಹೇಳ್ತೀನಿ."

"ಅದೇ ಸರಿ. ಈಗ್ಲೇ ಕರ್‍ಕೊಂಡ್ಬರ್ತೀನಿ." ಸಂತೋಷ ಸಂಭ್ರಮದಿಂದ ಹೊರಟ. ಪ್ರೇಮಾ ಪ್ರಶಾಂತನನ್ನು ನೆನೆಸಿಕೊಂಡಳು.

"ನಮ್ಮ ಮನೇಲಿ ನಡೆಯುತ್ತಿರುವ ಮೊದಲ ಕಾರ್ಯಕ್ರಮ. ಮನೆಗೆ ಹಿರಿ ಮಗ ಅಂತ ಅನ್ನಿಸ್ಕೊಂಡವನು ಇಲ್ಲಿಲ್ಲ. ಎಲ್ಲಿದಾನೋ ಹೇಗಿದಾನೋ..... ಈಗ್ಲಾದ್ರೂ ಅವನ ಮದುವೆಗೆ ಬಂದ್ರೆ ಎಲ್ಲಾ ಸರಿ ಹೋಗುತ್ತೆ. ನಿಮ್ಮಪ್ಪನಂತೆ ಅವನೂ ಮನೆ ಬಿಟ್ಟು ಹೋದವನು ಬಂದೇ ಇಲ್ಲ. ಕಡೇ ಪಕ್ಷ ನನ್ನ ಬಗ್ಗೆನಾದ್ರೂ ಯೋಚಿಸ್ಬೇಡ್ವಾ.. ಅವನು....?" ಧ್ವನಿ ಗದ್ಗದವಾಗಿತ್ತು. "ಹೋಗ್ಲೀ....ಎಲ್ಲಿದಾನೆ ಅಂತ ಗೊತ್ತಾಗಿದ್ರೆ ನಾನೇ ಅವನ್ಗೆ ಕಾಗದ ಬರೀತಿದ್ದೆ... ಗೌತಮ ಕೂಡ ಸುಮ್ಮನಾಗಿಬಿಟ್ಟ..... ದುಡ್ಡು ಕಳಿಸ್ಬಿಟ್ರೆ ನನ್ನ ಋಣ ತೀರಿಹೋಯ್ತು ಅಂತ ತಿಳ್ಕೊಂಡಿದಾನಾ? ಈ ಜನ್ಮದಲ್ಲಿ ತಾಯಿ ಋಣ ತೀರಿಸುಕ್ಕಾಗುಲ್ಲ ಅವನು." ಪ್ರೇಮಾ ಕಣ್ಣೀರನ್ನು ತುಂಬಿಕೊಂಡಳು.

"ಹಾಗೆಲ್ಲಾ ಯಾಕಮ್ಮ ಮಾತಾಡ್ತೀಯ. ಗೌತಮ ಮರೆತಿರಬಹದು. ಮತ್ತೆ ಜ್ಞಾಪಿಸೋಣ. ನನ್ನ ಮದುವೆ ಅಂತ ತಿಳಿದ್ರೆ ಖಂಡಿತಾ ಬಂದೇ ಬರ್ತಾನೆ."

"ಅವನನ್ನ ನೋಡ್ಬೇಕೂಂತ ತುಂಬಾ ಅನ್ನಿಸ್ತಿದೆ ಕಣೆ ವಿದ್ಯಾ.... ಈಗ್ಲೇ ಗೌತಮ್ಗೊಂದು ಕಾಗದ ಬರೆದು ಹಾಕು.... ಅಂದ್ಹಾಗೇ ನಿಮ್ಮಪ್ಪ ಅವನಿಗೊಂದು ಪತ್ರ ಬರೆದು ನನ್ಹತ್ರ ಸಹಿ ಹಾಕಿಸ್ಕೊಂಡಿದ್ರು.. ಅದಕ್ಕೂ ಉತ್ತರ ಬರೀಲಿಲ್ಲ. ಅವನು...."

"ಅಪ್ಪ ಏನ್ಬರೆದಿದ್ರೋ.... ಅವನ ಕೋಪ ಹೆಚ್ಚಿರಬೇಕು. ಅದಕ್ಕೆ ಸುಮ್ಮನಾಗಿ ದಾನೆ. ಏನಂತ ಬರೆದಿದಾರೆ ಅಂತ ಓದ್ಬಾರ್ದಾಗಿತ್ತಾ ನೀನು....?" ಆಕ್ಷೇಪಿಸಿದಳು.

"ಅವರೇ ಹೇಳಬಹುದಾಗಿತ್ತು, ಹೀಗೆ ಬರೆದಿದೀನೀಂತ."

"ಅಪ್ಪನ ಸ್ವಭಾವ ನಿಂಗೊತ್ತಿಲ್ವಾ...? ಯಾರೋ ಬಂದ್ರು, ಅಪ್ಪಾನೇ ಅಂತ ಕಾಣುತ್ತೆ." ಇಬ್ಬರೂ ಮಾತು ನಿಲ್ಲಿಸಿದರು.

* * *

ಸಂತೋಷ ದರ್ಜಿಯನ್ನು ಕರಕೊಂಡು ಬಂದಿದ್ದ. ದರ್ಜಿ ಎಲ್ಲರ ಅಳತೆಗಳನ್ನು ತನ್ನ ಪುಸ್ತಕದಲ್ಲಿ ಬರೆದುಕೊಂಡು ಬಟ್ಟೆಗಳನ್ನು ಸರಿಯಾಗಿ ಗುರುತಿಸಿಟ್ಟುಕೊಂಡ.

"ಖಂಡೋಜಿ.... ನಮ್ಮ ಮಗಳ ಮದುವೆಗೆ ಖಂಡಿತಾ ಬರಬೇಕು." ಪ್ರೇಮಾ ಆಮಂತ್ರಣ ಪತ್ರಿಕೆಯನ್ನು ಕೊಡ್ತಿಸಿ ಹೇಳಿದಳು.

"ಮದುವೆ ಹೊತ್ತಿಗೆ ಅಷ್ಟು ಬಟ್ಟೆಗಳನ್ನು ಹೊಲಿದು ತಂದ್ಕೊಡ್ಬೇಕು. ಮರೀಬಾರ್ದು."

"ಆಯ್ತು ತಾಯಿ. ಮೊದ್ಲು ನಿಮ್ಮ ಮನೆಯ ಬಟ್ಟೆಗಳನ್ನು ಹೊಲಿದ್ಮೇಲೆ ಮಿಕ್ಕ ಕೆಲಸ."

"ಎಲ್ರಿಗೂ ಹೀಗೇ ಹೇಳ್ತೀರಿ ಅಲ್ವಾ ಖಂಡೋಜಿ...." ಸಂತೋಷ ತಮಾಷೆ ಮಾಡಿದ.

"ಹಾ.... ಹಾಗೆ ಉಂಟಾ? ಎಷ್ಟೊಂದು ವರ್ಷಗಳಿಂದ ನಿಮ್ಮನೆ ಬಟ್ಟೆಗಳನ್ನು ಹೊಲಿದು ಕೊಟ್ಟಿದೀನಿ. ತಮಾಷೆ ಮಾಡ್ತೀರಿ...."

"ಆವಾಗಿನ ಮಾತು ಬೇರೆ. ಈಗ ಸಮಯಕ್ಕೆ ಸರಿಯಾಗಿ ತಂದು ಕೊಡ್ಬೇಕು ಅಷ್ಟೇ..... ಬನ್ನಿ ನಿಮ್ಮನ್ನು ಬಿಟ್ಟು ಬರ್ತೀನಿ."

"ತಾಯೀ, ನಿಮ್ದು ಹಾಗೂ ಸಾಹೇಬ್ರದ್ದು ಬಟ್ಟೆ ಕೊಡ್ಲಿಲ್ಲ. ಅಳತೆ ಕೊಡ್ಲಿಲ್ಲ." ಜ್ಞಾಪಿಸುವವನಂತೆ, ದರ್ಜಿ ನಿಂತು ಹೇಳಿದಾಗ, ತಾಯಿ, ಮಗಳು ಮುಖ ಮುಖ ನೋಡಿಕೊಂಡರು.... ಸಂತೋಷ ತಾಯಿಯ ಸಂಜ್ಞೆಯನ್ನು ಕಂಡ.

"ಅದನ್ನ ಆಮೇಲೆ ನಾನೇ ತಂದು ಕೊಡ್ತೀನಿ. ಇನ್ನೊಂದಿಷ್ಟು ಬಟ್ಟೆಗಳು ಬರೋದಿವೆ. ಮೊದಲು ಇದನ್ನು ಮುಗಿಸಿ ಬಿಡಿ."

"ಆಯ್ತು ಕಣಪ್ಪಾ...." ಖಂಡೋಜಿ ಬಟ್ಟೆಯ ಗಂಟನ್ನು ಎತ್ತಿಕೊಂಡ. ಸಂತೋಷ ಅವನನ್ನು ಬಿಟ್ಟು ಬರಲು ಅವನೊಂದಿಗೆ ಹೊರಟ.

"ನೋಡು ನಿಮ್ಮಪ್ಪ ಎಂಥಾ ಆಭಾಸ ಮಾಡ್ತಾರೆ. ಮಗಳ ಮದುವೆ ಅಂದ್ರೆ, ಅಷ್ಟು ಸಂಭ್ರಮ ಬೇಡ್ವಾ! ಯಾರ್ಗಾದ್ರೂ ತಿಳಿದ್ರೆ ನಗುಲ್ವಾ!"

"ನೋಡೋಣ. ಇನ್ನೊಂದು ಸ್ವಲ್ಪ ಬಟ್ಟೆಗಳನ್ನು ತರೋದು ಬಾಕಿ ಇದೆಯಲ್ಲ. ಆಗ ಮತ್ತೆ ಹೇಳೋಣ."

"ಏನೂ ಬೇಡ. ಹೇಳಿ ತರಿಸ್ಕೊಂಡ್ರೆ ಏನು ಚೆನ್ನ? ಮನಸ್ನಲ್ಲಿ ಇಲ್ಲದ

ಮೋಹ ತಿಣುಕಿದ್ರೆ ಬಂದೀತೆ? ಅಂತ.... ಹೃದಯದಲ್ಲಿ ಮೋಹ, ವಾತ್ಸಲ್ಯ, ಪ್ರೀತಿ, ವಿಶ್ವಾಸ ಇಲ್ಲದೋರು ಅವರು.... ಅವರು ತಂದ್ಕೊಡೋದೂ ಬೇಡ. ನಾನು ಉಡೋದೂ ಬೇಡ..."

"ಯಾಕಮ್ಮಾ ನೀನೂ ಹೀಗೆ ಕಟುವಾಗಿ ಮಾತಾಡ್ತೀಯ?"

"ಮತ್ತಿನ್ನೇನು! ಮದುವೆಯಾಗಿ ಇಪ್ಪತ್ತೈದು ವರ್ಷಗಳ ಮೇಲಾಯ್ತು. ಒಂದು ದಿನವಾದ್ರೂ ನನ್ನ ಆಸೆ ಏನು? ನನ್ನ ಮನಸ್ಸಲ್ಲೇನಿದೆ ಅಂತ ಅವರಿಗೆ ತಿಳಿಯಲಿಲ್ಲ.... ಈಗ ನನಗೆ ಯಾವ ಆಸೆಯೂ ಇಲ್ಲ. ಉಡೋ ತೊಡೋ ವಯಸ್ನಲ್ಲಿ ವಿರಾಗಿಣಿ ಥರ ಇಟ್ಟರು ನನ್ನನ್ನ. ಈಗ್ಯಾಕೆ ನನಗೆ ಅವೆಲ್ಲ...."

"ಅಮ್ಮಾ ಇಂಥ ಮಾತುಗಳನ್ನಾಡಿದ್ರೆ ನಮಗೂ ಬೇಸರವಾಗುತ್ತೆ..." ವಿದ್ಯಾ ವ್ಯಥೆಯಿಂದ ನುಡಿದಳು.

"ಎಂದು ನಿನ್ನೆದುರಿಗೆ ಇದನ್ನೆಲ್ಲ ಆಡಿದೀನಿ? ಈಗ ನೀನೂ ದೊಡ್ಡವಳಾಗಿ ದೀಯ... ಮದುವೆಯಾಗಿ, ಗಂಡನ ಮನೆಗೆ ಹೊರಟು ಹೋದ್ಮೇಲೆ, ನಿನ್ನನ್ನು ಕರೆದು ಇದನ್ನೆಲ್ಲ ಆಡ್ತೀನಾ? ನಿನಗೂ ಗೊತ್ತಿರಲಿ. ನಿಮ್ಮಮ್ಮ ಎಷ್ಟು ಸುಖವಾಗಿ ದ್ದಳು ಅಂತ...." ವಿದ್ಯಾ ತಾಯಿಯ ಭುಜಕ್ಕೆ ತಲೆ ಕೊಟ್ಟು ಮೌನವಾಗಿ ಕಣ್ಣೀರು ಸುರಿಸಿದಳು.

* * *

ಶಾಸ್ತ್ರಿ ತಾನು ತಿಳಿಸಿದ್ದಂತೆ, ತನಗೆ ಪರಿಚಯವಿದ್ದ ಇಬ್ಬರು ಪುರೋಹಿತರನ್ನು ಕಳಿಸಿಕೊಟ್ಟಿದ್ದ. ಸೀದಾ ಭಟ್ಟನ ಮನೆಗೆ ಬಂದಿಳಿದುಕೊಂಡರು ಅವರಿಬ್ಬರು.

"ಶಾಸ್ತ್ರಿ ಎಲ್ಲಾ ಹೇಳಿರಬಹುದು ಅಲ್ವಾ? ಆದಷ್ಟು ಕಲಾಪಗಳು ಕಡಿಮೆಯಿರಲಿ. ಯಾರಿಗೆ ನೋಡುವ ಆಸಕ್ತಿ ಇರುತ್ತೆ?" ಭಟ್ಟ ಹೇಳಿದ.

"ಹಾಗೆನ್ನಬೇಡಿ ಭಟ್ಟರೇ... ಒಂದು ವೇಳೆ ಗಂಡಿನವರಿಗೆ ಯಾವುದೂ ಕಡಿಮೆ ಆಗಬಾರದು ಅಂತ ಇದ್ದರೆ ಏನ್ಮಾಡ್ತೀರಿ?" ಪರಸ್ಪರ ಮುಖವನ್ನು ನೋಡಿ ಕೊಂಡರು.

"ಅವರಿಗೇನ್ಬೇಕೋ ಅದನ್ನೆಲ್ಲ ಧಾರಾಳವಾಗಿ ಮಾಡಿ, ಯಾರು ಬೇಡಾಂದ್ರು! ನನಗೆ ನಂಬಿಕೆ ಇಲ್ಲ. ನನ್ನನ್ನು ಹೆಚ್ಚು ಎಳೆಯಬೇಡಿ ಅಂತಂದೆ..." ಭಟ್ಟ ಗಡುಸಾಗಿ ನುಡಿದ.

"ಆಯ್ತು ದೇವ್ರು. ನಿಮಗ್ಹೇಗೆ ಬೇಕೋ ಹಾಗೇ ಆಗಲಿ... ನೀವು ತಾನೇ ದಕ್ಷಿಣೆ, ಸಂಭಾವನೆಯನ್ನು ಕೊಡೋರು. ಆದರೆ ಆಮೇಲೆ ಆಕ್ಷೇಪಣೆ ಬರಬಾರದು."

"ಅವ್ರು ಅಂಥೋರಲ್ಲ. ನೀವು ಹೇಗೆ ಹೇಳಿದ್ರೆ ಹಾಗೇ ಕೇಳ್ತಾರೆ....."

"ಸರಿ ನೀವು ಹೇಳಿದ್ಮೇಲೆ ಆಯ್ತು. ಬೆಳಗ್ಗೆ ಎಷ್ಟು ಹೊತ್ತಿಗೆ ಛತ್ರಕ್ಕೆ ಹೋಗೋದು?"

"ಬೆಳಗ್ಗೆ ಸ್ನಾನ ಇತ್ಯಾದಿ ಇಲ್ಲಿ ಮುಗಿಸಿ ಹೋಗೋಣ. ಅಲ್ಲಿ ಅಡುಗೆಗೆ ಎಲ್ಲಾ ಸಿದ್ಧತೆ ಮಾಡಿಯಾಗಿದೆ. ತಿಂಡಿ, ಊಟ ಎಲ್ಲಾ ಅಲ್ಲೇ. ಸಾಯಂಕಾಲದ ಹೊತ್ತಿಗೆ ಹುಡುಗನ ಕಡೆಯವರು ಬರ್ತಾರೆ. ಮಾರನೆಯ ದಿನ ಲಗ್ನ ಅಷ್ಟೇ...."

"ನಿಮ್ಮ ಕಡೆಯವರು ಊರ್ನಿಂದ ಬರೋರೆಲ್ಲಾ ಯಾವಾಗ ಬರ್ತಾರೆ?"

"ಸರಿಯಾಗಿ ಗೊತ್ತಿಲ್ಲ. ಆಮಂತ್ರಣ ಕೊಟ್ಟಿದೀನಿ. ಅವರ ಅನುಕೂಲ ಇದ್ದ ಹಾಗೇ ಬರ್ತಾರೆ..." ಇಬ್ಬರೂ ಮುಖ ಮುಖ ನೋಡಿಕೊಂಡರು. ಹಿರಿಯರು ಯಾರಾದರೂ ಇದ್ದಿದ್ದರೆ ಚೆನ್ನಾಗಿರ್ತಿತ್ತೆನ್ನಿಸಿತ್ತು. ಇವರಿಗೆ ಶಾಸ್ತ್ರ, ಸಂಪ್ರದಾಯ, ಪದ್ಧತಿ ಒಂದೂ ತಿಳಿಯದು. ಜತೆಗೆ ಬೇಕಾಗಿಯೂ ಇಲ್ಲ. ಈವಿಷಯವನ್ನು ಶಾಸ್ತ್ರಿಗಳು ಸೂಕ್ಷ್ಮವಾಗಿ ತಿಳಿಸಿದ್ದರು. ನೋಡೋಣ ಬೆಳಗ್ಗೆ ಹಳ್ಳಿಯಿಂದ ಅವರ ಕಡೆಯ ಹಿರಿಯರು ಬಂದು ಹೀಗೆ ಮಾಡಿ, ಹಾಗೆ ಮಾಡಬೇಡಿ ಅಂತ ಹೇಳಿದರೆ, ಅವರ ಮಾತನ್ನಾದರೂ ಕೇಳಿಯಾರು ಎಂದುಕೊಂಡರು.

"ಬೆಳಗ್ಗೆ ತಿಂಡಿಯ ಹೊತ್ತಿಗೆ ಛತ್ರಕ್ಕೆ ಹೋಗಬೇಕು. ಎಲ್ಲಾ ರೆಡಿ ಮಾಡಿದೀರಿ ತಾನೇ.... ಬೇಗ ಏಳಬೇಕು. ಎಲ್ಲಾ ಮಲಕ್ಕೊಳ್ಳಿ" ಎಂದು ಹೇಳಿ ಹೆಂಡತಿಯ ರೂಮ್‌ಗೆ ಬಂದ. ಅವಳು ಏನೋ ಬಟ್ಟೆಗಳನ್ನು ಸೂಟ್‌ಕೇಸ್‌ಗಳಿಗೆ ತುಂಬಿಡುತ್ತಿದ್ದಳು.

"ಛತ್ರಕ್ಕೆ ಏನೇನು ತಗೊಂಡು ಹೋಗ್ಬೇಕೋ ಅವನ್ನೆಲ್ಲ ಒಂದು ಕಡೆ ಸರಿಯಾಗಿ ತೆಗೆದಿಡುವುದು ನಿನ್ನ ಕೆಲಸ. ಯಾವುದನ್ನೂ ಮರೆಯಬಾರದು. ಮತ್ತೆ ಮತ್ತೆ ಬರುಕ್ಕಾಗಲ್ಲ.... ತಿಳೀತಾ ನಾನು ಹೇಳಿದ್ದು."

"ಹೂಂ ಎಲ್ಲಾ ಜೋಡಿಸಿಟ್ಟಾಗಿದೆ..... ಇನ್ನೊಂದ್ಮಾತು..... ಪ್ರಶಾಂತಂಗೆ ಕಾಗ್ದ ಬರೆದಿದ್ರಲ್ಲ. ಅವ್ನಿಂದ ಉತ್ತರ ಬಂತಾ! ಆ ಕಾಗ್ದ ನೋಡಿದ್ಕೂಡ್ಲೇ ಬರ್ತಾನೆ ಅಂತಿದ್ರಲ್ಲ.... ಮದ್ವೆಗಾದ್ರೂ ಬರ್ತಾನೆ ತಾನೇ....?"

"ಇನ್ನು ಅವನ ಹಂಬಲ ಬಿಡು..... ಅವನಿಗೆ ಈಗ ನೀನೂ ಬೇಡ...."

"ಹಾಗ್ಯಾಕ್ಹೇಳ್ತೀರಿ? ಏನು ಬರೆದಿದ್ರೆ ಆ ಪತ್ರದಲ್ಲಿ?"

"ಈಗ ಅದನ್ನೆಲ್ಲ ಆಡೂಕೆ ಸಮಯವಿಲ್ಲ. ಸಮಯ ಬಂದಾಗ ಹೇಳ್ತೀನಿ." ಎಂದು ಹೇಳಿ ಹೊರ ಬಂದುಬಿಟ್ಟ...' ಪ್ರಶಾಂತ ಈಗ ಏನು ಮಾಡಿದ..." ಎಂದು ಚಿಂತಿಸತೊಡಗಿದಳು. ರಾತ್ರಿಯನ್ನು ಹೊರಳಾಡಿ ಕಳೆದಳು.

ಬೆಳಗಾಗುತ್ತಿದ್ದಂತೆಯೇ ಭವಾನಿ ಗೌತಮನೊಂದಿಗೆ ಬಂದಿಳಿದಾಗ, ಪ್ರೇಮಳಿಗೆ ಬಲ ಸಿಕ್ಕಂತಾಗಿತ್ತು. "ಸದ್ಯ ನೀನಾದ್ರೂ ಬಂದ್ಯಲ್ಲಾ.... ಈಗ ಮನೆಗೆ ಕಳೆ ಕಟ್ಟಿತು.... ಪ್ರಸಾದು ಬರಲಿಲ್ವಾ?"

"ನಾನು ಹೆಣ್ಣಿನ ಕಡೆಯವಳಾಗಿ ಬಂದಿದೀನಿ. ಅವರು ಗಂಡಿನ ಕಡೆಯವ ರಾಗಿ ಬರ್ತಾರೆ. ಗೌತಮ ನನ್ನ ಜತೆಗೆ; ನವೀನ, ಸುಹಾಸ ಅವರ ಜತೆಗೆ....."

"ನಾನು ದಿನೇಶನೊಂದಿಗೆ ಬಂದಿದ್ರೆ ಚೆನ್ನಾಗಿತ್ತು. ಗಂಡಿನ ಕಡೆಯವರಾಗಿ

ಬಂದ್ರೆ ಕೂತಲ್ಲೇ ಉಪಚಾರ ಸಿಗುತ್ತೆ.... ಅದೇ ಹೆಣ್ಣೋರಾದ್ರೆ.... ಚಾಕರಿ ಮಾಡ ಬೇಕಾಗುತ್ತೆ...."

"ಯಾರಿಗೂ ಹೆಚ್ಚಿಗೆ ಕೆಲಸವಿಲ್ಲ. ಎಲ್ಲಾ ಕಾಂಟ್ರಾಕ್ಟ್ ಕೊಟ್ಟು ಬಿಟ್ಟಿದೀವಿ. ನಿಮಗೂ ಎಲ್ಲಾ ಕೂತಲ್ಲೇ ಉಪಚಾರ ನಡೆಯುತ್ತೆ. ಯೋಚ್ನೇ ಮಾಡ್ಬೇಡ." ಸಂತೋಷ ನೆಂದ.

"ಎಲ್ಲಿ ಮದುಮಗಳು? ಇನ್ನೂ ಎದ್ದಿಲ್ವಾ? ನನ್ನ ಧ್ವನಿ ಕೇಳಿಯೂ ಎದ್ದಿಲ್ಲ ಅಂದ್ರೆ, ಅದು ಸುಳ್ಳು ನಿದ್ದೇನೇ. ದಿನೇಶ ಬಂದಿದ್ರೆ ಚಂಗ್ ಅಂತ ಎದ್ದು ಹಾರಿ ಬಂದಿರೋಳು..."

"ರಾತ್ರಿ ತುಂಬಾ ಹೊತ್ತಿನ ತನಕ, ಏನೇನೋ ಕೆಲಸಗಳು ಇದ್ದವು. ಮಲಗಿದ್ದೇ ತಡ. ನಿಧಾನವಾಗಿ ಎಬ್ಬಿಸಿದ್ರಾಯ್ತು ಅಂತ ನಾನೇ ಸುಮ್ಮನಿದ್ದೆ. ಇನ್ನು ನಾಳೆಯಿಂದ ಅವಳು ಅವರ ಮನೆಗೆ ಸೇರಿ ಬಿಡ್ತಾಳೆ.... ಆಮೇಲೆ ತವರಿಗೆ ದೂರವಾಗಿ ಬಿಡ್ತಾಳೆ.....

"ನಾವ್ಗಳೂ ಅಷ್ಟೇ ತಾನೇ.... ಮದ್ವೆ ಆದ್ಮೇಲೆ ತವರಿಗೆ ದೂರವಾಗ್ಬಿಟ್ವೆವು.... ಸದಾ ಈ ಸಂಸಾರದ ಯೋಚನೆಯೇ ಆಗಿಹೋಯ್ತು... ಅಪ್ಪ ಅಮ್ಮನ್ನ ಮರೆತೇ ಬಿಟ್ವೆವು.... ನಮ್ಮ ಮಕ್ಕಳೂ ಹಾಗೇ.... ನೀನು ಪುಣ್ಯವಂತೆ... ನಿನಗೆ ಹೆಣ್ಣು ಮಕ್ಕಳಿಲ್ಲ.... ಈ ಸಂಕಟವೂ ಇಲ್ಲ."

"ನಾನ್ಹೋಗಿ ಅವ್ಳನ್ನ ಎಬ್ಬಿಸ್ತೀನಿ. ನಾನು ಬಂದ್ರೂ ಅವಳಿನ್ನೂ ಮಲಗಿರೋಣ ಅಂತ ಅಂದ್ರೇನು?" ಗೌತಮ ಅವಳನ್ನು ಎಬ್ಬಿಸಲು ಹೋದ.....

* * *

ಅಧ್ಯಾಯ – ಇಪ್ಪತ್ತೊಂದು

ಮದುವೆ ಮನೆಯಲ್ಲಿ ರಂಪ

ಒಂಬತ್ತು ಗಂಟೆಯ ಹೊತ್ತಿಗೆ, ಮೊದಲು ಸಾಮಾನುಗಳನ್ನು ಸಾಗಿಸಿ, ಅನಂತರ ಎಲ್ಲರೂ ಛತ್ರಕ್ಕೆ ಬಂದರು. ಹಳ್ಳಿಯಿಂದ ಭಟ್ಟನ ತಂದೆ, ಚಿಕ್ಕಮ್ಮ, ತಮ್ಮಂದಿರು ಹಾಗೂ ಸೋದರಮಾವ ತನ್ನ ಪರಿವಾರದೊಂದಿಗೆ ಬಂದಿಳಿದಿದ್ದರು. ಅವರುಗಳೇ ಭಟ್ಟನನ್ನೂ, ಅವನ ಮನೆಯವರನ್ನೂ ವಿಶ್ವಾಸದಿಂದ ಮಾತನಾಡಿಸಿದರು. ಭಟ್ಟ ಕೆಲವು ಲೋಕಾರೂಢಿಯ ಮಾತುಗಳನ್ನಾಡಿ ಸುಮ್ಮನಾಗಿದ್ದ. ಆ ಹಿರಿಯರನ್ನು, ಮನೆಯ ಕಿರಿಯರೆಲ್ಲ ಸುತ್ತುವರಿದಿದ್ದರು. ಈ ಸಂಭ್ರಮ, ಈ ಉತ್ಸಾಹವನ್ನು ಅವರು ಈ ಮುಂಚೆ ಅನುಭವಿಸಿರಲಿಲ್ಲ.

ಎಲ್ಲರೂ ಸಾಲಾಗಿ ಕುಳಿತು ತಿಂಡಿಯನ್ನು ತಿಂದು ಕಾಫಿ ಕುಡಿದರು. ಬಂದಿದ್ದ ಪುರೋಹಿತರು, ಈಗ ಹಿರಿಯರ ಪಕ್ಷ ಸೇರಿದ್ದರು. ಭಟ್ಟನಿಗೆ ಗೊತ್ತಿಲ್ಲದ ಶಾಸ್ತ್ರ, ಸಂಪ್ರದಾಯಗಳ ಬಗ್ಗೆ ಅವರನ್ನು ಕೇಳಿ ತಿಳಿದುಕೊಂಡರು.

"ಸದ್ಯ ನಿಮ್ಮನ್ನು ಕೇಳಿದ್ದು ಒಳ್ಳೇದಾಯ್ತು... ಇಲ್ಲದಿದ್ದರೆ ಏನೂಂದ್ರೆ ಏನೂ ಗೊತ್ತಿಲ್ಲ ಇವ್ರಿಗೆ. ನಾವು ಎಂಥ ಮಾಡೋದು....?" ಇಬ್ಬರೂ ಒಟ್ಟಿಗೆ ನುಡಿದರು.

"ಅವ್ರು ಹೇಗೆ ಹೇಳ್ತಾರೋ ಹಾಗೇ ಮಾಡಿ. ನಾವು ನೆಂಟರ ಥರ ಬಂದಿರೋದು. ಸುಮ್ಮನೇ ಇಲ್ಲದ ರಂಪ, ರಾದ್ಧಾಂತ ಯಾಕೆ....?" ಸೋದರಮಾವ ನುಡಿದರು.

ಈಗ ಎಲ್ಲರ ಕಣ್ಣುಗಳೂ ಮುಖ್ಯ ದ್ವಾರದ ಕಡೆ ತಿರುಗಿದವು. ಪ್ರಶಾಂತ, ಅವನ ಹೆಂಡತಿಯೊಡನೆ ಛತ್ರದೊಳಕ್ಕೆ ಕಾಲಿಟ್ಟಿದ್ದ. "ಅಲ್ಲೇ ನಿಂತ್ಕೋ...." ಭಟ್ಟ ರೇಖೆ ಎಳೆದ.

"ಏನಪ್ಪಾ ಹೇಗಿದೀರಿ?" ಪ್ರಶಾಂತ ಕೇಳಿದ.

"ನಿನ್ನನ್ಯಾರು ಕರೆದ್ರು... ನೀನ್ಯಾಕೆ ಬಂದೆ?"

"ನೀವೇ ಆಹ್ವಾನ ಪತ್ರಿಕೆಯನ್ನು ಕಳಿಸಿದ್ರಿ.... ಮರೆತು ಬಿಟ್ರಾ?"

"ಇಲ್ಲ, ನಾನು ನಿನಗೆ ಯಾವ ಆಹ್ವಾನ ಪತ್ರಿಕೆಯನ್ನೂ ಕಳಿಸಿಲ್ಲ. ಇಲ್ಲಿ ನಿನಗೆ ಪ್ರವೇಶವಿಲ್ಲ."

"ನಿಮಗೆ ಬೇಡ ಅಂತ ಅನ್ನಿಸಿದರೆ ನಾನು ಒಳಕ್ಕೆ ಬರುಲ್ಲ. ಆದರೆ, ಅಮ್ಮಂಗೆ, ವಿದ್ಯಾಗೆ ಬೇಕಿದ್ರೆ, ನಾನು ಇಲ್ಲಿಂದ ತತ್‌ಕ್ಷಣಕ್ಕೆ ಹೋಗುಲ್ಲ. ಇದು

ನಿಮ್ಮ ಮನೆಯಲ್ಲ. ಯಾವುದೋ ಛತ್ರ.... ನಾನು ನನ್ನ ತಂಗಿಯ ಮದುವೆಗೆ ಬಂದಿದೀನಿ. ಅವಳೊಡನೆ ಮಾತ್ನಾಡಬೇಕು."

"ಅವಳು ನಿನ್ನತ್ರ ಮಾತನಾಡುಲ್ಲ."

"ಅದನ್ನ ಅವಳೇ ಹೇಳಲಿ...." ಎಲ್ಲರೂ ಅವರಿಬ್ಬರ ಮಾತುಗಳನ್ನೇ ಆಲಿಸುತ್ತಿದ್ದರು. ಅವರಲ್ಲಿ ಕೆಲವರಿಗೆ ಮಾತ್ರ ಪ್ರಶಾಂತ ಮನೆಬಿಟ್ಟು ಹೋಗಿರುವ ವಿಷಯ ತಿಳಿದಿತ್ತು. ಅಷ್ಟರಲ್ಲಿ ಅವನ ಪಕ್ಕ ಕಿಶೋರ ಬಂದು ನಿಂತ. ಅವನ ಕೈಯಲ್ಲಿ ಒಂದು ಸಣ್ಣ ಚೀಲ ಸಹ ಇತ್ತು.

"ಏಯ್.... ನೀನ್ಯಾಕೋ ಬಂದೆ ಇಲ್ಲಿಗೆ? ನಡಿ ಆಚೆಗೆ..." ಭಟ್ಟ ಗದರಿದ.

"ಸಾಕು ಸುಮ್ನಿರಿ ಸಾರ್.... ನಾನೇನು ನಾಯಿ ಅಲ್ಲ. ಹಚಾ ಹಚಾ ಅಂತ ಓಡಿಸೋಕೆ. ವಿದ್ಯಾನ್ನ ಕರೀರಿ, ನಾನು ಅವಳ್ಹತ್ರ ಸ್ವಲ್ಪ ಮಾತಾಡ್ಬೇಕು...."

"ನಿನ್ನತ್ರ ಅವಳು ಮಾತಾಡುಲ್ಲ."

"ವಿದ್ಯಾ.... ವಿದ್ಯಾ...." ಕಿಶೋರ ಎತ್ತರದ ಧ್ವನಿಯಲ್ಲಿ ಕಿರುಚಿದ.

"ಇದೆಲ್ಲ ಏನು ಕಿಶೋರ.... ಹೀಗ್ಯಾಕೆ ರಂಪ ಮಾಡ್ತಿದೀಯ...." ಪ್ರಶಾಂತ ಕೇಳಿದ.

"ನಿಂಗೇನೂ ಗೊತ್ತಿಲ್ಲ ಪ್ರಶಾಂತ. ನಿಮ್ಮಪ್ಪ ಹೆಸರಾಂತ ಲಾಯರ್ರು... ಆದೆರೆ ವಂಚಕ. ವಿದ್ಯಾಳನ್ನು ನನ್ನಿಂದ ದೂರ ಮಾಡ್ತಿದಾನೆ..."

"ಏನೋ, ನೀನು ತಾನು ಅಂತ ಮಾತಾಡ್ತಿದೀಯ.... ಪೋಲೀಸರ್ನ ಕರೆಸ್ತೀನಿ...."

"ಕರೆಸಿ ಸಾರ್..... ಕರೆಸಿ... ನನ್ಹತ್ರ ನಿಮ್ಮ ಮಗಳು ಬರೆದ ಲವ್ ಲೆಟರ್ಸ್‌ಗಳಿವೆ. ಅದನ್ನು ಅವ್ರಿಗೆ ತೋರಿಸ್ತೀನಿ.... ಪೋಲೀಸರ್ನ ಕರೆಸ್ತಾರಂತೆ ಪೋಲೀಸರ್ನ..."

ವಿದ್ಯಾ ಒಳಗಿನಿಂದ ಬಂದಿದ್ದಳು. ಅವಳ ಹಿಂದೆ ಪ್ರೇಮಾ ಹಾಗೂ ಭವಾನಿ ಬಂದು ನಿಂತಿದ್ದರು. "ಪ್ರಶಾಂತ" ಅವಳು ನಿಂತಲ್ಲೇ ಕೆಳಕ್ಕೆ ಕುಸಿದಳು. ಪ್ರಶಾಂತ ತಾಯಿಯ ಬಳಿಗೆ ಓಡಿದ... "ಅಮ್ಮಾ ಹೇಗಿದೀಯ...?" ಅವನು ಉದ್ವೇಗಗೊಂಡಿದ್ದ.

"ಇವತ್ತು ನನ್ನ ನೆನಪು ನಿನಗೆ ಬಂತಾ....?" ಅಲ್ಲಿ ನೆರೆದಿದ್ದವರು ಈ ದೃಶ್ಯವನ್ನು ನೋಡುತ್ತಿದ್ದರು. ಕಿಶೋರ ಸರ್ರನೆ ಓಡಿ ಬಂದು, ವಿದ್ಯಾಳ ಕೈ ಹಿಡಿದು ಎಳೆದ.

"ಬಿಡೋ.... ಬಿಡೋ....." ವಿದ್ಯಾ ಕಿರುಚಿದಳು.

"ಇದರಲ್ಲಿ ಆಸಿಡ್ ಇದೆ. ಯಾರಾದ್ರೂ ಹತ್ತಿರ ಬಂದ್ರೂ ಇದನ್ನು ಇವಳ ಮುಖಕ್ಕೆ ಎರಚಿ ಬಿಡ್ತೀನಿ." ಎಲ್ಲರೂ ಅವನ ಬಳಿಗೆ ಬರಲು ಹೆದರಿದರು.

"ಪ್ರಶಾಂತ, ಯಾರೋ ಅವನು, ವಿದ್ಯಾಳನ್ಯಾಕೆ ಎಳೀತಿದಾನೆ...?"

"ನಂಗೇನೂ ಗೊತ್ತಿಲ್ಲಮ್ಮ.... ಅಪ್ಪನೂ ಸುಮ್ಮನಿದಾರಲ್ಲ...."

"ಅಮ್ಮಾ ಅವನ ಹತ್ತಿರ ಆಸಿಡ್ ಇದೆ. ಯಾರಾದ್ರೂ ಹತ್ತಿರ ಹೋದ್ರೆ ಅದನ್ನು ವಿದ್ಯಾಳ ಮುಖಕ್ಕೆ ಎರಚಿ ಬಿಡ್ತಾನಂತೆ...." ಸಂತೋಷನೆಂದ.

"ಹೌದೇನೋ.... ಯಾಕೆ ಅಂಥ ಕೆಟ್ಟುದ್ಧಿ ಅವನಿಗೆ? ಅವನ್ಯಾರು....?"

"ಅವನು ಕಾಮಾಕ್ಷಿ ಅತ್ತೆಯ ಮಗ, ಕಿಶೋರ...." ಅಷ್ಟರಲ್ಲಿ ಕಾಮಾಕ್ಷಿ ಪ್ರತ್ಯಕ್ಷಳಾದಳು.

"ಬಿಡು.... ಅವಳ ಕೈಯನ್ನು ಬಿಡು." ನಿಂತಲ್ಲೇ ಒರಲಿದಳು.

"ಕೈ ಬಿಡೋಕೆ ಹಿಡಿದಿಲ್ಲ ನಾನು.... ನಿನ್ನ ಈ ಭಟ್ಟಂಗೆ ಹೇಳು.... ಸುಮ್ನೆ ಗಪ್‌ಚಿಪ್ಪಾಗಿ ನನ್ಗೆ ಅವಳನ್ನ ಮದ್ವೆ ಮಾಡಿಕೊಡ್ಲಿ.... ಇಲ್ದಿದ್ರೆ.... ಇವ್ಳ ಅವನ್ನೂಗಿ ಇಲ್ಲದ ಹಾಗೆ ಮಾಡಿ ಬಿಡ್ತೀನಿ...."

"ಅದ್ಯಾಕೆ ಕಾಮಾಕ್ಷಿ ನಿಮ್ಮ ಮಗ ಹೀಗೆ ಆಡ್ತಿದಾನೆ! ಇವಳ ಮೇಲೇಕೆ ರೋಷ?"

"ಅವನಿಗೆ ಕೊಬ್ಬು.... ಆ ಕೊಬ್ಬನ್ನ ಇಳಿಸೋಕೆ ಬಂದಿರೋದು." ಎನ್ನುತ್ತಾ ತನ್ನ ಉಡಿಯಲ್ಲಿದ್ದ ದೊಡ್ಡದೊಂದು ಚಾಕುವನ್ನು ತೆಗೆದು, ಅವನ ಎಡಗೈಗೆ ಸರಿಯಾಗಿ ಗುರಿ ಇಟ್ಟು ಹೊಡೆದಳು. ಕಿಶೋರ ನೋವಿನಿಂದ ಕಿರುಚಿಕೊಂಡ. ಅವನ ಎಡಗೈಲಿದ್ದ ಚೀಲ ಕೆಳಗೆ ಬಿದ್ದಿತ್ತು. ಅವನು ಬಾಗಿ ತೆಗೆದುಕೊಳ್ಳುವಷ್ಟರಲ್ಲಿ ಪ್ರಶಾಂತ ಹಿಂದಿನಿಂದ ಬಂದು ಅವನನ್ನು ಹಿಡಿದುಕೊಂಡಿದ್ದ. ಕಾಮಾಕ್ಷಿ ಮಗನ ಬಳಿಗೆ ಬಂದು, ಅವನ ಕೆನ್ನೆಗೆ ಪಟಪಟನೆ ಹೊಡೆದಳು. ವಿದ್ಯಾ ಅವನ ಹಿಡಿತವನ್ನು ಬಿಡಿಸಿಕೊಂಡಳು.

"ಇವನನ್ನು ಎಳ್ಕೊಂಡ್ಹೋಗಿ ಪೋಲೀಸ್ ಸ್ಟೇಷನ್‌ಗೆ. ಇನ್ನು ಮುಖ ನೋಡೋಕೂ ನಂಗಿಷ್ಟವಿಲ್ಲ." ಅಷ್ಟರಲ್ಲಿ ಯಾರೋ ಸಮೀಪದಲ್ಲಿದ್ದ ಪೋಲೀಸ್ ಸ್ಟೇಷನ್‌ನಲ್ಲಿ ಕಂಪ್ಲೇಟ್ ಕೊಟ್ಟು ಬಂದಿದ್ದರು. ಪೋಲೀಸರು ಬಂದು ಅವನನ್ನು ಅರೆಸ್ಟ್ ಮಾಡಿ ಕರೆದೊಯ್ದರು.

ಭಟ್ಟ, ಕಾಮಾಕ್ಷಿ ಇಬ್ಬರೂ ಪೋಲೀಸ್ ಸ್ಟೇಷನ್‌ಗೆ ಹೋದರು.

"ಅಮ್ಮಾ..... ಏನಮ್ಮ ಇದೆಲ್ಲಾ..... ಅವನ್ಯಾಕೆ ಹೀಗೆ ಆಡಿದ....?"

"ಅದಕ್ಕೆಲ್ಲ ಈ ವಿದ್ಯಾನೇ ಕಾರಣ." ಎಂದ ಸಂತೋಷ ಅರ್ಧಕ್ಕೆ ಮಾತನ್ನ ನಿಲ್ಲಿಸಿದ.

"ಆಯ್ತು, ಇನ್ನು ಈ ಮಾತು ಸಾಕು. ವಿದ್ಯಾ ಅಪಾಯದಿಂದ ಪಾರಾದಳು. ಇನ್ನು ಯಾವ ಭಯವೂ ಇಲ್ಲ." ಭವಾನಿ ವಿದ್ಯಾಳನ್ನು ಎಬ್ಬಿಸಿಕೊಂಡು ಒಳಗಿನ ರೂಮ್‌ಗೆ ಕರೆದೊಯ್ದಳು. ಎಲ್ಲರೂ ತಮ್ಮ ತಮ್ಮಲ್ಲೇ ಗುಸುಗುಸು ಮಾತನಾಡಿಕೊಳ್ಳುತ್ತಿದ್ದರು.

ಪ್ರಶಾಂತ ದೂರದಲ್ಲಿ ನಿಂತಿದ್ದ ತನ್ನ ಹೆಂಡತಿಯನ್ನು, ಕೈ ಹಿಡಿದು ಕರೆ ತಂದು, ತಾಯಿಗೆ ಪರಿಚಯಿಸಿದ.

"ಅಮ್ಮಾ.... ಇವಳು ನಿನ್ನ ಸೊಸೆ.... ಸುಗುಣಾ... ಸುಗುಣಾ ಅಮ್ಮಂಗೆ ನಮಸ್ಕಾರ ಮಾಡು." ತಾಯಿಗೆ ಇಬ್ಬರೂ ನಮಸ್ಕರಿಸಿದರು.

"ಇವಳು ನನ್ನ ಸೊಸೇನಾ....! ಯಾವಾಗ ಮದ್ವೆ ಆದ್ಯೋ, ನನಗೆ ತಿಳಿಸ ದೇನೇ....?"

"ನಿನಗೆ ತಿಳಿಸಿದ್ದರೆ ಬಹುಶಃ ಮದುವೆ ನೆರವೇರುತ್ತಿರಲಿಲ್ಲ. ಅದನ್ನೆಲ್ಲ ನಿಧಾನವಾಗಿ ಮಾತನಾಡೋಣ.... ನಾನು ಈಗ್ತಾನೇ ಊರ್‍ನಿಂದ ಬರ್ತಿದೀನಿ.... ಬರ್ತಿದ್ದ ಹಾಗೇ ಆ ಕಿಶೋರನ ಗಲಾಟೆ.... ತಿಂಡಿ ತಿಂದು ಬಿಟ್ಟು ಮಾತ್ನಾಡ್ತೀನಿ."

"ಹಾಗೇ ಮಾಡು...." ಪ್ರಶಾಂತ ಹೆಂಡತಿಯೊಡನೆ ಒಳ ನಡೆದ.

ಪುರೋಹಿತರಿಬ್ಬರೂ ದಿಗ್ಮೂಢರಾಗಿದ್ದರು......

'ಪ್ರಶಾಂತನ್ನ ಅವನ ತಂದೆ ಬೈದ. ಆ ತಂದೆಯನ್ನು ಯಾವನೋ ಕಿಶೋರ ಹೆದರಿಸಿದ. ಆಮೇಲೆ ಪೋಲೀಸ್ನೋರು ಬಂದ್ರು.... ಈ ಮದುವೆ ನೆರವೇರುವಷ್ಟರಲ್ಲಿ ಇನ್ನೂ ಏನೇನು ಆಘಾತಗಳು ನಡೆಯಲಿವೆಯೋ! ಶಾಸ್ತ್ರಿಗಳು ಇಟ್ಟುಕೊಟ್ಟಿರುವ ಮುಹೂರ್ತ ಸರಿಯಾಗಿಲ್ಲ. ಅವರವರುಗಳೇ ಹೇಗಾದ್ರೂ ಮಾಡ್ಕೊಳ್ಳಲಿ. ನಾವು ಕೆಟ್ಟವರಾಗುವುದು ಬೇಡ' ಎಂದುಕೊಂಡು ಅವರಿಬ್ಬರೂ ಯಾರಿಗೂ ಹೇಳದೆ ಅಲ್ಲಿಂದ ಪರಾರಿಯಾಗಿದ್ದರು.

ಪೋಲೀಸ್ ಸ್ಟೇಷನ್‌ನಿಂದ ಬಂದ ಭಟ್ಟನ ಮುಖವನ್ನು ನೋಡುವಂತಿರಲಿಲ್ಲ. ಎಲ್ಲರೆದುರಿಗೆ ನಡೆದ ಘಟನೆಯಿಂದ ಅವನ ಮುಖ ಭಂಗವಾದಂತಾಗಿತ್ತು. ಜತೆಗೆ ಕಾಮಾಕ್ಷಿಯೂ ಬಂದಿದ್ದಳು. ಅವಳು ಮಗನನ್ನು ಬೈಯ್ಯುತ್ತಲೇ ಇದ್ದಳು. ಎಲ್ಲರೂ, ತಾವು ಬಂದುದು ಏಕೆ ಎನ್ನುವುದನ್ನೇ ಮರೆತವರಂತೆ, ತಮಗೆ ತೋಚಿದಂತೆ ಮಾತ ನಾಡಿಕೊಳ್ಳುತ್ತಿದ್ದರು. ಸ್ವಲ್ಪ ಸಮಯದ ಅನಂತರ ಕಾಮಾಕ್ಷಿ ಸಮಾಧಾನಗೊಂಡಳು. ಎಲ್ಲವೂ ಯಥಾ ಯಥಾ ಕೂತಿರುವುದನ್ನು ಕಂಡಳು.

"ಆಯ್ತಲ್ಲ. ಇನ್ನು ಪೀಡೆ ತೊಲಗ್ತು.... ಅದೇನೇನು ಮಾಡ್ಬೇಕೋ ಮಾಡ್ಬೇಕು. ಭಟ್ಟ, ಪುರೋಹಿತರೆಲ್ಲೋದ್ರೋ....?"

"ಪುರೋಹಿತರೇ ನಾಪತ್ತೆ...." ಕೆಲವರು ನಕ್ಕರು. ಕೆಲವರಿಗೆ ವಿಚಿತ್ರ ಎನಿಸಿತ್ತು.

"ಎಲ್ಲಿ ಹೋಟೇಲ್ಗೆ ಹೋದ್ರೋ, ಸಿನೆಮಾಕ್ಕೆ ಹೋದ್ರೋ..... ಅವರ್‍ನ ಹುಡುಕ್ತಾ ಕೂತ್ರೆ ಮಾಡಿಟ್ಟ ಅಡುಗೆ ತಂಗಳಾಗುತ್ತೆ. ಏಳಿ ಹಿರಿ ಭಟ್ಟರೇ... ನಿಮ್ಗೆ ಗೊತ್ತಿಲ್ಲದ್ದು ಏನು....? ದೇವರ ಪಟ ಇಡಿ... ಊದಿನ ಕಡ್ಡಿ ಹಚ್ಚಿ, ಢಣಢಣ ಗಂಟೆ ಬಾರಿಸಿ... ಸಾಕು..... ಊಟಮಾಡಿ ಏಳುವಹೊತ್ತಿಗೆ ದಿಬ್ಬಣ ಬರುತ್ತೆ.... ಮುಖ್ಯವಾದ ಕೆಲಸಕ್ಕೆ ಕೈ ಸೇರಿಸಬೇಕು. ಅದು ಬಿಟ್ಟು.... ಕೈ ಚೆಲ್ಲಿ ಕೂತ್ರೆ ಹೆಂಗೆ...?"

ಕಾಮಾಕ್ಷಿಯ ಮಾತು ಎಲ್ಲರಿಗೂ ಸರಿ ಎನ್ನಿಸಿತ್ತು. ಎಲ್ಲರೂ ಎದ್ದು, ಹೆಗಲ ಮೇಲೆ ಹೊದ್ದಿದ್ದ ಶಲ್ಯವನ್ನು ಒದರಿ, ಕಾರ್ಯನಿರತರಾದರು. ಸಮೀಪದ ಅಂಗಡಿಗೆ ಹೋಗಿ ದೇವರಪಟಗಳನ್ನು ತಂದರು. ಹಾಲು, ಹಣ್ಣು ನೈವೇದ್ಯ ಮಾಡಿ, ಊದಿನ ಕಡ್ಡಿ ಹಚ್ಚಿ, ಮಂಗಳಾರತಿ ಎತ್ತಿದರು. ಎಲ್ಲರಿಗೂ ಅದನ್ನೇ ತೀರ್ಥ, ಪ್ರಸಾದವನ್ನಾಗಿ ಕೊಟ್ಟರು. ಎಲ್ಲರೂ ಊಟಕ್ಕೆ ಎದ್ದರು. ಮಧ್ಯಾಹ್ನ ಮೂರು ಗಂಟೆಯಾಗುಕ್ಕೆ ಬಂದಿತ್ತು. ಎಲ್ಲರ ಹೊಟ್ಟೆ ಹಸಿದಿತ್ತು. ಎಲ್ಲರೂ ಮೌನವಾಗಿ ಊಟದ ಎಲೆಯ ಕಡೆ ಗಮನ ಹರಿಸಿದರು.

* * *

ಆದರೆ, ಭಟ್ಟ, ಪ್ರೇಮಾ, ವಿದ್ಯಾ ಹಾಗೂ ಪ್ರಶಾಂತನಿಗೆ ಊಟ ಸೇರುವಂತಿರ ಲಿಲ್ಲ. ಒಬ್ಬೊಬ್ಬರ ಮನಸ್ನಲ್ಲಿ ಒಂದೊಂದು ತರಹ ಮಂಥನ ನಡೆಯುತ್ತಿತ್ತು.

'ನಾನು ಬಂದದ್ದೇ ಸರಿ ಅನ್ನಿಸ್ಲಿಲ್ಲ ಈ ಅಪ್ಪಂಗೆ.... ಅಂಥಾದ್ರಲ್ಲಿ ಈ ಕಿಶೋರನ ಗಲಾಟೆ ಏನು? ಅವನ ತಲೆಗಿಲೆ ಏನಾದ್ರೂ ಕೆಟ್ಟಿದ್ಯಾ...? ಮೊದ್ಲೇ ಸರಿ.... ಈ ಅಪ್ಪನ ದೆಸೆಯಿಂದ ಇನ್ನೂ ಏನೇನು ಹಗರಣಗಳು ನಡೆಯಲಿವೆಯೋ?' ಇದು ಪ್ರಶಾಂತನ ಚಿಂತೆ.

* * *

'ಅಂತೂ ಕಿಶೋರ ತಾನು ಹೇಳಿದ್ದಂತೇ ಮಾಡಲು ಬಂದೇ ಬಿಟ್ಟ. ಒಂದ್ವೇಳೆ ಅವನೇನಾದ್ರೂ ನನ್ನ ಮುಖಕ್ಕೆ ಆಸಿಡ್ ಎರಚಿ ಬಿಟ್ಟಿದ್ರೆ...' ಆ ಅನಿಸಿಕೆಯಿಂದಲೇ ವಿದ್ಯಾ ತರತರ ನಡುಗಿದಳು.

'ಮನೆ ಬಿಟ್ಟು ಹೋಗಿದ್ದ ಮಗ, ಈ ನೆವದಲ್ಲಿ ಮನೆಗೆ ವಾಪಸ್ಸಾಗಿದ್ದಾನೆ. ಎಲ್ಲಾ ಮರೆತು ಇರೋದನ್ನ ಬಿಟ್ಟು ಇಲ್ಲೂ ಗಲಾಟೆ ಇವರದ್ದು.... ಆ ಕಿಶೋರಂಗ್ಯಾಕೆ ಇಂಥ ಕೆಟ್ಟಬುದ್ಧಿ. ಕಾಮಾಕ್ಷಿ ಇಲ್ಲದೇ ಇದ್ದಿದ್ರೇ.... ಏನಾಗಿ ಹೋಗ್ತಿತ್ತೋ...?' ಪ್ರೇಮಳ ಆಲೋಚನೆ.

'ಮೊದ್ಲೇ ನಾನು ಎಲ್ಲಾರ್ರೂ ಕೆಟ್ಟೋನು.... ಆದ್ರೆ ಈ ಪ್ರಶಾಂತ, ವಿದ್ಯಾ, ಇವರ್ಗಳೇ ಇದಕ್ಕೆ ಕಾರಣ. ಈ ಮದ್ವೇ ಒಂದು ಮುಗೀಲಿ... ಆಮೇಲೆ ನೋಡ್ಕೋ ತೀನಿ' ಎಂದುಕೊಂಡ ಭಟ್ಟ.

ಸಾಯಂಕಾಲದ ಹೊತ್ತಿಗೆ ದಿಬ್ಬಣದವರು ಬಂದರು. ವಾಲಗ ಊದಿಸಿ, ಅವರನ್ನು ಮದುವೆ ಮಂಟಪಕ್ಕೆ ಬರಮಾಡಿಕೊಂಡರು. ಎಲ್ಲರ ಮುಖದಲ್ಲೂ ಏನೋ ಚಿಂತೆಯ ಕಳೆ.... ಏನೋ ಅನಾಹುತ ನಡೆದಿದೆ ಎಂದು ಎಲ್ಲರಿಗೂ ಭಾಸವಾಗು ವಂತಿತ್ತು. ಭಟ್ಟ ಯಾರನ್ನೂ ಯಾರಿಗೂ ಪರಿಚಯಿಸುವ ಗೋಜಿಗೇ ಹೋಗಲಿಲ್ಲ. ಬೇಕಿದ್ರೆ ಅವರವರೇ ಪರಿಚಯ ಮಾಡಿಕೊಳ್ತಾರೆ ಎಂದು ಸುಮ್ಮನಾಗಿ ಬಿಟ್ಟ. ಹಾಗಾಗಿ ಎಲ್ಲರೂ ಅವರವರ ಪಾಡಿಗೆ ಸುಮ್ಮನೇ ಒಬ್ಬರ ಮುಖವನ್ನು ಒಬ್ಬರು ನೋಡುತ್ತಾ

ಕುಳಿತಿದ್ದರು.

ವರನ ಕಡೆಯವರು ಹೆಚ್ಚು ಜನ ಬಂದಿರಲಿಲ್ಲ. ಎಲ್ಲರಿಗೂ ತಿಂಡಿ, ಕಾಫಿಯ ಉಪಚಾರವಾಯಿತು. ಆಯಾಸವನ್ನು ಪರಿಹರಿಸಿಕೊಂಡದ್ದಾಯಿತು. ಅಷ್ಟಾದರೂ ವಿದ್ಯಾ ಎಲ್ಲಿಯೂ ಕಾಣಲಿಲ್ಲ. ದಿನೇಶನಿಗೆ ಅವಳನ್ನು ಕಾಣಬೇಕು, ಅವಳೊಡನೆ ಮಾತನಾಡಬೇಕು ಎಂಬ ತವಕ, ಗೌತಮನನ್ನು ಕರೆದು ಹೇಳಿದ –

"ವಿದ್ಯಾನ್ನ ಹೊರಕ್ಕೆ ಕರ್‍ಕೊಂಡ್ಬಾ.... ಇವ್ರಿಗೆಲ್ಲಾ ಪರಿಚಯ ಮಾಡ್ಕೊಡ್ಬೇಕು."

ಗೌತಮ ಕರೆದ ಕೂಡಲೇ ವಿದ್ಯಾ ಅವನೊಡನೆ ಬಂದಿದ್ದಳು. ಅವಳೂ ಸಪ್ಪಗಿದ್ದಳೆಂದೆನಿಸಿತ್ತು. ವಿದ್ಯಾಳಿಗೆ, ತನ್ನ ಕಡೆಯವರನ್ನು ಒಬ್ಬೊಬ್ಬರನ್ನೇ ಪರಿಚಯಿಸಿದ. ವಿದ್ಯಾ ಎಲ್ಲರಿಗೂ ಕೈ ಮುಗಿದಳು. ಎಲ್ಲರಿಗೂ ಅವಳು ಮೆಚ್ಚುಗೆಯಾಗಿದ್ದಳು.

ಭವಾನಿ, ಎರಡೂ ಕಡೆಯವರಿಗೂ ಸ್ವಲ್ಪ ಸ್ವಲ್ಪ ಪರಿಚಯವಿದ್ದವಳು. ಅವಳೇ ಪ್ರೇಮಳನ್ನು ಕರೆ ತಂದು ಕೆಲವರಿಗೆ ಪರಿಚಯಿಸಿದಳು. ಅಷ್ಟಾದರೂ ಭಟ್ಟ ಸುಮ್ಮನೇ ಇರುವುದನ್ನು ಕಂಡು ಕೆಲವರು ಈ ಮನುಷ್ಯಂಗೆ ದುರಹಂಕಾರ ಎಂದುಕೊಂಡಿದ್ದರು.

ಭಟ್ಟನ ಸೋದರಮಾವನ ಮಗ, ಸುಮಾರು ಪ್ರಶಾಂತನ ವಯಸ್ಸಿನವನು, ಇದ್ದಕ್ಕಿದ್ದಂತೆ ಎಲ್ಲರ ಗಮನವನ್ನು ತನ್ನೆಡೆಗೆ ಸೆಳೆದುಕೊಂಡ. ಉಮೇಶ ವೇದಿಕೆಯ ಮೇಲೆ ಕುಳಿತು ಗಣಪತಿ ಸ್ತುತಿಯೊಂದಿಗೆ ವಚನ ಭಾರತದಲ್ಲಿನ, ಗೀತೋಪದೇಶದ ಅಧ್ಯಾಯವನ್ನು ಸುಶ್ರಾವ್ಯವಾಗಿ ಹೇಳಲಾರಂಭಿಸಿದ. ಮಧ್ಯೆ ಮಧ್ಯೆ ಗೀತೋಪಸಾರದ ಭಾವಾರ್ಥವನ್ನು ತಿಳಿಸುತ್ತಿದ್ದ. ಸಮಯವನ್ನು ಕಳೆಯಲು ಎಲ್ಲರಿಗೂ ಒಂದು ಸದವಕಾಶ ಸಿಕ್ಕಿತ್ತು. ಎಲ್ಲರೂ ಅದರ ಆನಂದವನ್ನು ಅನುಭವಿಸಿದರು. ಅಡುಗೆ ಯವರಿಂದ ಹಿಡಿದು, ಛತ್ರದಲ್ಲಿರುವರೆಲ್ಲಾ ಒಂದೆಡೆ ಸೇರಿದ್ದರು. ಭಟ್ಟನಿಗೂ ತನ್ನ ಬಾಲ್ಯದ ನೆನಪಾಗಿತ್ತು. ಸೋದರಮಾವ, ದಸರಾ ಹಬ್ಬದ ಸಮಯದಲ್ಲಿ ಪ್ರತಿದಿನ ಸಾಯಂಕಾಲ ಭಾರತ ವಾಚನ ಮಾಡುತ್ತಿದ್ದದು ನೆನಪಾಗಿತ್ತು. ಕುಳಿತಿದ್ದವರನ್ನೆಲ್ಲಾ ಓರೆನೋಟದಿಂದ ನೋಡಿದ. ಎಲ್ಲರೂ ತನ್ನವರೇ..... ಆದರೂ ತಾನು ಎಲ್ಲರಿಗೂ ದೂರ.... ಇದಕ್ಕೆ ಕಾರಣ ಇವರುಗಳೇ... ಎದ್ದು ನಿಂತು ಒಮ್ಮೆ ಜೋರಾಗಿ ಕಿರುಚ ಬೇಕೆನ್ನಿಸಿತ್ತು....

ವಾಚನ ಮುಗಿದಿತ್ತು. ಮಂಗಳವನ್ನು ಹಾಡಿಯಾಗಿತ್ತು. ಎಲ್ಲರೂ ಚಪ್ಪಾಳೆ ತಟ್ಟಿದರು. ಭಟ್ಟ ಎಚ್ಚೆತ್ತು ವಾಸ್ತವಕ್ಕೆ ಬಂದ... ಎಲ್ಲರೂ ಆ ಯುವಕನನ್ನು ಹೊಗ ಳುವವರೇ. ಕೆಲವರು ಅವನ ಬಗ್ಗೆ ವಿಚಾರಿಸುತ್ತಿದ್ದರು. ಒಟ್ಟಿನಲ್ಲಿ ಆ ಸಂಜೆ ಒಂದು ಸೊಗಸಾದ ಕಾರ್ಯಕ್ರಮದಲ್ಲಿ ಕಳೆದಿತ್ತು. ಅಡುಗೆಯವರು ಎಲೆಗಳನ್ನು ಹಾಕಲಾಗಿದೆ ಎಂದು ಎಬ್ಬಿಸಿದರು.

"ಯಾರಿಗ್ ಕಾಫಿ.... ಬಿಸಿ ಬಿಸಿ ಕಾಫಿ..." ಎಂದು ಕೆಟ್ಲ್‌ಗಳನ್ನು, ಬಟ್ಟಲುಗಳನ್ನು ಹಿಡಿದು ಬಂದ ಅಡುಗೆಯವರು, ಸುಪ್ರಭಾತ ಹಾಡಿ ಎಲ್ಲರನ್ನು ಎಬ್ಬಿಸಿದರು.

ಬಚ್ಚಲು ಮನೆಯ ಹಂಡೆಗಳಲ್ಲಿ ಬಿಸಿ ನೀರು ಕುದಿಯುತ್ತಿತ್ತು. ಸ್ನಾನಮಾಡಿ, ಅಲಂಕರಿಸಿ ಕೊಂಡು ಹೊಸ ಉಡುಗೆಗಳನ್ನು ಧರಿಸಿ ಎಲ್ಲರೂ ಸಿದ್ಧರಾದರು.

ಹಿರಿಯ ಮುತ್ತೈದೆಯೊಬ್ಬರು ವಿದ್ಯಾಳ ನೀಳವಾದ ಕೇಶರಾಶಿಯ ಸಿಕ್ಕುಗಳನ್ನು ಬಿಡಿಸಿ, ಐದು ಕಾಲಿನ ಜಡೆಯನ್ನು ಹೆಣೆದು, ಕುಚ್ಚು ಕಟ್ಟಿದರು. ಜಡೆಗೆ ಹೂ ಮಾಲೆಯನ್ನು ಸುತ್ತಿದರು. ತಲೆ ತುಂಬಾ ಹೂವನ್ನು ಮುಡಿಸಿದರು. "ಸಾಕ್ಷಾತ್ ದೇವಿಯೇ ಎದ್ದು ಬಂದಂತೆ ಕಾಣ್ತಿದೀಯ" ಎನ್ನುತ್ತಾ ಕೆನ್ನೆಗಳನ್ನು ಸವರಿ, ದೃಷ್ಟಿ ತೆಗೆದರು.

"ಅಜ್ಜೀ..... ನಂಗೂ ಹೀಗೇ ಜಡೆ ಹಾಕಿ." ಚಿನ್ಮಯೀ ಬಂದು ಕುಳಿತಳು. ಅನಂತರ ನಳಿನಿ, ಅವಳ ಓರಗೆಯ ಕೆಲವು ಹುಡುಗಿಯರು, ಜಡೆ ಹೆಣೆಸಿಕೊಂಡು ಕುಚ್ಚು ಕಟ್ಟಿಸಿಕೊಂಡರು.

ಭವಾನಿ, ತಾನು ವಿದ್ಯಾಳಿಗೆಂದು ತಂದಿದ್ದ ಮಧ್ಯೆ ಕೆಂಪು, ಸುತ್ತಲೂ ಮುತ್ತನ್ನು ಜೋಡಿಸಿರುವ ಓಲೆಗಳನ್ನು ಹಾಕಿಕೊಳ್ಳುವಂತೆ ಕೊಟ್ಟಳು.

"ಇದೆಲ್ಲಾ ಯಾಕೆ ಚಿಕ್ಕಮ್ಮಾ....?" ವಿದ್ಯಾ ಸಂಕೋಚಗೊಂಡಳು.

"ಸುಮ್ನಿರು, ನಿಮಗೆ ಈ ಓಲೆ ಚೆನ್ನಾಗಿ ಒಪ್ಪುತ್ತೆ."

"ನನ್ನ ಮದ್ವೇಲಿ ನಂಗೂ ಇಂಥದ್ದೇ ಓಲೆ ಕೊಡಿಸ್ತೀರಾ ಅಲ್ವಾ ಚಿಕ್ಕಮ್ಮ?" ನಳಿನಿ ಕೇಳಿದಾಗ, ಚಿಕ್ಕಮ್ಮ ಅವಳ ಗಲ್ಲವನ್ನು ಹಿಂಡಿದಳು.

"ನಿನಗೆ ನೋಡು, ಎಂಥಾ ಸುಂದರವಾದ ನೀಲಿ ಕಣ್ಣುಗಳಿವೆ ಅಲ್ವಾ! ಅದಕ್ಕೆ ಒಪ್ಪುವಂಥ ವಜ್ರದ ಓಲೆಗಳನ್ನೇ ತಂದ್ಕೊಡೋಣ ಅದಕ್ಕೇನಂತೆ.....?"

"ಚಿಕ್ಕಮ್ಮಾ ನನಗೆ, ಈ ಸೀರೆ ಒಂಚೂರೂ ಇಷ್ಟವಿಲ್ಲ..." ತಂದೆ ತಂದಿದ್ದ ಸೀರೆಯನ್ನು ತೋರಿಸಿದಳು ವಿದ್ಯಾ.

"ಏನಾಗಿದೆ? ಬೆಂಗ್ಳೂರ್ನಲ್ಲಿ ಈಗ ಈ ಕಲರ್ರೇ ಫ್ಯಾಷನ್ನು. ನಿಂಗೆ ಎಂಥಾ ಸೀರೆ ಕೂಡ ಒಪ್ಪುತ್ತೆ.... ತವರಿನವ್ರು ತಂಧ ಸೀರೆ ಹಳೀಬಾರ್ದು.... ಬೇಗ ಬೇಗ ಉಟ್ಕೋ.... ಅಥವಾ ನಾನೇ ಉಡುಸ್ಲೋ...."

"ಬೇಡ ಚಿಕ್ಕಮ್ಮಾ ನಾನೇ ಉಟ್ಕೋತೀನಿ...." ಸೀರೆ ಉಟ್ಟು ಸಿದ್ಧಳಾದಳು.

"ನೋಡು ಈಗ, ಈ ಸೀರೇಗೇ ಎಂಥ ಹೊಳಪು ಬಂದಿದೆ...."

"ಹುಡ್ಗಿ ರೆಡೀನಾ? ಹುಡ್ಗಾ ಆಗ್ಲೇ ಮಂಟಪಕ್ಕೆ ಬಂದು ಕಾಯ್ತಾ ಇದಾನೆ..." ಎನ್ನುತ್ತಾ ಪ್ರಸಾದ್ ಅಲ್ಲಿಗೆ ಬಂದ. ವಿದ್ಯಾಳಿಗೆ ನಾಚಿಕೆ ಆಗಿತ್ತು. ಪ್ರೇಮಳ ತಮ್ಮಂದಿರು ಯಾರೂ ಬಂದಿರಲಿಲ್ಲವಾದುದರಿಂದ ಪ್ರಸಾದನೇ ಅವಳನ್ನು ಹಸೆಮಣೆಗೆ ಕರೆದೊಯ್ಯ ಬೇಕಿತ್ತು....

"ಏನಪ್ಪಾ ನೀವು! ಈಗ ಹೆಣ್ಣಿನ ಕಡೆಗೆ ಸೇರಿಬಿಟ್ರಾ?" ನವೀನ ತಮಾಷೆ ಮಾಡಿದ.

"ಮತ್ತೆ? ಇಂಥಾ ಸುಂದರವಾದ ಹುಡುಗೀನ ಹಸೆಮಣೆಗೆ ಕರೆ ತರುವುದನ್ನು ತಪ್ಪಿಸ್ಕೋತೀನಾ....? ನಡಿಯಮ್ಮ ವಿದ್ಯಾ...." ಪ್ರಸಾದ ಅವಳ ಭುಜವನ್ನು ಬಳಸಿ, ಅವಳನ್ನು ಹಸೆಮಣೆಯ ತನಕ ನಡೆಸಿಕೊಂಡು ಬಂದ. ಅವಳು ನಾಚಿಕೆಯಿಂದ ಕತ್ತೆತ್ತಿರಲಿಲ್ಲ. ಕ್ಯಾಮೆರಾ ತಂದಿದ್ದವರು ಕೆಲವು ಫೋಟೋಗಳನ್ನು ತೆಗೆದರು. ವಿದ್ಯಾ, ದಿನೇಶನಿಗೆದುರಾಗಿ ಕುಳಿತಳು. ದಿನೇಶ ಆಗಾಗ್ಗೆ ಕದ್ದೂ ಕದ್ದೂ ಅವಳನ್ನೇ ನೋಡುತ್ತಿದ್ದ.

ಭಟ್ಟನ ತಂದೆಯೇ ಯಜಮಾನಿಕೆಯನ್ನು ವಹಿಸಿಕೊಂಡದ್ದರಿಂದ, ಅವರು ಭಟ್ಟನನ್ನು ಯಾವುದಕ್ಕೂ ಎಳೆಯದೇ, ತಾವೇ ತಮ್ಮ ಪದ್ಧತಿಯಂತೆ, ಕಲಾಪಗಳನ್ನು ಮಾಡಿಸಿದರು. ಕನ್ಯಾದಾನದ ವೇಳೆಯಲ್ಲಿ ಮಾತ್ರ, ಅವನಿಗೆ ಪ್ರಾಮುಖ್ಯತೆಯನ್ನು ಕೊಟ್ಟರು. "ಮಗಳನ್ನು ಧಾರೆ ಎರೆದ್ಕೊಡು..." ಪ್ರೇಮಳನ್ನು ಕರೆದರು. ಭಟ್ಟ ಪತ್ನಿ ಸಮೇತನಾಗಿ ನಿಂತು ಮಗಳನ್ನು ಧಾರೆಯನ್ನು ಎರೆದುಕೊಟ್ಟ.

ಮುಂದಿನ ಕಾರ್ಯಕ್ರಮಗಳನ್ನೆಲ್ಲ ಹಿರಿಯ ಭಟ್ಟರು ತಮ್ಮ ನೇತೃತ್ವದಲ್ಲಿ ನೆರವೇರಿಸಿದರು. ಯಾರಿಗೂ, ಯಾವುದೂ ಕಡಿಮೆ ಅಂತೆನ್ನಿಸಲೇ ಇಲ್ಲ. ಬಂದಿದ್ದ ಆಹ್ವಾನಿತರಲ್ಲಿ ಹಿರಿಯರು ಹೃತ್ಪೂರ್ವಕವಾಗಿ ನವದಂಪತಿಯನ್ನು ಆಶೀರ್ವದಿಸಿದರು. ಭೋಜನದ ಅನಂತರ ಫಲ, ತಾಂಬೂಲಗಳನ್ನು, ಉಡುಗೊರೆಗಳನ್ನು ತೆಗೆದುಕೊಂಡು ಸಂತುಷ್ಟರಾಗಿ ಹಿಂತಿರುಗಿದರು.

'ಉಡುಗೊರೆಗಳನ್ನು ತರಬಾರದಾಗಿ ವಿನಂತಿ.' ಎಂದು ಪ್ರಿಂಟ್ ಹಾಕಿಸಿದ್ದರೂ, ಕೆಲವರು ಉಡುಗೊರೆಗಳನ್ನು ಓದಿಸಿದ್ದರು. ಪ್ರಶಾಂತ ತನ್ನ ತಂಗಿಗೆ ಒಂದೆಳೆ ಚಿನ್ನದ ಸರವನ್ನು, ದಿನೇಶನಿಗೆ ಒಂದು ಕೈ ಗಡಿಯಾರವನ್ನು ಓದಿಸಿದ.

ಊಟವಾಗುತ್ತಿದ್ದಂತೆಯೇ ಪ್ರಶಾಂತ ತಾನಿನ್ನು ಹೊರಡುವುದಾಗಿ ತಿಳಿಸಿದ.

"ಈಗ್ಲೇ ಏನು ಅವಸರ...? ನಾಳೆ ಹೋಗೋವಂತೆ. ಮನೆಗೆ ಬರುಲ್ವಾ...?" ಪ್ರೇಮಾ ವ್ಯಥೆಯಿಂದ ಕೇಳಿದಳು.

"ಇಲ್ಲಮ್ಮ ಈಗ ಬರುಲ್ಲ. ಸುಗುಣಾ, ಅಮ್ಮಂಗೆ, ಅಪ್ಪಯ್ಯಂಗೆ ನಮಸ್ಕಾರ ಮಾಡು... ಇನ್ನು ಹೊರಡೋಣ..." ಸೊಸೆಗೆ ಏನಾದರೂ ಉಡುಗೊರೆ ಕೊಡಬೇಕು. ಬರಿಗೈಯಲ್ಲಿ ಕಳಿಸುವುದೇ? ಭವಾನಿ ಅಕ್ಕನಿಗೆಂದು ಕೊಟ್ಟಿದ್ದ ಸೀರೆಯನ್ನೇ ಸೊಸೆಗೆ ಕೊಟ್ಟಳು.

"ಮಾತಾಡ್ದ ಹಾಗೇ ಆಗಿಲ್ಲ. ಇಷ್ಟೇನಾ ನಿನ್ನ ಪ್ರವಾಸ? ಆಗಾಗ್ಗೆ ಬರ್ತಾ ಇರು. ನಿನ್ನ ಹೆಂಡ್ತೀನಾದ್ರೂ ಕಳ್ಸು." ತಾಯಿಯ ಮಾತಿಗೆ ಸುಮ್ಮನೇ ತಲೆಯಾಡಿಸಿದ. ಅವನಿಗೂ ತಾಯಿಯನ್ನು ಕಂಡು ವ್ಯಥೆಯಾಗಿತ್ತು. ಅಮ್ಮ ಬಹಳ ಇಳಿದು ಹೋಗಿದ್ದಾಳೆನ್ನುವುದನ್ನು ಗಮನಿಸಿದ್ದ....

ಸುಗುಣಾ ಮಾವನಿಗೆ ನಮಸ್ಕರಿಸಿದಳು. ಭಟ್ಟ ಸುಮ್ಮನೇ ಕಂಬದಂತೆ

ನಿಂತಿದ್ದ. “ನಾವಿನ್ನು ಬರ್ತೀವಿ.” ಭಟ್ಟ ಅದಕ್ಕೂ ಉತ್ತರಿಸಲಿಲ್ಲ. ಪ್ರಶಾಂತ ಹಿರಿಯರೆಲ್ಲರಿಗೂ ನಮಸ್ಕರಿಸಿ, ಆಶೀರ್ವಾದವನ್ನು ಪಡೆದ. ಚಿಕ್ಕಮ್ಮ, ಚಿಕ್ಕಪ್ಪಂದಿರಿಗೆ ಕೈ ಮುಗಿದು ವಂದಿಸಿದ.

“ಯಾಕೆ ಹೀಗ್ಮಾಡಿದ್ಯೋ ಪಚ್ಚು.... ಇನ್ನಾದ್ರೂ ಮನೆಗೆ ವಾಪಸ್ಸು ಬಾ....”

“ನೋಡೋಣ, ಆ ಕಾಲ ಬಂದಾಗ, ಸದ್ಯಕ್ಕಂತೂ ಆ ಆಲೋಚನೆ ಇಲ್ಲ.”

“ಆ ಅಪ್ಪನ ಮಗನೇ ಸರಿ ನೀನು... ಹೋಗ್ಲೀ ಮದ್ವೆಗಾದ್ರೂ ನಮ್ಮನ್ನೆಲ್ಲಾ ಕರೆಯಬಾರ್ದಾಗಿತ್ತಾ....?”

“ನಾನು ಕರೀಲಿಲ್ಲ ನಿಜ. ಆದರೆ ಅದ್ರಿಂದ ನಿಮ್ಮ್ಯಾರ ಪ್ರೀತಿಯೂ ಕಡಿಮೆ ಆಗಿಲ್ಲವಲ್ಲ.” ಪ್ರಶಾಂತ ಮಾತಿನ ಧಾಟಿಯನ್ನೇ ಬದಲಾಯಿಸಿದ.

“ಪರ್ವಾಗಿಲ್ಲಯ್ಯಾ..... ಮಾತ್ನಲ್ಲಿ ನೀನೂ ಜಾಣ.... ಎಷ್ಟಾಗಲೇ ಲಾಯರ್‌ನ ಮಗನಲ್ಲವೇ ನೀನು...?” ಯಾರೋ ಹೊಗಳಿದರು.

“ಇಲ್ಲ ಅಜ್ಜಾ..... ನಾನು ದಡ್ಡ..... ಲಾಯರ್‌ನ ಜಾಣತನ ನನ್ನಲ್ಲಿಲ್ಲ. ಅದ್ರಿಂದ್ಲೇ ತಾನೇ.... ನಾನು ಮನೆ ಬಿಟ್ಟು ಹೋದದ್ದು. ನಡೀ ಸುಗುಣಾ ಹೊತ್ತಾಯ್ತು.”

“ನನ್ನನ್ನ ಮಾತಾಡಿಸ್ಲೇ ಇಲ್ವಲ್ಲೋ ಪ್ರಶಾಂತ... ಮರೆತು ಬಿಟ್ಯಾ ನನ್ನನ್ನ?” ಕಾಮಾಕ್ಷಿ ಎದುರಿಗೆ ಬಂದು ನಿಂತಳು.

“ಓ... ಕಾಮಾಕ್ಷಿ ಅತ್ತೆ... ನಿಮಗೂ ನನ್ಮೇಲೆ ಕೋಪಾನೇನೋ ಅಂತಂದ್ಕೊಂಡೆ.”

“ಕೋಪ ಯಾಕೋ ಕಂದಾ... ನೀನು ಬಂದದ್ದು ಒಳ್ಳೇದಾತು ನೋಡು... ಇನ್ನು ಈ ಪ್ರೇಮಕ್ಕ ಗೆಲುವಾಗ್ತಾರೆ. ಬದುಕೋ ಆಸೆಯೇ ಹೊರ್‍ಟು ಹೋಗಿತ್ತು ಗೊತ್ತಾ?”

“ನಾನೊಬ್ನೇ ಮಗನಲ್ಲ ಅಮ್ಮಂಗೆ.... ಇನ್ನೂ ಇಬ್ರಿದಾರೆ.... ಅವ್ರುಗಳಿಗೋಸ್ಕರವಾದ್ರೂ ಬದುಕಬೇಕಲ್ವಾ....? ಹಾಗಂತ ಹೇಳಿ ಅಮ್ಮಂಗೆ.”

“ನಿಮ್ಮಪ್ಪ ಒಂಥರ... ಯಾರ ಮಾತ್ನೂ ಕೇಳುಲ್ಲ. ನಿಮ್ಮಮ್ಮ ಇನ್ನೊಂಥರ... ನಾನು ಇಬ್ಬರಿಗೂ ಈಗ ಕೆಟ್ಟವಳಾಗಿದೀನಿ.... ನಮ್ಮ ಕಿಶೋರ ಹೀಗ್ಮಾಡ್ತಾನೆ ಅಂತ ನಾನಂದ್ಕೊಂಡಿರಲಿಲ್ಲ.”

“ಈಗ ಆ ಮಾತೆಲ್ಲ ಬೇಡಿ ಅತ್ತೆ. ನಮ್ಮನೆಗೆ ಬನ್ನಿ. ಅಲ್ಲಿ ಮಾತಾಡೋಣ.” ಪ್ರಶಾಂತ ಕಾಮಾಕ್ಷಿಗೂ, ಶಾರದಮ್ಮನಿಗೂ ನಮಸ್ಕರಿಸಿದ. ಸುಗುಣಾ ಅವನ್ನನು ಸರಿಸಿದಳು.

“ದೇವ್ರು ನಿಮ್ಮಿಬ್ಬರನ್ನು ತುಂಬಾ ಚೆನ್ನಾಗಿಟ್ಟಿರಲಿ.” ಬಾಯ್ತುಂಬಾ ಹರಸಿದರು.

“ದೇವ್ರು ಅನ್ನೊತ್ಲು ನೆನಪಿಗೆ ಬಂತು. ಈಗ ನಮ್ಮನೇಲಿ ಪ್ರತ್ಯೇಕವಾಗಿ ದೇವರ ಮನೆ ಇದೆ. ದೇವರ ಪಟಗಳಿವೆ. ಬೇಕಾದಷ್ಟು ಹೂಗಳು ಬಿಡುತ್ವೆ ಸುಗುಣಾ ದೇವರಿಗೆ ಪೂಜೆಯನ್ನು ಮಾಡ್ತಾಳೆ. ನಾನು ನಿಧಾನವಾಗಿ ನಾಸ್ತಿಕತೆ

ಯಿಂದ ಆಸ್ತಿಕತೆಗೆ ತಿರುಗ್ತಾ ಇದೀನಿ." ಹತ್ತಿರದಲ್ಲಿ ನಿಂತಿದ್ದ ತಂದೆಯ ಕಡೆ ನೋಡಿದ. ಭಟ್ಟ ಕೈಗಳನ್ನು ಹಿಂದಕ್ಕೆ ಜೋಡಿಸಿ ಎತ್ತಲೋ ನೋಡುತ್ತಿದ್ದ. ತನ್ನ ಸುತ್ತ ನಿಂತಿದ್ದವರಿಗೆಲ್ಲಾ ಕಣ್ಣು ಸನ್ನೆಯಲ್ಲೇ ಬರ್ತೀನಿ ಎಂದು ತಿಳಿಸಿದ. ತಮ್ಮ, ತಂಗಿಯರಿಗೆ ಮತ್ತೊಮ್ಮೆ ಹೇಳಿ, ಪ್ರಶಾಂತ ತನ್ನ ಪತ್ನಿಯೊಡನೆ ಹೊರಟ.

ಅವನತ್ತ ಹೋದ ಮೇಲೆ, ಎಲ್ಲರ ಬಾಯಲ್ಲೂ ಅವನ ಮಾತೇ. ಕೆಲವರಿಗೆ ಅವನು ಮಾಡಿದ್ದು ಸರಿ ಎನಿಸಿದರೆ, ಕೆಲವರಿಗೆ ಅವನು ಮಾಡಿದ್ದು ತಪ್ಪು ಎಂಬ ಭಾವನೆ. ಪ್ರೇಮಾ ತಂಗಿಯೊಡನೆ ಹೇಳಿಕೊಂಡು ಅತ್ತಳು.

"ಅಂತೂ ಪ್ರಶಾಂತ ತಪ್ಪು ಮಾಡಿಬಿಟ್ಟ.... ನಿಮ್ಮ ಭಾವಂಗೆ ಅವನ ಮೇಲಿನ ಕೋಪ ಇನ್ನೂ ಕಡಿಮೆ ಆಗಿಲ್ಲ..... ಅವನು ನಮ್ಮಗಳಿಗೋಸ್ಕರ ಬಂದಿದ್ನೋ, ತನ್ನ ಹೆಂಡತಿಯನ್ನು ನಮಗೆ ತೋರಿಸುವುದಕ್ಕೇಂತ ಬಂದಿದ್ನೋ.... ಅವನು ಯಾವಾಗ ಮದ್ವೆಯಾದ ಅಂತ ಕೂಡ ತಿಳಿಯಲಿಲ್ಲ. ನನಗೂ ತಿಳಿಸಲಿಲ್ಲವಲ್ಲ..."

"ತಿಳಿಸಿದ್ರೆ ನೀನು ಮದ್ವೆಗೆ ಹೋಗ್ತಿದ್ಯಾ ಪ್ರೇಮಕ್ಕ. ಭಾವ ಕಳಿಸ್ತಿದ್ರಾ..?"

"ಅದೇನೋ ದಿಟ.... ಆದರೂ...."

"ಮತ್ತೆ ಸುಮ್ನಿರು.... ಈಗ ಕೊರ್‍ಗಿ ಏನುಪ್ಯೋಗ?"

"ಅಲ್ಲ ಕಣೇ ಭವಾನಿ, ನಿಮ್ಮ ಗೌತಮ ಹೀಗೇ ಮಾಡಿದ್ರೆ ನೀನು ಸುಮ್ನಿರ್ತೀಯಾ?" ಇದಕ್ಕೆ ಭವಾನಿಯಲ್ಲಿ ಉತ್ತರವಿಲ್ಲ. ಸುಮ್ಮನಾದಳು. ಸುಶೀಲಾ ಯಾವ ಮಾತಿಗೂ ಬಾಯಿ ಹಾಕಲಿಲ್ಲ. ಅವಳಿಗೆ ದಿನೇಶನಿಂದ, ಭವಾನಿಯಿಂದ ಸ್ವಲ್ಪ ಸ್ವಲ್ಪ ವಿಷಯಗಳು ಗೊತ್ತಾಗಿದ್ದರೂ, ಅದು ಅವರುಗಳ ಮನೆಯ ಸಮಸ್ಯೆ ಎಂದುಕೊಂಡು ಸುಮ್ಮನಾಗಿದ್ದಳು. ಈಗ ಮನೆಗೆ ಸೊಸೆ ಬರುತ್ತಿದ್ದಾಳೆ. ತಾನೀಗ ಅತ್ತೆಯ ಪೀಠದಲ್ಲಿ ಕುಳಿತಿದೀನಿ. ಆ ಗೌರವವನ್ನು ಕಾಪಾಡಿಕೊಳ್ಳಬೇಕು. ಸೊಸೆಯ ಮನೆಯ ವಿಷಯದಲ್ಲಿ ತಾನು ತಲೆ ಹಾಕದಿರುವುದೇ ಒಳ್ಳೆಯದು ಎಂದುಕೊಂಡಳು. ಸಂತೋಷ ತಾನೊಮ್ಮೆ ಪ್ರಶಾಂತನಿರುವ ಎಸ್ಟೇಟ್‌ಗೆ ಹೋಗಿ ಬರಬೇಕೆಂದುಕೊಂಡ. ಮತ್ತೆ ಪ್ರಶಾಂತ ಮನೆಗೆ ವಾಪಸ್ಸು ಬರುವಂತೆ ಮಾಡಬೇಕೆಂದುಕೊಂಡ.

ಬಂದಿದ್ದ ನೆಂಟರಿಷ್ಟರಲ್ಲಿ ಕೆಲವರು ಹೊರಟುಬಿಟ್ಟಿದ್ದರು. ಭಟ್ಟ ತಾನಾಗಿಯೇ ಯಾರಿಗೂ ಉಳಿದುಕೊಳ್ಳುವಂತೆ ಹೇಳಲಿಲ್ಲ. ಉಳಿದುಕೊಂಡವರು, ಸ್ವಲ್ಪ ವಿಶ್ರಾಂತಿಯನ್ನು ತೆಗೆದುಕೊಂಡರು.

ರಾತ್ರಿ ಅಲ್ಲೇ ಊಟ ಆಯಿತು. ಊಟದ ಅನಂತರ, ಛತ್ರವನ್ನು ಖಾಲಿ ಮಾಡಿದರು. ಭವಾನಿ ಅವಳ ಗಂಡ ಹಾಗೂ ಮಕ್ಕಳು, ಸುಶೀಲಾ, ದೀಪಾ, ಗೋಪಾಲ ಅವರುಗಳು ಸಹ ಉಳಿದುಕೊಂಡರು. ನವದಂಪತಿಗೆ ಮಹಡಿಯ ಮೇಲಿನ ರೂಮೊಂದರಲ್ಲಿ ಮಲಗಲು ಸಿದ್ಧತೆ ಮಾಡಿದರು. ಪ್ರಸಾದು, ಮದುಮಗನನ್ನು ಆ ರೂಮ್‌ಗೆ ಕರೆತಂದುಬಿಟ್ಟು ಕಿವಿಯಲ್ಲಿ ಏನೋ ಪಿಸುಗುಟ್ಟಿ, ಗುಡ್ ನೈಟ್

ಹೇಳಿ ಹೋಗಿದ್ದ. ಕೆಲವೇ ನಿಮಿಷಗಳ ಅನಂತರ ವಿದ್ಯಾಳನ್ನು ಭವಾನಿ ಕರೆ ತಂದು ದಿನೇಶನ ಪಕ್ಕ ಕೂರಿಸಿದಳು.

"ದಿನೂ, ಹೆಂಡ್ತಿ ಸಿಕ್ಲು ಅಂತ, ಅತಿಯಾಗಿ ಗೋಳು ಹುಯ್ದುಕೊಳ್ಳಬೇಡ." ನಗುತ್ತಾ ಎಚ್ಚರಿಸಿದಳು.

"ಹೋಗಿ ಅತ್ತೆ.... ನನಗ್ಗೊತ್ತಿಲ್ವಾ... ನನ್ನ ಹೆಂಡ್ತೀನ ಹೇಗೆ ನೋಡ್ಕೋಬೇಕೂಂತ." ಭವಾನಿ ಬಾಗಿಲನ್ನು ಹೊರಗಿನಿಂದ ಎಳೆದುಕೊಂಡು, ಕೆಳಗಿಳಿದು ಹೊರಟು ಹೋದಳು.

ದಿನೇಶ ಪಕ್ಕದಲ್ಲಿ ಕುಳಿತಿದ್ದ ಮಡದಿಯ ಮುಖವನ್ನು ತನ್ನೆಡೆಗೆ ತಿರುಗಿಸಿಕೊಂಡ. ಗಲ್ಲವನ್ನು ಹಿಡಿದೆತ್ತಿ ಅವಳ ಚೆಲುವನ್ನೇ ಆಸ್ವಾದಿಸಿದ. ವಿದ್ಯಾ ನಾಚಿದ್ದಳು. ದಿನೇಶ ಎದ್ದು ಬಂದು, ಬಾಗಿಲನ್ನು ಭದ್ರಪಡಿಸಿದ. "ವಿದ್ಯಾ... ವಿದ್ಯಾ.... ಐ ಲವ್ ಯೂ.... ಐ ಲವ್ ಯೂ ವೆರಿ ಮಚ್...." ಎನ್ನುತ್ತಾ ಅವಳನ್ನು ಬಲವಾಗಿ ಆಲಂಗಿಸಿಕೊಂಡ.

"ನನಗೆ ನೋವಾಗುತ್ತೆ.... ಬಿಡಿ... ಬಿಡಿ...." ಅವಳು ಕೊಸರಿಕೊಳ್ಳಲು ನೋಡಿದಳು. ಅವನು ಅಪ್ಪುಗೆಯನ್ನು ಮತ್ತೂ ಬಿಗಿಗೊಳಿಸಿದ.

"ಬಿಡುಕ್ಕಲ್ಲ ನಿನ್ನನ್ನ ಮದುವೆಯಾದದ್ದು. ಈ ದಿನಕ್ಕೋಸ್ಕರ ನಿನ್ನನ್ನು ಕಂಡ ದಿನದಿಂದ ಕಾಯ್ತಿದ್ದೆ ಗೊತ್ತಾ....!?" ಎನ್ನುತ್ತಾ ಅವಳ ಮೃದುವಾದ ಕೆನ್ನೆಗಳನ್ನು ಚುಂಬಿಸಿದ.

"ನೀವು ಹೀಗೆಲ್ಲ ಮಾಡಿದ್ರೆ ನಂಗೆ ಭಯವಾಗುತ್ತೆ...." ಅವನಿಂದ ದೂರ ಸರಿಯಲು ಪ್ರಯತ್ನಿಸಿದಳು.

"ಭಯ, ನಾಚ್ಕೆ ಎಲ್ಲವನ್ನು ದೂರ ಮಾಡುವ ಮಂತ್ರ ನನಗೆ ಗೊತ್ತಿದೆ." ಎನ್ನುತ್ತಾ ಅವಳ ತುಟಿಯನ್ನು ಗಾಢವಾಗಿ ಚುಂಬಿಸಿದ. ಚುಂಬಕದ ಶಕ್ತಿಗೆ ಅಂಟಿಕೊಂಡಳು. ಆಕರ್ಷಕ ಶಕ್ತಿಗೆ ಒಳಗಾಗಿ, ನಿಧಾನವಾಗಿ ಕಣ್ಣುಗಳನ್ನು ಮುಚ್ಚಿಕೊಂಡಳು. ಮೆಲ್ಲನೆ ಅವಳನ್ನು ಮಂಚದ ಮೇಲೆ ಮಲಗಿಸಿದ.... ಸಮ್ಮೋಹನಕ್ಕೆ ಒಳಗಾದವಳಂತೆ ಕಣ್ಣುಮುಚ್ಚಿ ಮಲಗಿದವಳನ್ನೇ ದಿನೇಶ ದಿಟ್ಟಿಸಿದ.... ಈ ಹೆಣ್ಣು ನನ್ನವಳು, ಅವಳ ಯೌವನವಿರುವುದೇ ನನಗಾಗಿ... ಎಂದುಕೊಂಡು ದೀಪವನ್ನು ಆರಿಸಿದ. ಮತ್ತೆ ದೀಪವನ್ನು ಹೊತ್ತಿಸಿದ. ಅವಳನ್ನು ತನ್ನೆಡೆಗೆ ಎಳೆದುಕೊಂಡ. ವಿದ್ಯಾ ಪ್ರತಿಭಟಿಸಲಿಲ್ಲ. ಅವನು ಉತ್ತೇಜಿತನಾದ. ಯಾವ ಮುಲಾಜೂ ಇಲ್ಲದೆ, ಅವಳ ಯೌವನವನ್ನು ಸೂರೆಗೊಂಡ.

* * *

ಅಧ್ಯಾಯ–ಇಪ್ಪತ್ತೆರಡು

ಅನಾವಶ್ಯಕ ಹೆದರಿಕೆ

ಬೆಳಗ್ಗೆ ಮೊದಲು ಎಚ್ಚರವಾದುದೇ ದಿನೇಶನಿಗೆ. ತನ್ನ ಪಕ್ಕದಲ್ಲಿ ಸುಖ ನಿದ್ದೆಯಲ್ಲಿ ಮುಳುಗಿದ್ದ ಮಡದಿಯ ಮುದ್ದು ಮುಖವನ್ನೇ ನೋಡಿದ. ರಾತ್ರಿಯ ಸುಖಾನುಭವ ನೆನಪಿಗೆ ಬಂದಿತ್ತು. ಮೆಲ್ಲನೆ ಮುಂಗುರುಳನ್ನು ಸರಿಸಿ, ಅವಳ ಮುಖದ ಮೇಲೆ ಬಾಗಿದ. ಥಟ್ಟನೆ ಎಚ್ಚರಗೊಂಡ ವಿದ್ಯಾ ತುಟಿಗೆ ಅಡ್ಡ ಕೈ ಹಿಡಿದು, ಕೂಡದು ಎನ್ನುವಂತೆ ತಲೆಯಾಡಿಸಿದಳು. "ಪ್ಲೀಸ್... ಒಂದೇ ಒಂದು....." ಎಂದು ಗೋಗರೆದ. ವಿದ್ಯಾ ಒಪ್ಪಲಿಲ್ಲ.

ಬಾಗಿಲು ಬಡಿದ ಸದ್ದು ಕೇಳಿಸಿತು. ದಿನೇಶ ಅವಳಿಂದ ದೂರ ಸರಿದ. ವಿದ್ಯಾ ಗೋಡೆ ಕಡೆಗೆ ಮುಖ ತಿರುಗಿಸಿ ಮಲಗಿದಳು. ಅವನೇ ಎದ್ದು ಬಂದು ಬಾಗಿಲನ್ನು ತೆರೆದ. ಹೊರಗಡೆ ತಾಯಿ ನಿಂತಿದ್ದಳು. ಅವನು ಮುಜುಗರದಿಂದ ತಲೆ ಕೆರೆದುಕೊಂಡ.

"ಎದ್ದು ಸ್ನಾನಮಾಡಿ ರೆಡಿಯಾಗಿ. ನಾವು ಹೊರಡ್ಬೇಕು...." ತಾಯಿ ನಸುನಕ್ಕಳು-ಹೇಳಿದಳು. ಆ ನಗುವಿನಲ್ಲಿ ನಾನಾ ಅರ್ಥ ಅಡಗಿತ್ತು. ಅವನೂ ಸಂಕೋಚಗೊಂಡ. ಸುಶೀಲಾ ಹಾಗೇ ಹೊರಟು ಹೋಗಿದ್ದಳು. ದಿನೇಶ ಬಂದು ಅವಳ ಮುಸುಕನ್ನು ತೆಗೆದ.

"ನಾನು ಏಳುಲ್ಲ. ನಂಗೆ ನಾಚ್ಕೆಯಾಗುತ್ತೆ. ಎಲ್ರೂ ಒಂಥರಾ ನೋಡ್ತಾರೆ...."

"ಯಾರೂ ಏನೂ ಕೇಳುಲ್ಲ. ಎಲ್ರೂ ಮದುವೆಯಾದವರೇ... ಸುಮ್ನೇ ಏಳು ಹೊತ್ತಾಗುತ್ತೆ."

"ನೀವೊಬ್ರೇ ಊರ್ಗೆ ಹೋಗಿ. ನಾನು ಬರುಲ್ಲ."

"ಎತ್ಕೊಂಡು ಹೋಗ್ತೀನಿ ಅಷ್ಟೇ. ಇಲ್ಲೇ ಬಿಡ್ತೀನಾ....?"

ಅಷ್ಟರಲ್ಲಿ ಅಲ್ಲಿಗೆ ಭವಾನಿ ಬಂದಿದ್ದಳು. "ಇನ್ನೂ ಮುಗಿದಿಲ್ವಾ ನಿಮ್ಮ ಸರಸ?" ತಮಾಷೆಯಾಗಿ ಕೇಳಿದಳು.

"ಇಲ್ಲ ಅತ್ತೆ. ಈಗಿನ್ನೂ ಪ್ರಾರಂಭವಾಗ್ತಿದೆ. ಅಷ್ಟರಲ್ಲಿ ನೀವು ಬಂದ್ರೀ....."

"ಸರಿ ಹಾಗಾದ್ರೆ.... ನಾನು ಹೋಗಿರ್ತೀನಿ....."

"ಚಿಕ್ಕಮ್ಮಾ....." ವಿದ್ಯಾ ಕರೆದಳು.

"ಏನೇ ವಿದ್ಯಾ.....?"

"ಇವರನ್ನು ಹೊರಕ್ಕೆ ಕರ್ರೊಂಡ್ಹೋಗಿ...."

"ಇವಳು ಹೀಗೆಲ್ಲಾ ಆಡಿದ್ರೆ, ಇನ್ನೊಂದು ಮದ್ವೆ ಆಗಿಬಿಡ್ತೀನಿ ಅಷ್ಟೇ...."

"ಸುಮ್ನೇ ಯಾಕೆ ಗೋಳು ಹುಯ್ದುಕೊಳ್ತೀಯೋ....." ದಿನೇಶ ಕೋಪಗೊಂಡು ರೂಮ್‌ನಿಂದ ಹೊರಬಂದು ಬಿಟ್ಟ.

"ಚಿಕ್ಕಮ್ಮ, ಅವ್ರಿಗೆ ಕೋಪ ಬಂತಾ....?"

"ಕೋಪ ಏನಿಲ್ಲ. ಬರೀ ನಟನೆ.... ಎದ್ದು ಬೇಗ ಸ್ನಾನಮಾಡಿ ಬನ್ನಿ. ಎಲ್ಲರೂ ಒಟ್ಟಿಗೆ ತಿಂಡಿ ತಿನ್ನೋಣ...." ಭವಾನಿ ಆಣತಿ ಇತ್ತು ಹೊರಟು ಹೋದಳು.

ತಿಂಡಿಯ ಸಮಯದಲ್ಲೂ ದಿನೇಶ ಮುಖ ದಪ್ಪಗೆ ಮಾಡಿಕೊಂಡು ಕೂತಿದ್ದ. ವಿದ್ಯಾ ಕಳ್ಳನೋಟದಿಂದ ನೋಡುವುದು ಅವನ ಗಮನಕ್ಕೆ ಬಂದಿದ್ದರೂ, ಅವನು ಅವಳತ್ತ ತಿರುಗಲಿಲ್ಲ. ಅವಳು ಪೆಚ್ಚಾದಳು. ರಾತ್ರಿ ಪ್ರೀತಿಯ ಮಹಾಪೂರವನ್ನೇ ಹರಿಸಿದ್ದನವನು..... ಬೆಳಗ್ಗೆ ಅಷ್ಟು ಸಣ್ಣವಿಷಯಕ್ಕೆ ಕೋಪ ಯಾಕೆ? ಅವಳಿಗೆ ತಿಂಡಿ ಸೇರದಂತಾಗಿತ್ತು.

"ಯಾಕಮ್ಮಾ ವಿದ್ಯಾ, ಸುಮ್ನೇ ಕೂತಿದೀಯ? ತಿಂಡಿ ಆರಿ ತಣ್ಣಗಾಗುತ್ತೆ. ಬೇಗ ಬೇಗ ತಿನ್ನು." ಶಾರದಮ್ಮ ಎಚ್ಚರಿಸಿದಾಗ ಗೌತಮ ದನಿ ಎತ್ತಿದ.

"ದಿನೇಶ ತಿನ್ನಿಸ್ಲಿ ಅಂತ ಕಾಯ್ತಾ ಇದೀಯೇನೇ...." ವಿದ್ಯಾ ದಿನೇಶನ ಕಡೆ ನೋಡಿದಳು. ಅವನು ಕಣ್ಣು ಮಿಟುಕಿಸಿದಂತೆ ಅನ್ನಿಸಿತು. ತಲೆ ತಗ್ಗಿಸಿದಳು.

"ಸ್ವಲ್ಪ ವಿಚಾರಿಸ್ಕೋಪ್ಪಾ ನಿಮ್ಮ ಹುಡುಗೀನ... ಯಾಕೋ ಅಪ್ಸೆಟ್ ಆಗಿರುವ ಹಾಗಿದೆ." ಗೌತಮ ಗೇಲಿ ಮಾಡಿದ.

"ನೀನೀಗ ಎದ್ದು ಹೋಗದಿದ್ರೆ ನಿನ್ನನ್ನು ನಾನು ವಿಚಾರಿಸ್ಕೊಳ್ತೀನಿ." ತಂದೆ ನುಡಿದಾಗ ಗೌತಮ ಸುಮ್ಮನಾದ.

"ಈ ಭಾನುವಾರ ನಮ್ಮ ಮನೇಲಿ ಆರತಕ್ಷತೆ ಇಟ್ಕೊಳ್ತೀವಿ. ನೀವುಗಳೆಲ್ಲರೂ ಬರಬೇಕು." ಗೋಪಾಲ, ಸುಶೀಲಾ ಮನೆಯವರಿಗೆಲ್ಲ ಆಮಂತ್ರಣವಿತ್ತರು. ಪ್ರೇಮಾ ಸುಶೀಲಳಿಗೆ ಹೇಳಿದಳು. "ಮಗಳು, ಅಳಿಯ ಇನ್ನೊಂದೆರಡು ದಿನ ನಮ್ಮಲ್ಲಿರಲಿ. ಅನಂತರ ಕಳಿಸಿಕೊಡ್ತೀವಿ."

"ದಿನೇಶನಿಗೆ ಏನೂ ಅಭ್ಯಂತರವಿಲ್ಲದಿದ್ರೆ ನಮಗೂ ಇಲ್ಲ.... ಅವನಿಷ್ಟ."

ದಿನೇಶ ವಿದ್ಯಾಳ ಕಡೆ ನೋಡಿದ. ಅವಳು ಇರೋಣ ಎನ್ನುವಂತೆ ಸಂಜ್ಞೆ ಮಾಡಿದಳು. ದಿನೇಶ ಸಮ್ಮತಿ ಸೂಚಿಸಿದ.

"ಒಂದು ದಿನದೊಳಗೆ ಹೆಂಡತಿಯ ಗುಲಾಮನಾಗಿಬಿಟ್ಟ. ಏನು ಮಾಡಿ ಬಿಟ್ಟೆಯೇ ಜಾದೂನ?" ಗೌತಮ ಮತ್ತೆ ಪ್ರಶ್ನಿಸಿದ.

"ಅದು ನಮ್ಮಿಬ್ಬರ ಮಧ್ಯೆ ಇರುವ ಸೀಕ್ರೆಟ್. ಅದನ್ನ ನಿನಗೆ ಹೇಳುಲ್ಲ." ದಿನೇಶ ನಕ್ಕು ವಿದ್ಯಾಳ ಕಡೆ ನೋಡಿ ಕಣ್ಣುಹೊಡೆದ. ಅವಳ ರಕ್ತ ಸಂಚಲನೆ

ತೀವ್ರಗೊಂಡಿತು. ಮುಖಕ್ಕೆ ರಕ್ತ ಚಿಮ್ಮಿತು. ದಿನೇಶ ಗಲ್ಲಕ್ಕೆ ಕೈಕೊಟ್ಟು ಕೂತ.

ಪ್ರೇಮಾ ಎಲ್ಲರಿಗೂ ಉಡುಗೊರೆಗಳನ್ನು ಮಗಳ ಕೈಯಲ್ಲಿ ಕೊಡಿಸಿದಳು. ದೀಪಾ ಅತ್ತಿಗೆಯ ಕಿವಿಯಲ್ಲಿ ಉಸುರಿದಳು.

"ಅತ್ಗೇ.... ನಮ್ಮ ದಿನೂನ ಚೆನ್ನಾಗಿ ನೋಡ್ಕೊಳ್ಳಿ.... ಪಾಪ.... ಒಂದು ತಿಂಗಳ್ನಿಂದ ಸೊರಗಿ ಹೋಗಿದ್ದ. ಸರಿಯಾಗಿ ಊಟ ಮಾಡ್ತಿರ್ಲಿಲ್ಲ, ನಿದ್ದೆ ಮಾಡ್ತಿರಲಿಲ್ಲ."

"ಏ ದೀಪೂ... ನೀನೂ ಶುರು ಮಾಡಿದ್ಯಾ?"

"ಯಾಕಮ್ಮಾ ನಾನೇನು ಸುಳ್ಳು ಹೇಳಿದ್ನಾ?"

"ಇಲ್ಲಿ ನಮ್ಮ ವಿದ್ಯಾನ ಸ್ಥಿತಿಯೂ ಹಾಗೇ ಇತ್ತು. ಅವಳಿಗೇ ಅಂತ ಮಾಡಿದ ಅನ್ನ ದಿನಾ ಮಿಕ್ಕು ಬಿಡ್ತಿತ್ತು..." ಸಂತೋಷ ತಾನೇನೂ ಕಮ್ಮಿ ಇಲ್ಲ ಎನ್ನುವಂತೆ ನುಡಿದ.

"ಹೌದಾ ಶಾರದಮ್ನೋರೇ.... ಸಂತೋಷ ನಿಜ ಹೇಳ್ತಿದಾನಾ? ಅವಳನ್ನು ನೋಡಿದ್ರೆ ನನಗೆ ಹಾಗೇನೂ ಅನ್ನಿಸುಲ್ಲ." ಗೌತಮ ಕೇಳಿದ. ಶಾರದಮ್ಮ ನಕ್ಕರು.

ವಿದ್ಯಾ ಅತ್ತೆ, ಮಾವನ ಕಾಲಿಗೆ ನಮಸ್ಕರಿಸಿದಳು. "ಬೇಗ ನಮ್ಮ ಮನೆಗೆ ಬಂದು ಬಿಡಮ್ಮ... ಬೇಗ ಕಳಿಸ್ಕೊಡಿ ಪ್ರೇಮಕ್ಕ." ಇಬ್ಬರೂ ತಲೆದೂಗಿದರು. ಎಲ್ಲರೂ ವ್ಯಾನನ್ನು ಹತ್ತಿ ಕುಳಿತರು. ಅವರುಗಳು ಕೈಯಾಡಿಸುತ್ತಿದ್ದಂತೆಯೇ ವ್ಯಾನು ಹೊರಟಿತು.

* * *

ಎಲ್ಲರೂ ಒಳ ಬಂದು ಸೋಫಾದ ಮೇಲೆ ಕುಳಿತರು. ವಿದ್ಯಾ ಒಳಗೆಲ್ಲೋ ಸೇರಿಕೊಂಡಳು. ಗೌತಮನನ್ನಾದರೂ ಉಳಿಸಿಕೊಳ್ಳಬೇಕೆಂದೆನಿಸಿತ್ತು ದಿನೇಶನಿಗೆ. ಅಲ್ಲಿಯೇ ಓಡಾಡುತ್ತಿದ್ದ ಶ್ರೀಕರನನ್ನು ಕರೆದು "ಯಾವುದಾದ್ರೂ ಪುಸ್ತಕ ಇದ್ರೆ ಕೊಡು ಓದೋಕೆ." ಎಂದ.

ಶ್ರೀಕರ ಒಳಕ್ಕೆ ಹೋದ. "ಅಕ್ಕ, ಭಾವಂಗೆ ಯಾವ್ದಾದ್ರೂ ಪುಸ್ತಕ ಬೇಕಂತೆ. ಇದ್ರೆ ಕೊಡೇ..." ವಿದ್ಯಾ ನಾಲ್ಕಾರು ಕಾದಂಬರಿಗಳನ್ನು ಹಿಡಿದು ಬಂದು, ಅವನ ಮುಂದೆ ಹಿಡಿದಳು. ಅವನು ಪುಸ್ತಕವನ್ನೆತ್ತಿಕೊಳ್ಳುವ ನೆವದಲ್ಲಿ ಅವಳ ಕೈ ಹಿಡಿದ.....

"ಏನ್ಮಾಡ್ತೀದೀರ..... ಯಾರಾದ್ರೂ ನೋಡಿದ್ರೆ....."

"ನೋಡಿದ್ರೆ, ಸುಮ್ನೆ ಹೋಗ್ತಾರೆ... ಈ ಕಾದಂಬರಿಗಳನ್ನು ನೀನು ಓದಿ ದೀಯಾ? ಚೆನ್ನಾಗಿವೆಯಾ?"

"ಹುಂ ಓದಿದೀನಿ.... ಚೆನ್ನಾಗಿವೆ...."

"ಹಾಗಾದ್ರೆ, ಕಥೆ ಏನೂಂತ ಹೇಳ್ಬಿಡು...."

"ಥೂ, ನೀವೇ ಓದ್ಬೇಕು ಆಗ಼್ೇ ಮಜಾ...."

"ನನಗೆ ಕಥೆ ಓದುವುದಕ್ಕಿಂತ ಕೇಳುಕ್ಕೇ ಇಷ್ಟ... ಇಲ್ಲಿ ಬೇಡ ಬಾ, ಮಹಡಿಗೆ

ಹೋಗೋಣ...." ಕೈಗಳನ್ನು ಸವರಿದ. ಅವನ ಇಂಗಿತ ಅವಳಿಗೆ ಅರ್ಥವಾಗಿತ್ತು. ನಕ್ಕಳು.

"ಯಾವ್ದಾದ್ರೂ ಪಿಕ್ಚರ್‌ಗೆ ಹೋಗ್ಬನ್ನಿ ಅಂತ ಅಮ್ಮ ಹೇಳಿದ್ಲು..... ಹೋಗೋಣ್ವಾ?"

"ನಾವಿಬ್ರೇ ಹೋಗೋದಾದ್ರೇ ಬರ್ತೀನಿ..... ಚಿನ್ನು, ಪುಸ್ಸೀ.... ಅದೂ ಇದೂ ಅಂತ ಎಲ್ರೂ ಬಂದ್ರೇ....! ಏನೂ ಬೇಡ...."

"ಇಲ್ಲ ಯಾರೂ ಬರುಲ್ಲ. ಅವರಿಗೆಲ್ಲ ಓದ್ಕೊಳ್ಳೋದಿದೆ, ಎಲ್ಲಾ ರೂಮಿನಲ್ಲಿದಾರೆ."

"ಹೊರಡು.... ಇಲ್ಲಂತೂ ಕೂತಿರೋಕೆ ಬೇಜಾರು." ವಿದ್ಯಾ ಒಳಗೆ ಹೋಗಿ ತಾಯಿಗೆ ಹೇಳಿ ಬಂದಳು.

"ನಿಮ್ಮಪ್ಪಂಗ್ಹೇಳುಲ್ವಾ?" ದಿನೇಶನೆಂದ.

"ನಾನ್ಹೇಳುಲ್ಲ. ನೀವ್ಹೇಳಿ...." ವಿದ್ಯಾ ಎಂದಳು.

"ನಾನ್ಹೇಗೆ ಹೇಳ್ಲಿ? ಬೇಡ ಅಂತಂದು ಬಿಟ್ರೆ....?"

"ಬೇಡಾಂತ ಯಾಕಂತಾರೆ.....! ನಿನ್ನೆ ದಿನಾನೇ ನಿಮಗೆ ಧಾರೆ ಎರೆದು ಕೊಟ್ರಲ್ಲ.."

"ಪರ್ವಾಗಿಲ್ವೇ.... ಈಗ್ಲೇ ಹೇಳಿ ಬರ್ತೀನಿ." ಎನ್ನುತ್ತಾ ಆಫೀಸ್‌ನಲ್ಲಿ ಕೂತಿದ್ದ ಮಾವನ ಎದುರಿಗೆ ಬಂದು ನಿಂತ. ಏನು ಅನ್ನುವಂತೆ ಭಟ್ಟ ಕತ್ತೆತ್ತಿದ.

"ನಾವಿಬ್ರೂ ಹೊರಗೆ ಹೊರಟಿದೀವಿ. ಹೇಳೋನ ಅಂತ ಬಂದೆ...."

"ನಿಮಗೆ ಊರಿನ ಪರಿಚಯವಿಲ್ಲ. ಹುಶಾರು....." ದಿನೇಶ ಹಾಗೇ ಹಿಂದೆ ಹಿಂದಕ್ಕೆ ಸರಿದು ಅವಳ ಬಳಿಗೆ ಬಂದ. ಇಬ್ಬರೂ ರಸ್ತೆಗೆ ಇಳಿದರು. ಒಂದು ರಿಕ್ಷಾಹತ್ತಿ ಸಿನೆಮಾ ಮಂದಿರದ ಬಳಿಗೆ ಬಂದರು. ಟಿಕೆಟ್‌ಗಳು ಮುಗಿದುಹೋಗಿದ್ದವು. ಬ್ಲ್ಯಾಕ್‌ನಲ್ಲಿ ಮಾರುತ್ತಿದ್ದವನೊಬ್ಬ ಇವರಬಳಿಗೆ ಬಂದ. ದಿನೇಶ, ಟಿಕೆಟ್‌ನ ಎರಡ ರಷ್ಟು ದುಡ್ಡನ್ನು ಕೊಟ್ಟು ಟಿಕೆಟ್‌ನ್ನು ಕೊಂಡ. ಬಾಲ್ಕನಿಯ ಸೀಟುಗಳಲ್ಲಿ ಕುಳಿತರು. ಸಿನೆಮಾ ಪ್ರಾರಂಭವಾಗಿತ್ತು. ಕತ್ತಲಲ್ಲಿ ದಿನೇಶ ಅವಳ ಭುಜವನ್ನು ಬಳಸಿದ. ಅವಳು ಅವನ ಭುಜಕ್ಕೊರಗಿದಳು. ಸಿನೆಮಾ ಮುಗಿದುದೇ ಇಬ್ಬರಿಗೂ ಗೊತ್ತಾಗಲಿಲ್ಲ. ದೀಪ ಹಾಕಿದೊಡನೆ ಇಬ್ಬರೂ ಎಚ್ಚೆತ್ತು ಎದ್ದು ಹೊರಟರು. ಯಾರೋ ತಮ್ಮಿಬ್ಬರನ್ನು ಗಮನಿಸುತ್ತಿರುವರೆಂದೆನಿಸಿತ್ತು ವಿದ್ಯಾಳಿಗೆ.

"ಹತ್ತಿರದ ಯಾವುದಾದ್ರೂ ಹೋಟೇಲ್‌ಗೆ ಹೋಗೋಣ್ವಾ?" ದಿನೇಶ ಕೇಳಿದ.

"ಬೇಡ, ಮನೆಗೆ ಹೋಗೋಣ.... ಯಾರೋ ನಮ್ಮಿಬ್ಬರನ್ನೇ ನೋಡ್ತಿದಾರೆ...." ವಿದ್ಯಾ ಭಯದಿಂದ ಹೇಳಿದಳು. ಕಪ್ಪು ಕನ್ನಡಕ ಧರಿಸಿದ್ದ ಯುವಕನೊಬ್ಬ ಇವಳನ್ನೇ ನೋಡುತ್ತಿದ್ದ.

"ಯಾರು? ಯಾರು ನೋಡ್ತಿದಾರೆ....?" ದಿನೇಶ ಅತ್ತಿತ್ತ ನೋಡಿದ. ಗೊತ್ತಾಗಲಿಲ್ಲ.

"ನಂಗೊತ್ತಿಲ್ಲ. ಯಾಕೋ ನಂಗ್ಹಾಗನ್ನಿಸುತ್ತಿದೆ. ಬನ್ನಿ ಇಲ್ಲಿಂದ ಬೇಗ ಹೋಗೋಣ" ಅವನ ಕೈ ಹಿಡಿದೆಳೆದಳು. ರಿಕ್ಷಾ ಹಿಡಿದು ಇಬ್ಬರೂ ಮನೆಗೆ ಹೊರಟರು. ವಿದ್ಯಾ ಬೆವೆತು ಹೋಗಿದ್ದಳು.

"ಯಾರ್‍ಯಾರ್‍ಗೋ ನಾವ್ಯಾಕೆ ಹೆದರ್ಬೇಕು? ನಿನ್ನ ಮುಖಾನ ಯಾರಾದ್ರೂ ನೋಡಿದ್ರೆ ನಾನೇ ನಿನ್ನನ್ನು ಅಪಹರಿಸ್ಕೊಂಡು ಹೋಗ್ತಾ ಇದೀನಿ ಅಂತ ಅಂದ್ಕೋತಾರೆ ಅಷ್ಟೇ....."

"ಇಲ್ಲ ದಿನೇಶ್, ನನಗೆಷ್ಟು ಭಯ ಆಗ್ತಿದೆ ಅಂತ...." ಅವನ ಭುಜದ ಮೇಲೆ ತಲೆಯನ್ನಿಟ್ಟಳು. ರಿಕ್ಷಾದಿಂದ ಇಳಿದವಳು ಸೀದಾ ಮಹಡಿಗೆ ಹೋಗಿ ತನ್ನ ರೂಮ್‌ನಲ್ಲಿ ಕುಳಿತುಬಿಟ್ಟಳು. ದಿನೇಶನೂ ಅವಳ ಹಿಂದೆ ಬಂದ. ಫ್ಯಾನ್ ಹಾಕಿದ. ಗಾಳಿ ಬೀಸಿತು.

"ಅಕ್ಕಾ, ಭಾವನ್ನೂ ಕರ್‍ಕೊಂಡು ಊಟಕ್ಕೆ ಬರಬೇಕಂತೆ. ಅಮ್ಮ ಕರೀತಿದಾಳೆ" ಇಬ್ಬರೂ ಕೆಳಗಿಳಿದು ಬಂದರು.

"ಯಾಕೆ ವಿದ್ಯಾ ಒಂಥರಾ ಇದೀಯ? ಮುಖ ಯಾಕೆ ಹಾಗೆ ದಪ್ಪಗಾಗಿದೆ?" ಸಂತೋಷ ಕೇಳಿದ.

"ಬಿಸಿಲ್ನಲ್ಲಿ ಸುತ್ತಾಡಿ ಬಂದಿದಾರೆ.. ಆಯಾಸ ಆಗಿರುತ್ತೆ.... ಊಟ ಮಾಡಿ ಒಂದ್ಗಳ್ಗೆ ಮಲಗಿದ್ರೆ ಆಯಾಸ ಪರಿಹಾರ ಆಗುತ್ತೆ." ಶಾರದಮ್ಮ ನುಡಿದರು. ಊಟ ಮುಗಿಸಿ ವಿದ್ಯಾ ಮತ್ತೆ ತನ್ನ ರೂಮನ್ನು ಸೇರಿಬಿಟ್ಟಳು. ಒಳಬಂದ ದಿನೇಶ ಅವಳು ಮಲಗಿರುವುದನ್ನು ಕಂಡು, ಬಾಗಿಲನ್ನು ಹಾಗೇ ಮುಂದಕ್ಕೆಳೆದುಕೊಂಡು ಸಂತೋಷನ ರೂಮ್‌ಗೆ ಬಂದ.

"ಯಾಕ್ಭಾವ ನೀವು ಮಲಗಲಿಲ್ವಾ?"

"ಮಧ್ಯಾಹ್ನದ ಹೊತ್ತು ನನಗೆ ನಿದ್ದೆ ಮಾಡಿ ಅಭ್ಯಾಸವಿಲ್ಲ. ಓದ್ಕೋತಾ ಇದ್ಯಾ! ಏನಾದ್ರೂ ತೊಂದರೆ ಆಯಿತಾ....?"

"ಏನಿಲ್ಲ. ಬನ್ನಿ ಕೂತ್ಕೊಳ್ಳಿ" ದಿನೇಶ ಅಲ್ಲಿದ್ದ ಕುರ್ಚಿಯ ಮೇಲೆ ಕುಳಿತ. ಕೇಳಲೋ ಬೇಡವೋ ಎಂದು ಅನುಮಾನಿಸುತ್ತಾ ಕಡೆಗೂ ಕೇಳಿದ.

"ನಿಮ್ಮ ಅಕ್ಕ ಯಾಕೆ ಸಣ್ಣ ಸಣ್ಣ ವಿಷಯಕ್ಕೂ ಭಯ ಬೀಳ್ತಾಳೆ?"

"ಭಯಾನ? ಏನಂತೆ?" ದಿನೇಶ ಬೆಳಗ್ಗೆ ನಡೆದ ವಿಷಯವನ್ನು ತಿಳಿಸಿದ.

"ಅವನ್ಯಾರನ್ನೋ ನೋಡಿ ಭಯದಿಂದ ಬಿಳುಚಿಹೋದ್ಲು. ನಿಮ್ಗೇನಾದ್ರೂ ಹೇಳಿದಾಳಾ?" ಸಂತೋಷ ಮೌನಿಯಾದ. ಕಿಶೋರನೇನಾದ್ರೂ ಹೆದ್ರಿಸಿರ್‍ಬಹುದೇ....? ಇನವನಿಗೆ ಹೇಳುವುದೇ? ಬೇಡವೇ ಅಂತ ಯೋಚಿಸುತ್ತಿದ್ದ.

"ನಿಮಗೆ ಗೊತ್ತಿಲ್ಲದಿದ್ರೆ ತಲೆ ಕೆಡಿಸ್ಕೋಬೇಡ....ಅವಳೇ ಯಾವುದಾದ್ರೂ ಕಲ್ಪನೆಗೆ ಒಳಗಾಗಿರಬಹುದು..." ಎನ್ನುತ್ತಾ ಎದ್ದು ಬಂದ. ವಿದ್ಯಾ ಗಾಢನಿದ್ದೆಯಲ್ಲಿದ್ದಳು. ಬಾಗಿಲನ್ನು ಮರೆ ಮಾಡಿ, ತಾನೂ ಅವಳ ಪಕ್ಕ ಉರುಳಿಕೊಂಡ.

ಸಾಯಂಕಾಲ, ಮನೆಯಲ್ಲೇ ಕುಳಿತು ಏನು ಮಾಡುವುದೆಂದು ದಿನೇಶ ಸಿದ್ದನಾಗಿ ಹೊರಹೊರಟ. ವಿದ್ಯಾ ತಾನು ಬರುವುದಿಲ್ಲವೆಂದುಬಿಟ್ಟಳು.

"ನೀವೂ ಹೋಗ್ಬೇಡಿ ದಿನೇಶ್, ಮನೇಲೇ ಕೂತು ಏನಾದ್ರೂ ಗೇಮ್ ಆಡೋಣ." ಎಂದಿದ್ದಳು.

"ನಿನ್ನ ತಮ್ಮಂದಿರು, ತಂಗಿಯರು ಪರೀಕ್ಷೆಗೆ ಓದಿಕೊಳ್ತಿದಾರೆ.... ಆಟಗೀಟ ಏನೂ ಬೇಡ. ನೀನೂ ಓದ್ಕೋ.... ನಾನೊಬ್ನೇ ತಿರುಗಾಡಿ ಬರ್ತೀನಿ."

"ನಾನು ಪರೀಕ್ಷೆಗೆ ಹೋದ್ರೆ ಫೇಲಾಗುವುದು ಖಂಡಿತ."

"ಪರೀಕ್ಷೆ ಅಂದ್ರೆ ಭಯಾನಾ?"

"ಭಯ ಏನಿಲ್ಲ. ಬೇಜಾರು.... ನಾನು ಓದ್ಲೇ ಬೇಕಾ?"

"ನಿನಗಿಷ್ಟವಿಲ್ಲದಿದ್ರೆ ಬಿಡು. ನಾನು ಬಲವಂತ ಮಾಡುಲ್ಲ. ಆದ್ರೆ ಪರೀಕ್ಷೆಗೆ ಹೋದ್ರೆ ಫೇಲಾಗ್ಬಾರ್ದು." ಅವಳ ತಲೆಗೂದಲ ಮೇಲೆ ಕೈಯಾಡಿಸಿದ.

"ಹ್ಞಾಂ...ಕೂದಲನ್ನೇಕೆ ಜುಂಗಿಸೋದು." ಎನ್ನುತ್ತಾ ಅವನ ಕ್ರಾಪ್‌ನ್ನು ಕೆದರಿದಳು. ಅವಳ ಹುಡುಗಾಟಕ್ಕೆ ಅವನಿಗೆ ನಗು ಬಂತು. ಕನ್ನಡಿಮುಂದೆನಿಂತು ಮತ್ತೊಮ್ಮೆ ಕ್ರಾಪ್‌ನ್ನು ತೀಡಿಕೊಂಡು, ಬೈ ಬೈ ಹೇಳಿ, ಮಹಡಿಯಿಂದ ಕೆಳಗಿಳಿದ. ಅವನತ್ತ ಹೋದ ಕೂಡಲೇ ವಿದ್ಯಾ ಸಂತೋಷನ ರೂಮ್‌ಗೆ ಬಂದಳು.

"ನಿದ್ದೆ ಆಯ್ತೇನೇ ಅಕ್ಕಾ. ನೀನ್ಯಾಕೆ ವಾಕಿಂಗ್ ಹೋಗ್ಲಿಲ್ಲ?" ಕೇಳಿದ.

ದಿನೇಶ ಹೇಳಿದ್ದನ್ನೇ ವಿದ್ಯಾ ಹೇಳಿದಳು.

"ಅವನ್ಯಾವನೋ ಹೆದರಿಸೋ ಹಾಗೆ ನೋಡ್ತಿದ್ದ. ನನಗೆ ಭಯ ಆಯ್ತು...."

"ಅವನ್ಯಾರು ಅಂತ ಗೊತ್ತಾಗ್ಲಿಲ್ವಾ? ಕಿಶೋರ ಇರಬಹುದಾ....?"

"ಕಿಶೋರ ಅಲ್ಲ ಅಂತ ಅನ್ನಿಸುತ್ತೆ.... ಅವನು ಪೋಲೀಸ್ ಕಸ್ಟಡೀಲಿ ಇದಾನೆ ಅಲ್ವಾ...?"

"ಹೌದು ಹಾಗಾದ್ರೆ ಇವನ್ಯಾರಿರಬಹುದು?"

"ನಂಗೊತ್ತಿಲ್ಲ ಸಂತೋಷ. ಈ ಊರ್ನಿಂದ ಹೊರಟು ಹೋದ್ರೆ ಸಾಕು ಅಂತ ಅನ್ನಿಸ್ತಿದೆ. ಆದ್ರೆ ದಿನೇಶಂಗೆ ಇದನ್ನೆಲ್ಲ ಹೇಳೋಕೆ ಇಷ್ಟವಿಲ್ಲ. ಆದ್ರೂ.... ಅವನ್ಯಾರೋ ನೋಡ್ತಿದಾನೆ ಅಂತ ಹೇಳ್ದಾಗ ಅವರು ನಂಬಲಿಲ್ಲ."

"ಸುಮ್ನಿರು, ಅದನ್ನೆಲ್ಲ ಹೇಳ್ಬೇಡ. ಇಲ್ಲದ ಸಂಶಯ ಬರುತ್ತೆ. ಇನ್ನೆರಡು ದಿನಗಳು ಅಷ್ಟೇ. ಊರಿಗೆ ಹೊರಟು ಹೋಗ್ತೀಯಲ್ಲ." ಅವನು ಸಂತೈಸಿದ.

ದಿನೇಶ ಹೆಚ್ಚುದೂರ ತಿರುಗಾಡದೇ ವಾಪಸ್ಸಾಗಿದ್ದ. ಎಲ್ಲರ ಊಟ ಮುಗಿದ

ಮೇಲೆ ಶಾರದಮ್ಮ ವಿದ್ಯಾಳನ್ನು ಅಡುಗೆ ಮನೆಗೆ ಕರೆದರು...

"ಬೆಳಗ್ಗೆ ಹೊರಗೆ ತಿರುಗಾಡ್ಕೊಂಡು ಬಂದಾಗ್ನಿಂದ ಒಂಥರಾ ಇದೀಯ... ಎಂತೆಂಥೋರದ್ದೋ ದೃಷ್ಟಿ ತಾಗಿರುತ್ತೆ. ನಿನ್ನೇನೇ ದೃಷ್ಟಿತೆಗೆಯಬೇಕಾಗಿತ್ತು. ನಿಂತ್ಕೋ" ಎಂದು ಹೇಳಿ, ಒಂದು ಹಿಡಿ ಒಣಮೆಣಸಿನಕಾಯಿಯೊಂದಿಗೆ ಹರಳು ಉಪ್ಪನ್ನು ಮುಷ್ಟಿಯಲ್ಲಿ ಹಿಡಿದು ಎಡಚಾಗಿ ಸುತ್ತಿ ನಿವಾಳಿಸಿ, ಸೌದೆ ಒಲೆಗೆ ಹಾಕಿದರು. ಸೌದೆ ಉರಿಯುತ್ತಿತ್ತು. ಕ್ಷಣ ಮಾತ್ರದಲ್ಲಿ ಮೆಣಸಿನಕಾಯಿ, ಉಪ್ಪು ಚಿಟಿಚಿಟಿ ಎಂದು ಸಿಡಿದು, ಘಾಟು ತುಂಬಿಕೊಂಡಿತು. ಮುಂದಿದ್ದ ಒಲೆಯ ಬೂದಿಯನ್ನು ಅವಳ ಹಣೆಗಿಟ್ಟು "ಹೋಗಿ ಮಲಕ್ಕೋ" ಎಂದು ಕಳಿಸಿದರು.

"ಇದೇನೇ ವಿದ್ಯಾ ಹಣೇಲಿ ವಿಭೂತಿ?" ದಿನೇಶ ಗೇಲಿ ಮಾಡಿದ.

"ಶಾರದಮ್ಮ ದೃಷ್ಟಿ ತೆಗೆದರು...."

"ನನ್ನನ್ನೂ ಎಲ್ರೂ ನೋಡಿದಾರೆ. ನನಗ್ಯಾಕೆ ದೃಷ್ಟಿ ತೆಗೆಯಲಿಲ್ಲ....!"

"ಬನ್ನಿ, ನಿಮಗೂ ತೆಗೆಸ್ತೀನಿ...."

"ಬೇಡ ಮಹರಾಯಿತಿ. ಸುಮ್ನೇ ಹೇಳಿದೆ.... ಬಾ ಮಲಗೋಣ." ಅವಳ ಕೈ ಹಿಡಿದು ತನ್ನ ಪಕ್ಕದಲ್ಲಿ ಕೂರಿಸ್ಕೊಂಡ. ವಿದ್ಯಾ ಅವನ ಎದೆಯ ಮೇಲೆ ಕೈಯಾಡಿಸಿದಳು.

"ನಾಳೆ ಊರಿಗೆ ಹೋಗೋಣ್ವಾ?" ಮುದ್ದಾಗಿ ಕೇಳಿದಳು.

"ಯಾಕೆ.....? ತವರ್ಮನೆ ಆಸೆ ತೀರಿ ಹೋಯ್ತಾ....?"

"ಯಾಕೋ ಈ ಊರ್ನಿಂದ ಆದಷ್ಟು ಬೇಗ ಹೋಗಿ ಬಿಡೋಣ ಅಂತನ್ನಿಸ್ತಿದೆ."

"ನಿನ್ನೇನೇ ಹೋಗ್ಬಹುದಾಗಿತ್ತು...."

"ಹೌದು.... ಆದರೆ....."

"ಅದ್ಯಾವನೋ....ನೋಡ್ತಿದ್ದ ಅಂತ ಹೆದರಿ, ಹೋಗೋಣ ಅಂತ ಹೇಳ್ತಿದೀಯ.... ನಾನಿದೀನಿ. ನಿಂಗ್ಯಾಕೆ ಅವನ ಭಯ..."

"ಯಾಕೋ ಏನೋ ಅವನು ನೋಡಿದ ರೀತೀನ ನನ್ನಿಂದ ಮರೆಯಕ್ಕೇ ಆಗ್ತಿಲ್ಲ."

"ಎಲ್ಲವನ್ನು ಮರೆಸೋಕ್ಕೇ ನಾನಿದೀನಲ್ಲ...." ಎನ್ನುತ್ತಾ ಅವಳನ್ನು ಬಳಿಗೆಳೆದುಕೊಂಡ. ವಿದ್ಯಾ ಅವನ ತೋಳ್ತೆಕ್ಕೆಯಲ್ಲಿ ಎಲ್ಲವನ್ನೂ ಮರೆತಳು.

ಒಂದು ಹೊತ್ನಲ್ಲಿ ವಿದ್ಯಾ ಕಿಟಾರನೆ ಕಿರುಚಿ ಎದ್ದು ಕೂತಳು. ಬೆಚ್ಚಿ ಬಿದ್ದ ದಿನೇಶ ಎಚ್ಚರಗೊಂಡು ದೀಪವನ್ನು ಹಾಕಿದ... ವಿದ್ಯಾ ತರತರನೆ ನಡುಗುತ್ತಿದ್ದಳು. ಮುಖವೆಲ್ಲಾ ಬೆವರಿನಿಂದ ತೋಯ್ದು ಹೋಗಿತ್ತು.

"ಏನಾಯ್ತು ವಿದ್ಯಾ? ಯಾಕೆ ಹಾಗೆ ಕಿರುಚ್ಕೊಂಡೆ? ಕೆಟ್ಟ ಕನಸು ಬಿತ್ತಾ?"

"ಹುಂ. ಕೆಟ್ಟ ಕನಸು. ತುಂಬಾ ಕೆಟ್ಟ ಕನಸು....ಅವನು ನನ್ನ ಹಿಂದೆ ಹಿಂದೇನೇ

ಬಂದು ಮುಖಕ್ಕೆ ಏನನ್ನೋ ಎರಚಿದ...." ಎನ್ನುತ್ತಾ ಮುಖವನ್ನು ಒರೆಸಿಕೊಂಡಳು.

"ಯಾರು ಏನನ್ನೂ ಎರಚಿಲ್ಲ. ನೋಡು ನಿನ್ನ ಮುಖ ಎಷ್ಟು ಕ್ಲೀನಾಗಿದೆ" ಎಂದು ಕೆನ್ನೆಗಳನ್ನು ಸವರಿದ......ಅವಳನ್ನು ತನ್ನ ಎದೆಗೆ ಒರಗಿಸಿಕೊಂಡು ಮೆಲ್ಲನೆ ಅವಳನ್ನು ತಟ್ಟಲಾರಂಭಿಸಿದ. ಸ್ವಲ್ಪ ಹೊತ್ನಲ್ಲೇ ಅವಳು ನಿದ್ದೆ ಹೋಗಿದ್ದಳು. ಆದರೆ ಅವನ ನಿದ್ದೆ ಹಾರಿಹೋಗಿತ್ತು.

ಹೀಗೆ ದಿನಾ ರಾತ್ರಿ ಇವಳು ಕನವರಿಸಿಕೊಂಡು ಕಿರುಚಿದರೆ, ನನ್ನ ನಿದ್ದೆಯ ಗತಿ? ಅವನ್ಯಾರೋ ಯಾಕೆ ಇವಳನ್ನು ಅಟ್ಟಿಸ್ಕೊಂಡು ಬಂದ....? ಅವನ್ಯಾರೋ ನೋಡಿದ ಮಾತ್ರಕ್ಕೆ ಇವಳೇಕೆ ಇಷ್ಟು ಭಯ ಪಡಬೇಕು....? ಕಾರಣ ಏನಿರಬಹುದು? ತಲೆ ಕೆಡಿಸಿಕೊಂಡರೂ ಉತ್ತರ ಸಿಗಲಿಲ್ಲ.

ಬೆಳಗ್ಗೆ ಸ್ನಾನ, ತಿಂಡಿ ಮುಗಿದ ಮೇಲೆ, ವಿದ್ಯಾ ತನ್ನ ಬಟ್ಟೆಗಳನ್ನು ಜೋಡಿಸಿಟ್ಟು ಕೊಳ್ಳಲಾರಂಭಿಸಿದಳು. "ಸುಮ್ನೆ ಹಳೇದನ್ನೆಲ್ಲಾ ತೆಗೆದಿಟ್ಟುಕೊಳ್ಳಬೇಡ... ನಾನು ಹೊಸ ಸೀರೆ ಬಟ್ಟೆಗಳನ್ನು ಕೊಡಿಸ್ತೀನಿ..." ಎಂದ.

"ಇಲ್ಲ, ನನ್ನ ಹತ್ರ ಹೆಚ್ಚು ಬಟ್ಟೆಗಳಿಲ್ಲ. ಬಿಟ್ಟು ಬಂದ್ರೆ ಅದನ್ನೆಲ್ಲಾ ಯಾರು ಉಡುತ್ತಾರೆ? ಸ್ಟೀಲ್ ಪಾತ್ರೆಯವನನ್ನು ಕರೆದು ಕೊಡುವ ಹಾಗಿಲ್ಲ. ಅಪ್ಪನಿಗೆ ಅದೆಲ್ಲ ಇಷ್ಟವಿಲ್ಲ. ಒಂದ್ಸಾರಿ ಏನಾಯ್ತು ಗೊತ್ತಾ? ಒಬ್ಬ ಹಳೇ ನಿರಾಜಿಯೋನು ಪದೇ ಪದೇ ಬಂದು, ಹಳೇ ಬಟ್ಟೆ ಹಾಕಿ, ಪಾತ್ರೆ ಕೊಡ್ತೀನಿ ಅಂತ ಸತಾಯಿಸುತ್ತಿದ್ದ.... ಅವತ್ತು ಅಪ್ಪನಿಗೆ ಏನು ರೇಗ್ತೋ ಏನೋ ಚೆನ್ನಾಗಿ ಬೈದು ಬಿಟ್ಟರು. ಅವನೂ ಅಪ್ಪನನ್ನು ಬೈದ. ಅಪ್ಪ ಒಂದೇಟು ಹೊಡೆದೇ ಬಿಟ್ರು.... 'ನಾನು ಪೋಲೀಸ್ ಕಂಪ್ಲೇಂಟ್ ಕೊಡ್ತೀನಿ' ಅಂತ ಅವನು ಹೆದರಿಸಿ ಹೋಗಿದ್ದ. ಆಮೇಲೇನಾಯ್ತು ಅಂತ ಗೊತ್ತಾಗ್ಲಿಲ್ಲ."

"ನಿಮ್ಮಪ್ಪ ಅವನನ್ನು ಹೊಡೆದದ್ದು ತಪ್ಪು ತಾನೇ....?"

"ಅವನು ಅಪ್ಪನ್ನ ಕೆಟ್ಟದಾಗಿ ಬೈದದ್ದೂ ತಪ್ಪಲ್ವಾ....?"

"ಅದಕ್ಕೆ ಅಂಥೋರ ಹತ್ರ ಮಾತಿಗೇ ಹೋಗ್ಬಾರ್ದು. ಅವರು ಜಿದ್ದು ಸಾಧಿಸ್ತಾರೆ.... ವಿದ್ಯಾ..... ಅವನ್ಯಾರೋ ನಿನ್ನ ಕಡೇನೇ ನೋಡ್ತಿದ್ದ ಅಂದ್ಯಲ್ಲ. ಅವನೇ ಇರಬಹುದಾ?"

"ನಂಗೊತ್ತಿಲ್ಲ ದಿನೇಶ್.... ಆ ಪಾತ್ರೆ ಮಾರೋನ್ನ ನಾನಂತೂ ಸರಿಯಾಗಿ ನೋಡಿರ್ಲಿಲ್ಲ. ಅಪ್ಪ ಹೀಗೇ ಯಾರ್‍ಯಾರನ್ನೋ ಬೈದು ಜಗಳ ಆಡಿ, ತುಂಬಾ ಜನರ್ಹತ್ರ ದ್ವೇಷ ಕಟ್ಕೊಂಡಿದಾರೆ..... ಅದಕ್ಕೇ ನನಗೆ ಭಯ....."

"ನಿಮ್ಮಪ್ಪಂಗೇನೂ ಭಯವಿಲ್ಲ. ಅವರೇ ಲಾಯರ್ರು..."

"ಲಾಯರ್ರಾದ್ರೇನು, ಎಲ್ಲರ ಹತ್ರ ಜಗಳ ಆಡ್ಬೇಕೂಂತ ಏನಿಲ್ಲ.... ನನಗೆ ಅಪ್ಪನಬುದ್ಧಿ ಒಂದುಚೂರೂ ಹಿಡಿಸುಲ್ಲ. ಅದಕ್ಕೇ ನಮಗೆಲ್ಲಾ ಲಾಯರ್ಸ್‌ನ ಕಂಡ್ರೇ

ಇಷ್ಟವಿಲ್ಲ. ಲಾ ಓದುಕ್ಕೆ ಪ್ರಶಾಂತ ಒಪ್ಪಲಿಲ್ಲ ಅಂತ ಅಪ್ಪಂಗೆ ಅವನ ಮೇಲೆ ಸಿಟ್ಟು...."

ಕಿಟಕಿಯ ಹತ್ತಿರ ನಿಂತು ಅವಳ ಮಾತುಗಳನ್ನಾಲಿಸುತ್ತಿದ್ದ ದಿನೇಶ, ವಿದ್ಯಾ ವಿದ್ಯಾ ಎಂದು ಪಿಸುದನಿಯಲ್ಲಿ ಕರೆದು, ಮರೆಯಲ್ಲಿ ನಿಂತು, ಬೀದಿ ಕಡೆ ಕೈ ಮಾಡಿದ.

"ಅವನೇನಾ ನೋಡು....."

"ಹೂಂ. ಹೌದು ದಿನೇಶ್..... ಇಲ್ಲೇನ್ಮಾಡ್ತಿದಾನೆ ಅವನು....?" ತಣ್ಣಗಾಗಿತ್ತು ಅವಳ ರಕ್ತ. ಮುಖದ ಬಣ್ಣ ಪೇಲವವಾಗಿತ್ತು.

"ನಿಮ್ಮಪ್ಪ ಮನೇಲಿದ್ರೆ ಹೇಳೋಣ.. ಪೋಲೀಸ್ನೋಳ್ಗೆ ಹಿಡಿದು ಕೊಡೋಣ...."

"ಬೇಡ.....ಬೇಡ...."ಅವನ ಕೈ ಹಿಡಿದೆಳೆದಳು.

"ಸಂತೋಷನನ್ನಾದರೂ ಕರೆಯೋಣ...." ಎನ್ನುತ್ತಾ ಅವನನ್ನು ಕರೆತಂದ. "ನೋಡಿ ಇದೇ ಮನುಷ್ಯ..... ಇವನನ್ನು ನೋಡಿಯೇ ಇವಳು ಭಯ ಪಟ್ಕೊಂಡಿರೋದು. ಇವನು ಯಾರು ಅಂತ ನಿಮಗೇನಾದ್ರೂ ಗೊತ್ತಾ....?"

"ಇಲ್ಲ. ಯಾರೋ ನಂಗೊತ್ತಿಲ್ಲ. ನಾನು ಈಗ್ಲೇ ಹೋಗಿ ಕೇಳ್ಕೊಂಡ್ಬರ್ತೀನಿ."

"ಬೇಡ ಕಣೋ.... ಏನಾದ್ರೂ ಅಪಾಯ ಆಗ್ಬಹುದು...."

"ಅದ್ಹೇಗೆ ಸುಮ್ಮನಿರೋಕೆ ಆಗುತ್ತೆ? ನಾನೀಗ್ಲೇ ಹೋಗ್ತೀನಿ." ಅವನು ದುಡುದುಡನೆ ಮೆಟ್ಟಲನ್ನಿಳಿದು ಬಂದ. ಮುಂಬಾಗಿಲನ್ನು ದಾಟಲಿದ್ದವನನ್ನು ಹಿಂದಿನಿಂದ ಭಟ್ಟ ಕರೆದು ನಿಲ್ಲಿಸಿದ. "ಎಲ್ಲಿಗೆ ಹೋಗ್ತಿದೀಯ....?"

"ಅಪ್ಪ ನೋಡೀಪ್ಪಾ.... ಅಲ್ಯಾವನೋ ನಿಂತಿರೋನು... ನಮ್ಮನೆ ಕಡೇನೇ ನೋಡ್ತಿದಾನೆ..... ನಿನ್ನೆ ದಿನ, ವಿದ್ಯಾಳನ್ನೇ ಹಿಂಬಾಲಿಸಿ, ಅವಳನ್ನು ಹೆದರಿಸಿದ್ದಾನೆ." ಭಟ್ಟ ಅವನ ಜತೆ ಬಂದು ಬೀದಿಯಲ್ಲಿ ನಿಂತಿದ್ದ ಆ ವ್ಯಕ್ತಿಯನ್ನು ನೋಡಿದ.....

"ನಿಮ್ಮನ್ನು ನೋಡಿದ ಕೂಡ್ಲೇ ಮರೆಯಾಗ್ಬಿಟ್ಟ..... ನಾನೀಗ್ಲೇ ಅವನ ಹಿಂದೆ ಹೋಗಿ ಪೋಲೀಸರಿಗೆ ಹಿಡಿದು ಕೊಡ್ತೀನಿ."

"ಅದಕ್ಕೆಲ್ಲ ನೀನು ತಲೆ ಕೆಡಿಸ್ಕೋಬೇಡ..... ನಾನು ನೋಡಿಕೊಳ್ತೀನಿ. ಇನ್ನು ಹದಿನೈದು ದಿನಕ್ಕೆ ನಿನ್ನ ಪರೀಕ್ಷೆ ಶುರುವಾಗುತ್ತೆ ನೆನಪಿದೆ ತಾನೇ...." ಮತ್ತೆ ಸಂತೋಷನಿಗೆ ಮಾತಿಗೆ ಅವಕಾಶ ಕೊಡಲಿಲ್ಲ. ಪೆಚ್ಚಾದ ಸಂತೋಷ ಮತ್ತೆ ಮಹಡಿಯನ್ನೇರಿದ.

"ಅವನು ಹೊರಟ್ಹೋದ....." ದಿನೇಶನೆಂದ.

"ಹೌದು. ಅವನು ಅಪ್ಪನ ಮುಖವನ್ನು ಕಂಡ ಕೂಡ್ಲೇ ಹೆದರಿ ಹೊರಟ್ಹೋದ."

"ಸದ್ಯ. ಮತ್ತೆ ಬರುಲ್ಲ ತಾನೇ...."

"ಹಾಗೆ ಹೇಳೋಕ್ಕಾಗುಲ್ಲ. ಅಪ್ಪ ಏನು ಸದಾ ಮನೇಲಿರ್ತಾರಾ....? ಯಾರೋ

ಅಪ್ಪನಿಗಾಗದವರಿರಬೇಕು ಅಥವಾ ಕಿಶೋರನ ಕಡೆಯವನಿರಬೇಕು....."

"ಕಿಶೋರ.... ನಿಮ್ಮ ಕಾಮಾಕ್ಷಿ ಅತ್ತೆಯ ಮಗ...." ಅವನು ಹೌದು ಎನ್ನುವಷ್ಟರಲ್ಲಿ ವಿದ್ಯಾ ಅವನ ತೋಳು ಚಿವುಟಿದಳು. ಅವನು ಎಚ್ಚೆತ್ತ.

"ಕಿಶೋರನ ಸ್ನೇಹಿತನಾಗಿದ್ದರೆ, ವಿದ್ಯಾಳ ಹಿಂದೆ ಯಾಕೆ ಬೀಳ್ತಾನೆ...? ಅಂದ್ಹಾಗೇ ಕಿಶೋರ ಮದುವೆಗೆ ಬಂದಿರಲಿಲ್ಲ ಯಾಕೆ? ಅವನ ತಾಯಿ ಬಂದಿದ್ರು ಅಲ್ವಾ....?"

ಸಂತೋಷ, ವಿದ್ಯಾ ಇಬ್ಬರೂ ಉತ್ತರಿಸಲಿಲ್ಲ. ಸುಮ್ಮನಾಗಿದ್ದರು. ದಿನೇಶ ನಕ್ಕ.

"ಸಾರಿ ಕಿಶೋರನ ವಿಷಯಾನ ನಾನು ಕೇಳ್ಬಾರ್ದಾಗಿತ್ತು. ನನಗ್ಯಾಕೆ ಅಲ್ವಾ?"

"ಅದು ಹಾಗಲ್ಲ." ಎಂದು ಹೇಳ ಹೊರಟವನನ್ನು ವಿದ್ಯಾ ತಡೆದಳು.

"ಹೇಳಲಿ ಬಿಡು. ಈಗ ನನಗೆ ಕಿಶೋರನ ಮೇಲೆ ಯಾವ ಸಿಟ್ಟೂ ಇಲ್ಲ. ಈಗ ನೀನು ನನ್ನವಳು. ಅವನನ್ನು ಸಂಪೂರ್ಣವಾಗಿ ಮರೆತಿದೀಯ ಅಂತ ಅಂದ್ಕೊಂಡಿದೀನಿ.."

"ನನಗೆ ಕಿಶೋರನ ಮೇಲೆ ಯಾವ ಪ್ರೀತಿಯೂ ಇರಲಿಲ್ಲ..... ನಾನು ಪ್ರೀತಿಸಿದ್ದು ನಿಮ್ಮನ್ನೇ."

"ನನಗೆ ಗೊತ್ತು. ಒಂದು ಸಾರಿ ನಾನೇ ನಿನ್ನ ಮೇಲೆ ರೇಗಿದ್ದೆ. ಕಿಶೋರನ ಮಾತು ಬೇಡಾಂತ.... ನಿನಗೆ ಏನಾದ್ರೂ ಹೇಳೋಕೆ, ನಿನ್ನ ಹತ್ರ ಮಾತಾಡ್ಬೇಕೂಂತ ಕಿಶೋರ ಕಾಯ್ತಾ ಇರಬಹುದು. ಅವನೇ ಯಾರನ್ನಾದ್ರೂ ಕಳಿಸಿರಬಹುದು...."

"ಇಲ್ಲ. ಅದು ಸಾಧ್ಯವೇ ಇಲ್ಲ... ಅವನು ಪೋಲೀಸ್ ಕಸ್ಟಡೀಲಿ ಇದಾನೆ" ಎಂದು ಹೇಳಿ ಬಿಟ್ಟ ಸಂತೋಷ.

"ಪೋಲೀಸ್ ಕಸ್ಟಡೀನಾ? ಯಾಕೆ....?"

"ಹೀಗ್ಹೀಗಾಯ್ತು...." ಎಂದು ನಡೆದುದನ್ನೆಲ್ಲ ಸಂತೋಷ ವರದಿ ಒಪ್ಪಿಸಿದ. ಈಗ ದಿನೇಶನಿಗೆ ಅವಳ ಭಯ ಅರ್ಥವಾಗಿತ್ತು. ಕನಸಿನ ಕಾರಣವೂ ತಿಳಿಯಿತು. ವಿದ್ಯಾ ಅವನಿಗೆ ಬೆನ್ನು ಮಾಡಿ ನಿಂತು, ಕಣ್ಣೀರು ಸುರಿಸುತ್ತಿದ್ದಳು. ಅವಳ ಎದುರಿಗೆ ಬಂದು ನಿಂತ....

"ಇಷ್ಟೆಲ್ಲಾ ನಡೆದಿದೆ, ನನಗೆ ನೀನು ಮೊದಲೇ ಹೇಳ್ಬಾರ್ದಾಗಿತ್ತಾ?" ಕೇಳಿದ.

"ನಿಮಗೆ ಹೇಳೋಕೂ ಭಯ ಆಯ್ತು. ದಿನೇಶ್...."

"ಯಾಕೆ ನನ್ನ ಮೇಲೆ ನಿನಗೆ ನಂಬಿಕೆ ಇರಲಿಲ್ವಾ.....! ನೀನು ಕಿಶೋರನ ವಿಷಯ ತಿಳಿಸಿದ್ರೂ, ನಾನು ನಿನ್ನನ್ನು ನಂಬಿದ್ದೆ. ಇದೇನಾ ನೀನು ನನ್ನನ್ನು ಅರ್ಥ ಮಾಡಿಕೊಂಡದ್ದು..."

"ನನ್ನದು ತಪ್ಪಾಯಿತು... ದಿನೇಶ್.... ಕ್ಷಮಿಸ್ಬಿಡಿ.."

"ತಪ್ಪಾಯ್ತು ಅಂತ ಹೀಗೆ ಹೇಳಿದ್ರೆ ಸಾಲದು..."

"ಮತ್ತೇಗೆ ಹೇಳ್ಬೇಕು....?"

"ಪ್ಲೀಸ್ ಒಂದ್ನಿಮಿಷ ಹೊರಗಿರ್ತೀರಾ ಸಂತೋಷ್, ನಾನು ನಿಮ್ಮಕ್ಕ ಇಬ್ಬರೂ ಬೇಗ ರಾಜಿಯಾಗಬೇಕಾಗಿದೆ." ಸಂತೋಷ್ ನಗುತ್ತಾ ಹೊರ ಹೋದ. "ಅವನು ಹೊರಗೆ ಹೋದ.... ಬೇಗ ದಂಡಕಟ್ಟಿಬಿಡಿ ಮೇಡಂ..." ಎಂದು ಕೆನ್ನೆಯನ್ನು ಅವಳ ಮುಂದೆ ಒಡ್ಡಿದ. ಅವಳು ಮೆಲ್ಲನೆ ಒಂದೇಟನ್ನು ಹಾಕಿ ಓಡಲು ನೋಡಿದಳು.

"ಇದು ಮೋಸ... ಇದು ಮೋಸ...." ಎನ್ನುತ್ತಾ ಅವಳ ಕೈ ಹಿಡಿದು ತನ್ನೆಡೆಗೆ ಎಳೆದುಕೊಂಡ. ಅವಳು ತಲೆ ತಗ್ಗಿಸಿ ಅವನ ಮುಂದೆ ನಿಂತಳು....

"ಇನ್ಮುಂದೆ ನನ್ನಿಂದ ಏನನ್ನೂ ಮುಚ್ಚಿಡಬಾರ್ದು ಗೊತ್ತಾಯ್ತಾ.... ಅವನು ಯಾರೇ ಇರಲಿ, ನಿನ್ನನ್ನು ಮುಟ್ಟುವ ಧೈರ್ಯ ಅವನಿಗಿಲ್ಲ...."

"ದಿನೇಶ್ ಅಲ್ನೋಡಿ" ಎಂದಳು. ಅವನು ಅತ್ತ ತಿರುಗಿದ ಕೂಡಲೇ ಕೆನ್ನೆಗೊಂದು ಸಿಹಿ ಮುತ್ತನ್ನಿತ್ತು, ಅವನ ಕೈಗೆ ಸಿಗದೆ ಹೊರಗೆ ಓಡಿ ಬಂದಳು. ಹೊರ ಬಾಗಿಲಲ್ಲಿ ನಿಂತಿದ್ದ ಸಂತೋಷನನ್ನು ಕಂಡಳು. ಹಾಗೇ ಓಡಿ ಕೆಳಗಿಳಿದು ಹೋದಳು.

"ಇಬ್ಬರಿಗೂ ರಾಜಿ ಆಯ್ತು" ತನ್ನಲ್ಲೇ ಹೇಳಿಕೊಂಡು ಸಂತೋಷ ಮತ್ತೆ ರೂಮಿನೊಳಕ್ಕೆ ಬಂದ.

"ಇವನು ಕಿಶೋರನಲ್ಲ. ಆದರೆ ಯಾರೇ ಇರಲಿ ನಾನು ಪತ್ತೆ ಹಚ್ತೀನಿ. ಹೇಗೂ ನೀವು ಇಬ್ಬರೂ ನಾಳೆ ನಾಡಿದ್ದರಲ್ಲಿ ಊರಿಗೆ ಹೊರಟಿದ್ದೀರಿ. ಇಲ್ಲಿಯ ವಿಷಯಗಳನ್ನು ಇಲ್ಲಿಗೇ ಬಿಟ್ಟು ಬಿಡಿ."

"ನಿಮ್ಮ ಅಕ್ಕನ ಮೇಲೆ ನನಗೆ ಯಾವ ಸಂಶಯವೂ ಇಲ್ಲ.... ನನಗೆ ಇದನ್ನೆಲ್ಲ ತಿಳಿಸಲು ಹೆದರುತ್ತಿದ್ದಳು ಅಷ್ಟೇ... ಇನ್ನು ಮುಂದೆ ಅವಳನ್ನು ಯಾವ ಭಯವೂ ಕಾಡುವುದಿಲ್ಲ. ಆದರೆ ನೀವೂ ಯಾಕೆ ನನಗೆ ತಿಳಿಸಲಿಲ್ಲ!"

"ನನಗೂ ಅದೇ ಭಯವಿತ್ತು ಭಾವ. ಅಕ್ಕನ ಬಗ್ಗೆ ತಪ್ಪು ತಿಳಿದುಕೊಂಡರೇ ಅಂತ."

"ಹಾಗೆ ಅವಳ ಬಗ್ಗೆ ತಪ್ಪು ತಿಳುವಳಿಕೆ ಎಂದೂ ನನಗಿರಲಿಲ್ಲ. ಅವಳು ಕಿಶೋರನ ಬಗ್ಗೆ ಹೇಳಿದಾಗಲೂ ಕೂಡ... ಆದರೆ ಕಿಶೋರನ ಹೆಸರನ್ನು ಅವಳ ಬಾಯಲ್ಲಿ ಕೇಳುವುದು ಮಾತ್ರ ನನಗಿಷ್ಟವಿರಲಿಲ್ಲ.... ನಿಮ್ಮಕ್ಕ ಕೆಳಗೆ ಹೊರಟು ಹೋದ್ಲಾ?"

"ನಿಮ್ಮಿಬ್ಬರಿಗೂ ರಾಜಿ ಆಯ್ತಾ ಭಾವ...."

"ಹೂಂ ಆಯ್ತು" ಎನ್ನುತ್ತಾ ಕೆನ್ನೆಯನ್ನು ಕೈ ಬೆರಳುಗಳಿಂದ ಸವರಿಕೊಂಡು ನಸುನಕ್ಕ. ಅರ್ಥವಾದವನಂತೆ ಸಂತೋಷನೂ ನಸುನಕ್ಕ.

"ನಾಳೆ ದಿನ ನಾವಿಬ್ರೂ ಊರಿಗೆ ಹೊರಟುಬಿಡ್ತೀವಿ.... ಇಲ್ಲಿ ನಮ್ಮನ್ನೆಲ್ಲಾ ನೀವುಗಳು ಚೆನ್ನಾಗಿ ಆದರಿಸಿ, ಉಪಚರಿಸಿದೀರಿ. ಎಲ್ಲರ ಪರವಾಗಿ ನಾನು ಥ್ಯಾಂಕ್ಸ್ ಹೇಳ್ತೀನಿ."

"ಥ್ಯಾಂಕ್ಸ್ ಯಾಕೆ ಭಾವ... ಇದೆಲ್ಲಾ ನಮ್ಮ ಕರ್ತವ್ಯ. ಹಾಗೆ ನೋಡ್ತಾ ಹೋದ್ರೆ ಇದು ನಮ್ಮ ಮನೆಯಲ್ಲಿ ನಡೆದ ಮೊದಲ ಸಮಾರಂಭ. ಯಾರಿಗೆ ಹೇಗನ್ನಿಸ್ತೋ ಏನೋ....."

"ನಿಮ್ಮಣ್ಣ ಪ್ರಶಾಂತಂಗೆ ಮದುವೆ ಆಯ್ತಂತೆ?"

"ಹೂಂ ಅವನು ಯಾರಿಗೂ ತಿಳಿಸ್ದೆ ಮದ್ವೆಯಾಗಿದಾನೆ. ಅತ್ತಿಗೆಯನ್ನು ಕರ ಕೊಂಡು ಬಂದಿದ್ನಲ್ಲ. ಅವನು ತುಂಬಾ ಒಳ್ಳೆಯವನು ಭಾವ. ಅವನದ್ದೇನೂ ತಪ್ಪಿಲ್ಲ."

"ನಂಗೊತ್ತು ಸಂತೋಷ, ನೀವುಗಳು ತಪ್ಪು ಮಾಡಲು ಸಾಧ್ಯವೇ ಇಲ್ಲ. ನಿಮ್ಮ ತಂದೆ ನಿಮ್ಮನ್ನು ತುಂಬಾ ಶಿಸ್ತಿನಿಂದ ಬೆಳೆಸಿದ್ದಾರೆ. ಆದರೆ ಅತೀಶಿಸ್ತು, ಒಮ್ಮೊಮ್ಮೆ ಅವಿವೇಕಕ್ಕೆ ದಾರಿ ಮಾಡಿಕೊಡುತ್ತದೆ. ಆದರೆ ಆಗೋದೆಲ್ಲಾ ಒಳ್ಳೇದಕ್ಕೆ... ವಿದ್ಯಾಳಿಗೆ ನಾನು ಸಿಕ್ಕಿದೆ. ಪ್ರಶಾಂತನಿಗೆ ಸುಗುಣಾ ಸಿಕ್ಕಿದಾರೆ...." ದಿನೇಶ ಕಣ್ಣು ಗಳನ್ನು ಮಿಟುಕಿಸಿ ನಕ್ಕ.

"ಭಾವ ನಾಳೇನೇ ಹೋಗ್ಬೇಕಾ? ಇನ್ನೊಂದೆರ್ಡು ದಿನ ಇದ್ದು ಹೋಗಿ..."

"ಭಾನುವಾರ ರಿಸೆಪ್ಷನ್ ಇದೆ. ವಿದ್ಯಾ ಹೇಳಿದ್ದರಿಂದ ಇಲ್ಲಿ ಉಳಿದುಕೊಂಡೆ. ಇನ್ನು ಮುಂದೆ ಇದ್ದೇ ಇದೆಯಲ್ಲ. ನಿಮ್ಮಕ್ಕ ಹೇಳಿದಾಗಲೆಲ್ಲಾ ಅವಳಜತೆ ಬರ್ತೀನಿ." ನಕ್ಕ.

"ಭಾವ, ನೀವು ತುಂಬಾ ಒಳ್ಳೆಯವರು. ನೀವು ಹೇಳೋ ಹಾಗೇ ಅಕ್ಕ ಸ್ವಲ್ಪ ಅವಿವೇಕಿ. ಅವಳ ಕಿವಿ ಹಿಂಡಿ, ಅವಳನ್ನು ವಿವೇಕಿ ಮಾಡಿ...." ದಿನೇಶ ಅವನ ಭುಜದ ಮೇಲೆ ಕೈಯನ್ನಿಟ್ಟ.

"ನೀನು ತುಂಬಾ ಜಾಣ.... ಎಷ್ಟು ಅರ್ಥ ಮಾಡಿಕೊಂಡಿದೀಯ. ನೀನು ಡಾಕ್ಟರಾದರೆ, ಒಳ್ಳೆ ಹೆಸರು ಮಾಡ್ತೀಯ....." ಹೊಗಳಿದ. ಸಂತೋಷ ಉಬ್ಬಿಹೋದ.

* * *

ಅಧ್ಯಾಯ – ಇಪ್ಪತ್ತಮೂರು

ರಿಸೆಪ್ಷನ್‌ನಲ್ಲಿ ಭಟ್ಟನ ಸಂಸಾರ

ಮಾರನೆಯ ದಿನ ಊಟದ ಅನಂತರ, ವಿದ್ಯಾ ಹಾಗೂ ದಿನೇಶ ಊರಿಗೆ ಹೊರಟರು. ಪ್ರೇಮಾ ಸಂಕೋಚದಿಂದ ನುಡಿದಳು –

"ಮಗಳನ್ನು ಬಿಟ್ಟು ಬರುಕ್ಕೆ ನಾವುಗಳ್ಯಾರಾದ್ರೂ ಬರಬೇಕಾಗಿತ್ತು. ಆದರೆ, ಈಗ ಮಕ್ಕಳಿಗೆ ಪರೀಕ್ಷೆಯ ಸಮಯ. ಯಾರಿಗೂ ಬರುಕ್ಕಾಗ್ಲಿಲ್ಲ. ತಪ್ಪು ತಿಳ್ಕೋಬೇಡಿ."

"ಇಲ್ಲ. ಪರ್ವಾಗಿಲ್ಲ. ಪರಿಸ್ಥಿತಿ ನನಗೂ ಅರ್ಥವಾಗುತ್ತೆ. ನನ್ನನ್ನು ಹೊರಗ್ನೋನು ಅಂತ ಭಾವಿಸ್ಬೇಡಿ. ನಾನೂ ನಿಮ್ಮ ಮಕ್ಕಳಲ್ಲಿ ಒಬ್ಬ ಅಂತ ಭಾವಿಸ್ಕೊಳ್ಳಿ."

"ಆಗ್ಲಪ್ಪಾ ತುಂಬಾ ಒಳ್ಳೇದು. ನಮ್ಮ ವಿದ್ಯಾಗೆ ಅನುಭವ ಸಾಲದು. ಸ್ವಲ್ಪ ಮುಗ್ಧೆ. ಅವಳಿಂದ ಏನಾದ್ರೂ ತಪ್ಪು ನಡೆದ್ರೆ ಕ್ಷಮಿಸ್ಬಿಡಿ."

"ಛೇ.ಛೇ. ಹಾಗೆಲ್ಲಾ ಹೇಳ್ಬೇಡಿ. ಅವಳು ಯಾವ ತಪ್ಪೂ ಮಾಡದಂತೆ ನಾನು ನೋಡಿಕೊಳ್ತೀನಿ." ಎಂದು ಭರವಸೆಯನ್ನು ಕೊಟ್ಟ. ಖಂಡಿತಾ ಎಲ್ಲರೂ ರೆಸೆಪ್ಶನ್‌ಗೆ ಬರಬೇಕೆಂದು ಮತ್ತೊಮ್ಮೆ ಕರೆದ. ವಿದ್ಯಾ ತಾಯಿಯನ್ನು ತಬ್ಬಿಕೊಂಡು ಅತ್ತಳು. ಸಂತೋಷ ಮನೆಯಲ್ಲೇ ಇದ್ದ. ಉಳಿದವರು ಅರ್ಧದಿನ ರಜಾಹಾಕಿ ಸ್ಕೂಲ್ನಿಂದ ಹಿಂತಿರುಗಿದರು.

"ಮಾವ, ನಾವು ಹೋಗ್ಬರ್ತೀವಿ... ಎಲ್ರೂ ತಪ್ಪದೇ ಬರಬೇಕು......" ಎಂದು ಕೇಳಿಕೊಂಡು ನಮಸ್ಕಾರ ಮಾಡಿದ.

"ಪರವಾಗಿಲ್ಲ ಬಿಡಿ.... ನಾನು ಈ ಪದ್ಧತಿಗಳನ್ನೆಲ್ಲ ಅನುಸರಿಸುವವನಲ್ಲ." ಅಂತ ಹೇಳಿದರೂ "ಎಲ್ಲಾ ಒಳ್ಳೇದಾಗ್ಲೀ" ಅಂತ ಹರಸಿದ. ಟ್ಯಾಕ್ಸಿ ಬಂದು ನಿಂತಾಗಿತ್ತು. ಲಗೇಜುಗಳನ್ನು ಇರಿಸಿದರು. ಅಷ್ಟರಲ್ಲಿ ಕಾಮಾಕ್ಷಿ ಓಡೋಡಿ ಬಂದಳು......

"ಏನೇ ತಾಯೀ ನಂಗ್ಹೇಳ್ದೇ ಹೊರಟು ಬಿಟ್ಯಾ? ನನ್ಮೇಲ್ಯಾಕೇ ಕೋಪ?"

"ಕೋಪ ಏನೂ ಇಲ್ಲ ಅತ್ತೆ...."

"ದೇವ್ರು ನಿನ್ನನ್ನ ಸದಾ ಚೆನ್ನಾಗಿಟ್ಟಿರಲಿ..... ಮುಂದಿನ್ವರ್ಷ ಇಷ್ಟೊತ್ತಿಗೆ ನೀನು ಬಾಣಂತನಕ್ಕೆ ಬಂದಿರಬೇಕು. ನಿನ್ನ ಚೊಚ್ಚಲು ಬಾಣಂತನಾನ ನಾನೇ ಮಾಡ್ಬೇಕು."

"ಹೋಗಿ ಅತ್ತೇ.... ಏನೇನೋ ಹೇಳ್ಬೇಡಿ." ನಾಚುತ್ತಾ ನುಡಿದಳು.

"ಅತ್ತೆ ಮನೆಗೆ ಹೋಗ್ತಾ ಇರೋಳು ನೀನು..... ಇಲ್ಲಿ ನಡೆದದ್ದನ್ನೆಲ್ಲ ಒಂದು ಕೆಟ್ಟ ಕನಸು ಅಂತ ಮರೆತ್ಬಿಡು.... ಹೋಗ್ಬಾ" ಎಂದು ತಾನೇ ಆಶೀರ್ವಾದ ಮಾಡಿದಳು.

ವಿದ್ಯಾಳ ಹೃದಯ ತುಂಬಿ ಬಂತು....

ಶಾರದಮ್ಮ ತಿಂಡಿಗಳನ್ನೆಲ್ಲಾ ಡಬ್ಬಿಗಳಿಗೆ ತುಂಬಿ ತಂದುಕೊಟ್ಟರು.....

"ನೀವು ಇಷ್ಟು ಚೆನ್ನಾಗಿ ಅಡುಗೆ ತಿಂಡಿ ಮಾಡ್ತೀರಿ.... ವಿದ್ಯಾಗೆ ಏನನ್ನಾದರೂ ಕಲಿಸಿ ಕೊಟ್ಟಿದ್ದೀರಿ ತಾನೇ....." ದಿನೇಶ ಮುಗುಳ್ನಕ್ಕು ಕೇಳಿದ.

"ನಿಮಗೇನು ತಿಂಡಿ ಬೇಕೋ ಕೇಳಿ. ಮಾಡಿ ಕಳಿಸ್ತೀನಿ.... ಆ ಮಗೂಗೆ ಕಲಿಯುಕ್ಕೆ ಸಮಯ ಎಲ್ಲಿತ್ತು? ಹುಶಾರಮ್ಮ ವಿದ್ಯಾ..... ನನ್ನನ್ನ ಮರೆತ್ಬಿಡ್ಬೇಡ."

"ಎಲ್ಲಾದ್ರೂ ಮರೆಯೋಕೆ ಸಾಧ್ಯಾನಾ? ಒಂದ್ಲೋಟ ನೀರು ಕುಡಿಯುವಾಗ್ಲೂ ನಿಮ್ಮ ನೆನಪು ಬರುತ್ತೆ...." ವಿದ್ಯಾಳ ಕಣ್ಣುಗಳು ತೇವಗೊಂಡಿದ್ದವು.

"ಅಪ್ಪಾ.... ನಾನು ಹೋಗ್ಬರ್ತೀನಪ್ಪಾ...." ಭಟ್ಟನ ಕಾಲಿಗೆ ನಮಸ್ಕರಿಸಿದಳು. ಅವನು ಮಗಳನ್ನು ಹಿಡಿದೆತ್ತಿದ.

"ಏನಿದೆಲ್ಲಾ... ಅಳೋದ್ಯಾಕೆ? ನನ್ನ ಕಾಟ ತಪ್ತು ಅಂತ... ಹಾಯಾಗಿರ ಬೇಕು ನೀನು" ತಮಾಷೆ ಬೆರೆತ ವ್ಯಂಗ್ಯದಿಂದ ನುಡಿದ.

"ಹೀಗೆಲ್ಲಾ ಹೇಳ್ಬೇಡಿ ಅಪ್ಪಾ..... ನನಗೆ ದುಃಖವಾಗುತ್ತೆ."

"ಪರವಾಗಿಲ್ಲ ಬಿಡು.... ನಿನ್ನ ವಿದ್ಯಾಭ್ಯಾಸ ಮುಗಿದ್ಮೇಲೆ ನಿನ್ನೆ ಮದುವೇನ ಮಾಡ್ಬೇಕೂಂತ ಅಂದ್ಕೊಂಡಿದ್ದೆ. ನನ್ನ ಆಸೆ ನೆರವೇರ್ಲಿಲ್ಲ ಅಷ್ಟೇ... ಅದು ನಿನ್ನ ಗಂಡನ ಮನೆ... ಅತ್ತೆ ಮನೆ. ಅವರುಗಳು ಹೇಳ್ದ್ಹಾಗೆ ಕೇಳ್ಕೊಂಡಿರು. ಅಲ್ಲೂ ಏನಾದ್ರೂ ಎಡವಟ್ಟು ಮಾಡ್ಕೋಬೇಡ..... ಏನಾಧ್ರೂ ತೊಂದ್ರೆ ಬಂದ್ರೂ ನೀವು ನೀವೇ ಸರಿ ಹೋಗಿಸ್ಕೋಬೇಕು..... ನನ್ನ ತನಕ ಮಾತ್ರ ತರಬೇಡಿ..."

"ಹೀಗೆಲ್ಲಾ ಯಾಕಪ್ಪಾ ಹೆದರಿಸ್ತೀರಿ...."

"ಹೆದರಿಸ್ತಿಲ್ಲ. ಬುದ್ದಿವಾದ ಹೇಳ್ತೀನಿ.... ಹೊತ್ತಾಯ್ತು.... ನಿನ್ನ ಗಂಡ ಕಾಯ್ತಾ ಇದಾರೆ.... ನೀನಿನ್ನು ಹೊರಡು..." ವಿದ್ಯಾ ಹೊರಬಂದು ಟ್ಯಾಕ್ಸಿಯಲ್ಲಿ ಕುಳಿತಳು. ದಿನೇಶನೂ ಹತ್ತಿ ಕುಳಿತ. ಮನೆಯವರೆಲ್ಲಾ ಮುಂಬಾಗಿಲಿಗೆ ಬಂದು ನಿಂತಿದ್ದರು. ಎಲ್ಲರೂ ಕೈ ಬೀಸಿದರು. ಟ್ಯಾಕ್ಸಿ ಚಲಿಸಿತು. ವಿದ್ಯಾ ತಿರುತಿರುಗಿ ಮನೆಯ ಕಡೆ ನೋಡಿದಳು. ಅವಳ ಕಣ್ಣಿನಿಂದ ನೀರು ಇಳಿಯುತ್ತಿತ್ತು. ದಿನೇಶನಿಗೂ ಕಸಿವಿಸಿಯಾಗಿತ್ತು. ಅವಳನ್ನು ತನ್ನ ಭುಜಕ್ಕೆ ಒರಗಿಸಿಕೊಂಡು ಸಂತೈಸಿದ.

* * *

"ಇನ್ನೆಷ್ಟೊತ್ತು ಬಾಗ್ಲಲ್ಲಿ ನಿಂತಿರೋದು, ಎಲ್ಲಾ ಒಳಗ್ಬನ್ನಿ" ಭಟ್ಟ ಎಲ್ಲರಿಗೂ ಆದೇಶ ನೀಡಿದ. ಮಕ್ಕಳೆಲ್ಲಾ ಅವರವರ ಪಾಡಿಗೆ ಒಳಗೆ ಬಂದರು.

"ಪ್ರೇಮಕ್ಕ, ನೀವು ಒಳಗ್ಹೋಗಿ, ನಾನು ಭಟ್ಟನ ಹತ್ರ ಮಾತಾಡಿ ಬರ್ತೀನಿ." ಕಾಮಾಕ್ಷಿ ಆಫೀಸ್ ರೂಮ್‌ಗೆ ಬಂದಳು.....

"ವಿದ್ಯಾ ಹೊರಟಾಯ್ತಲ್ಲ. ಇನ್ನು ನನ್ನ ಮಗನ್ನ ಬಿಡಿಸು.... ನನ್ಗಂಡಂಗೆ

ನಾನು ತಿಳಿಸ್ಲೇ ಇಲ್ಲ. ಅವನೆಲ್ಲೋ ಹೊರ್ಗ್ದೆ ಹೋಗಿದಾನೆ ಅಂತ ತಿಳ್ಕಂಡಿದಾರೆ."

"ನಿನ್ಮಗ ಲಾಕಪ್‌ನಿಂದ ತಪ್ಪಿಸ್ಕೊಂಡಿದಾನೆ...."

"ಆಂ... ನಿಂಗ್ಹೇಗೆ ತಿಳೀತು....?"

"ಪೋಲೀಸ್ನೋರೆ ತಿಳಿಸಿದ್ರು...."

"ಮತ್ಯಾಕೆ ಅವ್ನು ಮನೆಗ್ಬರ್ಲಿಲ್ಲ...?"

"ನಿನ್ಮೇಲೆ ಅವಂಗೆ ನಂಬ್ಕೆ ಇಲ್ಲ.... ಬಿಡು ಅತ್ಲಾಗೆ.... ಪೋಲೀಸ್ನೋರು ಅವನನ್ನ ಹುಡುಕಿಸ್ತಿದಾರಂತೆ. ಸಿಕ್ಕಿದ್ಕೂಡ್ಲೇ ಮತ್ತೆ ಅರೆಸ್ಟ್ ಮಾಡ್ತಾರೆ... ಪೋಲಿಸ್ನೋರು ನಿಮ್ಮ ಮನೆ ಹತ್ರ, ನಮ್ಮ ಮನೆ ಹತ್ರ ಮಫ್ತೀಲಿ ತಿರುಗ್ತಿದಾರೆ...."

"ಅಯ್ಯೋ ಶಿವನೇ.... ಪೋಲೀಸ್ನೋರು ಗುಂಡು ಗಿಂಡು ಹಾರಿಸ್ಬಿಡುಲ್ಲ ತಾನೇ..... ಈಗ್ಲಾದ್ರೂ ಏನಾದ್ರೂ ಮಾಡೋ ಭಟ್ಟ..."

"ನಿನ್ಮಗನ ಜೀವಕ್ಕೆ ಏನೂ ಅಪಾಯ ಇಲ್ಲ. ಆದರೆ ಪುಂಡ ಆಗಿ ಹೋಗಿದಾನೆ. ನಾಲ್ಕೇಟು ಬೀಳಲೇ ಬೇಕು.... ನೀನಿನ್ನು ಅವನಾಸೆಯನ್ನು ಬಿಡು...."

"ನ್ನಾನು ಅವನನ್ನು ಹೊತ್ತು ಹೆತ್ತು ಸಾಕಿ ಸಲ್ಹಿದೀನಿ.... ಅವನು ನನ್ಮಗ.... ನೀನ್ಹೇಳುವಷ್ಟು ಸುಲಭ್ವಾಗಿ ಬಿಡೋಕಾಗುತ್ತಾ....?"

"ಅವನೆಂಥೋನು ಅಂತ ನಿಂಗೇ ಗೊತ್ತು. ಅಪರಾಧ ಮಾಡ್ದ ಸಿಕ್ಹಾಕ್ಕೊಂಡ. ಲಾಕಪ್‌ನಿಂದ ತಪ್ಪಿಸ್ಕೊಂಡ್ರೆ ಪೋಲೀಸ್ನೋರು ಸುಮ್ನೆ ಬಿಡ್ತಾರಾ....! ಅಲ್ಲೇ ತೆಪ್ಪಗೆ ಇದ್ದಿದ್ರೆ ನಾನೇ ಬಿಡಿಸ್ತಿದ್ದೆ...."

"ಈಗ್ಲೂ ಕೇಸ್‌ನ ವಾಪಸ್ ತಗೋ ಭಟ್ಟ. ಎಲ್ಲಾದ್ರೂ ಬದುಕ್ಕೊಳ್ಳಲಿ.... ನಿನ್ನ ಕೈ ಮುಗೀತೀನಿ."

"ನೋಡೋಣ. ಅವನು ಮೊದಲು ಪತ್ತೆಯಾಗಲಿ. ಎಲ್ಲಿದಾನೋ ಏನು ಮಸಲತ್ತು ಮಾಡ್ತಿದಾನೋ ತಿಳೀದೇ ನಾನ್ಹೇಗೆ ಕೇಸ್‌ನ ಹಿಂದಕ್ಕೆ ತೆಗೆದುಕೊಳ್ಳಲಿ. ನೀನು ಹೋಗು. ನಿನ್ನ ಮಗನ ಪ್ರಾಣಕ್ಕೇನೂ ಅಪಾಯ ಇಲ್ಲ. ನಿನ್ನ ಮನೇಗೇನಾದ್ರೂ ಬಂದ್ರೆ ನೀನೇ ಪೋಲೀಸ್ನೋರ್ಗೆ ಒಪ್ಪಿಸ್ಬೇಕು.... ಇಲ್ದಿದ್ರೆ ಪರಿಣಾಮ ಚೆನ್ನಾಗಿರುಲ್ಲ." ಕಾಮಾಕ್ಷಿ ಅಳುತ್ತಾ ಹೊರಬಂದಳು, ಹಾಗೇ ಹೊರಟು ಹೋಗಿದ್ದಳು.

"ಮದ್ವೆ ಮನೆ ತಿಂಡಿಗಳನ್ನ ಕಾಮಾಕ್ಷಿಗೆ ಅಂತ ತೆಗೆಸಿಟ್ಟಿದ್ದೆ. ಹಾಗೇ ಹೊರಟೇ ಹೋದ್ರೋ ಏನೋ?"

"ಹೂಂನಮ್ಮ. ಅತ್ತೆ ಆಗ್ಲೇ ಹೊರ್ಟ್ಹೋದ್ರು....ಅಳ್ತಾ ಇದ್ರು...."

"ಈಗ ಅತ್ರೆ ಏನುಪಯೋಗ? ತಾನೇ ಯಾಕೆ ಮಗನ್ನ ಪೋಲೀಸ್ನೋರ್ಗೆ ಹಿಡ್ಕೊಡ್ಬೇಕಾಗಿತ್ತು! ಅಲ್ಲಾ ಅಷ್ಟು ಚಿಕ್ಕೋನ್ಗೆ ಯಾಕಿಂಥ ಕೆಟ್ಬುದ್ಧಿಯೋ? ನಂಗಂತೂ ಜೀವ ಬಾಯಿಗೆ ಬಂದ್ಬಿಟ್ಟಿತ್ತು." ಸಂತೋಷ ಮಾತಾಡಲಿಲ್ಲ.

* * *

ಶಾರದಮ್ನೋರನ್ನ ಒಬ್ರನ್ನೇ ಬಿಟ್ಟು ಹೋಗೋದು ಸರಿಯಲ್ಲ. ಹೇಗೂ ಸಂತೋಷನಿಗೆ ಪಬ್ಲಿಕ್ ಪರೀಕ್ಷೆ ಎಂದು ಅವನನ್ನು ಬಿಟ್ಟು ಉಳಿದವರು ಬೆಂಗಳೂರಿಗೆ ಹೋಗಿ ಬರುವುದೆಂದು ಭಟ್ಟ ನಿರ್ಧರಿಸಿದ. ಅವನಿಗೆ ರಿಸೆಪ್ಶನ್‌ಗೆ ಹೋಗುವ ತವಕವಿಲ್ಲದಿದ್ದರೂ, ಹೆಂಡತಿಯನ್ನು, ಹೆಣ್ಣು ಮಕ್ಕಳನ್ನು ಗಂಡಸಿನ ಜತೆ ಇಲ್ಲದೇ ಕಳಿಸುವುದು ಇಷ್ಟವಿರಲಿಲ್ಲ. ಶ್ರೀಕರ ಇನ್ನೂ ಚಿಕ್ಕವನು. ಅವನ ಜತೆ ಕಳಿಸುವುದು ಸಾಧ್ಯವಿಲ್ಲ. ಹಾಗೆಂದುಕೊಂಡು ಭಟ್ಟನೇ ಹೊರಟಿದ್ದ. ಒಬ್ಬ ಡ್ರೈವರ್‌ನ್ನು ಗೊತ್ತು ಮಾಡಿದ್ದ.

"ಒಂದು ದಿನದ ಮಟ್ಟಿಗೆ ಹೋಗಿ ಬಂದ್ಬಿಡ್ತೀವಿ. ಶಾರದಮ್ನೋರನ್ನ ಒಬ್ರನ್ನೇ ಬಿಟ್ಟು ಹೊರಗೆಲ್ಲೂ ಹೋಗ್ಬೇಡ... ಪೋಲೀಸ್ನೋರು, ಮನೆ ಸುತ್ತಮುತ್ತ ಸುತ್ತಾಡ್ತಿರ್ತಾರೆ.... ಯಾರಾದ್ರೂ ಅನುಮಾನ ಹುಟ್ಟಿಸೋ ಅಂಥ ವ್ಯಕ್ತಿ ಕಂಡು ಬಂದ್ರೆ ಪೋಲೀಸ್ನೋರ್ಗೆ ತಿಳಿಸ್ಬಿಡು.."

ಸಂತೋಷ ಹೂಂಗುಟ್ಟಿದ್ದ. ಅವನಿಗೂ ಬೆಂಗಳೂರಿಗೆ ಹೋಗಿ ಬರುವ ಆಸೆ ಇದ್ದರೂ ಅಪ್ಪನಿಗೆ ಹೇಳಲಾಗುವುದಿಲ್ಲವಲ್ಲ.

"ರಾತ್ರಿ ಪ್ರಯಾಣ, ಚಳಿಯಾಗುತ್ತೆ. ಎಲ್ರೂ ಬೆಚ್ಚಗಿರುವ ಬಟ್ಟೆಗಳನ್ನು ಹಾಕ್ಕೊಳ್ಳಿ" ಹೆಂಡತಿಯನ್ನುದ್ದೇಶಿಸಿ ಹೇಳಿದ.

ಚಿನ್ಮಯೀ, ನಳಿನಿಗೆ ಸಂಭ್ರಮ. ಮೊತ್ತಮೊದಲ ಬಾರಿಗೆ ಬೆಂಗಳೂರಿಗೆ ಹೊರಟಿರೋದು. ಅಕ್ಕನ್ನ ನೋಡೋದು. ಆದರೆ ಒಂದೇ ದಿನದಲ್ಲಿ ಎಷ್ಟು ಮಾತಾಡು ಕ್ಕಾಗುತ್ತೆ. ಅದೇ ಬೇಸರ....ಎಲ್ಲರೂ ಕಾರನ್ನು ಹತ್ತಿದರು. "ಸರಿಯಾಗಿ ಬೀಗ ಹಾಕ್ಕೋ... ಶಾರದಮ್ನೋರೇ ಮನೆ ಕಡೆ ಜೋಪಾನ...." ಮತ್ತೆ ಮತ್ತೆ ಹೇಳಿದ. ಕಾರು ಹೊರಟಿತು.

* * *

ಮೊದಲಿಗೆ ಸೀದಾ ಎಲ್ಲರೂ ಭವಾನಿಯ ಮನೆಗೆ ಬಂದಿಳಿದರು. ಮೊದಲ ಬಾರಿಗೆ ಅಕ್ಕ ತನ್ನ ಮನೆಗೆ ಬರುತ್ತಿರುವ ಸಂಭ್ರಮ ಭವಾನಿಗೆ. ಸಂತೋಷದಿಂದ ಬರಮಾಡಿಕೊಂಡಳು. ಬಿಸಿ ಬಿಸಿ ಕಾಫಿಯನ್ನು ಕೊಟ್ಟು ಉಪಚರಿಸಿದಳು.

"ಒಂದ್ಗಳ್ಗೆ ಮಲಕ್ಕೊಂಡು ಸುಧಾರಿಸ್ಕೋ. ಆಮೇಲೆ ಸ್ನಾನ ಮಾಡೂವಂತೆ. ಪ್ರಯಾಣದಿಂದ ಬಳಲಿ ಹೋಗಿದೀಯ."

ಚಿನ್ಮಯೀ ಕುಳಿತಲ್ಲೇ ಮನೆಯ ಅಂದಚೆಂದವನ್ನು ನೋಡಿದಳು. ಶ್ರೀಕರ ನಳಿನಿಯನ್ನು ಎಳೆದುಕೊಂಡು, ಮನೆಯನ್ನೆಲ್ಲಾ ಸುತ್ತಾಡಿದ. ತಮ್ಮ ಮನೆ ದೊಡ್ಡ ದಾಗಿದ್ದರೂ, ಹೀಗೆ ಅಲಂಕರಿಸಿಲ್ಲವೆಂದುಕೊಂಡರು. ಗೌತಮ, ಅವನ ತಮ್ಮಂದಿರು, ಇವರುಗಳು ಕೇಳಿ ಕೇಳಿದ್ದಕ್ಕೆಲ್ಲಾ ಬೇಸರವಿಲ್ಲದೆ ಉತ್ತರಿಸಿದರು.

"ತಿಂಡಿ ಹೊತ್ಗೇ ಬಂದ್ಬಿಡಿ ಅಂತ ಸುಶೀಲಾ ಹೇಳಿದಾಳೆ. ಎಲ್ಲಾ ಬೇಗ ಬೇಗ ಎದ್ದು ರೆಡಿಯಾಗಿ." ಭವಾನಿ ಮಕ್ಕಳನ್ನು ಕುರಿತು ಹೇಳಿದಳು.

"ನಾವೆಲ್ಲಾ ನಿಧಾನವಾಗಿ ಬರ್ತೀವಿ. ದೊಡ್ಡೋರು ನೀವುಗಳೆಲ್ಲಾ ಮುಂಚೆ ಹೋಗಿರಿ. ಹೇಗೂ ಪೂಜೆ ಶುರುವಾಗೋದೇ ಹತ್ತು ಗಂಟೆ ಮೇಲೆ ತಾನೆ?"

"ಪೂಜೇನಾ? ಯಾವ ಪೂಜೇನೇ ಭವಾನಿ....?"

"ಶ್ರೀ ಸತ್ಯನಾರಾಯಣ ಪೂಜೆ... ಬರೀ ಸುಮ್ನೆ ಊಟಕ್ಕೆ ಕರೆದ್ರೆ ಏನು ಚೆನ್ನ ಅಂತ ಪೂಜೇನೂ ಇಟ್ಕೊಂಡಿದಾರೆ. ಮನೆಗೆ ಸೊಸೆ ಬಂದಿರೋ ಸಂಭ್ರಮ, ದೇವತಾಕಾರ್ಯದಿಂದ ಆಚರಿಸೋಣ ಅಂತ...."

"ಒಳ್ಳೇದಾಯ್ತು ಬಿಡು. ನಮಗೂ ಪೂಜಾಫಲ ಸಿಕ್ಕ ಹಾಗಾಗುತ್ತೆ."

"ನಾನು, ಸ್ವಲ್ಪ ನನ್ನ ಹಳೇ ಸ್ನೇಹಿತನ್ನ ನೋಡಿ ಬರ್ತೀನಿ... ವಾಪಸ್ಸು ಕಾರನ್ನು ಕಳಿಸ್ತೀನಿ. ನಾನು ಊಟದ ಹೊತ್ತಿಗೆ ಬರ್ತೀನಿ." ಭಟ್ಟ ಹೇಳಿದ. ಅವನು ಸ್ನಾನಮಾಡಿ ಸಿದ್ಧನಾಗಿದ್ದ. ಪ್ರಸಾದ, ಭವಾನಿ ಹಾಗೂ ಪ್ರೇಮಾ ಸಿದ್ಧರಾಗಿದ್ದರು.

"ಭಾವ ನಮ್ಮನ್ನೆಲ್ಲಾ ಛತ್ರದಲ್ಲಿ ಬಿಟ್ಟು ತಿಂಡಿತಿಂದ್ಧು ಹೋದ್ರೆ ಆಗುಲ್ವಾ?"

"ಇಲ್ಲ ಹೊತ್ತಾಗುತ್ತೆ" ಎಂದು ಹೊರಟೇ ಬಿಟ್ಟ. ಡ್ರೈವರ್ ಭಟ್ಟನನ್ನು ಆ ಸ್ನೇಹಿತನ ಮನೆಯನ್ನು ತಲುಪಿಸಿ ಮತ್ತೆ ಬಂದ.

"ಗೌತಮ ಬಾಗಿಲು, ಬೀಗ ಎಲ್ಲಾ ಸರಿಯಾಗಿ ನೋಡ್ಕೊಂಡು ಬೇಗ ಬನ್ನಿ.... ಹರಟೆ ಹೊಡೀತಾ ಕೂತ್ರೆ ನಿಮ್ಗೆ ಮೈಮೇಲೆ ಜ್ಞಾನವೇ ಇರುಲ್ಲ." ಎಂದು ಹೇಳಿ ಮೂವರೂ ಛತ್ರಕ್ಕೆ ಹೊರಟರು.

"ಸಂತೋಷ ಬಂದಿದ್ರೆ ಚೆನ್ನಾಗಿತ್ತು" ಗೌತಮ ಹೇಳಿದ.

"ಅಯ್ಯೋ ಸದ್ಯ ನಾವುಗಳು ಬಂದದ್ದೇ ಹೆಚ್ಚು. ಅಪ್ಪ ಎಲ್ಲಿ ಬೇಡ ಅಂತ ಅಂದುಬಿಡ್ತಾರೋ ಅಂತ ಅಂದ್ಕೊಂಡಿದ್ದೆ." ಶ್ರೀಕರ ಹೇಳಿದ.

"ಯಾಕೆ? ನಾನೆಲ್ಲೋ ನಿಮ್ಮಪ್ಪನೇ ಬರುಲ್ಲ ಅಂತಂದ್ಕೊಂಡಿದ್ದೆ"

"ಪರೀಕ್ಷೆ ಇದೆಯಲ್ಲ. ಈ ಅಕ್ಕ ಛಬ್ಬು, ಪರೀಕ್ಷೆ ಸಮಯದಲ್ಲಿ ಯಾಕೆ ಮದುವೆ ಆದ್ಲೋ?" ನಳಿನಿ ಹೇಳಿದಳು. ಎಲ್ಲರೂ ನಕ್ಕರು.

"ನೀಲಿ ಕಣ್ಣಿದ್ರೆ ಅವರಿಗೆ ಅಸೂಯೆ ಅಂತ ಹೇಳ್ತಾರೆ.... ನಿನಗೆ ಯಾರ ಮೇಲೆ ಅಸೂಯೆ?" ನವೀನ ತಮಾಷೆಯಾಗಿ ಕೇಳಿದ.

"ನನಗೆ ನಿಮ್ಮೆಲ್ಲರ ಮೇಲೆ ಅಸೂಯೆ.... ಯಾಕೆ ಗೊತ್ತಾ? ನೀವೆಲ್ಲಾ ಬೆಂಗ್ಳೂರ್ನಲ್ಲಿದೀರಿ.... ಸುಂದರವಾದ ಮನೇಲಿದೀರಿ.... ಮುಖ್ಯವಾಗಿ ನಿಮ್ಮಪ್ಪ ತುಂಬಾ ಒಳ್ಳೇವ್ರು"

"ಏಯ್ ಸುಮ್ನಿರೇ ಏನೇನೋ ಮಾತಾಡ್ಬೇಡ." ಚಿನ್ಮಯೀ ತಂಗಿಯ ಬೆನ್ನಿಗೆ ಒಂದೇಟು ಹಾಕಿದಳು. ಎಲ್ಲರೂ ನಕ್ಕಿದ್ದರು.

"ಏನೇ ಚಿನ್ಮಯೀ, ನಿಂದ್ಯಾವಾಗ್ಲೇ ಮದುವೆ....?"

"ನೀ ಗಂಡು ಹುಡುಕಿ ಕೊಟ್ಟಾಗ...." ನಗುತ್ತಾ ನುಡಿದಳು.

"ಏ ಬಜಾರಿ.... ನಾಚ್ಕೇನೇ ಇಲ್ಲವಲ್ಲೇ ನಿಂಗೆ...."

"ನಾಚ್ಕೆ ಯಾಕೆ? ಈಗ ಅಕ್ಕ ಮದುವೆಯಾಗ್ಲಿಲ್ವಾ....! ನೀನೇ ತಾನೇ ದಿನೇಶನ್ನ ಗೊತ್ತು ಮಾಡಿಕೊಟ್ಟದ್ದು."

"ಸರಿ. ಹಾಗಾದ್ರೆ ಒಂದು ವಾರ, ಇಲ್ಲೇ ನಮ್ಮನೇಲಿರು. ಹುಡುಕಿ ಕೊಡ್ತೀವಿ."

"ತಡಿ ಅಪ್ಪಂಗೆ ಹೇಳ್ತೀನಿ."

"ಹೇಳ್ಕೋ ಹೋಗೋ ಏನ್ಟು ಹೆದರಿಸ್ತೀಯ? ಅದಕ್ಕೆ ನಂಗೆ ನಿನ್ನನ್ಕಂಡ್ರಾ ಗುಲ್ಲ." ಶ್ರೀಕರ ಮುನಿಸಿಕೊಂಡು ಕಿಟಕಿಯ ಬಳಿ ನಿಂತ. ಚಿನ್ಮಯಿ ಸ್ನಾನದ ಮನೆಗೆ ಹೋದಳು.

"ಏ ಸುಹಾಸಿ ಎದ್ದು ಸ್ನಾನ ಮಾಡೋ ಹೊತ್ತಾಗುತ್ತೆ."

"ನಂಗೇನೋ ಹೇಳೋದು? ನೀನೇ ಎದ್ದ್ಹೋಗ್ಮಾಡು." ನಳಿನಿ ಆ ಅಣ್ಣ - ತಮ್ಮಂದಿರ ಕಲಹವನ್ನೇ ನೋಡುತ್ತಾ ಕುಳಿತಿದ್ದಳು.

ಅಷ್ಟರಲ್ಲಿ ಕಾರು ಮತ್ತೆ ವಾಪಸ್ಸು ಬಂದಿತ್ತು. ಎಲ್ಲರೂ ರೆಡಿಯಾಗಿ ಹೊರಡಲು ಸಾಕಷ್ಟು ಸಮಯವೇ ಹಿಡಿಯಿತು. ಸೀರೆಯನ್ನುಟ್ಟ ಚಿನ್ಮಯೀ ದೊಡ್ಡ ಹುಡುಗಿಯಂತೆ ಕಾಣುತ್ತಿದ್ದಳು.

"ಇವತ್ತು ನಿನ್ನನ್ನು ಯಾರಾದ್ರೂ ಹಾರಿಸ್ಕೊಂಡ್ಹೋಗೋದಂತೂ ಖಂಡಿತಾ....." ನವೀನ ನುಡಿದ.

"ಥೂ ಹೋಗೋ,..ಹಾಗೆಲ್ಲಾ ಮಾತಾಡ್ಬೇಡ...." ಎನ್ನುತ್ತಾ ಮುಂಬಾಗಿಲಿಗೆ ಬಂದಳು.

"ನಿನ್ನ ಭಾವ ನಿನ್ನ ನೋಡಿದ್ಮೇಲೆ, ಮುಗೀತು ನಿಮ್ಮಕ್ಕನ ಕಥೆ." ಗೌತಮ ಎಂದ. ಆದರೆ ಆ ಮಾತು ಚಿನ್ಮಯಿಗೆ ಕೇಳಿಸಲಿಲ್ಲ. ನಳಿನಿಗೆ ಅರ್ಥವಾಗಲಿಲ್ಲ.

"ಹೀಗೆಲ್ಲಾ ಮಾತಾಡಿದ್ರೆ ಎಲ್ರ ಹತ್ರ ಬೈಸ್ಕೋತೀಯ ಅಷ್ಟೇ...." ನವೀನನೆಂದ.

"ಆಯ್ತೇನೇ ಸುಹಾಸಿ..... ಅದೆಷ್ಟೊತ್ತು ನಿನ್ನ ಅಲಂಕಾರ.... ಅಲ್ಲಿ ನಿನ್ನನ್ನ ಯಾರೂ ನೋಡುಲ್ಲ. ಸಾಕು ಹೊರಡು...."

"ಅವ್ನನ್ನ ನೀವ್ಯಾಕೆ ಸುಹಾಸಿ ಅಂತ ಕರೀತೀರಿ...."

"ಯಾಕೇಂದ್ರೆ, ನಮ್ಮನೇಲಿ ಯಾರೂ ಹೆಣ್ಣುಮಕ್ಕಳಿಲ್ಲವಲ್ಲ ಅದಕ್ಕೇ...." ಸುಹಾಸ ಬಂದು ಅಣ್ಣನ ಬೆನ್ನ ಮೇಲೆ ದಬದಬ ಗುದ್ದಿದ.

"ನಿನಗೆಷ್ಟು ಸಾರಿ ಹೇಳಿದೀನಿ.... ಬೇರೆಯವರ ಎದುರಿಗೆ ಹೀಗೆಲ್ಲ ಕರೀಬೇಡ ಅಂತ."

"ಸಾರಿ..... ಸಾರಿ... ಮರೆತ್ಹೋಯ್ತು..... ಈಗ ನಡಿ ಹೊತ್ತಾಯ್ತು..." ಬೆನ್ನಮೇಲೆ ಕೈಯಾಡಿಸಿಕೊಂಡ. ಡ್ರೈವರ್ ಹಾರನ್ ಮಾಡಿದ. ಗೌತಮ ಬಾಗಿಲುಗಳನ್ನು ಭದ್ರಪಡಿಸಿ, ಮುಂಬಾಗಿಲಿಗೆ ಬೀಗವನ್ನು ಹಾಕಿದ. ಎಲ್ಲರೂ ಕಾರನ್ನೇರಿದರು.

ವಿದ್ಯಾ ಅವರುಗಳಿಗಾಗಿಯೇ ಕಾಯುತ್ತಿದ್ದಳು.

"ಏನ್ರೋ ಎಷ್ಟೊತ್ತಿಗೇ ಬರೋದು? ಊರಿಗೆ ಬಂದೋರಿಗೆ, ನನ್ನನ್ನ ನೋಡ್ಬೇಕೂಂತ ಅನ್ನಿಸಲಿಲ್ವಾ!"

"ಇವರಿಬ್ರ ಜಗಳಾನೇ ಮುಗೀಲಿಲ್ಲ. ನಾವೆಲ್ಲಾ ರೆಡಿಯಾಗಿದ್ದೆವು."

"ಏನೋ ಗೌತಮ, ಇಷ್ಟು ದೊಡ್ಡೋನಾಗಿ ಇನ್ನೂ ಜಗಳ ಆಡ್ತೀಯಾ?"

"ಜಗಳ ಆಡುಕ್ಕೆ ವಯಸ್ಸು ಚಿಕ್ಕದಾದ್ರೇನು? ದೊಡ್ಡದಾದ್ರೇನು....?"

"ಸಾಕು ಬಾ..... ಬನ್ರೇ...." ನವೀನ ನಕ್ಕು ನುಡಿದ.

"ಇಲ್ಲಿ ಇರೋರು ಇಬ್ಬರೇ ಬನ್ರೇ.... ಉಳಿದೋರು ಬನ್ರೋ...." ಗೌತಮ ಸುಹಾಸನ ಕಡೆ ನೋಡಿ ನಕ್ಕ. ಸುಹಾಸ ಮುಷ್ಟಿಯನ್ನು ತೋರಿದ. ಎಲ್ಲರೂ ದಿನೇಶನನ್ನು ಸುತ್ತುವರಿದರು. ದಿನೇಶ, ಚಿನ್ಮಯಿಯನ್ನೇ ವಿಸ್ಮಯದಿಂದ ನೋಡಿದ. ಚಿನ್ಮಯಿ ನಾಚಿದಳು.

"ಸಂತೋಷ ಬರಲಿಲ್ವಾ?" ಇಲ್ಲ ಎನ್ನುವಂತೆ ತಲೆಯಾಡಿಸಿದಳು.

"ನಿಂಗಿಂತ ಚೆನ್ನಾಗಿದ್ದಾಳೆ ನಿನ್ತಂಗಿ" ದಿನೇಶ ವಿದ್ಯಾಳ ಕಿವಿಯಲ್ಲಿ ಉಸುರಿದ. ವಿದ್ಯಾ ಹುಸಿಕೋಪದಿಂದ ಮೊಣಕೈ ಚಿವುಟಿದಳು...'ಹ್ಹಾಂ' ಎಂದು ನೋವಿನಿಂದ ಮುಖ ಕಿವುಚಿದ.

"ನಡಿಯೇ ಒಳಗೆ. ಇಲ್ಲಿ ನಿಂತ್ಕೊಂಡೇನು ಮಾತು!" ವಿದ್ಯಾ ತಂಗಿಯ ಕೈ ಹಿಡಿದು ಒಳಕ್ಕೆ ಕರೆದುಕೊಂಡು ಹೋದಳು. ಗೌತಮ ಅರ್ಥವಾದವನಂತೆ ನಕ್ಕ. ಅವರಿಬ್ಬರೂ ಅಲ್ಲೇ ನಿಂತು ಮಾತನಾಡುತ್ತಿರುವಂತೆಯೇ ಪ್ರಶಾಂತ, ತನ್ನ ಹೆಂಡತಿಯೊಂದಿಗೆ ಬಂದ.....

"ಓ.... ಪ್ರಶಾಂತ್ ಬನ್ನಿ ಬನ್ನಿ" ದಿನೇಶ ಅವನ ಕೈ ಕುಲುಕಿದ. ಸುಗುಣಾ ಹೆಂಗಸರು ಕುಳಿತಿದ್ದೆಡೆಗೆ ಹೋದಳು. ವಿದ್ಯಾ ಬಂದು ಅತ್ತಿಗೆಯ ಕೈ ಹಿಡಿದು ಮಾತನಾಡಿಸಿದಳು. ಅನಂತರ ಎಲ್ಲರೂ ತಿಂಡಿ ತಿನ್ನಲು ಊಟದ ಹಾಲಿಗೆ ಬಂದರು. ವಿದ್ಯಾ – ಪ್ರಶಾಂತ ಪಕ್ಕ ಪಕ್ಕ ಕುಳಿತರು.

"ಅಪ್ಪಾ ಬಂದಿಲ್ವಾ?" ಪ್ರಶಾಂತ ಕೇಳಿದ.

"ಬಂದಿದಾರೆ. ಯಾರೋ ಸೀನಿಯರ್ಸ್‌ನ ನೋಡೋಕೆ ಹೋಗಿದಾರಂತೆ"

"ಇಂಥ ಸಮಯದಲ್ಲೂ ಅವರಿಗೆ ಅವರದೇ ಚಿಂತೆ.... ಸದ್ಯ ಅಮ್ಮನ್ನ ಕರ್ಕೊಂಡು ಬಂದಿದಾರೆ. ಅದೇ ಸಂತೋಷ."

"ಅಮ್ಮನ್ನ ಮಾತಾಡ್ಸಿದ್ಯಾ....?"

"ಹೂಂ. ಮಾತಾಡ್ಸಿದೆ. ಆದರೆ ಅವಳೂ ಅಷ್ಟೇ. ಮನೆಗೆ ಬಾ ಅಂತ ಹೇಳ್ತಾಳೆ.... ಅಪ್ಪ ಒಂದ್ಮಾತು ಹೇಳ್ದೆ ನಾನ್ಹೇಗೆ ಬರಲಿ! ಹೋಗ್ಲಿ ಬಿಡು. ನೀನು ಹೇಗಿದೀಯ? ಹೊಸ ಜೀವನ ಹೇಗಿದೆ....?"

"ತುಂಬಾ ಚೆನ್ನಾಗಿದೆ. ದಿನೇಶ್ ತುಂಬಾ ಒಳ್ಳೆಯವ್ರು...."

"ಅಪ್ಪನ ಸಹವಾಸದಲ್ಲಿ ನಿಂಗೆ ಮದ್ವೆ ಆಗುತ್ತೋ ಇಲ್ವೋ ಅಂತ ಅನುಮಾನ ಇತ್ತು.... ಅಪ್ಪ ದಿನೇಶನ್ನ ಒಪ್ಪಿದ್ದೇ ಹೆಚ್ಚು."

"ದಿನೇಶ ಯಾತರಲ್ಲಿ ಕಡಿಮೆ ಆಗಿದಾರೆ?"

"ಹಾಗಲ್ವೇ ನಾನು ಹೇಳಿದ್ದು.... ಅವ್ರಿಗೆ ಮಕ್ಕಳ ಮೇಲೆ ಮಮತೇನೇ ಇರಲಿಲ್ಲವಲ್ಲ. ಅದಕ್ಕೇ ಹೇಳ್ದೆ...."

"ಮಮತೆಗಿಂತ ಹೆಚ್ಚಾಗಿ ಕರ್ತವ್ಯ.... ನಮ್ಮೆಲ್ಲರ ಜವಾಬ್ದಾರಿ ಅವ್ರದ್ದೇ ತಾನೇ?"

"ಕಡೆಗೆ ಕಿಶೋರನ ಕಥೆ ಏನಾಯ್ತು? ಅವನಿಗ್ಯಾಕೆ ಕೆಟ್ಟುಬುದ್ಧಿ. ಕಾಮಾಕ್ಷಿ ಅತ್ತೆ ನೋಡಿದ್ರೆ ಅಷ್ಟು ಒಳ್ಳೋರು... ಅವರಪ್ಪ ಅಂತೂ ಯಾವ ಮಾತ್ಗೂ ಬಂದೋರಲ್ಲ."

"ಕಿಶೋರನ ವಿಷ್ಯ ನನ್ನೆದುರಿಗೆ ಆಡಬೇಡ.... ನನಗೆ ಇಷ್ಟವಾಗುಲ್ಲ...." ಪ್ರಶಾಂತ ಅವಳನ್ನೇ ಒಂದು ಗಳಿಗೆ ನೋಡಿ ಸುಮ್ಮನಾದ.

"ಅತ್ಗೆ ಹೇಗೆ? ನೀನ್ಯಾಕೆ ಯಾರ್ಗೂ ತಿಳಿಸ್ದೇ ಮದ್ವೆಯಾದೆ? ಅಮ್ಮಂಗೆಷ್ಟು ಬೇಜಾರಾಯ್ತು ಗೊತ್ತಾ?"

"ಅಪ್ಪಂಗೆ ಬುದ್ಧಿ ಕಲಿಸೋಕೇ...."

"ಅಪ್ಪಂಗೆ ಬುದ್ಧಿ ಕಲಿಸೋಕೆ, ನಿನ್ನ ಜೀವನಾನ ಪಣಕ್ಕೆ ಬಿಡ್ಬೇಕಾ?"

"ಪಣ ಏನು? ನನಗೂ ಸಂಗಾತಿಯ ಅಗತ್ಯವಿತ್ತು. ಅಪ್ಪ, ಅಮ್ಮನ ಹೆಸರ್ನಲ್ಲಿ ಕಾಗದ ಬರೆಸಿದ್ರು. ನನಗೂ ರೋಷ ಬಂತು. ಅವರ ಮಾತೇ ನಡೀಬೇಕೂಂತ ಏನು? ಸುಗುಣಾ ನನಗೆ ತಕ್ಕವಳು ಅಂತನ್ನಿಸ್ತು. ಮದ್ವೆಯಾಗ್ಬಿಟ್ಟೆ.... ಇನ್ನೊಂದು ವಿಷಯ ಗೊತ್ತಾ.... ಸುಗುಣಂದು, ಮಾವನಿಗೆ ಆಗದ ನಕ್ಷತ್ರವಂತೆ.... ಅದನ್ನು ತಿಳಿದೂ ನಾನು ಅವಳನ್ನು ಮದುವೆಯಾದೆ ಗೊತ್ತಾ? ಆದರೆ ಈ ವಿಷಯಾನ ಅಮ್ಮಂಗೆ ಮಾತ್ರ ಹೇಳ್ಬೇಡ..."

"ಅಪ್ಪಂಗೇನಾದ್ರೂ ಆದ್ರೆ.."

"ಏನೂ ಆಗುಲ್ಲ. ಸಂಬಂಧಗಳ ಅರ್ಥವೇ ಗೊತ್ತಿಲ್ಲದೋರು... ಅವ್ರಿಗೇನಾ ಗುತ್ತೆ? ಅದೇ ಅವ್ರ ಜತೆ ಇರ್ತಾರಲ್ಲ. ಅವ್ರಿಗೇನಾದ್ರೂ ಆಗ್ಬೇಕು ಅಷ್ಟೇ...."

"ನೀನು ಹೀಗೆ ಮಾಡ್ಬಾರ್ದಾಗಿತ್ತು ಪ್ರಶಾಂತ.... ನಂಗ್ಯಾಕೋ ಭಯ ಆಗುತ್ತೆ...."

"ನಾನು ನಂಗೆ ಯಾರೂ ಇಲ್ಲ. ಅನಾಥ ಅಂತ ಹೇಳ್ದೆ. ಅದನ್ನು ಅವರು ನಂಬಿದರು. ನಂಗೆ ಕೆಲಸ ಕೊಟ್ರು, ಮಗಳನ್ನು ಮದ್ವೆಯಾಗ್ತೀಯಾ ಅಂತ ಕೇಳಿದ್ರು. ನಂಗೆ ಅಗತ್ಯವಿದ್ದಾಗ ಸಹಾಯ ಮಾಡ್ದೋರು ಅವರು.... ಅದು ತಪ್ಪೇನಲ್ಲ."

"ತಪ್ಪು ಅಂತ ಹೇಳ್ತಿಲ್ಲ. ನೀನ್ಯಾಕೆ ಸುಳ್ಳು ಹೇಳ್ದೆ? ಅವ್ರಿಗೆ ನಿಜ ಏನೂಂತ ಗೊತ್ತಾದ್ರೆ? ನಿನ್ನ ಹೆಂಡ್ತಿಗೆ ಗೊತ್ತಾ.....?"

"ಹುಂ. ಗೊತ್ತು. ಅವತ್ತೇ ಹೇಳ್ಬಿಟ್ಟೆ.... ಅವ್ಳು ಭಯ ಪಟ್ಕೊಂಡ್ಳು.... ಆದರೆ ಈಗ ಯಾರೂ ಏನೂ ಮಾಡುಕ್ಕಾಗುಲ್ಲ.."

"ಅಪ್ಪನ್ನ ದೇವ್ರೇ ಕಾಪಾಡ್ಬೇಕು."

"ಅವ್ರಿಗೆ ದೇವ್ರ ಮೇಲೆ ನಂಬ್ಕೇನೇ ಇಲ್ಲವಲ್ಲ... ಅಲ್ದೇ ಅವರಿಗೆ ಶಾಸ್ತ್ರ, ಶಕುನ ಯಾವ್ದೂ ಬೇಡ... ಮತ್ಯಾಕೆ ಭಯ? ಅಲ್ದೇ ನೀನೀಗ ಅಪ್ಪನ ಮನೆಯಿಂದ ಹೊರ ಬಂದಿದೀಯ. ಇನ್ನು ಅವರ ಚಿಂತೆ ಬಿಡು. ನಿನ್ನ ವಿಷ್ಯ ನೀನು ನೋಡ್ಕೋ..."

"ಇಷ್ಟು ಸ್ವಾರ್ಥಿಯಾಗಬೇಡ್ವೋ... ಆಗ ನಿಂಗೂ ಅಪ್ಪಂಗೂ ಏನು ವ್ಯತ್ಯಾಸ?"

"ನಾನು ಅವರ ಮಗನೇ.... ಅದೇ ರಕ್ತ ನನ್ನಲ್ಲಿ ಹರೀತಿರೋದು.... ಬೇರೆ ಗುಣಾನ ಬಾ ಅಂತಂದ್ರೆ ಎಲ್ಲಿಂದ ಬರುತ್ತೆ....?" ವ್ಯಂಗ್ಯವಾಗಿ ನಕ್ಕ.

* * *

"ಇನ್ನೂ ತಿಂಡಿ ತಿಂದಾಗ್ಲಿಲ್ವಾ? ಅಮ್ಮ ಕರೀತಿದಾಳೆ. ಬೇಗ ಬಾ." ದಿನೇಶ ಬಂದು ಹೇಳಿದ. ವಿದ್ಯಾ ಎದ್ದು ಕೈ ತೊಳೆದಳು.

ಪೂಜೆ ಪ್ರಾರಂಭವಾಗಿತ್ತು. ಗೋಪಾಲ, ಸುಶೀಲಾ ಉಪವಾಸವಿದ್ದು ಪೂಜೆಯನ್ನು ಮಾಡಲು ಕುಳಿತಿದ್ದರು. ಅವರ ಕಡೆಯ ಕೆಲವು ನೆಂಟರು, ಸ್ನೇಹಿತರುಗಳು ಒಬ್ಬೊಬ್ಬರಾಗಿ ಬರಲಾರಂಭಿಸಿದರು. ದಿನೇಶ ಎಲ್ಲರಿಗೂ ವಿದ್ಯಾಳ ಪರಿಚಯವನ್ನು ಮಾಡಿಸಿದ. ದಿನೇಶನ ಸ್ನೇಹಿತರು, ಅವಳೆಡೆ ಮೆಚ್ಚುಗೆಯ ನೋಟವನ್ನು ಬೀರಿ ಅವನ ಕೈಕುಲುಕಿ ಶುಭಾಶಯಗಳನ್ನು ಹೇಳಿದರು.

ಕುಂಕುಮ ಬಣ್ಣದ ಜರತಾರಿ ಸೀರೆಯುಟ್ಟು, ಅದೇ ಬಣ್ಣದ ರವಿಕೆಯನ್ನು ಧರಿಸಿದ್ದಳು. ಅದಕ್ಕೆ ಒಪ್ಪುವಂತೆ ಕೆಂಪುಕಲ್ಲಿನ ಆಭರಣಗಳನ್ನು ಧರಿಸಿದ್ದಳು. ನೀಳವಾದ ಕೂದಲನ್ನು ಅಳ್ಳಕವಾಗಿ ಬಾಚಿ ಜಡೆಹೆಣೆದುಕೊಂಡು ಮುಡಿ ತುಂಬಾ ಹೂ ಮುಡಿದಿದ್ದಳು. ಮೊದಲಿಗಿಂತ ಅವಳ ಸೌಂದರ್ಯ ಇಮ್ಮಡಿಸಿತ್ತು. ಅಪೂರ್ವವಾದ ಕಳೆ ಮುಖದಲ್ಲಿ ಮಿನುಗಿತ್ತು.

"ನಿಮ್ಮ ತಂಗೀರು ಒಬ್ಬರಿಗಿಂತ ಒಬ್ರು ಚೆನ್ನಾಗಿದಾರೆ." ಸುಗುಣಾ ಮನ ಸಾರೆ ಹೊಗಳಿದಳು.

"ಯಾಕೆ ನಾನು ಚೆನ್ನಾಗಿಲ್ವಾ?" ತಮಾಷೆಯಾಗಿ ಕೇಳಿದ ಪ್ರಶಾಂತ.

"ನೀವು ಚೆನ್ನಾಗಿದೀರಿ. ಆದರೆ ನೀವು ನಿಮ್ಮ ತಂದೆ ತರಹಾನೇ ಇದೀರೇನೋ ಅಂತ ಅನ್ನಿಸುತ್ತೆ...."

"ರೂಪದಲ್ಲೋ ಗುಣದಲ್ಲೋ...."

"ಎರಡರಲ್ಲೂ..." ಅವನು ಅವಳ ಕೆನ್ನೆ ಚಿವುಟಿದ.

"ನಿಂಗೆಷ್ಟು ಧೈರ್ಯ?" ಎಂದ.

ಪೂಜೆ ಸಾಂಗವಾಗಿ ನೆರವೇರಿತು. ಮಂಗಳಾರತಿಯಾಗಿ, ಎಲ್ಲರಿಗೂ ತೀರ್ಥ ಪ್ರಸಾದವನ್ನು ಕೊಟ್ಟಾಗಿತ್ತು. ಆದರೂ ಭಟ್ಟ ಇನ್ನೂ ಬಂದಿರಲಿಲ್ಲ. ಒಂದು ಪಂಕ್ತಿಯ ಊಟ ಮುಗಿದಾಗ ಭಟ್ಟ ಆಗಮಿಸಿದ. ಗೋಪಾಲ ಬಂದು

ಹಾರ್ದಿಕವಾಗಿ ಸ್ವಾಗತಿಸಿದ.

"ಯಾಕೋ ತಡವಾಯ್ತಲ್ಲ. ಏಳಿ ಊಟ ಮಾಡೋರಂತೆ." ಭಟ್ಟ ಹೆಚ್ಚು ಮಾತಾಡದೇ ಊಟಕ್ಕೆ ಕುಳಿತ. ಎರಡನೆಯ ಪಂಕ್ತಿಯಲ್ಲಿ ಮನೆಯವರು ಮಾತ್ರ ಕುಳಿತಿದ್ದರು. ಭಟ್ಟ ಏನೋ ಆಲೋಚನೆಯಲ್ಲಿದ್ದವನಂತೆ ತನ್ನ ಪಾಡಿಗೆ ತಾನು ಊಟ ಮಾಡಿದ. ಯಾರೊಡನೆಯೂ ಹಿಂದಿನಂತೆ ಯಾವ ಮಾತೂ ಇಲ್ಲ. ಊಟವಾದ ಕೂಡಲೇ ಪ್ರಶಾಂತ ಹೆಂಡತಿಯೊಡನೆ ಊರಿಗೆ ಹೊರಟ. ಪ್ರೇಮಾ, ಭವಾನಿಯ ಮಾತುಗಳು ಮುಗಿಯುವಂತೆಯೇ ಇರಲಿಲ್ಲ. ಊಟದ ಅನಂತರ ಎಲ್ಲರೂ ಗುಂಪುಗುಂಪಾಗಿ ಕುಳಿತು ಮಾತುಗಳನ್ನಾಡುತ್ತಿದ್ದರು.

"ಶ್ರೀಕರ ಹೋಗೋ, ನಿಮ್ಮಮ್ಮನ ಕರೆದ್ಬಾ.... ಹೊರಡೋಣ. ಹೊತ್ತಾಗುತ್ತೆ." ಭಟ್ಟ ಹೇಳಿದ.

"ಈಗಿನ್ನೂ ಊಟ ಆಗಿದೆ. ಈಗ್ಲೇ ಹೊರಡ್ಬೇಕಾ? ರಾತ್ರಿಯ ಊಟವನ್ನು ಮುಗಿಸ್ಕೊಂಡು ಹೊರಡ್ಬಹುದಲ್ಲ." ಪ್ರಸಾದ ನುಡಿದ.

"ಇಲ್ಲ. ಆಯ್ತಲ್ಲ ಬಂದ ಕೆಲಸ... ಸಂತೋಷನ್ನೊಬ್ಬನ್ನೇ ಬಿಟ್ಟು ಬಂದಿದೀನಿ. ಅವನಿಗೂ ಮುಂದಿನ ವಾರದಿಂದ ಪರೀಕ್ಷೆ."

"ಇದ್ದಾಗೇ ಆಗ್ಲಿಲ್ಲ... ಅಕ್ಕನ್ನಾದ್ರೂ ಬಿಟ್ಟು ಹೋಗಿ ಭಾವ.... ಅಪರೂಪಕ್ಕೆ ಬಂದಿದಾಳೆ. ತುಂಬಾ ಮಾತನಾಡೋದಿದೆ.... ಗೌತಮ ಕರ್ಕೊಂಡ್ಬಂದು ಬಿಡ್ತಾನೆ."

"ನಿಮ್ಮಗಳ ಮಾತಿಗೆ ಎಷ್ಟು ಸಮಯ ಇದ್ರೂ ಸಾಲದು. ಏನೂ ಬೇಡ.... ಒಟ್ಟಿಗೇ ಬಂದಿದೀವಿ. ಒಟ್ಟಿಗೇ ಹೊರಡ್ತೀವಿ." ಭಟ್ಟ ಸ್ವಲ್ಪ ಒರಟಾಗಿಯೇ ನುಡಿದು ಹೆಂಡತಿ – ಮಕ್ಕಳನ್ನು ಅವಸರಿಸಿದ.

"ಸಂತೋಷನ ಪರೀಕ್ಷೆ ಮುಗಿದ್ಮೇಲೆ ಕಳಿಸಿ. ನಾಲ್ಕು ದಿನ ಅಕ್ಕನ ಮನೇಲಿ, ನಾಲ್ಕು ದಿನ ನಮ್ಮನೇಲಿ ಇರಲಿ." ಭಟ್ಟ ಅದಕ್ಕೆ ಉತ್ತರಿಸಲಿಲ್ಲ. ಸುಶೀಲಾ ಸೊಸೆಯ ಕೈಯಲ್ಲಿ ಎಲ್ಲರಿಗೂ ಫಲ ತಾಂಬೂಲ, ಉಡುಗೊರೆಗಳನ್ನು ಕೊಡಿಸಿದಳು.

ಅಕ್ಕ ಊರಿಗೆ ಹೊರಟಿದ್ದರಿಂದ, ಭವಾನಿಯೂ ಅವರೊಂದಿಗೆ ಮನೆಗೆ ಬಂದಳು. ಎಲ್ಲರಿಗೂ ಕಾಫಿಯನ್ನು ಮಾಡಿಕೊಟ್ಟು, ತಾನು ಕೊಡಲೆಂದು ತಂದಿದ್ದ ಉಡುಗೊರೆಗಳನ್ನು ಎಲ್ಲರಿಗೂ ಕೊಟ್ಟಳು.

"ಇದೆಲ್ಲಾ ಏನೇ ಭವಾನಿ. ಮತ್ತೆ ಮತ್ತೆ ಯಾಕೆ? ಮದುವೇಲಿ ಕೊಟ್ಟಿದ್ಯೆಲ್ಲಾ...."

"ಇರಲಿ, ಇದೆಲ್ಲಾ ಏನು ಮಹಾ? ನೀನು ಮೊದಲ ಬಾರಿಗೆ ನಮ್ಮ ಮನೆಗೆ ಬಂದ ನೆನಪಿಗೆ ಅಂತ ಅಷ್ಟೇ....." ಅಷ್ಟರಲ್ಲಿ ಭಟ್ಟನಾಗಲೇ ಕಾರಿನಲ್ಲಿ ಕುಳಿತಿದ್ದಾಗಿತ್ತು..... ಪ್ರೇಮಾ ಮಕ್ಕಳೊಡನೆ ಕಾರನ್ನೇರಿದಳು. ಭವಾನಿ ಕೈಯಾಡಿಸಿದಳು.

* * *

ಅಧ್ಯಾಯ – ಇಪ್ಪತ್ತನಾಲ್ಕು

ಚಿನ್ಮಯೀ ಒಗಟಾದಳೇ?

ಸಂತೋಷ ಪರೀಕ್ಷೆಯಲ್ಲಿ ಚೆನ್ನಾಗಿ ಮಾಡಿದ್ದ. ಅವನ ಪರಿಶ್ರಮಕ್ಕೆ ತಕ್ಕ ಫಲ ಸಿಗುವುದೆಂಬ ನಂಬಿಕೆ ಅವನಿಗಿತ್ತು. ಅವನಿಗೆ ಎಂ.ಬಿ.ಬಿ.ಎಸ್. ಗೆ ಸೇರಬೇಕೆಂಬ ಆಸೆ. ಆದರೆ ತಂದೆ ಏನಂದು ಬಿಡುವರೋ ಎಂಬ ಅಂಜಿಕೆ.

"ಅಪ್ಪಾ, ನನ್ನ ಫ್ರೆಂಡ್ಸೆಲ್ಲಾ ಮೈಸೂರಿಗೆ ಹೋಗಿ ಬರ್ತಿದಾರೆ. ನಾನೂ ಹೋಗಿ ಬರ್ತೀನಪ್ಪಾ."

"ಪರೀಕ್ಷೆ ಮುಗಿದ ಕೂಡಲೇ ತಿರುಗಾಡಬೇಕೆಂಬ ನಿಯಮವೇನಿಲ್ಲ. ಮುಂದೆ ಯಾವ ಕೋರ್ಸ್ ಸೇರಬೇಕೆಂದುಕೊಂಡಿದೀಯ?"

"ಮೆಡಿಕಲ್‌ಗೆ ಸೇರೋಣ ಅಂತಂದ್ಕೊಂಡಿದೀನಿ. ಸೇರ್ಲೇನಪ್ಪಾ....."

"ಮೆಡಿಕಲ್ ಸ್ಟಡೀ ಕಠಿಣವಾದದ್ದು. ಸೇರ್ಕೊಂಡ್ಮೇಲೆ ಕಷ್ಟ, ನನ್ಕೈಲಾಗುಲ್ಲ ಅಂತೆಲ್ಲ ಹೇಳುವ ಹಾಗಿಲ್ಲ." ಸಂತೋಷನ ಮುಖ ಅರಳಿತ್ತು. ಅಂದ್ರೆ ಅಪ್ಪನ ಒಪ್ಪಿಗೆ ಸಿಕ್ಕಂತಾಗಿತ್ತು ಎಂದು ಖುಶಿಗೊಂಡ.

"ಅಪ್ಪ, ನಾನು ಮೈಸೂರಿಗೆ ಹೋಗಿ ಬರ್ತೀನಪ್ಪಾ" ಮತ್ತೆ ಕೇಳಿದ.

"ಏನೂ ಬೇಡ. ಮೈಸೂರಿನ ಮೆಡಿಕಲ್ ಕಾಲೇಜಿಗೆ ಸೇರ್ಕೊಂಡ್ರೆ ಅಲ್ಲೇ ಇರ್ತೀಯಲ್ಲ. ಆಗ ಊರನ್ನೆಲ್ಲಾ ನೋಡೂವಂತೆ.... ಈಗ್ಯಾಕೆ ಸುಮ್ನೆ ದುಡ್ಡು ದಂಡ..."

ಸಂತೋಷ ಅಲ್ಲಿ ನಿಲ್ಲದೇ ಸೀದಾ ಅಮ್ಮನ ಬಳಿಗೆ ಬಂದ. "ಅಮ್ಮ ನಾನು ಮೆಡಿಕಲ್ ಕಾಲೇಜ್ಗೆ ಸೇರ್ಕೋತೀನಿ. ಡಾಕ್ಟರಾಗ್ತೀನಿ." ಎದೆ ಉಬ್ಬಿಸಿ ಹೇಳಿದ....

"ಏನ್ ಹೇಳ್ತಿದೀಯೋ ನೀನು....? ನಿಮ್ಮಪ್ಪ ಎಲ್ಲಿ ಒಪ್ತಾರೆ....?"

"ಇಲ್ಲಮ್ಮ.... ಅವರೇ ಹೇಳಿದ್ದು. ನಾನು ಮೈಸೂರಿನ ಮೆಡಿಕಲ್ ಕಾಲೇಜ್ಗೆ ಸೇರಿಕೊಳ್ತೀನಿ." ಇದ್ದಕ್ಕಿದ್ದಂತೆ ಪ್ರೇಮಾ ಪೆಚ್ಚಾದಳು.

"ಅಂದ್ರೆ ನೀನೂ ಮನೆ ಬಿಟ್ಟು ಹೊರಟು ಹೋಗ್ತಾ ಇದೀಯೇನೋ.....?"

"ಏನಮ್ಮಾ ಹೀಗಂದ್ರೆ? ಓದುಕ್ಕೆ ಹೋಗ್ತೀನಿ. ಮನೆ ಬಿಟ್ಟು ಎಲ್ಲಿ ಹೋಗ್ತೀನಿ....?"

"ಮನೇಲಿ ನನ್ನ ಕಣ್ಣೆದುರಿಗೆ ಎಲ್ಲಿರ್ತೀಯ.... ಮನೆಬಿಟ್ಟು ದೂರ ಎಲ್ಲೋ ಇರ್ತೀಯ."

"ನಾನೇನೂ ದೇಶಾಂತರ ಹೋಗ್ತಿಲ್ಲ. ಆಗಾಗ್ಗೆ ಊರಿಗೆ ಬರ್ತೀನಿ. ತಿಳೀತಾ?"

"ನೀನೂ ನನ್ನ ಮೇಲೆ ಕೂಗಾಡ್ಬೇಡ... ಏನಾದ್ರೂ ಮಾಡ್ಕೊಳ್ಳಿ. ನಿಮಗ್ಯಾರಿಗೂ ನಾನು ಬೇಡವಾಗಿದೀನಿ."

"ಯಾಕಮ್ಮಾ ಹೀಗೆಲ್ಲಾ ಮಾತಾಡ್ತೀಯ. ನಾನು ಓದಿ ಡಾಕ್ಟರಾಗಲಿ ಅಂತ ನಿನಗೆ ಆಸೆ ಇಲ್ವಾ ಹೇಳು....?"

"ಇಲ್ಲಿ ಹತ್ರ ಯಾವ ಕಾಲೇಜು ಇಲ್ವಾ...?"

"ಮೈಸೂರಿನ ಕಾಲೇಜು ಚೆನ್ನಾಗಿದೆಯಂತೆ. ಒಳ್ಳೇ ಕಾಲೇಜ್ನಲ್ಲಿ ನನಗೆ ಸೀಟು ಸಿಕ್ಕರೆ ನನ್ನ ಅದೃಷ್ಟ. ದಯವಿಟ್ಟು ಬೇಡ ಅನ್ನಬೇಡಮ್ಮ. ಅಪ್ಪ ಕೂಡ ಒಪ್ಕೊಂಡಿದಾರೆ."

"ನಿಮ್ಮಪ್ಪಂಗೆ ಹಾಗೇ. ನನ್ನ ಮಕ್ಳನ್ನು ನನ್ನಿಂದ ದೂರ ಮಾಡೋ ಆಸೆ... ನನ್ನ ನೆಮ್ಮದಿ ಅವರಿಗೆ ಹಿಡಿಸುಲ್ಲ.... ಪ್ರಶಾಂತನ್ನ ಮನೆಯಿಂದಾಚೆ ಓಡಿಸಿದ್ರು. ಊರಿಗೆ ಮುಂಚೆ ವಿದ್ಯಾಳಿಗೆ ಮದುವೆ ಮಾಡಿದರು. ಈಗ ನಿನ್ನ ಸರದಿ.... ಒಟ್ನಲ್ಲಿ ನಾನು ಸದಾ ಕೊರಗಬೇಕಾ?"

"ನಿನಗೆ ಅಷ್ಟು ಬೇಜಾರಾಗೋದಾದ್ರೆ ಹೇಳ್ಬಿಡು. ನಾನು ಬಿ.ಎಸ್‌ಸಿ.ಗೆ ಸೇರ್ಕೊತೀನಿ."

"ನಿಮ್ಮಪ್ಪ ಮನಸ್ಸು ಮಾಡಿದ್ಮೇಲಾಯ್ತು. ನಿನಗೇ ಬೇಡಾಂತ ಅನ್ನಿಸಿದ್ರೂ ಅವರು ಕೇಳೋರಲ್ಲ. ಏನಾದ್ರೂ ಮಾಡ್ಕೊಳ್ಳಿ. ನನ್ನ ಮಾತನ್ಯಾರು ಕೇಳ್ತೀರಿ....?"

ಸಂತೋಷನ ಮುಖ ಮುದುಡಿ ಹೋಯಿತು. ತಾಯಿ ಸಂತೋಷಪಡುವಳೆಂದುಕೊಂಡಿದ್ದ. ಆದರೆ ಅವಳ ಯೋಚನಾ ಲಹರಿಯೇ ಬೇರೆ.... ಅಪ್ಪನಿಗೆ ಇಷ್ಟವಿಲ್ಲದೇ ಇದ್ದಿದ್ದರೆ ಇಷ್ಟು ಬೇಸರವಾಗುತ್ತಿರಲಿಲ್ಲವೇನೋ.... ಆದರೆ ಈಗ ತಾಯಿಯೇ ಹೀಗೆ ಆಡಿದರೆ? ದಿಕ್ಕು ತೋಚದಂತಾಗಿ, ವಿದ್ಯಾಳಿಗೊಂದು, ಪ್ರಶಾಂತನಿಗೊಂದು ಪತ್ರವನ್ನು ಬರೆದು ಪೋಸ್ಟ್ ಮಾಡಿದ.

ಒಂದು ವೇಳೆ ಅಮ್ಮ ಹೇಳುವಂತೆ, ಅಪ್ಪ ನನ್ನನ್ನು ದೂರ ಮಾಡುತ್ತಿರಬಹುದೇ? ಎಂಬ ಅನುಮಾನ ಸಹ ಕಾಡಿತ್ತು.

ವಿದ್ಯಾ ತತ್‌ಕ್ಷಣ ಉತ್ತರ ಬರೆದಿದ್ದಳು. "ಅಮ್ಮನ ಮಾತಿಗೆ ಬೇಸರಿಸಬೇಡ. ಅಪ್ಪ ಒಪ್ಕೊಂಡಿರುವಾಗ ಯಾವುದೇ ಕಾರಣಕ್ಕೂ ಈ ಅವಕಾಶವನ್ನು ಕಳ್ಕೋಬೇಡ. ನೀನು ಡಾಕ್ಟರಾಗಿ ಬಂದಾಗ ಎಲ್ಲಾ ನೋವನ್ನೂ ಮರೆತು ಬಿಡ್ತಾಳೆ. ನನ್ನ ಪರೀಕ್ಷೆಯ ಟೈಮ್ ಟೇಬಲ್ ಬಂತಾ? ತತ್‌ಕ್ಷಣ ತಿಳಿಸು. ಪರೀಕ್ಷೆಯ ನೆವದಲ್ಲಿ ಊರಿಗೆ ಬರ್ತೀನಿ. ಪರೀಕ್ಷೆಗೆ ಹೋಗ್ತೀನೋ ಬಿಡ್ತೀನೋ ನನಗೇ ಗೊತ್ತಿಲ್ಲ. ಹೋದರೂ ಪಾಸಂತೂ ಆಗುಲ್ಲ. ಯಾಕೋ ಓದಿದ್ದು ತಲೆಗೇ ಹೋಗುಲ್ಲ. ಇಲ್ಲಿ ಎಲ್ಲರೂ ಕ್ಷೇಮ. ಅಲ್ಲಿಯೂ ಎಲ್ಲರೂ ಕ್ಷೇಮವೆಂದು ನಂಬಿದ್ದೇನೆ. ಅಮ್ಮನ್ನ ಚೆನ್ನಾಗಿ ನೋಡ್ಕೋ.... ಅವಳಿಗೂ ತುಂಬಾ ಬೇಸರ. ಚಿನ್ಮಯೀ ಹೇಗಿದಾಳೆ?

ಅವಳಿಗೆ ಸ್ವಲ್ಪ ಕಮ್ಮಿ ತಿನ್ನು ಅಂತ ಹೇಳು. ಸಿಕ್ಕಾಪಟ್ಟೆ ಬೆಳೆದುಬಿಟ್ಟಿದ್ದಾಳೆ. ತಂಗಿಗೆ ಯಾವಾಗ ಮದುವೆ ಅಂತ ಎಲ್ರೂ ಕೇಳ್ತೋರೇ....." ಸಂತೋಷ ನಕ್ಕು ಕಾಗದ ವನ್ನು ಮಡಿಸಿಟ್ಟ.

ನಾಲ್ಕಾರು ದಿನಗಳ ಅನಂತರ ತಡವಾಗಿ ಪ್ರಶಾಂತನ ಪತ್ರ ಬಂದಿತ್ತು. "ಅಪ್ಪ ನಿನ್ನನ್ನು ಮೆಡಿಕಲ್ ಕೋರ್ಸ್‌ಗೆ ಸೇರಿಸಲು ಒಪ್ಪಿಕೊಂಡಿರುವುದನ್ನು ಕೇಳಿ ಖುಶಿಯೇನೋ ಆಯ್ತು. ಆದರೆ ಅವರನ್ನು ಪೂರ್ತಿ ನಂಬಬೇಡ. ಅಥವಾ ನನ್ನ ಹಾಗೇ ನೀನೂ ಎಲ್ಲಿ ಮನೆಬಿಟ್ಟು ಹೊರಟುಹೋಗ್ತೀಯೋ ಅಂತ ಹೆದರಿರ ಬಹುದು. ಅಥವಾ ಅಮ್ಮನ ಮನಸ್ಸನ್ನು ನೋಯಿಸಲು, ನಿನ್ನನ್ನು ಮನೆಯಿಂದಾಚೆ ಕಳಿಸುತ್ತಿರಬಹುದು. ಏನು ಬೇಕಾದರೂ ಮಾಡಬಹುದಾದ ಮನುಷ್ಯ. ನನ್ನ ಆಸೆಗೆ ಕಲ್ಲು ಹಾಕಿದರು. ಹಾಗಂತ ನನಗೇನೂ ಅಸೂಯೆಯಿಲ್ಲ. ದೇವರ ದಯೆ ಯಿಂದ ದೊಡ್ಡ ಡಾಕ್ಟರಾಗಿ ಹೆಸರು ಗಳಿಸು. ನಿನ್ನ ಅತ್ತಿಗೆ ನಿಮ್ಮನ್ನೆಲ್ಲಾ ಕೇಳಿದಾಳೆ. ಅಮ್ಮನಿಗೆ ನಮ್ಮಿಬ್ಬರ ನಮಸ್ಕಾರವನ್ನು ತಿಳಿಸು... *ಇತಿ ಪ್ರಶಾಂತ*." ಪ್ರಶಾಂತನ ಪತ್ರವನ್ನು ಓದಿ, ಮನಸ್ಸು ವಿಚಲಿತಗೊಂಡಿತು. ಇಬ್ಬರ ವಿಚಾರದಲ್ಲೂ ಎಷ್ಟು ಅಂತರ!

"ಏ ಛಿನ್ನಮ್ಮಾ..... ಅಕ್ಕ ಕಾಗದ ಬರೆದಿದಾಳೆ ಓದು." ಚಿನ್ಮಯಿ ಕಾಗದ ವನ್ನು ಕಿತ್ತುಕೊಂಡು ಓದಿದಳು.

"ನನ್ಮೇಲ್ಯಾಕೆ ಈ ಅಕ್ಕಂಗೆ ಹೊಟ್ಟೆ ಉರಿ...."

"ಹಾಗಿದೀರಿ ತಾವು... ಸಾಕ್ಷಾತ್ ಹಿಡಿಂಬಾದೇವಿ ತರಹ...."

"ನೀನೇ ಹಿಡಿಂಬನ ತರಹ ಇರೋನು...." ಕೈ ಮುಂದೆ ಮಾಡಿದಳು.

"ಪರೀಕ್ಷೆ ಮುಗೀತೆಲ್ಲ. ಅಕ್ಕಂಗೆ ಕಾಗದ ಬರೀಬೇಡ್ವಾ! ಅವಳಿಗೆ ಕೋಪ ಬರುಲ್ವಾ? ಬೇಸರ ಆಗುಲ್ವಾ?"

"ಬೇಸರ ಯಾಕೆ? ಬೇಸರ ಕಳೆಯೋಕೆ ಭಾವ ಇದಾರಲ್ಲ."

"ಭಾವ ಏನ್ಸದಾ ಮನೇಲೇ ಕೂತಿರ್ತಾರಾ....? ಸುಮ್ನೆ ಹೇಳಿದಷ್ಟು ಕೇಳು..."

"ನೀನ್ಯಾಕೋ ನನ್ಮೇಲೆ ಜೋರು ಮಾಡೋದು? ಅಮ್ಮಂಗ್ಹೇಳ್ತೀನಿ ತಡಿ" ತಾಯಿಯ ಮಾತು ಬಂದ ಕೂಡಲೇ ಸಂತೋಷ ಪೆಚ್ಚಾದ. ಅಮ್ಮನೊಡನೆ ಮೊದಲಿನಂತೆ ಮಾತನಾಡಲು ಕಷ್ಟವಾಗುತ್ತಿತ್ತು. ಏನೋ ಅಪರಾಧೀ ಮನೋಭಾವ. ತಾಯಿಯನ್ನು ಒಲಿಸಿಕೊಳ್ಳುವುದು ಹೇಗೆ? ಅವಳು ನಗುನಗುತ್ತಾ ಕಳಿಸಿಕೊಟ್ಟರೆ ಸರಿ. ಇಲ್ಲದಿದ್ದರೆ ಅದೇನೇನು ವಿಕೋಪಕ್ಕೆ ಹೋಗುತ್ತದೋ ಎಂಬ ಭಯ.

"ಅಮ್ಮ ಕರೀತಿದಾಳೆ ಬರ್ಬೇಕಂತೆ" ಚಿನ್ಮಯೀ ಹೇಳಿದಳು.

"ನನ್ಮೇಲೆ ಏನಂತ ಚಾಡಿ ಹೇಳ್ದೇ...." ಅವಳ ಜಡೆ ಎಳೆದ.

"ಏನಮ್ಮಾ ಕರೆದ್ಯಂತೆ? ತಾಯಿಯನ್ನು ಕೇಳಿದ.

"ವಿದ್ಯಾ ಕಾಗದ ಬರ್ದಿದಾಳಂತೆ. ನೀನು ನಂಗ್ಹೇಳ್ಲೇ ಇಲ್ಲ. ಏನು ಬರ್ದಿದಾಳೆ? ಹುಶಾರಾಗಿದ್ದಾರಂತಾ ಎಲ್ಲಾ?"

"ಹುಂ. ಪರೀಕ್ಷೆ ಹೊತ್ಗೆ ಬರ್ತಾಳಂತೆ. ಟೈಮ್ ಟೇಬಲ್ ಯಾವಾಗ ಬರುತ್ತೆ ಅಂತ ಕೇಳಿ ವಿಚಾರಿಸಿ ಬರಿ ಅಂತ ಹೇಳಿದಾಳೆ."

"ಇನ್ಯಾಕೆ ಈ ಪರೀಕ್ಷೆ.... ಓದಿ ಏನು ಮಾಡ್ಬೇಕಾಗಿದೆ?"

"ಓದಿದ್ರೆ ತಪ್ಪೇನು?"

"ಮನೆ ಕೆಲ್ಸ ಕಾರ್ಯ ಕಲಿತು, ಸಂಸಾರ ಮಾಡ್ಕೊಂಡಿದ್ರೆ ಸಾಕು. ಓದಿ, ಬರೆದು ಮಾಡುಕ್ಕೆ ಬರುತ್ತಲ್ಲ ಅಷ್ಟು ಸಾಕು." ಸಂತೋಷ ಮತ್ತೆ ಏನೂ ಹೇಳಲಿಲ್ಲ.

"ನಿನಗೂ ನನ್ಮೇಲೆ ಕೋಪನೇನೋ... ನಾನೂ ನೋಡ್ತಾ ಇದೀನಿ. ನಾಲ್ಕು ದಿನಗಳಿಂದ ನನ್ನ ಕಡೆ ನೋಡ್ದೇ ಓಡಾಡ್ತಿದೀಯ.... ಯಾಕೋ?"

"ಏನಿಲ್ಲಮ್ಮ.... ಏನೋ ಬೇಜಾರು ಅಷ್ಟೇ."

"ನಿಮ್ಮಪ್ಪನ್ನ ಕೇಳಿ ಒಪ್ಹೋದಾದ್ರೆ ಹೋಗಿ ವಿದ್ಯಾನ್ನ ಕರ್ಕೊಂಡ್ಬಾ...."

"ಸುಮ್ಸುಮ್ನೇ ಕಳಿಸ್ಬಿಡ್ತಾರೇನಮ್ಮ? ನೋಡೋಣ ಪರೀಕ್ಷೆಗೆ ಅವಳೇ ಬರ್ತೀನಿ ಅಂತ ಬರ್ದಿದಾಳೆ..,.. ಬಂದ್ಮೇಲೆ ಪರೀಕ್ಷೆ ಮುಗಿಯೋವರೆಗೂ ಇಲ್ಲೇ ಇರ್ತಾಳೆ."

"ಅಮ್ಮಾ, ನಾನೂ ಹೋಗ್ಬರ್ತೀನಮ್ಮ.... ನಂಗೂ ರಜ ಇದೆಯಲ್ಲ." ಚಿನ್ಮಯೀ ಕೇಳಿದಳು.

"ನಿಮ್ಮಪ್ಪ ಕಳಿಸ್ಕೊಟ್ರೆ ಎಲ್ರೂ ಹೋಗಿ." ತಾಯಿ ಕುಹಕವಾಗಿ ನಕ್ಕಳು. ಚಿನ್ಮಯೀ ಪೆಚ್ಚು ಮುಖ ಮಾಡಿದಳು.

* * *

ಪರೀಕ್ಷೆಗೆ ಇನ್ನೂ ಎರಡು ದಿನಗಳು ಬಾಕಿ ಇರುವಾಗ ವಿದ್ಯಾ, ದಿನೇಶ ನೊಂದಿಗೆ ಬಂದಿಳಿದಳು. ಕುಶಲವನ್ನು ವಿಚಾರಿಸಿದ್ದಾಯ್ತು. ಆಯಾಸ ಪರಿಹಾರ ವಾಯಿತು. ಯಾರ ಮಾತು ಮುಗಿಯುವಂತೆಯೇ ಇಲ್ಲ. ದಿನೇಶ ಅದೇ ರಾತ್ರಿ ವಾಪಸ್ಸು ಹೊರಡುವವನಿದ್ದ.

"ನಂಗೆ ರಜ ಇಲ್ಲ. ಬಿಟ್ಬಿಟ್ಟು ಬರ್ತೀನಿ. ತಮ್ಮ-ತಂಗೀರ ಜತೆ ಕೂತ್ಕೊಂಡು ಚಕ್ಕಂದ ಹೊಡೀಬೇಡ.... ಓದ್ದೇ ಕಾಲ ಕಳೀಬೇಡ...." ಮೊದಲೇ ಹೇಳಿದ್ದ.

"ಹೂಂ ಹೂಂ." ಎಂದು ತಲೆಯಾಡಿಸಿದ್ದಳು. ಅವಳ ಸುತ್ತ ಕುಳಿತು ಎಲ್ಲರೂ ಅವಳನ್ನು ತನ್ನ ಕಡೆ ತಿರುಗಿಸಿಕೊಂಡು ಮಾತನಾಡುತ್ತಿದ್ದರು. ತನ್ನ ಮುದ್ದಿನ ಮಡದಿಯನ್ನು ಅವರೆಲ್ಲರೂ ಗೋಳು ಹೊಯ್ದುಕೊಳ್ಳುತ್ತಿದ್ದಾರೆಂದೆನಿಸಿತು.

"ಶ್ರೀಕರ, ದೂರ ಕೂತ್ಕೊಂಡು ಮಾತಾಡು... ಅದ್ಯಾಕ್ಹಾಗೆ ಮೈಮೇಲೆ ಬೀಳ್ತೀಯ. ನಿಮ್ಮಕ್ಕಂಗೆ ನೋವಾಗುಲ್ವಾ?" ತಡೆಯಲಾರದೇ ಹೇಳಿದ. ಶ್ರೀಕರ

ಹಿಂದಕ್ಕೆ ಸರಿದ. ಅವನಿಗೆ ಅವಮಾನವಾದಂತಾಗಿತ್ತು. ಚಿನ್ಮಯೀ, ನಳಿನಿಯೂ ದೂರ ಸರಿದು ಕುಳಿತರು. ವಿದ್ಯಾ ಗಂಡನ ಕಡೆ ಆಕ್ಷೇಪಣೆಯ ನೋಟವನ್ನೆಸೆದಳು.

ತಾವಿಬ್ಬರೇ ರೂಮ್‌ನಲ್ಲಿದ್ದಾಗ, ದಿನೇಶ ಅವಳಿಗೆ ಹೇಳಿದ. "ನಿನ್ನ ತಂಗಿ, ತಮ್ಮಂಗೆ ಇನ್ನೂ ಬುದ್ಧಿ ಬಲಿತಿಲ್ಲ. ಹಾಗ್ಯಾಕೆ ಮೈಮೇಲೆ ಬೀಳ್ತಾರೆ! ನೀನೂ ಸುಮ್ನಿರ್ತೀಯಲ್ಲ. ನನಗಿದೆಲ್ಲ ಸರಿ ಹೋಗುಲ್ಲ."

"ನಿಮಗ್ಯಾಕೆ ಕೋಪ....? ನನ್ನನ್ನ ಕಂಡ್ರೆ ಅವ್ರಿಗೆಲ್ಲ ಪ್ರೀತಿ..."

"ಪ್ರೀತಿ ತೋರ್ರೋ ರೀತೀನ ಅದು? ನಾಜೂಕು ಬೇಡ್ವಾ! ಅಲ್ಲದೆ ಈಗ ನೀನು ಮದ್ವೆ ಆಗಿರೋಳು. ನಿನಗೆ ಮರ್ಯಾದೆ ಕೊಡ್ಬೇಕು. ಹಾಗಂತ ಹೇಳಿಬಿಡು."

"ನಾನದನ್ನೆಲ್ಲಾ ಹೇಳುಲ್ಲ. ಪರೀಕ್ಷೆ ಮುಗಿಯುವವರೆಗೆ ಇರ್ತೀನಿ.... ಅಷ್ಟೇ.."

"ಇವರನ್ನೆಲ್ಲಾ ನೋಡಿದ್ರೆ, ನಿನ್ನನ್ನ ಓದೋಕೆ ಬಿಡ್ತಾರಾ ಅಂತನ್ನಿಸುತ್ತೆ."

"ಯಾಕೆ! ನನ್ನನ್ನ ಬಿಟ್ಟು ಒಂಟಿಯಾಗಿರ್ಬೇಕಲ್ಲ ಅಂತ ಕೋಪಾನಾ?" ಅವಳು ಅವನ ಕೊರಳಿಗೆ ತೋಳುಗಳನ್ನು ಹಾರವನ್ನಾಗಿ ಹಾಕಿ ಕೇಳಿದಳು.

"ಹುಂ. ಮತ್ತೆ, ಬೇಜಾರಾಗುಲ್ವಾ....? ಈಗೊಂದು ಥರ ನಿನ್ನ ಅಭ್ಯಾಸವಾಗಿ ಬಿಟ್ಟಿದೆ."

"ಹಾಗಾದ್ರೆ ನಾನೂ ನಿಮ್ಜತೆ ಬಂದ್ಬಿಡ್ತೀನಿ. ಹೇಗೂ ಇವರನ್ನೆಲ್ಲ ನೋಡಿದ್ದಾಯ್ತಲ್ಲ." ಅವಳೂ ಗಂಭೀರವಾಗಿ ಹೇಳಿದಳು. ಅವನು ಅವಳ ತಲೆಯ ಮೇಲೆ ಲಘುವಾಗಿ ಒಂದು ಏಟನ್ನು ಕೊಟ್ಟ.

"ಏನೂ ಬೇಡ. ಪರೀಕ್ಷೆ ಮುಗಿದ ಮಾರನೆಯ ದಿನವೇ ಸಂತೋಷನ ಜತೆ ಬಂದ್ಬಿಡು. ನಾನು ಮತ್ತೆ ಬರೋಕಾಗುಲ್ಲ." ಅವಳನ್ನು ಮುದ್ದಿಸಿದ.

ಅವನು ಆ ದಿನವೇ ಹೊರಟಿದ್ದು, ಯಾರಿಗೂ ಇಷ್ಟವಿರಲಿಲ್ಲವಾದರೂ, ಅವನು ರಜವಿಲ್ಲವೆಂದು ಹೊರಟೇಬಿಟ್ಟ. ಅವನತ್ತ ಹೊರಟ ಕೂಡಲೇ ವಿದ್ಯಾ ಮಂಕಾದಳು. ಮತ್ತೆ ತಮ್ಮ, ತಂಗಿ ಅವಳ ಕೈ ಹಿಡಿದಾಗ ಅವಳಿಗೂ ರೇಗಿತು.

"ಅದ್ಯಾಕೆ ಹೀಗೆ ಎಳೀತೀರಿ.... ಬಿಡಿ ಕೈನ...." ಕೂಗಿದ್ದಳು. ಇಬ್ಬರೂ ದೂರಸರಿದು ನಿಂತರು. ವಿದ್ಯಾ ಓದಲೆಂದು ಪುಸ್ತಕಗಳನ್ನು ಹರಡಿಕೊಂಡು ಕುಳಿತಳು. ಆದರೆ ಗಮನವೆಲ್ಲಾ ದಿನೇಶನ ಹಿಂದೆ ಹೋಗಿತ್ತು. ಚಿನ್ಮಯಿ, ಬಾಗಿಲಲ್ಲಿ ನಿಂತು ಗೇಲಿ ಮಾಡಿದಳು.

"ಓದ್ತಾ ಇದೀಯೋ? ಧ್ಯಾನ ಮಾಡ್ತಾ ಇದೀಯೋ...."

"ಯಾಕೋ ಓದುಕ್ಕೆ ಮನಸ್ಸೇ ಆಗ್ತಿಲ್ಲ ಕಣೇ."

"ಮತ್ಯಾಕೆ ಪರೀಕ್ಷೆ.... ಬಿಟ್ಹಾಕು ಅತ್ಲಾಗೇ."

"ನಂಗೇನೋ ಬೇಡವೇ ಬೇಡ. ನಿಮ್ಮ ಭಾವಂಗೆ, ನಾನು ಡಿಗ್ರಿ ಮಾಡ್ಲಿ ಅಂತ ಆಸೆ...."

"ಹಾಗಾದ್ರೆ ಮತ್ತೆ ಕಾಲೇಜ್ಗೆ ಸೇರ್ಕ್ಕೋತೀಯ.....?"

"ಏನೋ ನಂಗೊತ್ತಿಲ್ಲ. ನಿಮ್ಮ ಭಾವ ಹೇಗೆ ಹೇಳ್ತಾರೋ ಹಾಗೆ... ಚಿನ್ನು... ನೀನ್ಮಾತ್ರ ಓದಿ ಮುಗಿಸೇ ಮದ್ವೆಯಾಗು. ಮದ್ವೆಯಾದ್ಮೇಲೆ ಓದೋಕೇ ಮನಸ್ಸು ಬರುಲ್ಲ."

ಗೊತ್ತಿರುವವಳಂತೆ ಚಿನ್ಮಯೀ ತಲೆಯಾಡಿಸಿದಳು. ಅವಳತ್ತ ಹೋದ ಕೂಡಲೇ ವಿದ್ಯಾ ಎದ್ದು ತಾಯಿಯ ರೂಮ್‌ಗೆ ಹೋದಳು. ತಾಯಿ ಮಗಳು ಮಾತಿಗೆ ಶುರುಮಾಡಿದ್ದರು. ಶಾರದಮ್ಮನೂ ಬಂದು ಕುಳಿತರು. ನಿದ್ದೆ ಬಱುವ ವರೆಗೂ ಎಷ್ಟೋ ಮಾತುಗಳನ್ನಾಡಿದರು. ಅನಂತರ ವಿದ್ಯಾ ಎದ್ದು ಹೋಗಿ ತಂಗಿಯ ರೊಂದಿಗೆ ಮಲಗಿದಳು. ದಿನೇಶನ ನೆನಪು ಒತ್ತಿಕೊಂಡು ಬಂತು. ಅವನೂ ನನ್ನ ಬಗ್ಗೆ ಚಿಂತಿಸುತ್ತಿರಬಹುದೇ ಅಥವಾ ಗಡದ್ದಾಗಿ ನಿದ್ದೆ ಹೊಡೆಯುತ್ತಿರಬಹುದೇ.... ಎದ್ದು ಕುಳಿತು ದಿನೇಶನಿಗೊಂದು ಪತ್ರವನ್ನು ಬರೆದಿಟ್ಟಳು.

"ಅಕ್ಕಾ ಏಳೇ ಓದ್ಕೊಳ್ಳಲ್ವೇನೇ....." ಚಿನ್ಮಯೀ ಮೈ ಮುಟ್ಟಿದಳು.

"ದಿನೇಶ್ ಹಾಗೆಲ್ಲಾ ಮಾಡ್ಬೇಡಿ.... ನಂಗೆ ನಿದ್ದೆ ಬರ್ತಿದೆ...." ಚಿನ್ಮಯೀ ಜೋರಾಗಿ ನಕ್ಕಾಗ, ವಿದ್ಯಾ ಎಚ್ಚೆತ್ತಳು. ಎದುರಿಗೆ ಚಿನ್ಮಯೀ ನಗುತ್ತಾ ನಿಂತಿದ್ದಳು.

"ಇಲ್ಲೇನೇ ಮಾಡ್ತಿದೀಯಾ? ಯಾಕೆ ಕಚಗುಳಿ ಇಟ್ಟಿದ್ದು..."

"ನಾನೆಲ್ಲೇ ಕಚಗುಳಿ ಇಟ್ಟೆ. ನೀನೆಲ್ಲೋ ಕನಸು ಕಾಣ್ತಾ ಇದೀಯ...." ವಿದ್ಯಾ ವಾಸ್ತವಕ್ಕೆ ಬಂದಳು.

"ಆಯ್ತು, ನೀನೀಸಾರಿ ಢುಮ್ಕಿನೇ..."

"ಅಯ್ಯೋ ಯಾರಿಗ್ಬೇಕಾಗಿದೆ ಈ ಪರೀಕ್ಷೆ... ನಿಂಗೂ ಮದುವೆ ಆದ್ಮೇಲೆ.... ನೀನೂ ಹೀಗೇ ಆಡ್ತೀಯ...."

"ಹೋಗೇ ಯಾರಿಗ್ಬೇಕಾಗಿದೆ ಮದುವೆ? ಅವನ್ಯಾರೋ ಕಂಡಿರುಲ್ಲ, ಕೇಳಿ ರುಲ್ಲ. ಅವನು ಹೇಳ್ದಾಗೆ ಕೇಳ್ಕೊಂಡಿರ್ಬೇಕು. ಸ್ವತಂತ್ರಾನೇ ಇರುಲ್ಲ."

"ಹಾಗಂತ ನಿನಗ್ಯಾರು ಹೇಳಿದ್ರು.... ನಿಂಗದೆಲ್ಲಾ ಅರ್ಥವಾಗುಲ್ಲ. ನೀನಿನ್ನೂ ಚಿಕ್ಕವಳು...." ಎನ್ನುತ್ತಾ ಮತ್ತೆ ಮುಸುಕು ಬೀರಿದಳು.

"ಅಪ್ಪಾ ಬಂದ್ರು" ಚಿನ್ಮಯಿ ಎಚ್ಚರಿಸಿದಳು. ವಿದ್ಯಾ ಎದ್ದು ಕುಳಿತಳು.

"ತಾಯೀ... ಇದೇನಿದು? ಪರೀಕ್ಷೆಗೆ ಕಟ್ಟಿದೀಯ..... ಇಷ್ಟೊತ್ತಾದ್ರೂ ಮಲಗಿದೀಯಲ್ಲ. ಎದ್ದು ಓದ್ಕೋ..." ವಿದ್ಯಾ ಗೊಣಗುತ್ತಾ ಎದ್ದು ಮುಖ ತೊಳೆ ಯಲು ಹೋದಳು.

* * *

ಹದಿನೈದು ದಿನಗಳೊಳಗೆ, ಅವಳ ಪರೀಕ್ಷೆ ಮುಗಿದಿತ್ತು. ಇಷ್ಟು ದಿನ ಗಳಲ್ಲಿ ದಿನೇಶನಿಂದ ಒಂದು ಪತ್ರವೂ ಬಂದಿರಲಿಲ್ಲ. ಇವಳು ಬರೆದ ಪತ್ರಗಳಿಗೂ

ಉತ್ತರವಿಲ್ಲ. ಅವನು ತನ್ನನ್ನು ಮರೆತೇಬಿಟ್ಟಿದಾನೇನೋ ಎಂಬ ಅನುಮಾನ ಬರ ತೊಡಗಿತ್ತು.

"ಅಮ್ಮಾ, ನಾನು ಊರಿಗೆ ಹೋಗ್ತೀನಿ. ಪರೀಕ್ಷೆ ಮುಗೀತಲ್ಲ."

"ಪರೀಕ್ಷೆ ಅಂತ ಮಾತುಕತೇನೇ ಸರಿಯಾಗಿ ಆಡಲಿಲ್ಲ. ಇನ್ನೊಂದ್ನಾಲ್ಕು ದಿನ ಇದ್ದು ಹೋಗು. ನಿನ್ನ ಗಂಡಂಗೆ ಕಾಗ್ದ ಹಾಕು. ಅವರೂ ಬರಲಿ...."

"ಅವರ್ಗೆ ಕೋಪ ಅಂತ ಕಾಣುತ್ತೆ. ನನ್ನ ಪತ್ರಕ್ಕೆ ಉತ್ತರಾನೇ ಬರೆದಿಲ್ಲ..."

"ಕೋಪ ಯಾಕೆ? ನಿನಗೆ ತೊಂದರೆ ಆಗದಿರ್ಲಿ ಅಂತ ಬರೆದಿಲ್ಲವೇನೋ.... ಅಥವಾ ನಿನ್ನ ಕಾಗದ ತಲುಪ್ದೇ ಇರ್ಬಹ್ದು."

"ಇಲ್ಲಮ್ಮ. ನಿನ್ನನ್ನ ಬಿಟ್ಟು ಇರುಕ್ಕಾಗುಲ್ಲ ಅಂತ ಹೇಳ್ತಾನೇ ಇದ್ರು...."

"ಮತ್ಯಾಕೆ ಪರೀಕ್ಷೆ ಅಂತ ಬರೋಕೆ ಹೋದೆ? ಮದ್ವೆ ಆದ ಗಂಡಸ್ರಿಗೆ ಹಾಗೇನೇ. ಹೆಂಡ್ತೀನ ಬಿಟ್ಟು ಇರೋದು ಅಂದ್ರೆ ಬೇಜಾರು..."

"ಅಪ್ಪಾನೂ ಹೀಗೇ ಆಡ್ತಿದ್ರೇನಮ್ಮ...."

"ಹೋಗೇ ಹುಚ್ಚಿ... ಇದನ್ನೆಲ್ಲಾ ಯಾರೂ ಕೇಳುಲ್ಲ. ಯಾರೂ ಹೇಳುಲ್ಲ." ಪ್ರೇಮಾ ನಾಚಿಕೊಂಡಳು.

"ಅಪ್ಪಂಗೆ ನನ್ಮೇಲೆ ಪ್ರೀತೀನೇ ಇಲ್ಲ ಅಂತ ಹೇಳ್ತಿದ್ದೆ. ಈಗ ನಾಚ್ಕೋ ತಿದೀಯ?"

"ಅಯ್ಯೋ ಬಿಡು. ಅದು ಪ್ರೀತಿಯಲ್ಲ. ನಾನು ಬೇಕಾಗ್ತಿತ್ತು ಅಷ್ಟೇ... ಅದೇ ನನಗೆ ಬೇಜಾರಾಗುತ್ತಿದ್ದುದು. ಶ್ರೀಕರ ಹುಟ್ಟಿದ್ಮೇಲೆ ಅವರು ನನ್ನನ್ನ ದೂರ ಮಾಡಿಬಿಟ್ಟರು. ನಾನು ಒಂಥರಾ ಒಂಟಿಯಾಗ್ಬಿಟ್ಟೆ.... ನನಗೆ ಬೇಕಾಗಿದ್ದುದು ಆ ಪ್ರೀತಿಯಲ್ಲ ವಿದ್ಯಾ..... ನಿಮ್ಮಪ್ಪ ನನ್ನನ್ನೆಂದೂ ಅರ್ಥ ಮಾಡ್ಕೊಳ್ಳಲೇ ಇಲ್ಲ. ಬರೀ ಸ್ವಾರ್ಥಿಯಾಗ್ಬಿಟ್ರು...."

"ಎಲ್ಲಾ ಗಂಡಸ್ರೂ ಹೀಗೇ ಇರ್ತಾರೇನಮ್ಮ. ನಂಗ್ಯಾಕೋ ಭಯ ಆಗುತ್ತೆ."

"ಇಲ್ಲ ವಿದ್ಯಾ. ಎಲ್ಲಾ ಗಂಡಸ್ರೂ ಹೀಗಿರುಲ್ಲ. ನಿಮ್ಮಪ್ಪನ ಸ್ವಭಾವವೇ ಒಂಥರ ವಿಚಿತ್ರ..... ಭವಾನಿ ಗಂಡ ಹೀಗಿಲ್ಲ..... ನಿನ್ನ ಮಾವ ಹೇಗೆ....?"

"ನಮ್ಮನೇಲಿ ಎಲ್ಲಾ ಮಾತು ನಡೆಯೋದೂ ನಮ್ಮ ಅತ್ತೇದೇ...."

"ಅದಕ್ಕೇ ನೋಡು, ನಿಮ್ಮನೇಲಿ ಎಲ್ಲಾ ನಗುನಗ್ತಾ ಇರ್ತಾರೆ. ಸಂಸಾರದಲ್ಲಿ ಖುಶಿ ಇರುತ್ತೆ. ನಿಮ್ಮಪ್ಪನ ತರಹ ಗಂಡ ಮಾತ್ರ ಯಾರಿಗೂ ಬೇಡ. ತಾನೂ ಖುಶಿಯಾಗಿರುಲ್ಲ. ಇನ್ನೊಬ್ಬರನ್ನೂ ಸಂತೋಷವಾಗಿರುಕ್ಕೆ ಬಿಡುಲ್ಲ. ತಾನೇ ಸರಿ ಅನ್ನೋ ಅಹಂಕಾರ.... ಹೆಂಗಸ್ರಿಗೆ ತಿಳಿವಳಿಕೆಯೇ ಇರುಲ್ಲ ಅನ್ನೋ ಧೋರಣೆ.... ನಾನು ಅನುಭವಿಸಿದ್ದು ನನಗೇ ಸಾಕು..... ನಿಮ್ಮ ಗಂಡಂದಿರು ನಿಮ್ಮನ್ನೆಲ್ಲ ಚೆನ್ನಾಗಿ ಇಟ್ಟುಕೊಳ್ಳಲಿ. ಅದೇ ನನ್ನ ಹಾರೈಕೆ."

"ಅಪ್ಪ ಅಷ್ಟೊಂದು ಕೆಟ್ಟೋರು ಅಂತೀಯ.....?"

"ಮನೆಗೆ ಮಾರಿ, ಪರರಿಗೆ ಉಪಕಾರಿ ಅನ್ನೋ ಹಾಗೇ. ಕೋರ್ಟ್ನಲ್ಲಿ ವಾದಿಸಿ, ಯಾರಿಗೋ ಜಯಗಳಿಸಿಕೊಟ್ರೆ ನನಗ್ಬಂದ ಭಾಗ್ಯವೇನು? ಒಂದು ದಿನವಾದ್ರೂ ನಿನಗೇನ್ಬೇಕು ಅಂತ ಕೇಳುಲ್ಲ. ಇನ್ನು ತಪ್ಪು ಕಂಡುಹಿಡಿಯೋದ್ರಲ್ಲಿ ಇರ್ತಾರೆ. ಇವರಿಗೋಸ್ಕರ ಆರು ಮಕ್ಕಳನ್ನು ಹೆರಲಿಲ್ವಾ ನಾನು? ಒಂದು ದಿನವಾದ್ರೂ ಮಕ್ಳು ಜಾಸ್ತಿ ಅಂತ ನಾನು ಅಂದಿಲ್ಲ. ನಳಿನಿ, ಶ್ರೀಕರ ಹುಟ್ಟುವ ಸಮಯಕ್ಕೆ ನನ್ನ ದೇಹ ನಿತ್ರಾಣವಾಗಿತ್ತು. ಮನಕ್ಕೂ ನೆಮ್ಮದಿ ಇರಲಿಲ್ಲ. ನನ್ನ ಆರೋಗ್ಯ ಕೆಟ್ಟಿದ್ದೇ ಇವರಿಂದ."

"ಮಕ್ಕಳನ್ನು ಹೆತ್ರೆ ಆರೋಗ್ಯ ಕೆಡೋದಾದ್ರೆ ನನಗೆ ಮಕ್ಕಳೇ ಬೇಡ...."

"ಒಂದೋ ಎರಡೋ ಸಾಕು..... ಆಗ ಹಿತಮಿತವಾಗಿರುತ್ತೆ... ಅದು ತಾಯಿಗೂ ಆರೋಗ್ಯ. ಹುಟ್ಟುವ ಮಕ್ಕಳಿಗೂ ಒಳ್ಳೆಯದು. ನಳಿನೀನ, ಶ್ರೀಕರನ್ನ ನೋಡಿದರೆ ನನಗೆ ವ್ಯಥೆಯಾಗುತ್ತೆ. ಹೆತ್ತದ್ದಷ್ಟೇ. ಸರಿಯಾಗಿ ಬೆಳೆಸಲಿಲ್ಲ ಅನ್ನೋ ಕೊರಗು ಇದ್ದೇ ಇದೆ. ಶಾರದಮ್ಮ, ಕಾಮಾಕ್ಷಿ ಇದ್ದುದ್ರಿಂದ ಪರವಾಗಿಲ್ಲ. ಅವರೇ ಬೆಳೆಸಿದ್ದು. ನಾನು ಬೆಳೆಸಲಿಲ್ಲ ಅನ್ನೋ ಸಂಕಟ ನನಗಿದ್ದೇ ಇದೆ...." ಪ್ರೇಮಾ ಹಳೆಯ ದಿನಗಳನ್ನು ನೆನೆಸಿಕೊಂಡಳು.

* * *

'ಪೋಸ್ಟ್' ಪೋಸ್ಟ್ ಮ್ಯಾನ್ ಕಾಗದವನ್ನು ಗೇಟಿನ ಚಿಲಕಕ್ಕೆ ಸಿಕ್ಕಿಸಿದ್ದ. ವಿದ್ಯಾ ಆತುರಾತುವಾಗಿ ಎದ್ದಳು. ಅಷ್ಟರಲ್ಲಿ ಚಿನ್ಮಯೀ ಕಾಗದವನ್ನು ನೋಡಿ "ಭಾವಂದು....." ಎಂದಳು.

"ಕೊಡಿಲ್ಲಿ..... ಅದು ನಂಗೆ" ಎಂದರೂ ಕೇಳದೆ ಅಕ್ಕನ್ನ ಸತಾಯಿಸಿದಳು.

"ನನ್ನನ್ನ ಹೀಗೆಲ್ಲಾ ಸತಾಯಿಸಿದರೆ ನಿಂಗೆ ಒಳ್ಳೆ ಗಂಡ ಸಿಗುಲ್ಲ ನೋಡು."

"ಚೆನ್ನು.... ಅದೇನು ಗಲಾಟೆ?" ಭಟ್ಟನ ಧ್ವನಿ ಕೇಳಿ ಚಿನ್ಮಯೀ ಅಕ್ಕನಿಗೆ ಪತ್ರವನ್ನು ಕೊಟ್ಟು ಕಚಗುಳಿ ಇಟ್ಟು ನಗಿಸಿದಳು. ವಿದ್ಯಾ ಪತ್ರವನ್ನು ಬಿಡಿಸಿ ಓದಿದಳು. ಚಿನ್ಮಯಿ ಅವಳ ಮುಖವನ್ನು ನೋಡುತ್ತಾ ಕುಳಿತಳು. ಭಾವ ಪ್ರೇಮ ಪತ್ರವನ್ನು ಬರೆದಿದಾರೆ. ಏನು ಬರೆದಿರಬಹುದು? ಚಿನ್ಮಯಿಯ ಮನ ಕುತೂಹಲದಿಂದ ಕುಣಿಯಿತು. ಅಕ್ಕನ ಮುಖದಲ್ಲಿ ಮೂಡುತ್ತಿದ್ದ ಭಾವನೆಗಳನ್ನು ಗಮನಿಸಿದಳು. ಮನದಲ್ಲಿ ಹೊಸ ಹೊಸ ಭಾವನೆಗಳು ಚಿಗುರಿದವು.

ಸಾವಕಾಶವಾಗಿ ಪತ್ರವನ್ನು ಓದಿ, ಮುಂಚಿನಂತೆಯೇ ಮಡಿಚಿ, ತನ್ನ ತಲೆದಿಂಬಿನ ಕೆಳಗೆ ಪತ್ರವನ್ನು ಅಡಗಿಸಿಟ್ಟಳು. ಚಿನ್ಮಯಿ ಅದನ್ನು ಗಮನಿಸಿದ್ದಳು. ಅಕ್ಕನಿಗೆ ತಿಳಿಯದಂತೆ ಪತ್ರವನ್ನೆತ್ತಿಕೊಂಡು ಮಹಡಿಯ ಮೇಲಿನ ರೂಮ್‌ಗೆ ಹೋಗಿ ಬಿಡಿಸಿ ಓದಿದಳು.

ಪ್ರೇಮ ಪತ್ರವನ್ನು ಓದುತ್ತಾ ಓದುತ್ತಾ ಚಿನ್ಮಯಿ ಭಾವ ಪರವಶಳಾದಳು.... ತನಗೆ ಯಾರೋ ಪ್ರೇಮ ಸಂದೇಶವನ್ನು ತಿಳಿಸುತ್ತಿದ್ದಾರೆನ್ನುವಂತೆ ತನ್ಮಯತೆಯಿಂದ ಓದಿದಳು. ಯೌವನದ ಕಾಲ್ಗೆಜ್ಜೆ ಘಲ್ ಘಲ್ ನಾದವನ್ನು ಮಾಡಿತು. ಪತ್ರವನ್ನು ತುಟಿಗಳಿಗೆ ಒತ್ತಿಕೊಂಡು ಹಾಗೇ ಎಷ್ಟೋ ಹೊತ್ತು ನಿಂತಿದ್ದಳು. ಯಾರೋ ಬಾಗಿಲನ್ನು ಬಡಿದಂತಾದಾಗ ಎಚ್ಚರಗೊಂಡಳು. ಬಾಗಿಲು ತೆರೆದಳು. ಆಚೆ ನಳಿನಿ ನಿಂತಿದ್ದಳು.

"ಬಾಗಿಲು ಹಾಕ್ಕೊಂಡು ಏನ್ಮಾಡ್ತಿದ್ದೆ? ಯಾರದ್ದೆ ಕಾಗ್ದ....?" ಚಿನ್ಮಯಿ ಕಾಗದವನ್ನು ಬೆನ್ನ ಹಿಂದೆ ಮುಚ್ಚಿಟ್ಟುಕೊಂಡಳು.

"ನಿಂಗ್ಯಾಕೇ ಅದೆಲ್ಲ. ನೀನ್ಯಾಕೆ ಬಂದೆ ಇಲ್ಲಿಗೆ?"

"ಶಾರದಮ್ಮ ಚಕ್ಕುಲಿ ಮಾಡಿದಾರೆ ಬರ್ಬೇಕಂತೆ."

"ನೀ ಹೋಗು. ನಾನು ಬರ್ತೀನಿ."

ತಂಗಿಯನ್ನು ಕಳಿಸಿ, ಮತ್ತೆ ಪತ್ರವನ್ನು ಯಾರಿಗೂ ತಿಳಿಯದಂತೆ ದಿಂಬಿನಡಿ ಮುಚ್ಚಿಟ್ಟಳು. ಅಕ್ಕ ಮದುವೆಯಾಗಿ ಬಹಳ ಮಜವಾಗಿದ್ದಾಳೆಂದೂ ತನಗೆ ಆ ಮಜ ಎಂದಿಗೆ ಸಿಗುವುದೋ ಎಂದು ಕಾತರಿಸಿದಳು. ಈ ಸಾರಿ ಭಾವ ಊರಿಗೆ ಬಂದಾಗ ತಾನು ಅವನೆದುರಿಗೆ ಅಲಂಕರಿಸಿ ಮೆರೆಯಬೇಕೆಂದು ಕೊಂಡಳು. ಆದರೆ ಅವಳಿಗೆ ನಿರಾಸೆ ಕಾದಿತ್ತು.....

ದಿನೇಶ ತನಗೆ ರಜವಿಲ್ಲದ ಕಾರಣ, ಸಂತೋಷನ ಜತೆ ಬರಬೇಕೆಂದು ವಿದ್ಯಾಳಿಗೆ ತಿಳಿಸಿದ್ದ, ಹಾಗೇ ಮಾವನಿಗೂ ಒಂದು ಪತ್ರವನ್ನು ಬರೆದ. ಸಂತೋಷನ ಜತೆ ವಿದ್ಯಾ ಹೋಗುವುದೆಂದು ನಿರ್ಧಾರವಾಗಿತ್ತು. ತಾನೂ ಬೆಂಗಳೂರಿಗೆ ಹೋಗುವಂತಿದ್ದರೆ ಎಂದುಕೊಂಡು ತಾಯಿಯನ್ನು ಕೇಳಿದಳು.

"ಅಮ್ಮಾ.... ನಾನೂ ಬೆಂಗ್ಳೂರಿಗೆ ಹೋಗ್ಬರ್ತೀನಿ ಕಣೇ.... ಹೇಗೂ ಕಾಲೇಜ್ಗೆ ಸೇರುಕ್ಕೆ ಇನ್ನೂ ಸಮಯ ಇದೆಯಲ್ಲ."

"ಎಂಥದೂ ಬೇಡ. ನೀ ಹೊರಟ್ರೆ ನಳಿನಿ, ಶ್ರೀಕರನೂ ಹೊರಡ್ತಾರೆ..... ನಿಮ್ಮಪ್ಪ ಅಂತೂ ಖಂಡಿತಾ ಒಪ್ಪಲ್ಲ ಸುಮ್ನಿರು." ಚಿನ್ಮಯೀ ಮುಖ ಊದಿಸಿಕೊಂಡು ಕೂತಳು. ಶಾರದಮ್ಮ ನಾಲ್ಕಾರು ಬಗೆಯ ತಿಂಡಿಗಳನ್ನು ಮಾಡಿ ಡಬ್ಬಿಗಳಿಗೆ ತುಂಬಿಕೊಟ್ಟಳು. ಪ್ರೇಮಾ ಮಗಳಿಗೆ ಉಡಿಯನ್ನು ತುಂಬಿ, ತನ್ನಲ್ಲಿದ್ದ ಹೊಸ ಸೀರೆಯನ್ನು ಮಗಳಿಗೆ ಕೊಟ್ಟಳು. ನಮಸ್ಕಾರ ಮಾಡಿದ ಮಗಳಿಗೆ, "ಬೇಗ ತಾಯಿ ಯಾಗು." ಎಂದು ಆಶೀರ್ವದಿಸಿದಳು. ವಿದ್ಯಾ ಹೊರಟಾಗ ಚಿನ್ಮಯಿ ಕೆಳಗಿಳಿದು ಬರಲಿಲ್ಲ.

* * *

ಚಿನ್ಮಯೀ ಕೋಪಿಸ್ಕೊಂಡು ಊಟಕ್ಕೆ ಸಹ ಬಂದಿರಲಿಲ್ಲ. "ನನಗೆ ಹಸಿವಿಲ್ಲ"

ಎಂದು ಹೇಳಿ ಕಳಿಸಿದಳು. ನಾಲ್ಕಾರು ದಿನಗಳು ಕಳೆದ ಮೇಲೆ ಸ್ವಲ್ಪ ಸಮಾಧಾನ ಗೊಂಡಿದ್ದಳು. ಸಂತೋಷ ವಾಪಸ್ಸಾಗಿದ್ದ. ಚಿನ್ಮಯಿಯ ಪರೀಕ್ಷೆಯ ಫಲಿತಾಂಶ ಹೊರಬಿದ್ದಿತ್ತು. ಅವಳು ಫಸ್ಟ್ ಕ್ಲಾಸ್‌ನಲ್ಲಿ ಪಾಸಾಗಿದ್ದಳು. ಕಾಲೇಜಿಗೆ ಸೇರುವ ಸಂಭ್ರಮದಲ್ಲಿ ಬೇರೆ ವಿಷಯಗಳನ್ನು ಮರೆತಿದ್ದಳು.

"ಕಾಲೇಜಿಗೆ ಹಾಕ್ಕೊಂಡು ಹೋಗೋಕೆ ನನ್ಹತ್ರ ಒಳ್ಳೆ ಬಟ್ಟೆಗಳಿಲ್ಲ. ನನಗೆ ಹೊಸ ಲಂಗ, ದಾವಣಿಗಳು ಬೇಕು."

"ನಂಗೊತ್ತಿಲ್ಲ. ನಿಮ್ಮಪ್ಪನ್ನ ಕೇಳು. ನಿಮ್ಮಕ್ಕಂದೇ ಲಂಗ, ದಾವಣಿಗಳಿವೆ ಯಲ್ಲ..... ಅದನ್ನೇ ಉಟ್ಕೋಬಾರ್‍ದಾ?"

"ನನಗೆ ಹಳೆ ಬಟ್ಟೆಗಳು ಬೇಡ. ಅವಳುಟ್ಟಿದ್ದನ್ನೇ ನಾನು ಉಡುಲ್ಲ."

"ಸುಮ್ನೆ ಜಂಭ ಆಡಬೇಡ ಚಿನ್ಮಯೀ. ಅದೆಲ್ಲ ದಂಡ ಆಗುಲ್ವಾ....!"

"ಬೇಕಾದ್ರೆ ಪುಸ್ಸೀ ಹಾಕ್ಕೊಳ್ಳಿ... ನಾನಂತೂ ಕೈಯಲ್ಲಿ ಮುಟ್ಟೋದಿಲ್ಲ."

"ನಂದೆರ್‍ಡು ಸೀರೆಗಳನ್ನು ಕೊಡ್ತೀನಿ. ಲಂಗ ಹೊಲಿಸ್ಕೋ ಬೇಕಾದ್ರೆ."

"ಸರಿ ತೋರ್‍ಸು. ನಂಗೆ ಯಾವ್ದು ಬೇಕೋ ಅದನ್ನೇ ಹೊಲಿಸ್ಕೋತೀನಿ." ತಾಯಿಯ ಬಳಿ ಇದ್ದ ಸೀರೆಗಳನ್ನೆಲ್ಲಾ ಕಿತ್ತು ಕೆದರಿ, ತನಗೆ ಬೇಕಾದ ಎರಡು – ಮೂರು ಸೀರೆಗಳನ್ನು ತೆಗೆದಿಟ್ಟುಕೊಂಡಳು.

"ನಾನು ಹೋಗಿ ಈಗ್ಲೇ ಹೊಲಿಯುಕ್ಕೆ ಹಾಕಿ ಬರ್ತೀನಿ."

"ನೀನು ಟೈಲರ್ ಅಂಗಡಿಗೆ ಹೋಗ್ಬೇಡ. ಸಂತೋಷನ ಕೈಲಿ ಕೊಟ್ಕಳಿಸು."

"ನಾನ್ಹೋದ್ರೆ ಏನಾಗುತ್ತೆ? ನನ್ನ ಫ್ರೆಂಡ್ಸ್ ಎಲ್ಲಾ ಅವರೇ ಹೋಗಿ ಹೊಲಿಯುಕ್ಕೆ ಹಾಕ್ತಾರೆ."

"ನಿಮ್ಮಪ್ಪಂಗೆ ಅದೆಲ್ಲ ಇಷ್ಟವಾಗುಲ್ಲ."

"ಅಪ್ಪಂಗೆ ಯಾವುದೂ ಇಷ್ಟವಿಲ್ಲ. ಯಾವುದೂ ಸರಿ ಹೋಗುಲ್ಲ. ನಾನು ಈ ಮನೇಲಿ ಹುಟ್ಟಲೇ ಬಾರದಾಗಿತ್ತು."

"ಚಿನ್ಮಯೀ.... ಹೇಳಿದಷ್ಟು ಕೇಳು. ಅತಿ ಮಾತಾಡಬೇಡ. ವಿದ್ಯಾ ಹೀಗೆ ಎಂದೂ ಆಡಿರಲಿಲ್ಲ."

"ಅಕ್ಕ ಏನ್ಮಾಡಿದ್ಲು. ಏನ್ಮಾಡಿಲ್ಲ ನಂಗೂ ಎಲ್ಲಾ ಗೊತ್ತು, ಸುಮ್ನಿರಮ್ಮ." ಪ್ರೇಮಾ ಥಟ್ಟನೆ ಕೈಯೆತ್ತಿದವಳು ಹೊಡೆಯದೇ ಕೈಯನ್ನು ಹಾಗೇ ಇಳಿಸಿದಳು.

"ಹೊಡಿತೀಯಾ! ಹೊಡಿ.... ಹೊಡಿ..." ಮುಂದೆ ಬಂದು ಕೆನ್ನೆಯನ್ನು ಒಡ್ಡಿದಳು.

"ಹೋಗು ಸುಮ್ಮನೇ. ನನಗೆ ಬೇಸರ ಮಾಡಬೇಡ."

"ನಾನು ಮಾತಾಡಿದ್ರೆ ಬೇಸರ. ನನ್ನನ್ನ ಕಂಡ್ರೇ ಬೇಸರ...." ಎಂದು ಗೊಣಗುತ್ತಾ ಸೀರೆಗಳನ್ನು ಅಲ್ಲಿಯೇ ಬಿಸಾಡಿ ಹೊರಟು ಹೋದಳು ಚಿನ್ಮಯೀ.

ಪ್ರೇಮಾ ಅಳತೆಯ ಬಟ್ಟೆಗಳನ್ನು, ಸೀರೆಗಳನ್ನು ಶ್ರೀಕರನ ಕೈಯಲ್ಲಿ ದರ್ಜಿಯ ಅಂಗಡಿಗೆ ಕಳಿಸಿದಳು.

ಚಿನ್ಮಯಿಗೆ ಕಾಲೇಜು ಪ್ರಾರಂಭವಾಗಿತ್ತು. ಹೊಸ ಪರಿಸರ, ಹೊಸ ಹೊಸ ಸ್ನೇಹಿತೆಯರ ನಡುವೆ ಚಿನ್ಮಯೀ ಬೇರೆ ಲೋಕದಲ್ಲಿ ಕಾಲಿಟ್ಟಿದ್ದಳು. ತಾನು ರೂಪವಂತೆ ಎಂದು ಅವಳಿಗೆ ತಿಳಿದಿತ್ತು, ಆ ದುರಹಂಕಾರವೂ ಇತ್ತು. ಎಲ್ಲರೂ ತನ್ನನ್ನ ನೋಡ ಬೇಕು, ತನ್ನನ್ನು ಮೆಚ್ಚಬೇಕು ಎಂಬ ಆಸೆಯಿಂದ ಅಲಂಕರಿಸಿಕೊಂಡು ಹೋಗು ತ್ತಿದ್ದಳು. ಕೆಲವೇ ದಿನಗಳಲ್ಲಿ ಅವಳು ಕಾಲೇಜಿನ ಬ್ಯೂಟಿ ಎಂಬ ಬಿರುದನ್ನು ಪಡೆ ದಿದ್ದಳು. ಅವಳ ಮೇಲೆ ಅಸೂಯೆಗೊಳ್ಳುವ ಸಹಪಾಠಿಗಳೂ ಇದ್ದರು.

ಸಂತೋಷ ತಾನು ನಿರೀಕ್ಷಿಸಿದ್ದಷ್ಟು ಅಂಕಗಳನ್ನು ಗಳಿಸಿದ್ದ. ಅವನ ಸಂತೋಷಕ್ಕೆ ಪಾರವೇ ಇಲ್ಲ. ತಾಯಿಗೆ ಮೊದಲು ತಿಳಿಸಿದ. ಅನಂತರ ತಂದೆಗೂ ಹೇಳಿದ.

"ಅಪ್ಪಾ ರಿಸಲ್ಟ್ ಬಂತಪ್ಪಾ. ಎಂಬತ್ತೆಂಟು ಪರ್ಸೆಂಟ್ ಮಾರ್ಕ್ಸ್ ಬಂದಿದೆ."

"ತೊಂಬತ್ತು ಪರ್ಸೆಂಟ್ ಯಾಕೆ ತೆಗೀಲಿಲ್ಲ......"

"ಕೆಲವು ಪೇಪರ್ಸ್ ಕಷ್ಟವಾಗಿತ್ತು.... ಮೆಡಿಕಲ್ ಸೀಟ್‌ಗೆ ತೊಂದರೆ ಏನಿಲ್ಲ."

"ಸರಿ. ಅಪ್ಲಿಕೇಷನ್ ಫಾರಂ ತರಿಸ್ಕೊಂಡು ತುಂಬಿಸಿ ಕಳಿಸು...."

"ನಾನೇ ಹೋಗಿ ಕೊಟ್ಟು ಬರ್ತೀನಪ್ಪಾ...."

"ಹಾಗೇ ಮಾಡು. ಹಾಗೇ ಹಾಸ್ಟೆಲ್ ಹೇಗೆ ಇದೆ ಅಂತ ಎಲ್ಲಾ ಸರಿಯಾಗಿ ತಿಳ್ಕೊಂಡು ಬಾ. ನನಗೆ ಬೇಕಾದವರೊಬ್ಬರು ಅಗ್ರಹಾರದಲ್ಲಿದ್ದಾರೆ. ಅವರಿಗೆ ಒಂದು ಪತ್ರವನ್ನು ಬರೆದುಕೊಡ್ತೀನಿ. ಅವರು ನಿನಗೆ ಸಹಕಾರ ಮಾಡ್ತಾರೆ...."

"ನೀವು ನನ್ನ ಜತೆ ಬಂದಿದ್ರೆ ಚೆನ್ನಾಗಿತ್ತು....."

"ನೀನು ಕಲಿತ್ಕೊಳ್ಳುವುದು ಯಾವಾಗ? ಅಡ್ಮಿಷನ್ ಸಮಯದಲ್ಲಿ ಬರ್ತೀನಿ." ಅಲ್ಲಿಗೆ ಮಾತು ಮುಗಿಯಿತು ಎನ್ನುವಂತೆ ಮುಖ ಮಾಡಿದ.

* * *

"ಮೈಸೂರು, ಬೆಂಗಳೂರಿನಷ್ಟು ದೊಡ್ಡೂರಲ್ಲ. ಆದ್ರೂ ಜೋಪಾನ ಕಣಪ್ಪಾ...." ಪ್ರೇಮಾ ಅನೇಕ ಸಾರಿ ಹೇಳಿದಳು.

"ಗೊತ್ತು ಕಣಮ್ಮ. ನಾನೀಗ ದೊಡ್ಡೋನಾಗಿದೀನಿ. ನೀನ್ಯಾಕೆ ಇಷ್ಟು ಹೆದರ್ತೀಯಾ?"

"ಕಾಣದ ಊರು ಕಣಪ್ಪಾ. ಭಯವಾಗುತ್ತೆ. ಬಿಸಿಲ್ನಲ್ಲಿ ಅಲ್ಲಿ ಇಲ್ಲಿ ತಿರು ಗ್ಬೇಡ. ಹೋಟ್ಲಲ್ಲಿ ತಿನ್ಬೇಡ...."

"ಸಂತೋಷ ಟ್ರೈನ್‌ಗೆ ಹೊತ್ತಾಯ್ತು ಹೊರಡು. ಡ್ರೈವರ್ ಕಾಯ್ತಾ ಇದಾನೆ." ಭಟ್ಟ ಮುಂಬಾಗಿಲಲ್ಲಿ ನಿಂತು ಕೂಗು ಹಾಕಿದ. ಸಂತೋಷ ತಾಯಿಗೆ ನಮಸ್ಕರಿಸಿದ.

"ಚಿನ್ನು, ಅಮ್ಮನ್ನ ಚೆನ್ನಾಗಿ ನೋಡ್ಕೋ..... ಗೋಳು ಹೊಯ್ಕೋಬೇಡ...."

"ಅಪ್ಪು ನಿಂಗೆ ಬೇಸರವಾದ್ರೆ ಅಮ್ಮನ್ನ ಕರ್‍ಕೊಂಡ್ಹೋಗು."

"ಹಾಗೇ ಮಾಡ್ತೀನಿ. ಅಡ್ಮಿಷನ್ ಆದ್ಮೇಲೆ, ಐದೂವರೆ ವರ್ಷಗಳು ಅಲ್ಲಿರ ಬೇಕಾಗುತ್ತೆ. ನನಗೆ ಊಟ, ತಿಂಡಿಗೆ ತೊಂದರೆ ಆಗುಲ್ವಾ...ಅಮ್ಮನ್ನ ಕರ್‍ಕೊಂಡ್ಹೋಗ್ತೀನಿ...." ಎನ್ನುತ್ತಾ ಹೊರಟ.

"ಹೌದೇನಮ್ಮ..... ಸಂತೋಷನ ಜತೆ ಹೊರಟು ಹೋಗ್ತೀಯಾ? ನಾನೂ ನಿನ್ನ ಜತೆ ಬರ್ತೀನಿ." ಶ್ರೀಕರ ಹೇಳಿದ.

"ಅಯ್ಯೋ ಮಂಕೇ ಸುಮ್ನಿರು. ಅಪ್ಪ, ಅಮ್ಮನ್ನ ಎಲ್ಲಿಗೂ ಕಳಿಸುಲ್ಲ..... ನಿನ್ನನ್ನೂ ಕಳಿಸುಲ್ಲ." ಚಿನ್ಮಯಿ ಅವನ ಮೂತಿಯನ್ನು ತಿವಿದಳು. ಶ್ರೀಕರ ಅವಳ ಜಡೆಯನ್ನು ಎಳೆದು, ತಾಯಿಯ ಹಿಂದೆ ಅವಿತಿಟ್ಟುಕೊಂಡ.

"ಥೂ ಹೆಣ್ಣಿಗ, ಅಮ್ಮನ ಹಿಂದೆ ಅವಿತ್ಕೋತೀಯ.....?" ಮತ್ತೆ ಮೂದಲಿಸಿದಳು.

"ಏಯ್, ಏನಾಗಿದೆಯೋ ನಿಂಗೆ..... ಎಲ್ರನ್ನೂ ಯಾಕೆ ಹೀಗೆ ಗೋಳು ಹೊಯ್ದು ಕೊಳ್ತೀಯ?"

"ನಾನು ಹೀಗೇನೇ.... ನಂಗೆ ಈ ಮನೇಲಿ ಬೇಜಾರು..... ಕಾಲ ಕಳೆಯೋದು ಹೇಗೆ?"

"ಅಮ್ಮಾ.... ಇವಳ್ಗೂ ಅತ್ಲಾಗೆ ಮದ್ವೆಮಾಡಿ ಕಳ್ಸೇ... ಸದಾ ಬೇಜಾರು ಬೇಜಾರು ಅಂತಿರ್ತಾಳೆ.... ಅತ್ತೆ ಮನೆಗೆ ಹೋಗಿ ಕಸ, ಮುಸುರೆ ಕೆಲ್ಸ ಮಾಡ್ಲಿ...."

"ಏಯ್ ಬೆಕ್ಕಣ್ಣೀ ಸುಮ್ನೇ ಕೂತ್ಕೋ..... ಬೇಕಿದ್ರೆ, ನೀನು ನಾಲ್ಕು ಜನರ ಮನೇಲಿ ಮುಸುರೆಪಾತ್ರೆ ತೊಳಿ.... ನಾನು ರಾಣಿ ಹಾಗೆ ಇರ್ತೀನಿ.... ನಾಲ್ಕು ಜನ ಆಳುಗಳನ್ನು ಕೆಲಸಕ್ಕೆ ಇಟ್ಟುಕೊಳ್ತೀನಿ."

"ಚಿನ್ಮಯೀ, ಏನೀ ಮಾತೆಲ್ಲ. ನಿಮ್ಮಪ್ಪಂಗೆ ಕೇಳ್ಸಿದ್ರೆ, ಎಲ್ರಿಗೂ ಬಂದು ಸರೀ ನಾಲ್ಕು ಹಾಕ್ತಾರೆ..... ತೆಪ್ಪಗೆ ಬಿದ್ಕೋತೀರಿ...."

"ನನಗೆ ಯಾಕೆ ಹೇಳ್ತೀಯ... ಪುಸ್ಸೀಗೆ ಹೇಳು..... ಶ್ರೀಕರಂಗ್ಹೇಳು."

"ನೀನು ವಯಸ್ನಲ್ಲಿ ದೊಡ್ಡೋಳು ಅಂತ ನಿನಗೆ ಹೇಳ್ತೀನಿ. ನಿನ್ನ ವಯಸ್ನಲ್ಲಿ ವಿದ್ಯಾ ಎಂದೂ ಹೀಗೆಲ್ಲಾ ಮಾತಾಡ್ತಿರ್ಲಿಲ್ಲ."

"ಶುರು ಮಾಡಿದ್ಯಾ ನಿನ್ನ ಮಗಳ ಪುರಾಣಾನ...." ಎನ್ನುತ್ತಾ ಕಿವಿಗಳ ಮೇಲೆ ಕೈಯನ್ನಿಟ್ಟುಕೊಂಡು ಒಳಗೆ ಹೊರಟು ಹೋದಳು. ಪ್ರೇಮಳಿಗೆ ಬೆಳೆದ ಮಗಳು ಒಂದು ಒಗಟಾಗಿ ಕಂಡಳು.

* * *

ಅಧ್ಯಾಯ - ಇಪ್ಪತ್ತೈದು

ಪ್ರೇಮಳ ಹೊಸ ಹೆದರಿಕೆ

ಸಂತೋಷನಿಗೆ ಮೈಸೂರಿನ ಮೆಡಿಕಲ್ ಕಾಲೇಜಿನಲ್ಲಿ ಸೀಟುಸಿಕ್ಕಿತು. ಅಡ್ಮಿಷನ್‌ಗೆ ಭಟ್ಟನೂ ಹೋಗಬೇಕಾಗಿತ್ತು. ಬೆಳಗ್ಗಿನ ಜಾವ ಹೊರಟು, ಅದೇ ದಿನ ಅಡ್ಮಿಷನ್ ಕೆಲಸ ಮುಗಿಸಿ, ಅದೇ ರಾತ್ರಿಗೆ ವಾಪಸ್ಸು ಬಂದು ಬಿಡುವುದೆಂದು ಕೊಂಡು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದ್ದರು.

"ಹೇಗೂ ಕಾರ್‌ನಲ್ಲಿ ಹೋಗಿ ಬರ್ತಾರಲ್ಲ, ತಾನೂ ಯಾಕೆ ಹೋಗಿ ಬರಬಾರದು." ಎನ್ನುವ ಆಸೆ ಚಿನ್ಮಯಿಗೆ. ಅದೇ ಮಾತನ್ನು ಸಂತೋಷನಿಂದ ತಂದೆಗೆ ಹೇಳಿಸಿದ್ದಳು.

"ಮಾಡುಕ್ಕೆ ಕೆಲ್ಸವಿಲ್ಲ. ಅಲ್ಲಿ ಅವಳ್ಗೇನು ಕೆಲ್ಸ?" ತಂದೆ ದಬಾಯಿಸಿದ್ದರು.

ಪ್ರೇಮಾ ಮಂಕು ಬಡಿದವಳಂತಾಗಿದ್ದಳು. ಇನ್ನು ಐದಾರು ವರ್ಷಗಳು! ಈ ಮಗನೂ ತನ್ನಿಂದ ದೂರ, ಈ ಮನೆಯಿಂದ ದೂರ.... ಬೆಳೆದ ಮಕ್ಕಳು ಒಬ್ಬೊಬ್ಬರಾಗಿ ತನ್ನಿಂದ ದೂರವಾಗುತ್ತಿದ್ದಾರೆ. ತಾನು ದಿನದಿನಕ್ಕೆ ಒಂಟಿಯಾಗುತ್ತಿದ್ದೇನೆ. ಅವಳ ಎದೆ ಭಾರವಾಗಿತ್ತು. ಕಣ್ಣೀರನ್ನು ಹರಿಸಿದರೆ, ಸಂತೋಷನೂ ವ್ಯಥೆ ಗೊಳ್ಳುತ್ತಾನೆ... ತನ್ನ ಮನದ ತುಮುಲ ಮಗನಿಗೆ ತಿಳಿಯಬಾರದೆಂದುಕೊಂಡು, ಮೇಲ್ನೋಟಕ್ಕೆ ಏನನ್ನೂ ಪ್ರಕಟಗೊಳಿಸಲಿಲ್ಲ. ಆದರೆ ಒಳಗೊಳಗೇ ಅವಳು ಕುಗ್ಗಿ ಹೋಗಿದ್ದಳು. ಲಗೇಜ್‌ಗಳೊಂದಿಗೆ, ಸಂತೋಷ ಕಾರನ್ನೇರಿದಾಗ, ಇವಳು ಗೋಡೆಯನ್ನಾಧರಿಸಿದಳು.... ಅದುಮಿಟ್ಟುಕೊಂಡಿದ್ದ ದುಃಗುಡ, ಕಣ್ಣೀರಾಗಿ ಹರಿಯಿತು. ಅವಳ ಕಣ್ಣೀರು ನಿಲ್ಲುವಂತೆಯೇ ಇರಲಿಲ್ಲ. ಶಾರದಮ್ಮನಿಗೂ ಸಮಾಧಾನ ಹೇಳಿ ಹೇಳಿ ಸ್ತಾಕಾಗಿತ್ತು.

"ಚಿನ್ಮಯೀ, ಕಾಲೇಜ್ಗೆ ಹೋಗ್ತಾ, ಹಾಗೇ ಕಾಮಾಕ್ಷಿಗೆ ಬಂದು ಹೋಗುವಂತೆ ಹೇಳಮ್ಮ. ಅವರಾದ್ರೂ ಬಂದು ಸಮಾಧಾನ ಹೇಳ್ಲಿ.... ನಾನು ಎಷ್ಟು ಹೇಳಿದರೂ ನಿಮ್ಮಮ್ಮನ ವ್ಯಥೆ ಕಡಿಮೆ ಆಗ್ತಾನೇ ಇಲ್ಲ...."

"ಸರಿ ಶಾರದಮ್ನೋರೆ.... ಹೇಳ್ಬಿಟ್ಟು ಹೋಗ್ತೀನಿ."

ಚಿನ್ಮಯಿ ಕಾಮಾಕ್ಷಿಯ ಮನೆಗೆ ಬಂದಾಗ ಎದುರಾದವನು ಕಿಶೋರ. ಒಂದು ಹೆಜ್ಜೆ ಹಿಂದೆ ಸರಿದಳು.

"ಏನೇ ಚಿನ್ಮಯೀ ಏನು ಬಂದದ್ದು?" ಕಿಶೋರ ತುಂಟತನದಿಂದ ಕೇಳಿದ.

"ಅತ್ತೆ ಇದಾರಾ?"

"ಅತ್ತೆ ಮನೇಲಿಲ್ಲ. ಅತ್ತೆ ಮಗ ಇದಾನೆ. ಏನಾಗ್ಬೇಕಾಗಿತ್ತು?"

"ಅತ್ತೆಗೆ ಈಗ್ಲೇ ಮನೆಗೆ ಹೋಗ್ಬೇಕಂತೆ ಅಂತ ಹೇಳ್ಬಿಡು...."

"ಯಾಕೆ ಅಂತ ಕೇಳ್ಬಹುದಾ?"

"ಅಮ್ಮಾ ಬೇಜಾರು ಮಾಡ್ಕೊಂಡಿದಾಳೆ. ಅತ್ತೆ ಬಂದು ಸಮಾಧಾನ ಹೇಳ್ಬೇಕು"

"ಓ..... ಹೋ.... ಹೋ..." ಕಿಶೋರ ಜೋರಾಗಿ ನಕ್ಕ.

"ಇದರಲ್ಲಿ ನಗೋ ಅಂಥಾದ್ದು ಏನಿದೆ?" ಸಿಡುಕಿದಳು.

"ನಿಮ್ಮಪ್ಪಂಗೂ, ನಿಮ್ಮಮ್ಮಂಗೂ ಆಗೋದೇ ಇಲ್ಲ.... ನಿಮ್ಮಪ್ಪ ಏನಾದ್ರೂ ಅನ್ನೋದು ನಿಮ್ಮಮ್ಮಂಗೆ ಬೇಸರವಾಗೋದು, ಇದು ದಿನಾ ಇದ್ದದ್ದೇ ರಾಮಾಯಣ ನಿಮ್ಮನೇಲಿ."

"ಹಾಗೇನಿಲ್ಲ. ಸಂತೋಷ ಮೈಸೂರಿಗೆ ಹೋದ.... ಅಮ್ಮಂಗೆ ಬೇಜಾರು."

"ಒಟ್ನಲ್ಲಿ ನಿಮ್ಮಮ್ಮಂಗೆ ಬೇಸರ, ಅದನ್ನೆಲ್ಲ ಹೇಳ್ಕೊಂಡು, ನಿಮ್ಮಮ್ಮ ನಮ್ಮಮ್ಮನ ಎದುರಿಗೆ ಅಳೋದು, ನಮ್ಮಮ್ಮ ಸಮಾಧಾನ ಹೇಳೋದು, ನಮ್ಮಮ್ಮಂಗೇನು ಇದೇ ಕೆಲಸಾನ? ಹೋಗೇ ಹೋಗು.... ಕರೆದ್ಕೂಡ್ಲೇ ಓಡಿ ಬಂದು ಬಿಡುಕ್ಕೆ ನಮ್ಮಮ್ಮ ಏನು ನಿಮ್ಮಪ್ಪನ ಮನೆಯ ಆಳಲ್ಲ."

"ಹೀಗೆಲ್ಲಾ ಯಾಕೆ ಮಾತಾಡೋದು? ಹೇಳಿದ್ರೆ ಹೇಳು, ಇಲ್ದಿದ್ರೆ ಬಿಡು." ಎನ್ನುತ್ತಾ ತನ್ನ ಭುಜದ ಮೇಲೆ ಬಿದ್ದಿದ್ದ ಜಡೆಯನ್ನು ರೊಯ್ಯಂತ ಹಿಂದಕ್ಕೆ ಹಾಕಿದಳು. ಅವಳು ತಿರುಗುವಷ್ಟರಲ್ಲಿ ಆ ಜಡೆಯ ತುದಿ, ಕಿಶೋರನ ಕೆನ್ನೆಗೆ ಬಡಿದಿತ್ತು. ಚಾಟಿ ಏಟು ಬಿದ್ದಂತಾಗಿ ಅವನು ಜಡೆಯ ತುದಿಯನ್ನು ಹಿಡಿದುಕೊಂಡು ಕೋಪದಿಂದ ಎಳೆದ.

"ಬಿಡು ಜಡೇನ. ಎಳೀಬೇಡ ನೋವಾಗುತ್ತೆ." ಅವಳು ಮುಖವನ್ನು ಕಿವುಚಿದಳು.

"ನಂಗೆ ನೋವಾಗ್ಲಿಲ್ವಾ?" ಎನ್ನುತ್ತಾ ಕೆನ್ನೆಯನ್ನು ತೋರಿದ.... ಕೆಂಪಗೆ ಬರೆಯಂತೆ ಗುರುತು ಆಗಿತ್ತು. ಅವಳ ಮುಖದಲ್ಲಿ ಭಯ ಇಣುಕಿತು. ಕಿಶೋರನ ಕೋಪ ಇಳಿಯಿತು. ಅವಳನ್ನೇ ಮತ್ತೆ ಮತ್ತೆ ನೋಡಿ ಜಡೆಯನ್ನು ಬಿಟ್ಟು ಬಿಟ್ಟ...

"ನನ್ನ ಕೆನ್ನೆಗೆ ಪೆಟ್ಟಾಗಿದೆ.... ಇರಲಿ ಇರಲಿ." ಎಂದು ತುಂಟತನದಿಂದ ನಕ್ಕಾಗ ಅವಳ ಭಯ ಇನ್ನೂ ಹೆಚ್ಚಾಯಿತು. ಅವನೆಲ್ಲಿ ತಿರುಗಿಸಿ ಕೆನ್ನೆಗೆ ಗೊಡೆದುಬಿಡುವನೋ ಎಂದುಕೊಂಡು ತಿರುಗಿದಳು.

"ನೀನು ತುಂಬಾ ಚೆನ್ನಾಗಿ ಕಾಣ್ತಿದೀಯ ಚಿನ್ಮಯೀ." ಅವನ ಹೊಗಳಿಕೆಯ ಮಾತುಗಳು ಕೇಳಿಸಿದವು. ಅವಳು ನಿಂತು, ಅವನ ಕಡೆ ಒಂದು ಬಾರಿ ನೋಡಿದಳು.

"ಹೌದು ಚಿನ್ನು... ನೀನು ನಿಮ್ಮಕ್ಕನಿಗಿಂತ ಚೆನ್ನಾಗಿದೀಯ." ಅವನ ಹೊಗಳಿಕೆಯ ಮಾತುಗಳಿಂದ ಅವಳ ಮುಖ ಅರಳಿತು. ಕೆನ್ನೆಗಳು ಕೆಂಪಡರಿದವು. ಮುಖದಲ್ಲಿ ಮಂದಹಾಸ ಮೂಡಿತು. ಮತ್ತೊಮ್ಮೆ ಜಡೆಯನ್ನು ಮುಂದಕ್ಕೆ ತಂದು, ಹಿಂದಕ್ಕೆ ಎಸೆದು ಅಲ್ಲಿಂದ ಸರಸರ ನಡೆದು ಹೋದಳು. ರಸ್ತೆಯ ತಿರುವಿನಲ್ಲಿ ಹಿಂತಿರುಗಿ ನೋಡಿದಳು. ಕಿಶೋರ ಅಲ್ಲೇ ನಿಂತ ಅವಳ ನಡಿಗೆಯನ್ನೇ ನೋಡುತ್ತಿದ್ದವನು ಕೈಯಾಡಿಸಿದ. ಅವಳು ತಿರುವಿನಲ್ಲಿ ಮರೆಯಾದಳು.

* * *

ಸಂತೋಷನನ್ನು ಕಾಲೇಜಿಗೆ ಸೇರಿಸಿ, ಅವನಿಗೆ ಉಳಿದುಕೊಳ್ಳಲು ಹಾಸ್ಟೆಲ್‌ನ ವ್ಯವಸ್ಥೆಯನ್ನು ಮಾಡಿ, ಭಟ್ಟ ಊರಿಗೆ ವಾಪಸ್ಸಾಗಿದ್ದ. ಈಗ ಎಲ್ಲರಿಗೂ ಸಂತೋಷನ ಕೊರತೆ ಎದ್ದು ಕಾಣುತ್ತಿತ್ತು. ಎಲ್ಲರಿಗೂ ಸಹಾಯಕನಾಗಿದ್ದ ಸಂತೋಷನಿಲ್ಲದುದು ಎಲ್ಲರಿಗೂ ಬೇಸರವನ್ನುಮಾಡಿತ್ತು. ಪ್ರೇಮಳ ಕೊಂಕು ಕಡಿಮೆ ಆಗಿರಲಿಲ್ಲ.

ಸಂತೋಷನ ರೂಮ್‌ಗೆ ಚಿನ್ಮಯಿ ವರ್ಗಾಯಿಸಿಕೊಂಡಿದ್ದಳು. ತಾನೀಗ ಕಾಲೇಜಿನಲ್ಲಿ ಓದುವವಳು, ನಳಿನಿಯ ಜತೆ ತಾನೇಕೆ ಇರಬೇಕು ಎಂದುಕೊಂಡು ತನ್ನ ವಸ್ತುಗಳನ್ನೆಲ್ಲ ಮೇಲಿನ ರೂಮ್‌ಗೆ ಸಾಗಿಸಿದಳು. ಅವುಗಳನ್ನು ಜೋಡಿಸುವಾಗ, ಸಂತೋಷ ಕಪಾಟಿನಲ್ಲಿ ಪುಸ್ತಕಗಳ ಹಿಂದೆ ಬಚ್ಚಿಟ್ಟಿದ್ದ ಪತ್ರಗಳು ಸಿಕ್ಕವು. ಕುತೂಹಲದಿಂದ ಬಿಡಿಸಿ ಓದಿದಳು. ವಿದ್ಯಾ ಕಿಶೋರನಿಗೆ ಬರೆದ ಪತ್ರಗಳು.... ಇವು ಇಲ್ಲಿಗೆ ಹೇಗೆ ಬಂದವು? ಸಂತೋಷ ಯಾಕೆ ಮುಚ್ಚಿಟ್ಟಿದ್ದಾನೆ? ಅವಳಿಗೆ ಅರ್ಥವಾಗಲಿಲ್ಲ. ಆದರೂ ಈ ಪತ್ರದಿಂದ, ಕಿಶೋರನನ್ನು ಅಕ್ಕ ಮದುವೆಯಾಗಲು ಬಯಸಿದ್ದಳೆಂದು ತಿಳಿಯಿತು. ಆದರೆ ಇದ್ದಕ್ಕಿದ್ದಂತೆ ಇವನನ್ನು ಬಿಟ್ಟು ಭಾವನನ್ನೇಕೆ ಮದುವೆಯಾದಳು? ಕಿಶೋರನಿಗಿಂತ ಭಾವ ಎಲ್ಲಾ ರೀತಿಯಿಂದಲೂ ಹೆಚ್ಚು ಎನಿಸಿರಬಹುದೆ! ಆದರೂ ಅಕ್ಕ ಮಾಡಿದ್ದು ತಪ್ಪು. ಕಿಶೋರನನ್ನು ಪ್ರೀತಿಸಿ, ಅವನಿಗೆ ಕೈ ಕೊಟ್ಟು ಭಾವನನ್ನು ಮದುವೆಯಾಗಬಾರದಾಗಿತ್ತು. ಆದುದರಿಂದಲೇ ಕಿಶೋರನಿಗೆ ಕೋಪ ಬಂದು ಹಾಗೆಲ್ಲಾ ಬೆದರಿಸಿದನೇನೋ.....

ಕಿಶೋರ ಮಾಅಡಿದ್ದರಲ್ಲಿ ತಪ್ಪಿಲ್ಲ ಎನಿಸತೊಡಗಿತ್ತು. ಆದರೆ, ಅವನನ್ನು ಪೋಲೀಸರು ಹಿಡಿದುಕೊಂಡು ಹೋಗಿದ್ದರಲ್ಲ... ವಾಪಸ್ಸು ಹೇಗೆ ಬಂದ? ಬಿಟ್ಟರೇ? ತಪ್ಪಿಸಿಕೊಂಡನೆ? ಹೇಗಾದರೂ ತಿಳಿದುಕೊಳ್ಳಬೇಕಲ್ಲ ಎಂದುಕೊಂಡು ಮತ್ತೆ ಪತ್ರಗಳನ್ನು ಬಚ್ಚಿಟ್ಟಳು. ಅಕ್ಕ ಕಿಶೋರನನ್ನೇ ಮದುವೆಯಾಗಿದ್ದರೆ..... ಇಲ್ಲೇ ಇದೇ ಊರಿನಲ್ಲಿರುತ್ತಿದ್ದಳಲ್ಲ. ತಮಗೆ ಈ ಭಾವ ಸಿಗುತ್ತಿರಲಿಲ್ಲ.... ಆದರೆ ಭಾವನಿಗೆ ಈ ವಿಷಯ ಗೊತ್ತಿದೆಯೋ ಇಲ್ಲವೋ..... ಅವರು ಅಕ್ಕನ್ನ ಎಷ್ಟು ಪ್ರೀತಿಸ್ತಾರೆ....? ಎಷ್ಟು ಪ್ರೀತಿಯಿಂದ ಅವಳಿಗೆ ಪತ್ರವನ್ನು ಬರೆದಿದ್ದರು.... ಮತ್ತೊಮ್ಮೆ ತಾನು ಓದಿದ್ದ ಪತ್ರದಲ್ಲಿ ಬರೆದಿದುದನ್ನು ಜ್ಞಾಪಿಸಿಕೊಂಡಳು. ಮೈಯೊಳಗೆಲ್ಲ ಏನೋ ಕಚಗುಳಿ

ಯಿಟ್ಟಂತಾಯಿತು. ತನಗೂ ಇಂಥ ಪ್ರೇಮ ಪತ್ರಗಳನ್ನು ಬರೆಯುವ ಒಬ್ಬ ಪ್ರೇಮಿ ಇದ್ದರೇ.... ಎಷ್ಟು ಚೆನ್ನ ಎಂದು ಮನ ಹಂಬಲಿಸಿತು. ಆ ಕ್ಷಣಕ್ಕೆ ಅವಳಿಗೆ ನೆನಪಾದವನು ಕಿಶೋರ..... ಅವನನ್ನು ತನ್ನ ಕಣ್ಣ ಮುಂದೆ ನಿಲ್ಲಿಸಿಕೊಂಡಳು.... ಕಿಶೋರ ತನ್ನ ಜಡೆಯನ್ನೆಳೆದು, ತನ್ನ ರೂಪವನ್ನು ಹೊಗಳಿ ಆಡಿದ ಮಾತುಗಳು ನೆನಪಾದವು... ಅಕ್ಕ ಕಿಶೋರನನ್ನು ಮೆಚ್ಚಿ ಮದುವೆಯಾಗುವ ಬಯಕೆಯನ್ನು ತೋರಿದ್ದರೆ, ಕಿಶೋರ ಒಳ್ಳೆಯವನೇ ಇರಬೇಕು. ಅಕ್ಕನೇ ಕೆಟ್ಟವಳು ಎಂಬ ಭಾವನೆ ಮನದಲ್ಲಿ ಬೇರೂರಿತು. ಕಿಶೋರನೊಡನೆ ಎಲ್ಲವನ್ನೂ ಹೇಳಿ, ಅವನಿಗೆ ಪತ್ರದ ವಿಷಯವನ್ನು ತಿಳಿಸಬೇಕೆಂದು ಕೊಂಡಳು.

* * *

ಪ್ರೇಮಾ, ಪ್ರಶಾಂತನಿಗೆ ಒಂದು ಪತ್ರವನ್ನು ಬರೆದಳು. "ಮನೆಯಲ್ಲಿ ಗಂಡು ಮಕ್ಕಳಿಲ್ಲದೆ ಕಷ್ಟವಾಗುತ್ತಿದೆ. ಶ್ರೀಕರ ಇನ್ನೂ ಚಿಕ್ಕವನು. ಈಗಲಾದರೂ ನೀನು ಮನೆಗೆ ವಾಪಸ್ಸು ಬರುವ ಮನಸ್ಸನ್ನು ಮಾಡು..... ನೀವಿಬ್ಬರೂ ಬಂದು ನನ್ನ ಎದುರಿಗೆ ಓಡಾಡಿಕೊಂಡಿದ್ದರೆ ನನ್ನ ಮನದಲ್ಲೂ ಉಲ್ಲಾಸ ಇರುತ್ತದೆ." ಎಂದು ತನ್ನ ವ್ಯಥೆಯನ್ನು ತೋಡಿಕೊಂಡಿದ್ದಳು.

ಪ್ರಶಾಂತನಿಗೆ ತಾಯಿಯ ಅಳಲು ಅರ್ಥವಾಗಿತ್ತು. ಮನೆಯಲ್ಲಿ ಎಲ್ಲವೂ ಇದ್ದು, ಎಲ್ಲರೂ ಇದ್ದರೂ, ಅಮ್ಮ ಸುಖವಾಗಿಲ್ಲ, ಅವಳು ಒಂಟಿ ಎಂದು ಅವನಿಗೆ ತಿಳಿದಿತ್ತು. ಆದರೆ ಅವಳ ಮನಸ್ಸಿಗೆ ನೆಮ್ಮದಿಗಾಗಿ, ತಾವುಗಳು ಅಲ್ಲಿ ಹೋಗಿ ಇರುವುದು ತನ್ನ ಮನಕ್ಕೆ ಒಪ್ಪದ ಮಾತು ಎಂದುಕೊಂಡು, ಬೇರೆ ಉಪಾಯವನ್ನು ಹುಡುಕಿ, ತನ್ನ ಮಾವನೊಡನೆ ಮಾತನ್ನಾಡಿದ.

ಸುಗುಣಾ ಗರ್ಭಿಣಿಯಾಗಿದ್ದಳು. ಅವಳಿಗೆ ಸ್ವಲ್ಪ ಸುಸ್ತು, ಆಯಾಸ ತೋರಿ ಬಂದಾಗ, ಅವಳನ್ನು ಅವಳ ತವರು ಮನೆಗೆ ಕರೆದುಕೊಂಡು ಹೋಗಿ, ಅಲ್ಲಿಯೇ ಕೆಲವು ದಿನಗಳಿಗೋಸ್ಕರ ಬಿಟ್ಟು ಬಂದಿದ್ದ. ಮತ್ತೆ ಈಗ ಒಂಟಿಯಾಗಿದ್ದ.

"ಮಾವ, ನಮ್ಮೂರು, ಹೋಗಿ ಬರುಕ್ಕೆ ಇಲ್ಲಿಗಿಂತ ಹತ್ತಿರವಾಗುತ್ತೆ. ನಾನು ಅಲ್ಲೇ ಒಂದು ಮನೆ ಮಾಡಿಕೊಂಡು ಇರೋಣ ಅಂತ ಅಂದುಕೊಂಡಿದೀನಿ. ಡಾಕ್ಟರ್‌ಗಳ ಅವಶ್ಯಕತೆಬಿದ್ದಾಗ, ಈ ಎಸ್ಟೇಟ್ ಮನೆ ದೂರು, ಅಲ್ಲದೆ ಹತ್ತಿರದಲ್ಲಿ ಯಾವ ಅನುಕೂಲಗಳೂ ಇಲ್ಲ." ಎಂದಿದ್ದ. ಶಾಸ್ತ್ರಿಗೂ ಆ ಮಾತು ಸರಿ ಎನಿಸಿತ್ತು. ಆದರೆ..... ಭಟ್ಟ ಮಗನ್ನನ್ನು ಮತ್ತೆ ತನ್ನ ಮನೆಯಲ್ಲಿರಿಸಿಕೊಳ್ಳಲು ಒಪ್ಪುವನೇ? ಕೇಳೋದು ಹೇಗೆ? ಪ್ರಶಾಂತನೇ ಮತ್ತೆ ನುಡಿದ – "ನಮ್ಮ ಮನೆಯ ಹತ್ತಿರಾನೇ ಯಾವುದಾದ್ರೂ ಬಾಡಿಗೆಗೆ ಮನೆ ನೋಡ್ತೀನಿ.... ನನ್ನ ತಾಯಿ, ತಂಗಿಯರು ಆಗಾಗ್ಗೆ ಬಂದು ಹೋಗಿ ಮಾಡಿದರೆ, ಸುಗುಣಾಳಿಗೂ ಒಳ್ಳೆಯದಲ್ಲವೇ?"

"ನಿಮ್ಮಪ್ಪ ಒಪ್ತಾನಾ? ಈಗಾಗ್ಲೇ ಅವನಿಗೆ ವಿಪರೀತ ಕೋಪ... ನಿಮ್ಮಿಬ್ಬರ

ವೈಮನಸ್ಯದಲ್ಲಿ ನಾನೂ ಕೆಟ್ಟವನಾಗಿದೀನಿ."

"ಅಪ್ಪ ಅಂತೂ ಖಂಡಿತ ಬರುಲ್ಲ. ನಾನೂ ಹೋಗುಲ್ಲ. ನನ್ನ ಪಾಡಿಗೆ ನಾನು ಬೇರೆ ಮನೆಯಲ್ಲಿದ್ರೆ ಅಪ್ಪನಿಗೆ ಏನು ತೊಂದರೆ?"

"ಅದೇ ಸರಿ.... ಮಾವ ಸೊಸೆ ಒಂದೇ ಮನೆಯಲ್ಲಿ ವಾಸ ಮಾಡುವುದು ಬೇಡ ಅಂತ ನನಗೂ ಅನ್ನಿಸ್ತಿತ್ತು.... ನಿಮ್ಮಪ್ಪನಿಗೆ ಏನಾದರೂ ಹೆಚ್ಚು – ಕಡಿಮೆ ಆದರೆ, ಅದಕ್ಕೆ ನಾನು ಹೊಣೆಗಾರನಾಗ್ತೀನಿ."

"ನಾವ್ಯಾರು ಹೊಣೆಗಾರರಲ್ಲ.... ಸ್ವತಃ ಅವರೇ ಇದಕ್ಕೆಲ್ಲ ಹೊಣೆಗಾರರು. ಆದರೆ ಅವರಿಗೆ ಇದರಲ್ಲೆಲ್ಲ ನಂಬಿಕೆ ಇಲ್ಲ. ಅವರಿಗೇನೂ ಆಗುವುದಿಲ್ಲ, ನಿಶ್ಚಿಂತೆಯಾಗಿರಿ."

"ಮನೆಗೆ ಹಿರಿಮಗನಂತೆ ಇದ್ದು ನೀನೇ ಎಲ್ಲಾ ನಿಭಾಯಿಸ್ತಿದ್ದೆ. ಈಗ ನೀನೂ ಎಸ್ಟೇಟ್‌ನಿಂದ ಹೊರಟು ಹೋದ್ರೆ ಅಲ್ಲಿ ನೋಡಿಕೊಳ್ಳುವವರ್‍ಯಾರು?"

"ಸದ್ಯಕ್ಕೆ ಒಬ್ಬನನ್ನು ನೇಮಕ ಮಾಡೋಣ... ನಾನೇ ವಾರದಲ್ಲಿ ಮೂರು – ನಾಲ್ಕು ಸಾರಿ ಬಂದು ನೋಡ್ಕೊಂಡು ಹೋಗ್ತೀನಿ. ನೀವು ಚಿಂತೆ ಮಾಡ್ಬೇಡಿ."

ಅಳಿಯನೇ ಇಷ್ಟು ಜವಾಬ್ದಾರಿಯಿಂದ ಮಾತನಾಡಿದಾಗ, ಶಾಸ್ತ್ರಿಗೆ ಅವನ ಮೇಲಿನ ಅಭಿಮಾನ ಹೆಚ್ಚಿತು. ಅಲ್ಲದೇ ಮಗಳು ಈಗ ಬಸುರಿ. ಅವಳನ್ನು ಅಳಿಯ ಚೆನ್ನಾಗಿ ನೋಡಿಕೊಳ್ಳಬೇಕಾದರೆ ತಾನು ಅಳಿಯನನ್ನು ಚೆನ್ನಾಗಿಟ್ಟುಕೊಂಡಿರಬೇಕೆಂದುಕೊಂಡು ಅವನಿಗೆ ಒಂದು ಮೋಟಾರ್ ಬೈಕ್‌ನ್ನು ತೆಗೆಸಿಕೊಟ್ಟನು.

ಪ್ರಶಾಂತ ಈ ವಿಷಯಗಳನ್ನೆಲ್ಲ ತಾಯಿಗೆ ಬರೆದು ತಿಳಿಸಿ, ಸಮೀಪದಲ್ಲೇ ಯಾವುದಾದರೂ ಬಾಡಿಗೆಗೆ ಮನೆ ಇದ್ದರೆ ವಿಚಾರಿಸಬೇಕೆಂದು ತಿಳಿಸಿದ್ದ. ಪ್ರೇಮಾ ಅದೇ ವಿಷಯವನ್ನು ಕಾಮಾಕ್ಷಿಗೂ, ಶಾರದಮ್ಮನವರಿಗೂ ತಿಳಿಸಿದಳು. ಒಂದೆರಡು ತಿಂಗಳುಗಳಲ್ಲೇ ಹಿಂದಿನ ಮನೆಯ ಪಕ್ಕದ ಔಟ್ ಹೌಸ್ ಖಾಲಿಯಾಗುತ್ತಿರುವ ವಿಚಾರ ತಿಳಿಯಿತು. ಶಾರದಮ್ಮನೇ ಹೋಗಿ ಓನರ್ ಹತ್ತಿರ ಮಾತನಾಡಿ, ಮನೆಯನ್ನು ಗೊತ್ತು ಮಾಡಿದಳು. ಕೆಲವೇ ದಿನಗಳಲ್ಲಿ ಪ್ರಶಾಂತ ಹೆಂಡತಿಯೊಡನೆ ಆ ಮನೆಗೆ ವಾಸಕ್ಕೆ ಬಂದು ಇರತೊಡಗಿದ.

ಹಿಂದುಗಡೆಯ ಕಾಂಪೌಂಡ್ ಬಳಿ ಇವಳು ನಿಂತು, ಅವನು ಮೇಲಿನ ಬಾಲ್ಕನಿಯುಲ್ಲಿ ನಿಂತು ಕ್ಷೇಮ ಸಮಾಚಾರದ ಮಾತುಗಳನ್ನಾಡುತ್ತಿದ್ದರು. ಮನೆಯಲ್ಲಿ ಮಾಡಿದ ವಿಶೇಷ ತಿಂಡಿ, ತಿನಿಸುಗಳನ್ನು ಶಾರದಮ್ಮನೇ ಹೋಗಿ ಕೊಟ್ಟು ಬರುತ್ತಿದ್ದರು. ಎಷ್ಟೋ ದಿನಗಳ ತನಕ ಭಟ್ಟನಿಗೆ ಈ ವಿಷಯ ತಿಳಿದಿರಲೇ ಇಲ್ಲ. ಒಂದು ದಿನ ಕಾಮಾಕ್ಷಿಯೇ ಈ ವಿಷಯವನ್ನು ಭಟ್ಟನಿಗೆ ತಿಳಿಸಿದಳು –

"ನೀನು ಅಜ್ಜನಾಗ್ತಿದಿ ಕಣಾ ಭಟ್ಟ. ನಿನ್ನ ಮಗನ ಹೆಂಡ್ತಿ ಬಸ್ರಿ...."

"ಯಾವ ಮಗ? ಯಾವ ಸೊಸೆ.....?"

"ಅವ ಮನೆಯಿಂದಾಚೆ ಹೋದ್ಮಾತ್ರಕ್ಕೆ ಸಂಬಂಧ ಹೋಗ್ತದೇನು.... ಅವನು ಈಗ ನಿನ್ನ ಹಿಂದಿನ ಮನ್ಗೇ ವಾಪ್ಸಾಗಿದಾನೆ. ತಿಳಿದಿಲ್ಲೇನು!"

"ತಿಳ್ದು ಏನೂ ಆಗ್ಬೇಕಿಲ್ಲ ನಂಗೆ...."

"ಅಜ್ಜಾದ್ರೂ ನಿಂಗ್ಬುದ್ಧಿ ಬರುಲ್ಲ ನಂಗೊತ್ತು" ಅವಳು ನಕ್ಕು ತಮಾಷೆ ಮಾಡಿದರೂ ಭಟ್ಟ ನಗಲಿಲ್ಲ. ಆ ವಿಷಯ ತನಗೆ ಸಂಬಂಧ ಪಟ್ಟದ್ದೇ ಅಲ್ಲವೆನ್ನುವಂತೆ ಸುಮ್ಮನಿದ್ದ.

ಒಳಗೆ ಪ್ರೇಮಳೊಡನೆ ಮಾತನಾಡಿದಾಗ ಪ್ರೇಮಾ ಸಂತಸವನ್ನು ವ್ಯಕ್ತಪಡಿಸಿದಳು. "ಮಗ ನಂಗೆ ತಿಳಿಸ್ದೇ ಮದ್ವೆಯಾದ ಅನ್ನೋ ಬೇಸ್ರ ಕೂಡ ಮಾಯವಾಗಿ ಹೋಯ್ತು- ಈ ಸುದ್ದಿ ಕೇಳಿ.... ಆದ್ರೆ ಮಗೀನ ಎತ್ತಿ ಆಡ್ಸೋ ಶಕ್ತಿಯೇ ನಂಗಿಲ್ಲ.... ಅಲ್ಲದೇ ನಾನಲ್ಲಿಗೆ ಹೋಗೋ ಹಾಗಿಲ್ಲ. ಅವ್ನೂ ಇಲ್ಲಿಗೆ ಬರು ಹಂಗಿಲ್ಲ."

"ಈಗ್ಲಾದ್ರೂ ಭಟ್ಟ ತಿಳ್ಕೋಬೇಕು. ಇವತ್ತೋ ನಾಳೆಯೋ ವಿದ್ಯಾ ಕೂಡಾ ಬಸ್ರಿ ಅನ್ನೋ ಸುದ್ದಿ ಬರ್ತದೆ. ಆಗ ಏನ್ಮಾಡ್ತಾನೋ.....?"

"ನಿಮ್ಮ ಭಟ್ಟರು ನಿಮಗೆ ತಿಳೀದೋರೇನಲ್ಲ ಕಾಮಾಕ್ಷಿ. ಮಗಳು, ಮಗ ಯಾವ ವ್ಯಾಮೋಹವೂ ಇಲ್ಲ ಅವ್ರಿಗೆ..."

"ಸನ್ಯಾಸಿಯಂತೂ ಅಲ್ಲ ನಿನ್ಗಂಡ.... ಆರು ಮಕ್ಕಳ ತಂದೆ.... ಈಗ ಮಗ ತಂದೆಯಾಗ್ತಾನೆ ಅಂತಾದ್ರೆ ಒಂದಿಷ್ಟಾದ್ರೂ ಸಂತೋಷ ಬೇಡ್ವಾ.....? ಇನ್ನು ಎಷ್ಟು ವರ್ಷ ಹೀಗೇ ಹಗೆ ಸಾಧಿಸ್ತಾನೋ..... ನಾ ಕಾಣೆ....."

"ನೋಡೋಣ.... 'ಅಜ್ಜಾ' ಅಂತ ಮೊಮ್ಮಗು ಮುದ್ದಾಗಿ ಕರೆದ್ರೆ ಅವ್ರ ಹೃದಯವೂ ಕರಗೀತು....."

"ನಿಮ್ಗಂಡಂದು ಹೃದಯ ಅಲ್ಲ ಪ್ರೇಮಕ್ಕ ಕಲ್ಲು ಗುಂಡು...." ಕಾಮಾಕ್ಷಿ ಕೈ ಗುಂಡಗೆ ಮಾಡಿ ತೊರಿ ನಕ್ಕಳು.

* * *

ಭವಾನಿಯಿಂದ ಪ್ರೇಮಳಿಗೆ ಪತ್ರ ಬಂದಿತ್ತು. ವಿದ್ಯಂಗೆ, ಡಾಕ್ಟರ್ ರೆಸ್ಟ್‌ನಲ್ಲಿರಬೇಕು ಅಂತ ತಿಳಿಸಿದ್ದಾರೆ. ಅವಳು ನಿನ್ನನ್ನು ನೋಡ್ಬೇಕು ಅಂತ ಹಂಬಲಿಸ್ತಾ ಇದಾಳೆ. ಅದು ಬಸುರಿ ಹುಡುಗಿ ಬಯಕೆ. ನಾಲ್ಕು ದಿನದ ಮಟ್ಟಿಗೆ ಬಂದು ಹೋಗು ಅಂತ ಬರೆದಿದ್ದಳು. ಪ್ರೇಮಾ ಪತ್ರವನ್ನು ಓದಿ, ಚಿನ್ಮಯಿಯ ಕೈಗೆ ಕೊಟ್ಟಳು.

"ಹೋಗು ಈ ಪತ್ರಾನ ನಿಮ್ಮಪ್ಪಂಗೆ ಕೊಡು" ಚಿನ್ಮಯಿ ಮರೆಯಲ್ಲಿ ನಿಂತು ಆ ಪತ್ರವನ್ನು ಓದಿಕೊಂಡಳು. 'ಅಕ್ಕ ತಾಯಿಯಾಗಲಿದ್ದಾಳೆ....' ಚಿನ್ಮಯಿಯ ಮೈಯೆಲ್ಲಾ ಜುಂ ಎಂದಿತು. ಭಾವನ ಮುಖ ಕಣ್ಮುಂದೆ ತೇಲಿ ಬಂದಿತು. ಹುಟ್ಟುವ ಮಗು ಯಾರಹಾಗೆ ಇರುತ್ತದೆ? ಭಾವನ ಹಾಗೋ? ಅಕ್ಕನ ಹಾಗೋ?

ಹೆಣ್ಣೋ ಗಂಡೋ....?

"ಚಿನ್ಮಯೀ....." ತಾಯಿಯ ಕೂಗು ಕೇಳಿದಾಗ ಎಚ್ಚೆತ್ತಳು. ಅಪ್ಪನ ಟೇಬಲ್ ಮೇಲೆ ಆ ಪತ್ರವನ್ನು ಇಟ್ಟು ಹಿಂತಿರುಗಿದಳು.

"ಏನಂದ್ರೇ ನಿಮ್ಮಪ್ಪ? ಕಾಗ್ದಾನ ಓದಿದ್ರಾ?"

"ಇಲ್ಲಮ್ಮ ಅಪ್ಪ ರೂಮ್ನಲ್ಲಿಲ್ಲ. ಅಲ್ಲೇ ಇಟ್ಟು ಬಿಟ್ಟು ಬಂದ್ಬಿಟ್ಟೆ."

"ಎಲ್ಲೋದ್ರು ನಿಮ್ಮಪ್ಪ? ಹೋಗ್ಲಿ, ಆಮೇಲೆ ತೋರಿಸಿದ್ರಾಯ್ತು. ಸ್ವಲ್ಪ ಕಾಮಾಕ್ಷೀನ ಕರೆದು ಬರ್ತೀಯ? ನಾನು ಅವರ್ಹತ್ರ ಮಾತಾಡ್ಬೇಕು."

"ಹೋಗಮ್ಮ. ಇಂಥ ಕೆಲಸಾನೆಲ್ಲ ನಂಗೆ ಹಚ್ಬೇಡ.... ಕಿಶೋರ ತಲೆ ಹರಟೆ ಆಡ್ತಾನೆ" ಎಂದು ಹೇಳಹೊರಟವಳು ಅದನ್ನು ಹೇಳದೇ ರಸ್ತೆಗಿಳಿದಳು.

"ಅತ್ತೇ.....ಅತ್ತೇ....." ಮುಂಬಾಗಿಲಿನಲ್ಲಿ ನಿಂತು ಕೂಗಿದಳು. ಒಳಗ್ನಿಂದ ಕಿಶೋರ ಬಂದ.

"ಏನೇ ಚಿನ್ಮಯೀ.... ಅಲ್ಲೇ ಯಾಕೆ ನಿಂತಿದೀಯ ಒಳಗ್ಬಾ....." ಎಂದ.

"ಅತ್ತೆ ಇಲ್ವಾ?" ಅಲ್ಲೇ ನಿಂತು ಕೇಳಿದಳು.

"ಅಮ್ಮ ನಿಮ್ಮನೆ ಕಡೇನೇ ಹೊರಟ್ಲು... ಇವತ್ತೇನಾಯ್ತು ನಿಮ್ಮನೇಲಿ....?" ಕೆಣಕಿದ.

"ಏನೂ ಇಲ್ಲ. ಬೆಂಗ್ಳೂರ್ನಿಂದ ಚಿಕ್ಕಮ್ಮ ಕಾಗ್ದ ಬರ್ದಿದಾರೆ.. ಅದನ್ನ ಹೇಳೋಕೆ ಇರ್ಬೇಕು."

"ಅಂಥ ಸುದ್ದಿ ಏನು? ನಮ್ಮಮ್ಮಂಗೆ ಹೇಳಲೇ ಬೇಕಾಗಿರೋದು....."

"ನಿಂಗೆ ಹೇಳುವಂಥಾದ್ದಲ್ಲ...."

"ನೀ ಹೇಳ್ದೆ ಇದ್ರೇನಾಯ್ತು? ಅಮ್ಮನ್ನ ಕೇಳಿದ್ರೆ ಹೇಳ್ತಾಳೆ. ಒಳಗ್ಬಾರೇ.... ಅಲ್ಲೇ ನಿಂತು ಮಾತಾಡ್ತೀಯ?"

"ಬೇಡ ಕಣೋ..... ಓದ್ಕೋದಿದೆ. ನಾನು ಬರ್ತೀನಿ."

"ಹೂಂ ನಿನ್ನಿಷ್ಟ." ಎಂದುಬಿಟ್ಟ. ಅವಳಿಗೆ ನಿರಾಸೆಯಾಗಿತ್ತು. ಹಾಗೇ ನಿಂತಳು.

"ನಾನೊಂದ್ವಿಷ್ಯ ಕೇಳ್ಲಾ ಕಿಶೋರ.... ನೀನು ನಿಜ ಹೇಳ್ಬೇಕು....."

"ಬೀದೀಲಿ ನಿಂತ್ಕೊಂಡು ಕೇಳಿದ್ರೆ ನಿಜ ಹೇಳ್ತೀನಾ! ಒಳಗೆ ಬಂದು ಮಾತಾಡಿದ್ರೆ ಸರಿಯಪ್ಪಾ....." ಅವಳು ಅನುಮಾನಿಸುತ್ತಾ ಗೇಟನ್ನು ತೆರೆದು ಒಳಬಂದಳು.

"ಯಾರೂ ಇಲ್ವಾ! ನೀನೊಬ್ನೇ ಇದೀಯ?" ಅತ್ತಿತ್ತ ನೋಡಿ ಅನುಮಾನಿಸುತ್ತಾ ಕೇಳಿದಳು. ಅವನು ನಕ್ಕ.

"ಇಲ್ಲ. ಹುಲಿ, ಸಿಂಹ, ಕರಡಿ ಎಲ್ಲಾ ಒಳಗಿವೆ ತೋರಿಸ್ಲಾ....?" ಅವಳೂ ಪೆಚ್ಚಾಗಿ ನಕ್ಕು ಬಾಗಿಲಿಗೆ ಒರಗಿ ನಿಂತಳು.

"ಕಿಶೋರ, ನೀನು ನಿಜವಾಗಿಯೂ ಅಕ್ಕನ್ನ ಪ್ರೀತಿಸ್ತಿದ್ಯಾ.....?"

"ಈಗ್ಯಾಕೆ ಆ ಮಾತು! ನಿಮ್ಮಕ್ಕನ್ನ ಮದುವೆ ಆಗಿ ಹೋಯ್ತಲ್ಲ ನಿನ್ನ ಭಾವನ ಜತೆ..."

"ಅಕ್ಕಾನೂ ನಿನ್ನನ್ನ ಪ್ರೀತಿಸ್ತಿದ್ಲಾ....?"

"ನಿಜ ಹೇಳ್ಬೇಕೂಂತಂದ್ರೆ ಆ ಆಸೇನ ನನ್ನಲ್ಲಿ ಹುಟ್ಟಿಸ್ದಿದವಳೇ ನಿಮ್ಮಕ್ಕ. ನನ್ನ ಅವಳ ಮದ್ವೆ ಆಗಿದ್ದಿದ್ರೆ ನಾನೇ ನಿನ್ನ ಭಾವನಾಗಿರ್ತಿದ್ದೆ....: ಆದರೆ ಆ ಭಾಗ್ಯ ನನಗಿಲ್ಲ ಹೋಗ್ಲಿ ಬಿಡು... ಪೋಲೀಸ್ನೋರಿಗೆ ಬೇರೆ ಹಿಡಿಸಿಕೊಟ್ಟರು ನಿಮ್ಮಪ್ಪ.."

"ಆದ್ರೆ ನೀನು ಹಾಗೇ ಅವಳನ್ನು ಹೆದರಿಸಬಾರ್ದಾಗಿತ್ತು...."

"ನನ್ಗೂ ಬೇಸ್ರ ಆಯ್ತು. ಕೋಪ ಬಂತು.... ನಿಜವಾದ ವಿಷ್ಯ ಹೇಳ್ತೀನಿ. ನಾನು ಬರೀ ಹೆದರಿಸ್ದೆ ಅಷ್ಟೇ. ಆಸಿಡ್ ಎರಚಿ ಅವಳ ಮುಖಾನ ಕುರೂಪ ಮಾಡ್ಬೇಕೂಂತ ನನ್ನ ಮನಸ್ಸಿನಲ್ಲಿ ಖಂಡಿತಾ ಇರಲಿಲ್ಲ. ಆ ಬಾಟಲಿಯಲ್ಲಿ ಇದ್ದದ್ದು ಬರೀ ಸೀಮೆಎಣ್ಣೆ. ಯಾವ ಆಸಿಡ್ ಅಲ್ಲ....."

"ಹೌದಾ? ಆಗ್ಳೇ ಯಾಕೆ ಹೇಳ್ಲಿಲ್ಲ....."

"ಹೇಳಿದ್ರೂ ಯಾರೂ ನಂಬ್ತಿರ್ಲಿಲ್ಲ. ನಮ್ಮಮ್ಮನೇ ನಂಬ್ತಿರ್ಲಿಲ್ಲ.... ಅದಕ್ಕೇ ತಾನೇ ಪೋಲೀಸ್ನೋರು ಬಿಟ್ಟಿದ್ದು. ಆದರೂ ನಾನು ಕೆಟ್ಟವನಾಗಿಬಿಟ್ಟೆ. ನಿಮ್ಮಕ್ಕ ಹಾಯಾಗಿ ಸಂಸಾರ ಮಾಡಿಕೊಂಡಿದಾಳೆ. ಎಲ್ಲ ಅಪರಾಧವನ್ನು ನನ್ನ ತಲೆ ಮೇಲೆ ಹೊರಿಸಿ..... ಅವ್ಳ ಬೆಂಗ್ಳೂರ್ನಿಂದ ನನಗೆ ಕಾಗ್ದಗಳನ್ನು ಬರೆದಿದ್ಲಂತೆ ಅವುಗಳು ನನಗೆ ತಲುಪ್ಲೆ ಇಲ್ಲ. ಅಮ್ಮ ಮುಚ್ಚಿಟ್ಟಿರಬಹುದು ಅಂತ ನನಗನ್ನಿಸುತ್ತೆ. ಆ ಕಾಗ್ದ ಗಳು ನನ್ನ ಕೈ ಸೇರಿದ್ದರೇ...... ನಿಮ್ಮಕ್ಕನ್ನ, ನಿಮ್ಮಪ್ಪನ್ನ ಇನ್ನೊಂಡಿಷ್ಟು ಹೆದರಿಸ ಬಹುದಾಗಿತ್ತು..... ಈಗನ್ನಿಸುತ್ತೆ, ನಿಮ್ಮಕ್ಕನ ಮಾತು ಕೇಳಿ ನಾನು ಹಾಳಾದೆ... ಪರೀಕ್ಷೆಗೆ ಹೋಗಲಿಲ್ಲ.... ಕಾಲೇಜ್ಗೂ ಹೋಗುತ್ತಿಲ್ಲ. ಎಲ್ಲಾ ನಿಮ್ಮಕ್ಕನಿಂದಲೇ...."

"ಹೌದು ಕಿಶೋರ..... ಅಕ್ಕ ತಪ್ಪು ಮಾಡಿಬಿಟ್ಟಳು. ನಿನ್ನನ್ನ ಪ್ರೀತಿಸಿದ್ಮೇಲೆ ನಿನ್ನನ್ಬಿಟ್ಟು ಭಾವನ್ನ ಮದ್ವೆಯಾಗ್ಬಾರ್ದಾಗಿತ್ತು...."

"ಸದ್ಯ ನಿಂಗಾದ್ರೂ ನಾನು ಸರಿ ಅಂತ ಅನ್ನಿಸ್ತಲ್ಲ..... ನಂಗೊತ್ತಿತ್ತು, ನೀನು ನಿಮ್ಮಕ್ಕನ ಥರ ಅಲ್ಲ ಅಂತ.... ನೀನು ಮಾತ್ರ ಯಾರ್ಗೂ ಹೀಗೆ ಮೋಸ ಮಾಡ್ಬೇಡ ಚಿನ್ಮಯೀ....."

"ನಾನಾ.....? ನಾನ್ಯಾರಿಗೆ ಮೋಸ ಮಾಡ್ಲೀ.... ನಾನು ಯಾರನ್ನೂ ಪ್ರೀತಿಸ್ತಿಲ್ಲ."

"ಒಂದು ವೇಳೆ ಪ್ರೀತಿಸಿದ್ರೂ ಹೀಗೆ ಮಾಡಬೇಡ ಅಂತ ಹೇಳಿದೆ ಅಷ್ಟೇ."

"ಈಗ ಏನ್ಮಾಡ್ತಿದೀಯ ಕಿಶೋರ?"

"ಪೋಲೀಸ್ ಸ್ಟೇಷನ್‌ಗೆ ಹೋಗಿ ಬಂದೋನು ಅಂತ ತಿಳಿದ್ಮೇಲ್ಲೇ ನನ

ಗ್ಯಾರು ಕೆಲ್ಸ ಕೊಡ್ತಾರೆ ಹೇಳು? ಮನೇಲಿ ಅನ್ನ ದಂಡವಾಗಿ ಬಿದ್ದಿದ್ದೀನಿ. ಎಲ್ಲಾದ್ರೂ ದೇಶಾಂತರ ಹೊರಟು ಹೋಗೋಣ ಅಂತನ್ನಿಸುತ್ತೆ. ಆದ್ರೆ ಎಲ್ಲಿ ಹೋದ್ರೂ ಏನೂ ಉಪಯೋಗವಿಲ್ಲ. ಆತ್ಮಹತ್ಯೆ ಮಾಡ್ಕೊಬೇಕು ಅಷ್ಟೇ....." ಚಿನ್ಮಯಿಗೆ ವ್ಯಥೆ ಯಾಯಿತು.

"ಬೇಜಾರು ಮಾಡ್ಕೋಬೇಡ ಕಿಶೋರ..... ಅಪ್ಪನ ಹತ್ರ ಮಾತಾಡು. ಅವರು ನಿನಗೆ ಕೆಲಸ ಕೊಡಿಸಿದ್ರೂ ಕೊಡಿಸಬಹುದು. ಅವರಿಗೆ ಬೇಕಾದಷ್ಟು ಪರಿಚಯಸ್ಥ ರಿದ್ದಾರೆ."

"ನೋಡೋಣ.... ಸದ್ಯಕ್ಕಂತೂ ಕೇಳುವ ಮನಸ್ಸಿಲ್ಲ..."

"ನಾನಿನ್ನು ಬರ್ಲೇನೋ ಕಿಶೋರ... ಹೊತ್ತಾಯ್ತು...."

"ಆಗ ಈಗ ಬರ್ತಾ ಇರೇ ಚಿನ್ಮಯೀ..... ನೀನಾದ್ರೂ ನನ್ನನ್ನ ಅರ್ಥ ಮಾಡ್ಕೊಂಡಿದೀಯಲ್ಲ..... ಅಷ್ಟು ಸಾಕು." ಚಿನ್ಮಯಿ ಹೊರಬಂದಳು.

* * * .

ಪತ್ರವನ್ನು ನೋಡಿ, ಭಟ್ಟ ಪಕ್ಕಕ್ಕೆ ತೆಗೆದಿಟ್ಟ. ಅದರ ಬಗ್ಗೆ ಚಿಂತಿಸಲಿಲ್ಲ. ಮತ್ತೆ ಪ್ರೇಮಾ ಶ್ರೀಕರನೊಡನೆ ಹೇಳಿ ಕಳಿಸಿದಾಗ, "ಏನೂ ಬೇಡ..... ಅವಳೇ ಇಲ್ಲಿ ಬರಲಿ. ಅಲ್ಲಿ ಹೋಗಿ ಮಗಳ ಮೇಲೆ ಭಾರವಾಗಿರೋದೇನೂ ಬೇಡ." ಎಂದು ಬಿಟ್ಟ. ಪ್ರೇಮಾ ಭವಾನಿಗೆ ಹಾಗೇ ಪತ್ರವನ್ನು ಬರೆದಳು.

"ನಿನ್ನ ಭಾವಂಗೆ ನನ್ನನ್ನ ಕಳಿಸೋಕೆ ಇಷ್ಟವಿಲ್ಲ. ಅವಳೇ ಇಲ್ಲಿಗೆ ಬರಲಿ. ಎಷ್ಟು ದಿನಗಳಾದರೂ ಇದ್ದು ಹೋಗಬಹುದು." ಅಂತ.

ದಿನೇಶನೇ ವಿದ್ಯಾಳನ್ನು ಕರೆತಂದುಬಿಟ್ಟ. ವಿದ್ಯಾ ತುಂಬಾ ಇಳಿದು ಹೋಗಿ ದ್ದಳು. ಆದರೂ ಮುಖದಲ್ಲಿ ತಾಯಿಯಾಗಲಿರುವ ಕಳೆ ಹೊಮ್ಮುತ್ತಿತ್ತು.

"ಡಾಕ್ಟ್ರು ಏನಂದ್ರೆ? ಯಾಕೆ ಇಷ್ಟು ಇಳಿದು ಹೋಗಿದೀಯ? ಸರಿಯಾಗಿ ಊಟ, ತಿಂಡಿ ಮಾಡ್ತಿದ್ಯೋ ಇಲ್ಲವೋ?" ತಾಯಿ ಕಳಕಳಿಯಿಂದ ಕೇಳಿದಳು.

"ಸೇರೋದೇ ಇಲ್ಲಮ್ಮ. ಸೇರದಿದ್ರೆ ಹೇಗೆ ತಿನ್ನೋದು. ಕಷ್ಟಪಟ್ಟು ತಿಂದ್ರೆ ಎಲ್ಲಾ ಆಚೆಗೆ ತತ್‌ಕ್ಷಣವೇ ಬಂದು ಬಿಡುತ್ತಿತ್ತು."

"ಅದು ಹಾಗೇನೇ.... ಶಾರದಮ್ಮಂಗೆ ಹೇಳ್ತೀನಿ. ನಿನಗೇನೇನು ಬೇಕೋ ರುಚಿ ರುಚಿಯಾಗಿ ತಿಂಡಿಗಳನ್ನು ಕೇಳಿ ಮಾಡಿಸ್ಕೊಂಡು ತಿನ್ನು.... ಇಲ್ದಿದ್ರೆ ಹೊಟ್ಟೆ ಲಿರೋ ಮಗುವಿನ ಬೆಳವಣಿಗೆ ಸರಿಯಾಗಿ ಆಗುಲ್ಲ."

"ಹಾಗೆಲ್ಲಾ ಹೆದರಿಸಬೇಡಮ್ಮ.... ನನಗೆ ಹುಟ್ಟುವಮಗು, ನಮ್ಮಿಬ್ಬರಿಗಿಂತ ಚೆನ್ನಾಗಿರಬೇಕು....."

ಚಿನ್ಮಯಿ ಈ ಮಾತುಗಳನ್ನು ಆಲಿಸುತ್ತಿದ್ದವಳು ಮೂತಿ ಸೊಟ್ಟಗೆ ಮಾಡಿದಳು.

"ನಿನಗೇನೇ ಸಂಕ್ಟ? ನಿನಗೂ ಮದುವೆ ಆದ್ಮೇಲೆ ಇದ್ದದ್ದೇ..... ಈ ಸುಸ್ತು,

ಈ ಬಳಲಿಕೆ ಎಲ್ಲಾ ತಿಳೀತಾ?"

"ಅಯ್ಯೋ ಹೋಗೇ ಈ ಸಂಕ್ಟ ಎಲ್ಲಾ ನಿಂಗೇ ಇರಲಿ. ನನಗೆ ಮದುವೆಯೂ ಬ್ಯೇಡ ಮಕ್ಳೂ ಬೇಡ" ಎಂದು ಹೇಳಿ, ದಿನೇಶ ಕುಳಿತಿದ್ದೆಡೆಗೆ ಹೋಗಿ ಕುಳಿತಳು. ತಾನೇ ಮುಸಿ ಮುಸಿ ನಕ್ಕಳು.

"ಏನೇ ಚಿನ್ಮಯೀ ನಗ್ತಾ ಇದೀಯ....."

"ಏನೂ ಇಲ್ಲ. ಯಾಕೋ ನಗು ಬಂತು ನಕ್ಕೆ...."

"ನಾನು ಹೋಗಿ ಪ್ರಶಾಂತನ್ನ ಮಾತ್ನಾಡಿಸ್ಕೊಂಡ್ಬರ್ತೀನಿ.... ಸ್ವಲ್ಪ ನಂಜೊತೆ ಬರ್ತೀಯಾ?" ಅವನು ಕೇಳಿದ್ದೇ ತಡ, ಓ..... ಎನ್ನುತ್ತಾ ಎದ್ದು ನಿಂತಳು.

"ಅಕ್ಕಾ ಬೇಡ್ವಾ ಭಾವ?"

"ಬ್ಯೇಡ. ಅವಳಿಗೆ ಹೆಚ್ಚು ಆಯಾಸವಾಗಬಾರ್ದು ಅಂತ ಹೇಳಿದಾರೆ. ಪ್ರಶಾಂತಂಗೆ ಬಂದು ಮಾತಾಡ್ಸಿಕೊಂಡು ಹೋಗೋಕೆ ಹೇಳ್ತೀನಿ."

ಭಾವನ ಜತೆ ಹೆಜ್ಜೆ ಇಟ್ಟು ನಡೆದವಳಲ್ಲಿ ಏನೋ ಹೊಸ ಅನುಭವ. ರಸ್ತೆಯಲ್ಲಿ ಓಡಾಡುವವರ ಕಣ್ಣೆಲ್ಲಾ ನಮ್ಮಿಬ್ಬರ ಮೇಲೆ ಇದೆ ಅಂತೆನ್ನಿಸುತ್ತಿತ್ತು.

ಪ್ರಶಾಂತ ಭಾವನನ್ನು ಆತ್ಮೀಯವಾಗಿ ಮಾತನಾಡಿಸಿ ಉಪಚರಿಸಿದ. ಸುಗುಣಾ ತಿಂಡಿ, ಕಾಫಿಯನ್ನು ಮಾಡಿಕೊಟ್ಟಳು. ಚಿನ್ಮಯಿ ಭಾವನ ಮಾತುಗಳನ್ನೇ ಆಲಿಸುತ್ತಾ ಅವನನ್ನೇ ನೋಡುತ್ತಾ ಕುಳಿತಿದ್ದಳು. ಪ್ರಶಾಂತ ಮುಜುಗರಗೊಂಡ.

"ದಿನೇಶ ಏನಂದ್ಕೊಳ್ಳಲ್ಲ.... ಚಿನ್ಮಯಿ ಯಾಕೆ ಹೀಗಾಡ್ತಾ ಇದಾಳೆ?"

"ಚಿನ್ಮಯೀ ನೀನು ಮನೆಗೆ ಹೋಗು. ಭಾವ ಇನ್ಸ್ವಲ್ಪ ಹೊತ್ತಿಬಿಟ್ಟು ಬರ್ತಾರೆ...."

"ನೀನು ಹೋಗು ಚಿನ್ಮಯಿ..... ಓದೋದು ಇರುತ್ತೋ ಏನೋ ನಿಂಗೆ" ದಿನೇಶನೂ ಹೇಳಿದಾಗ ಅವಳು ಬೇಸರದಿಂದ ನುಡಿದಳು –

"ಅದೇನೂ ಇಬ್ರೂ ನನ್ನನ್ನ ಓಡಿಸೋಕೆ ನೋಡ್ತಿದೀರಿ?"

"ದೊಡ್ಡೋರಿಬ್ರು ಮಾತಾಡ್ತ ಇರೋವಾಗ, ನಿನ್ನಂಥ ಚಿಕ್ಕೋಳಿಗೆ ಇಲ್ಲೇನು ಕೆಲ್ಸ? ಅಲ್ವಾ ಸಾರ್?" ಪ್ರಶಾಂತ ದಿನೇಶನನ್ನು ನೋಡಿ ಹೇಳಿದ. ದಿನೇಶ ಸುಮ್ಮನೆ ನಕ್ಕ. ಚಿನ್ಮಯಿ ಪ್ರಶಾಂತನನ್ನು ಅಣಕಿಸಿ "ಬರ್ತೀನಿ ಅತ್ಗೆ" ಎಂದು ಕೂಗಿ ಹೇಳಿ, ಹೊರಬಂದಳು.

* * *

"ಅಮ್ಮಾ..... ಚಿನ್ಮಯಿ ತುಂಬಾ ಬದಲಾಯಿಸಿ ಹೋಗಿದಾಳೆ..... ಕಾಲೇಜ್ಗೆ ಬಂದ್ಮೇಲೆ ಅವಳಿಗೆ ಸಿಕ್ಕಾಬಟ್ಟೆ ಜಂಭ ಬಂದ್ಬಿಟ್ಟಿದೆ." ವಿದ್ಯಾ ಆಕ್ಷೇಪಣೆ ಮಾಡಿದಳು.

"ನಿಂಗೇ ಜಂಭ ಬಂದ್ಬಿಟ್ಟಿರೋದು. ಮದ್ವೆ ಆದ್ಮೇಲೆ ಭಾವನ ಪ್ರೀತೀಲಿ, ನಮ್ಮನ್ನೆಲ್ಲಾ ಮರೆತೇ ಬಿಟ್ಟಿರೋಳು ನೀನು."

"ನೋಡಮ್ಮ ಹೇಗಾಡ್ತಾಳೆ.....?"

"ನೀನು ಸುಮ್ನಿರು ವಿದ್ಯಾ. ಅವಳ್ಹತ್ರ ಏನ್ಮಾತು? ನೀನು ಸುಮ್ನೆ ಮನಸ್ಸನ್ನ ಕೆಡಿಸ್ಕೋಬೇಡ." ಚಿನ್ಮಯಿ ತಾಯಿಯನ್ನು ದುರುದುರನೆ ನೋಡಿದಳು.

ಅಕ್ಕ ಬಸುರಿ. ಅದಕ್ಕೆ ಅಮ್ಮನಿಗೆ ವಿಶೇಷ ಅಕ್ಕರೆ.... ಜತೆಗೆ ಹಿರಿಮಗಳು.... ಮೊದಲ್ನಿಂದ ಒಂದು ತೂಕ ಪ್ರೀತಿ ಅವಳ್ಮೇಲೆ. ನನ್ನನ್ನ ಕಂಡರೆ ಅಮ್ಮನಿಗೆ ಅಷ್ಟ ಕ್ಕಷ್ಟೇ ಎಂಬ ತೀರ್ಮಾನಕ್ಕೆ ಬಂದಳು.

"ಅಮ್ಮಾ ನಾನು ಸ್ವಲ್ಪ ನನ್ನ ಫ್ರೆಂಡ್ ಮನೆಗೆ ಹೋಗ್ಬರ್ತೀನಮ್ಮಾ...." ಎಂದು ಹೊರಟವಳನ್ನು ವಿದ್ಯಾ ತಡೆದಳು.

"ಅಪ್ಪಾ ಬೈಯುಲ್ವೇನೇ.....? ಅದ್ಯಾರೇ ನಿನ್ನ ಫ್ರೆಂಡು......"

"ನಿಂಗ್ಯಾಕೆ ಅದೆಲ್ಲಾ..... ನನ್ನ ಫ್ರೆಂಡ್ ಮನೆಗೆ ನಾನು ಹೋಗ್ತಾ ಇರೋದು..... ನಿನ್ನ ಫ್ರೆಂಡ್ ಮನೆಗಲ್ಲ. ನೀನು ಸ್ವಲ್ಪ ಸುಮ್ನಿರು" ಚಿನ್ಮಯಿ ಚಪ್ಪಲಿ ಮೆಟ್ಟಿದಳು.

"ಇದೇನಮ್ಮ..... ಇವಳು ಅಪ್ಪಂಗೆ ಹೆದರೋದೇ ಇಲ್ವಲ್ಲ. ನನ್ನನ್ನ ಮನೆ ಮುಂಬಾಗಿಲಿಗೆ ಬಂದು ನಿಲ್ಲುಕ್ಕೆ ಬಿಡ್ತಿರಲಿಲ್ಲ ಅಪ್ಪ..... ನಾನೆಂದಾದ್ರೂ ಯಾರಾದ್ರೂ ಫ್ರೆಂಡ್ ಮನೆಗೆ ಹೋಗಿದ್ನಾ?"

"ಅವರ್‍ಗೆ ಗೊತ್ತಾದ್ರೆ ಇವತ್ತೂ ಬೈತಾರೆ....ಅವರ್‍ಗೆ ಕಾಣದ್ಹಾಗೆ ಹೋಗ್ತಾಳೆ...... ಮನೇಲಿ ಗಂಡು ಮಕ್ಕಳೂ ಇಲ್ಲ. ಏನ್ಮಾಡೋದು ಹೇಳು.... ಅಲ್ಲದೆ ಇವಳ ಸೊಗಸು ಜಾಸ್ತಿಯಾಗಿದೆ. ಫ್ಯಾಷನ್ನು ಜಾಸ್ತಿಯಾಗಿದೆ. ಏನಾದ್ರೂ ಹೇಳಿದ್ರೆ ಮಾತಿಗೆ ಮಾತನ್ನಾಡ್ತಾಳೆ.... ನಾನೂ ಸುಮ್ಮನಾಗಿ ಬಿಟ್ಟಿದೀನಿ."

"ಅಪ್ಪಂಗೆ ಹೇಳ್ಬಾರ್ದು?"

"ಅವ್ರಿಗೆ ಹೇಳಿದ್ರೆ ಮೊದಲು ನನ್ನನ್ನೇ ಅನ್ನೋದು. ಅವ್ರು ಕಾಲೇಜಿಗೆ ಹೋಗೋದು ಬೇಡಾಂತ ಅನ್ನಬಹುದು. ಮನೇಲಿದ್ದು ಏನ್ಮಾಡ್ತಾಳೆ ಹೇಳು. ಮದುವೆ ಮಾಡೋಣಾಂತಂದ್ರೆ ಇನ್ನೂ ಚಿಕ್ಕೋಳಲ್ವೇನೇ?"

"ಪ್ರಶಾಂತಂಗಾದ್ರೂ ಹೇಳ್ಬೇಕಾಗಿತ್ತು."

"ಅವನಿಲ್ಲಿ ಹತ್ತಿರ ಬಂದಿದಾನೆ ಅಂತ ಅಷ್ಟೇ.... ನಮ್ಮ ಮನೆಯ ಯಾವ ವಿಷಯಕ್ಕೂ ಅವನು ತಲೆ ಹಾಕುಲ್ಲ. ನಿಂಗೊತ್ತಾ ಅವನ ಹೆಂಡ್ತೀನೂ ಬಸ್ರಿ....."

"ಹೌದೇನಮ್ಮ..... ನಾನೂ ಅತ್ಗೇನ ನೋಡಿ ಮತಾಡಿಸ್ಬೇಕಲ್ಲ.... ಅವ್ರು ಬರೋಲ್ವಾ?"

"ಒಂದೆರಡು ದಿನ ಕಳೆದ್ಮೇಲೆ ಹೋಗೂವಂತೆ. ಅವನು ಅವಳನ್ನು ಕಳಿಸುಲ್ಲ."

* * *

ಅಧ್ಯಾಯ – ಇಪ್ಪತ್ತಾರು

ಚಿನ್ಮಯಿಗೆ ಕಿಶೋರನ ಸೆಳೆತ

ಚಿನ್ಮಯಿ ಸೀದಾ ಕಿಶೋರನನ್ನು ಕಾಣಲು ಬಂದಳು. ಕಾಮಾಕ್ಷಿ ಎದುರಾದಳು.

"ಅತ್ತೆ, ಅಕ್ಕ ಬಂದಿದ್ದಾಳೆ. ನೀವು ಬರಬೇಕಂತೆ...."

"ಹೌದೇನೇ ಚೆನ್ನು, ಯಾವಾಗ ಬಂದಳು ನಿಮ್ಮಕ್ಕ?"

"ನಿನ್ನೆ ಸಾಯಂಕಾಲ ಬಂದಳು....ಭಾವನೂ ಬಂದಿದ್ದಾರೆ..."

"ಮನೇಲಿ ಯಾರಿಲ್ಲ....ಕಿಶೋರ ಬಂದ್ಮೂಕ್ಲೇ ಬಂದ್ಬಿಡ್ತೀನಿ....ಬಾ ಒಳ್ಗೆ ಕೂತ್ಕೋ, ಅವನಿನ್ನೇನು ಬರಬಹುದು. ಇಲ್ಲೇ ಅಂಗಡಿಗೆ ಹೋಗಿದಾನೆ."

"ಅತ್ತೆ ನಿಮ್ಮ ಮಗಳು ಏನು ಓದುತ್ತಾಳೆ?"

"ಬಿ.ಕಾಂ.ಗೆ ಸೇರ್ಕೊಂಡಿದಾಳೆ. ನಮ್ಮ ಭಾವನ ಮನೇಲಿ ಬಿಟ್ಟಿದೀನಿ. ಅವ್ರಿಗೆ ಮಕ್ಕಳಿಲ್ಲ... ಅಲ್ಲೇ ಓದಿಸ್ತೀನಿ ಅಂತಂದ್ರು..... ಮೊದಲ್ನಿಂದ್ಲೂ ಅಷ್ಟೇ–ಅವಳು ಅಲ್ಲೇ. ವಾರಕ್ಕೊಂದು ಸಾರಿ ಬಂದ್ರೆ ಬಂದ್ಲು, ಇಲ್ದಿದ್ರೆ ಇಲ್ಲ. ಇವ್ನೊಬ್ನೆ ನನ್ತಲೆ ತಿನ್ನೋಕೆ ನ್ನ ಕಾಲ್ಬುಡ್ಡಲ್ಲಿ ಬಿದ್ದಿರೋದು...."

"ಯಾಕ್ಹಂಗಂತೀರಾ ಅತ್ತೆ....? ನೀವು ಅವನನ್ನ ಉದಾಸೀನ ಮಾಡ್ತಿದೀರಾ....."

"ಹೂಂ ಕಣೇ.... ನೀನೊಬ್ಳು ಬಾಕಿ ಇದ್ದೆ ನನ್ನನ್ನ ಅನ್ನೋಕೆ..... ಏಳು..... ಹೋಗೋಣ. ಬಂದ್ರೆ ಬಾಗ್ಲಲ್ಲಿ ಕೂತಿರ್ತಾನೆ...."

"ಅತ್ತೇ..... ಮಾವ ಮನೇಲಿ ಇರುಲ್ವಲ್ಲಾ ಎಲ್ಲಿಗೆ ಹೋಗ್ತಾರೆ?"

"ಅವ್ರು ಒ.ಟಿ. ಮಾಡ್ತಾರೆ. ಇಲ್ದಿದ್ರೆ ನಮ್ಮೆಲ್ರ ಹೊಟ್ಟೆ ತುಂಬಬೇಕಲ್ಲ. ಇದನ್ನೆಲ್ಲ ನೀನ್ಯಾಕೆ ಕೇಳ್ತೀಯಾ? ನಡೀ ಹೊತ್ತಾತು."

"ಅತ್ತೆ..... ನೀವು ಹೋಗ್ಬನ್ನಿ. ನಾನು ಇಲ್ಲೇ ನನ್ನ ಫ್ರೆಂಡ್ ಮನೆಗೆ ಹೋಗ್ಬೇಕು." ಎಂದಳು. ಕಾಮಾಕ್ಷಿ ಮನೆಗೆ ಬೀಗ ಜಡಿದು ಹೊರಟಳು. ಚಿನ್ಮಯಿ ಮತ್ತೆ ಗೇಟಿನೊಳಗೆ ಬಂದು ಮೆಟ್ಟಿಲ ಮೇಲೆ ಕುಳಿತಳು. ಅವಳಿಗೆ ಬೇಸರವಾಗಿ ಇನ್ನೇನು ಹೊರಡಬೇಕು ಎನ್ನುವಾಗ ಕಿಶೋರ ಬಂದ.

"ಏನೇ ಚಿನ್ಮಯೀ, ಇಲ್ಯಾಕೆ ಕೂತಿದೀಯ.... ಅಮ್ಮಾ ಮನೇಲಿಲ್ವಾ?"

"ಅತ್ತೆ ನಮ್ಮನೆಗೆ ಹೋದ್ರು, ನಾನು ನಿಂಗೋಸ್ಕರಾನೇ ಕಾಯ್ತಿದ್ದೆ...." ಅವನೂ ಅಲ್ಲೇ ಮೆಟ್ಟಿಲ ಮೇಲೆ ಅವಳ ಪಕ್ಕ ಕುಳಿತ.

"ನಿಮ್ಮಕ್ಕನೂ ಹೀಗೇ ನನಗೋಸ್ಕರ ಬಂದು ಕಾಯ್ತಿರುತ್ತಿದ್ದಳು." ಎಂದು

ಹೇಳಿದ.

"ಅಕ್ಕ ಊರಿಗ್ಬಂದಿದಾಳೆ....."

"ಹೌದಾ? ಹೇಗಿದಾಳೆ?"

"ಕಿಶೋರ ನೀನ್ಯಾಕೋ ಮನೆಗೆ ಬರುಲ್ಲ.....?"

"ನಿಮ್ಮಪ್ಪಂಗೆ ನಾವೆಲ್ಲಾ ಬಂದ್ರೆ ಸರಿ ಹೋಗುತ್ತಾ?"

"ನಿಮ್ಮಮ್ಮ ಸರಿ ಹೋಗ್ತಾರೆ! ನೀನ್ಯಾಕೆ ಸರಿ ಹೋಗುಲ್ಲ! ಒಂದ್ಸಾರಿ ಬಂದ್ಹೋಡು."

"ನಿಮ್ಮಕ್ಕ ಊರಿಗೆ ವಾಪಸ್ಸು ಹೋಗ್ಲಿ. ಆಮೇಲೆ ಎಂದಾದ್ರೂ ಬರ್ತೀನಿ. ನನಗೆ ಅವಳನ್ನು ನೋಡಿ ಮಾತನಾಡುವ ಮನಸ್ಸಿಲ್ಲ."

"ನಾನಿನ್ನು ಬರ್ಲ್ಲಾ? ಫ್ರೆಂಡ್ ಮನೆಗೆ ಹೋಗ್ತೀನಿ ಅಂತ ಹೇಳಿ ಬಂದಿದ್ದೆ."

"ಬಾ..... ನಾನೂ ನಿಮ್ಮ ಮನೆ ತನಕ ಬರ್ತೀನಿ." ಕಿಶೋರ ಅವಳನ್ನು ರಸ್ತೆಯ ತಿರುವಿನಲ್ಲಿ ಬಿಟ್ಟು ವಾಪಸ್ಸು ಹೋದ. ಚಿನ್ಮಯಿ ಯಾವುದೋ ಹಾಡೊಂದನ್ನು ಗುನುಗುನಿಸುತ್ತಾ ಮನೆಯೊಳಗೆ ಬಂದಳು. ಸೋಫಾದ ಮೇಲೆ ಕುಳಿತಿದ್ದ ದಿನೇಶ ಅವಳ ಕಡೆ ತಿರುಗಿ ನೋಡಿದ. ಇವಳಿಗೆ ಕಚಗುಳಿ ಇಟ್ಟಂತಾಗಿತ್ತು.....

"ಈಚೆಗೆ ಯಾವ ಪಿಕ್ಚರ್‌ಗೆ ಹೋಗಿದ್ರಿ ಭಾವ?"

"ಯಾವುದೋ ಒಂದೆರಡು, ಹೆಸರೇ ನೆನಪಿಲ್ಲ. ನಿಮ್ಮಕ್ಕ ಆಸೆ ಪಟ್ಲು ಅಂತ ಕರ್ಕ್ಕೊಂಡ್ಹೋಗಿದ್ದೆ. ಏನೇನೂ ಚೆನ್ನಾಗಿರ್ಲಿಲ್ಲ."

"ನಿಮಗೆ ಎಂಥಾ ಸಿನೆಮಾ ಇಷ್ಟ...?"

"ಸಿನೆಮಾ ತಮಾಷೆಯಾಗಿರಬೇಕು. ದುಡ್ಡು ಕೊಟ್ಟು ಟಿಕೆಟ್ ಕೊಂಡು, ಅಲ್ಲಿ ಕೂತ್ಕೊಂಡು ಅಳೋರನ್ನ ಕಂಡ್ರಾಗುಲ್ಲ ನನಗೆ" ಬಾಗಿಲಿಗೆ ಒರಗಿ ನಿಂತಿದ್ದ ವಿದ್ಯಾಳನ್ನು ಕಂಡು ಹೇಳಿದ.

"ನಾನೇನೂ ಅಳುಲ್ಲ. ನಿಮ್ಮ ಭಾವ ಸುಳ್ಳು ಹೇಳ್ತಾರೆ. ಆ ದರಿದ್ರ ಸಿನೆಮಾ ನೋಡಿ ತಲೆನೋವು ಬಂತು ಅಂತ ಅತ್ತಿದ್ದು ನಾನು."

"ನೋಡು ನಿಮ್ಮಕ್ಕನ್ನ? ಹೇಗೆ ಮಾತು ತಿರುಗಿಸ್ತಾಳೆ.... ನಿಮ್ಮಕ್ಕ ನನ್ನನ್ನ ವಿಪರೀತ ಗೋಳು ಹೊಯ್ದುಕೊಳ್ಳುತ್ತಿದ್ದಳು. ಇನ್ನು ಮುಂದೆ ಹುಟ್ಟುವ ಮಗು ಅವಳನ್ನು ಗೋಳು ಹೊಯ್ದುಕೊಳ್ಳುತ್ತೆ....."

"ಏನಿಲ್ಲ. ಬರೀ ಸುಳ್ಳು.... ನಾನ್ಯಾವಾಗ ನಿಮ್ಮನ್ನು ಗೋಳು ಹೊಯ್ಕೊಂಡೆ...."

"ಅದೇ ಅವತ್ತು..... ಜೂಗೆ ಹೋಗಿದ್ದಾಗ, ನನಗೂ ಅಂಥದೇ ಒಂದು ಪುಟ್ಟ ಕರಡಿ ಮರಿ ಬೇಕು ಅಂತ ಕೇಳಲಿಲ್ವಾ?"

ವಿದ್ಯಾ ಗಂಡನ ಬೆನ್ನ ಮೇಲೆ ಹಗುರವಾಗಿ ಗುದ್ದಿದಳು..... "ನಮ್ಮಿಬ್ಬರ ನಡುವೆ ನಡೆದ ಮಾತನ್ನೆಲ್ಲ ನೀವ್ಯಾಕೆ ಅವಳಿಗೆ ಹೇಳ್ಬೇಕು.....ಎದ್ದು ಹೋಗೇ.....

ಅವರ್ಗಂಗೂ ಎಲ್ಲಾ ತಮಾಷೆ.... ನಿನ್ಗೆ ಓದೋದಿಲ್ವಾ....?"

"ನೋಡೀ ಭಾವ ನಿಮ್ಹೆಂಡ್ತಿ ಹೇಗೆ ಸಿಡುಕ್ತಾಳೆ! ಏನೂಂತ ಮದ್ವೆಯಾದ್ರೋ ಇವಳನ್ನು ನೀವು........ ಬರೀ ಸಿಡುಕು....." ಎನ್ನುತ್ತಾ ಒಳಗೆದ್ದು ಹೋದಳು. ಅವರಿಬ್ಬರ ಸರಸ, ಕಲಹ ಪ್ರಿಯವಾಗಿತ್ತು. ಅದನ್ನೇ ಮೆಲುಕು ಹಾಕುತ್ತಾ, ನೆಪ ಮಾತ್ರಕ್ಕೆ ಕೈಯಲ್ಲಿ ಒಂದು ಪುಸ್ತಕವನ್ನು ಹಿಡಿದಳು.

ಅದೇ ರಾತ್ರಿ ದಿನೇಶ ಊರಿಗೆ ವಾಪಸ್ಸು ಹೊರಟ. ಹೊರಡುವ ಮೊದಲು ವಿದ್ಯಾಳನ್ನು ರೂಮ್‌ಗೆ ಕರೆದು, ಆಲಂಗಿಸಿಕೊಂಡು, ದೀರ್ಘವಾಗಿ ಚುಂಬಿಸಿದ. "ಆದಷ್ಟು ಬೇಗ ಬಂದು ಬಿಡು ವಿದ್ಯಾ.... ನನಗೆ ನಿನ್ನನ್ನು ಬಿಟ್ಟಿರಲು ಸಾಧ್ಯವಿಲ್ಲ."

"ನನಗೂ ನಿಮ್ಮನ್ನು ಬಿಟ್ಟಿರುಕ್ಕೆ ಕಷ್ಟವಾಗುತ್ತೆ ರೀ..... ಈ ಮಗುಗೇನು ಅರ್ಜೆಂಟು ಇತ್ತು ನಮ್ಮಿಬ್ಬರ ಮಧ್ಯೆ ಬರೋಕೆ.....?"

"ಬೇಜಾರು ಮಾಡ್ಕೋಬೇಡ..... ಚಿನ್ನಾ..... ಇದು ನಮ್ಮಿಬ್ಬರ ಗಾಢ ಪ್ರೀತಿಯ ಕುರುಹು" ಎನ್ನುತ್ತಾ ಬಾಗಿ ಅವಳ ಹೊಟ್ಟೆಯನ್ನು ಸವರಿ ಮುತ್ತಿಟ್ಟ.

"ಯಾರಾದ್ರೂ ನೋಡಿದ್ರೆ....." ವಿದ್ಯಾ ಹಿಂದೆ ಸರಿದಳು.

"ನೋಡಿದ್ರೆ ನೋಡ್ಲಿ ಬಿಡು. ನನ್ನಕಷ್ಟ ನಂಗೊತ್ತು... ನೀನು ಬರೋವರೆಗೂ ನಾನು ಈ ಸವಿ ನೆನಪಿನಲ್ಲಿ ಸಮಯವನ್ನು ಕಳೆಯಬೇಕು" ಮತ್ತೊಮ್ಮೆ ಮುತ್ತಿಟ್ಟ. ವಿದ್ಯಾ ಅವನನ್ನು ತಬ್ಬಿಕೊಂಡು ಅತ್ತಳು.

"ನಾನು ನಿಮ್ಜೊತೆ ಬಂದ್ಬಿಡ್ತೀನಿ.... ನನಗೆ ನೀವಿಲ್ಲದೆ ಇರೋಕಾಗ್ಲುಲ್ಲ. ಹೇಗೂ ಅಮ್ಮನ್ನ ನೋಡಾಯ್ತಲ್ಲ...."

"ನಿನ್ಮಾತನ್ನ ಕೇಳಿದ್ರೆ ಯಾರಾದ್ರೂ ನಗ್ತಾರೆ ಅಷ್ಟೇ. ಇನ್ನು ನಾಲ್ಕು ದಿನಕ್ಕೆ ಪ್ರಶಾಂತ, ಅವನ ಹೆಂಡ್ತಿ ಬೆಂಗ್ಳೂರ್ಗೆ ಬರ್ತಿದಾರಂತೆ. ಅವರ ಜತೇಲಿ ಬಂದು ಬಿಡು." ಮನಸ್ಸಿಲ್ಲದ ಮನಸ್ನಲ್ಲಿ ವಿದ್ಯಾ ಒಪ್ಪಿಕೊಂಡಳು.

"ಅತ್ಗೇನೂ ಬಸ್ರಿಯಂತೆ. ಅಣ್ಣ ಹೇಳಿದ್ನಾ?"

"ಇಲ್ಲ. ಹೇಳ್ಲಿಲ್ಲ. ನೋಡಿದ್ರೆ ಹಾಗೆನ್ನಿಸುಲ್ಲ....."

"ಥೂ, ನೀವ್ಯಾಕೆ ಅತ್ಗೇನ ನೋಡ್ತೀರಿ....? ನನ್ನನ್ನ ನೋಡಿದ್ರೂ ಗೊತ್ತಾಗುಲ್ಲ ಅಲ್ವಾ!"

"ನಾನೇನೂ ನಿಮ್ಮ ಅತ್ಗೇನ ಆ ರೀತಿ ನೋಡ್ಲಿಲ್ಲ. ಕಾಫಿ, ತಿಂಡಿ ತಂದಿಟ್ಟಾಗ ಮಾತನಾಡಿಸ್ದೆ ಅಷ್ಟೇ.... ಪ್ರಶಾಂತನೂ ಹೇಳಲಿಲ್ಲ. ಅದಕ್ಕೆ ಕೇಳಿದೆ ಅಷ್ಟೇ. ನಾನಿನ್ನು ಬರ್ತೀನಿ ಹೊತ್ತಾಗುತ್ತೆ. ನಿನ್ನ ಆರೋಗ್ಯದ ಕಡೆ ಗಮನಕೊಡು. ಸುಮ್ಮನೇ ಇಲ್ಲದ್ದಕ್ಕೆಲ್ಲ ತಲೆ ಕೆಡಿಸ್ಕೋಬೇಡ. ಶಾರದಮ್ಮ ಅಡುಗೆ, ತಿಂಡಿ ಚೆನ್ನಾಗಿ ಮಾಡ್ತಾರೆ. ಚೆನ್ನಾಗಿ ತಿನ್ನು, ನಿದ್ದೆ ಮಾಡು. ಮುಂದಿನ ವಾರ, ನಾನು ನಿನ್ನನ್ನು ನೋಡುವ ವೇಳೆಗೆ, ನಿನ್ನ ಕೆನ್ನೆ ಮುಂಚಿನಂತೆ ಗುಂಡು ಗುಂಡಗಿರಬೇಕು. ನನಗೆ ನಿನ್ನ

ಗುಂಡು ಕೆನ್ನೆಗಳು ಅಂದ್ರೆ ಬಹಳ ಇಷ್ಟ" ಎನ್ನುತ್ತಾ ಎರಡೂ ಕೆನ್ನೆಗಳಿಗೆ ತುಟಿಯನ್ನು ಸೋಕಿಸಿದ.

"ಹೂಂ. ಹೊರಡಿ, ಹೊರಡಿ..... ಮುದ್ದು ಅತಿಯಾಯ್ತು..." ವಿದ್ಯಾ ಅವನನ್ನು ಹೊರಕ್ಕೆ ತಳ್ಳಿದಳು. ಬಾಗಿಲ ಬಳಿ ನಿಂತಿದ್ದ ಚಿನ್ಮಯಿ ಹಿಂದಕ್ಕೆ ಸರಿದಳು. ಓರೆ ಮಾಡಿದ್ದ ಬಾಗಿಲ ಹಿಂದೆ ನಿಂತು ಅವರಿಬ್ಬರ ಮಾತುಗಳನ್ನು ಕದ್ದು ಕೇಳಿಸಿಕೊಂಡಿದ್ದಳು. ತಮ್ಮ ಮಾತುಗಳಲ್ಲಿ ಮಗ್ನರಾಗಿದ್ದ ಅವರಿಬ್ಬರಿಗೂ ಚಿನ್ಮಯಿ ಅಲ್ಲಿ ನಿಂತಿರಬಹುದೆಂಬ ಅನುಮಾನ ಕೂಡ ಇರಲಿಲ್ಲ.

* * *

ನಾಲ್ಕು ದಿನ ಕಳೆಯುವಷ್ಟರಲ್ಲಿ ವಿದ್ಯಾಳ ಬೇಸರ ಜಾಸ್ತಿಯಾಗಿತ್ತು. ಊಟ, ತಿಂಡಿ, ನಿದ್ದೆ ಆರಾಮಕ್ಕೆ ಏನೂ ಕೊರತೆ ಇರಲಿಲ್ಲ. ಆದರೆ ಹಗಲೂ – ರಾತ್ರಿ ದಿನೇಶನ ನೆನಪು ಕಾಡಿಸುತ್ತಿತ್ತು. ತಾನು ಬರಲೇಬಾರದಾಗಿತ್ತು ಎಂದು ಅನೇಕ ಬಾರಿ ಅಂದುಕೊಳ್ಳುತ್ತಿದ್ದಳು. ಪ್ರಶಾಂತ ಮನೆಗೆ ಹೋಗಿ, ಅವನು ಯಾವಾಗ ಹೊರಡಲಿದ್ದಾನೆ ಎಂದು ಕೇಳಿ ತಿಳಿದುಕೊಂಡಿದ್ದಳು. ಅವಳ ಚಡಪಡಿಕೆಯನ್ನು ಕಂಡು ಚಿನ್ಮಯಿ ತಮಾಷೆ ಮಾಡಿದ್ದಳು –

"ಪ್ರಪಂಚದಲ್ಲಿ ನೀನೊಬ್ಬೇ ಮದ್ವೆ ಆದೋಳ ಹಾಗೆ ಆಡ್ತಾ ಇದೀಯಲ್ಲ."

"ಇದೆಲ್ಲ ನಿಂಗೆ ಈಗ್ಲೇ ಗೊತ್ತಾಗುಲ್ಲ. ನಿನ್ನ ಮದ್ವೆ ಆದ್ಮೇಲೆ ತಿಳಿಯುತ್ತೆ. ಗಂಡನ್ನ ಬಿಟ್ಟು ಇರುವುದು ಎಷ್ಟು ಕಷ್ಟಾಂತ..."

"ಭಾವನ್ನ ಅಷ್ಟು ಪ್ರೀತಿಸ್ತೀಯ....?"

"ಹುಂ..... ನಾವು ಒಬ್ಬರನ್ನೊಬ್ರು ತುಂಬಾ ಪ್ರೀತಿಸ್ತೀವಿ."

"ನೀನು ಕಿಶೋರನನ್ನು ಪ್ರೀತಿಸ್ತಿದ್ದೆ ಅಲ್ವಾ?" ಏಟಿನಂತಿತ್ತು ಪ್ರಶ್ನೆ.

"ಕಿಶೋರ? ಯಾವ ಕಿಶೋರ? ನಾನು ಬೇರೆ ಯಾರನ್ನೂ ಪ್ರೀತಿಸಿರಲಿಲ್ಲ."

"ಸುಳ್ಯಾಕೆ ಹೇಳ್ತೀಯೇ ಅಕ್ಕ? ನೀನು ಕಿಶೋರನಿಗೆ ಬರೆದ ಪತ್ರಗಳು ನನ್ನ ಹತ್ರ ಇವೆ. ನಾನು ಅದನ್ನು ಓದಿದೀನಿ."

"ಸುಳ್ಳು.... ನಾನು ಯಾವ ಪತ್ರವನ್ನೂ ಬರೆದಿರಲಿಲ್ಲ." ಹಾಗೆ ಹೇಳಿದವೂ ಅವಳ ಮುಖ ವಿವರ್ಣವಾಗಿತ್ತು. ಕಿಶೋರನ ಹೆಸರನ್ನು ಕೇಳಿ ಏನೇನೋ ಆಯಿತು. ತಲೆ ತಿರುಗಿದಂತಾಗಿ ಕೆಳಗೆ ಬಿದ್ದು ಬಿಟ್ಟಳು.... ಚಿನ್ಮಯಿ ಭಯದಿಂದ ಕಿರುಚಿ ಕೊಂಡಳು. ಶಾರದಮ್ಮ, ಪ್ರೇಮಾ ಬೇಗ ಬಂದು ಬಿದ್ದಿದ್ದ ವಿದ್ಯಾಳನ್ನು ಎಬ್ಬಿಸಿ ಕೂರಿಸಿದರು. ಶ್ರೀಕರ ಹೋಗಿ ತಂದೆಗೆ ವಿಷಯವನ್ನು ತಿಳಿಸಿದ. ಕೆಲವೇ ನಿಮಿಷ ಗಳಲ್ಲಿ ವಿದ್ಯಾಳನ್ನು ಸಮೀಪದ ಆಸ್ಪತ್ರೆಗೆ ಸೇರಿಸಿದ್ದರು. ಸ್ವಲ್ಪ ಹೊತ್ತಿನಲ್ಲಿಯೇ ಅವಳಿಗೆ ಗರ್ಭಸ್ರಾವವಾಗಿ ಹೋಯಿತು. ಎಲ್ಲರಿಗೂ ತುಂಬಾ ಬೇಸರವಾಗಿತ್ತು.

ಭಟ್ಟ ಟ್ರಂಕ್‌ಕಾಲ್ ಮಾಡಿ, ಭವಾನಿಗೆ ವಿಷಯವನ್ನು ತಿಳಿಸಿದ. ಮಾರನೆಯ

ಬೆಳಗ್ಗೆಯ ಹೊತ್ತಿಗೆ ದಿನೇಶ ಬಂದ. ವಿದ್ಯಾ ಅವನನ್ನು ಕಂಡೊಡನೆ ಬಿಕ್ಕಿ ಬಿಕ್ಕಿ ಅತ್ತಳು. ಅವನೇ ಅವಳಿಗೆ ಸಮಾಧಾನ ಹೇಳಿದ.

"ನಾನು ಇನ್ನು ಈ ಊರಿನಲ್ಲಿರುಲ್ಲ ರೀ. ನನ್ನನ್ನು ಕರೆದುಕೊಂಡು ಹೋಗಿ" ಕೈ ಹಿಡಿದು ಬೇಡಿಕೊಂಡಳು.

"ಆಯ್ತು. ಕರ್ಕೊಂಡ್ಹೋಗ್ತೀನಿ. ನೀನು ಮೊದಲು ಅಳು ನಿಲ್ಲಿಸು." ಅವಳನ್ನು ಸಮಾಧಾನಗೊಳಿಸುವಷ್ಟರಲ್ಲಿ ಸಾಕು ಸಾಕಾಗಿತ್ತು. ಅವಳ ಆರೋಗ್ಯ ಸ್ವಲ್ಪ ಸುಧಾರಿಸಿತ್ತು. ಅವಳನ್ನು ಮನೆಗೆ ಕರೆ ತಂದರು. ಅವಳ ರೂಮ್‌ನಲ್ಲಿ ಯಾರೂ ಇಲ್ಲದ ಸಮಯ ವನ್ನು ನೋಡಿ ಚಿನ್ಮಯಿ ಒಳಗೆ ಬಂದಳು. ಅವಳನ್ನು ಕಂಡೊಡನೆ, ವಿದ್ಯಾ ಮುಖ ವನ್ನು ಕೈಗಳಿಂದ ಮುಚ್ಚಿಕೊಂಡಳು.

"ಹೊರಟ್ಹೋಗು. ನನ್ನ ಕಣ್ಣೆದುರಿಗೆ ಬರಬೇಡ."

"ತಪ್ಪಾಯ್ತು ಕಣೇ ಅಕ್ಕ. ನನ್ನ ಮಾತ್ನಿಂದ ನಿನಗೆ ಬೇಸರವಾಯ್ತು.....?" ವಿದ್ಯಾ ಮಾತಾಡಲಿಲ್ಲ. ಒಂದು ಗಳಿಗೆ ಅಲ್ಲಿಯೇ ನಿಂತಿದ್ದು ಚಿನ್ಮಯಿ ಹೊರಬಂದಳು.

"ಮಾವ, ನಾನು ವಿದ್ಯಾನ್ನ ಊರಿಗೆ ಕರ್ಕೊಂಡ್ಹೋಗ್ತೀನಿ." ದಿನೇಶನೆಂದ.

"ಹಾಗೇ ಮಾಡಿ." ಭಟ್ಟ ಉತ್ತರಿಸಿದ್ದ.

ಮಾತನಾಡಿಸಲೆಂದು ಕಾಮಾಕ್ಷಿ ಬಂದಿದ್ದಳು. "ಅತ್ತಿಗೆ, ನಾದಿನಿ ಒಂದೇ ಮನೆ ಬಾಗಿಲಿನಲ್ಲಿ ಓಡಾಡಿದೀರಿ. ಅದಕ್ಕೆ ಹೀಗಾಯ್ತು. ನೀನ್ಯಾಕೆ ಅಲ್ಲಿಗೆ ಹೋಗಿದ್ದೆ ವಿದ್ಯಾ?"

"ಅತ್ಗೇನ ನೋಡ್ಕೊಂಡು ಬರೋಕೆ ಹೋಗಿದ್ದೆ. ಹೋಗ್ಬಾರ್ದು ಅಂತ ಯಾರೂ ಹೇಳಿರಲಿಲ್ಲ."

"ಪ್ರೇಮಕ್ಕಂಗೆ ಇದೆಲ್ಲ ತಿಳೀದು. ಹೋಗ್ಲಿ ಬಿಡು.... ಇನ್ನೆರಡು ತಿಂಗ್ಳೊಳ್ಗೆ ನೀನು ಮತ್ತೆ ಬಸುರಿ ಆಗ್ತೀಯ. ಇದು ಸತ್ಯ...."

"ನಾನು ಮಾತ್ರ ಮತ್ತೆ ಈ ಊರಿಗೆ ಬರುಲ್ಲ. ನಾನು ಬಾಣಂತನವನ್ನು ಅಲ್ಲೇ ಮಾಡಿಸ್ಕೊಳ್ತೀನಿ....."

"ಬಾಣಂತನ ಎಲ್ಲಾದ್ರೆ ಏನೀಗ? ನಿನ್ನ ಆರೋಗ್ಯನ ಚೆನ್ನಾಗಿ ನೋಡ್ಕೋ. ನನಗೆ ನಿನ್ನ ಬಾಣಂತನ ಮಾಡ್ಬೇಕೂಂತ ಆಸೆ ಇತ್ತು...... ದೇವರಿಚ್ಛೇನೇ ಬೇರೆ ಇತ್ತು....."

ನಗುನಗುತ್ತಾ ಬಂದಿದ್ದ ವಿದ್ಯಾ, ಕಂದಿದ ಮುಖದೊಡನೆ ಊರಿಗೆ ವಾಪಸ್ಸು ಹೊರಟಳು. ದಿನೇಶನೇ ಜತೆಯಲ್ಲಿದ್ದುದರಿಂದ ಯಾರಿಗೂ ಹೆಚ್ಚು ಆತಂಕವಿರಲಿಲ್ಲ. ಟ್ಯಾಕ್ಸಿ ಹೊರಟಿತು. ಚಿನ್ಮಯಿ ಒಳಬಾಗಿಲಲ್ಲಿ ನಿಂತು ಬಿಕ್ಕಿ ಬಿಕ್ಕಿ ಅತ್ತಳು. ಅಕ್ಕನಿಗೆ ಹೀಗಾಗಲು ತಾನೇ ಕಾರಣ ಎಂದು ಪದೇ ಪದೇ ಅನ್ನಿಸತೊಡಗಿತ್ತು. ಅಕ್ಕನಿಗೆ ತನ್ನ ಮೇಲೆ ಕೋಪ ಬಂದಿದೆಯೆಂದು ತಿಳಿದು ವ್ಯಥೆ ಹೆಚ್ಚಾಗಿತ್ತು.

* * *

ವಿಷಯ ತಿಳಿದರೂ ಸಂತೋಷ ಬಂದು ಏನು ಮಾಡುತ್ತಾನೆಂದು ಅವನಿಗೆ ಯಾರೂ ವಿದ್ಯಾಳ ಬಗ್ಗೆ ತಿಳಿಸಲೇ ಇಲ್ಲ. ಆದರೆ ಅತ್ತಿಗೆ ಬಾಣಂತನಕ್ಕೆ ಬೆಂಗಳೂರಿಗೆ ಹೋಗಲಿರುವಳೆಂದು ತಿಳಿಸಿದ್ದಳು. ಸೊಸೆಗೆ, ಈಗಲಾದರೂ ಹಸುರು ಸೀರೆ, ಕುಪ್ಪಸವನ್ನು ತಂದು ಕೊಡಬೇಕೆಂದೆನಿಸಿತ್ತು. ಆದರೆ ಈ ವಿಷಯದಲ್ಲಿ ಭಟ್ಟ ನಿಂದ ಯಾವ ಸಹಾಯವಾಗಲೀ ಸಹಕಾರವಾಗಲೀ ಇಲ್ಲವೆಂದು ತಿಳಿದಿತ್ತು. ತನ್ನ ಬಳಿ ಇದ್ದ ಒಂದು ರೇಶಿಮೆ ಸೀರೆಯನ್ನು ಸೊಸೆಗೆ ಕೊಡಲೆಂದು ತೆಗೆದಿರಿಸಿದಳು.

"ಶಾರದಮ್ಮ ಒಂದೈದು ಬಗೆ ತಿಂಡಿ ಮಾಡಿ. ಸುಗುಣಾ ನಾಳೆ ನಾಡಿದ್ದರಲ್ಲಿ ಬೆಂಗಳೂರಿಗೆ ಹೊರಡ್ತಾಳೆ. ಬಸುರಿ ಹುಡ್ಗೀನ ಕರೆದು, ಅರಸಿನ ಕುಂಕುಮ, ಬಳೆ ಇತ್ಯಾದಿ ಕೊಟ್ಟು ಮಡಿಲು ತುಂಬಬೇಕೂಂತ ಆಸೆ. ಆದರೆ ಅದು ನೆರವೇರುಲ್ಲ ಅಂತ ನನಗೆ ಗೊತ್ತು. ತಿಂಡಿ, ಹಣ್ಣು ಹಂಪಲು, ಈ ಸೀರೆ ರವಿಕೆಯನ್ನು ನನ್ನ ಪರವಾಗಿ ಅವಳಿಗೆ ಕೊಟ್ಟು ಬನ್ನಿ." ಶಾರದಮ್ಮನನ್ನು ಮಗನ ಮನೆಗೆ ಕಳಿಸಿದಳು.

ಪ್ರಶಾಂತ ಇದೆಲ್ಲಾ ಏನೂ ಬೇಡ ಎಂದು ಹೇಳಿದರೂ, ತಾಯಿಯ ಮನಸ್ಸಿಗೆ ನೋವಾಗದಿರಲೆಂದು ಹೆಂಡತಿಗೆ ತೆಗೆದುಕೊಳ್ಳುವಂತೆ ಹೇಳಿದ.

"ಅಮ್ಮಂಗೇ ಬರ್ಬೇಕೂಂತ ಆಸೆ ಇತ್ತು. ಬರುಕ್ಕಾಗಲಿಲ್ಲ."

"ನನಗೆಲ್ಲಾ ಗೊತ್ತು. ಅಮ್ಮ ಇವತ್ತಿಗೂ ಅಪ್ಪಂಗೆ ಹೆದರ್ತಾಳೆ..... ಆದರೆ ಮಕ್ಕಳ ಮೇಲೂ ಪ್ರೀತಿ...." ಅವನ ಕಣ್ಣುಗಳೂ ಹನಿಗೂಡಿದ್ದವು.

"ಹೆಂಡ್ತೀನ ಅಲ್ಲಿ ಬಿಟ್ಟು ಬಂದ್ಮೇಲೆ, ಮನೆಗೇ ಊಟಕ್ಕೆ ಬರಬೇಕಂತೆ. ಅಮ್ಮ ಹೇಳಿದಾರೆ."

"ಇದೊಂದು ಮಾತ್ರ ಸಾಧ್ಯವಿಲ್ಲ ಶಾರದಮ್ಮ. ನಾನು ಇಲ್ಲಿಗೆ ಬಂದು ತಿಂಗಳುಗಳೆ ಕಳೆದಿವೆ. ಅಪ್ಪ ಒಂದು ದಿನವೂ ಬಂದು ಮಾತನಾಡಿಸಿಲ್ಲ."

"ಅವರು ಎಷ್ಟಾಗಲೀ ದೊಡ್ಡವರು..... ನೀನೇ ಬಂದು ಮಾತನಾಡಿಸು."

"ಅವರು ಶ್ರೀಕರನ ಹತ್ತಿರ ಹೇಳಿ ಕಳಿಸಿದರೂ ನಾನು ಬಂದೇನು. ಆದರೆ ನಾನಾಗಿಯೇ ನಾನಂತೂ ಬರುಲ್ಲ. ದಿನಾ ಊಟ ಕಳಿಸುವ ತೊಂದರೆ ತಗೋಬೇಡಿ. ನಾನು ಅಷ್ಟಿಷ್ಟು ಮಾಡುವುದನ್ನು ಕಲಿತಿದೀನಿ. ಏನಾದರೂ ಬೇಕಾದ್ರೆ ನಾನೇ ಕೇಳ್ತೀನಿ." ಶಾರದಮ್ಮ ಸುಮ್ಮನೇ ತಲೆಯಾಡಿಸಿದರು.

* * *

ದಸರಾ ಹಬ್ಬದ ಸಮಯದಲ್ಲಿ ನಾಲ್ಕು ದಿನಗಳ ರಜಗಳಿದ್ದವೆಂದು ಸಂತೋಷ ಊರಿಗೆ ಬಂದಿದ್ದ. ತಾಯಿಯ ಬಳಿ ಕುಳಿತು, ತನ್ನ ಹೊಸ ಜೀವನದ ಬಗ್ಗೆ ಹೇಳಿದ. ರ್‍ಯಾಗಿಂಗ್‌ನ ಅನುಭವಗಳನ್ನು ಹೇಳಿಕೊಂಡ.

"ಶಾರದಮ್ಮ ಸಂತೋಷನಿಗೆ ಏನು ಬೇಕೋ ಎಲ್ಲಾ ತಿಂಡಿಗಳನ್ನು ಮಾಡಿ

ಕೊಡಿ..... ನಮ್ಮ ಮನೆ ಗಂಡುಮಕ್ಕಳೇ ಈಗ ಅಪರೂಪಕ್ಕೊಮ್ಮೆ ಬರುತ್ತಾರೆ." ತಂದೆಗೆ ಕಾಲೇಜಿನ ವಿಷಯಗಳನ್ನು ತಿಳಿಸಲೆಂದು ಅವರ ರೂಮ್‌ಗೆ ಹೋಗಿದ್ದ.

ಸಂತೋಷ ಅಣ್ಣನನ್ನು ನೋಡಿ ಮಾತನಾಡಿಸಿ ಬರುತ್ತೇನೆಂದು ಹೊರಟ. ಶಾರದಮ್ಮ ಅವನ ಕೈಗೆ ತಿಂಡಿಯ ಪೊಟ್ಟಣಗಳನ್ನು ಕೊಟ್ಟಳು. "ಇವೆಲ್ಲಾ ಪ್ರಶಾಂತನಿಗೆ" ಸಂತೋಷ ತಾಯಿಯ ಮುಖವನ್ನು ನೋಡಿದ.

"ಮನೆಗೆ ಬಾ ಅಂದ್ರೆ ಬರುಲ್ಲ. ಅವನನ್ನು ಬಿಟ್ಟು ತಿಂಡಿಗಳನ್ನು ತಿನ್ನೋಕೆ ಮನಸ್ಸು ಒಪ್ಪಲ್ಲ. ನಿಮ್ಮಪ್ಪನಿಗೆ ಗೊತ್ತಾಗದಂತೆ, ಮಾಡಿದ ತಿಂಡಿಗಳನ್ನು ಅವನಿಗೆ ಅಂತ ಕಳಿಸ್ತೀನಿ. ನೀನಾದ್ರೂ ಅವನಿಗೆ ತಿಳುವಳ್ಕೆ ಹೇಳು."

"ದೊಡ್ಡೋರ ಮಾತನ್ನೇ ಕೇಳದವನು, ನನ್ನ ಮಾತು ಕೇಳ್ತಾನಾ? ನೋಡೋಣ ಪ್ರಯತ್ನ ಮಾಡ್ತೀನಿ."

ಪ್ರಶಾಂತ, ಸಂತೋಷನನ್ನು ಖುಶಿಯಿಂದ ತಬ್ಬಿಕೊಂಡ – "ಏನು ಭಾವೀ ಡಾಕ್ಟರ್ ಸಾಹೇಬ್ರು? ಹೇಗಿದೆ ಜೀವನ?"

"ಸೇರಿದ ಹೊಸತರಲ್ಲಿ ಒಂಥರಾ ಭಯ ಇತ್ತು. ಸೀನಿಯರ್ಸ್ ಅಂತೂ ರ್‍ಯಾಗಿಂಗ್ ನೆವದಲ್ಲಿ ಅರೆಜೀವ ಮಾಡಿ ಬಿಟ್ಟರು. ಅನಾಟಮಿ ಕ್ಲಾಸ್‌ನಲ್ಲಿ ಮೂರ್ಛೆ ಬೀಳೋದೊಂದು ಬಾಕಿ, ಹಾಗಾಗಿತ್ತು. ಕ್ರಮೇಣ ಎಲ್ಲಾ ಸರಿ ಹೋಯ್ತು. ಹಾಸ್ಟೆಲಲ್ಲಿ ಊಟ ಸ್ವಲ್ಪ ಬೇಜಾರು. ಆದರೆ ಏನ್ಮಾಡೋದು?"

"ಹೌದು.... ಸ್ವಲ್ಪ ತೆಳ್ಳಗಾಗಿದೀಯ..... ಅಮ್ಮ ನಿನ್ನನ್ನು ನೋಡಿ ಅತ್ತಳೋ ಇಲ್ವೋ.....?"

"ನನ್ನೆದುರಿಗೆ ಅಳಲಿಲ್ಲ. ಈಗ ಅಳ್ತಿರಬಹುದು. ಅತ್ತಿಗೆ ಬೆಂಗ್ಳೂರಿಗೆ ಹೋಗಿದಾರಂತೆ.... ನೀನ್ಯಾಕೆ ಅಮ್ಮನ್ನ ಸತಾಯಿಸ್ತೀಯ. ಅಲ್ಲಿಗೇ ಊಟಕ್ಕೆ ಬರಬಾರದಾ? ಅವಳಿಗೂ ಖುಶಿಯಾಗುತ್ತೆ....."

"ಅವಳಿಗೆ ಖುಶಿಯಾಗ್ಲೀ ಅಂತ ತಾನೇ ಅವಳು ಕಳಿಸಿ ಕೊಡೋದನ್ನೆಲ್ಲಾ ತಿನ್ನೋದು. ಇಲ್ದಿದ್ರೆ ಅದನ್ನು ಬೇಡಾಂತ ಹೇಳ್ತಿದ್ದೆ.... ಅಮ್ಮಂಗೋಸ್ಕರಾನೇ ನಾನು ಈ ಮನೆಗೆ ಬಂದದ್ದು. ಇಲ್ದಿದ್ರೆ ಇಲ್ಲಿಗೆ ಬರಲು ಬೇರೆ ಯಾವ ಕಾರಣವೂ ಇರಲಿಲ್ಲ."

"ಒಳ್ಳೇದಾಯ್ತು. ನನ್ನನ್ನ ಕಳಿಸಿ ಕೊಡೋಕೆ ಅಮ್ಮನಿಗೆ ಚೂರೂ ಇಷ್ಟವಿರಲಿಲ್ಲ. ಆದರೆ, ನಾನು ಮೆಡಿಕಲ್‌ಗೆ ಸೇರ್ತೀನಿ ಅಂದಾಗ ಅಪ್ಪ ಬೇಡ ಎನ್ನಲಿಲ್ಲ. ನನಗೆ ಅದೇ ಆಶ್ಚರ್ಯ. ಲಾ ಓದು ಅಂತ ನನ್ನನ್ನು ಎಲ್ಲಿ ಕೇಳಿಬಿಡ್ತಾರೋ ಅಂತ ಹೆದರಿದ್ದೆ."

"ಕೇಳಿದ್ರೆ ಏನು ಮಾಡ್ತಿದ್ದೆ?"

"ನಂಗೊತ್ತಿಲ್ಲಪ್ಪಾ..... ನೀನೂ ಮನೆ ಬಿಟ್ಟು ಹೊರಟು ಹೋಗಿದ್ದೆ. ಅಮ್ಮನ

ಆರೋಗ್ಯ ಸರಿಯಾಗಿರಲಿಲ್ಲ. ವಿದ್ಯಾ ನೋಡಿದ್ರೆ ಏನೇನೋ ಗಲಾಟೆ ಮಾಡ್ಕೊಂಡಿದ್ಲು...."

"ಗಲಾಟೇನ? ಏನದು? ಅದೇ ಕಿಶೋರ ಬಂದು ಬೆದರಿಕೆ ಹಾಕಿದ್ನಲ್ಲ."

"ಹುಂ.....ಅದೇ......ಸದ್ಯ ಈಗ ಗಂಡನ ಮನೆಯಲ್ಲಿ ಹಾಯಾಗಿದಾಳೆ. ಅಮ್ಮನಿಗೂ ನೆಮ್ಮದಿ. ಅವಳೂ ತಾಯಿಯಾಗುತ್ತಿದ್ದಾಳೆ ಅಂತ ಅಮ್ಮ ಬರೆದಿದ್ದ ನೆನಪು...."

"ಇಲ್ಲ ಸಂತೋಷ್.... ಅವಳಿಗೆ ಅಬಾರ್ಷನ್ ಆಗಿ ಹೋಯ್ತು....."

"ಹೌದಾ? ನಂಗ್ಯಾರು ಹೇಳಲೇ ಇಲ್ಲ."

"ಹೇಳಿದ್ರೆ ತಾನೇ ನೀನೇನ್ಮಾಡ್ತಿದ್ದೆ! ಸುಮ್ನಿದ್ದುಬಿಡು. ಅಮ್ಮನ್ನ ಕೇಳ್ಬೇಡ."

"ಈ ಸಾರಿ ಒಂದಿನದ ಮಟ್ಟಿಗೆ ಬೆಂಗ್ಳೂರ್ಗೆ ಹೋಗಿ ಅಕ್ಕನ್ನ ನೋಡ್ಲೇಬೇಕು."

"ಹಾಗೇ ನಿನ್ನ ಅತ್ಗೇನೂ ನೋಡಿ ಮಾತಾಡ್ಸಿಕೊಂಡು ಬಾ. ಅವಳಿಗೂ ಸಂತೋಷವಾಗುತ್ತೆ. ನೀನು ಸದ್ಯದಲ್ಲೇ ಚಿಕ್ಕಪ್ಪ ಆಗ್ತಾ ಇದೀಯ."

"ಹುಂ. ಗೊತ್ತಾಯ್ತು.... ಅಮ್ಮ ಹೇಳಿದ್ಲು. ಖಂಡಿತಾ ಹೋಗಿ ಬರ್ತೀನಿ. ಅವರ ಮನೆ ಅಡ್ರೆಸ್ ಕೊಡು." ಪ್ರಶಾಂತ ಅಡ್ರೆಸ್‌ನ್ನು ಬರೆದುಕೊಟ್ಟ.

"ನಿನ್ನ ಮಾವ ಮೊದಲ್ನಿಂದ ಅಪ್ಪಂಗೆ ಪರಿಚಯವಂತೆ. ನಿನಗ್ಗೊತ್ತಿರಲಿಲ್ವಾ?"

"ಇಲ್ಲ. ಗೊತ್ತಿರ್ಲಿಲ್ಲ. ಅಪ್ಪನ ಸ್ನೇಹಿತರು, ನೆಂಟರು, ಪರಿಚಯದವರು ಯಾರು ತಾನೇ ಗೊತ್ತಿದಾರೆ ನಮಗೆ?"

"ಹೌದು, ಹೌದೂ ಗೊತ್ತಾದ್ಮೇಲೆ ನಿಮ್ಮಾವ ಏನಂದ್ರು?"

"ಏನಂತಾರೆ? ಅವರಿಗೂ ಅಪ್ಪನ ಗುಣ ಗೊತ್ತೇ ಇತ್ತು..... ಸದ್ಯ ಮದುವೆ ಮುರಿಯದಿದ್ದರೆ ಸಾಕು ಅಂತ ಅಂದ್ಕೊಂಡಿರಬೇಕು. ಈಗ ಅಪ್ಪಂಗೂ ಅವರ್ಗೂ ಮಾತೇ ಇಲ್ಲ. ಮೊಮ್ಮಗೂನ ಕೂಡ ಅಪ್ಪ ಮಾತಾಡಿಸ್ತಾರೋ ಇಲ್ವೋ....."

"ಯಾರ್ಮನೇಲೂ ಹೀಗೆಲ್ಲಾ ಇಲ್ಲ.... ಗೌತಮ, ದಿನೇಶ ಎಲ್ರೂ ನಗ್ತಾರೋ ಏನೋ?"

"ನಕ್ಕರೆ ನಗಲಿ. ಇದು ನಮ್ಮ ದುರದೃಷ್ಟ ಅಷ್ಟೇ. ಅಮ್ಮನ ಬಗ್ಗೆ ಯೋಚಿಸಿದ್ರೆ ಬಹಳ ವ್ಯಥೆಯಾಗುತ್ತೆ. ಒಂಥರಾ ಬಂಧನ... ನಾವುಗಳಾದ್ರೂ ಯಾವ್ದೋ ರೀತೀಲಿ ಹೊರಗೆ ಬಂದ್ಬಿಟ್ಟೆವು.... ಕರೆದ್ರೆ ಅಮ್ಮ ಬರುಲ್ಲ. ಅದೊಂದು ಥರಾ ಬೇಜಾರು.... ಮನೆ ಬಿಟ್ಟು ಹೋದವಳು ಅಂತ ಮನೆಗೆ ಸೇರಿಸ್ದೇ ಇದ್ರೆ ಅವಮಾನ ಅಲ್ವಾ?"

"ಚಿನ್ಮಯೀಗೆ, ನಳಿನಿಗೆ ಮದುವೆ ಆದ್ಮೇಲೆ, ಅಮ್ಮನ್ನ ಆ ಮನೆಯಿಂದ ಹೊರಗೆ ಕರ್ಕೊಂಡು ಬಂದ್ಬಿಡೋಣ. ಆಮೇಲೆ ಅಪ್ಪ ಹೇಗಾದ್ರೂ ಇದ್ಕೊಳ್ಳಲಿ."

"ಹೌದು ಸಂತೋಷ. ಹಾಗೇ ಮಾಡೋಣ. ಚಿನ್ಮಯಿಗೂ ಆದಷ್ಟು

ಬೇಗ ಮದ್ವೆ ಆದ್ರೆ ಒಳ್ಳೇದು. ಅವಳಂತೂ ದೊಡ್ಡ ಹೆಂಗಸಿನ ಥರ ಬೆಳೆದು ಬಿಟ್ಟಿದ್ದಾಳೆ. ಅವಳು ವಿದ್ಯಾನ ಥರ ಅಲ್ಲ. ಕಾಲೇಜ್ಗೆ ಸೇರಿದ್ದಕ್ಕೇ ಮೆರೀತಿದಾಳೆ..... ಅಲ್ದೇ ಈಗ ಮನೆಗೆ, ಮಕ್ಕಳಲ್ಲಿ ಅವಳೇ ದೊಡ್ಡವಳು.... ಅಮ್ಮಂಗಂತೂ ಹೆದರೋದೇ ಇಲ್ಲ. ಅಪ್ಪಂಗೆ ತಿಳಿದ್ರೆ ಸುಮ್ಮನೆ ಬೈತಾರೆ.... ನೀನು ಊರಿಗ್ಹೋಗುಕ್ಮಂಚೆ ಅವಳಿಗೆ ಸ್ವಲ್ಪ ಬುದ್ಧಿ ಹೇಳು."

"ನನ್ನ ಮಾತನ್ಕೇಳ್ತಾಳಾ? ನೀನೇ ಯಾಕೆ ಹೇಳ್ಬಾರ್ದು?"

"ಸ್ವಲ್ಪ ತಲೆಹರಟೆ ಆಗ್ಬಿಟ್ಟಿದ್ದಾಳೆ...." ಇಬ್ಬರೂ ಸುಮ್ಮನೆ ನಕ್ಕರು.

* * *

ಕಾಮಾಕ್ಷಿ ಅವರಿವರ ಕೈ – ಕಾಲು ಹಿಡಿದು ಮಗನಿಗೊಂದು ಕೆಲಸವನ್ನು ಕೊಡಿಸಿದಳು. ಸಮೀಪದ ಹಳ್ಳಿಯೊಂದರ ಡ್ಯೆರಿ ಫಾರಂನಲ್ಲಿ ಹಾಲು ಸರಬರಾಜಿನ ಮೇಲುಸ್ತುವಾರಿಯನ್ನು ನೋಡಿಕೊಳ್ಳುವ ಕೆಲಸ. ಬೆಳಗ್ಗೆ ಐದುಗಂಟೆಯ ಹೊತ್ತಿಗೆ ಅಲ್ಲಿಗೆ ಹೋಗಿ, ಕರೆಸಿಟ್ಟಿದ್ದ ಹಾಲಿನ ಅಳತೆಯನ್ನು ಬರೆದಿಟ್ಟುಕೊಂಡು ಎಷ್ಟೆಷ್ಟು ಎಲ್ಲಿಗೆ ಕೊಡಲಾಗಿದೆ ಎಂದು ಲೆಕ್ಕವನ್ನಿಟ್ಟುಕೊಂಡು, ವಾರಕ್ಕೊಮ್ಮೆ ಅದರ ಹಣವನ್ನು ವಸೂಲಿ ಮಾಡಿ ಮಾಲೀಕರಿಗೆ ತಲುಪಿಸುವುದು ಇವನ ಕೆಲಸ. ಬೆಳಗ್ಗೆ ನಾಲ್ಕೂವರೆಗೆ ಎದ್ದು ಅಲ್ಲಿಗೆ ಹೋಗಬೇಕಾಗಿತ್ತು. ಆ ಕೆಲಸಕ್ಕಾಗೆ ಮಾಲೀಕರು ಅವನಿಗೆ ಒಂದು ಮೋಟಾರ್ ಬೈಕ್‌ನ್ನು ಕೊಡಿಸಿದ್ದರು. ಕಿಶೋರನಿಗೆ ಈ ಕೆಲಸ ಇಷ್ಟವಿಲ್ಲದಿದ್ದರೂ ತಾಯಿಯ ಬಲವಂತಕ್ಕೆ ಒಪ್ಪಿಕೊಂಡಿದ್ದ.

"ಎಷ್ಟು ದಿನ ಆಗ್ತದೋ ಅಷ್ಟು ದಿನವಾದ್ರೂ ಮಾಡು. ಸುಮ್ನೇ ದಂಡವಾಗಿ ಕೂಳು ಕತ್ತರಿಸ್ಬೇಡ. ನಿನ್ನ ವಯಸ್ನೋರು ಓದು ಮುಗ್ಸಿ ಕೆಲ್ಸಕ್ಸೇರಿ ಮದ್ವೆಯಾಗಿ ಅಪ್ಪಂದಿರಾಗಿದಾರೆ. ನಿನ್ಗಂತೂ ಜವಾಬ್ದಾರೀನೇ ಇಲ್ಲ." ಮಗನನ್ನು ಕೂರಿಸಿಕೊಂಡು ಬೈದಿದ್ದಳು.

"ಇದಕ್ಕೆಲ್ಲ ನೀನು, ನಿನ್ನ ಭಟ್ಟನೇ ಕಾರಣ. ನಾನು ಲಾಕಪ್‌ಗೆ ಹೋಗಲು ನೀನೇ ಕಾರಣ..... ನೀನು ಸುಮ್ನೆ ಇದ್ದಿದ್ರೆ ನಾನು ಭಟ್ಟನ ಹತ್ರ ಹಣ ಕಸೀತಿದ್ದೆ..."

"ನೀನೇನು ದರೋಡೆಗಾರ್ನ ಹಣ ಕಸಿಯೋಕೆ? ನಿಯತ್ನಿಂದ ಕೆಲ್ಸ ಮಾಡು. ಸಂಪಾದ್ಸು. ಭಟ್ಟನ ಅಪ್ಪನ್ಹಂಗೆ ಇರ್ಬಹ್ದು....."

"ಭಟ್ಟನ್ಹತ್ರ ಬಂಗ್ಲೆ ಇದೆ. ಕಾರು ಇದೆ. ಹೆಸರಾಂತ ಲಾಯರ್ರಾಗಿದಾನೆ... ನಾನು ಅವನ ಅಳಿಯನಾಗಿದ್ದಿದ್ರೆ.... ನೀನು ಬಿಡ್ಲಿಲ್ಲ."

"ಅವನಾಸ್ತಿಪಾಸ್ತಿ ನಮ್ಗೇನೂ ಬೇಡ..... ನೀನು ಸಂಪಾದ್ಸಿದ್ದು ನಿಂಗ್ಸಾಕು. ಹೇಳಿದಷ್ಟನ್ನು ಕೇಳು. ಚಳೀಲಿ ಎದ್ಹೋಗೋಕೆ ಬೇಜಾರಾದ್ರೆ ಅಲ್ಲೇ ಮಾಲೀಕರ ಮನೇಲೇ ಮುಂದ್ಗಡೆ ರೂಮು ಖಾಲಿ ಇದೆ. ಅಲ್ಲೇ ಬಿದ್ಗಂಡಿದ್ದು, ಬೆಳಗ್ಗೆ ಕೆಲ್ಸ ಮುಗಿದ್ಮೇಲೆ ಮನೆಗೆ ಬಾ. ಊಟ – ಗೀಟ ಮಾಡಿ ಮಧ್ಯಾಹ್ನ ಮತ್ತೆ ಹೋಗು....

ಹೇಗೂ ಬೈಕಿದೆಯಲ್ಲ."

ಕಿಶೋರ ಬೈಕ್ ಸಿಕ್ಕಿತಲ್ಲ ಎಂಬ ಆಸೆಯಿಂದ ಒಪ್ಪಿಕೊಂಡ. ತಾಯಿಯನ್ನು ಜತೆಯಲ್ಲಿ ಕರೆದುಕೊಂಡು ಹೋಗಿ, ಲೆಕ್ಕ ಪತ್ರದ, ಅಳತೆಯ ಕೆಲಸಗಳನ್ನು ಕಲಿತ. ಈ ಕೆಲಸಕ್ಕೆ ಸೇರಿದ ಮೇಲೆ ಕೆಲವು ಹೋಟೆಲ್‌ನ ಮಾಲೀಕರು ಪರಿಚಯಸ್ಥರಾದರು. ಹೋದಾಗ, ಅವನಿಗೆ ತಿಂಡಿ, ಕಾಫಿ ಸಿಗುತ್ತಿತ್ತು.

ಈ ಅನುಭವಗಳನ್ನು ಚಿನ್ಮಯಿಯ ಹತ್ತಿರ ಹೇಳಿಕೊಂಡಾಗ ಅವಳು ಮುಸಿಮುಸಿ ನಕ್ಕಳು.

"ಯಾಕೆ ನಗೋದು? ಹಳ್ಳಿ ಕೆಲ್ಸಕ್ಕೆ ಸೇರ್ಕೊಂಡೆ ಅಂತ್ಲಾ!"

"ಅಲ್ಲ. ಹೋಟೇಲ್‌ನ ತಿಂಡಿ ತಿಂದೂ ತಿಂದೂ ಗುಂಡುಗುಂಡಗಾಗಿದೀಯ..... ಬೈಕಲ್ಲಿ ಓಡಾಡ್ತೀಯ... ಒಂಥರಾ ಕಾಣ್ತೀಯ. ಮೊದಲಿನ ಕಿಶೋರನೇ ಅಲ್ಲ ನೀನು...."

"ಚೆನ್ನಾಗಿ ಕಾಣ್ತೀನೋ, ಕೆಟ್ಟಾಗಿ ಕಾಣ್ತೀನೋ....."

"ಚೆನ್ನಾಗಿ ಕಾಣ್ತಿದೀಯ ಕಿಶೋರ.... ಮೊದಲಿನ ಪೆದ್ದು ಕಳೆ ಮಾಯವಾಗಿದೆ. ದುಡಿದು ಸಂಪಾದಿಸ್ತಿದೀನಿ ಅನ್ನೋ ಲಕ್ಷಣ ಮುಖದಲ್ಲಿ ಎದ್ದು ಕಾಣ್ತಿದೆ...."

"ಅಬ್ಬಾ.... ನನಗೀಗ ಸಮಾಧಾನವಾಯ್ತು. ನನ್ನನ್ನೆಲ್ಲಿ ಹಳ್ಳಿಯವನು ಅಂತ ನೀನೂ ಅಸಡ್ಡೆ ಮಾಡಿಬಿಡ್ತಿಯೋ ಅಂತ ಅಂದ್ಕೊಂಡಿದ್ದೆ."

"ನಮ್ಮಪ್ಪ ನಿಮ್ಮಮ್ಮ ಎಲ್ರೂ ಹಳ್ಳಿಯಿಂದ್ಲೇ ಅಲ್ವಾ ಬಂದದ್ದು..... ಹಳ್ಳಿಯಾದ್ರೇನು ದಿಲ್ಲಿಯಾದ್ರೇನೂ ಬದುಕೋದು ಮುಖ್ಯ."

"ಹೌದು ಚಿನ್ಮಯೀ ನಿಮ್ಮಕ್ಕನ ಮಾತಿಗೆ ಮರುಳಾಗಿ, ನನ್ನನ್ನ ನಾನೇ ಹಾಳು ಮಾಡ್ಕೊಂಡೆ.... ಈಗ ನನ್ನನ್ನ ನಾನೇ ಸರಿ ಮಾಡಿಕೊಳ್ಳುವ ಅವಕಾಶ ಸಿಕ್ಕಿದೆ....." ಅವನ ಮುಖದಲ್ಲಿ ಸಂತೋಷವನ್ನು ಕಂಡಳು.

"ನಿಂಗೆ ಕೆಲ್ಸ ಸಿಕ್ಕಿತಲ್ಲ. ನಂಗೆ ಸ್ವೀಟ್ಸ್ ಕೊಡಿಸುಲ್ವಾ?"

"ಬರೀ ಸ್ವೀಟೇ ಯಾಕೆ? ಹೋಟೇಲ್‌ಗೇ ಕರ್ಕೊಂಡ್ಹೋಗ್ತೀನಿ. ಬೈಕ್‌ನಲ್ಲಿ ಕುಳಿತ್ಕೊಳ್ಳೋಕೆ ಬರುತ್ತೆ ತಾನೇ?" ರೇಗಿಸಿದ.

"ಬೇಡಪ್ಪಾ..... ಯಾರಾದ್ರೂ ನೋಡಿದ್ರೆ.....?"

"ಯಾರು ನೋಡ್ತಾರೆ? ನೀನು ಹೂಂ ಅನ್ನು. ಯಾರ್ಗೂ ತಿಳೀದ ಹಾಗೆ ಕರ್ಕೊಂಡ್ಹೋಗಿ ಕರ್ಕೊಂಡ್ಬರ್ತೀನಿ..... ಯಾವಾಗ್ಬರ್ತೀಯ ಹೇಳು....."

"ಶನಿವಾರ ನಂಗೆ ಕ್ಲಾಸಿಲ್ಲ. ಕಾಲೇಜ್ಹತ್ರ ಕಾಯ್ತಾ ಇರ್ತೀನಿ. ಅಲ್ಲಿಗೆ ಬಾ...." ಚಿನ್ಮಯಿ ಹೇಳಿದಳು. ಅವನು ತಲೆಯಾಡಿಸಿದ.

* * *

ಅಧ್ಯಾಯ – ಇಪ್ಪತ್ತೇಳು

ಕಿಶೋರನಿಗೆ ಮೈಸೋತಳು ಚಿನ್ಮಯಿ

ಹಾಲಿನ ಸರಬರಾಜಿನ ಕೆಲಸಗಳು ಮುಗಿದ ಕೂಡಲೇ, ಕಿಶೋರ, ಚಿನ್ಮಯಿಯ ಕಾಲೇಜಿನ ಬಳಿಗೆ ಬಂದ. ಬಸ್‌ಸ್ಟಾಪ್‌ನಲ್ಲಿ ಅವಳು ಅವನಿಗಾಗಿ ಕಾಯುತ್ತಾ ನಿಂತಿದ್ದಳು. ಬೈಕ್‌ನ್ನು ನಿಲ್ಲಿಸಿ ಬಾ ಹತ್ತು ಎನ್ನುವಂತೆ ಸಂಜ್ಞೆಯಿಂದ ಕರೆದ. ಅವಳು ಅತ್ತಿತ್ತ ನೋಡಿ, ಅಂಜುತ್ತಾ ಹಿಂದಿನ ಸೀಟನ್ನೇರಿದಳು. ಬೈಕ್ ಚಲಿಸಿತು. ಅವಳಿಗೆ ಬೀಳುವಂತಾಗಿತ್ತು..... ಕಿರುಚಿಕೊಂಡಳು. "ಭಯ ಆದ್ರೆ ನನ್ನ ಸೊಂಟಾನ ಹಿಡ್ಕೋ...." ಎಂದ. ಅವಳು ಅನುಮಾನಿಸುತ್ತಾ ಅವನ ಸೊಂಟವನ್ನು ಬಳಸಿ ಸರಿಯಾಗಿ ಕೂತಳು. ಬೈಕ್ ವೇಗವಾಗಿ ಓಡಿತು. ಒಮ್ಮೊಮ್ಮೆ ಬ್ರೇಕ್ ಹಾಕಿದಾಗ, ಅವನ ಬೆನ್ನಿಗೆ ಒರಗುತ್ತಿದ್ದಳು. ಮೊದಮೊದಲಿಗೆ ಸಂಕೋಚವೆನಿಸಿದರೂ ಕ್ರಮೇಣ ಹಿತವೆನಿಸಿತ್ತು. ಒಬ್ಬ ಯುವಕನೊಡನೆ ಬೈಕ್‌ನಲ್ಲಿ ಕುಳಿತು ಹೋಗುವುದೆಂದರೇ..... ಅದು ತನ್ನ ಭಾಗ್ಯ ಎಂದುಕೊಂಡಳು.

ಸುಮಾರು ಎಂಟು – ಹತ್ತು ಮೈಲಿ ದೂರದಲ್ಲಿದ್ದ ಒಂದು ಹೋಟೆಲ್‌ನ ಬಳಿ ಬೈಕ್ ನಿಲ್ಲಿಸಿದ. ಇಬ್ಬರೂ ಇಳಿದು ಹೋಟೆಲ್‌ನ ಒಳ ಹೊಕ್ಕರು. ಫ್ಯಾಮಿಲಿ ರೂಮ್‌ಗೆ ಕರೆದುಕೊಂಡು ಹೋದ. "ಏನ್ ತಗೋತೀಯಾ? ಮಸಾಲೆ ದೋಸೆ? ಇಡ್ಲಿ... ವಡೆ, ಭಾತ್... ಯಾವ್ದು?"

"ಮಸಾಲೆ ದೋಸೆ ಕೊಡಿಸು...." ಉತ್ಸಾಹದಿಂದ ಹೇಳಿದಳು.

"ಎರಡು ಮಸಾಲೆ ದೋಸೆ, ಎರಡು ಕೇಸರಿಭಾತ್..." ಆರ್ಡರ್ ಕೊಟ್ಟ.

"ಈ ಹೋಟೆಲ್‌ಗೆ ಹಾಲು ಕಳಿಸ್ತೀಯ?"

"ಇಲ್ಲ. ಅದೆಲ್ಲಾ ಅಲ್ಲಲ್ಲೇ ಹತ್ತಿರದಲ್ಲಿವೆ.... ನಿನ್ನನ್ನ ಅಂಥ ಹೋಟೆಲ್‌ಗೆ ಕರ್‍ಕೊಂಡು ಹೋಗೋಕೆ ಆಗುತ್ತಾ? ಇಲ್ಲಿಯ ಮಸಾಲೆ ದೋಸೆ ತ್ಥುಂಬಾ ಚೆನ್ನಾಗಿರುತ್ತೆ....."

"ಈ ಮುಂಚೆ ನಾನೆಂದೂ ಹೋಟೆಲ್‌ಗೇ ಬಂದಿರ್ಲಿಲ್ಲ. ಯಾರಾದ್ರೂ ನೋಡಿದ್ರೆ....."

"ಇಲ್ಲಿ ಯಾರ್‍ಗೂ ಗೊತ್ತಾಗುಲ್ಲ. ಅದಕ್ಕೇ ಇಲ್ಲಿಗೆ ಕರ್‍ಕೊಂಡ್ಬಂದೆ..... ಹೆದರಬೇಡ. ... ನಾವೇನೂ ಯಾರೂ ಮಾಡಬಾರದ ಕೆಲ್ಸ ಮಾಡಿಲ್ಲ. ನಿಮ್ಮ ಕಾಲೇಜಿನ ಕ್ಯಾಂಟೀನ್‌ನಲ್ಲಿ ಹುಡ್ಗೀರು ತಿಂಡಿ ತಿನ್ನೋಲ್ವಾ!"

"ತಿಂತಾರೆ. ಆದ್ರೆ ಎಲ್ಲೋ ಕೆಲವ್ರು.... ನಾನಂತೂ ಎಂದೂ ಹೋಗಿಲ್ಲಪ್ಪಾ....."

"ನೀನು ನಿಮ್ಮಪ್ಪಂಗೆ ಹೆದರಿ ಹೋಗಿಲ್ಲ. ಇಂಥ ಸಣ್ಣ ಸಣ್ಣ ಆನಂದದಿಂದ ವಂಚಿತರಾಗಿದೀರಿ ನಿಮ್ಮನೆಯೋರೆಲ್ಲಾ....."

"ಮೊದಲ್ನಿಂದ ಅಭ್ಯಾಸವೇ ಇಲ್ಲ. ಅಕ್ಕನ್ನ ಎಂದಾದ್ರೂ ಕರ್ಕೊಂಡ್ಹೋಗಿದ್ಯಾ!" ಗೋಳ್ ಅಂತ ನಕ್ಕ.

"ಸದ್ಯ. ನಿಮ್ಮಕ್ಕಾನಾ! ಅವಳೇ ಮನೆಯಿಂದ ನನಗೆ ತಿಂಡಿಗಳನ್ನು ತಂದು ಕೊಡುತ್ತಿರಲಿಲ್ಲ ಅಷ್ಟೇ.... ಅಮ್ಮನೇ ನಮ್ಮಿಬ್ಬರಿಗೂ ನಿಮ್ಮ ಮನೆಯಿಂದ ತಂದ ತಿಂಡಿಗಳನ್ನು ಕೊಡುತ್ತಿದ್ದಳು. ಒಟ್ಟಿಗೇ ಕೂತು ತಿನ್ನುತ್ತಿದ್ದೆವು. ನಮ್ಮಮ್ಮಂಗೆ ಕೂಡ ವಿದ್ಯಾ ಬಂದು ಕೂತ್ಕೊಳ್ತಿದ್ದುದು ಇಷ್ಟವಾಗುತ್ತಿರಲಿಲ್ಲ. ನಿಮ್ಮಪ್ಪ ಬೈತಾರೆ ಹೋಗು ಅಂತ ಕಳಿಸಿ ಬಿಡುತ್ತಿದ್ದಳು."

ಬಿಸಿಬಿಸಿ ದೋಸೆಯನ್ನು ವೈಟರ್ ತಂದಿಟ್ಟ. ಘಂ ಎಂದು ಬೆಣ್ಣೆಯ ವಾಸನೆ ಬರುತ್ತಿತ್ತು. ಹಸಿವು ಕೆರಳಿತ್ತು. "ತಿನ್ನಾ....." ಕೇಳಿದಳು.

"ತಿನ್ನು ತಿನ್ನು..... ನಿಂಗೋಸ್ಕರಾನೇ ತರಿಸಿದ್ದು..... ಬೇಕಾದ್ರೆ ಇನ್ನೊಂದನ್ನ ತರಿಸ್ತೀನಿ."

"ಬೇಡ ಬೇಡ" ಎನ್ನುತ್ತಾ ತಿನ್ನತೊಡಗಿದಳು. ಕಿಶೋರ ಆಗಾಗ್ಗೆ ಅವಳನ್ನೇ ನೋಡುತ್ತಿದ್ದ. ಅವನಿಗೂ ಈ ದಿನ ಸುದಿನ. ಒಬ್ಬ ಸುಂದರ ಹೆಣ್ಣನ್ನು ಬೈಕ್‌ನಲ್ಲಿ ಕೂರಿಸಿಕೊಂಡು, ಹೋಟೆಲ್‌ಗೆ ಕರೆ ತಂದು, ಮಸಾಲೆ ದೋಸೆಯನ್ನು ಕೊಡಿಸಿ ಅವಳ ಹೃದಯವನ್ನು ಗೆಲ್ಲುವ ಸೌಭಾಗ್ಯ ತನ್ನದಾಗಿದೆ. ಅವನಿಗೆ ಬಹಳ ಆನಂದ ವಾಗಿತ್ತು.

"ಜಾಮೂನ್ ತಿಂತೀಯಾ? ಅಥವಾ ಇನ್ನೊಂದು ದೋಸೆ?"

"ಜಾಮೂನ್ ತರಿಸು. ದೋಸೆ ಸಾಕು" ಚಿನ್ಮಯಿ ಜಾಮೂನನ್ನು, ಕೇಸರಿ ಭಾತ್‌ನ್ನು ಮುಗಿಸುವ ವೇಳೆಗೆ ಕಾಫಿ ಬಂತು.

"ಸಿಹಿ ತಿಂದ ಮೇಲೆ ಕಾಫಿ ಕಹಿಯಾಗ್ತಿದೆ."

"ಖಾರ ಏನು ತರಿಸ್ಲಿ ಹೇಳು....."

"ಏನೂ ಬೇಡ, ಒಂದೆರಡು ಗುಟುಕು ಕುಡಿದ ಮೇಲೆ ಸರಿ ಹೋಗುತ್ತದೆ." ಇಬ್ಬರೂ ನಿಧಾನವಾಗಿ ಕಾಫಿಯನ್ನು ಹೀರಿದರು.

"ದೋಸೆ ತುಂಬಾ ಚೆನ್ನಾಗಿತ್ತು ಕಣೋ ಕಿಶೋರ."

"ಅದಕ್ಕೇ ಇಲ್ಲಿಗೆ ಕರ್ಕೊಂಡು ಬಂದೆ. ಇನ್ನು ಹೊರಡೋಣ್ವಾ?" ಇಬ್ಬರೂ ಹೋಟೆಲ್‌ನಿಂದ ಹೊರಬಂದರು. ಅವಳನ್ನು ಅಲ್ಲಿಂದ ತನ್ನ ಡೈರಿ ಫಾರಂಗೆ ಕರೆದುಕೊಂಡು ಹೋದ.

"ಒಂದ್ನಿಮಿಷ ನಿಂತಿರು. ನಾನೀಗ್ಲೇ ಬಂದ್ಬಿಡ್ತೀನಿ." ಎನ್ನುತ್ತಾ ಕಾಂಪೌಂಡ್‌ನ

ಒಳಗೆ ಎಲ್ಲೋ ಮಾಯವಾದ.

ಅವಳು ಅಲ್ಲೇ ನಿಂತು ಸುತ್ತಲೂ ಕಣ್ಣು ಹಾಯಿಸಿದಳು. ಎಲ್ಲಿಂದಲೋ ಓಡಿ ಬಂದ ನಾಯಿಯೊಂದು ಅವಳ ಕಾಲಿಗೆ ಬಾಯನ್ನು ಹಾಕಿ ಕಚ್ಚಿ ಎಳೆಯಿತು. ಅವಳು ಕಿರುಚಿಕೊಂಡಳು. ಹತ್ತಿರದಲ್ಲೇ ಇದ್ದವನೊಬ್ಬ ಬಂದು ನಾಯಿಯನ್ನು ಓಡಿಸಿದ. ಅವಳ ಹಿಮ್ಮಡಿಯಿಂದ ರಕ್ತ ಸುರಿಯಲಾರಂಭಿಸಿತು. ಒಳಗಿದ್ದ ಕಿಶೋರ ಓಡಿ ಬಂದ. ಅವಳು ಭಯದಿಂದ ತತ್ತರಿಸಿ ಅಳುತ್ತಿದ್ದಳು. ಅವಳನ್ನು ತನ್ನ ಎದೆ ಗೊರಗಿಸಿಕೊಂಡು ಸಂತೈಸಿದ.

"ಅಳಬೇಡ ಚಿನ್ಮಯೀ....ಏನಾಗುಲ್ಲ." ಒಳಗಿನಿಂದ ಬಕೆಟ್‌ನಲ್ಲಿ ನೀರನ್ನು ತಂದು, ಗಾಯವನ್ನು ಚೆನ್ನಾಗಿ ತೊಳೆದು ಬಿಳಿ ಬಟ್ಟೆಯನ್ನು ಕಟ್ಟಿದರು.

"ಈಗ್ಲೇ ಡಾಕ್ಟ್ರ ಹತ್ರ ಕರ್‍ಕೊಂಡ್ಹೋಗಿ, ಇಂಜೆಕ್ಷನ್ ಹಾಕಿಸ್ಬೇಕು" ಯಾರೋ ಸಲಹೆಯನ್ನು ನೀಡಿದರು. ಅವಳು ಕಷ್ಟಪಟ್ಟು ಬೈಕನ್ನೇರಿದಳು. ಅವಳು ಅಳುತ್ತಲೇ ಇದ್ದಳು. ಕಾಲೇಜಿನ ಹತ್ತಿರವಿದ್ದ ಒಂದು ಡಾಕ್ಟರ್ ಶಾಪ್‌ಗೆ ಕರೆದುಕೊಂಡು ಹೋದ..... ಅವರು ಮತ್ತೊಮ್ಮೆ ಗಾಯವನ್ನು ಚೆನ್ನಾಗಿ ತೊಳೆದು, ಬ್ಯಾಂಡೇಜ್ ಬಿಗಿದು, ಒಂದು ಇಂಜೆಕ್ಷನ್ ಕೊಟ್ಟರು. "ನಾಯಿ ಕಚ್ಚಿದೆ..... ಹದಿನಾಲ್ಕು ಇಂಜೆಕ್ಷನ್ ಗಳನ್ನು ತಗೊಳ್ಳಲೇಬೇಕಾಗುತ್ತದೆ." ಚಿನ್ಮಯಿಯ ಮುಖ ಕಪ್ಪಿಟ್ಟಿತು. ಕಿಶೋರ ಅವಳನ್ನು ಅವಳ ಮನೆಯ ಹತ್ತಿರ ಇಳಿಸಿ ಧೈರ್ಯವಾಗಿರುವಂತೆ ಹೇಳಿ, ಹೊರಟು ಹೋದ. ಮನೆಯೊಳಗೆ ಬರುವ ಧೈರ್ಯವಿರಲಿಲ್ಲ. ಕುಂಟುತ್ತಾ ಒಳಬಂದವಳನ್ನು ಯಾರೂ ಗಮನಿಸಲಿಲ್ಲ. ಸೀದಾ ತನ್ನ ರೂಮ್‌ಗೆ ಹೋಗಿ ಮಲಗಿ ಬಿಟ್ಟಳು. ಸಾಯಂಕಾಲದ ಹೊತ್ತಿಗೆ ಅವಳಿಗೆ ಜ್ವರ ಬಂದಿತ್ತು. ನೋವಿನಿಂದ ನರಳುತ್ತಿದ್ದವಳನ್ನು ಮೊದಲು ಗಮನಿಸಿದವಳು ನಳಿನ.

"ಏನಾಗ್ತಿದ್ಯೇ......ಯಾಕೆ ನರಳ್ತಿದೀಯ?" ಎನ್ನುತ್ತಾ ಹಣೆಯ ಮೇಲೆ ಕೈಯನ್ನಿಟ್ಟಳು. ಸುಡುತ್ತಿದ್ದ ಹಣೆಯ ಮೇಲಿಂದ ಸರ್ರನೆ ಕೈ ತೆಗೆದಳು.

"ಜ್ವರ ಬಂದಿದ್ಯಲ್ಲೇ.....ಚೆನ್ನಕ್ಕ...."

"ನಾಯಿ ಕಚ್ತು" ಚಿನ್ಮಯಿ ಅಳತೊಡಗಿದಳು. ಕಾಲಿಗೆ ಕಟ್ಟಿದ್ದ ಬ್ಯಾಂಡೇಜನ್ನು ತೋರಿಸಿದಳು. ನಳಿನಿ ಓಡಿ ಹೋಗಿ ತಾಯಿಗೆ ಸುದ್ದಿ ತಿಳಿಸಿದಳು. ಭಟ್ಟನ ಹೊರತು ಉಳಿದವರು ಅವಳ ಬಳಿ ಬಂದು ನಿಂತರು.

"ಎಲ್ಲಿ ಕಚ್ತು? ಯಾವಾಗ ಕಚ್ತು? ಎಂಥಾ ನಾಯಿ? ಸಾಕಿದ ನಾಯೀನಾ? ಬೀದಿ ನಾಯೀನಾ?" ಒಬ್ಬೊಬ್ಬರು ಒಂದೊಂದು ಪ್ರಶ್ನೆಯನ್ನು ಕೇಳಿದರು.

"ಕಾಲೇಜ್ ಬಸ್‌ಸ್ಟಾಪ್ ಬಳಿ ನಂತಿದ್ದಾಗ ಕಚ್ತು. ಬೀದಿ ನಾಯೀನೇ ಇರ್ಬೇಕು."

"ಹದಿನಾಲ್ಕು ಇಂಜೆಕ್ಷನ್ ತಗೋಬೇಕಲ್ಲೇ ಅಕ್ಕಾ....." ಶ್ರೀಕರ ಹೆದರಿಸಿದ.

"ನೀನು ಸುಮ್ನಿರೋ ಹೆದರಿಸ್ಬೇಡ..... ಮೊದ್ಲೇ ಅಳ್ತಿದಾಳೆ. ನೀನು ಅಪ್ಪಂಗೆ ಹೋಗಿ ಹೇಳ್ಬಿಡು. ಆಮೇಲೆ ಹೇಳಿದ್ರೆ ಬೈತಾರೆ."

"ಬೇಡಮ್ಮ ಅಪ್ಪಂಗ್ಹೇಳೋದು ಬೇಡ...."

"ಹೇಳ್ದೇ ಇರೋಕಾಗುತ್ತಾ? ನೀನು ಸುಮ್ನಿರು." ಶ್ರೀಕರ ಓಡಿ ಹೋಗಿ ಅಪ್ಪನಿಗೆ ಸುದ್ದಿಯನ್ನು ಮುಟ್ಟಿಸಿದ. ಕಕ್ಷಿದಾರರೊಡನೆ ಮಾತನಾಡುತ್ತಿದ್ದ ಭಟ್ಟ ಅವರುಗಳು ಹೋದ ಅನಂತರ ಒಳಗೆ ಬಂದ.

"ಚಿನ್ನು..... ನಾಯಿ ತಂಟೆಗೆ ಯಾಕೆ ಹೋಗಿದ್ದೆ?" ಪ್ರಶ್ನಿಸಿದ.

"ಇಲ್ಲಪ್ಪ ನಾನೇನೂ ಮಾಡ್ಲಿಲ್ಲ. ನನ್ನ ಪಾಡಿಗೆ ನಾನು ನಿಂತಿದ್ದೆ."

"ನೀನೇನೋ ರೇಗಿಸಿದೀಯಾ? ಸುಮ್ಸುಮ್ನೇ ಯಾಕೆ ಕಚ್ಚುತ್ತೇ? ಡಾಕ್ಟರಿಗೆ ಹೋಗಿ ತೋರಿಸಿದ್ಯಾ? ಹದಿನಾಲ್ಕು ಇಂಜೆಕ್ಷನ್ ತಗೋಬೇಕು.... ಎಂಥಾ ಅವಿವೇಕ ಮಾಡ್ಕೋತೀರಿ ಕ್ಷಣ ಮಾತ್ರದಲ್ಲಿ. ಕಾಲೇಜು ತಪ್ಪುತ್ತಲ್ಲಾ....."

"ನಾನೇನೂ ಬೇಕೂಂತ ಮಾಡ್ಕೊಂಡ್ನೇನಪ್ಪಾ!"

"ಮಾತಾಡ್ಬೇಡ ಸುಮ್ನಿರು. ಸ್ವಲ್ಪ ಎಚ್ಚರಿಕೆಯಿಂದ ಇರಬೇಡ್ವಾ? ಅನುಭವಿಸು...."

"ಯಾಕೆ ಬೈತೀರಿ? ಮೊದ್ಲೇ ನೋವು ಅಂತ ಅಳ್ತಾ ಇದಾಳೆ" ಪ್ರೇಮಾ ನುಡಿದಳು.

"ಬೈಸಿಕೊಳ್ಳುವ ಕೆಲಸಾನೇ ಮಾಡಿರೋದು.... ಎಂದೂ ಇಲ್ಲದ್ದು, ಇವತ್ತೇ ನಾಯಿ ಕಚ್ಚಬೇಕಾದರೆ, ಏನೋ ಮಾಡಬಾರದ್ದನ್ನ ಮಾಡಿರಬೇಕು.... ನೀನು ಸುಮ್ನಿರು. ಎಲ್ಲಾ ಮಾತಿಗೂ ಬಾಯಿ ಹಾಕ್ಕೊಂಡು ಬರಬೇಡ" ಭಟ್ಟ ಹೆಂಡತಿಯನ್ನು ದಬಾಯಿಸಿದ. ಪ್ರೇಮಾ ಪೆಚ್ಚಾದಳು. ಅಷ್ಟರಲ್ಲಿ ಕಾಮಾಕ್ಷಿ ಬಂದಳು. ಅವಳನ್ನು ಕಂಡೊಡನೆ ಚಿನ್ಮಯಿ ಮತ್ತೂ ಹೆದರಿದಳು. ತಾನು ಕಿಶೋರನ ಜತೆ ಹೋಗಿರುವ ಸುದ್ದಿ ಅತ್ತೆಗೆ ಗೊತ್ತಾಗಿರಬಹುದೇ? ಆದರೆ ಕಾಮಾಕ್ಷಿಗೆ ಆ ವಿಷಯ ತಿಳಿದಿರಲೇ ಇಲ್ಲ.

"ಅದೇನು ಎಲ್ರೂ ಯಾಕೆ ಹೀಗಿದೀರಿ? ಏನಾತು?"

"ಅಕ್ಕಂಗೆ ನಾಯಿ ಕಚ್ಚಿದೆ. ಅಳ್ತಿದಾಳೆ." ಕಾಮಾಕ್ಷಿ ಒಳಗೆ ಬಂದಳು.

"ಅಯ್ಯಯ್ಯಾ.... ನಾಯಿ ಕಚ್ಚಿದ್ದಕ್ಕೆಲ್ಲಾ ಯಾರಾದ್ರೂ ಹೀಗಳ್ತಾರಾ? ಭಟ್ಟಂಗೂ ಚಿಕ್ಕವಯಸ್ನಲ್ಲಿ ಒಮ್ಮೆ ನಾಯಿ ಕಚ್ಚಿತ್ತಂತೆ. ಅದಕ್ಕೇ ಅಷ್ಟು ಬೊಗಳೋದು ಅವ್ನು....." ಆ ಮಾತಿಗೆ ಯಾರಿಗೂ ನಗು ಬರಲಿಲ್ಲ.

"ಹದಿನಾಲ್ಕು ಇಂಜೆಕ್ಷನ್ ನೋಯ್ತದೆ ಕೂಸೇ... ಆದ್ರೇನು ಮಾಡೋದು? ತಗೊಳ್ದೆ ಬಿಟ್ರೆ ಅದೆಂಥದೋ ಕಾಯಿಲೆ ಬರುತ್ತಂತಪ್ಪಾ..... ಎಂಥದೇ ಪುಸ್ಸೀ ಅದು....."

"ರೇಬೀಸ್...... ಅಂತ...."

"ಹೂಂ ಅದೇ......ಅದು ಬಂದ್ರೆ ಸತ್ತೇ ಹೋಗ್ತಾರಂತೆ....."

"ಕಾಮಾಕ್ಷಿ..... ಮೊದ್ಲೇ ಅವ್ಳು ಹೆದ್ರಿದ್ದಾಳೆ.... ಹೀಗೆಲ್ಲ ಹೆದರಿಸ್ತೀರಲ್ಲ ನೀವು."

"ಹೌದೇನೇ ಚಿನ್ನು..... ಹೆದ್ರಿದೀಯ.....?"

"ಇಲ್ಲ ಅತ್ತೆ..... ಹೆದ್ರಿಕೆ ಏನಿಲ್ಲ.....ಆದ್ರೆ."

"ಆದ್ರೆ ಪಾದ್ರೆ ಏನಿಲ್ಲ. ಸುಮ್ನೇ ಮಲಕ್ಕೋ.... ನಾಳೆ ಹೇಗೋ ಕಾಲೇಜ್ಗೆ ರಜ...... ನಾಡಿದ್ದು ಡಾಕ್ಟ್ರ ಹತ್ರ ಹೋದ್ರಾತು...." ಅವಳು ಬಡಬಡನೆ ಮಾತನಾಡಿದಾಗ, ಅವಳು ಹೋದರೆ ಸಾಕೆನ್ನಿಸಿತ್ತು ಎಲ್ಲರಿಗೂ.

****

ಒಂದು ತಿಂಗಳು ಕಳೆಯಿತು. ದಿನ ಬಿಟ್ಟು ದಿನ ಆಸ್ಪತ್ರೆಗೆ ಹೋಗಿ, ಇಂಜೆಕ್ಷನ್ ಚುಚ್ಚಿಸಿಕೊಂಡು ಬರುತ್ತಿದ್ದಳು. ಆಸ್ಪತ್ರೆ ಸಮೀಪದಲ್ಲೇ ಇದ್ದುದರಿಂದ ಶಾರದಮ್ಮನವರ ಜತೆಯಲ್ಲಿ ನಡೆದುಕೊಂಡೇ ಹೋಗಿ ಬರುತ್ತಿದ್ದಳು.

"ನಾಯಿ ಕೈಲಿ ಕಚ್ಚಿಸ್ಕೊಂಡೋರ ಮನೇಲೆಲ್ಲಾ ಕಾರು ಇರಲ್ಲ. ಎಷ್ಟು ಮಹಾ ದೂರ ಇದೆ ಆಸ್ಪತ್ರೆ? ನಿಧಾನವಾಗಿ ನಡೆದುಕೊಂಡು ಹೋಗಿ ಬರಲಿ." ಎಂದಿದ್ದ ಭಟ್ಟ.

ಬೀದಿಯಲ್ಲಿ ಕುಂಟಿಕೊಂಡು ನಡೆಯುವುದು ಮುಜುಗರವೆನಿಸಿದರೂ, ಶಾರದಮ್ಮನ ಜತೆಯಲ್ಲಿ ಹೋಗುತ್ತಿದ್ದಳು. ಕಿಶೋರನಿಗೆ ಅವಳನ್ನು ನೋಡಬೇಕು, ಮಾತನಾಡಿಸಬೇಕು ಎನ್ನುವ ತವಕವಿದ್ದುದರಿಂದ ಆಸ್ಪತ್ರೆಗೇ ಬಂದಿರುತ್ತಿದ್ದ. ಆದರೆ ಶಾರದಮ್ಮನವರು ಜತೆಯಲ್ಲಿರುತ್ತಿದ್ದುದರಿಂದ ಹೆಚ್ಚು ಮಾತನಾಡಲಾಗುತ್ತಿರಲಿಲ್ಲ.

ಗಾಯ ಸಂಪೂರ್ಣವಾಗಿ ವಾಸಿಯಾಗಿ, ನೋವು ಕಡಿಮೆಯಾದ ಮೇಲೆ ಚಿನ್ಮಯಿ ಮತ್ತೆ ಕಾಲೇಜಿಗೆ ಹೋಗಿ ಬರಲಾರಂಭಿಸಿದ್ದಳು. ಕಿಶೋರ ಕಾಲೇಜಿನ ಬಳಿ ಇವಳಿಗಾಗಿ ಕಾದು ನಿಂತಿದ್ದ.

"ಏನೇ ಚಿನ್ಮಯೀ..... ಹೇಗಿದೆಯೇ ಈಗ. ನನ್ನಿಂದ್ಲೇ ಕಣೇ ಹೀಗಾದದ್ದು. ನಾನು ನಿನ್ನನ್ನು ಅಲ್ಲಿಗೆ ಕರ್ಕೊಂಡು ಹೋಗ್ಬಾರ್ದಾಗಿತ್ತು."

"ನನ್ನ ಗ್ರಹಚಾರಕ್ಕೆ ನೀನೇನು ಮಾಡ್ತೀಯ? ಆದರೆ ಮಾತ್ರ ಈಗ್ಲೂ ನೆನೆಸ್ಕೊಂಡ್ರೆ ಭಯವಾಗುತ್ತೆ..... ಎಷ್ಟು ನೋವನ್ನನುಭವಿಸ್ಬಿಟ್ಟೆ ಗೊತ್ತಾ?"

"ಮನೇಲೇ ಇದ್ದೂ ಇದ್ದೂ ಕಾಲೇಜಿಗೆ ಬರುಕ್ಕೆ ಮನಸ್ಸೇ ಇರ್ಲಿಲ್ಲ. ಆದರೆ ಮನೇಲೇ ಕೂತಿದ್ರೆ ಅಟೆಂಡೆನ್ಸ್ ಹೋಗುತ್ತೆ. ಪಾಠ ಇಲ್ಲವಾಗುತ್ತೆ."

"ನನ್ನಿಂದ ನಿನಗೆ ಎಷ್ಟು ಕಷ್ಟವಾಯ್ತು ಅಲ್ವಾ?" ಅವಳ ಕೈ ಹಿಡಿದು ಪಶ್ಚಾತ್ತಾಪವನ್ನು ವ್ಯಕ್ತಪಡಿಸಿದ. ಅವಳು ಸುಮ್ಮನೇ ನಕ್ಕಂತೆ ಮಾಡಿದಳು.

* * *

"ಶಾರದಮ್ಮನೋರೇ ನಾನು ನಾಳೆ ಬೆಂಗ್ಳೂರ್ಗೆ ಹೋಗ್ತಾ ಇದೀನಿ. ಎರಡು – ಮೂರು ದಿನ ಊರ್ನಲ್ಲಿರುಲ್ಲ. ಸುಗುಣಂಗೆ ಆರತಿ ಇಟ್ಕೊಂಡಿದಾರೆ. ಅಮ್ಮ ಬರೋದಾದ್ರೆ ಕರ್ಕೊಂಡ್ಹೋಗ್ತೀನಿ..... ಅಮ್ಮಂಗೆ ಹೇಳ್ಬಿಡಿ." ಪ್ರಶಾಂತ ಹೇಳಿದ್ದ.

ಆದರೆ ಪ್ರೇಮಾ ಹೊರಡಲಿಲ್ಲ. ಗಂಡನನ್ನು ಕೇಳಿದರೂ ಉಪಯೋಗವಿಲ್ಲವೆಂದು ಅವಳಿಗೆ ಗೊತ್ತು. "ಶಾರದಮ್ಮ ಒಂದಿಷ್ಟು ಕರಿದ ತಿಂಡಿಗಳನ್ನು ಮಾಡಿ ಕೊಡಿ.... ಹಾಗೇ ವಿದ್ಯಾನ ಮನೆಗೂ ಹೋಗಿ ಬರ್ರಿ..... ಹಾಗಂತ ಹೇಳಿಬಿಡಿ. ಅವಳಿಗೂ ಒಂದಿಷ್ಟು ತಿಂಡಿಗಳನ್ನು ಹಾಕಿ ಕೊಡಿ...... ಚಿನ್ಮಯಿ ಬಂದ್ಲಾ ಕಾಲೇಜ್ನಿಂದ....."

"ಇಲ್ಲಮ್ಮ, ಇನ್ನೂ ಬಂದಿಲ್ಲ. ಯಾಕೆ ಏನಾದ್ರೂ ಬೇಕಾಗಿತ್ತಾ?"

"ಯಾಕೋ ಕಾಮಾಕ್ಷಿ ಇತ್ತ ಬಂದೇ ಇಲ್ಲ. ಕೇಳ್ಕೊಂಡ್ಬಾ ಅಂತ ಹೇಳ ಬೇಕಾಗಿತ್ತು."

"ಕುಂಟ್ಕೊಂಡು ಆ ಹುಡ್ಗಿ ಯಾಕೆ ಹೋಗ್ಬೇಕು, ನಳಿನಿಗೆ ಹೇಳಿದ್ರೆ ಹೋಗ್ಬರ್ತಾಳೆ."

ನಳಿನಿ ಕಾಮಾಕ್ಷಿಯ ಮನೆಗೆ ಬಂದಾಗ ಅಲ್ಲಿ ಚಿನ್ಮಯಿಯನ್ನು ಕಂಡಳು.

"ನೀನು ಇಲ್ಲಿದೀಯ! ನೀನಿನ್ನೂ ಕಾಲೇಜ್ನಿಂದ ಬಂದಿಲ್ಲ ಅಂತ ಅಮ್ಮ ಚಿಂತೆ ಮಾಡ್ತಿದ್ಲು...... ಅತ್ತೆ ಇದಾರಾ ಮನೇಲಿ..... ಅವರನ್ನ ಅಮ್ಮ ಕರೀತಿದಾಳೆ."

"ಅತ್ತೆಗೆ ಹೇಳುಕ್ಕೇ ಅಂತ್ಲೇ ನಾನು ಬಂದದ್ದು. ತಡೀ ನಾನೂ ನಿನ್ಜತೇಲಿ ಬರ್ತೀನಿ." ಎನ್ನುತ್ತಾ ಚಿನ್ಮಯಿ ಕಿಶೋರನಿಗೆ ಸಂಜ್ಞೆ ಮಾಡಿ ತಂಗಿಯ ಜತೆ ಹೊರಟಳು.

"ಮರೀಬೇಡ ಕಣೋ ಕಿಶೋರ, ಅಮ್ಮನ್ನ ಕಳಿಸು....."

"ಶಾರದಮ್ಮ ಊರಿಗೆ ಕಳಿಸೋಕೆ ಅಂತ ತುಂಬಾ ತಿಂಡಿ ಮಾಡಿದಾರೆ."

"ನಂಗೊಂದ್ಸ್ವಲ್ಪ ಕಳ್ಸೇ ಪುಸ್ಸೀ..... ನಿಮ್ಮನೆ ತಿಂಡಿಗಳು ಚೆನ್ನಾಗಿರುತ್ತವೆ." ಕಿಶೋರ ಚಿನ್ಮಯಿಯ ಕಡೆ ನೋಡಿ ಮಂದಹಾಸ ಬೀರಿದ.

"ನೀನು ಕೆಟ್ಟೋನು. ನಿನಗ್ಯಾಕೆ ಕೊಡ್ಬೇಕು ತಿಂಡೀನ?" ಅವನಿಗೆ ಕೋಪ ಬರಲಿಲ್ಲ.

"ನಾನು ಕೆಟ್ಟೋನ? ನಿಮ್ಮಕ್ಕನ್ನ ಕೇಳು ನಾನು ಒಳ್ಳೆಯವ್ನೋ ಕೆಟ್ಟೋನೋ ಅಂತ."

"ಅವ್ಳೇ ಹೇಳಿದ್ದು..... ನೀನು ಒಳ್ಳೆಯವನಲ್ಲ ಅಂತ...." ಕಿಶೋರ ಚಿನ್ಮಯಿಯ ಕಡೆ ಸಂದೇಹದಿಂದ ನೋಡಿದ. ನಾನಲ್ಲ.....ವಿದ್ಯಾ ಅನ್ನುವಂತೆ ಅವಳು ಸಂಜ್ಞೆಯಿಂದ ತಿಳಿಸಿದಳು. ಅವನು ನಕ್ಕ.

"ಅವ್ಳು ಏನಾದ್ರೂ ಅಂದ್ಕೊಳ್ಳಲಿ ನನ್ಗೇನು? ಮದ್ವೆಯಾಗಿ ಹೋದೋಳನ್ನ

ಕಟ್ಕೊಂಡು ಏನಾಗಬೇಕಾಗಿದೆ?" ಎನ್ನುತ್ತಾ ನಳಿನಿಗೆ ತಿಳಿಯದಂತೆ ಚಿನ್ಮಯಿಗೆ ಕಚಗುಳಿ ಇಟ್ಟ. ಚಿನ್ಮಯಿ ಕಿಲಕಿಲನೆ ನಕ್ಕು ಅವನಿಂದ ದೂರ ಸರಿದಳು. ಈ ಸಮಯದಲ್ಲಿ ಕಾಮಾಕ್ಷಿ ಮನೆಯಲ್ಲಿ ಇರುವುದಿಲ್ಲವೆಂದು ಚಿನ್ಮಯಿಗೆ ತಿಳಿದಿತ್ತು. ಆಗ ಈಗ ಬಂದು ಕಿಶೋರನೊಡನೆ ಹರಟೆ ಹೊಡೆಯುತ್ತಿದ್ದಳು. ಈ ವಿಷಯ ಬೇರೆ ಯಾರಿಗೂ ತಿಳಿದಿರಲಿಲ್ಲ. ನಳಿನಿ ಎಲ್ಲಿ ಮನೆಯಲ್ಲಿ ಹೇಳಿ ಬಿಡುವಳೋ ಎಂಬ ಭಯ ಕಾಡಿತು. ನಳಿನಿ ಗೇಟನ್ನು ದಾಟಿದ್ದಳು.

ಇವ್ಳೇನಾದ್ರೂ ಮನೇಲಿ ಹೇಳಿದ್ರೆ ರಂಪಾನೇ ಆಗುತ್ತೆ.....

ಅದಕ್ಯಾಕೆ ಈಗ್ಲಿಂದ ಭಯ? ಆ ಸಮಯ ಬಂದಾಗ ನೋಡ್ಕೊಂಡ್ರಾಯ್ತು.

ಆದರೂ ಚಿನ್ಮಯಿ ಆತಂಕದಿಂದ, ತಂಗಿಯ ಜತೆಯಲ್ಲಿ ಹೆಜ್ಜೆ ಹಾಕಿದಳು. ಯಾರಿಗಾದ್ರೂ ತಿಳಿದು ಏನಾದ್ರೂ ಕೇಳಿದ್ರೆ ಏನು ಸುಳ್ಳು ಹೇಳಬೇಕೆಂದು ಯೋಚಿಸುತ್ತಿದ್ದವಳು ರಸ್ತೆಯಲ್ಲಿದ್ದ ಕಲ್ಲನ್ನು ಕಾಣದೆ ಎಡವಿದಳು. ನಳಿನಿ ಅವಳ ಕೈ ಹಿಡಿದಳು.

"ನಡೆಯೋಕೆ ಆಗ್ದೇ ಇದ್ರೂ ಕಾಮಾಕ್ಷಿ ಅತ್ತೆ ಮನೆಗೆ ಯಾಕೆ ಹೋಗಿದ್ದೆ.....?"

"ಅಮ್ಮಂಗೆ ಹೇಳ್ಬೇಡ್ವೇ ಪುಸ್ಸೀ..... ಅಮ್ಮ ಬೈತಾಳೆ." ಇನ್ನು ಮುಂದೆ ಸ್ವಲ್ಪ ಹುಶಾರಾಗಿರಬೇಕೆಂದುಕೊಂಡಳು.

* * *

ಸುಗುಣಾ ಗಂಡು ಮಗುವನ್ನು ಹೆತ್ತಿದ್ದಳು. ಪ್ರಶಾಂತ ಬಾಗಿಲ ಬಳಿಯೇ ನಿಂತು ಅಮ್ಮನನ್ನು ಕರೆದು ವಿಷಯವನ್ನು ತಿಳಿಸಿ, "ನಾನೀಗ ಬೆಂಗ್ಳೂರ್ಗೆ ಹೊರಡ್ತಿದ್ದೀನಿ" ಎನ್ನುತ್ತಾ ಹಾಗೇ ವಾಪಸ್ಸು ಹೊರಟು ಹೋಗಿದ್ದ. ಭಟ್ಟನಿಗೆ ಮಗನ ಮಾತುಗಳು ಕೇಳಿಸಿದ್ದವು. ಆದರೆ ತಾನು ಯಾವ ಪ್ರತಿಕ್ರಿಯೆಯನ್ನೂ ವ್ಯಕ್ತಗೊಳಿಸಲಿಲ್ಲ. ಪ್ರೇಮಾ ತನಗಾದ ಸಂತೋಷವನ್ನು ಮುಚ್ಚಿಡಲಾಗದೇ ಗಂಡನೊಡನೆ ಹೇಳಿಕೊಂಡಳು.

"ಪ್ರಶಾಂತನ ಹೆಂಡ್ತಿಗೆ ಗಂಡು ಮಗುವಾಯ್ತಂತೆ." ಭಟ್ಟ ಸುಮ್ಮನೇ ಅವಳ ಮುಖವನ್ನು ನೋಡಿದ. ಪ್ರೇಮಾ ಒಳಗೆ ಬಂದಳು.

"ಶಾರದಮ್ಮ, ಏನಾದ್ರೂ ಸಿಹಿ ತಿಂಡಿ ಮಾಡಿ...., ಸುಗುಣಂಗೆ ಗಂಡು ಮಗುವಾಯ್ತಂತೆ." ಪ್ರೇಮಾ ಸಂಭ್ರಮದಿಂದ ಅಡುಗೆಮನೆಗೆ ಬಂದು ಹೇಳಿದಳು. ಮಕ್ಕಳೊಡನೆ ತನ್ನ ಖುಶಿಯನ್ನು ಹಂಚಿಕೊಂಡಳು. ಸಂತೋಷನಿಗೆ ತತ್‌ಕ್ಷಣವೇ ಪತ್ರವನ್ನು ಬರೆದಳು. "ಬಿಡುವಾದಾಗ, ಬೆಂಗಳೂರಿಗೆ ಹೋಗಿ ಮಗುವನ್ನು ನೋಡಿಕೊಂಡು ಬಂದು, ಮಗು ಹೇಗಿದೆ ಅಂತ ನನಗೆ ಬರೆದು ತಿಳಿಸು." ಎಂದು ಬರೆದಳು.

ಕಾಮಾಕ್ಷಿ ಆ ದಿನ ಬರಲಿಲ್ಲ. ಯಾಕೋ ಕಾಮಾಕ್ಷಿ ಬರಲೇ ಇಲ್ಲ ಎಂದು

ಹತ್ತಾರು ಬಾರಿ ಬಾಗಿಲ ಬಳಿ ಇಣುಕಿ ನೋಡಿದಳು.

"ಅಮ್ಮಾ ಹೋಗಿ ನೋಡಿ ಕರೆದು ಬರ್ಲೇನಮ್ಮಾ?" ಚಿನ್ಮಯಿ ಕೇಳಿದಳು.

"ಹೂಂ ಹೋಗ್ಬಾ.... ಹಾಗೇ ಶಾರದಮ್ಮ ಕೊಬ್ಬರಿ ಮಿಠಾಯಿ ಮಾಡಿದ್ದಾರೆ. ಅದನ್ನು ತಗೊಂಡು ಹೋಗಿ ಕೊಡು." ಚಿನ್ಮಯಿ ಸಂಭ್ರಮದಿಂದ ಹೊರಟಳು.

"ಏನೇ ಇಷ್ಟೊಂದು ಮಿಠಾಯಿ ಚಿನ್ಮಯೀ..... ನಿನ್ನ ಮದ್ವೆ ಗೊತ್ತಾಯ್ತಾ?" ಛೇಡಿಸಿದ.

"ಅತ್ಗೆಗೆ ಗಂಡು ಮಗುವಾಯ್ತಂತೆ. ಅಮ್ಮ ಕೊಟ್ಬಾ ಅಂತಂದ್ರು. ಅತ್ತೆ ಮನೇಲಿಲ್ವಾ....?"

"ಅತ್ತೆ ಇಲ್ಲ. ಅತ್ತೆ ಬರೋವರ್ಗೂ ಕೂತ್ಕೋ" ಎನ್ನುತ್ತಾ ಅವಳ ಕೈ ಎಳೆದ.

"ಮೈ ಮುಟ್ಟಬೇಡಪ್ಪಾ. ನಂಗೊಂಥರಾ ಆಗುತ್ತೆ. ದೂರದಿಂದ ಮಾತಾಡು."

"ಆಹಾಹಾ..... ಮಹಾ ಮಡಿವಂತೆ. ಆವತ್ತು ನನ್ನ ಸೊಂಟ ಹಿಡ್ಕೊಂಡು ಬೆನ್ನಿಗೆ ಒರಗಿ ಕುಳಿತಿರಲಿಲ್ವಾ! ಆಗ ಮೈಲಿಗೆ ಆಯ್ತಾ?"

"ಎಲ್ಲಿ ಬಿದ್ಬಿಡ್ತೇನೋ ಅನ್ನೋ ಭಯಕ್ಕೆ ಹಾಗೆ ಮಾಡಿದೆ. ಅದಕ್ಕೆ ಆಯ್ತಲ್ಲ ತಕ್ಕ ಶಾಸ್ತಿ..... ನಾಯಿ ಕೈಲಿ ಕಚ್ಚಿಸ್ಕೊಂಡದ್ದು ಅಲ್ದೇ.... ಹದಿನಾಲ್ಕು ಇಂಜೆಕ್ಷನ್..... ಅಬ್ಬಾ!"

"ಎಲ್ಲಿ ನೋಡೋಣ. ಗಾಯದ ಕಲೆ ಉಳಿದಿದೆಯಾ" ಎನ್ನುತ್ತಾ ಅವಳ ಕಾಲಿಗೆ ಕೈ ಹಾಕಿ ಬೆರಳುಗಳಿಂದ ಕಾಲನ್ನು ಸವರಿದ. ಅವಳು ಕಾಲನ್ನು ಹಿಂದಕ್ಕೆಳೆದು ಕೊಂಡಳು.

"ನಿನ್ನ ಕಾಲು ತುಂಬಾ ನುಣುಪಾಗಿದೆ ಚಿನ್ಮಯೀ..... ಕಾಲ್ಗೆಜ್ಜೆ ಹಾಕ್ಕೋ. ಚೆನ್ನಾಗಿ ಕಾಣುತ್ತೆ....."

"ಕಾಲ್ಗೆಜ್ಜೆ ಹಾಕ್ಕೊಂಡ್ರೆ ಓಡಾಡುವಾಗ ಘಲ್ ಘಲ್ ಅಂತ ಸದ್ದು ಮಾಡುತ್ತೆ. ನನಗೆ ಇಷ್ಟವಿಲ್ಲ." ಮೂತಿ ಚೂಪು ಮಾಡಿದಳು.

"ನನಗೆ ಇಷ್ಟ" ಅವಳ ನುಣುಪಾದ ಕಾಲುಗಳನ್ನೇ ನೋಡುತ್ತಾ ಹೇಳಿದ.

"ನೀನೇ ಹಾಕ್ಕೋ" ಕಿಲಕಿಲನೆ ನಕ್ಕಳು.

"ಗೆಜ್ಜೆ ಹಾಕ್ಕೊಳ್ಳೋಕೆ ನಾನೇನು ಹುಡುಗೀನ?" ಅವಳ ಜಡೆ ಎಳೆದ.

"ದೂರ..... ದೂರ..... ನನ್ನ ಮೈ ಮುಟ್ಟಿದರೆ, ನಾನು ನಿನ್ಹತ್ರ ಮಾತನ್ನೇ ಆಡುಲ್ಲ." ಕೋಪವನ್ನು ನಟಿಸಿದಳು.

"ಏನ್ಮಾಡ್ಲೇ ದುರಭ್ಯಾಸ..... ಒಂದ್ವಿಷ್ಯ ಹೇಳೋದನ್ನೇ ಮರೆತ್ಬಿಟ್ಟೆ...... ನಂಗೆ ಒಂದು ಹೋಟ್ಲಲ್ಲಿ ಮ್ಯಾನೇಜರ್ ಕೆಲಸ ಸಿಕ್ಕಿದೆ."

"ಹೌದೇನೋ ಕಿಶೋರ...... ಎಷ್ಟು ಮಜ ಅಲ್ವಾ? ಬೇಕಾದ ತಿಂಡಿಗಳನ್ನು ತಿನ್ಬಹುದು."

"ಹೋಟೆಲ್ ತಿಂಡಿಗಿಂತ ನಿಮ್ಮ ಶಾರದಮ್ಮ ಮಾಡೋ ತಿಂಡಿಗಳು ಚೆನ್ನಾಗಿರುತ್ವೆ"

"ನಂಗೊಂದಿನ ನಿಮ್ಮ ಹೋಟೆಲಿನ ತಿಂಡಿ ತಂದ್ಕೊಡೋ....."

"ತಂದ್ಕೊಡ್ತೀನ..... ನಂಗೇನು ಕೊಡ್ತೀಯಾ?" ತುಂಟತನದಿಂದ ಕೇಳಿದ.

"ನಿಂಗೇನ್ಬೇಕು ಮೊದಲು ಹೇಳು....."

"ಇವತ್ತೇ ಹೇಳುಲ್ಲ. ನಿನಗೆ ಇಷ್ಟವಾದ ತಿಂಡಿಗಳನ್ನು ತಂದ್ಕೊಟ್ಟ ದಿನ ಕೇಳ್ತೀನಿ. ಇಲ್ಲ ಎನ್ಬಾರ್ದು." ಎನ್ನುತ್ತಾ ಮಿಠಾಯಿಯ ಚೂರೊಂದನ್ನು ತಾನೂ ತಿಂದು ಅವಳ ಬಾಯಿಗೂ ಇಡಲು ನೋಡಿದ.

"ಇಲ್ಕೊಡು ನಾನೇ ತಿಂತೀನ." ಅವಳು ತೆಗೆದುಕೊಂಡು ತಾನೇ ತಿಂದಳು. ಕಿಶೋರ ತನ್ನ ಹೊಸ ಉದ್ಯೋಗದ ಬಗ್ಗೆ ಹೇಳಿಕೊಂಡ.

* * *

ಚಿನ್ಮಯಿಗೆ ಎರಡನೆಯ ವರ್ಷದ ಪಿ.ಯು.ಸಿ. ತರಗತಿಗಳು ಪ್ರಾರಂಭವಾಗಿದ್ದವು. ತಾನು ಕಷ್ಟಪಟ್ಟು ಓದದಿದ್ದರೂ ಪಾಸಾಗುವೆನೆಂಬ ಭರವಸೆ ಅವಳಿಗಿತ್ತು. ಓದಿನಲ್ಲಿ ಮನಸ್ಸು ನಿಲ್ಲುತ್ತಿರಲಿಲ್ಲ. ಯಾವುದೋ ಕಲ್ಪನಾ ಲೋಕದಲ್ಲಿ ವಿಹರಿಸುತ್ತಿದ್ದಳು.

ಸುಗುಣಾ ಬಾಣಂತನವನ್ನು ಮುಗಿಸಿಕೊಂಡು ಮಗುವಿನೊಂದಿಗೆ ಹಿಂತಿರುಗಿದ್ದಳು. ಪ್ರೇಮಾ ಶಾರದಮ್ಮನೊಂದಿಗೆ ಹೋಗಿ ಮಗುವನ್ನು ನೋಡಿ ಮುದ್ದಾಡಿ ಬಂದಿದ್ದಳು. "ನಮ್ಮ ಪಚ್ಚು ಮಗುವಾಗಿದ್ದಾಗ ಹೀಗೆಯೇ ಇದ್ದ." ಎಂದು ಎಲ್ಲರೊಡನೆಯೂ ಹೇಳಿಕೊಂಡಿದ್ದಳು. ಶ್ರೀಕರ, ನಳಿನಿ ಇಬ್ಬರೂ ದಿನಕ್ಕೊಂದು ಬಾರಿ ಹೋಗಿ ಮಗುವನ್ನು ಆಡಿಸಿ ಬರುತ್ತಿದ್ದರು. ಕಾಮಾಕ್ಷಿ ತಾನೇ ಖುದ್ದಾಗಿ ಬಂದು, ಮಗುವಿಗೆ ಸ್ನಾನ ಮಾಡಿಸುತ್ತಿದ್ದಳು.

ವಿದ್ಯಾ ಮತ್ತೆ ಗರ್ಭಿಣಿಯಾಗಿದ್ದಳು. ಐದು ತಿಂಗಳು ತುಂಬುವವರೆಗೂ ಯಾರಿಗೂ ತಿಳಿಸಿರಲಿಲ್ಲ. ಭವಾನಿಯಿಂದ ಪ್ರೇಮಳಿಗೆ ತಿಳಿದಾಗ, ಪ್ರೇಮಾ ಆಕ್ಷೇಪದ ಪತ್ರವನ್ನು ಬರೆದಿದ್ದಳು. ಅವಳಿಂದ ಉತ್ತರ ಬಂದಿತ್ತು. "ಹೋದ ಸಾರಿಯ ವಿಷಯ ಮತ್ತೆ ಮತ್ತೆ ನೆನಪಿಗೆ ಬಂದು, ಯಾರಿಗೂ ತಿಳಿಸಿರಲಿಲ್ಲ. ಆದರೂ ಒಂದು ಮಾತು, ನಾನು ಬಾಣಂತನಕ್ಕೆ ಅಲ್ಲಿಗೆ ಬರುವುದಿಲ್ಲ. ಇಲ್ಲೇ ಎಲ್ಲಾ ಅನುಕೂಲಗಳು, ಅಲ್ಲಿಗಿಂತ ಚೆನ್ನಾಗಿವೆ." ಎಂದು ಬರೆದಿದ್ದಳು.

ಮಗಳನ್ನು ಕರೆಸಿಟ್ಟುಕೊಂಡು ಆರೈಕೆ ಮಾಡಿಸಬೇಕು. ಅವಳ ಬಯಕೆಗಳನ್ನು ತೀರಿಸಬೇಕು, ಬಸುರಿಗೆ ಹಸುರು ಬಳೆ ತೊಡಿಸಿ, ಆರತಿ ಮಾಡಬೇಕು ಎಂಬ ಆಸೆ ಮನದಲ್ಲೇ ಉಳಿದು ಹೋಯಿತು.

"ನೋಡಿ ಶಾರದಮ್ಮ.... ಮಗಳೇ ಹೀಗೆ ಬರೆದ್ಬಿಟ್ರೆ ಇನ್ನು ಅಳಿಯ

ಏನಂದಾರು? ಹೆಣ್ಣು ಮಕ್ಕಳು ತವರು ಮನೆಗೆ ಬರಲು ಕಾರಣವನ್ನು ಹುಡುಕ್ತಿರ್ತಾರೆ ಅಂತಾರೆ ತಿಳಿದವರು..... ಚೊಚ್ಚಲು ಬಸುರು ನೆಚ್ಚಿಗೆ ಇಲ್ಲ ಅನ್ನೋ ಹಾಗೆ ಹೋದ್ಸಾರಿ ಮೈ ಇಳಿದು ಹೋದರೆ ಅದು ಯಾರ ಕೈಯಲ್ಲಿತ್ತು! ಈಗಾಗ್ಲೇ ಐದು ತಿಂಗಳಾಗಿವೆಯಂತೆ. ಇನ್ಯಾವ ಆತಂಕವೂ ಇರುಲ್ಲ. ನನಗೂ ಆಸೆ ಇರುತ್ತೆ ಅಂತ ತಿಳೀಬೇಡ್ವಾ ಅವ್ಳಿಗೆ" ಪ್ರೇಮಾ ತನ್ನ ದುಗುಡವನ್ನು ಹೇಳಿಕೊಂಡಳು.

"ನೀವು ಬೀಗಿತ್ತಿಗೆ ಪತ್ರ ಬರೆಯಿರಿ. ಅವರು ಕಳಿಸಿದ್ರೆ ಬಂದೇ ಬರ್ತಾಳೆ."

"ಮಗಳ್ಗೇ ಬರೋ ಇಷ್ಟವಿಲ್ಲದಿದ್ರೆ ಸುಶೀಲಾ ಏನು ಮಾಡಿಯಾಳು? ಹೋಗ್ಲಿ ಬಿಡಿ. ಅವರವರ ಇಷ್ಟ." ಪ್ರೇಮಾ ಸುಮ್ಮನಾಗಿ ಬಿಟ್ಟಳು.

ಅಕ್ಕ ಮತ್ತೆ ಗರ್ಭಿಣಿಯಾಗಿರುವಳೆಂದು ಚಿನ್ಮಯಿಗೆ ತಿಳಿದಾಗ, ಹಿಂದಿನ ಸಾರಿ ನಡೆದ ಆಕಸ್ಮಿಕ ನೆನಪಿಗೆ ಬಂದಿತ್ತು. ಅದಕ್ಕೆ ಕಾರಣ ತಾನು...... ಕಿಶೋರನ ಹೆಸರನ್ನು ಎತ್ತಿದುದಕ್ಕೆ ಅವಳು ಭಯದಿಂದ ತಲೆ ತಿರುಗಿ ಮೂರ್ಛೆ ಹೋದಳು. ಈ ಕಿಶೋರ ಅಂಥಾದ್ದೇನು ಮಾಡಿದ? ತಪ್ಪೆಲ್ಲಾ ಇವಳದ್ದೇ. ಭಾವಂಗೆಲ್ಲಿ ತಿಳಿದು ಬಿಡುತ್ತೋ ಅಂತ ಭಯ. ಹೌದು ಕಿಶೋರ ಹೇಳೋದು ನಿಜ.....ವಿದ್ಯಾ ಹೀಗೆ ಇವನಿಗೆ ಮೋಸ ಮಾಡಬಾರದಾಗಿತ್ತು. ತಾನು ಕಿಶೋರನಿಗೆ ಈ ವಿಷಯವನ್ನು ಹೇಳಬೇಕೆಂದುಕೊಂಡಳು.

ಕಾಮಾಕ್ಷಿ ಸಾಯಂಕಾಲ ನಾಲ್ಕು ಗಂಟೆಯ ಹೊತ್ತಿಗೆ, ಒಬ್ಬರ ಮನೆಗೆ ಅಡುಗೆ ಕೆಲಸಕ್ಕೆ ಹೋಗಿ ಬರುತ್ತಿದ್ದಳು. ಐದು ಗಂಟೆಯ ಅನಂತರ, ಕಿಶೋರ ಹೋಟೆಲ್‌ಗೆ ಹೊರಡುತ್ತಿದ್ದ. ಕಾಲೇಜಿಗೆ ಆ ಸಮಯದಲ್ಲಿ ಬಿಡುವಿದ್ದ ದಿನಗಳಲ್ಲಿ ಚಿನ್ಮಯಿ ಕಿಶೋರನೊಂದಿಗೆ ಮಾತನಾಡಲು ಬರುತ್ತಿದ್ದಳು.

ಆ ದಿನ ಮಧ್ಯಾಹ್ನ ಹೋಟೆಲ್‌ನಿಂದ ಬರುವಾಗಲೇ ಕಿಶೋರ ಹೊಸದಾಗಿ ಮಾಡಿದ್ದ ಸಿಹಿ ಹಾಗೂ ಖಾರಾ ತಿಂಡಿಗಳನ್ನು ಕಟ್ಟಿಸಿಕೊಂಡು ಬಂದಿದ್ದ. ಈ ದಿನ ಚಿನ್ಮಯಿ ಬರುವಳೆಂದು ಅವನಿಗೆ ತಿಳಿದಿತ್ತು. ಅವಳಿಗಾಗಿ ಕಾಯುತ್ತಾ ಕುಳಿತಿದ್ದ. ಎಂದಿನಂತೆ ಚಿನ್ಮಯಿ ಬಂದಳು.

"ಮೈಸೂರು ಪಾಕಿನ ವಾಸ್ನೆ ಬರ್ತಿದೆ." ಚಿನ್ಮಯಿ ಮೂಗರಳಿಸಿದಳು.

"ಹೌದು..... ನಾನು ನಿಂಗೋಸ್ಕರ ತಂದಿದೀನಿ." ತಿಂಡಿಗಳ ಪೊಟ್ಟಣಗಳನ್ನು ಬಿಚ್ಚಿದ..... ಚಿನ್ಮಯಿ ಕಣ್ಣರಳಿಸಿ ಮೈಸೂರು ಪಾಕಿನ ಚೂರೊಂದನ್ನು ಬಾಯಿಗೆ ಹಾಕಿಕೊಂಡಳು.

"ತುಂಬಾ ಚೆನ್ನಾಗಿದೆ..... ನೀನೂ ತಿನ್ನು....."

"ಬೇಡ..... ಎಲ್ಲಾ ನಿನಗಾಗೇ ತಂದಿದೀನಿ." ಅವಳು ಸಂಭ್ರಮದಿಂದ ತಿನ್ನುವುದನ್ನೇ ತಮಾಷೆಯಾಗಿ ನೋಡಿದ....

"ನೀನು ಹೀಗೆ ನೋಡ್ಬೇಡ.....ನಂಗೆ ದೃಷ್ಟಿ ಆಗುತ್ತೆ."

"ಸರಿ. ಕಣ್ಣು ಮುಚ್ಚಿಕೊಳ್ತೀನಿ." ಅವನು ಕಣ್ಣುಗಳನ್ನು ಮುಚ್ಚಿಕೊಂಡ. ಜತೆಯಲ್ಲಿದ್ದ ಖಾರದ ಮಿಕ್ಸ್ಚರ್‌ಗಳನ್ನು ಬಾಯಿಗೆ ಹಾಕ್ಕೊಂಡಳು. ಖಾರದಿಂದ ಬಿಕ್ಕಳಿಕೆ ಬರತೊಡಗಿತು. ಕಿಶೋರ ಕಣ್ಣು ಬಿಟ್ಟ.... ನೀರು ಬೇಕು ಎನ್ನುವಂತೆ ಸಂಜ್ಞೆ ಮಾಡಿದಳು.

ಒಳಗಿನಿಂದ ನೀರನ್ನು ತಂದುಕೊಟ್ಟ. ನೀರನ್ನು ಕುಡಿದಳು. ಬಿಕ್ಕಳಿಕೆ ನಿಂತಿತು.

"ಸಾಕಪ್ಪಾ..... ಈ ತಿಂಡಿ. ವಿಪರೀತ ಖಾರ. ನೀನೇ ತಿನ್ನು." ಅವಳ ಕಣ್ಣು, ಮೂಗುಗಳಿಂದ ನೀರು ಸುರಿಯುತ್ತಿತ್ತು. ಮುಖ ಕೆಂಪಾಗಿತ್ತು....

ಅವನೂ ಒಂದು ಸ್ವಲ್ಪ ತಿಂದು ಖಾರ ಎಂದು ನೀರು ಕುಡಿದಾಗ, ಅವಳು ಮುಕ್ತವಾಗಿ ನಕ್ಕಳು. ನಮ್ಮ ಹೋಟೆಲ್‌ನ ತಿಂಡಿ ಇಷ್ಟು ಖಾರ ಅಂತ ನನಗೆ ಗೊತ್ತಿರಲೇ ಇಲ್ಲ ಎನ್ನುತ್ತಾ ಎಲ್ಲವನ್ನು ವಾಪಸ್ಸು ತೆಗೆದಿಟ್ಟ.

"ಮೈಸೂರು ಪಾಕ್‌ನ ತಗೊಂಡು ಹೋಗ್ತಾ?"

"ಇಷ್ಟೇ ಅಲ್ಲೇ ಇರೋದು.... ಯಾರಿಗೂ ಸಾಕಾಗುಲ್ಲ."

"ನಾನು ಮುಚ್ಚಿಟ್ಟುಕೊಂಡು ಓದುವಾಗ ತಿಂತೀನಿ. ನೀನು ನಂಗೋಸ್ಕರ ತಾನೇ ತಂದಿರೋದು. ನಾನೊಬ್ಬೇ ತಿಂತೀನಿ. ಯಾರಿಗೇಕೆ ಕೊಡ್ಬೇಕು?"

"ನಳಿನಿಗೆ ಗೊತ್ತಾದ್ರೆ?"

"ಈಗ ನಾನು ಒಬ್ಬೇ ಮೇಲಿನ ರೂಮ್‌ನಲ್ಲಿ ಮಲಗ್ತೀನಿ."

"ಒಬ್ಬೇ ಮಲಗ್ತೀಯ, ಹೆದರ್ಕೆ ಆಗುಲ್ವಾ? ಕಳ್ಳ ಗಿಳ್ಳ ಬಂದ್ರೆ?"

"ಕಳ್ಳ ಯಾಕೆ ಬರ್ತಾನೆ...? ನೀನು ಹೆದರಿಸ್ತಿದೀಯ ಅಷ್ಟೇ" ಅವಳು ಮುಗುಳ್ನಕ್ಕಳು. ಅವಳನ್ನೇ ಕಳ್ಳನಂತೆ ನೋಡಿದ. ಮನದ ಆಸೆ ಗರಿಗೆದರುತ್ತಿತ್ತು.

"ಬೇಡ ಚಿನ್ಮಯೀ.... ಹೆಣ್ಮಕ್ಳು ಒಬ್ರೇ ಮಲಗ್ಬಾರ್ದು ಅಂತ ಅಮ್ಮ ನನ್ತಂಗಿಗೆ ಹೇಳ್ತಾನೇ ಇರ್ತಾಳೆ....."

"ನಿಮ್ಮನೇಲಾದ್ರೆ ಎರಡೇ ರೂಮು ಇರೋದು. ನಮ್ಮನೇಲಿ ಆರು ರೂಮುಗಳಿವೆ. ಸಂತೋಷನಗೆ ಅಂತ ಇದ್ದ ರೂಮು, ಈಗ ಅವನಿಲ್ಲ. ನಾನು ಉಪಯೋಗಿಸ್ತಿದೀನಿ.... ಅವನು ಬಂದ್ಮೇಲೆ ಅವನ್ಗೇ ಬಿಟ್ಟು ಕೊಡ್ತೀನಿ."

"ಅವನು ಡಾಕ್ಟರಾದ ಮೇಲೆ ಈ ಮನೆಗೆ ಮತ್ತೆ ವಾಪಸ್ಸು ಬರ್ತಾನಾ? ಪ್ರಶಾಂತನಂತೆ ಬೇರೆ ಮನೆ ಮಾಡ್ಕೊಂಡಿರ್ತಾನೆ ಅಷ್ಟೇ....."

"ಏನಾದ್ರೂ ಮಾಡ್ಕೊಳ್ಳಿ ನಂಗೇನು? ನಾನೇನು ಈ ಮನೇಲಿ ಸದಾ ಕಾಲಕ್ಕೂ ಇರೋಳಲ್ಲ. ಅಕ್ಕನಂತೆ ಮದ್ವೆ ಮಾಡ್ಕೊಂಗು ಹೋಗೋಳೇ ತಾನೇ.....?"

"ಏಯ್ ಕಳ್ಳೀ.... ನಿಂಗಾಗ್ಲೇ ಮದ್ವೆ ಆಸೆನೇಸೆ?"

"ಆಸೆ ಅಂತಲ್ಲ... ಮದ್ವೆಯಾದ್ಮೇಲೆ ಜೀವನಾನೇ ಬೇರೆ ಥರಾ ಅಲ್ವಾ.....?

ನಾನೊಂದು ವಿಷ್ಯ ಹೇಳಿದ್ರೆ ನೀನು ನಗ್ಬಾರ್ದು..... ಭಾವ ಅಕ್ಕನ್ನ ಎಷ್ಟು ಪ್ರೀತಿಸ್ತಾರೆ ಗೊತ್ತಾ? ಅವರುಗಳ ಪ್ರೀತಿ ನೋಡಿದಾಗ, ಮದ್ವೆ ಆದ್ರೆ ಎಷ್ಟು ಚೆನ್ನ ಅಂತನ್ನಿ ಸುತ್ತೆ......"

"ಹೌದೇನೇ! ನಿಮ್ಮ ಭಾವ ನಿಮ್ಮಕ್ಕನ್ನ ಹೇಗೆ ಪ್ರೀತಿ ಮಾಡಿದ್ರು.....?"

"ಥೂ ಹೋಗಪ್ಪಾ...... ಅದನ್ನೆಲ್ಲ ಹೇಗೆ ಹೇಳೋದು?"

"ಹೀಗಾ?" ಎನ್ನುತ್ತಾ ಅವನು ಅವಳನ್ನು ಬಾಚಿ ತಬ್ಬಿಕೊಂಡು ಅವಳ ಕೆನ್ನೆಗೆ ಮುತ್ತಿಟ್ಟ. ಅವಳು ಅವನನ್ನು ಸರಿಸಲು ನೋಡಿದಳು. ಅವನು ಬಿಡಲಿಲ್ಲ. ಹೀಗಾ! ಹೀಗಾ! ಎನ್ನುತ್ತಾ ಅವಳ ಮುಖದ ಮೇಲೆ ಮುತ್ತಿನ ಮಳೆಯನ್ನು ಸುರಿಸಿದ. ಮೆಲ್ಲನೆ ಅವನ ಕೈ ಅವಳ ಸೊಂಟವನ್ನು ಬಳಸಿತು. ಆಲಿಂಗನ ಗಾಢ ವಾಯಿತು. ಅವಳ ಮೈ ಬಿಸಿಯಾಯಿತು.

"ಬಿಡೋ..... ಕಿಶೋರ..... ಇದೇನ್ಮಾಡ್ತಿದೀಯ" ಎಂದು ಬಾಯಿ ಹೇಳಿದರೂ, ಪ್ರಾಣವಿಲ್ಲದವಳಂತೆ ಅವನಿಗೆ ಅಂಟಿಕೊಂಡಿದ್ದಳು.

"ನಿಮ್ಮಕ್ಕನ್ನ ನಿಮ್ಮ ಭಾವ ಹೇಗೆ ಪ್ರೀತಿಸ್ತಾರೋ ಹಾಗೆ ನಾನೂ ನಿನ್ನನ್ನು ಪ್ರೀತಿಸ್ತೀನಿ." ಎನ್ನುತ್ತಾ ಅವಳನ್ನು ತನ್ನ ವಶ ಮಾಡಿಕೊಂಡ. ಅವನ ಪ್ರೀತಿಯ ಮೋಡಿಗೆ ಮರುಳಾದವಳಂತೆ ತನ್ನನ್ನು ತಾನೇ ಅವನಿಗೆ ಒಪ್ಪಿಸಿಕೊಂಡಳು.

ವಾಸ್ತವಕ್ಕೆ ಬಂದ ಮೇಲೆ ಅವಳಿಗೆ ದಿಗಿಲಾಗಿತ್ತು....."ಕಿಶೋರ ಯಾಕೆ ಹೀಗ್ಮಾಡಿದ್ಯೋ..... ನಾನು ಮನೆಗೆ ಹೇಗೆ ಹೋಗ್ಲೀ..... ಅಪ್ಪಂಗೆ ಗೊತ್ತಾದ್ರೆ ಮನೆ ಸೇರಿಸ್ತಾರಾ?"

"ಏನೂ ಗೊತ್ತಾಗುಲ್ಲ..... ನೀನು ಧೈರ್ಯವಾಗಿರು..... ನಾನಿದೀನಿ" ಅವನು ಅವಳಿಗೆ ಧೈರ್ಯವನ್ನು ಹೇಳಿ ಅವಳ ಕಣ್ಣುಗಳನ್ನು ಒರೆಸಿದ.....

* * *

ಅಧ್ಯಾಯ – ಇಪ್ಪತ್ತೆಂಟು

ಮತ್ತೆ ಕಿಶೋರ ಲಾಕಪ್ಪಿಗೆ

ಅವಳು ಮನೆಗೆ ಬಂದಳು. ಅಪರಾಧಿಯಂತೆ, ತಾನೇ ಮನೆಯವರನ್ನು ಸಂಶಯದಿಂದ ನೋಡಿದಳು. ಆದರೆ ಅವಳ ಮೇಲೆ ಯಾರಿಗೂ ಯಾವ ಅನುಮಾನವೂ ಇಲ್ಲದುದರಿಂದ ಯಾರ ನೋಟವೂ ಇವಳ ಮೇಲಿರಲಿಲ್ಲ. ತನ್ನ ರೂಮ್‌ಗೆ ಹೋಗಿ ಮಂಚದ ಮೇಲೆ ಉರುಳಿಕೊಂಡಳು. ಸಾಯಂಕಾಲ ನಡೆದ ಘಟನೆಗಳನ್ನು ಮೆಲುಕು ಹಾಕಿದಳು.

'ಕಿಶೋರ ಯಾಕೆ ಹೀಗೆ ಮಾಡ್ದ! ಮೊದಲ್ನಿಂದ ಅವನಿಗೆ ಈ ಆಸೆ ಇತ್ತೆ? ಅಕ್ಕನೊಡನೆಯೂ ಅವನು ಹೀಗೆ ವರ್ತಿಸಿರಬಹುದೇ....? ಅಥವಾ ತನ್ನನ್ನು ನಿಜವಾಗಿಯೂ ಪ್ರೀತಿಸುತ್ತಾನೆಯೇ? ಆದರೂ ಅವನು ಹೀಗೆ ಮಾಡಬಾರದಾಗಿತ್ತು.....' ಎಂದು ಹೇಳಿಕೊಂಡರೂ, ಒಳಮನಸ್ಸು ತಾನೂ ಹೆಚ್ಚು ವಿರೋಧಿಸಲಿಲ್ಲ. ತನ್ನ ಮಾತುಕತೆ ನಡೆನುಡಿ ಅವನನ್ನು ಪ್ರೋತ್ಸಾಹಿಸಿರಬಹುದು, ತನ್ನದೂ ತಪ್ಪಿದೆ ಎಂದುಕೊಂಡಳು.

ಆದರೆ ಅನಂತರ ಮತ್ತೆ ಅವನ ಮನೆಗೆ ಹೋಗುವ ಧೈರ್ಯವಿರಲಿಲ್ಲ. ಮನೆಯವರೊಡನೆ ಮುಖಕ್ಕೆ ಮುಖ ಕೊಟ್ಟು ಮಾತನಾಡುವುದೂ ಕಷ್ಟವೆನಿಸಿತ್ತು. ಕಾಲೇಜಿಗೂ ಹೋಗದೇ ಮನೆಯಲ್ಲೇ ಕುಳಿತರೆ ಮನೆಯವರಿಗೆ ಅನುಮಾನ ಬರಬಹುದೆಂದುಕೊಂಡು ಕಾಲೇಜಿಗೆ ಹೋಗಿದ್ದಳು. ಬಸ್‌ಸ್ಟಾಪದ ಬಳಿ ಅವಳಿಗಾಗಿಯೇ ಕಾಯುತ್ತಾ ನಿಂತಿದ್ದ ಕಿಶೋರ ಅವಳ ಬಳಿಗೆ ಬಂದ.

"ಚಿನ್ಮಯೀ..... ನನ್ನ ಮೇಲೆ ಕೋಪಾನಾ?" ಕೇಳಿದ.

"ಕೋಪ ಬರದೇ ಇರುತ್ತಾ? ನೀನ್ಯಾಕೆ ಹೀಗೆ ಮಾಡ್ದೇ.....! ಇನ್ಮುಂದೆ ನನ್ನತ್ರ ಮಾತಾಡ್ಬೇಡ." ಉರಿ ಮುಖದಿಂದ ನೋಡಿದಳು.

"ನನ್ನದು ತಪ್ಪಾಯಿತು ಚಿನ್ಮಯೀ..... ನಾನು ನಿನಗೆ ದ್ರೋಹ ಮಾಡುಲ್ಲ. ನಾನು ನಿನ್ನನ್ನೇ ಮದ್ವೆಯಾಗ್ತೀನಿ. ಆದ್ರೆ ನನ್ಮೇಲೆ ಕೋಪ ಮಾತ್ರ ಮಾಡ್ಕೋಬೇಡ."

"ನನಗೆ ನಿನ್ನನ್ನು ಮದ್ವೆಯಾಗೋಕೆ ಇಷ್ಟವಿಲ್ಲ...."

"ಹಾಗಿದ್ರೆ, ನನ್ನ ಮನೆಗ್ಯಾಕೆ ಬರ್ತಿದ್ದೆ.....! ನನ್ನ ಸ್ನೇಹಾನ ಯಾಕೆ ಬೆಳೆಸ್ದೆ! ನಿಮ್ಮನೆಯವರ ಸಹವಾಸವೇ ಬೇಡ ಅಂತ ಅಂದ್ಕೊಂಡಿದ್ದೋನಿಗೆ, ಆಸೆ ತೋರಿಸಿ, ಪ್ರೀತಿ ಹುಟ್ಟಿಸಿದವಳು ನೀನೇ ತಾನೇ.....?"

"ಅಕ್ಕ ಮಾಡಿದ್ದು ತಪ್ಪು ಅಂತ ಅನ್ನಿಸ್ತು....ನಿನ್ನದೇನೂ ತಪ್ಪಿರಲಿಲ್ಲವೆಂದು ಕೊಂಡು ನಿನ್ಹತ್ರ ಒಳ್ಳೆಯ ಮಾತುಗಳನ್ನಾಡ್ದೆ...... ಅದೇ ತಪ್ಪಾಗಿ ಹೋಯ್ತು.... ಈಗ ನೀನೂ ಎಂಥೋನು ಅಂತ ನನಗೆ ಅರ್ಥವಾಯ್ತು....."

"ಬರೀ ನನ್ನೊಬ್ಬನ್ದೇ ತಪ್ಪಲ್ಲ. ನಡೆದ ಅನಾಹುತದಲ್ಲಿ ನೀನೂ ನನ್ನಷ್ಟೇ ತಪ್ಪು ಮಾಡಿದೀಯ. ಆ ದಿನ ನೀನು ನನ್ನನ್ನು ಪ್ರತಿಭಟಿಸಲಿಲ್ಲ.

ಕಿರುಚಲಿಲ್ಲ. ಯಾರನ್ನೂ ಕರೆಯಲಿಲ್ಲ. ನೀನ್ಯಾಕೆ ಸುಮ್ಮನಿದ್ದೆ? ನನ್ನ ಕೆನ್ನೆಗೆ ಎರಡೇಟು ಬಿಗಿದು, ನನ್ನ ಕೈಗಳನ್ನು ಕಚ್ಚಿ, ನನ್ನಿಂದ ದೂರ ಓಡಿ ಹೋಗಬಹುದಾಗಿತ್ತು ಅಲ್ವಾ! ಹಾಗ್ಯಾಕೆ ಮಾಡ್ಲಿಲ್ಲ!"

ಚಿನ್ಮಯೀ ತಲೆ ತಗ್ಗಿಸಿದಳು. ಅವಳಿಗೂ ಹೀನಾಯವಾಗಿತ್ತು. "ಆದದ್ದಾಗಿ ಹೋಯ್ತು ಚಿನ್ಮಯೀ. ಈಗ ಅದನ್ನು ಸರಿ ಮಾಡೋಣ.... ಒಂದು ವೇಳೆ ಈ ವಿಷಯ ಬೇರೆ ಯಾರಿಗಾದ್ರೂ ತಿಳಿದ್ರೆ, ನಿನ್ನ ಸ್ಥಿತಿ ಏನಾಗಬಹುದು ಅಂತ ಯೋಚಿಸಿದೀಯಾ.....? ಯಾರಿಗೆ ಏನು ಹೇಳ್ತೀಯ? ಯಾರು ನಿನ್ನ ಮಾತನ್ನು ನಂಬ್ತಾರೆ? ನಿಮ್ಮಪ್ಪನಗೆ ಮೊದಲೇ ನನ್ನನ್ನು ಕಂಡ್ರೆ ಆಗುಲ್ಲ. ನಾನು ಅವರ ಮೇಲಿನ ದ್ವೇಷಕ್ಕೆ ಹೀಗೆ ಮಾಡಿದೀನೆಂದು, ನನ್ನನ್ನು ಮತ್ತೆ ಜೈಲ್‌ಗೆ ಕಳಿಸಬಹುದು...... ಆದರೆ ನನ್ನ ಗತಿ? ನಿನ್ನನ್ನು ಯಾರು ಮದ್ವೆಯಾಗ್ತಾರೆ.....?"

"ಯಾರೂ ನನ್ನನ್ನ ಮದ್ವೆಯಾಗ್ಬೇಕಾಗಿಲ್ಲ. ನಾನು ಹೀಗೇ ಇದ್ದು ಬಿಡ್ತೀನಿ."

"ನೀನೇನೋ ಇರಬಹುದು..... ಆದರೆ ನಾನು......? ನಾನು ನಿನ್ನನ್ನು ಪ್ರೀತಿಸ್ತೀನಿ ಚಿನ್ಮಯೀ."

"ಎಂಥಾ ಪ್ರೀತಿ ಅಂತ ಗೊತ್ತಾಯ್ತಲ್ಲ. ಪ್ರೀತಿಸೋರು ಹೀಗೆ ಮಾಡ್ತಾರಾ.....?"

"ನಿಮ್ಮ ಭಾವ, ನಿನ್ನಕ್ಕನಗೆ ಹೀಗೆ ಪ್ರೀತಿ ಮಾಡ್ತಾರೆ ಅಂತ ಹೇಳ್ದೋಳು ನೀನೇ ತಾನೇ..... ಈ ಮುಂಚೆ ಎಂದಾದ್ರೂ ಹೀಗೆ ವರ್ತಿಸಿದ್ನಾ? ಬೇಕಾದ್ರೆ ನಿಮ್ಮಕ್ಕನ್ನ ಕೇಳು, ಒಂದು ದಿನವೂ ಅವಳ್ಹತ್ರ ಅನುಚಿತವಾಗಿ ನಡೆದುಕೊಂಡಿಲ್ಲ."

"ಅದೆಲ್ಲಾ ನಂಗೊತ್ತಿಲ್ಲ ಕಿಶೋರ, ನನ್ನ ಪಾಡಿಗೆ ನನ್ನನ್ನು ಬಿಟ್ಬಿಡು.... ನನಗೆ ನಿನ್ಹತ್ರ ಯಾವ ಮಾತೂ ಬೇಕಿಲ್ಲ."

"ಇದೇ ಕಡೇ ಮಾತಾ? ನಾನು ಒಳ್ಳೇ ಮಾತ್ನಿಂದ ಹೇಳ್ತಿದೀನಿ. ಬೀದೀಲಿ ಜನ ಸೇರಿದ್ರೆ, ನಿನ್ನ ಮರ್ಯಾದೆ ಹೋಗುತ್ತೆ. ನನ್ನದಲ್ಲ.... ನಿಮ್ಮಪ್ಪಂಗೆ ತಿಳಿದ್ರೆ, ನಿನ್ನನ್ನ ಮನೆಯಿಂದಾಚೆ ಹಾಕ್ತಾರೆ..... ಆಗ ನಿನಗೆ ನಾನೇ ಗತಿ..... ಮರ್ಯಾದೆಯಿಂದ ನನ್ನನ್ನು ಮದುವೆಯಾಗು. ನಾನು ನಿನ್ನನ್ನು ಚೆನ್ನಾಗಿ ನೋಡಿಕೊಳ್ತೀನಿ."

"ನೀನು ಬಲವಂತ ಮಾಡಿದ್ರೆ, ನಾನು ಆತ್ಮಹತ್ಯೆ ಮಾಡ್ಕೊಳ್ತೀನಿ ಅಷ್ಟೇ."

"ನೀನು ಹಾಗೆ ಮಾಡ್ಕೊಂಡ್ರೆ ನಿಮ್ಮ ಮನೆ ಮರ್ಯಾದೆ ಬೀದಿ ಪಾಲಾಗುತ್ತೆ. ನಾನು ಜೈಲಿಗೆ ಹೋಗ್ತೀನಿ. ನಿನಗೆ ಅದೇ ಬೇಕಿದ್ರೆ ಹಾಗೇ ಮಾಡು....." ಎನ್ನುತ್ತಾ

ಅವಳ ಮುಂದಿನಿಂದ ಹಾದು ಹೊರಟು ಹೋದವನು, ಸೀದಾ ಪ್ರಶಾಂತನ ಮನೆಗೆ ಬಂದ.

"ಪ್ರಶಾಂತ, ನಿನ್ಹತ್ರ ಮುಖ್ಯವಾದ ವಿಷಯವನ್ನು ಮಾತ್ನಾಡ್ಬೇಕು. ಸ್ವಲ್ಪ ಬರ್ತೀಯಾ?" ಎಂದು ಹೊರಕ್ಕೆ ಕರೆ ತಂದ. ಮೊದಲ್ನಿಂದ ಅಷ್ಟೂ ವಿಷಯವನ್ನ ಅವನಿಗೆ ಹೇಳಿದ.

"ವಿದ್ಯಾ ನನ್ನನ್ನು ಪ್ರೀತಿಸ್ತಿದ್ಲೋ ಇಲ್ಲವೋ ಅವಳಿಗೆ ನನ್ನನ್ನು ಮದ್ವೆಯಾಗ್ಬೇಕೂಂತ ಆಸೆ ಇತ್ತು. ಅದಕ್ಕೆ ಸಾಕ್ಷಿಯಾಗಿ, ಅವಳು ಬರೆದ ಪತ್ರಗಳು ನಮ್ಮ ಮನೆಯಲ್ಲಿವೆ. ಚಿನ್ಮಯಿ ತಾನಾಗಿಯೇ ನನಗೆ ಒಲಿದು ಬಂದಳು. ನಾನೂ ನಿರಾಕರಿಸಲಿಲ್ಲ. ನಮ್ಮಿಬ್ಬರ ಸಂಬಂಧ ತುಂಬಾ ಮುಂದುವರೆದಿದೆ. ನಾನು ಅವಳನ್ನು ಮದ್ವೆಯಾಗ್ತೀನಿ. ಅವಳ ಕೈ ಬಿಡುಲ್ಲ. ಆದ್ರೆ ಅವಳು ಆತ್ಮಹತ್ಯೆ ಮಾಡ್ಕೊಳ್ತೀನಿ ಅಂತ ಹೆದರಿಸ್ತಿದಾಳೆ.... ನಾನು ಎಲ್ಲಾ ನಿನಗೆ ತಿಳಿಸಿದೀನಿ.... ನೀನೀಗ ನಿನ್ನ ತಂಗಿಯ ಪ್ರಾಣವನ್ನು ಉಳಿಸಬೇಕು. ನಮ್ಮಿಬ್ಬರ ಮದುವೆಗೆ ಸಹಾಯ ಮಾಡ್ಬೇಕು."

"ನೀನು ನಿಜ ಹೇಳ್ತಿದೀಯ ಅಂತ ನಾನ್ಹೇಗೆ ನಂಬಲಿ?"

"ನಿನಗೆ ನಿನ್ನ ತಂಗಿಯ ಮೇಲೆ ನಂಬಿಕೆ ಇದೆ ತಾನೇ? ಅವಳನ್ನೇ ಕರೆದು ಕೇಳು. ಅವಳು ನಮ್ಮ ಮನೆಗೆ ಆಗ ಈಗ ಬರುತ್ತಿದ್ದುದನ್ನು ನಳಿನಿ ಕಂಡಿದ್ದಾಳೆ. ಅವಳನ್ನು ಕೇಳು."

"ನಿನಗ್ಯಾಕೆ ನಮ್ಮ ಮನೆಯ ಹೆಣ್ಣು ಮಕ್ಕಳ ಮೇಲೇ ಕಣ್ಣು?"

"ನೋಡು ನಾನು ಮೊದ್ಲೇ ಹೇಳಿದೆ.... ವಿದ್ಯಾ ತಾನಾಗಿಯೇ, ತನ್ನನ್ನು ಮದ್ವೆಯಾಗು ಅಂತ ಕೇಳ್ಕೊಂಡ್ಲು. ಅದನ್ನು ನಿಮ್ಮಪ್ಪ ತಪ್ಪಿಸಿದರು. ಆ ಕೋಪಕ್ಕೆ ನಾನು, ಆಸಿಡ್ ಎರಚುವ ನಾಟಕ ಆಡಿದ್ದು ನಿಜ. ಆದ್ರೆ ಪೋಲೀಸರ್ಗೆ ನಿಜ ತಿಳಿದ್ಮೇಲೆ ಫೈನ್ ಹಾಕಿ, ಬುದ್ಧಿವಾದ ಹೇಳಿ ಬಿಟ್ಟು ಬಿಟ್ರು......ನಾನು ಮತ್ತೆ ನಿಮ್ಮ ಮನೆಯ ಕಡೆ ತಿರುಗಿ ನೋಡಿರಲಿಲ್ಲ. ಚಿನ್ಮಯಿ ತಾನಾಗಿಯೇ ನನ್ನ ಬಳಿಗೆ ಬಂದಳು. ವಿದ್ಯಾ ಮಾಡಿದ್ದು ತಪ್ಪು ಎಂದು ಹೇಳಿ, ಅವಳು ಬರೆದ ಪತ್ರಗಳು ನನ್ನ ಬಳಿ ಇವೆ ಎಂದು ಹೇಳಿದಳು. ನಮ್ಮಿಬ್ಬರ ಸ್ನೇಹ ಬೆಳೆಯಿತು. ನಾನು ಅವಳನ್ನು ಹೋಟೇಲ್‌ಗೆ ಕರ್ಕೊಂಡು ಹೋಗಿದ್ದೆ.... ಡೈರಿ ಫಾರಂಗೆ ಕರ್ಕೊಂಡು ಹೋಗಿದ್ದೆ. ಅವಳಿಗೆ ಅಲ್ಲಿಯೇ ನಾಯಿ ಕಚ್ಚಿದ್ದು.... ಆಮೇಲೆ ಅವಳು ಆಗ ಈಗ ನಮ್ಮಮ್ಮ ಮನೆಯಲ್ಲಿಲ್ಲದ ಸಮಯದಲ್ಲಿ ಬರುತ್ತಿದ್ದಳು..... ಆಗ ಒಂದು ದಿನ ನಾವಿಬ್ಬರೂ ಒಂದಾದೆವು. ನನ್ನಿಂದ ಅಚಾತುರ್ಯ ನಡೆದು ಹೋಗಿದೆ. ಅದನ್ನು ಸರಿ ಮಾಡುವ ಆಸೆ ನನ್ನದು.... ಹೇಗಾದ್ರೂ ಮಾಡಿ ನಮ್ಮಿಬ್ಬರ ಮದುವೆ ನೆರವೇರುವಂತೆ ಮಾಡು..... ಇಲ್ದಿದ್ರೆ ಹಾಳಾಗೋದು ನಿನ್ನ ತಂಗಿಯ ಜೀವನ. ಹೋಗುವುದು ನಿಮ್ಮ ಮನೆಯ ಮರ್ಯಾದೆ. ನಾನು ಒಂದು ಸಾರಿ ಲಾಕಪ್‌ಗೆ ಹೋಗಿ ಬಂದವನು.... ಮತ್ತೆ

ಜೈಲಾದರೆ ಅದು ನನ್ನ ದುರದೃಷ್ಟ ಅಷ್ಟೇ..... ನನ್ನನ್ನು ನಾನು ಸುಧಾರಿಸಿಕೊಂಡು ಜೀವನ ನಡೆಸುವ ಆಸೆ ನನಗೂ ಇದೆ......"

ಪ್ರಶಾಂತ ಮಾತಿಲ್ಲದವನಾಗಿದ್ದ. ತನ್ನ ಮನೆಯಲ್ಲಿ ಇಷ್ಟೆಲ್ಲಾ ಹಗರಣಗಳು ನಡೆದಿರಬಹುದೆಂದು ಅವನಿಗೆ ತಿಳಿದಿರಲಿಲ್ಲ. ಬಹುಶಃ ತಾನು ಮನೆ ಬಿಟ್ಟು ಹೋಗದೇ ಇದ್ದಿದ್ದರೆ ಇದೆಲ್ಲಾ ನಡೆಯುತ್ತಿರಲಿಲ್ಲ ಎಂದೆನಿಸಿತ್ತು.

"ಏನು ಯೋಚಿಸ್ತಿದೀಯ ಪ್ರಶಾಂತ... ನಿಮ್ಮ ಮನೇಲಿ ಏನಾದ್ರೂ ದುರ್ಘಟನೆ ನಡೆದ್ರೆ ಅದಕ್ಕೆ ನಾನು ಜವಾಬ್ದಾರನಲ್ಲ..... ನಿನ್ನ ತಂಗಿಯ ಅಳಿವು, ಉಳಿವು, ಮಾನ, ಮರ್ಯಾದೆ ನಿನ್ನ ಕೈಲಿದೆ..... ನಾನಿನ್ನು ಹೋಗ್ತೀನಿ."

"ಕಿಶೋರ, ನಂಗೆ ಸ್ವಲ್ಪ ಸಮಯ ಬೇಕು. ನಿನಗೇ ಗೊತ್ತು. ನಾನು ಬೇರೆ ಇದೀನಿ..... ಸದ್ಯಕ್ಕೆ ನೀನು ಅವಳ ಹತ್ರ ಮಾತನಾಡ್ಲೇ ಬೇಡ. ಮಾತನಾಡ್ಸಿದ್ರೆ, ಭಯದಿಂದ ಅವಳು ಜೀವಕ್ಕೇನಾದ್ರೂ ಅಪಾಯ ಮಾಡಿಕೊಳ್ಳಬಹುದು....."

ಹಾಗೆ ಹೇಳಿದರೂ, ಪ್ರಶಾಂತನಗೆ ಯಾವ ಉಪಾಯವೂ ಹೊಳೆಯಲಿಲ್ಲ. ಹೆಂಡತಿಗೆ ಈ ವಿಷಯವನ್ನು ಹೇಳುವುದು ಬೇಡ ಎನಿಸಿತ್ತು. ವಿದ್ಯಾ ಗರ್ಭಿಣಿ, ಅವಳಿಗೆ ಈ ವಿಷಯಗಳನ್ನು ತಿಳಿಸಿ, ಮನಸ್ಸು ಕೆಡಿಸುವುದು ಬೇಡ ಎಂದುಕೊಂಡ. ಓದುತ್ತಿರುವ ಸಂತೋಷನಗೆ ಈ ವಿಷಯವನ್ನು ತಿಳಿಸುವುದು ಸರಿಯಲ್ಲ. ಅಮ್ಮನಿಗಂತೂ ಈ ವಿಷಯ ತಿಳಿಯುವುದೇ ಬೇಡ. ನಳಿನಿ, ಶ್ರೀಕರ ಚಿಕ್ಕವರು. ಅವರ ಹತ್ತಿರ ಈ ಮಾತುಗಳನ್ನಾಡುವುದು ಚೆನ್ನಲ್ಲ. ಏನಾದರಾಗಲೀ, ಮೊದಲು ಚಿನ್ಮಯಿಯ ಹತ್ತಿರ ಮಾತನಾಡಿ, ನಿಜವೋ ಸುಳ್ಳೋ ಎಂದು ನಿರ್ಧರಿಸಬೇಕೆಂದುಕೊಂಡ. ಚಿನ್ಮಯಿಗೆ ಹೇಳಿ ಕಳಿಸಿದ.

"ಏನೇ ಚಿನ್ಮಯೀ..... ಬರೋದೇ ಇಲ್ವಲ್ಲೇ..... ಹೇಗೆ ಓದ್ತಾ ಇದೀಯ? ಈ ವರ್ಷ ಪಬ್ಲಿಕ್ ಪರೀಕ್ಷೆ ಅಲ್ವಾ! ಮುಂದೆ ಯಾವ ಕೋರ್ಸ್‌ಗೆ ಸೇರ್ಕೋತೀಯ?"

ಅವನ ಪ್ರಶ್ನೆಗಳಿಗೆ ತತ್‌ಕ್ಷಣ ಉತ್ತರ ಹೊಳೆಯಲಿಲ್ಲ. "ನಂಗೊತ್ತಿಲ್ಲ" ಎಂದಳು. ಅವಳ ಮುಖ ಕಳಾಹೀನವಾಗಿದೆಯೆನಿಸಿತ್ತು.

"ಯಾಕೆ ನಿಂಗೊತ್ತಿಲ್ಲ. ನಿನ್ನ ವಿಷಯಾನೇ ಅಲ್ವಾ ನಾನು ಕೇಳಿದ್ದು."

"ಓದಿದ್ದು ತಲೆಗೇ ಹೋಗುಲ್ಲ. ಫೇಲಾಗ್ತೀನೇನೋ ಅನ್ನೋ ಭಯ. ಮುಂದೆ ಓದ್ತೀನೋ ಇಲ್ವೋ ನಂಗೊತ್ತಿಲ್ಲ."

"ಚೆನ್ನಾಯ್ತು. ಫೇಲಾದ್ರೆ ಮತ್ತೆ ಪರೀಕ್ಷೆಗೆ ಕಟ್ಟಿದ್ರಾಯ್ತು. ಬೇಡಾಂತಂದ್ರೆ ಮದ್ವೆ ಮಾಡ್ಕೊಂಡ್ರಾಯ್ತು..... ನೀನೇನು ಗಂಡು ಹುಡುಗನಾ ಅಪ್ಪ ಮನೆ ಬಿಟ್ಟು ಓಡಿಸೋಕೆ."

"ಫೇಲಾದ್ರಂತೂ ನಾನು ಬದುಕಿರುಲ್ಲ. ಆತ್ಮಹತ್ಯೆ ಮಾಡ್ಕೊಳ್ತೀನಿ."

"ಆತ್ಮಹತ್ಯೆ ಮಾಡ್ಕೊಳ್ಳೋದು ಹೇಡಿಗಳ ಲಕ್ಷಣ..... ನಾನೂ ಫೇಲ್ ಆಗಿದ್ದೆ.....

ಅಪ್ಪನ್ಹತ್ರ ಬೈಸ್ಕೊಂಡು ಮನೆ ಬಿಟ್ಟು ಹೋಗಿದ್ದೆ..... ಆದರೆ ನಾನು ಬದುಕಿಲ್ವಾ..... ನಾನೇನಾದ್ರೂ ಆತ್ಮಹತ್ಯೆ ಮಾಡ್ಕೊಂಡಿದ್ರೆ ಅಮ್ಮನ ಗತಿ ಏನಾಗ್ತಿತ್ತು? ನಾವೆಲ್ಲಾ ಅಮ್ಮನ ಬಗ್ಗೆ ಯೋಚಿಸ್ಬೇಕು."

"ಮತ್ತೆ? ಫೇಲಾದ್ರೆ ಅವಮಾನ ಅಲ್ವಾ? ಅಪ್ಪ ಬೈಯುಲ್ವಾ...?"

"ನಿನ್ನ ತಲೆಗೆ ವಿದ್ಯೆ ಹತ್ತದಿದ್ರೆ ಅದಕ್ಕೆ ಯಾರೂ ಏನೂ ಅನ್ನುಕ್ಕಾಗುಲ್ಲ. ಬೇರೆ ಯಾವ್ದಾದ್ರೂ ಕಾರಣದಿಂದ ಫೇಲಾದ್ರೆ ಅದು ತಪ್ಪು..... ಅಂದ್ಹಾಗೇ ವಿದ್ಯಾನ ರಿಸಲ್ಟ್ ಏನಾಯ್ತೇ? ಪರೀಕ್ಷೆಗೆ ಕಟ್ಟಿದ್ದಲ್ಲ."

"ಫೇಲಾಯ್ತು. ಅವಳು ಮತ್ತೆ ಪರೀಕ್ಷೆಗೆ ಕಟ್ಟಲಿಲ್ಲ."

"ಹೋಗ್ಲಿ ಬಿಡು. ಮದ್ವೆ ಆದೋಳಿಗೆ ಇನ್ನು ಓದು ಯಾಕೆ? ಫೇಲಾದ್ರೆ ನೀನು ಚಿಂತಿಸ್ಬೇಡ. ನಿನಗೂ ಮದ್ವೆ ಮಾಡಿ ಬಿಡೋಣ..... ಅಮ್ಮಂಗೆ ಹೇಳ್ತೀನಿ."

"ಇಲ್ಲ. ನಾನು ಮದ್ವೆಯಾಗುಲ್ಲ...."

"ಯಾಕೇ.....ಸನ್ಯಾಸಿನಿಯಾಗಿರ್ಬೇಕು ಅಂತ ಮಾಡಿದೀಯ?"

"ಇಲ್ಲ....." ಎಂಥು ಹೇಳಿ ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭಿಸಿದಳು.

"ಯಾಕೆ ಚಿನ್ಮಯೀ ಅಳ್ತಿದೀಯ? ಏನಾಯ್ತೇ? ಯಾರಾದ್ರೂ ಏನಾದ್ರೂ ಅಂದ್ರೇನೇ?" ಚಿನ್ಮಯಿ ಕಣ್ಣೊರೆಸಿಕೊಂಡು ಮನೆಗೆ ಹೊರಟಳು. ಪ್ರಶಾಂತ ಅವಳ ಜತೆ ಹೊರಟ.

"ಏನಾಯ್ತು ಹೇಳು. ಅಳುವಂಥಾದ್ದು ಏನಾಯ್ತು.....?"

"ಏನೂ ಇಲ್ಲ...."

"ಏನೂ ಇಲ್ಲದೆ ಯಾರೂ ಸುಮ್ಸುಮ್ನೆ ಅಳುಲ್ಲ. ನಾನು ಯಾರಿಗೂ ಹೇಳುಲ್ಲ ನನಗೆ ಹೇಳು...." ಎನ್ನುತ್ತಾ ಅವಳನ್ನು ಟೆರೇಸ್‌ಗೆ ಕರೆದುಕೊಂಡು ಹೋದ. ಬಾಲ್ಕನಿಯ ಗೋಡೆಗೆ ಒರಗಿ, ನಡೆದುದನ್ನೆಲ್ಲಾ ಅವನಿಗೆ ಹೇಳಿದಳು.

"ನಾನು ತಪ್ಪು ಮಾಡಿ ಬಿಟ್ಟೆ ಅಣ್ಣಾ..... ನನಗೀಗ ಆತ್ಮಹತ್ಯೆ ಒಂದೇ ದಾರಿ....."

"ಆತ್ಮಹತ್ಯೆ ಮಾಡಿಕೊಂಡ್ರೆ ಎಲ್ರಿಗೂ ವಿಷಯ ತಿಳಿಯುಲ್ವಾ! ಜನ ನಮ್ಮನೆಯವರನ್ನು ಆಡಿಕೊಂಡು ನಗುಲ್ವಾ....?"

"ಮತ್ತೆ ನನ್ನನ್ಯಾರು ಮದ್ವೆ ಆಗ್ತಾರೆ? ನಿಜ ತಿಳಿದ್ರೆ ಅವ್ರೂ ನನ್ನನ್ನು ಬಿಟ್ಟು ಬಿಡ್ತಾರೆ. ಆಗ ಅದು ಅವಮಾನ ಅಲ್ವಾ.....!"

"ಈಗ ಇದಕ್ಕೆಲ್ಲ ಒಂದೇ ದಾರಿ, ಕಿಶೋರನ್ನೇ ಮದ್ವೆಯಾಗಿ ಬಿಡು. ನಾನು ಅವನ ಹತ್ತಿರ ಮಾತನಾಡ್ತೀನಿ....."

"ಏನೂ ಬೇಡ..... ನಾನು ಅವನನ್ನ ಮದುವೆಯಾಗುಲ್ಲ."

"ಹಾಗಿದ್ದಿದ್ರೆ ಹೆಣ್ಣು ಅನ್ನೋ ಪರಿಜ್ಞಾನ ನಿನಗಿರಬೇಕಾಗಿತ್ತು. ಒಂದು ಹೆಣ್ಣು

ಒಂದು ಗಂಡಿನ ಸಹವಾಸ ಮಾಡಿದರೆ, ಅದರ ದುಷ್ಪರಿಣಾಮ ಬೀಳುವುದು ಹೆಣ್ಣಿನ ಮೇಲೆ..... ಅಷ್ಟು ಗೊತ್ತಾಗ್ಲಿಲ್ವಾ ನಿನಗೆ....? ಅವನ ಜತೆ ಸ್ನೇಹ ಯಾಕೆ ಬೇಕಿತ್ತು.....? ಅಪ್ಪ ವಿದ್ಯಂಗೆ ಅನ್ಯಾಯ ಮಾಡೋಕೆ ಹೊರಟಿದ್ದ ಅಂತ ನಿನಗೆ ಗೊತ್ತಿರ್ಲಿಲ್ವಾ!"

"ಇಲ್ಲ. ಕಿಶೋರ ಅಷ್ಟು ಕೆಟ್ಟೋನಲ್ಲ. ಅಕ್ಕಾನೇ ಅವ್ನಿಗೆ ಮೋಸ ಮಾಡಿದ್ದು. ಅವಳು ಅವನಿಗೆ ಬರೆದ ಪತ್ರಗಳು ನನ್ಹತ್ರ ಇವೆ....."

"ಆ ಪತ್ರಗಳನ್ನು ಓದಿ, ನಿನ್ನ ತಲೆ ಕೆಟ್ಟಿತು ಅಂತ ಕಾಣುತ್ತೆ..... ಚಿಕ್ಕೋರು ಚಿಕ್ಕೋರ ಹಾಗಿರಬೇಕು......"

"ನಾನೇನು ಕದೀಲಿಲ್ಲ. ಸಂತೋಷನ ಪುಸ್ತಕಗಳ ನಡುವೆ ಸಿಕ್ತು....."

"ಹೋಗ್ಲಿ ಆ ವಿಷಯ ಬಿಡು. ಈಗ ನಿನಗೆ ಉಳಿದಿರೋ ದಾರಿ ಒಂದೇ. ಕಿಶೋರನ್ನ ಮದ್ವೆಯಾಗೋದು..... ಈ ಬಾರಿ ಅವನು ನಿಜವಾಗಿಯೂ ನಿನ್ಮೇಲೆ ಆಸಿಡ್ ಎರಚಿದ್ರೆ ಏನ್ಮಾಡ್ತೀಯ?"

"ಅವನು ಜೈಲಿಗೆ ಹೋಗ್ತಾನೆ...."

"ತಪ್ಪು ಅವನೊಬ್ಬನದೇ ಅಲ್ಲ. ನಿಂದೂ ತಪ್ಪಿದೆ. ಅವನನ್ನ ಜೈಲಿಗೆ ಕಳಿಸಿ, ನೀನು ಹಾಯಾಗಿರುಕ್ಕೆ ಆಗುತ್ತಾ? ಸುಮ್ನೆ ನನ್ಮಾತು ಕೇಳು ಅವನನ್ನೇ ಮದ್ವೆಯಾಗು...."

"ಅವನನ್ನು ಮದ್ವೆಯಾಗೋಕೆ ಅಪ್ಪ ಖಂಡಿತಾ ಒಪ್ಪಲ್ಲ. ಅಕ್ಕನಿಗೆ ಮಾಡಿದ ಹಾಗೆ ನನಗೆ ಬೇರೆ ಗಂಡನ್ನು ನೋಡ್ತಾರೆ.... ನನ್ನ ಗಂಡನಿಗೆ ನಾನು ನಿಜವನ್ನು ಹೇಳಲಾರೆ, ಹೇಳದೇ ಇರಲಾರೆ....."

"ನಿಜ ಹೇಳಿದ್ರೆ ಸಂಬಂಧ ಕೆಡುತ್ತೆ. ನಾನು ಕಿಶೋರನ ಹತ್ರ ಮಾತಾಡ್ತೀನಿ. ಅವನು ಹೇಗೂ ನಿನ್ನನ್ನ ಮದ್ವೆಯಾಗೋಕೆ ರೆಡಿಯಾಗಿದಾನೆ ಅಂತೀಯಲ್ಲ... ಅಪ್ಪ ಒಪ್ಪುವ ಹಾಗೆ ಏನಾದ್ರೂ ಉಪಾಯ ಹುಡುಕೋಣ. ನೀನು ಮಾತ್ರ ನಿನಗೆ ಏನೂ ಅಪಾಯ ಮಾಡ್ಕೋಬಾರದು. ನಿನ್ನ ಮೇಲಾಣೆ...." ಚಿನ್ಮಯಿ ಉತ್ತರಿಸಲಿಲ್ಲ. ಇಬ್ಬರೂ ಬಾಲ್ಕನಿಯಿಂದ ಕೆಳಗಿಳಿದು ಬಂದರು. ಪ್ರಶಾಂತ ಅವಳನ್ನು ಮನೆಯ ತನಕ ಬಿಟ್ಟು ಬಂದ.

* * *

ಆ ರಾತ್ರಿ ಮಲಗುವ ಮೊದಲು, ಕಿಟಕಿಯ ಬಳಿ ನಿಂತಿದ್ದವಳಿಗೆ, ತನ್ನ ಮನೆಯ ಮುಂದೆ ಕಿಶೋರ ಸುಳಿದಾಡುತ್ತಿರುವುದು ಕಂಡಿತು. ಅವನು ಅವಳನ್ನು ನೋಡಿ ಕೈಯಾಡಿಸಿದ. ಇವಳು ಮರೆಗೆ ನಿಂತಳು. ಮತ್ತೆ ನೋಡಿದಾಗ, ಅವನು ಅಲ್ಲಿಯೇ ನಿಂತಿರುವುದನ್ನು ಕಂಡಳು. ಅವನೇನಾದರೂ ಮನೆಯೊಳಗೆ ಬಂದು ಅಪ್ಪನೊಡನೆ ಮಾತನಾಡಿದರೇನು ಗತಿ ಎಂದು ಹೆದರಿ, ಅವನಿಗೆ ಸಂಜ್ಞೆಯ ಮೂಲಕ, ಹಿಂದಿರುವ ಮೆಟ್ಟಿಲನ್ನು ಹತ್ತಿ ಮೇಲೆ ಬರುವಂತೆ ತಿಳಿಸಿದಳು. ಮಹಡಿಯ

ಮೇಲಿನ ಹಿಂಬಾಗಿಲನ್ನು ತೆರೆದಳು. ಅವನು ಯಾರಿಗೂ ತಿಳಿಯದಂತೆ ಮಹಡಿಯನ್ನು ಹತ್ತಿ ಬಂದ. ಅವನು ರೂಮ್‌ನೊಳಗೆ ಬರುತ್ತಿದ್ದಂತೆಯೇ ಬಾಗಿಲನ್ನು ಭದ್ರಪಡಿಸಿದಳು.

"ನಮ್ಮನೆ ಮುಂದೆ ಯಾಕೆ ತಿರುಗಾಡ್ತಿದೀಯ? ಅಪ್ಪಂಗೆ ಗೊತ್ತಾದ್ರೆ?"

"ನನಗೆ ನಿನ್ನನ್ನು ಬಿಟ್ಟು ಇರುಕ್ಕೆ ಆಗ್ತಿಲ್ಲ ಚಿನ್ಮಯೀ...." ಎನ್ನುತ್ತಾ ತಬ್ಬಿಕೊಂಡ.

"ನಾನು ಕಿರುಚಿಕೊಳ್ತೀನಿ....... ದೂರ ಹೋಗು....." ಅವನನ್ನು ತಳ್ಳಿದಳು.

"ಇಲ್ಲ ಚಿನ್ಮಯೀ. ಇವತ್ತು ಒಂದು ಇತ್ಯರ್ಥವಾಗಲೇಬೇಕು. ನಿಮ್ಮ ಮನೆಯವರ‍್ಯಾರೇ ಬಂದ್ರೂ ನಾನು ಹೆದರುಲ್ಲ....."

"ಸರಿ ಹಾಗಾದ್ರೆ ದೂರ ನಿಂತು ಮಾತ್ನಾಡು..... ಮುಟ್ಬೇಡ. ಈಗಾಗ್ಲೇ ಒಂದ್ಸಾರಿ ನಮ್ಮಿಬ್ರಿಂದ ತಪ್ಪು ನಡೆದು ಹೋಗಿದೆ."

"ತಪ್ಪು ನಡೆದು ಹೋಗಿದೆ...... ಆ ತಪ್ಪನ್ನು ನಾವು ಒಪ್ಕೊಂಡಿದೀವಿ..... ದಯವಿಟ್ಟು ನನ್ನನ್ನು ದೂರ ಮಾಡಬೇಡ.... ನನಗೆ ನಿನ್ನ ಹುಚ್ಚು ಹಿಡಿದು ಬಿಟ್ಟಿದೆ....."

"ನಿನ್ನ ಆ ಹುಚ್ಚನ್ನು ಬಿಡಿಸ್ತೀನಿ" ಎನ್ನುತ್ತಾ ಎರಡೂ ಕಪಾಲಗಳಿಗೆ ಪಟಪಟನೆ ಹೊಡೆದಳು. ಅವನು ಅವಳ ಕೈಯನ್ನು ಹಿಡಿದುಕೊಂಡು ಮುತ್ತಿಟ್ಟ.....

"ನಾನು ಮಾಡಿದ ತಪ್ಪಿಗೆ ನೀನು ಶಿಕ್ಷೆ ಕೊಟ್ಟೆ..... ಆದರೆ ನೀನು ಮಾಡಿದ ತಪ್ಪಿಗೆ ನಾನೂ ಶಿಕ್ಷೆ ಕೊಡ್ಬೇಕು ತಾನೇ......" ಎನ್ನುತ್ತಾ ಅವಳನ್ನು ಬರಸೆಳೆದು ಅಪ್ಪಿಕೊಂಡು ಗಾಢವಾಗಿ ಚುಂಬಿಸಿದ. ಚಿನ್ಮಯಿ ಸೋತು ಹೋದಳು. ಒಂದು ಬಾರಿ ನಡೆದ ತಪ್ಪು ಮತ್ತೆ ಪುನರಾವರ್ತನೆಯಾಯಿತು.

"ಈಗ ಹೇಳು ಚಿನ್ಮಯೀ....ನಿನಗೂ ನನ್ನನ್ನು ಬಿಟ್ಟಿರೋಕೆ ಕಷ್ಟವಾಗುಲ್ವಾ?"

"ಹೀಗ್ಯಾಕೆ ಮಾಡ್ತೀಯೋ ಕಿಶೋರ..... ಇದೆಲ್ಲಾ ತಪ್ಪಲ್ವಾ.....?"

"ನಮ್ಮಿಬ್ಬರ ಪ್ರೀತಿ ನಿಜವಾದದ್ದೇ ಆದ್ರೆ ಇದು ತಪ್ಪಲ್ಲಾ..... ನಿನ್ನನ್ನು ಬಿಟ್ಟು ಇರೋದು ನನಗೆ ಕಷ್ಟವಾಗ್ತಿದೆ...... ನಮ್ಮಿಬ್ಬರ ಮಧ್ಯೆ ನಡೆದ್ದು ನೀನು ಆದಷ್ಟು ಬೇಗ ನಮ್ಮ ಮನೆಗೆ ಬರಬೇಕು. ಇಲ್ದಿದ್ರೆ.... ಹೀಗೆ ದಿನಾ ನಿನ್ನ ರೂಮ್ಗೇ ಬರ್ತೀನಿ ಅಷ್ಟೇ.... ಹತ್ತಿರ ಬಂದೋನನ್ನ ದೂರ ಸರಿಸೋ ಧೈರ್ಯ, ಇಷ್ಟ ನಿನಗಿದೆಯಾ?"

"ಬೇಡ ಕಿಶೋರ..... ಹೀಗೆ ಕದ್ದು ಮಾತ್ರ ಬರಬೇಡ..... ನಮ್ಮಪ್ಪ ನಮ್ಮಿಬ್ಬರ ಮದ್ವೆಗೆ ಒಪ್ತಾರೋ ಇಲ್ಲವೋ ನನಗೆ ಅದೇ ಸಂಶಯ. ನಿನ್ನನ್ನ ಅಕ್ಕನ್ನ ದೂರ ಮಾಡಿದ ಹಾಗೆ, ನನ್ನನ್ನು....ನಿನ್ನಿಂದ ದೂರ ಮಾಡಿಬಿಟ್ಟರೇ....."

"ಹಾಗೆ ನಿಮ್ಮಪ್ಪ ಮಾಡದಿರುವ ಹಾಗೆ ಒಂದು ಉಪಾಯವನ್ನು ಹುಡುಕಿದೀನಿ ......ಅದ್ಕಕ್ಕೆ ನಿನ್ನ ಸಹಕಾರ ಬೇಕು." ಎಂದು ತನ್ನ ಉಪಾಯವನ್ನು ತಿಳಿಸಿದ. ಚಿನ್ಮಯಿ ಬೆದರಿದಳು.

"ಬೇಡ ಕಿಶೋರ, ಏನೋ ಮಾಡುಕ್ಕೆ ಹೋಗಿ ಏನೋ ಆದ್ರೆ....."

"ಏನೂ ಆಗುಲ್ಲ... ನನ್ನ ನಿನ್ನ ಸಂಬಂಧ ದೇಹ ಸಂಬಂಧದ ತನಕ

ಮುಂದುವರಿದಿದೆ. ಇನ್ನು ಹೀಗೇ ದೂರ ದೂರವಾಗಿರುವುದು ಸಾಧ್ಯವಿಲ್ಲ. ಸರಿಯೂ ಅಲ್ಲ...... ಈಗ ನಾನು ಹೇಳಿದ ಹಾಗೆ ಕೇಳಲೇ ಬೇಕು..... ಇನ್ಯಾರಿಗೂ ಈ ವಿಷಯವನ್ನು ತಿಳಿಸಬೇಡ..."

"ಪ್ರಶಾಂತಂಗೆ ನಮ್ಮಿಬ್ಬರ ಸಂಬಂಧದ ಬಗ್ಗೆ ಹೇಳಿಬಿಟ್ಟಿದೀನಿ..... ಅವನು ಅಪ್ಪಂಗೆ ಹೇಳಿಬಿಟ್ರೆ, ಅಪ್ಪ ಯಾರನ್ನೂ ಸುಮ್ಮನೇ ಬಿಡುಲ್ಲ....."

"ಪ್ರಶಾಂತಂಗೇ ಯಾಕೆ ಹೇಳ್ದೆ? ಹೋಗ್ಲಿ ಬಿಡು...... ಅವನಿಗೂ ಅಪ್ಪನ್ನ ಕಂಡರೆ ಅಷ್ಟಕಷ್ಟೇ..... ಅವನಿಗೆ ಯಾರ್ಗೂ ಹೇಳ್ಬೇಡ ಅಂತ ಹೇಳಬೇಕಾಗಿತ್ತು."

"ಅವನೇ ನಿಂತು ನಮ್ಮಿಬ್ಬರ ಮದುವೆ ಮಾಡಿಸ್ತಾನಂತೆ....."

"ಅವನು ಮದ್ವೆ ಮಾಡ್ಸಿದ್ರೆ, ನಿಮ್ಮಪ್ಪ ನಿನ್ನನ್ನು ಹೊರಗೆ ಹಾಕ್ತಾರೆ. ಅವರೇ ನಿಂತು ನಮ್ಮಿಬ್ಬರ ಮದುವೆ ಮಾಡಿಸ್ಬೇಕು...... ಹಾಗಿದೆ ಈ ಉಪಾಯ..... ನಮಗೆ ಪ್ರಶಾಂತನ ಸಹಾಯವೂ ಬೇಕಾಗುತ್ತದೆ. ನಾನು ಹೀಗೆ ಹೇಳ್ದೆ ಅಂತ ಅವನಿಗೆ ಹೇಳಿಬಿಡು....."

"ಎನಗೆ ಹೇಳುಕ್ಕೆ ನಾಚ್ಕೆ ಆಗುತ್ತೆ. ನೀನೇ ಅವನ್ಹತ್ರ ಮಾತನಾಡು."

"ಸರಿ, ಹಾಗಾದ್ರೆ ನಾನೇ ಅವನ್ಹತ್ರ ಮಾತನಾಡ್ತೀನಿ." ಎಂದು ಹೇಳಿ ಮತ್ತೊಮ್ಮೆ ಅವಳನ್ನು ಮುದ್ದಿಸಿ, ಹಿಂದಿನ ಬಾಗಿಲಿನ ಬಳಿ ಮೆಟ್ಟಿಲುಗಳನ್ನಿಳಿಯಲು ಅನುವಾದ. ಅವಳು ಅವನ ತೋಳನ್ನು ಹಿಡಿದು ನಿಲ್ಲಿಸಿ ನುಡಿದಳು.

"ಮತ್ತೆ ಮತ್ತೆ ಈ ರೀತಿ ನನ್ನ ಬಳಿಗೆ ಬರುವ ಪ್ರಯತ್ನವನ್ನು ಮಾಡಬೇಡ..... ಆಮೇಲೆ ನನ್ನನ್ನು ದ್ವೇಷಿಸ್ತೀನಿ ಅಷ್ಟೇ....."

"ದ್ವೇಷಿಸಿದ್ರೂ ಅಷ್ಟೇ..... ಪ್ರೀತಿಸಿದ್ರೂ ಅಷ್ಟೇ.... ನೀನು ನನ್ನ ಚಿನ್ಮಯೀ....." ಅವಳ ಕೆನ್ನೆಯನ್ನು ಹಿಂಡಿದ...... "ನಾನು ಬರುಲ್ಲ. ಆದರೆ ನೀನೇ ನನ್ನ ಹತ್ತಿರಕ್ಕೆ ಬರುವ ಹಾಗೆ ಮಾಡ್ತೀನಿ." ಎನ್ನುತ್ತಾ ತುಂಟನಗೆ ನಕ್ಕು, ಕಣ್ಣು ಹೊಡೆದು ಕೆಳಗೆ ಇಳಿದು ಹೋದ. ನಾಯಿಗಳು ಬೊಗಳಲು ಪ್ರಾರಂಭಿಸಿದಾಗ ಅವಳ ಎದೆ ಢವಢವ ಹೊಡೆದು ಕೊಂಡಿತು. ಹಿಂಬಾಗಿಲನ್ನು ಹಾಕಿ ದೀಪವನ್ನು ಆರಿಸಿ, ರೂಮ್‌ನ ಬಾಗಿಲನ್ನು ಭದ್ರಪಡಿಸಿ ಮಲಗಿಬಿಟ್ಟಳು.

* * *

ಕಾಲೇಜಿನಿಂದ ಕತ್ತಲಾದರೂ ಮಗಳು ಮನೆಗೆ ಬಾರದಿದ್ದಾಗ ಪ್ರೇಮಾ ಹತ್ತಾರು ಬಾರಿ ಮುಂಬಾಗಿಲಿಗೆ ಬಂದು ರಸ್ತೆಯ ಕಡೆ ನೋಡಿದಳು. ಶಾರದಮ್ಮನನ್ನು ಪ್ರಶಾಂತನ ಮನೆಗೆ ಕಳಿಸಿದಳು. ನಳಿನಿಯನ್ನು ಕಾಮಾಕ್ಷಿಯ ಮನೆಗೆ ಕಳಿಸಿದಳು.

ಪ್ರಶಾಂತ ಮನೆಯಲ್ಲಿರಲಿಲ್ಲ. ನಳಿನಿ ಕಿಶೋರನೊಡನೆ ಮಾತನಾಡಿ, ಅಲ್ಲಿಯೂ ಅಕ್ಕ ಇಲ್ಲವೆಂದು ಬಂದು ಹೇಳಿದಳು. ಚಿನ್ಮಯಿಯ ಸ್ನೇಹಿತೆಯರು ಯಾರು.....? ಎಲ್ಲಿದಾರೆ ಒಂದೂ ತಿಳಿಯದು. ಕಾಲೇಜಿನ ಬಳಿ ಯಾರೂ

ಇಲ್ಲವೆಂದು ಶ್ರೀಕರ ಬಂದು ಹೇಳಿದ್ದ.

ಊಟದ ಸಮಯವಾದರೂ, ಅವಳು ಮನೆಗೆ ವಾಪಸ್ಸು ಬಾರದಿದ್ದಾಗ, ಪ್ರೇಮಾ ಅಂಜುತ್ತಾ ಭಟ್ಟನ ಬಳಿ ಬಂದು ಹೇಳಿದಳು.

"ಚಿನ್ಮಯೀ ಕಾಲೇಜ್ನಿಂದ ಮನೆಗೇ ವಾಪಸ್ಸು ಬಂದಿಲ್ಲ....."

"ಅವಳಣ್ಣನ ಮನೇಲಿ ಕೂತು, ಮಗು ಜತೆ ಲಲ್ಲೇ ಹೊಡೀತಿರಬಹುದು....."

"ಇಲ್ಲ, ಅಲ್ಲಿಯೂ ಇಲ್ಲ..... ಅಲ್ಲದೇ ಸುಗುಣಾ ಊರಲ್ಲಿಲ್ಲ.."

"ಈಗ ಹೇಳ್ತಿದೀಯಲ್ಲ. ನಿನ್ನ ತಲೇಲೇನಾದ್ರೂ ಬುದ್ಧಿ ಇದೆಯಾ? ಅವಳು ಎಲ್ಲಿ ಹೋಗ್ತಾಳೆ, ಯ್ಯಾರ ಸ್ನೇಹವಿದೆ ಅಂತ ನಿನಗೆ ತಿಳಿದಿರಬೇಡ್ವಾ?" ರೇಗಾಡಿದ.

"ಅವಳು ಎಲ್ಲಿಗೂ ಹೋಗ್ತಿರಲಿಲ್ಲ..... ಯಾವ ಸ್ನೇಹಿತೆ ಎಲ್ಲಿದಾಳೆ ಅಂತ ನಂಗೊತ್ತಿಲ್ಲ."

"ತಾಯಿಯಾದದ್ದು ದಂಡಕ್ಕೆ..... ಅಷ್ಟು ನಿಗಾ ಬೇಡ್ವಾ ನಿಂಗೆ?" ಎನ್ನುತ್ತಾ ಹೊರಗೆ ಹೊರಟ.

"ಎಲ್ಲಿಗೆ ಹೊರಟ್ರಿ.....?"

"ಪೋಲೀಸ್ ಕಂಪ್ಲೇಂಟ್ ಕೊಡ್ತೀನಿ......."

"ಪೋಲೀಸರ್ಗೆ ತಿಳಿದ್ರೆ...... ಮನೆ ಮರ್ಯಾದೆ......"

"ಬೆಳೆದ ಮಗಳು ಕತ್ತಲಾದ ಮೇಲೆ ಮನೆಗೆ ಬರದಿದ್ರೆ, ಅರ್ಧ ಮರ್ಯಾದೆ ಹೋದ ಲೆಕ್ಕವೇ...... ಈಗ ನಾನು ಎಲ್ಲೆಲ್ಲಿ ಹುಡುಕಕ್ಕಾಗುತ್ತೆ? ಪೋಲೀಸರ್ಗೆ ಆದ್ರೆ ಅದೇ ಕೆಲ್ಸ."

"ಬೆಳಗ್ಗಿನವರ್ಗೂ ಕಾದ್ರೆ ಆಗುಲ್ವಾ.....!"

"ಬೆಳಗ್ಗಿನವರೆಗೂ ಯಾವುದಕ್ಕೆ ಕಾಯಬೇಕು? ಏನ್ಮಾಡಬೇಕು ಅಂತ ನನಗೆ ಗೊತ್ತು. ನೀನು ಸುಮ್ನಿರು." ಎನ್ನುತ್ತಾ ಕಾರಿನಲ್ಲಿ ಕುಳಿತು ಪೋಲೀಸ್ ಸ್ಟೇಷನ್‌ಗೆ ಬಂದು ಕಂಪ್ಲೇಂಟ್ ಕೊಟ್ಟು ಮಗಳ ವಿವರಣೆಯನ್ನು ನೀಡಿದ. '

ಅವನು ಮನೆಗೆ ವಾಪಸ್ಸಾದ ಹೊತ್ನಲ್ಲೇ ಕಾಮಾಕ್ಷಿ ಭುಸುಗುಟ್ಟುತ್ತಾ ಬಂದು ಭಟ್ಟನ ಎದುರಿಗೆ ನಿಂತಳು. "ಈಗ ನನ್ಮಗ ಏನ್ಮಾಡ್ದ......?" ಕೈ ಕುಟ್ಟುತ್ತಾ ಕೇಳಿದಳು.

"ಅದನ್ನು ಪೋಲೀಸರೇ ಬಾಯಿ ಬಿಡಿಸ್ತಾರೆ."

"ನೀನು ಏನೂಂತ ಕಂಪ್ಲೇಂಟ್ ಕೊಟ್ಟಿದೀಯ?"

"ನನ್ನ ಮಗಳು ಕಾಣೆಯಾಗಿದಾಳೆ...... ಅಂತ."

"ನಿನ್ಮಗಳು ಕಾಣೆಯಾದ್ರೆ, ನನ್ಮಗ ಏನ್ಮಾಡಿದ್ನೋ......?"

"ಅವನೇ ಅವಳನ್ನು ಅಪಹರಿಸಿರೋದು....."

"ನಿನ್ನ ಸಹವಾಸವೇ ಬೇಡಾಂತ, ನಾನು ನನ್ನ ಮಗನ್ಗೆ ಅವತ್ತೇ ಹೇಳ್ಬಿಟ್ಟಿದೀನಿ. ನಿನಗ್ಯಾಕೆ ಪದೇ ಪದೇ ಅವನ್ಮೇಲೇ ಕಣ್ಣುರಿ? ಆಗ ಆ ಮಗಳ ದೆಸೆಯಿಂದ

ನನ್ಮಗನ ವಿದ್ಯಾಭ್ಯಾಸ ಹಾಳಾಯ್ತು... ಅವನ ಭವಿಷ್ಯವೇ ಹಾಳಾಗುತ್ತೆ. ನಾನು ಹೇಳ್ತಿದೀನಿ ಕೇಳು, ನಿನ್ಮಗಳು ಕಾಣೆಯಾದುದಕ್ಕೂ, ನನ್ಮಗಂಗೂ ಯಾವ ಸಂಬಂಧವಿಲ್ಲ....."

"ಸಂಬಂಧವಿದೆಯೋ ಇಲ್ಲವೋ ನಾಳೆ ಗೊತ್ತಾಗುತ್ತೆ. ಈಗ ಅವನು ಲಾಕಪ್‌ನಲ್ಲಿರೋದೇ ಕ್ಷೇಮ. ಈಗ ನೀನು ಮನೆಗ್ಹೋಗು. ನಾನು ಎಲ್ಲಾ ನೋಡ್ಕೋತೀನಿ...."

"ನನ್ಮಗನ ಕೈಗೆ ಕೋಳ ತೊಡಿಸಿ, ಏನ್ ನೋಡ್ಕೋತೀಯೋ..... ಅವನ ಜೀವಕ್ಕೇನಾದ್ರೂ ಅಪಾಯವಾದ್ರೆ ಮಾತ್ರ ನಾನು ಸುಮ್ನಿರುಲ್ಲ. ನನ್ಮಂಡ ಹಸುಳಿನಂಥ ಪ್ರಾಣಿ..... ನಾನಾದ್ರೂ ಬಾಯಿ ಬಡುಕಿ... ನಿನ್ನ ಜನ್ಮ ಜಾಲಾಡಿ ಬಿಡ್ತೀನಿ."

"ತಲೆ ಕೆಟ್ಹೋಳ ಥರ ಮಾತಾಡ್ಬೇಡ. ಈಗ ನೀನು ಹೋಗೂಂದ್ರೆ ಹೋಗು."

"ನೀನು ಲಾಯರ್‍ರಿರಬಹುದು. ಆದ್ರೆ ನನ್ಮಗನೇನೂ ಬೀದೀಲೀ ಬಿದ್ದಿಲ್ಲ. ಅವನಿಗೂ ಅಪ್ಪ-ಅಮ್ಮ ನಾವು ಇದೀವಿ. ನೀನು ನಿನ್ನ ಸಂಸಾರಾನ ಎಷ್ಟು ಚೆನ್ನಾಗಿ ನೋಡ್ಕೋಳ್ತಿದೀಯ ಅನ್ನೋದಕ್ಕೆ ಇದೇ ಸಾಕ್ಷಿ. ನಿನ್ಮನೆ ಒಂದೊಂದು ಕಥೆಯೂ ನನಗ್ಗೊತ್ತು..... ಮೊದಲು ನಿನ್ನ ಮಗಳನ್ನ ಹುಡುಕ್ಸು. ನಿಜ ಏನೂಂತ ತಿಳಿಯುತ್ತೆ. ಆಮೇಲೆ ನನ್ಮಗನ್ನ ಜೈಲಿಗೆ ಹಾಕ್ಸೂವಂತೆ.... ಹ್ಞಾಂ...." ಭುಸಭುಸನೆ ಉಸಿರುಬಿಟ್ಟಳು.

"ಆಯ್ತು ಮಾರಾಯ್ತಿ. ನೀನು ಈಗ ಹೋಗು..... ಬೆಳಗ್ಗೆ ನಾನೇ ಹೋಗಿ ನಿನ್ಮಗನ್ನ ಲಾಕಪ್‌ನಿಂದ ಬಿಡಿಸ್ತೀನಿ. ಈ ರಾತ್ರಿ ಅವನು ಅಲ್ಲಿರಲಿ. ಅದೇ ಅವನಿಗೆ ಕ್ಷೇಮ. ಇದರಿಂದ ಅವನು ನಿರಪರಾಧಿ ಅಂತ ಸಾಬೀತಾದ್ರೂ ಆಗಬಹುದು."

"ಲಾಯರ್ರ ಪಾಯಿಂಟ್‌ನ ನನ್ಹತ್ರ ಎತ್ಬೇಡ. ಈಗ ಸುಮ್ನೇ ಹೋಗ್ತಿದೀನಿ. ನನ್ಮಗ ಆಚೆಗೆ ಬಂದ್ಮೇಲೆ ಇಬ್ರೂ ಸೇರಿ ನಿನ್ನ ಮೇಲೆ ಕೇಸ್ ಹಾಕ್ತೀವಿ." ಆ ಹೊತ್ನಲ್ಲೂ ಭಟ್ಟನಿಗೆ ನಗು ಬಂತು.

"ಹಾಗೇ ಮಾಡೂವಂತೆ. ನೀನು ಈಗ ಹೋಗು."

ಹಿಂದಿನಿಂದ ಪ್ರೇಮಾ ಕಾಮಾಕ್ಷಿ ಕಾಮಾಕ್ಷಿ ಎಂದು ಕರೆದರೂ ತಿರುಗಿ ನೋಡದೇ ಅವಳು ಹೊರಟು ಹೋದಳು. ಆ ರಾತ್ರಿ ಪ್ರೇಮಳಿಗೆ ಶಿವರಾತ್ರಿ. ಊಟ ಸೇರಲಿಲ್ಲ. ನಿದ್ದೆಯಿಲ್ಲ. ನಳಿನಿ, ಶ್ರೀಕರ ಒಂದು ತುತ್ತು ತಿಂದಿದ್ದರು. ಭಟ್ಟನನ್ನು ಊಟಕ್ಕೆ ಎಬ್ಬಿಸುವ ಧೈರ್ಯವಿಲ್ಲದೆ ಶಾರದಮ್ಮ ಪ್ರೇಮಳ ಬಳಿ ಕುಳಿತಿದ್ದರು.

"ಚಿನ್ಮಯಿ ಎಲ್ಲಿದ್ದಾಳೋ ಹೇಗಿದ್ದಾಳೋ ಏನ್ಕತೆಯೋ ನನ್ಗಂತೂ ಅದೇ ಚಿಂತೆಯಾಗಿದೆ ಶಾರದಮ್ಮ." ಪ್ರೇಮಾ ಆಕೆಯೊಡನೆ ಹೇಳಿಕೊಂಡು ಅತ್ತಳು.

"ಅಳ್ಬೇಡಿ ಪ್ರೇಮಕ್ಕ. ಚಿನ್ಮಯಿಗೆ ಏನೂ ಆಗುಲ್ಲ. ದೇವರಿದಾನೆ."

"ಹೌದು. ಈಗ ದೇವ್ರೇ ಅವಳನ್ನು ಕಾಪಾಡಬೇಕು." ಪ್ರೇಮಾ ನಿಟ್ಟುಸಿರು ಬಿಟ್ಟಳು.

* * *

ಪ್ರಶಾಂತನ ಮನೆಯಲ್ಲಿ ರೂಮ್‌ನಲ್ಲಿ ಮಲಗಿದ್ದ ಚಿನ್ಮಯಿಗೂ ನಿದ್ದೆ

ಬಂದಿರಲಿಲ್ಲ. ಅವನು ಕೊಟ್ಟ ಊಟ ಸಹ ಆತಂಕದಿಂದ ಸೇರಿರಲಿಲ್ಲ. ಇದಕ್ಕೆಲ್ಲಾ ತಾನೇ ಕಾರಣ ಎಂಬ ಆರೋಪವನ್ನು ತನ್ನ ಮೇಲೇ ಹಾಕಿಕೊಳ್ಳುತ್ತಿದ್ದಳು. ಕಾಲೇಜು ಮುಗಿದ ಮೇಲೆ, ಕತ್ತಲಾಗುವವರೆಗೂ, ಸ್ನೇಹಿತೆಯೊಬ್ಬಳ ಮನೆಯಲ್ಲಿದ್ದಳು. ಅನಂತರ ಅಲ್ಲಿಂದ, ಕಿಶೋರನೇ ಅವಳನ್ನು ಕರೆತಂದು ಪ್ರಶಾಂತನ ಮನೆಯ ಹತ್ತಿರ ಬಿಟ್ಟಿದ್ದ. ಸುಗುಣಳೂ ಊರಿನಲ್ಲಿರಲಿಲ್ಲ. ಒಬ್ಬಳಿಗೇ ಒಳಗೆ ಕೂತು ಬೇಸರವಾಗಿತ್ತು.

ಬೆಳಗ್ಗೆ ಇನ್ನೂ ಕತ್ತಲಾಗಿರುವಾಗಲೇ ಪ್ರಶಾಂತ ಚಿನ್ಮಯಿಯನ್ನು ಎಬ್ಬಿಸಿದ. ಅವಳನ್ನು ಬೈಕ್ ಮೇಲೆ ಕೂರಿಸಿಕೊಂಡು ಹಿಂದಿನ ರಸ್ತೆಯಿಂದ ಬಂದು, ಭಟ್ಟನ ಮನೆಯ ಮುಂದೆ ಅವಳನ್ನು ಇಳಿಸಿದ. ಅವಳು ಗೇಟು ತೆರೆದು ಒಳಗೆ ಹೋಗುತ್ತಿದ್ದಂತೆಯೇ ಬೈಕ್‌ನ್ನು ವೇಗವಾಗಿ ಬಂದ ರಸ್ತೆಗೆ ತಿರುಗಿಸಿದ.

ಗೇಟು ಸದ್ದಾದ ಕೂಡಲೇ ಶಾರದಮ್ಮ ಬಂದ ಬಾಗಿಲನ್ನು ತೆಗೆದರು.... ಚಿನ್ಮಯಿ ತಲೆ ತಗ್ಗಿಸಿ ನಿಂತಿದ್ದಳು. ಪ್ರೇಮಾ ಎದ್ದು ಬಂದಳು. ತನ್ನ ರೂಮ್‌ನಿಂದ ಹೊರ ಬಂದ ಭಟ್ಟ, ಮಗಳ ಕೈ ಹಿಡಿದು ಒಳಗೆ ಎಳೆದುಕೊಂಡು ಕೆನ್ನೆಗೆ ಹೊಡೆದ. ಶಾರದಮ್ಮ ಅವಳನ್ನು ತನ್ನ ಬಳಿಗೆ ಎಳೆದುಕೊಂಡಳು.

"ಎಲ್ಹೋಗಿದ್ದೇ ಚಾಂಡಾಲಿ.....!" ಭಟ್ಟ ಅಬ್ಬರಿಸಿದ.

"ಸುಮ್ನೇ ಅಬ್ಬರಿಸಬೇಡಿ..... ಊರ್ಗೆಲ್ಲಾ ಗೊತ್ತಾಗುತ್ತೆ. ಏನು ವಿಷಯ ಅಂತ ನಿಧಾನವಾಗಿ ಕೇಳಬಾರದೇ.....?"

"ಹುಂ... ಕೇಳ್ತೀನಿ... ಇವಳು ರಾತ್ರಿ ಎಲ್ಲಾ ಎಲ್ಲೋ ಇದ್ದು ಬರಲಿ... ಅಲ್ಲೇನು ನಡೀತು, ನಿಧಾನವಾಗಿ ಕೇಳ್ತೀನಿ. ನಡೀ ಒಳಗೆ....." ಪ್ರೇಮಾ ಪೆಚ್ಚಾದಳು.

"ರಾತ್ರಿಯೆಲ್ಲಾ ಎಲ್ಲಿದ್ಯೋ ಅಲ್ಲಿಗೇ ಹೋಗು..... ಇಲ್ಲಿ ನನ್ನ ಮನೆಯಲ್ಲಿ ನಿನಗೆ ಜಾಗವಿಲ್ಲ....." ಚಿನ್ಮಯಿಯನ್ನು ಬಾಗಿಲ ಕಡೆಗೆ ತಳ್ಳಿದ. ಶಾರದಮ್ಮ ಅವಳನ್ನು ಹಿಡಿದುಕೊಂಡಳು.

"ನೀವು ಅವಳನ್ನು ಬಿಡಿ ಶಾರದಮ್ಮ. ಒಂದು ರಾತ್ರಿ ಎಲ್ಲೋ ಕಳೆದು ಬಂದವಳಿಗೆ ಈ ಮನೆಯಲ್ಲಿ ಜಾಗವಿಲ್ಲ. ಹೋಗು ಅಂತ ಹೇಳ್ಬಿಡಿ." ಅವನು ಅಲ್ಲಿ ನಿಲ್ಲದೇ ತನ್ನ ರೂಮ್‌ಗೆ ಬಂದು ಬಿಟ್ಟ.

"ನಿಮ್ಮಪ್ಪನಿಗೆ ಈಗ ಕೋಪ ಬಂದಿದೆ. ಅವರ ಕೋಪ ಕಡಿಮೆ ಆಗೋವರೆಗೂ ನೀನು ಪ್ರಶಾಂತನ ಮನೇಲಿರುವಂತೆ ಬಾ....." ಎನ್ನುತ್ತಾ ಶಾರದಮ್ಮ ಅವಳನ್ನು ಪ್ರಶಾಂತನ ಮನೆಗೆ ಕರೆ ತಂದಳು. ಚಿನ್ಮಯಿ ಬಿಕ್ಕಿದಳು.

"ನಮ್ಮಪ್ಪ ಕೋಪದಿಂದ ಅವಳು ಮನೇಲಿರೋದೇ ಬೇಡ ಅಂತಿದಾರೆ...... ಹೆಣ್ಣು ಹುಡುಗಿ ಎಲ್ಲಿಗೆ ಹೋಗುತ್ತೆ? ನೀನಾದ್ರೂ ಏನಾಯ್ತು ಅಂತ ವಿಚಾರಿಸು....." ಎಂದು ಹೇಳಿ ಅವಳನ್ನು ಅಲ್ಲಿಯೇ ಬಿಟ್ಟು ಹೋದಳು. ಪ್ರಶಾಂತ ಅವಳನ್ನು ಒಳಕ್ಕೆ ಕರೆದುಕೊಂಡು ಹೋಗಿ ಅವಳಿಗೆ ಬಿಸಿ ಬಿಸಿ ಕಾಫಿಯನ್ನು ಕೊಟ್ಟ.

ಭಟ್ಟನಿಗೆ ಸ್ವಲ್ಪ ಗರ್ವಭಂಗವಾದಂತಾಗಿತ್ತು. ಆದರೆ ಅದನ್ನು ಹೊರಗೆ ತೋರ್ಪಡಿಸಿಕೊಳ್ಳಲಿಲ್ಲ. ಪೋಲೀಸ್ ಸ್ಟೇಷನ್‌ಗೆ ಬಂದು ತನ್ನ ಕಂಪ್ಲೇಟನ್ನು ಹಿಂದಕ್ಕೆ ತೆಗೆದುಕೊಂಡ. ಹೊರ ಬಂದ ಕಿಶೋರ ಭಟ್ಟನನ್ನು ತಿರಸ್ಕಾರದಿಂದ ನೋಡಿ, ಹೊರಗಿನ ಆವರಣದಲ್ಲಿ ನಿಂತಿದ್ದ ಕಾರಿನ ಬಳಿ ಭಟ್ಟನಿಗಾಗಿ ಕಾದು ನಿಂತಿದ್ದ. ಭಟ್ಟ ಕಾರಿನ ಬಳಿಗೆ ಬಂದ.

"ಏನು ಭಟ್ಟರೇ, ನಿಮ್ಮ ಮಗಳು ಸಿಕ್ಲಾ...... ನನ್ನನ್ನ ಖುಲಾಸೆ ಮಾಡಿಸಿದ್ರಲ್ಲ."

"ನನಗೆ ನಿನ್ನತ್ರ ಮಾತು ಬೇಕಿಲ್ಲ."

"ನಿಮಗೆ ಬೇಡವಾಗಿರಬಹುದು. ಆದರೆ, ನನಗೆ ಬೇಕಾಗಿದೆ. ಇಲ್ಲಿ ಕೇಳಿ, ನನಗೆ ನೀವು ಅವಮಾನ ಮಾಡಿದೀರಿ. ನಾನು ನಿಮ್ಮನ್ನು ಸುಮ್ಮನೇ ಬಿಡುಲ್ಲ."

"ಅದೇನು ಮಾಡ್ಕೋತೀಯೋ ಮಾಡ್ಕೋ ಹೋಗು."

"ನಿಮ್ಮ ಮೇಲೆ ಮಾನ ನಷ್ಟ ಮೊಕದ್ದಮೆ ಹೂಡ್ತೀನಿ. ನಿಮ್ಮ ಮನೆ ಮುಂದೆ ಧರಣಿ ಕೂರ್ತೀನಿ. ನಿಮ್ಮ ಮಗಳು ಮನೆ ಬಿಟ್ಟು ಹೋಗಿ, ಎಲ್ಲೋ ರಾತ್ರಿ ಕಳೆದು ಬಂದ ವಿಚಾರ ಊರಿಗೆಲ್ಲಾ ತಿಳಿಯುವಂತೆ ಮಾಡ್ತೀನಿ. ನಿಮ್ಮ ಮರ್ಯಾದೆ ಹೋಗುವಂತೆ ಮಾಡ್ತೀನಿ."

"ನಿನಗೆ ಗೊತ್ತಿರೋದು ಇಷ್ಟೇ ತಾನೇ... ನಿನ್ನ ಬೆದರಿಕೆಗೆ ನಾನು ಹೆದರುಲ್ಲ."

"ಕಾನೂನು ತಿಳಿದೋರು ನೀವೊಬ್ರೇ ಅಂತ ಅಂದ್ಕೋಬೇಡಿ. ಆ ಸಾರಿ, ನನ್ನದೇ ತಪ್ಪಿತ್ತು. ಬಾಯ್ಮುಚ್ಚುಕೊಂಡು ಸುಮ್ಮನಾದೆ. ಈ ಬಾರಿ ನನ್ನ ತಪ್ಪು ಏನೂ ಇರಲಿಲ್ಲ. ನಾನು ನಿಮಗೆ ಬುದ್ಧಿ ಕಲಿಸದೇ ಬಿಡೋನಲ್ಲ. ಏನ್ಮಾಡ್ಬೇಕೂಂತ ನಂಗೂ ಗೊತ್ತು...."

"ಇದೇ ನೆವದಲ್ಲಿ ನನ್ನಿಂದ ಹಣ ಕೀಳ್ಬೇಕು ಅಂತ ತಾನೇ ನಿನ್ನ ಉಪಾಯ..... ಕೇಳು.... ಎಷ್ಟು ಬೇಕು ಹಣ? ಈಗ್ಲೇ ನಿನ್ನ ಮುಖದ ಮೇಲೆ ಬಿಸಾಕ್ತೀನಿ."

"ದುರಹಂಕಾರದಿಂದ ಮಾತಾಡ್ಬೇಡಿ ಭಟ್ಟರೇ..... ನಿಮ್ಮ ಹಣ ಯಾರಿಗೆ ಬೇಕಾಗಿದೆ? ಕೋರ್ಟು ಏನು ತೀರ್ಪು ಕೊಡುತ್ತೋ ಅದೇ ನನಗೆ ಸಮ್ಮತ."

"ಕೋರ್ಟು, ಕಛೇರಿ ನನಗಿಂತ ಚೆನ್ನಾಗಿ ಗೊತ್ತೋ.. ಏನಾದರೂ ಮಾಡ್ಕೋ.."

"ಎಷ್ಟಾಗ್ಲೀ ನೀವು ಹೆಸರಾಂತ ಲಾಯರ್ರು, ನಿಮಗೆ ಹೇಳಿಕೊಡಬೇಕಾಗಿಲ್ಲ ನಾನು. ಸುಳ್ಳು ಸಾಕ್ಷಿಗಳನ್ನು ಸೃಷ್ಟಿಸಿ, ಕೇಸೇ ತಿರುಗ ಮುರುಗ ಆಗುವಂತೆ ಮಾಡುವು ದರಲ್ಲಿ ನೀವು ನಿಸ್ಸೀಮರು. ಇರಲಿ ಇರಲಿ ನಿಮ್ಮ ಬಂಡವಾಳ ಏನೂಂತ ಎಲ್ರಿಗೂ ಗೊತ್ತಾಗ್ಲಿ...... ನಿಮ್ಮ ಹೆಣ್ಣು ಮಕ್ಕಳು ಕೋರ್ಟ್‌ನ ಕಟಕಟೆಯಲ್ಲಿ ನಿಂತು ಮಾತಾಡಲಿ. ಅವರ ಚರಿತ್ರೆ ಏನೂಂತ ಹೊರಬರಲಿ...." ಅವನು ವ್ಯಂಗ್ಯವಾಗಿ ನುಡಿದು ಅಲ್ಲಿಂದ ಮರೆಯಾದ.

* * *

ಅಧ್ಯಾಯ – ಇಪ್ಪತ್ತೊಂಬತ್ತು

ಕಿಶೋರನ ಉಪಾಯ ಫಲಿಸಿತೇ?

ಭಟ್ಟನಿಗೆ ಅವನ ಮಾತುಗಳಿಂದ ಭಯವೇನೂ ಆಗದಿದ್ದರೂ ತನ್ನ ಮಕ್ಕಳು ಕೋರ್ಟ್‌ನಲ್ಲಿ ಬಂದು ನಿಲ್ಲುವುದು ಸರಿ ಎನಿಸಲಿಲ್ಲ. ವಿದ್ಯಾ ಮದುವೆಯಾಗಿ ಗಂಡನ ಮನೆಯಲ್ಲಿರುವವಳು.... ಅವಳ ಗಂಡನ ಮನೆಯವರಿಗೆ ವಿಷಯ ಹರಡುತ್ತದೆ. ಇದರ ಪರಿಣಾಮ ಏನಾಗುತ್ತದೋ.... ಈ ಚಿನ್ಮಯೀ ಇನ್ನೂ ಮದುವೆಯಾಗದ ಹೆಣ್ಣು...... ಒಂದು ರಾತ್ರಿ, ಇವಳು ಯಾರೋ ಅಪರಿಚಿತರ ಜತೆಯಲ್ಲಿದ್ದಳೆಂದು ತಿಳಿದರೆ, ಮುಂದೆ ಅವಳ ಗತಿ? ಅವಳು ಎಲ್ಲಿದ್ದಳೋ, ಯಾರು ಅಪಹರಿಸಿದ್ದರೋ ಒಂದನ್ನೂ ವಿಚಾರಿಸದೆ ದುಡುಕಿದೆನೇನೋ ಅಂತೆನ್ನಿಸಿತ್ತು. ಈ ವಿಷಯಗಳು ಕೋರ್ಟ್‌ನಲ್ಲಿ ಹೊರ ಬಿದ್ದರೆ ತನ್ನ ಮನೆಯ ಮರ್ಯಾದೆ ಬೀದಿ ಪಾಲಾಗುವುದು ಖಂಡಿತಾ..... ಕಾಮಾಕ್ಷಿಯ ಹತ್ತಿರ ಮಾತನಾಡಿ, ಒಂದು ಒಪ್ಪಂದಕ್ಕೆ ಬರುವುದು ಸರಿ ಎಂದುಕೊಂಡು ಮನೆಗೆ ಬಂದ. ವಾದದಲ್ಲಿ ಸೋತ ವಕೀಲನಂತಿತ್ತು ಅವನ ಮನಃಸ್ಥಿತಿ.

ಯಾರೋ ಕಕ್ಷಿದಾರರು, ಅವನಿಗೋಸ್ಕರ ಕಾಯುತ್ತಾ ಕೂತಿದ್ದರು. ಅವನಿಗೆ ಮಾತು ಬೇಕಿರಲಿಲ್ಲ. "ಈಗ ಮಾತನಾಡಲು ಸಮಯವಿಲ್ಲ. ಒಂದೆರಡು ದಿನ ಬಿಟ್ಟು ಬನ್ನಿ." ಎಂದು ಹೇಳಿ ಅವರುಗಳನ್ನು ಕಳಿಸಿದ. ಅಷ್ಟರಲ್ಲಿ ಕಾಮಾಕ್ಷಿ ಕೈ, ಬಾಯಿ ಆಡಿಸುತ್ತಾ, ವಟಗುಟ್ಟುತ್ತಾ ಒಳಬಂದಳು.

"ಕಾಮಾಕ್ಷೀ......ಇದೇನು ನಿನ್ನ ಆರ್ಭಟ. ಸ್ವಲ್ಪ ಮೆತ್ಗೆ ಮಾತಾಡು."

"ಯಾಕೆ? ನಿನ್ನ ಮುಖಭಂಗವಾಯ್ತಲ್ಲಾ ಅದಕ್ಕಾ...... ನಾನು ನಿನ್ನೆ ರಾತ್ರೀನೇ ಹೇಳ್ದೇ ಅವಂದೇನೂ ಇದರಲ್ಲಿ ತಪ್ಪಿಲ್ಲ. ಅದಕ್ಕೂ ಇವನ್ಗೂ ಸಂಬಂಧವಿಲ್ಲ ಅಂತ. ನನ್ನ ಮಾತನ್ನ ಕೇಳೋ ತಾಳ್ಮೆ ನಿನಗಿರ್ಲಿಲ್ಲ. ಹಿಂದೆಂದೋ ತಪ್ಪು ಮಾಡ್ದೋನು, ಹಾಗಾದ್ರೆ ಸುಧಾರ್ಸೇ ಇಲ್ವಾ? ಅವನ ಪಾಡಿಗೆ ಅವನಿದ್ದ..... ಅವನನ್ನು ಕೆರಳಿಸಿದೀಯ. ಈಗ ಅವ್ನು ರೊಚ್ಚಿಗೆದ್ದಿದ್ದಾನೆ. ಏನ್ಮಾಡ್ತಾನೋ ನಂಗಂತೂ ಗೊತ್ತಿಲ್ಲ."

"ಏನ್ಮಾಡ್ತಾನಂತೆ? ಏನ್ಗೊತ್ತು ನಿಂಗೆ......? ದೊಡ್ಡಾಗಿ ಬಂದ್ಬಿಟ್ಯಲ್ಲಾ....."

"ನಿನ್ಮೇಲೆ ಮಾನನಷ್ಟ ಮೊಕದ್ದಮೆ ಹೂಡ್ತಾನಂತೆ......ಇದೆಲ್ಲಾ ಬೇಕಿತ್ತಾ ನಿಂಗೆ?"

"ಅದ್ನೆಲ್ಲಾ ಮಾಡೋಕೆ ಹೋದ್ರೆ ಹಾಳಾಗೋದು ನಿನ್ಮಗನೇ...... ಅವನ್ಗೆ

ಬುದ್ಧಿ ಹೇಳು."

"ಯಾಕೆ? ನಿನ್ನ ಹೆಣ್ಮಕ್ಕಳ ಬಾಳು ಹಾಳ್ಳಾಗುತ್ತೆ ಅಂತ ಭಯಾನಾ.....? ನನ್ಮಗನೆ ಬಾಳನ್ನು ಕೆಡಿಸ್ತಾ ಇರ್ರೋನು ನೀನು. ನಿನ್ನ ಲಾಯರ್‌ಗಿರಿ ಹೊರಗಿನೋರ್ಗೆ ಗೊತ್ತು...... ಈಗ ನಿಮ್ಮ ಸಂಸಾರದ ಗುಟ್ಟು ಹೊರಬರ್ಲಿ, ನಂಗೇನು......?"

"ನೀನು ಹೆಂಗ್ಸಾಗಿ ಹೀಗೆಲ್ಲಾ ಮಾತಾಡ್ತೀಯಲ್ಲ. ಮೊದ್ಲು ನನ್ನ ಮಗಂಗೆ ತಿಳುವಳ್ಕೆ ಹೇಳು."

"ಯಾವ ಗಂಡ್ಸೂ ಹೆಂಗ್ಸಿನ ಬುದ್ಧಿವಾದದ ಮಾತನ್ನ ಕೇಳುಲ್ಲ. ಅದಕ್ಕೆ ನಿನ್ಗಿಂತ ಬೇರೆ ಸಾಕ್ಷಿ ಬೇಕಾ? ನನ್ಮಗ ಈ ಸಾರಿ ನನ್ನ ಮಾತನ್ನ ಖಂಡಿತಾ ಕೇಳೋ ಸ್ಥಿತೀಲಿಲ್ಲ."

"ಏನ್ಬೇಕಂತೆ ನಿನ್ಮಗಂಗೆ? ಹಣ ತಾನೇ? ಎಷ್ಟು ಬೇಕಂತೆ..... ಕೊಟ್ಟು ಕೈ ತೊಳ್ಕೋತೀನಿ....."

"ನೀನು ಲಕ್ಷ ರೂಪಾಯಿ ಕೊಟ್ರೂ ಅವನ ತಲೆಗೆ ಅಂಟಿರುವ ಕಳಂಕ ತಪ್ಪುತ್ತಾ.....? ಹಾಗೇ ನಿನ್ಮಗಳ ತಲೆಗೆ ಅಂಟಿರುವ ಕಳಂಕಾನ ತೊಳೆಯೋಕೆ ಆಗುತ್ತಾ ನೋಡು...." ಭಟ್ಟ ತಲೆ ತಗ್ಗಿಸಿದ.

"ದುಡ್ಡು ಬಿಸ್ಹಾಕಿ ಅವನ ಬಾಯ್ಮುಚ್ಚಿಸ್ಬೇಕೂಂತ ಮಾಡಿದೀಯೇನು.....?"

"ಅವನನ್ನು ನನ್ಹತ್ರಕ್ಕೆ ಕಳ್ಸು. ನಾನು ಅವನ್ಹತ್ರ ಮಾತಾಡ್ತೀನಿ."

"ಯಾಕೆ? ಮತ್ತೆ ಅವನನ್ನು ಪೋಲೀಸರ ವಶಕ್ಕೆ ಒಪ್ಪಿಸೋಕಾ?"

"ನನ್ನನ್ನು ಅಷ್ಟು ನೀಚ ಅಂತ ಅಂದ್ಕೋಬೇಡ. ನಾನು ಹೇಳಿದಷ್ಟನ್ನು ಕೇಳು. ಅವನನ್ನು ಇಲ್ಲಿಗೆ ಕಳಿಸು."

"ನೋಡು ಭಟ್ಟ, ನೀನು ಮತ್ತೇನಾದ್ರೂ ಕಿತಾಪತಿ ಮಾಡಿ, ನನ್ನ ಮಗನ್ನ ಜೈಲ್‌ಗೆ ಕಳಿಸಿದ್ರೆ ನಾನು ಮಾತ್ರ ಸುಮ್ನಿರುಲ್ಲ. ನಿನ್ನನ್ನು ಕೊಂದು ಜೈಲ್‌ಗೆ ಹೋಗ್ತೀನಿ ಬೇಕಾದ್ರೆ." ಬೆರಳು ತೋರಿಸಿದಳು.

"ನಿನ್ನ ಕೈಯಿಂದ ಸಾಯೋ ಆಸೆ ನನಗಿಲ್ಲ, ಹೋಗು" ಅವನು ವ್ಯಂಗ್ಯ ನಗೆಯನ್ನು ನಕ್ಕ. ಕಾಮಾಕ್ಷಿ ಭುಸುಗುಟ್ಟುತ್ತಾ ಹೊರಬಂದಳು. ಕೆಲವೇ ನಿಮಿಷಗಳಲ್ಲಿ ಮಗನೊಂದಿಗೆ ಮತ್ತೆ ಬಂದಳು.

"ನೀನು ಒಳಗೆ ಕೂತಿರು. ನಾನು ಇವನೊಬ್ಬನ ಹತ್ರ ಮಾತಾಡ್ಬೇಕು." ಕಾಮಾಕ್ಷಿ ಗೊಣಗುತ್ತಾ ಒಳಗೆ ಹೋಗಿ ಬಿಟ್ಟಳು. ಕಿಶೋರ ಅವನೆದುರಿಗೆ ಕೈ ಕಟ್ಟಿ ನಿಂತ. ಕೂತ್ಕೋ ಎಂದು ಇವನೂ ಹೇಳಲಿಲ್ಲ. ಅವನೂ ಕೂರಲಿಲ್ಲ. ಹೇಗೆ ಮಾತನ್ನು ಪ್ರಾರಂಭಿಸುವುದು ಎಂದು ಭಟ್ಟ ಚಿಂತಿಸುತ್ತಿದ್ದ. ಭಟ್ಟನೇ ಮಾತನಾಡಲಿ ಎಂದು ಇವನು ಸುಮ್ಮನೇ ನಿಂತಿದ್ದ.

ಕಡೆಗೆ ಭಟ್ಟನೇ ಮೌನವನ್ನು ಮುರಿದ. "ಏನು ಯೋಚ್ನೆ ಮಾಡ್ದೆ?"

"ಯಾವ ವಿಷಯ?" ಏನೂ ಅರಿಯದವನಂತೆ ಮುಖ ಮಾಡಿದ ಕಿಶೋರ.

"ಜಾಣನಂತೆ ಆಡಬೇಡ.... ನಿನಗೆ ಎಷ್ಟು ಹಣ ಬೇಕು?"

"ನೀವು ಎಷ್ಟು ಹಣ ಕೊಡಬಲ್ಲಿರಿ?"

"ಒಂದಿಪ್ಪತ್ತೈದು ಸಾವಿರ..... ಅದೂ ನಮ್ಮ ಹುಡ್ಗ ಅಂತ.... ಬದುಕ್ಕೋ ಹೋಗು...." ಕಿಶೋರ ವಿಕಟ ನಗೆಯನ್ನು ನಕ್ಕ.

"ನಿಮ್ಮ ಹಣದಿಂದ ಬದುಕಬೇಕೆಂಬ ಆಸೆ ನನಗಿದ್ದಿದ್ರೆ ಈ ಕೆಲ್ಸಾನ ಆಗ್ಲೇ ಮಾಡ್ತಿದ್ದೆ..... ವಿದ್ಯಾ ದಿನೇಶನ್ನ ಮದ್ವೆ ಆಗದಂತೆ ಮಾಡ್ತಿದ್ದೆ...... ಅಂಥ ಸಾಕ್ಷ್ಯಗಳು ನನ್ನಲ್ಲಿದ್ದವು....."

"ಸುಮ್ನೆ ಬೊಗಳೆ ಬಿಡಬೇಡ...."

"ಬೊಗಳೆ ಅಲ್ಲ. ನಿಮ್ಮ ಮಗಳು ತನ್ನ ಕೈಯಾರೆ ಬರೆದ ಪತ್ರಗಳು ಇವತ್ತಿಗೂ ನನ್ನಲ್ಲಿವೆ..... ಆದರೆ ಅದನ್ನು ದಿನೇಶನಿಗೆ ತೋರಿಸಿ, ಅವಳ ಮದುವೆಯನ್ನು ಮುರಿಯುವ ಆಸೆ ನನಗೆಂದೂ ಇರಲಿಲ್ಲ."

"ಸುಳ್ಳು..... ನಾನು ಈ ಮಾತನ್ನು ನಂಬುಲ್ಲ."

"ನಂಬದೇ ಇದ್ರೆ ನನಗೇನೂ ನಷ್ಟವಿಲ್ಲ ಬಿಡಿ.... ಆದರೆ ನಾನು ಕೋರ್ಟ್‌ಗೆ ಹೋದರೆ, ಈ ವಿಷಯವೂ ಹೊರಬರುವುದು ಖಂಡಿತಾ......"

"ಒಂದೈವತ್ತು ಸಾವಿರ ಕೊಟ್ಟು ಬಿಡ್ತೀನಿ..... ನೀನು ಯಾವುದಾದ್ರೂ ಬಿಸಿನೆಸ್ ಶುರು ಮಾಡು....."

"ಇಷ್ಟೇನಾ ನಿಮ್ಮ ಹೆಣ್ಣು ಮಕ್ಕಳ ಮರ್ಯಾದೆಯ ಬೆಲೆ?"

"ಕಿಶೋರ ಅತಿ ಅತಿ ಆಡಬೇಡ...... ಐವತ್ತು ಸಾವಿರ ಅಂದ್ರೆ, ಕಡಿಮೆ ಏನಲ್ಲ. ಏನೋ ಮನೆಯ ಮರ್ಯಾದೆ ಮನೇಲೇ ಉಳೀಲೀ ಅಂತ ತೆರುತ್ತಿರುವ ದಂಡ......"

"ಕೋಪಿಸ್ಕೋಬೇಡಿ ಸಾರ್..... ನಿಮ್ಮ ದಂಡದ ಹಣ ನನಗೆ ಬೇಡ. ನಾನು ಒಂದು ಕಾಸನ್ನೂ ಮುಟ್ಟುವುದಿಲ್ಲ."

"ಹಾಗಾದ್ರೆ ನಿನಗೇನು ಬೇಕು ಬೇಗ ಹೇಳು......?"

"ಹೇಳ್ತೀನಿ..... ನೀವು ನನಗೊಂದು ಕ್ಷಮಾಪಣಾ ಪತ್ರವನ್ನು ಬರೆದು ಕೊಡಬೇಕು. ಎಲ್ಲರ ಎದುರಿನಲ್ಲಿ ನನ್ನನ್ನು ಕ್ಷಮಾಪಣೆ ಕೇಳ್ಬೇಕು....."

"ಏನಂದೆ? ಇದು ಮಾತ್ರ ಸಾಧ್ಯವಿಲ್ಲ. ಬೇಕಾದ್ರೆ ಇನ್ನೂ ಒಂದು ಹತ್ತು ಸಾವಿರ ರೂಪಾಯಿ ಕೊಡ್ತೀನಿ."

"ಯಾಕೆ? ನಾನು ಮಾಡದ ತಪ್ಪಿಗೆ ಒಂದು ರಾತ್ರಿ ನಾನು ಲಾಕಪ್‌ನಲ್ಲಿದ್ದೆ..... ನೀವು ಮಾಡಿದ ತಪ್ಪಿಗೆ ಒಂದು ಕ್ಷಮಾಪಣೆ ಕೇಳಿದ್ರೆ ಏನೀಗ?"

"ಇದುವರೆಗೂ ನಾನು ಯಾರನ್ನೂ ಎಂದೂ ಕ್ಷಮಾಪಣೆ ಕೇಳಿಲ್ಲ."

"ಎಲ್ಲಾದಕ್ಕೂ ಒಂದು ಮೊದಲ ಬಾರಿ ಇರುತ್ತೆ...... ಇದೇ ಮೊದಲು ಅಂತ ತಿಳ್ಕೊಳ್ಳಿ."

"ಇಲ್ಲ..... ಇಲ್ಲ..... ಇದೊಂದನ್ನು ಬಿಟ್ಟು ಬೇರೆ ಏನನ್ನಾದ್ರೂ ಕೇಳು....."

"ನೀವೇ ಕೊಡ್ತೀನಿ ಅನ್ನೋ ಹಣ ನನಗೆ ಬೇಡ, ನಾನು ಕೇಳಿದ್ದನ್ನ ಕೊಡೋಕೆ ನೀವು ತಯಾರಿಲ್ಲ. ಮತ್ತೇನಿದೆ ನಿಮ್ಮ ಬಳಿ.....? ಈ ಬಂಗ್ಲೆ, ಈ ಕಾರು, ಮನೆ ತುಂಬಾ ಮಕ್ಕಳು ಅಷ್ಟೇ. ಈ ಬಂಗ್ಲೆ ನನಗೆ ಅತಿ ದೊಡ್ಡದು. ಕಾರನ್ನ ನನಗೆ ಓಡಿಸೋಕೆ ಬರುಲ್ಲ..... ಇನ್ನು ಮಕ್ಕಳು..... ನಿಮ್ಮ ಗಂಡು ಮಕ್ಕಳು ನಿಮಗೇ ಬೇಕೋ ಬೇಡವೋ ಗೊತ್ತಿಲ್ಲ. ನನ್ಗಂತೂ ಬೇಡ..... ಹೆಣ್ಣು ಮಕ್ಕಳು ಮಾತ್ರ ಯಾರು ನೋಡಿದರೂ ಬೇಕು ಎನ್ನುವ ಹಾಗಿದಾರೆ...... ವಿದ್ಯಾ ಸುಂದರಿ, ಆದರೆ ಅವಳೀಗ ದಿನೇಶನ ಪತ್ನಿ...... ಚಿನ್ಮಯೀ ಅತೀ ಸುಂದರಿ..... ಆದರೆ ಅವಳು ಈಗ ನನಗೆ ಲಾಯಕ್ಕಲ್ಲ. ಒಂದು ರಾತ್ರಿ ಯಾರ ಮನೆಯಲ್ಲೋ ಇದ್ದು ಬಂದವಳು..... ಅವಳನ್ನ ಪತ್ನಿ ಅಂತ ಹೇಗೆ ಸ್ವೀಕರಿಸಲಿ? ಇನ್ನು ಉಳಿದವಳು ಆ ನೀಲಿ ಕಣ್ಣುಗಳ ಸುಂದರಿ..... ಅದು ಇನ್ನೂ ಚಿಕ್ಕದು..... ಪರವಾಗಿಲ್ಲ, ಏನ್ಮಾಡೋದು? ಅವಳೇ ಇರಲಿ.... ನಿಮ್ಮ ಆ ನಳಿನಿಯನ್ನು ನಾನು ಮದ್ವೆ ಆಗ್ತೀನಿ....."

"ಸುಮ್ಮನಿದೀನಿ ಅಂತ ಹುಚ್ಚನ ಥರ ಹರಟಬೇಡ..... ನನ್ನ ಹೆಣ್ಣು ಮಕ್ಕಳು ಬೀದೀಲಿ ಬಿದ್ದಿಲ್ಲ. ಅಪ್ಪ ನಾನು, ಇನ್ನೂ ಬದುಕಿದ್ದೀನಿ...."

"ನೀವು ಇದ್ದರೂ, ನಿಮ್ಮ ಹೆಣ್ಣು ಮಕ್ಕಳು ಯಾಕೆ ದಾರಿ ತಪ್ಪಿದರು?"

"ಯಾರೂ ದಾರಿ ತಪ್ಪಿಲ್ಲ. ಏನೋ ವಿವೇಕ ಸಾಲದು..... ವಿದ್ಯಾಳನ್ನು ಸರಿ ದಾರಿಗೆ ತಂದವನು ನಾನೇ..... ಇನ್ನು ಚಿನ್ಮಯೀ...... ಅವಳಿಗೂ ಆದಷ್ಟು ಬೇಗ ಮದ್ವೆ ಮಾಡ್ತೀನಿ....."

"ಅವಳು ನಿನ್ನೆ ರಾತ್ರಿ ಎಲ್ಲಿದ್ದಳು! ಅವಳನ್ನು ಯಾರು ಕರ್ಕೊಂಡ್ಹೋದ್ರು! ಅವಳ ಜತೆ ಏನು ನಡೀತು ಅಂತ ಮೊದಲು ತಿಳ್ಕೊಳ್ಳಿ....."

"ಇದನ್ನೆಲ್ಲ ನೀನೇನೂ ನನಗೆ ಹೇಳಬೇಕಾಗಿಲ್ಲ. ಅಂಥದ್ದೇನೂ ನಡೆದಿಲ್ಲ."

"ನಿಮಗೆ ಹೇಗೆ ಗೊತ್ತು? ಹಾಗಂತ ಅವಳು ಹೇಳಿದ್ದಾಳಾ?"

"ನನ್ನ ಮಗಳ ಮೈ ಮುಟ್ಟುವ ಧೈರ್ಯ ಯಾವೋನಿಗಿದೆ?" ಕಿಶೋರ ಮನದಲ್ಲೇ ನಕ್ಕು ಭಟ್ಟನನ್ನು ಓರೆಗಣ್ಣಿನಿಂದ ನೋಡಿದ.

"ನಿಮಗೆ ಆಗದವರು ಯಾರಾದ್ರೂ..... ನಿಮ್ಮ ಹೆಸರನ್ನು ಕೆಡಿಸೋಕೆ...... ಮಾಡಿರಬಹುದು."

"ಅವರು ಯಾರೇ ಇರಲಿ, ಒಂದಲ್ಲ ಒಂದು ದಿನ ಸಿಕ್ಕಿ ಬೀಳ್ತಾರೆ..... ಆಗ ಚೆನ್ನಾಗಿ ವಿಚಾರಿಸಿಕೊಳ್ತೀನಿ..... ಈಗ ನಿನ್ನ ವಿಷಯಕ್ಕೆ ಬಾ."

"ಹೋಗ್ಲಿ ಬಿಡಿ ಸಾರ್.... ನಿಮ್ಮನೇಲೂ ಏನೇನೋ ದುರಂತಗಳು ನಡೆದು

ಹೋದವು..... ನನ್ನ ಸಹಾನುಭೂತಿ ನಿಮ್ಮ ಕಡೆ ಇದೆ..... ನೀವು ದೊಡ್ಡೋರು....... ನಾನು ಎಷ್ಟರವನು? ನನಗೆ ಏನೂ ಬೇಡ. ವಿದ್ಯಾ ನನಗೆ ಅಕ್ಕನ ಸಮಾನ..... ನಳಿನಿ ನನಗೆ ತಂಗಿ ಸಮಾನ..... ವಿಪರೀತ ಮಾತನಾಡಿ ನಿಮಗೆ ಬೇಸರ ಮಾಡಿದ್ದೇನೆ, ಕ್ಷಮಿಸಿ ಬಿಡಿ." ಎನ್ನುತ್ತಾ ಭಟ್ಟನ ಕಾಲುಗಳನ್ನು ಮುಟ್ಟಲು ಬಾಗಿದ.

"ಏನ್ಮಾಡ್ತಿದೀಯ....... ದೂರ ದೂರ......" ಭಟ್ಟ ರೇಗಿದ. ಕಿಶೋರ ಅಲ್ಲಿ ನಿಲ್ಲದೇ ಹೊರಗೆ ಬಂದುಬಿಟ್ಟ. ಅವನತ್ತ ಹೋದ ಮೇಲೂ ಭಟ್ಟ ಹಾಗೇ ಕೂತಿದ್ದ. ಕಾಮಾಕ್ಷಿ ಒಳಗೆ ಬಂದಳು.

"ಕಿಶೋರ ಏನಂದ.....? ನಂಗೊತ್ತು ನನ್ಮಗ ಒಳ್ಳೆಯವ್ನು..... ನಿನ್ನ ಮಾತಿಗೆ ಒಪ್ಪಿದ್ನಾ?" ಇಲ್ಲ ಎನ್ನುವಂತೆ ಭಟ್ಟ ತಲೆಯಾಡಿಸಿದ. ಮಾತನಾಡಲಿಲ್ಲ. ಕಾಮಾಕ್ಷಿ ಮತ್ತೆ ಒಳಗೆ ಹೋಗಿ ಕುಳಿತಳು.

"ಚೆನ್ನು ಏನ್ಹೇಳ್ತು..... ಯಾರಂತೆ ಅವ್ರು?"

"ನಂಗೊತ್ತಿಲ್ಲ ಕಾಮಾಕ್ಷಿ..... ಬರ್ತಿದ್ದ ಹಾಗೇ ಅವಳನ್ನು ಮನೆಯಿಂದ ಅಟ್ಟಿದರು. ಅವಳೀಗ ಪ್ರಶಾಂತನ ಮನೇಲಿದಾಳೆ. ಶಾರದಮ್ಮ ಅಲ್ಲೆ ಇದಾರೆ."

"ಇಂಥ ಸ್ಥಿತಿ ಯಾವ ಹೆಣ್ಮಕ್ಳಿಗೂ ಬರ್‍ಬಾರ್ದು ಪ್ರೇಮಕ್ಕ. ಚಿನ್ಮಯೀನ ಜೋಪಾನವಾಗಿ ನೋಡ್ಕೊಳ್ಳಿ. ಪ್ರಾಣಕ್ಕೆ ಏನಾದ್ರೂ ಅಪಾಯ ಮಾಡ್ಕೊಂಡೀತು..... ಭಟ್ಟ ಯಾರ್‍ಗೆ ಏನು ಅನ್ಯಾಯ ಮಾಡಿದ್ನೋ.... ಅವ್ರ ಆ ಕೋಪಾನ ಈ ಮಗೀನ ಮೇಲೆ ತೀರಿಸ್ಕೊಂಡಿದಾರೆ. ಇನ್ನು ಚೆನ್ನು ಗತಿ ಏನು? ಅವಳನ್ಯಾರು ಮದ್ವೆಯಾಗ್ತಾರೆ......? ಏನಾಯ್ತು, ಏನು ನಡೀತು ಅಂತ ಏನಾದ್ರೂ ಹೇಳ್ತಾ ಕೂಸು?"

"ಇಲ್ಲ ಕಾಮಾಕ್ಷಿ ಅವ್ಳು ಯಾವ ಮಾತನ್ನೂ ಆಡಿಲ್ಲ. ಇವ್ರು ನನ್ನನ್ನ ಕೇಳೋಕೇ ಬಿಡ್ಲೂ ಇಲ್ಲ. ಅದಕ್ಕೆ ಶಾರದಮ್ಮನ್ನ ಕಳ್ಸಿದೀನಿ..... ನನ್ನೆದೆಯಂತೂ ಹೊಡೆದುಕೊಳ್ತಿದೆ..... ಚಿನ್ಮಯಿ ಬದುಕು ಹಾಳಾಯ್ತಲ್ಲ. ನಾನಿನ್ನ್ಹೇಗೆ ಬದುಕಿರ್‍ಲಿ?"

"ಸಮಾಧಾನ ಮಾಡ್ಕಳ್ಳಿ ಪ್ರೇಮಕ್ಕ. ಎಲ್ಲಾದಕ್ಕೂ ದೇವ್ರು ಒಂದು ದಾರಿ ತೋರಿಸ್ತಾನೆ." ಎಂದು ಸಂತೈಸಿ ಅಲ್ಲಿಂದ ಪ್ರಶಾಂತನ ಮನೆಗೆ ಬಂದಳು. ಚಿನ್ಮಯಿ ಶಾರದಮ್ಮನ ತೊಡೆಯ ಮೇಲೆ ತಲೆಯನ್ನಿಟ್ಟುಕೊಂಡು ಮಲಗಿದ್ದಳು. ಪ್ರಶಾಂತ ಮನೆಯಲ್ಲಿರಲಿಲ್ಲ.

"ಏನೇ ಕೂಸು...... ಏನಾಗಿ ಹೋಯ್ತೇ....." ಕಾಮಾಕ್ಷಿ ಚಿನ್ಮಯಿಯ ತಲೆ ಸವರಿ ಅತ್ತರೂ ಚಿನ್ಮಯಿ ಅಳಲಿಲ್ಲ. ಚಿನ್ಮಯಿ ಕಣ್ಣುಗಳನ್ನು ಮುಚ್ಚಿಕೊಂಡಳು.

"ನೋಡಿ ಕಾಮಾಕ್ಷಿ ಹೀಗೇ...... ಬೆಳಗ್ನಿಂದ ಒಂದ್ಹನಿ ಕಣ್ಣೀರು ಬೀಳಿಸಿಲ್ಲ..... ಮಂಕು ಬಡಿದವಳ ಹಾಗೆ ಬಿದ್ಕೊಂಡಿದಾಳೆ....."

"ಯಾರದ್ದೋ ದೃಷ್ಟಿ ಬಿದ್ದಿದೆ...... ಇಲ್ದಿದ್ರೆ ಹೀಗಾಗ್ತಿತ್ತಾ.....? ನೀವಾದ್ರೂ ಬಾಯಿ ಬಿಡಿಸಿ ಶಾರದಮ್ಮ..... ಆ ಪಾಪಿಗೆ ತಕ್ಕ ಶಿಕ್ಷೆ ಕೊಡಿಸೋಣ......"

"ಅವನ್ಯಾರೋ ದುಷ್ಟ ಸಿಕ್ಕಿ ಬಿದ್ದು ಅವನಿಗೆ ಶಿಕ್ಷೆ ಕೊಡಿಸಿದ್ರೂ ನಡೆದದ್ದು ಹಿಂದಕ್ಕೆ ಹೋಗುತ್ತಾ?"

"ಹೌದು. ಹೋದ ಮಾನ ವಾಪಸ್ಸು ಖಂಡಿತಾ ಮತ್ತೆ ಬರೋಲ್ಲ...... ಈಗ ಭಟ್ಟ ಮನಸ್ಸು ಮಾಡಿ, ಈ ಹುಡ್ಗಿಗೆ ಆದಷ್ಟು ಬೇಗ ಮದ್ವೆ ಮಾಡಿಬಿಡಬೇಕು."

"ಹೌದು ಅದೇ ಸರಿ. ವಿಷಯ ಎಲ್ರಿಗೂ ಹರಡಿ, ನೆಂಟರಿಷ್ಟರು ನಾನಾ ತರಹ ಮಾತ್ನಾಡಿಕೊಳ್ಳುವ ಮೊದಲೇ ಹಸೆಮಣೆ ಏರಿಸ್ಬಿಡ್ಬೇಕು. ಯಜಮಾನ್ರು ನಿಮ್ಮ ಮಾತನ್ನ ಕೇಳ್ತಾರೆ..... ನೀವೇ ಒಂದ್ಮಾತು ಹೇಳಿ."

"ಅವ್ನು ಉರಿಸಿಂಗನಾಗಿದಾನೆ. ಹತ್‌ಹುತ್ ಅಂತ ಮೈಮೇಲೆ ಏರಿ ಬರ್ತಾನೆ. ನಾಲ್ಕು ದಿನ ಕಳೀಲಿ. ಸಮಯ ನೋಡಿ ಮಾತಾಡ್ತೀನಿ." ಕಾಮಾಕ್ಷಿ ಚಿನ್ಮಯಿಯ ತಲೆಯನ್ನು ದಡವಿ ಅಲ್ಲಿಂದ ಹೊರಟಳು.

* * *

ಒಂದೆರಡು ದಿನಗಳ ಅನಂತರ ಚಿನ್ಮಯಿ ಮನೆಗೆ ವಾಪಸ್ಸಾಗಿದ್ದಳು. ಭಟ್ಟನಿಗೆ ತಿಳಿದರೂ ತಿಳಿಯದವನಂತೆ ಸುಮ್ಮನಾಗಿದ್ದ. ಮಗಳನ್ನು ಎಷ್ಟೇ ಬೈದರೂ, ಹೋದ ಮಾನ ಮತ್ತೆ ಹಿಂತಿರುಗಿ ಬರುವುದಿಲ್ಲವೆಂದು ತಿಳಿದಿತ್ತು. ಅಲ್ಲದೇ ಬೆಳೆದ ಹುಡುಗಿ ಯನ್ನು ಏನು ನಡೆಯಿತು? ಎಂದು ಹೇಗೆ ಕೇಳುವುದು ಎಂದುಕೊಂಡು ಸುಮ್ಮನಾಗಿದ್ದ. ಮತ್ತೆ ಕಂಪ್ಲೆಂಟ್ ಕೊಟ್ಟರೆ, ತಾನೇ ಪ್ರಚಾರ ಮಾಡಿದಂತಾಗುತ್ತದೆ ಎಂದು ಸುಮ್ಮ ನಾಗಿದ್ದ. ಆದರೂ ತನಗೆ ಆಗದವರು ಯಾರು? ಅವರ ದ್ವೇಷಕ್ಕೆ ಕಾರಣವೇನು ಎಂದು ತಿಳಿದುಕೊಳ್ಳಲು ಹಳೆಯ ಫೈಲುಗಳನ್ನೆಲ್ಲಾ ತಡಕಾಡಿದ್ದ. ಆದರೆ ಅಂಥ ಕೇಸು ಯಾವುದೂ ಕಾಣಲಿಲ್ಲ. ಯಾರಿರಬಹುದು? ತನ್ನ ಹಳ್ಳಿಯವರ್ಯಾರಾ ದರೂ ಅಥವಾ ಶಾಸ್ತ್ರಿ ಮಾಡಿಸಿರಬಹುದೇ ಎಂಬ ಅನುಮಾನ ಸಹ ಕಾಡಿತು. ಆದರೆ ಅದಕ್ಕೆ ಸರಿಯಾದ ಪುಷ್ಟಿ ದೊರೆಯಲಿಲ್ಲ.

ಎಂದಿನಂತೆ ಚಿನ್ಮಯಿ ಕಾಲೇಜಿಗೆ ಹೊರಟಾಗ ಅವನು ತಡೆಯಲಿಲ್ಲ. ಕಾಲೇಜಿಗೆ ಹೋಗದೇ ಮನೆಯಲ್ಲೇ ಉಳಿದುಕೊಂಡರೆ, ವಿನಾಕಾರಣ ಅನುಮಾನಕ್ಕೆ ಆಸ್ಪದ ಸಿಗುತ್ತದೆ ಎಂದು ಅವನ ಅನಿಸಿಕೆ. ಆದರೆ ಅವಳಿಗೆ ತಿಳಿಯದಂತೆ, ಅವಳ ಚಲನವಲನಗಳ ಮೇಲೆ ಗಮನವನ್ನಿಡುವಂತೆ ಒಬ್ಬ ವ್ಯಕ್ತಿಯನ್ನು ಗೊತ್ತು ಮಾಡಿದ್ದ. ಕಿಶೋರನಿಗೆ ಈ ಅನುಮಾನವಿದ್ದುದರಿಂದ, ಅವನು ಚಿನ್ಮಯಿಯ ಬಳಿ ಸುಳಿದಿರಲಿಲ್ಲ. ಹಾಗೂ ಅವಳಿಗೂ ಎಚ್ಚರಿಕೆಯನ್ನು ಕೊಡುವಂತೆ ಪ್ರಶಾಂತನಿಗೆ ಹೇಳಿದ್ದ. ಹಾಗಾಗಿ ಭಟ್ಟನಿಗೆ ಯಾವ ಸುಳಿವೂ ಸಿಗಲಿಲ್ಲ.

ಸುಗುಣಾ ವಾಪಸ್ಸು ಬಂದಿದ್ದಳು. ಮಗುವನ್ನಾಡಿಸುವ ನೆವದಿಂದ ಚಿನ್ಮಯಿ ಆಗ – ಈಗ ಅಣ್ಣನ ಮನೆಗೆ ಹೋಗುತ್ತಿದ್ದಳು. ಅಲ್ಲಿಗೆ ಒಮ್ಮೊಮ್ಮೆ ಕಿಶೋರನೂ ಬರುತ್ತಿದ್ದ. ಕಿಶೋರ ಮಗನ ಮನೆಗೆ ಆಗಾಗ ಬರುತ್ತಾನೆಂದು ತಿಳಿದರೂ, ಅದನ್ನು

ಪ್ರಶ್ನಿಸುವ ಅಧಿಕಾರ ತನಗಿಲ್ಲವೆಂದುಕೊಂಡು ಭಟ್ಟ ಸುಮ್ಮನಿದ್ದ.

ಈ ಮಧ್ಯೆ ಕಾಮಾಕ್ಷಿ ಚಿನ್ಮಯಿಗೆ ಎರಡು ಸಂಬಂಧಗಳನ್ನು ತಂದಿದ್ದಳು. ಅವರುಗಳಿಗೆ ಚಿನ್ಮಯಿ ಒಪ್ಪಿಗೆಯಾಗಿದ್ದರೂ, ಚಿನ್ಮಯಿಯೇ ಒಪ್ಪಿರಲಿಲ್ಲ. ಈ ವಿಷಯ ವನ್ನು ಕಾಮಾಕ್ಷಿಯೇ ಭಟ್ಟನಿಗೆ ಹೇಳಿದಳು.

"ನಿನಗ್ಯಾರು ಹೇಳಿದ್ರು ಗಂಡುಗಳನ್ನು ನೋಡೋಕೆ?" ಭಟ್ಟ ಗುಡುಗಿದ.

"ಇನ್ನೇನು ಹಾಗೇ, ಬೊಂಬೆ ತರಹ ಮನೇಲಿಟ್ಕೊಂಡಿರ್ತೀಯಾ? ಈಗಾಗ್ಲೇ ಆ ಮಗೀನ ಮುಖದಲ್ಲಿ ಕಳೆಯೇ ಇಲ್ಲ. ಸತ್ತ ಹೆಣದಂತಿದಾಳೆ. ಅವರಿಂದ ಇವ್ರಿಗೆ ಮಾತು ಹರಡುವ ಮೊದ್ಲು ಮದ್ವೆ ಮಾಡು.... ಇಲ್ದಿದ್ರೆ ನಿಂಗೇ ಭಾರವಾಗಿ ರ್ತಾಳೆ..."

"ನನ್ನ ಮಗಳು ನನಗೆ ಭಾರವಲ್ಲ. ಅವಳ ಪಿ.ಯು.ಸಿ. ಪರೀಕ್ಷೆ ಸಹ ಮುಗಿದಿಲ್ಲ. ಮದುವೆಗೆ ಅವಾಂತರಪಟ್ಟರೆ ಎಂಥೋರ್ಗೂ ಅನುಮಾನ ಬರುತ್ತೆ. ಅಲ್ಲದೇ ಚಿನ್ಮಯಿಯ ಮನಸ್ಸು ಸರಿಯಿಲ್ಲ..... ಇಂಥ ಸಮಯದಲ್ಲಿ ಮದ್ವೆ ಮಾಡಿದ್ರೆ ಅವ್ಳೂ ಸುಖವಾಗಿರುಲ್ಲ. ಅವಳ ಗಂಡನೂ ಸುಖವಾಗಿರುಲ್ಲ."

"ಗಂಡ – ಹೆಂಡ್ತಿ, ಸಂಸಾರ ಸುಖ ಎಲ್ಲಾ ನಿನ್ನಿಂದ್ಲೇ ಕಲೀಬೇಕೋ ಭಟ್ಟ.... ಪ್ರೇಮಕ್ಕ ಎಷ್ಟು ಸುಖವಾಗಿದ್ರು ಅಂತ ನಂಗೂ ಗೊತ್ತು." ಭಟ್ಟ ಮಾತಾಡಲಿಲ್ಲ. ಕೆಟ್ಟದಾಗಿ ಅವಳನ್ನು ನೋಡಿದ.

ಚಿನ್ಮಯಿಯ ಭವಿಷ್ಯದ ಬಗ್ಗೆ ಅವನಿಗೆ ಆತಂಕವಾಗಿತ್ತು. ಈ ವಿಷಯಗಳನ್ನು ಮುಚ್ಚಿಟ್ಟು ಮದುವೆ ಮಾಡಿದರೂ, ಮುಂದೆ ಒಂದಲ್ಲ ಒಂದಿನ ಅವರುಗಳಿಗೆ ತಿಳಿದರೆ, ಆಕ್ಷೇಪಣೆ ಮಾಡುವುದು ಖಂಡಿತಾ...... ಅಥವಾ ಅವಳನ್ನು ವಾಪಸ್ಸು ಕಳಿಸಿಬಿಟ್ಟರೇ..... ಆಗ ಮನೆಯ ಮರ್ಯಾದೆ ಮತ್ತೂ ಹೋಗುತ್ತದೆ ಎಂದು ಬಲ್ಲ. ಆದರೆ ಏನು ಮಾಡುವುದೆಂದು ಯೋಚಿಸಿ ಒಂದು ನಿರ್ಧಾರಕ್ಕೆ ಬಂದ. ತನ್ನ ಸ್ವಾಭಿಮಾನ ಬದಿಗಿಟ್ಟು ಕಿಶೋರನಿಗೆ ಹೇಳಿ ಕಳಿಸಿದ. ಕಿಶೋರ ಮನೆಯಲ್ಲಿರಲಿಲ್ಲ. ಕಾಮಾಕ್ಷಿಯೇ ಬಂದಳು. ಭಟ್ಟನಿಗೆ ಅವಳೊಡನೆ ಮಾತು ಬೇಡವಾಗಿತ್ತು. ಆದರೂ ಮಾತಾಡಿದ –

"ಪ್ರೇಮಂಗೆ ತೀರಾ ಹುಶಾರಿಲ್ಲ. ಹಾಸಿಗೆ ಹಿಡಿದು ಮಲಗ್ಬಿಟ್ಟಿದಾಳೆ. ಶಾರದಮ್ಮ ಮಗಳ ಮನೆಗೆ ಹೋಗಿದಾರೆ. ನೀನು ಅವಳ ಬಳಿ ಕುಳ್ತಿರು. ನಾನು ಸ್ವಲ್ಪ ಹೊರಗೆ ಹೋಗ್ಬರ್ತೀನಿ. ಮುಖ್ಯವಾದ ಕೆಲಸವಿದೆ." ಎಂತಂದ.

"ಒಂದು ತಿಂಗಳ್ನಿಂದ ಪ್ರೇಮಕ್ಕ ಕೊರಗಿ ಕೊರಗಿ ಕೃಶವಾಗಿದಾಳೆ. ಅವಳಿಗೆ ಡಾಕ್ಟರ್ ಕೊಡೋ ಮದ್ದು ಬೇಕಿಲ್ಲ. ನಿನಗೆ ಅಷ್ಟು ತಿಳಿಯಲ್ವಾ?"

"ಈಗ ನಾನು ಇನ್ನೇನ್ಮಾಡೋಕಾಗುತ್ತೆ? ದಿನ ಕಳೆದಂತೆ ಸರಿ ಹೋಗ್ತಾಳೆ."

"ಏನೂ ಸರಿ ಹೋಗುಲ್ಲವೋ ಭಟ್ಟ. ಮಗಳ ಮುಖ ನೋಡ್ದಾಗ್ಲೆಲ್ಲಾ

ನಡೆದ ಅನಾಹುತ ನೆನಪಿಗೆ ಬರುತ್ತೆ..... ನಾನು ಹೇಳಿದ್ದು ನಿನಗೆ ಪಥ್ಯವಾಗಲಿಲ್ಲ. ರೂಪ ಒಂದಿದ್ದರೆ ಎಂತೆಂತ ಅವಗುಣಗಳೆಲ್ಲ ಮುಚ್ಚಿ ಹೋಗುತ್ತೆ. ನಿನ್ನ ಮಗಳು ರತಿ ಇದ್ದಾಗಿದಾಳೆ. ಆದಷ್ಟು ಬೇಗ ಯಾರ್‍ಗಾದ್ರೂ ಕಟ್ಟಿ ಹಾಕಿದ್ರೆ ಆಯ್ತಪ್ಪಾ."

"ನಿನ್ನ ಈ ಮಾತುಗಳೇ ನನಗೆ ಸರಿ ಹೋಗುಲ್ಲ. ನಾನು ಸುಳ್ಳು ಸಾಕ್ಷ್ಯಗಳನ್ನು ಸೃಷ್ಟಿಸಿ, ವಾದಮಾಡಿ ಕೇಸುಗಳನ್ನು ಗೆಲ್ಲಲು ಪ್ರಯತ್ನಿಸಿದರೂ, ಸತ್ಯಕ್ಕೇ ಜಯ ಎನ್ನುವ ಮಾತನ್ನು ನಾನು ಮರೆತಿಲ್ಲ. ಈಗ ನಿಜವನ್ನು ಮರೆಮಾಚಿ ಮದ್ವೆ ಮಾಡಿದರೂ, ಸತ್ಯ ತಿಳಿದಾಗ ನನ್ನ ತಲೆಯನ್ನು ತಗ್ಗಿಸಬೇಕಾಗುತ್ತೆ. ಇದು ನನಗೆ ಒಗ್ಗದ ವಿಷಯ."

"ವಿದ್ಯಾ ಕೂಡ ಏನೇನೋ ಫಜೀತಿಗಳನ್ನು ಮಾಡ್ಕೊಂಡಿದ್ದಲ್ಲ. ಆಗ ನೀನೇನು ಅವಳ ಗಂಡನ ಮನೆಯೋರ್‍ಗೆ ಈ ವಿಷಯಗಳನ್ನು ತಿಳಿಸ್ಲಿಲ್ಲ. ಮುಚ್ಚಿಡ ಲಿಲ್ವಾ?"

"ಆದರೆ ಆಗ ವಿಷಯ ಇಷ್ಟು ಮುಂದುವರಿದಿರಲಿಲ್ಲ. ಅಲ್ಲದೇ ಆಗ ನೀನೇ ನನಗೆ ಸಹಾಯ ಮಾಡಿದ್ದೆ..... ಆದರೆ ನೀನೂ ಒಂದು ವಿಷಯವನ್ನು ನನ್ನಿಂದ ಮುಚ್ಚಿಟ್ಟೆ. ಈಗ ಆ ವಿಷಯ ದಿನೇಶನಿಗೆ ತಿಳಿದರೆ, ವಿದ್ಯಾಳಿಗೂ ಅವಳ ಗಂಡನಿಗೂ ವಿರಸ ಉಂಟಾಗಬಹುದು.... ಆದರೆ ನೀನ್ಯಾಕೆ ಹೀಗೆ ಮಾಡಿದ್ಯೋ ನನಗೆ ತಿಳೀ ಲಿಲ್ಲ....."

"ಏನಪ್ಪಾ ಅದು, ನನಗೇ ಗೊತ್ತಿಲ್ಲದ ವಿಷಯ, ಇದ್ದ ವಿಷಯಗಳನ್ನೆಲ್ಲ ಇದ್ದ ಹಾಗೇ ತಿಳಿಸಿ, ನನ್ನ ಮಗನ ಮೇಲೆ ಕಣ್ಣಿಟ್ಟು ನಿನಗೆ ಸಹಾಯ ಮಾಡ್ದೆ..... ಆದ್ರೂ ನೀನು ಆಕ್ಷೇಪಣೆ ಮಾಡೋದು ತಪ್ಪಲಿಲ್ಲ."

"ಅದೇ ನಂಗೆ ಅರ್ಥವಾಗ್ತಿಲ್ಲ. ಯಾಕೆ ಹೀಗ್ಮಾಡ್ದೆ?"

"ಏನೂಂತ ಹೇಳ್ಬಾರ್ದಾ.....?"

"ಪತ್ರಗಳು.....! ನನ್ನ ಮಗಳು ವಿವೇಕವಿಲ್ಲದೇ ನಿನ್ನ ಮಗನಿಗೆ ಬರೆದ ಪತ್ರಗಳು..... ಅದನ್ಯಾಕೆ ಮುಚ್ಚಿಟ್ಕೊಂಡಿದೀಯ......?"

"ಪತ್ರಾನಾ? ನನ್ಹತ್ರ ಯಾವ್ದೂ ಇಲ್ಲವಲ್ಲ. ಇದನ್ನ ನಿಂಗ್ಯಾರು ಹೇಳಿದ್ರು?"

"ನಿನ್ನ ಮಗನೇ...... ಅವನ ಬಳಿ, ಅವಳು ಬರೆದ ಕಾಗದಗಳು ಇವೆಯಂತೆ..... ಅವನ್ನಿಟ್ಕೊಂಡು ಅವನು ಬೆದರಿಸ್ತಿದಾನೆ."

"ಇಲ್ಲ ಭಟ್ಟ. ಅವನ ಹೆಸ್ರಿಗೆ ಯಾವ ಪತ್ರವೂ ಬಂದಿರಲಿಲ್ಲ. ಬಂದಿದ್ರೆ ನಂಗೆ ತಿಳಿತಿರ್‍ಲಿಲ್ವಾ.....? ನಿಜ ಏನೂಂತ ತಿಳ್ಕೊಂಡು ನಿನಗೆ ಖಂಡಿತಾ ಹೇಳ್ತೀನಿ..... ನನ್ನನ್ನು ನಂಬು."

"ನಿನ್ನ ಮೇಲೆ ಸ್ವಲ್ಪ ನಂಬಿಕೆ ಇದೆ. ಆ ನಂಬ್ಕೇನ ಉಳಿಸ್ಕೋ....."

* * *

ಮನೆಗೆ ಬಂದ ಕಾಮಾಕ್ಷಿ ಮಗನ ಬರುವಿಗಾಗಿ ಕಾಯುತ್ತಾ ಕುಳಿತಳು. ಬರ್ತಿದ್ದ ಹಾಗೇ ಮಾತಿಗೆಳೆದಳು. – "ಭಟ್ಟ ಈಗ್ಲೂ ನಿನ್ಮೇಲೆ ವಿಷ ಕಾರ್ತಿದಾನೆ. ನಿಜ ಏನೂಂತ ಹೇಳ್ದಿದ್ರೆ ಸಿಗಿದು ಹಾಕಿ ಬಿಡ್ತೀನಿ..... ವಿದ್ಯಾ ಬರೆದಿದ್ಲಂತಲ್ಲ, ಆ ಪತ್ರಗಳನ್ನು ನಂಗೆ ಕೊಡು."

"ನನ್ಹತ್ರ ಇದ್ರೆ ತಾನೇ ನಿಂಗೆ ಕೊಡೋಕೆ?" ಅವನು ನಕ್ಕ.

"ಮತ್ಯಾಕೆ ಹಾಗಂತ ಭಟ್ಟನ್ಹತ್ರ ಹೇಳ್ದೆ....."

"ನಾನೇನು ಸುಳ್ಳು ಹೇಳಿಲ್ಲ. ಪತ್ರಗಳು ಇರೋದು ನಿಜ. ಹಾಗಂತ ಚಿನ್ಮಯೀನೇ ಹೇಳಿದಾಳೆ...... ಅವಳ್ಹತ್ರ ಇದೆಯಂತೆ....."

"ಚಿನ್ಮಯಿ ನಿನಗ್ಯಾಕೆ ಇದನ್ನೆಲ್ಲ ಹೇಳಿದ್ಲು....."

"ಅವಳ್ಗೂ ವಿದ್ಯಾಳ ಮೇಲೆ ಅಸಹನೆ. ತಾನಾಗಿಯೇ ಬಂದು ನನ್ನ ಹತ್ರ ಇದನ್ನೆಲ್ಲ ಹೇಳಿ, ನಿಂದೇನೂ ತಪ್ಪಿಲ್ಲ. ಅಕ್ಕಂದೇ ತಪ್ಪು ಅಂತೆಲ್ಲ ಹೇಳಿದಳು....."

"ಹೌದು, ತಪ್ಪೆಲ್ಲಾ ವಿದ್ಯಂದೇ...... ಅದಕ್ಕೇ ತಾನೇ ನಾನೇ ಅದನ್ನು ಸರಿ ಮಾಡಿದ್ದು.... ನೀನ್ಯಾಕೆ ಇದನ್ನು ನನಗೆ ಮೊದ್ಲೇ ಹೇಳ್ಲಿಲ್ಲ."

"ನೀನೂ ಆ ಭಟ್ಟನ ಕಡೆ ಸೇರ್ಕೊಂಡು ನನ್ನನ್ನೇ ಜೈಲ್‌ಗೆ ಕಳಿಸ್ದೆ. ನನ್ಗೂ ನಿನ್ಮೇಲೆ ಕೋಪ ಇತ್ತು. ಹೇಳಿದ್ರೆ ನೀನೇನ್ಮಾಡ್ತಿದ್ದೆ.....?"

"ಚಿನ್ಮಯೀನ ಕರೆದು ತಿಳುವಳಿಕೆ ಹೇಳ್ತಿದ್ದೆ. ಭಟ್ಟನ ಮಕ್ಳು ಅವನ್ಗೇ ಬತ್ತಿ ಕೊಡ್ತಿದಾರಲ್ಲ."

"ಬಿಡಮ್ಮ ನಮಗ್ಯಾಕೆ? ಇನ್ನೂ ಭಟ್ಟನ ಗರ್ವ ಇಳಿದಿಲ್ವಾ....?"

"ಸ್ವಲ್ಪ ಅಲುಗಾಡಿ ಹೋಗಿದಾನೆ..... ಅವ್ನು ನಿಂಗೆ ಹೇಳಿ ಕಳಿಸಿದ್ದ. ಏನೂಂತ ಕೇಳೋಕೆ ನಾನು ಹೋಗಿದ್ದೆ. ಪತ್ರದ ವಿಷಯ ಹೇಳ್ದ. ನಿನ್ನನ್ನ ಕೇಳಿ ಹೇಳ್ತೀನೀಂತ ಅಂದೆ. ನಿಜ ಹೇಳು..... ಸುಳ್ಳು ಹೇಳ್ತಿಲ್ಲ ತಾನೇ....."

"ಇಲ್ಲಮ್ಮ..... ನಿನ್ನಾಣೆ..... ನನ್ಹತ್ರ ಆ ಪತ್ರಗಳು ಇಲ್ಲ..... ಈಗ ಭಟ್ಟರಿಗೆ ನನ್ನ ಮೇಲೆ ಭಯ ಜಾಸ್ತಿ. ದುಡ್ಡು ಕೊಟ್ಟು ಬಾಯ್ಮುಚ್ಚುಸುಕ್ಕೆ ನೋಡಿದ್ರು. ನಾನು ಒಪ್ಪಲಿಲ್ಲ. ಅದಕ್ಕೇ ನಿನ್ಹತ್ರ ಹೇಳಿರೋದು."

"ಸರಿ... ಹಾಗಾದ್ರೇ ಈಗ್ಲೇ ಹೋಗಿ ಹೇಳು. ನನ್ಹತ್ರ ಆ ಪತ್ರಗಳು ಇಲ್ಲ ಅಂತ."

"ನಾನಾಗೇ ನಾನ್ಯಾಕೆ ಹೋಗ್ಲೀ.....? ನೀನೂ ಹೋಗ್ಬೇಡ. ಬೇಕಾದ್ರೆ ಹೇಳಿ ಕಳಿಸ್ಲಿ....."

"ಬೇಡ್ವೋ ಕಿಶೋರ.... ಹೀಗೆಲ್ಲ ಆಡಬೇಡ್ವೋ..... ಭಟ್ಟ ಎಷ್ಟಾಗ್ಲೀ ನಿನ್ಗಿಂತ ದೊಡ್ಡವನು..... ಅವನ ವಿರೋಧ ಯಾಕೆ ಕಟ್ಕೋತೀಯ?"

"ಅವರೇ ನನ್ನ ವಿರೋಧ ನಿಂತಿರೋದು..... ಅವರ ಹೆಣ್ಮಕ್ಳು ಮಾಡಿದ

ತಪ್ಪಿಗೆ ನಾನು ಹೊಣೇನಾ? ನೀನೇನೋ ಭಟ್ಟನ ನಿರಾಕರಿಸಿ, ದೊಡ್ಡ ಕೆಲಸ ಮಾಡಿದೆ ಅನ್ನೋ ತರಹ ಮಾತಾಡ್ಬೇಡ. ನೀನು ಬಾಯಿ ಹಾಕ್ದೇ ಇದ್ದಿದ್ರೆ, ವಿದ್ಯಾ ನನ್ನ ಪತ್ನಿಯಾಗಿರುತ್ತಿದ್ದಳು..... ಅದನ್ನು ತಪ್ಪಿಸಿದವಳು ನೀನೇ..."

"ನಿನ್ನ ಒಳ್ಳೇದಕ್ಕೆ ಕಣೋ ನಾನು ಹಾಗೆ ಮಾಡಿದ್ದು...."

"ಅದ್ರಿಂದ ನಂಗೆ ಏನು ಒಳ್ಳೇದಾಯ್ತು....? ವಿದ್ಯಾಭ್ಯಾಸ ನಿಲ್ತು.... ಕೆಲ್ಸ ಇಲ್ದೇ ಅಲೆದೆ..... ಇದೆಲ್ಲ ನಿನ್ನಿಂದ್ಲೇ ಆದದ್ದು. ಅಷ್ಟಾದ್ರೂ ಮತ್ತು ಮತ್ತೂ ಭಟ್ಟನ ಎದುರಿಗೆ ಹೋಗಿ ನಿಂತು, ಅವರ ಮಾತುಗಳನ್ನು ಕೇಳ್ಕೊಂಡು ಬರ್ತೀಯಲ್ಲ ನಿಂಗೆ ನಾಚ್ಕೇನೇ ಇಲ್ಲ." ಹಾಗೆ ತಾಯಿಯ ಎದುರಿಗೆ ಕೂಗಾಡಿದವನು ಸೀದಾ ಭಟ್ಟನ ಮನೆಗೆ ಬಂದ.

ಭಟ್ಟ ಎದುರಿಗಿದ್ದ ಕುರ್ಚಿಯನ್ನು ತೋರಿಸಿ 'ಕೂತ್ಕೋ' ಅಂತ ಹೇಳಿದಾಗ ಅವನಿಗೆ ಅಚ್ಚರಿಯಾಗಿತ್ತು. "ಪರ್ವಾಗಿಲ್ಲ ಸಾರ್....." ಎಂದ. ಕೂತ್ಕೊಳ್ಳಲಿಲ್ಲ.

"ಪತ್ರಗಳನ್ನು ತಂದಿದೀಯ?"

"ಇಲ್ಲ. ನನ್ನ ಹತ್ರ ಯಾವ ಪತ್ರಗಳೂ ಇಲ್ಲ. ಪ್ರಶಾಂತನ ಬಳಿ ಇವೆ....."

"ಅವನ್ಗೇಕೆ ಕೊಟ್ಟೆ..... ನನ್ನಗೇ ಕೊಡ್ಬೇಕಾಗಿತ್ತು...."

"ಅವ್ನೂ ನಿಮ್ಮನೆಯೋನೇ ಅಲ್ವಾ ಸಾರ್....."

'ಹೌದು, ಎಲ್ರೂ ನನ್ನ ಮಕ್ಕಳೇ' ಅಂತ ಮನದಲ್ಲೇ ಬೈದುಕೊಂಡ. "ಯಾವ್ದೋ ಹೋಟೆಲ್ನಲ್ಲಿ ಮ್ಯಾನೇಜರ್ ಆಗಿದೀಯಂತೆ... ಓದನ್ನು ಯಾಕೆ ಬಿಟ್ಬಿಟ್ಟೆ?"

"ನಿಮ್ಮ ದಯದಿಂದ ಸಾರ್..... ಕಾಲೇಜ್ನಿಂದ ತೆಗೆದು ಹಾಕಿದರು....." ಅವನ ವ್ಯಂಗ್ಯ ಭಟ್ಟನಿಗೆ ಅರ್ಥವಾಗಿತ್ತು.

"ನಾನು ಪ್ರಿನ್ಸಿಪಾಲ್‌ಗೆ ಪತ್ರ ಬರೆದ್ಕೊಡ್ತೀನಿ.... ಮತ್ತೆ ಕಾಲೇಜ್ಗೆ ಸೇರ್ಕೋ.... ಓದುವಾಗ ಚೆನ್ನಾಗಿ ಓದಿ ಬಿಡ್ಬೇಕು."

"ನಿಮ್ಮ ಪ್ರಶಾಂತ, ವಿದ್ಯಾ ಎಲ್ರೂ ಓದನ್ನು ಅರ್ಧಕ್ಕೇ ನಿಲ್ಲಿಸಿ ಬಿಟ್ರಲ್ಲ."

"ಅದೆಲ್ಲ ಅವರವರೇ ಒಡ್ಡಿಕೊಂಡ ಅಡ್ಡಿಗಳು..... ನಿನಗೆ ನಮ್ಮಿಂದ ತೊಂದರೆ ಯಾಯ್ತು. ಅದನ್ನು ಸರಿ ಮಾಡ್ತೀನಿ.... ನಿನಗೆ ಕಾಲೇಜ್ನಲ್ಲಿ ಮತ್ತೆ ಅಡ್ಮಿಷನ್ ಕೊಡುವಂತೆ ಮಾಡ್ತೀನಿ..... ನೀನು ಓದನ್ನು ಮುಂದುವರಿಸಲಿ ಅಂತ ನನ್ನ ಆಸೆ...."

"ಆಯ್ತು. ಪ್ರಿನ್ಸಿಪಾಲರಿಗೆ ಪತ್ರ ಬರೆದುಕೊಡಿ.... ಹಾಗೇ ನಾನು ಹೇಳಿದ್ನಲ್ಲ. ಆ ಕ್ಷಮಾಪಣಾ ಪತ್ರ...... ಅದರ ವಿಷಯ ಏನು ಮಾಡಿದ್ರಿ?"

"ಮತ್ತೆ ಕ್ಷಮಾಪಣಾ ಪತ್ರ ಯಾಕೆ...? ನಿನ್ನ ಜೀವನ ಸುಧಾರಿಸಿದರೆ ಸಾಕಲ್ಲ...."

"ನನ್ನ ಜೀವನದ ಸುಧಾರಣೆ ಬಗ್ಗೆ ನಿಮ್ಮ ಮನಸ್ನಲ್ಲಿ ಆಲೋಚನೆ ಬಂತಲ್ಲ. ಅಷ್ಟು ಸಾಕು..... ಆದರೆ ಇದನ್ನೆಲ್ಲ ನೀವು ನಿಮ್ಮ ಸ್ವಾರ್ಥಕ್ಕೆ ಮಾಡ್ತಿದೀರಿ ಅಂತ ಅನ್ನಿಸ್ತಿದೆ. ಹೌದಾ?"

"ಇರಬಹುದು..... ನೀನಿನ್ನೂ ಚಿಕ್ಕವನು..... ನನ್ನಿಂದಾಗಿ ನಿನ್ನ ಜೀವನ ಹಾಳಾಗಬಾರದು. ಕಾಮಾಕ್ಷಿ ನಮಗೆ ಬೇಕಾದವಳು..... ಅವಳು ಬಾಯ್ಬಿಟ್ಟು ಏನನ್ನೂ ಹೇಳದಿದ್ರೂ, ಅವಳ ಮನಸ್ನಲ್ಲಿ ಆ ಕೊರಗಿದೆ ಅಂತ ನನಗೆ ಗೊತ್ತು....."

"ನನಗೂ ಅದೇ ಆಶ್ಚರ್ಯ.....ಅಷ್ಟು ಕೊರಗಿದ್ರೂ ಅಮ್ಮ ನಗುನಗ್ತಾ ನಿಮ್ಹತ್ರ ಮಾತಾಡ್ತಾಳೆ..... ಅವಳಿಗೆ ಅನ್ಯಾಯವಾಗಲಿಲ್ವಾ ಸಾರ್....."

"ನೀನು ಓದಿ ದೊಡ್ಡ ಕೆಲಸಕ್ಕೆ ಸೇರಿಕೊಂಡರೆ, ನಿಮ್ಮಮ್ಮನಿಗೆ ಖಂಡಿತಾ ಸಂತೋಷವಾಗುತ್ತೆ. ಎಲ್ಲಾ ಮರೆತು ಬಿಡ್ತಾಳೆ. ನೀನು ಆಮೇಲೆ ಬಾ..... ನಾನು ಪ್ರಿನ್ಸಪಾಲರಿಗೆ ಪತ್ರವನ್ನು ಬರೆದಿಟ್ಟಿರುತ್ತೀನಿ.... ನಾಳೇನೇ ಹೋಗಿ ಕಾಲೇಜ್ಗೆ ಸೇರ್ಕೋ....."

ಭಟ್ಟನ ಸ್ವಾರ್ಥ ಏನಿರಬಹುದೆಂದು ಅರ್ಥವಾಗದಿದ್ದರೂ, ಈಗ ಭಟ್ಟ ಹೇಳಿದಂತೆ ಕೇಳಿದರೆ ತನಗೇ ಒಳ್ಳೆಯದು. ಭಟ್ಟನ ಮನಸ್ಸನ್ನು ಒಲಿಸಿಕೊಳ್ಳ ಬಹುದೆಂದುಕೊಂಡು ಹೊರಬಂದು, ಪ್ರಶಾಂತನ ಮನೆಗೆ ಬಂದ. ಅಲ್ಲಿ ಚಿನ್ಮಯಿ ಕುಳಿತಿದ್ದಳು. ಅವಳನ್ನು ಬಾಲ್ಕನಿಗೆ ಕರೆದೊಯ್ದು, ಅವಳ ಬಳಿ ನಡೆದ ಮಾತುಕತೆ ಗಳನ್ನೆಲ್ಲಾ ಹೇಳಿದ.

"ಅಂತೂ ನಿಮ್ಮಪ್ಪ ನಮ್ಮ ದಾರಿಗೆ ಬರ್ತಿರುವ ಹಾಗೆ ಕಾಣ್ತಿದೆ." ನಕ್ಕ. ಆದರೆ ಚಿನ್ಮಯಿ ನಗಲಿಲ್ಲ.

"ನಮ್ಮಿಬ್ಬರ ಮದುವೆ ನೆರವೇರುವವರ್ರೂ್ಗ ನನಗೆ ಅವರ್ಮೇಲೆ ನಂಬ್ಕೆ ಇಲ್ಲ ಕಿಶೋರ..... ಅಪ್ಪನಿಗೆ ಈಗಲೂ ನನ್ನ ಮೇಲಿನ ಸಿಟ್ಟು ಕಡಿಮೆ ಆಗಿಲ್ಲ."

"ಅವರ ಸಿಟ್ಟು ಎಷ್ಟಿದ್ದರೇನು? ನನಗಂತೂ ಒಂಥರಾ ಮಜ ಸಿಕ್ತಿದೆ." ಎನ್ನುತ್ತಾ ಅವಳನ್ನು ತನ್ನ ಎದೆಗೆ ಒರಗಿಸಿಕೊಂಡ.

"ಬೇಡ ಕಿಶೋರ್.... ಯಾರಾದ್ರೂ ನೋಡಿದ್ರೆ...." ಎನ್ನುತ್ತಾ ಹಿಂದೆ ಸರಿದಳು.

"ನನಗೆ ನಿನ್ನನ್ನು ಬಿಟ್ಟಿರೋದು ಕಷ್ಟವಾಗ್ತಿದೆ ಚಿನ್ಮಯೀ.... ಮಹಡಿ ಮೇಲಿನ ಹಿಂದಿನ ಬಾಗಿಲನ್ನು ತೆರೆದಿಡು.... ನಾನು ರಾತ್ರಿ ಬರ್ತೀನಿ....."

"ಬೇಡಪ್ಪಾ..... ನಮ್ಮಿಬ್ಬರ ಮದ್ವೆ ನೆರವೇರುವವರ್ರೂ್ಗ..... ನಾವಿಬ್ರೂ ಮಾತು ಕೂಡ ಆಡ್ಬಾರ್ದು ಅಂತ ಪ್ರಶಾಂತ ಹೇಳಿದಾನೆ..... ಅತ್ಗೆ ಅವನ್ಗೆ ಹೇಳಿದ್ರೆ ಅಷ್ಟೇ....."

"ಏಯ್ ಬಿಡು..... ಪ್ರಶಾಂತಂಗೆ ಯಾಕೆ ಹೆದರ್ತೀಯಾ? ಅವನೂ ಅಪ್ಪಂಗೆ ಹೇಳದೇನೇ ಮದ್ವೆ ಆದೋನು.... ಅಲ್ಲೇ ಶಾಸ್ತ್ರಿಗಳ ಮನೇಲೇ ಇದ್ದೋನು.... ನಮ್ಮ ಹಾಗೇ ಅವರೂ ಪ್ರೀತಿ - ಗೀತಿ ಮಾಡಿರಬಹುದು ಅಲ್ವಾ?"

"ನಂಗೊತ್ತಿಲ್ಲ ಪ್ರಶಾಂತ ಮಾತ್ರ ಅಪ್ಪನ ಥರವೇ ಮಾತಾಡ್ತಾನೆ. ಆದ್ರೆ ಅವನೀಗ ನಮಗೆ ಸಹಾಯಕನಾಗಿದಾನೆ. ಅವನು ಹೇಳ್ದಾಗೇ ಕೇಳ್ಬೇಕಲ್ವಾ....?"

"ಸರಿ..... ನಡೀ....." ಎನ್ನುತ್ತಾ ಅವಳ ಸೊಂಟವನ್ನು ಬಳಸಿ, ಅವಳ

ನ್ನೆಗೆ ಮುತ್ತಿಟ್ಟ. ಇಬ್ಬರೂ ಕೈ ಕೈ ಹಿಡಿದು ಮೆಟ್ಟಲಿಳಿದು ಬಂದರು.....

"ನಾನೀಗ ನಿಮ್ಮಪ್ಪನ ಮನೆಗೆ ಹೋಗ್ತಿದೀನಿ. ನೀನು ಈಗ್ಲೇ ಅಲ್ಲಿಗೆ ರ್ಬೇಡ." ಎಂದು ಹೇಳಿ ಭಟ್ಟನ ಮನೆಗೆ ಬಂದ.

ಭಟ್ಟ ಅವನನ್ನು ನೋಡಿ ಮುಖ ಸಿಂಡರಿಸಲೂ ಇಲ್ಲ; ಮುಗುಳ್ನಗಲೂ ಇಲ್ಲ. ತಾನು ತನ್ನ ಪರಿಚಯದ ಪ್ರಿನ್ಸಿಪಾಲರಿಗೆ ಬರೆದಿಟ್ಟಿದ್ದ ಪತ್ರವನ್ನು ತೋರಿದ.

"ಈ ಕಾಲೇಜಿನ ಪ್ರಿನ್ಸಪಾಲರು ನನಗೆ ಪರಿಚಯದವರು. ಅವರಿಗೆ ಈ ಪತ್ರವನ್ನು ಕೊಡು. ಹಾಗೇ ಅವರೇನಂದ್ರು ಅಂತ ನನಗೆ ಬಂದು ತಿಳಿಸು."

"ನಾಳೇನೇ ಅಡ್ಮಿಷನ್ ಮಾಡ್ಕೋತಾರಾ?"

"ಹೂಂ..... ಅಂತ ಕಾಣುತ್ತೆ. ಅದಕ್ಕೇ ಹೇಳಿದ್ದು. ನಾಳೆ ಬಂದು ಹೇಳು ಅಂತ......"

"ಆಗ್ಲಿ ಸಾರ್, ನೀವು ದೊಡ್ಡ ಮನಸ್ಸು ಮಾಡಿ ನನಗೆ ಉಪಕಾರ ಮಾಡ್ತಿದೀರ.... ನಿಮ್ಮ ಈ ಉಪಕಾರವನ್ನು ಹೇಗೆ ತೀರಿಸ್ಬೇಕೋ ತಿಳೀತಿಲ್ಲ...."

"ಇದರಲ್ಲಿ ಉಪಕಾರದ ಪ್ರಶ್ನೆ ಏನಿದೆ. ನಿನಗೆ ಅನುಕೂಲ ಮಾಡಿ ಕೊಡುತ್ತಿದ್ದೇನೆ. ಇದು ನನ್ನ ಕರ್ತವ್ಯ." ಎಂದು ಮಾತನ್ನು ಮುಗಿಸುವವನಂತೆ ಎದ್ದ.

"ಒಂದ್ನಿಮಿಷ ಸಾರ್.... ನೀವು ತಪ್ಪು ತಿಳಿದುಕೊಳ್ಳದಿದ್ದರೆ...."

"ಇನ್ನೇನಾಗ್ಬೇಕು.....?"

"ನಾನೊಂದು ತೀರ್ಮಾನಕ್ಕೆ ಬಂದಿದೀನಿ. ನಿಮ್ಮ ಋಣವನ್ನು ತೀರಿಸಲು ನನಗಿರುವ ಉಪಾಯ ಅದೊಂದೇ....." ಏನದು ಎನ್ನುವಂತೆ ಮುಖವನ್ನು ನೋಡಿದ.

"ನಿಮಗೆ ಒಪ್ಗೆ ಇದ್ರೆ ನಾನು ಚಿನ್ಮಯೀನ ಮದ್ವೆ ಆಗ್ತೀನಿ." ಭಟ್ಟ ಈ ಮಾತನ್ನು ಅವನಿಂದ ನಿರೀಕ್ಷಿಸಿರಲಿಲ್ಲ. ಅವನ ಮನದಲ್ಲಿರುವುದೇ ಬೇರೆ..... ಆದರೂ ಭಾವನೆಗಳನ್ನು ಹೊರಗೆಡವಲಿಲ್ಲ.

"ಯಾಕೆ ಈ ತೀರ್ಮಾನವನ್ನು ತಗೊಂಡಿದೀಯ ಅಂತ ಕೇಳಬಹುದೋ?"

"ಯಾಕೋ ಹಾಗನ್ನಿಸ್ತು. ಬಲವಂತ ಏನಿಲ್ಲ. ಚಿನ್ಮಯೀನೂ ಒಂದ್ಮಾತು ಕೇಳಿ ಅವಳಿಗೆ ಒಪ್ಪಿಗೆಯಾಗಿ, ನಾನು ನಿಮ್ಮ ಅಳಿಯನಾಗಲು ಅರ್ಹ ಅಂತ ಅನ್ನಿಸಿದರೆ..... ನಾನು ಚಿನ್ಮಯಿಗೆ ಬಾಳನ್ನು ಕೊಡಲು ಸಿದ್ಧನಾಗಿದೇನೆ......" ಭಟ್ಟ ಅವನ ಮೇಲೆ ರೇಗಲಿಲ್ಲ. ಆದರೆ ಒಳಗೊಳಗೇ ಮನಸ್ಸು ಕದಡಿ ಹೋಗಿತ್ತು. ಈ ಸ್ಥಿತಿಗೆ ಕಾರಣಳಾದ ಚಿನ್ಮಯಿಯ ಮೇಲೆ ಕೋಪ ಉಕ್ಕಿತ್ತು.

"ಸದ್ಯಕ್ಕೆ ಯಾವ ಪ್ರಸ್ತಾವವೂ ಬೇಡ. ಮೊದಲು ನಿನ್ನ ವಿದ್ಯಾಭ್ಯಾಸವನ್ನು ಪೂರೈಸಿಕೋ. ಒಳ್ಳೆಯ ಕೆಲಸಕ್ಕೆ ಸೇರ್ಕೋ. ನನ್ನ ಶುಭ ಹಾರೈಕೆಗಳು ಸದಾ ನಿನ್ನ ಮೇಲಿರುತ್ವೆ." ಕಿಶೋರ ಕೆಳಗೆ ಬಾಗಿ, ಭಟ್ಟನ ಪಾದಗಳನ್ನು ಕಣ್ಣಿಗೊತ್ತಿಕೊಂಡ. ಅನಂತರ ಕೈ ಮುಗಿದು ಹೊರಬಂದ. ಕಿಶೋರ ಒಳಗೊಳಗೇ ಖುಶಿಗೊಂಡಿದ್ದ.

ಅವನು ನಿರೀಕ್ಷಿಸಿದುದಕ್ಕಿಂತ ಹೆಚ್ಚಾಗಿ ಭಟ್ಟ ಅವನನ್ನು ಆದರಿಸಿದ್ದ. ಇದರಲ್ಲಿ ಭಟ್ಟನ ಸ್ವಾರ್ಥತೆ ಅಡಗಿದೆ ಎಂದೂ ಬಲ್ಲ.

ಭಟ್ಟ ಚಿಂತಾಮಗ್ನನಾಗಿದ್ದ. ಇದ್ದಕ್ಕಿದ್ದಂತೆ ಕಿಶೋರ ಯಾಕೆ ಈ ಆಸೆಯನ್ನು ವ್ಯಕ್ತಪಡಿಸಿದ? ತನ್ನ ಮನದ ಮೂಲೆಯಲ್ಲಿ ಎಲ್ಲೋ ಮೂಡಿದ ಉಪಾಯ ಕಿಶೋರನಿಗೆ ಹೇಗೆ ತಿಳಿಯಿತು? ಕಿಶೋರ ಮನ ಬಿಚ್ಚಿ ಮಾತನಾಡಿ ಹೇಳಿಕೊಂಡ. ತಾನು ಹೇಳಿಕೊಳ್ಳಲಿಲ್ಲ; ಅಷ್ಟೇ ವ್ಯತ್ಯಾಸ.

'ಎಲಾ ಕಳ್ಳ ಭಟ್ಟನೇ...... ನೀನೇ ರಚಿಸಿದ ನಾಟಕದಲ್ಲಿ, ನೀನಾಗಿಯೇ ನುಸುಳಿ ಬರುತ್ತಿದೀಯೇ. ನಡೀಲಿ ನಡೀಲಿ' ಎಂದು ತನ್ನಲ್ಲೇ ಹೇಳಿಕೊಂಡ. ಆದರೆ ತಾಯಿಯೊಡನೆ ಯಾವ ವಿಷಯವನ್ನೂ ಹೇಳಲಿಲ್ಲ. ಈ ಬಾರಿಯೂ ಅಮ್ಮ ಮದುವೆಗೆ ಅಡ್ಡಿ ಬಂದಾಳೆಂಬ ಅನುಮಾನ ಅವನಿಗೆ. ಮಾರನೆಯ ದಿನ, ಭಟ್ಟ ಸೂಚಿಸಿದ್ದ ಕಾಲೇಜಿಗೆ ಹೋಗಿ, ಪ್ರಿನ್ಸಿಪಾಲರನ್ನು ಕಂಡು, ಪತ್ರವನ್ನು ಕೊಟ್ಟ. ಪ್ರಿನ್ಸಿಪಾಲರು ಪತ್ರವನ್ನು ಓದಿಕೊಂಡು ತಲೆಯಾಡಿಸಿದರು.

"ನೀನು ಇನ್ನು ಹೋಗಬಹುದು. ಅಡ್ಮಿಷನ್‌ಗೆ ಸಂಬಂಧಿಸಿದುದನ್ನೆಲ್ಲ ನಾನು ನೋಡಿಕೊಳ್ತೀನಿ. ಮುಂದಿನವಾರದಿಂದ ಕಾಲೇಜು ಪ್ರಾರಂಭವಾಗುತ್ತದೆ." ಎಂದರು. ಅಲ್ಲಿಂದ ಸೀದಾ ಭಟ್ಟನ ಮನೆಗೆ ಬಂದು ಪ್ರಿನ್ಸಿಪಾಲರು ಹೇಳಿದ್ದನ್ನು ಹೇಳಿ, ಅಲ್ಲಿಂದ ತನ್ನ ಮನೆಗೆ ಬಂದು ಬಿಟ್ಟ. ಬೇಕೆಂತಲೇ ಮತ್ತೆ ಚಿನ್ಮಯಿಯ ಹೆಸರನ್ನು ಎತ್ತಲಿಲ್ಲ.

ಕಿಶೋರನಿಗೆ ಆ ಕಾಲೇಜಿನಲ್ಲಿ ಎರಡನೆಯ ವರ್ಷದ ಬಿ.ಎಸ್ಸಿ. ತರಗತಿಗೆ ಪ್ರವೇಶ ಸಿಕ್ಕಿತ್ತು. ಅಗತ್ಯವಾದ ಫೀಸನ್ನೆಲ್ಲಾ ಭಟ್ಟನೇ ಕಟ್ಟಿದ್ದ. ಪ್ರಿನ್ಸಿಪಾಲರು, ಕಿಶೋರನು ಓದುತ್ತಿದ್ದ ಕಾಲೇಜಿನಿಂದ ಸರ್ಟಿಫಿಕೇಟ್‌ಗಳನ್ನು ತರಿಸಿಕೊಂಡಿದ್ದರು. ಕಿಶೋರ ಎಲ್ಲವನ್ನೂ ಚಿನ್ಮಯಿಗೆ ಹೇಳಿದ. ಅವಳೂ ಮುದಗೊಂಡಿದ್ದಳು.

*   *   *

ಅಧ್ಯಾಯ – ಮೂವತ್ತು

ಚಿನ್ಮಯಿ ಗರ್ಭಿಣಿ

ಚಿನ್ಮಯಿ ಗರ್ಭಿಣಿ ಆಗಿರಬಹುದೆಂಬ ಅನುಮಾನ ಮೊದಲು ಬಂದದ್ದು ಶಾರದಮ್ಮನಿಗೆ. ಅವಳೊಡನೆ ಗುಟ್ಟಾಗಿ ಮಾತಾಡಿದಾಗ ಅವಳ ಅನುಮಾನ ನಿಜವಾಗಿತ್ತು. ಚಿನ್ಮಯಿ ಸಪ್ಪಗಾಗಿದ್ದಳು.

"ನನಗೊಬ್ಬರು ಪರಿಚಯದ ಡಾಕ್ಟರಿದಾರೆ. ಅವರು ಇದಕ್ಕೆ ಯಾರಿಗೂ ತಿಳಿಯದಂತೆ ಔಷಧಿ ಕೊಡುತ್ತಾರೆ. ನಾನು ಕರಕೊಂಡು ಹೋಗ್ತೀನಿ. ಎಲ್ಲಾ ಸರಿ ಹೋಗುತ್ತದೆ. ನೀನೇನೂ ಚಿಂತಿಸಬೇಡ." ಎಂದಳು.

ಆದರೆ ಚಿನ್ಮಯಿ ಇದಕ್ಕೆ ಒಪ್ಪಲಿಲ್ಲ. "ಇಲ್ಲ ಶಾರದಮ್ಮ. ನಂಗೆ ಭಯ ಆಗುತ್ತೆ. ನಾನು ಯಾವ ಔಷಧಿಯನ್ನೂ ತೆಗೆದುಕೊಳ್ಳುವುದಿಲ್ಲ." ಎಂದಳು.

"ಹಾಗಂದ್ರೆ ಹೇಗೆ? ಇದನ್ನು ಜನರ ಕಣ್ಣುಗಳಿಂದ ಮುಚ್ಚಿಡೋಕೆ ಆಗುಲ್ಲ. ಮದ್ವೆ ಆಗಿಲ್ಲದ ಹುಡುಗಿ ತಾಯಿಯಾದ್ರೆ ಜನ ಆಡ್ಕೊಳ್ತಾರೆ.... ಸಮಾಜ ಧಿಕ್ಕರಿಸುತ್ತೆ. ನನ್ನ ಮಾತನ್ನು ಕೇಳು. ನೀನನ್ನೂ ಚಿಕ್ಕವಳು...... ನಿಂಗೆ ತಿಳುವಳಿಕೆ ಸಾಲದು....."

"ಇಲ್ಲ ಶಾರದಮ್ಮ. ನೀವು ಏನೇ ಹೇಳಿ ನಾನು ಒಪ್ಪಲ್ಲ. ಅಪ್ಪನೇ ಬಂದು ಹೇಳಿದ್ರೂ ನಾನು ಒಪ್ಪಲ್ಲ. ನಾನು ಆತ್ಮಹತ್ಯೆ ಮಾಡ್ಕೊಳ್ತೀನಿ ಅಷ್ಟೇ."

ಈಗ ಶಾರದಮ್ಮನಿಗೆ ಪೀಕಲಾಟಕ್ಕೆ ಇಟ್ಟುಕೊಂಡಿತು. ಮೊದಲೇ ನೊಂದಿರುವ ಹೆಣ್ಣು. ಬಲವಂತ ಮಾಡಿದರೆ ಆತ್ಮಹತ್ಯೆ ಮಾಡಿಕೊಳ್ಳಬಹುದು. ಪ್ರೇಮಕ್ಕ ಈ ವಿಷಯದಲ್ಲಿ ನನಗಿಂತಲೂ ಅಸಹಾಯಕರು. ಅವರಿಗೆ ತಿಳಿದರೆ ಅವರ ಜೀವಕ್ಕೇ ಅಪಾಯ ಒದಗಬಹುದು.... ವಿಷಯ ತಿಳಿದಿದ್ದೂ ತನಗೆ ತಿಳಿಸಲಿಲ್ಲವೆಂದು ಯಜಮಾನರು ಬಯ್ಯಬಹುದು ಎಂದುಕೊಂಡು ಭಟ್ಟನೊಡನೆ ಮಾತನಾಡಲೆಂದು ಬಂದಳು.

"ಏನು ಬೇಕಾಗಿತ್ತು ಶಾರದಮ್ಮ? ದಿನಸಿ ಸಾಮಾನು ತರಿಸ್ಬೇಕಾ?"

"ಇಲ್ಲ ಯಜಮಾನ್ರೇ.... ಒಂದು ವಿಷಯ ತಿಳಿಸ್ಬೇಕಾಗಿತ್ತು. ಹೇಗೆ ಹೇಳ್ಬೇಕು ಅಂತ ಗೊತ್ತಾಗ್ತಿಲ್ಲ."

"ಏನು ವಿಷಯ ಬೇಗ ಹೇಳಿ....."

"ಚಿನ್ಮಯಿಯ ವಿಷಯ..... ಅವಳ ಆರೋಗ್ಯ ಚೆನ್ನಾಗಿಲ್ಲ."

"ನನ್ಹತ್ರ ಹೇಳಿದ್ರೆ.....? ಡಾಕ್ಟರ್ ಬಳಿಗೆ ಕರ್ಕೊಂಡ್ಹೋಗಿ....."

“ಅವಳು ಬರುಕ್ಕೆ ಒಪ್ತಿಲ್ಲ.....”

“ಬಿಡಿ ಅಷ್ಟೇ. ನಾಲ್ಕು ದಿನ ನರಳಿದರೆ ತಾನೇ ಎದ್ದು ಡಾಕ್ಟರ್ ಬಳಿಗೆ ಹೋಗ್ತಾಳೆ.”

“ಇಲ್ಲ. ಅದು ಅಂಥ ಕಾಯಿಲೆ ಅಲ್ಲ.....”

“ಆರೋಗ್ಯ ಸರಿ ಇಲ್ಲದಿದ್ದ ಮೇಲೆ ಅದು ಕಾಯಿಲೇನೇ..... ಏನಾಗಿದೆ ಅಂತ ಹೇಳಿ. ಮನೆಗೆ ಡಾಕ್ಟರ್‌ರನ್ನು ಕರೆಸಿದ್ರಾಯ್ತು.”

“ಮತ್ತೆ.... ಅದೂ.... ಚಿನ್ಮಯೀ ಗರ್ಭಿಣಿ ಆಗಿದಾಳೆ.....” ಭಟ್ಟ ಕಣ್ಣು ಕಣ್ಣು ಬಿಟ್ಟ.

“ಏನಂದ್ರೀ..... ಇದೆಲ್ಲಾ ಹೇಗಾಯ್ತು?”

“ನಾನೇನ್ಹೇಳಲಿ? ಆ ರಾತ್ರಿ ಅವಳು..... ಎಲ್ಲೋ ಇದ್ದಳಲ್ಲ.....” ತೊದಲಿದಳು.

“ಅಂತೂ ನಾನು ತಲೆ ಎತ್ತದ ಹಾಗೆ ಮಾಡಿ ಬಿಟ್ಟಳು..... ಎಚ್ಚರಿಕೆಯಿಂದ ಇರಬೇಕು ಅಂತ ಗೊತ್ತಾಗ್ಬೇಡ್ವಾ.....? ಇದೆಲ್ಲಾ ಪ್ರೇಮಂಗೆ ಗೊತ್ತಾ.....? ತಾಯಿ ಯಾದವಳು ಹೆಣ್ಣು ಮಕ್ಕಳಿಗೆ ಸರಿಯಾದ ತಿಳಿವಳಿಕೆ ಹೇಳಬೇಡ್ವಾ.....!”

“ಮೊದಲೇ ಅವರ ಆರೋಗ್ಯ ಚೆನ್ನಾಗಿಲ್ಲ. ವಿಪರೀತ ನಿಶ್ಶಕ್ತಿ. ಈ ವಿಷಯ ತಿಳಿದ್ರೆ ಕುಸಿದು ಬೀಳ್ತಾರೆ ಅಷ್ಟೇ.....”

“ಈಗ ನೀನೇ ಏನಾದ್ರೂ ಉಪಾಯ ಹೇಳ್ಬೇಕು..... ಯಾರ್ಗೂ ತಿಳಿಯದಂತೆ ಏನಾದ್ರೂ ಔಷಧಿ ಇದ್ರೆ ತಂದು ಕುಡಿಸಿ.....”

“ಇದಕ್ಕೂ ಚಿನ್ಮಯಿ ಒಪ್ತಿಲ್ಲ.....”

“ಏನು? ಮದ್ವೆ ಆಗ್ದೇನೇ ತಾಯಿಯಾಗ್ತಾಳಂತಾ? ಇದು ಕಲಿಯುಗ..... ಜನ ಆಡ್ಕೊಂಡು ನಗ್ತಾರೆ. ನನ್ನ ಮರ್ಯಾದೆ ಬೀದಿ ಪಾಲಾಗುತ್ತೆ.... ಕಾಮಾಕ್ಷಿಗೆ ಹೇಳಿ ಕಳಿಸಿ. ಅವಳೇ ಸರಿ ಇದಕ್ಕೆಲ್ಲ.”

“ಕಾಮಾಕ್ಷಿಗೆ ತಿಳಿಸೋದು ಬೇಡ ಅಂತ ನನಗನ್ನಿಸುತ್ತೆ.”

“ಯಾಕೆ? ಅವಳು ಎಷ್ಟೋ ವಿಷಯದಲ್ಲಿ ನನಗೆ ಸಹಾಯ ಮಾಡಿದಾಳೆ.”

“ಕಾಮಾಕ್ಷಿಗೆ ಈ ವಿಷಯ ಗೊತ್ತಾಗದಿರುವುದೇ ಸರಿ..... ನಾನೊಂದು ಮಾತು ಹೇಳ್ಲಾ..... ಯಜಮಾನ್ರೇ. ಆದಷ್ಟು ಬೇಗ ಕಿಶೋರನ ಹತ್ರ ಮಾತನಾಡಿ. ಅವನ್ಗೆ ಒಪ್ಗೆ ಇದ್ರೆ ಚಿನ್ಮಯಿ ಜತೆ ಮದುವೆ ಮಾಡಿ ಬಿಡಿ....”

“ನಿಮಗೆ ತಿಳಿವಳಿಕೆ ಇದೆ ಅಂದ್ಕೊಂಡಿದ್ದೆ ಶಾರದಮ್ಮ.... ತಿಳಿದೂ ತಿಳಿದೂ ಕಿಶೋರ ಇವಳನ್ನು ಮದ್ವೆ ಆಗ್ತಾನಾ? ಕೈ ತೋರಿಸಿ ಅವಲಕ್ಷಣ ಅನ್ನಿಸ್ಕೊಂಡ ಹಾಗಾಗುತ್ತೆ.....”

“ಅವನಿಗೆ ತಿಳಿಸುವುದೇ ಬೇಡ. ಬೇಗ ಮದ್ವೆ ಮಾಡಿದ್ರಾಯ್ತು. ಮದ್ವೆ ಆದ್ಮೇಲೆ ನಮ್ಮ ಜವಾಬ್ದಾರಿ ತೀರಿತು.”

"ದಯವಿಟ್ಟು ಇಂಥ ಸಲಹೆಗಳನ್ನು ಕೊಡಬೇಡಿ." ಎಂದು ಬಾಯಿ ಹೊರಗೆ ನುಡಿದರೂ, ಒಳ ಮನಸ್ಸು ಅದನ್ನೇ ಯೋಚಿಸುತ್ತಿತ್ತು.

"ನನಗೆ ಅನ್ನಿಸಿದ್ದನ್ನು ಹೇಳ್ದೆ..... ಇಲ್ದಿದ್ರೆ ಚಿನ್ಮಯಿ ಭವಿಷ್ಯ ಹಾಳಾಗುತ್ತಲ್ಲ ಅಂತ." ಶಾರದಮ್ಮ ಅತ್ತ ಹೊರಟು ಹೋದರು. ಭಟ್ಟನ ಮನಸ್ನಲ್ಲಿ ತಾಕಲಾಟ ಪ್ರಾರಂಭವಾಗಿತ್ತು. ಹೇಗೂ ಕಿಶೋರ ತಾನಾಗಿಯೇ ಮುದುವೆಯಾಗುವುದಾಗಿ ಹೇಳಿದಾನೆ. ಯಾಕಾಗಬಾರದು ಅಂತ ಒಂದು ಸಾರಿ ಅನ್ನಿಸಿದರೆ, ಮರುಗಳಿಗೆಯೇ ಕಾಮಾಕ್ಷಿ ಒಪ್ಪುವುದಿಲ್ಲವೆಂದು ಹೇಳುತ್ತಿತ್ತು ಒಳಮನಸ್ಸು..... ಎಲ್ಲಾ ರೀತಿಯಿಂದಲೂ ವಿದ್ಯಾ ಕಿಶೋರನಿಗಿಂದ ಮುಂದಿದ್ದುದರಿಂದ, ಆಗ ಕಾಮಾಕ್ಷಿ ಬೇಡವೆಂದಳು. ಈಗ ಅವಳನ್ನು ಕೇಳಿದರೆ ತಾನೇ ಕಮ್ಮಿಯಾಗುವುದು ಖಂಡಿತ ಎನಿಸಿತ್ತು. ಅತ್ತಿತ್ತ ಶತಪಥ ತಿರುಗಾಡಿ ಕಡೆಗೂ ಒಂದು ನಿರ್ಧಾರಕ್ಕೆ ಬಂದ.....

"ಕಿಶೋರನನ್ನು ಈಗ್ಲೇ ಕರ್ಕೊಂಡು ಬಾ" ಅಂತ ಶ್ರೀಕರನನ್ನು ಕಳಿಸಿದ. ಕಿಶೋರ ಇದನ್ನು ನಿರೀಕ್ಷಿಸಿದ್ದುದರಿಂದ ಅವನೊಡನೆಯೇ ಬಂದ.

"ಹೇಗಿದೆ ಓದು? ಏನನ್ನುತ್ತೆ ಕಾಲೇಜು?" ಮೊದಲು ವಿಚಾರಿಸಿದ.

"ಎಲ್ಲಾ ಚೆನ್ನಾಗಿದೆ....." ಎಂದ ಕೈ ಉಜ್ಜಿಕೊಳ್ಳುತ್ತಾ.

"ಈಗ ನಿನ್ನಂದ ಒಂದು ಕೆಲಸವಾಗಬೇಕಾಗಿದೆ...."

"ಏನ್ಸಾರ್.... ಅದು...... ಹೇಳಿ, ಖಂಡಿತಾ ಮಾಡಿ ಕೊಡ್ತೀನಿ....." ಭಟ್ಟನ ವಿಶ್ವಾಸ ಗಳಿಸುವವನಂತೆ ನುಡಿದ.

"ಚಿನ್ಮಯೀಗೆ ಮದುವೆ ಗೊತ್ತಾಗಿದೆ....." ಓರೆಗಣ್ಣಿನಿಂದ ಅವನನ್ನೇ ನೋಡಿದ.

"ಏನು! ಚಿನ್ಮಯೀಗೆ ಮದುವೇನ.....? ಅವ್ಳು ಒಪ್ಪಿಕೊಂಡಿದಾಳಾ.....?"

"ಇಲ್ಲ. ಅವ್ಳು ಒಪ್ಪಿಕೊಂಡಿಲ್ಲ..... ಅವ್ಳು ಯಾರ ಮಾತನ್ನೂ ಕೇಳ್ತಿಲ್ಲ. ಬಲವಂತ ಮಾಡಿದ್ರೆ ಆತ್ಮಹತ್ಯೆ ಮಾಡಿಕೊಳ್ತೀನಿ ಅಂತ ಹೆದರಿಸ್ತಿದಾಳಂತೆ... ಅವ್ಳ ಮನಸ್ನಲ್ಲಿ ಏನಿದೆ ಅಂತ ತಿಳೀತಿಲ್ಲ..... ಅದಕ್ಕೆ ನೀನು ಅವಳ ಹತ್ರ ಮಾತನಾಡಿ....."

"ನಾನಾ? ನಂಗೂ ಅವಳಿಗೂ ಸ್ನೇಹವೇ ಇಲ್ಲವಲ್ಲ ಸಾರ್......"

"ಸ್ನೇಹ ಮಾಡ್ಕೋ..... ನೀನು ಹೊರಗಿನವನು, ನಿನ್ಹತ್ರ ಅವ್ಳು ಹೇಳಬಹುದು ಅಂತ ನನಗನ್ನಿಸುತ್ತೆ...."

"ನಿಮ್ಮ ಮಾತನ್ನು ನಾನು ಹೇಗೆ ನಂಬಲಿ ಸಾರ್...... ಇದರಲ್ಲಿ ಬೇರೆ ಯಾವ ಉದ್ದೇಶವೂ ಇಲ್ಲ ತಾನೇ..... ಮತ್ತೆ ಮತ್ತೆ ಲಾಕಪ್‌ಗೆ ಹೋಗಲು ನಾನು ಸಿದ್ಧನಿಲ್ಲ...."

"ಸರಿ ಹಾಗಾದ್ರೆ ಬಿಡು.... ಒಂದ್ಮಾತು ನನ್ನ ಮಗಳಿಗೆ ಹೇಳೋಕೆ ಹೆದರುವವನು ನೀನು.... ಮತ್ತೆ ಆ ದಿನ ಅವಳನ್ನು ಮದುವೆಯಾಗ್ತೀನಿ ಅಂತ ಯಾವ ಧೈರ್ಯದ ಮೇಲೆ ಹೇಳ್ದೇ?"

"ಏನೋ ಆ ದಿನ ಹಾಗೆ ಕೇಳಬೇಕೂಂತ ಅನ್ನಿಸ್ತು.... ಕೇಳ್ದೆ. ಆದ್ರೆ ಈಗ ಬೇರೆ ಯಾರೋ ಹುಡುಗನ ಜತೆ ಅವಳ ಮದುವೆ ಗೊತ್ತಾಗಿರುವಾಗ..... ನಾನೇನು ಹೇಳಲಿ.....?"

"ಹೋಗಲಿ ನಿಜ ಹೇಳು.... ಈಗಲೂ ನಿನಗೆ ಅವಳನ್ನು ಮದುವೆಯಾಗುವ ಇಚ್ಛೆ ಇದೆಯಾ.....!"

"ಅದ್ಯಾಕ್ ಸಾರ್ ಈಗ ಹಾಗೆ ಕೇಳ್ತಿದೀರಿ....."

"ಇರಲಿ ಹೇಳು..... ಆದರೆ ನಿಜ ಹೇಳ್ಬೇಕು....."

"ಈಗಲೂ ನಾನು ಅವಳನ್ನು ಮದುವೆಯಾಗಲು ಸಿದ್ಧ" ಕತ್ತು ಬಗ್ಗಿಸಿ ನುಡಿದ.

"ಶಾಭಾಸ್.... ಕತ್ತೆತ್ತಿ ಧೈರ್ಯದಿಂದ ಹೇಳು. ಭಯ ಯಾಕೆ.....?" ಕಿಶೋರ ಸುಮ್ಮನೆ ನಕ್ಕ.

"ನಿಮ್ಮಮ್ಮ ಈ ಮದುವ್ಗೆ ಒಪ್ಪದಿದ್ರೆ ಏನ್ಮಾಡ್ತೀಯ.....?"

"ಅಮ್ಮನ್ನ ಒಪ್ಪಿಸೋಕೆ ಪ್ರಯತ್ನ ಮಾಡ್ತೀನಿ. ಇಲ್ಲದಿದ್ರೆ ಬೇರೆ ಮನೆ ಮಾಡಿಕೊಂಡು ಇರ್ತೀವಿ." ಭಟ್ಟ ನಕ್ಕ.

"ಬೇರೆ ಮನೆ.....? ನಿನಗೆ ಉದ್ಯೋಗ ಇಲ್ಲ. ಸಂಪಾದನೆ ಇಲ್ಲ. ಈಗಲೂ ಅಮ್ಮನ ಸಂಪಾದ್ನೇಲಿ ಬದುಕ್ತಿದೀಯ..... ಮದ್ವೆಯಾದ್ರೆ ಜವಾಬ್ದಾರಿ ಹೆಚ್ಚುತ್ತೆ..... ಅದನ್ನೆಲ್ಲ ಯೋಚಿಸಿದೀಯ......?"

"ಇಲ್ಲಾ ಸಾರ್.... ನಾನು ಅದ್ಯಾವುದನ್ನೂ ಯೋಚಿಸಿರಲಿಲ್ಲ..... ಬರೀ ಚಿನ್ಮಯಿಯ ಬಗ್ಗೆ ಯೋಚಿಸ್ದೆ.... ನಾನು ಅವಳನ್ನು ಮದ್ವೆ ಆಗ್ತೀನಿ. ಸದ್ಯಕ್ಕೆ ಅವಳು ನಿಮ್ಮ ಮನೇಲೇ ಇರಲಿ. ನಾನು ಕೆಲಸಕ್ಕೆ ಸೇರಿಕೊಂಡ ಮೇಲೆ ಅವಳನ್ನು ಕರೆದುಕೊಂಡು ಹೋಗ್ತೀನಿ....."

"ಈ ಮಾತನ್ನು ನಿಜವಾಗಿ ಹೇಳ್ತಿದೀಯೋ, ತಮಾಷೆಯಾಗಿ ಹೇಳ್ತಿದೀ ಯೋ.....?"

"ತಮಾಷೆ ಅಲ್ಲ. ಯಾಕೆ ನಾನು ಹೇಳಿದ್ದರಲ್ಲಿ ಏನಾದ್ರೂ ತಪ್ಪು ಇತ್ತಾ.....?"

"ತಪ್ಪೇನಿರಲಿಲ್ಲ..... ಆದರೆ ಎಷ್ಟರ ಮಟ್ಟಿಗೆ ಸಾಧ್ಯ ಅಂತ ಯೋಚಿಸ್ತಿದ್ದೆ. ಆದರೆ ನಿಮ್ಮಮ್ಮನ ಒಪ್ಪಿಗೆ ಇಲ್ಲದೇ ಈ ಮದುವೆ ನಡೆಯಲು ಸಾಧ್ಯವಿಲ್ಲ. ಮೊದಲು ನಿಮ್ಮಮ್ಮನ ಹತ್ರ ಮಾತನಾಡು.... ಅವಳನ್ನು ಒಪ್ಪಿಸು...." ಕಿಶೋರ ಬೆರಗಾಗಿ ಭಟ್ಟನನ್ನೇ ನೋಡಿದ. ಮತ್ತೇನಾದ್ರೂ ಈ ಭಟ್ಟ ತನ್ನನ್ನು ಸಿಕ್ಕಿಸಿ, ಒಳಗೆ ಹಾಕಿಸಲು ನೋಡುತ್ತಿರಬಹುದೇ ಎಂದೇ ಅನ್ನಿಸುತ್ತಿತ್ತು.

"ನಾನು ಮೊದಲು ಚಿನ್ಮಯಿಯ ಹತ್ತಿರ ಮಾತಾಡ್ತೀನಿ. ಅವಳಿಗೆ ಒಪ್ಪಿಗೆ ಇದ್ದರೆ, ಆಮೇಲೆ ಅಮ್ಮನ ಹತ್ರ ಮಾತಾಡ್ತೀನಿ."

"ಸರಿ ಹಾಗೇ ಮಾಡು....." ಎಂದು ಹೇಳಿ ಚಿನ್ಮಯಿಗೆ ಹೇಳಿ ಕಳಿಸಿದ. ಚಿನ್ಮಯಿ ಅಂಜುತ್ತಾ ಒಳ ಬಂದಳು..... ಅವರಿಬ್ಬರನ್ನು ಒಳಗೆ ಬಿಟ್ಟು ಭಟ್ಟ ಹೊರಗೆ ಬಂದ. ಅವರಿಬ್ಬರೂ ಏನು ಮಾತನಾಡಿಕೊಳ್ಳಬಹುದೆಂದು ಕೇಳಿಸಿಕೊಳ್ಳುವ ಕುತೂಹಲ ಅವನಿಗಿರಲಿಲ್ಲ. ಸ್ವಲ್ಪ ಹೊತ್ತಿನ ಅನಂತರ ಅವಳು ಹೊರಬಂದಳು. ಭಟ್ಟ ಮತ್ತೆ ಒಳ ಹೋದ. ಕಿಶೋರನೇ ಹೇಳಿದ.

"ಚಿನ್ಮಯಿ ತತ್‌ಕ್ಷಣಕ್ಕೆ ಏನನ್ನೂ ಹೇಳಲಿಲ್ಲ. ಅವಳಿಗೆ ಸ್ವಲ್ಪ ಸಮಯ ಬೇಕಂತೆ. ಯೋಚಿಸಿ ಹೇಳ್ತಾಳಂತೆ."

* * *

"ನಾನು ಚಿನ್ಮಯೀನ ಮದ್ವೆ ಆಗ್ಬೇಕೂಂತ ನಿರ್ಧರಿಸಿದೀನ." ಎಂದು ಕಿಶೋರ ಹೇಳಿದಾಗ ಕಾಮಾಕ್ಷಿ ಬೆಚ್ಚಿಬಿದ್ದಳು.

"ನಿನ್ತಲೆ ಸರಿಯಾಗಿದೆ ತಾನೇ.....?"

"ಹುಂ.... ಸರಿಯಾಗಿ ಯೋಚಿಸಿಯೇ ಈ ನಿರ್ಧಾರಕ್ಕೆ ಬಂದಿದೀನಿ....."

"ಬೇಡ.....ಆ ಭಟ್ಟನ ಸಂಬಂಧ ನಮಗೆ ಬೇಡ.....ಅಲ್ದೇ ಅವಳು....."

"ಚಿನ್ಮಯಿ ಕೆಟ್ಟೋಳೇನಲ್ಲ...."

"ಆದರೆ ಈಗ ಅವಳನ್ನು ಯಾವನೋ ಧೂರ್ತ ಕೆಡಿಸಿದಾನಲ್ಲ....."

"ಆಗ ವಿದ್ಯಾಳಿಗೆ ನಾನು ತಕ್ಕವನಲ್ಲ ಅಂತ ತಪ್ಪಿಸ್ದೆ...... ಈಗ ಚಿನ್ಮಯಿಗೂ ನಾನು ತಕ್ಕವನಲ್ವಾ?"

"ಇಲ್ಲ ಕಿಶೋರ.... ಈಗ ಚಿನ್ಮಯೀಯೇ ನಿನಗೆ ತಕ್ಕವಳಲ್ಲ....."

"ಏನಮ್ಮಾ.... ಹೆಂಗಸಾಗಿ ನೀನೇ ಹೀಗೆ ಮಾತಾಡ್ತೀಯಲ್ಲ. ಚಿನ್ಮಯಿ ಬಗ್ಗೆ ಅಯ್ಯೋ ಅನ್ನಿಸುಲ್ವಾ.... ಅವಳದ್ದೇನೂ ತಪ್ಪಿಲ್ಲ ಅಂತ ನಿನಗೂ ಗೊತ್ತಿದೆ."

"ಅದಕ್ಕೆ ಭಟ್ಟಂಗೆ ಎಷ್ಟು ಹೇಳ್ದೇ..... ಗಂಡುಗಳನ್ನು ತೋರಿಸ್ದೆ..... ಮದ್ವೆ ಮಾಡಿಕೊಡೋಕೆ ಒಪ್ಪಲೇ ಇಲ್ಲ....."

"ಈಗ ನನ್ನನ್ನು ಆ ಭಟ್ಟರು ಒಪ್ಪಲ್ಲ ಅಂತ ಅಂತೀಯ....."

"ಅವನು ಒಪ್ಪಲಿ ಬಿಡಲಿ, ಚಿನ್ಮಯೀನೇ ನಾನೇ ಒಪ್ಪಲ್ಲ. ಎಷ್ಟಾಗಲೀ ಅವಳು ಕಳಂಕ ಹೊತ್ತವಳು...."

"ಬೇರೆಯವರಿಗೆ ಮುಚ್ಚಿಟ್ಟು ಮದುವೆ ಮಾಡಿಸೋಕೆ ಹೊರಟಿದ್ದೆ..... ಈಗ ನನಗೇ ಬೇಡಾಂತೀಯಲ್ಲ."

"ನೀನು ನನ್ನ ಮಗ ಕಣೋ.... ನಿನಗೆ ಮೊದಲೇ ಅವರ ಮನೆಯವರಿಂದ ಅನ್ಯಾಯ ಆಗಿದೆ.... ಮತ್ತೆ ಮತ್ತೆ ಅನ್ಯಾಯವಾಗುಲ್ವಾ?"

"ನೀನೂ ಇಷ್ಟು ಸ್ವಾರ್ಥಿ ಅಂತ ನಾನು ತಿಳಿದುಕೊಂಡಿರಲಿಲ್ಲ. ಭಟ್ಟರಿಂದ ನನಗೆ ಅನ್ಯಾಯವಾಯಿತು ಅಂತ ತಿಳಿದೂ ಅವರ ಮನೆಗೆ ಹೋಗಿ ಬರೋದನ್ನ

ನೀನು ನಿಲ್ಲಿಸಿಲ್ಲ."

"ನಾನು ಪ್ರೇಮಕ್ಕಂಗೋಸ್ಕರ ಹೋಗ್ತೀನಿ.... ಅವಳನ್ನು ನೋಡಿದ್ರೆ ಕರುಳು ಹಿಂಡಿದ ಹಾಗಾಗುತ್ತೆ. ಭಟ್ಟನ ಕೈ ಹಿಡಿದು ಬಂದಾಗ್ನಿಂದ ನೆಮ್ಮದಿ ಅನ್ನೋದೇ ಇಲ್ಲ ಅವಳ ಪಾಲಿಗೆ..... ಪ್ರಶಾಂತ ಮನೆ ಬಿಟ್ಟು ಹೋದ ಅನ್ನೋ ಕೊರಗಿನಿಂದ ಅರೆಜೀವ ಆಗಿದ್ದಳು.... ಈಗ ನೋಡಿದರೆ ಈ ಅನಾಹುತ.... ಯೌವನಕ್ಕೆ ಬಂದ ಹೆಣ್ಣಿಗೆ ಅಪವಾದ ಬಂದರೆ, ಆ ಕೊರಗು ಜೀವಮಾನ ಎಲ್ಲಾ ಕೊರೆಯುತ್ತೆ...."

"ಈಗ ನಾನು ಚಿನ್ಮಯಿಯ ಕೈ ಹಿಡಿದರೆ, ಪ್ರೇಮಕ್ಕಂಗೆ ಸ್ವಲ್ಪ ನೆಮ್ಮದಿ ಸಿಗುತ್ತೆ ಅಲ್ವಾ. ಅತ್ತೆಯ ಕೊರಗನ್ನು ಸ್ವಲ್ಪ ಕಮ್ಮಿ ಮಾಡೋ ಅವಕಾಶ ಸಿಕ್ಕಿದೆ ನನಗೆ."

"ನೀನು ಹೇಳೋದೆಲ್ಲಾ ಸರಿ. ಆದರೆ ಆ ಹುಡ್ಗಿ ಬೆಳೆದ ರೀತಿಯೇ ಬೇರೆ..... ನಮ್ಮನೆಗೆ ಹೊಂದ್ಕೊಳ್ಳೋದು ಕಷ್ಟ ಆಗುತ್ತೆ..... ನಾಲ್ಕು ದಿನ ಕಳೆದ ಮೇಲೆ ಅವಳಿಗೂ ಬೇಸರ ಬರಬಹುದು....."

"ಅದೆಲ್ಲಾ ಯಾವ ದೊಡ್ಡ ವಿಷಯ.....? ಸದ್ಯಕ್ಕೆ ಅವಳು ಅವರ ಅಪ್ಪನ ಮನೇಲೇ ಇರ್ಲಿ...ಕೆಲಸಕ್ಕೆ ಸೇರಿ ಬೇರೆ ದೊಡ್ಡ ಮನೆ ಮಾಡಿ ಕರ್ಕೊಂಡು ಬರ್ತೀನಿ."

"ಇದಕ್ಕೆ ಭಟ್ಟ ಒಪ್ಪದಿದ್ದರೇ....."

"ನಿನ್ನ ಭಟ್ಟನಂಥ ಮೂರ್ಖ ಇನ್ನೊಬ್ಬಿಲ್ಲ ಅಷ್ಟೇ....."

"ನಿನಗೆ ಭಟ್ಟನ್ನ ಕಂಡರಾಗುತ್ತಿರಲಿಲ್ಲ. ಈಗ್ಯಾಕೆ ಅವನಿಗೆ ಉಪಕಾರ ಮಾಡೋಕೆ ಹೊರಟಿದೀಯ?"

"ಅದರಲ್ಲಿ ನನ್ನ ಸ್ವಾರ್ಥವಿದೆ" ಎಂದು ಹೇಳಲಾಗದೇ "ಏನೋ ದೈವ ಪ್ರೇರಣೆ ಅಂತ ಅಂದ್ಕೋ..... ನಿನ್ನ ಮಗ ಒಂದು ಆದರ್ಶದ ಕೆಲಸ ಮಾಡಲು ಹೊರಟಿದಾನೆ. ತಡೆಯಬೇಡಮ್ಮ....." ತಾಯಿಯನ್ನು ಒಲಿಸಿಕೊಳ್ಳಲು ನೋಡಿದ.

"ನೀನು ಇಷ್ಟು ನಯವಾಗಿ ಮಾತನಾಡೋದನ್ನ ನೋಡಿದ್ರೆ ನಂಗೇನೋ ಅನುಮಾನ ಬರುತ್ತೆ ಕಣೋ ಕಿಶೋರ.... ನಿಜ ಏನೂಂತ ಹೇಳಿದ್ರೆ, ನಾನು ನಿನಗೆ ಸಹಾಯ ಮಾಡ್ತೇನು."

"ಭಟ್ಟರಿಗೆ ಸಾಕಷ್ಟು ಶ್ರೀಮಂತಿಕೆ ಇದೆ. ನೀನು ಅವರನ್ನ ಮದುವೆಯಾಗಿ ದ್ದಿದ್ರೆ...... ಆ ಶ್ರೀಮಂತಿಕೆಗೆ ನೀನು ಒಡತಿಯಾಗಿರುತ್ತಿದ್ದೆ. ಅದು ಸದಾ ನನ್ನ ಮನಸ್ನಲ್ಲಿ ಗುಂಯ್ ಗುಟ್ಟುತ್ತಿರುತ್ತೆ. ನನ್ನಂಥ ಬಡವ, ಅವರ ಮಗಳನ್ನು ಮದ್ವೆಯಾದ್ರೆ, ಭಟ್ಟರು ತಾನಾಗಿಯೇ ನಮಗೆ ಅನುಕೂಲಗಳನ್ನು ಒದಗಿಸಿಕೊಡ್ತಾರೆ.... ನಮಗೆ ಎರಡು ತರಹ ಲಾಭ ಆಗಲಿಲ್ವೇನಮ್ಮ.... ಚಿನ್ಮಯಿ ಅಂಥ ಸುಂದರಿ ನನ್ನ ಪತ್ನಿ ಯಾಗ್ತಾಳೆ. ಇಲ್ಲದಿದ್ರೆ ನಮ್ಮ ದೊಡ್ಡಸ್ತಿಕೆಗೆ ಯಾರ್ರು ಹೆಣ್ಣು ಕೊಡ್ತಾರೆ......?"

"ಥೂ ನೀಚ..... ಶ್ರೀಮಂತಿಕೆ ಆಸೆಗೆ, ಆ ಕುಲಗೆಟ್ಟ ಹೆಣ್ಣನ್ನು ಮದುವೆ ಆಗ್ತೀನಿ ಅಂತೀಯಲ್ಲ. ನಾಚ್ಕೆ ಆಗುಲ್ವಾ ನಂಗೆ?"

"ಅಮ್ಮಾ...... ಚಿನ್ಮಯಿ ಕುಲಗೆಟ್ಟ ಹೆಣ್ಣಲ್ಲ..... ಅವಳನ್ನು ಹಾಗೆಲ್ಲ ಅನ್ಬೇಡ."

"ಅವಳೇನು ನಿನ್ನ ಹೆಂಡ್ತಿ ಅಲ್ಲ. ಈಗ್ಲಿಂದ ಅವಳ ಪರ ವಹಿಸಿ ಮಾತಾಡೋಕೆ...."

"ಅವ್ಳು ನನ್ನ ಹೆಂಡ್ತಿ ಆಗೋಳು. ನಾನು ಅವಳನ್ನು ಪ್ರೀತಿಸ್ತೀನಿ....."

"ಹಾಗಾದ್ರೆ ಅವಳೇ ನಿನ್ಹೆಂಡ್ತಿ ಅಂತ ನಿರ್ಧರಿಸಿ ಬಿಟ್ಟಿದೀಯ ಅನ್ನು."

"ಹೂಂ. ಈ ಸಾರಿ ನಾನು ಯಾರ ಮಾತಿಗೂ ಬೆಲೆ ಕೊಡೋಲ್ಲ. ನಾನು ಅವಳನ್ನೇ ಮದ್ವೆ ಆಗ್ತೀನಿ....."

"ನಾಲ್ಕು ದಿನ ಕಳೆದ್ಮೇಲೆ ನಿಂಗೆ ಅವಳ ಮೇಲೆ ಅಸಹ್ಯ ಹುಟ್ಟುತ್ತೆ..... ಆಗ ಕೆಟ್ಟೋನಾಗೋನು ನೀನೇ....."

"ಇಲ್ಲಮ್ಮ. ಈಗಾಗ್ಲೇ ನಾನು ಕೆಟ್ಟೋನಾಗಿ ಹೋಗಿದೀನಿ. ಚಿನ್ಮಯೀನ ಕೆಡಿಸಿದೋನು ನಾನೇ... ಬೇರೆ ಯಾರೂ ಅಲ್ಲ....." ತಾಯಿಯನ್ನೇ ನೋಡುತ್ತಾ ನುಡಿದ.

"ಆಂ...... ಅವಳನ್ನ ಮದ್ವೆ ಆಗೋಕೆ..... ಇಂಥ ಕೆಟ್ಟ ಸುಳ್ಳು ಹೇಳ್ಬೇಡ....."

"ಸುಳ್ಳಲ್ಲಮ್ಮ ನಿಜ....ಆಗೀಗ ಚಿನ್ಮಯಿ ನಿನ್ನನ್ನ ಕರೆಯೋಕೆ ಅಂತ ನಮ್ಮನೇಗೆ ಬರ್ತಿದ್ಲಲ್ಲ. ಕ್ರಮೇಣ ನಮ್ಮಿಬ್ಬರ ಸ್ನೇಹ ಬೆಳೆಯಿತು. ಸಲುಗೆ ಬೆಳೆಯಿತು. ಈಗ ಚಿನ್ಮಯಿ ಗರ್ಭಿಣಿ..... ಈಗ ಅವಳ ಕೈ ಬಿಡುವುದು ನ್ಯಾಯವೇನಮ್ಮ.....?"

"ಚಿನ್ಮಯೀ ಗರ್ಭಿಣಿ! ನಿನಗ್ಯಾಕೆ ಬಂತೋ ಇಂಥ ದುರ್ಬುದ್ಧಿ..... ನನ್ನ ಸ್ವಾಭಿಮಾನಕ್ಕೆ ಬೆಂಕಿ ಹಚ್ಚಿಬಿಟ್ಯಲ್ಲೋ..... ನಾನು ಭಟ್ಟಂಗೆ ನಿಜ ಹೇಳ್ತೀನಿ....."

"ನೀನು ನಿಜ ಹೇಳಿದ್ರೆ ಚಿನ್ಮಯಿಯ ಬಾಳು ಸರಿ ಹೋಗುತ್ತೇನಮ್ಮ.... ಅವಳನ್ನು ಪಡೆಯೋಕೆ ನಾನು ಈ ನಾಟ್ಕ ಆಡಬೇಕಾಯ್ತು..... ಈಗ ನಾನು ನಿಜ ಹೇಳಿದೀನಿ..... ನೀನು ಸುಮ್ಮನಿದ್ದು ಬಿಡು....."

"ಇಲ್ಲ. ಇಂಥದೊಂದು ರಹಸ್ಯವನ್ನು ನನ್ನಿಂದ ಮುಚ್ಚಿಟ್ಟುಕೊಳ್ಳೋಕೆ ಆಗುಲ್ಲ. ಭಟ್ಟಂಗೆ ತಿಳಿದ್ರೆ ಅಪಾಯ.... ನೀನು ಈ ಊರ್ನಿಂದ ಎಲ್ಲಾದರೂ ತೊಲಗಿ ಹೋಗು. .... ನನ್ನ ತಲೆತಗ್ಗಿಸುವ ಹಾಗೆ ಮಾಡಿಬಿಟ್ಟೆ ನೀನು....."

"ಪ್ರೀತಿಸ್ದೋರ್ಗೆ ದ್ರೋಹ ಮಾಡಿದ್ರೆ ಅದಕ್ಕೆ ತಲೆ ತಗ್ಗಿಸಬೇಕು. ನಾನು ಚಿನ್ಮಯಿಗೆ ಯಾವ ದ್ರೋಹವನ್ನೂ ಮಾಡ್ತಿಲ್ಲ. ಮೋಸ ಮಾಡಿ ಅವಳನ್ನು ಒಲಿಸಿಕೊಂಡಿಲ್ಲ. ಅವಳೂ ನನ್ನನ್ನು ಪ್ರೀತಿಸ್ತಾಳೆ. ಬೇಕಿದ್ರೆ ಅವಳನ್ನೇ ಕೇಳು."

"ಸರಿ..... ಸರಿ.... ನೀವು ನೀವೇ ಎಲ್ಲವನ್ನು ನಿರ್ಧರಿಸಿಕೊಂಡಿರುವಾಗ, ಅವಳನ್ನೇನು ಕೇಳೋದು? ಆದರೆ ಒಂದ್ಮಾತು, ನೀನು ನುಡಿದಂತೆ ನಡೆಯಬೇಕು. ಅವಳ ಕೈ ಹಿಡಿತಿದೀಯ..... ಅವಳಿಗೆ ಎಂದೂ ದ್ರೋಹ ಬಗೆಯಬಾರದು. ಅವಳು ಎಷ್ಟಾಗಲೀ ಶ್ರೀಮಂತರ ಮನೆ ಹುಡುಗಿ. ಅವಳಿಗೆ ಅನುಸರಿಸಿಕೊಂಡು ಹೋಗಬೇಕಾಗುತ್ತದೆ.... ಭಟ್ಟನ ಮೇಲಿನ ಸಿಟ್ಟನ್ನು ಅವಳ ಮೇಲೆ ತೋರಬಾರದು...."

"ಯಾಕೆ? ನಿನಗೆ ನನ್ಮೇಲೆ ನಂಬ್ಕೆ ಇಲ್ವಾ....?"

"ನನಗೆ ತಿಳಿಯದಂತೆ, ನನ್ನ ಬೆನ್ನ ಹಿಂದೆ, ಆ ಹುಡುಗಿಯೊಂದಿಗೆ ಚೆಲ್ಲಾಟ ಆಡಿದೀಯ. ನಿನ್ನನ್ನ ಹೇಗೆ ನಂಬಲಿ.....? ಹಾಗೇ ಇನ್ನೊಂದ್ಮಾತು...... ನನ್ನನ್ನ ಯಾವುದೇ ಮಾತಿಗೂ ಎಳೆಯಬೇಡ. ಕಾಮಾಕ್ಷಿ, ಮಗನ ಹಿಂದೆ ನಿಂತು ಇದನ್ನೆಲ್ಲ ಮಾಡಿಸಿದಳು ಅನ್ನುವ ಅಪವಾದ ನನಗೆ ಬೇಡ...."

"ಹಾಗಾದ್ರೆ ನಿನಗೂ ಒಪ್ಪಿಗೆ ಅನ್ನು."

"ಒಪ್ಪಲೇಬೇಕಾದ ಸ್ಥಿತಿಯನ್ನು ತಂದಿಟ್ಟಿದೀಯಲ್ಲ. ಭಟ್ಟನ ಎದುರಿಗೆ ತಲೆ ಎತ್ತಿ ಮಾತನಾಡಲಾಗದಂತೆ ಮಾಡಿಬಿಟ್ಟೆಯಲ್ಲ. ನನಗೆ ಅದೇ ಬೇಸರ."

"ಹೀಗೆಲ್ಲ ನಡೆದಿದೆ ಅಂತ ಅವರಿಗೆ ಹೇಗೆ ಗೊತ್ತಾಗುತ್ತೆ? ನಿಂಗ್ಯಾಕೆ ಬೇಸರ?"

"ಅದು ನಿನಗೆ ಈಗ ಅರ್ಥವಾಗುಲ್ಲ ಬಿಡು." ಕಾಮಾಕ್ಷಿ ಕಣ್ಣೀರನ್ನು ಒರೆಸಿಕೊಂಡಳು. ತಾಯಿ ಅತ್ತದ್ದು ಯಾಕೆ ಎಂದು ಅವನಿಗೆ ಅರ್ಥವಾಗಲಿಲ್ಲ. ಕಂಡರೂ ಕಾಣದವನಂತೆ ಸುಮ್ಮನಾಗಿಬಿಟ್ಟ.

ಕಾಮಾಕ್ಷಿಯ ಗಂಡ ಪುರುಷೋತ್ತಮನಿಗೆ ದನಕಿವುಡು. ಯಾವ ವಿಷಯವೂ ಅವನ ತನಕ ಬರುತ್ತಲೇ ಇರಲಿಲ್ಲ. ಕೇಳಿಸದೇ ಇದ್ದುದರಿಂದ, ಅವನಿಗೆ ಮಾತುಕತೆಗಳ ಬಗ್ಗೆ ಆಸಕ್ತಿಯೂ ಇರಲಿಲ್ಲ. ತಾನಾಯಿತು ತನ್ನ ಕೆಲಸವಾಯಿತು. ಸಂಬಳದ ಹಣವನ್ನು ತಂದು ಹೆಂಡತಿಯ ಕೈಗೆ ಹಾಕಿಧರೆ, ಮುಗಿಯಿತು ಅವನ ಕೆಲಸ. ಮನೆಯ ವಹಿವಾಟವೆಲ್ಲಾ ಕಾಮಾಕ್ಷಿಯದೇ. ಕಿಶೋರ ಓದನ್ನು ಬಿಟ್ಟಾಗ ಅದಕ್ಕೆ ಕಾರಣ ಭಟ್ಟನೇ ಎಂದು ತಿಳಿದರೂ, ಮಗ ಮಾಡಿದ ತಪ್ಪು ಏನೆಂದು ಪೂರ್ತಿ ತಿಳಿಯಲಿಲ್ಲ. ಮಗಳನ್ನು ಅತ್ತಿಗೆ ಕರೆದೊಯ್ಯುವಾಗ ಅವನ ಸಲಹೆಯನ್ನು ಕೇಳಿರಲಿಲ್ಲ. ಅತ್ತಿಗೆಗೆ ಮಕ್ಕಳಿಲ್ಲ ಎನ್ನುವುದನ್ನು ತಿಳಿದು ಸುಮ್ಮನಾಗಿದ್ದ. ತಾನು ಬೆಳಗ್ಗೆ ಕೆಲಸಕ್ಕೆ ಹೋದರೆ ರಾತ್ರಿಯೇ ಮನೆಗೆ ಬರುವುದು. ಕಾಮಾಕ್ಷಿ ಮಧ್ಯಾಹ್ನದ ಹೊತ್ತು ಒಬ್ಬ ಶ್ರೀಮಂತರ ಮನೆಗೆ ಅಡುಗೆ ಕೆಲಸಕ್ಕೆ ಸಹಾಯಕಳಾಗಿ ಹೋಗುತ್ತಾಳೆಂದು ಬಲ್ಲ. ಕಿಶೋರನನ್ನು ಯಾವುದಕ್ಕೂ ನೆಚ್ಚಿರಲಿಲ್ಲ. ಮಗಳನ್ನು ಅತ್ತಿಗೆ ಕರೆದುಕೊಂಡು ಹೋದುದೇ ಸರಿ ಎಂದೆನಿಸಿತ್ತು. ಈಗ ಅವನಿಗೆ ಮಗ ಮತ್ತೆ ಕಾಲೇಜಿಗೆ ಸೇರಿದ್ದಾನೆಂದು ತಿಳಿದಾಗ ಸಂತೋಷವಾಗಿತ್ತು. ಭಟ್ಟ ಸಹಾಯ ಮಾಡಿರುವನೆಂದು ಗೊತ್ತಾದಾಗ ಆಶ್ಚರ್ಯವಾಗಿತ್ತು. ಈಗ ಮಗನ ಮದುವೆಯ ಬಗ್ಗೆ ತಿಳಿಸಲೇ ಬೇಕಾಗಿತ್ತು. ಜೋರಾಗಿ ಮಾತನಾಡಿದರೆ ಅಕ್ಕ ಪಕ್ಕದವರಿಗೆ ತಿಳಿಯುತ್ತೆ. ತಿಳಿಸದೇ ಇದ್ದರೆ ಅದೂ ಸರಿಯಲ್ಲ. ಮದುವೆಯಂಥ ಮುಖ್ಯವಾದ ವಿಷಯವನ್ನು ಮುಚ್ಚಿಡುವುದು ಹೇಗೆ? ಅವಳಿಗೆ ಪೀಕಲಾಟಕ್ಕಿಟ್ಟುಕೊಂಡಿತು. ತನ್ನ ಗಂಡನಿಗೆ ಕಿವುಡು ಎಂದು ಯಾರಿಗೂ ತಿಳಿಯುವುದು ಬೇಕಿರಲಿಲ್ಲ. ಅವಳಿಗೆ, ಆದರೂ ಕೈ ಬಾಯಿ ಸಂಜ್ಞೆಗಳ ಮೂಲಕ ಮಗ ಮದುವೆಯಾಗುತ್ತಿರುವನೆಂದು ತಿಳಿಸಿದಳು.

"ಯಾರು ಹುಡುಗಿ?" ಅವನು ಪಿಸುದನಿಯಲ್ಲಿ ಪ್ರಶ್ನಿಸಿದ್ದ.

"ಭಟ್ಟನ ಮಗಳು ಚಿನ್ಮಯೀ....." ಎಂದಾಗ,

"ಹಿರಣ್ಮಯೀ..... ಹೆಸರು ಚೆನ್ನಾಗಿದೆ" ಎಂದಾಗ ಅವಳು ತಲೆ ಚಚ್ಚಿಕೊಂಡಳು.

"ಹಿರಣ್ಮಯೀ ಅಲ್ಲ..... ಚಿನ್ಮಯೀ..... ಯಾರಾದರೆ ನಿಮಗೇನು? ನಿಮ್ಮ ಈ ಕಿವುಡಿನಿಂದ ನನಗೆ ಸಾಕಾಗಿ ಹೋಗಿದೆ." ಎಂದು ಮಾತನ್ನು ಮುಗಿಸಿದಳು. ಕಡೆಗೂ ಅವನಿಗೆ ಭಟ್ಟನ ಮಗಳು ಚಿನ್ಮಯಿ ಎಂದು ಗೊತ್ತಾಗಲೇ ಇಲ್ಲ. ಆದರೆ ಗಂಡನಿಗೆ ವಿಷಯ ತಿಳಿದಿರಲೇಬೇಕೆಂಬ ಹಠದಿಂದ ಕಿಶೋರ, ಭಟ್ಟನ ಮಗಳು ಚಿನ್ಮಯಿಯನ್ನು ಮದುವೆಯಾಗುತ್ತಿದ್ದಾನೆ ಎಂದು ಸೊಟ್ಟ ಪಟ್ಟ ಅಕ್ಷರದಲ್ಲಿ ಬರೆದು ತೋರಿಸಿದಳು.

"ಭಟ್ಟರ ಮಗ್ಳಾ?" ಆಶ್ಚರ್ಯವನ್ನು ಪ್ರಕಟಿಸಿದ.

"ಹೂಂ..... ಒಬ್ಬರನ್ನೊಬ್ರು ಪ್ರೀತಿಸ್ತಿದಾರಂತೆ.... ಭಟ್ಟನೂ ಒಪ್ಪಿದ್ದಾನೆ." ಎಂದು ಮತ್ತೆ ಸಂಜ್ಞೆಯ ಮೂಲಕ ತಿಳಿಸಿದಳು.

"ಮತ್ತಿನ್ನೇನು! ಆಗಲಿ ಬಿಡು" ಎನ್ನುವಂತೆ ಕೈ ಅಲುಗಾಡಿಸಿದ.

"ನೀವು ಸರಿಯಾಗಿದ್ದಿದ್ರೆ, ಕಿಶೋರ ಯಾಕೆ ಹೀಗಾಡ್ತಿದ್ದ." ಎಂದು ಮನದಲ್ಲೇ ಹೇಳಿಕೊಂಡು ಎದ್ದಳು.

* * *

ಅಧ್ಯಾಯ – ಮೂವತ್ತೊಂದು

ಚಾಣಕ್ಯ ತಂತ್ರ ಫಲಕೊಟ್ಟಿತು

ಭಟ್ಟ ಪ್ರೇಮಳೊಂದಿಗೆ ಮಾತನಾಡಲು ಅವಳ ರೂಮ್‌ಗೆ ಬಂದ. ಅವಳು ಎದ್ದು ಕೂರಲು ನೋಡಿದಳು. ಆಯಾಸದಿಂದ ಏಳಲಾಗಲಿಲ್ಲ.

"ಮಲಗಿ ಮಲಗಿಯೇ ನಿನ್ನ ಆರೋಗ್ಯ ಸುಧಾರಿಸ್ಲಿಲ್ಲ. ಸ್ವಲ್ಪವಾದ್ರೂ ಎದ್ದು ಓಡಾಡಬಾರ್ದಾ?" ಹೆಂಡತಿಯ ಮೇಲೆ ರೇಗಿದ.

"ನಾನೇನು ಬೇಕೂಂತ ಮಲಗ್ತೀನಾ? ನನ್ನ ಕೈಲಿ ಆಗ್ತಾನೇ ಇಲ್ಲ." ನರಳಿದಳು.

"ಅದ್ರಿಂದ್ಲೇ..... ನಿನ್ನ ಮಕ್ಕಳು ಮನಸೋ ಇಚ್ಛೆ ಬೆಳೆದ್ರು.... ಮನೆ ಮರ್ಯಾದೇನ ಬೀದಿಪಾಲು ಮಾಡಿದ್ರು....."

"ಸದಾ ಹಂಗಿಸಿ ನನ್ನನ್ನೇ ಅನ್ಬೇಡಿ. ಸುಮ್ಸುಮ್ನೆ ನೀವು ನನ್ನ ರೂಮ್‌ಗೆ ಬರೋರಲ್ಲ. ಏನ್ಹೇಳಿ." ಸಿಡುಕಿದಳು.

"ಚಿನ್ಮಯಿಯ ಮದ್ವೆ ಗೊತ್ತು ಮಾಡಿದೀನಿ....."

"ಅವ್ಸರ ಏನು? ಪಿ.ಯು.ಸಿ. ಪರೀಕ್ಷೆಯಾದ್ರೂ ಮುಗೀಲಿ.....?"

"ಯಾಕೆ? ಈಗ ಅವಳು ಯಾವ ಸ್ಥಿತೀಲಿದಾಳೆ ಅಂತ ನಿಂಗೊತ್ತಿಲ್ವಾ?"

"ಏನೋ ಅವಳ ದುರದೃಷ್ಟ. ನಡೀಬಾರ್ದು ನಡೀತು..... ಹಾಗಂತ ಮದ್ವೆ ಮಾಡೋ ವಯಸ್ಸಾ ಅವಳದ್ದು.....?"

"ತಾಯಿಯಾಗೋ ವಯಸ್ಸೂ ಅಲ್ಲ ಅವಳದ್ದು..... ನಿಂಗೊತ್ತಿಲ್ವ ಅವಳು ಗರ್ಭಿಣಿ ಅಂತ....."

"ಹೌದಾ? ಅಯ್ಯೋ ದೇವ್ರೇ..... ಯಾಕೆ ಹೀಗಾಯ್ತು?" ಪ್ರೇಮಾ ಕಣ್ಣು ಕಣ್ಣು ಬಿಟ್ಟಳು.

"ಆ ನಿನ್ನ ದೇವ್ರೇ ಹೀಗೆ ಎಲ್ಲಾ ಮಾಡಿರೋದು..... ಅದಕ್ಕೇ ಆದಷ್ಟು ಬೇಗ ಮದುವೆ ಮಾಡಿಬಿಡೋಣ ಅಂತ ಅಂದ್ಕೊಂಡಿದೀನಿ....."

"ಗಂಡಿನವರು ಯಾರು? ಯಾವಾಗ ಮನೆಗೆ ಬಂದಿದ್ರು? ನಂಗೊಂದೂ ತಿಳೀಲೇ ಇಲ್ಲ."

"ಕಿಶೋರ, ನಮ್ಮ ಕಾಮಾಕ್ಷಿಯ ಮಗ."

"ಕಿಶೋರನಾ.....? ಕಾಮಾಕ್ಷಿ ನನಗೆ ಹೇಳಲೇ ಇಲ್ಲವಲ್ಲ..."

"ಕಾಮಾಕ್ಷಿಗೆ ಈ ಮದುವೆ ಇಷ್ಟವಿಲ್ಲಾಂತ ಕಾಣುತ್ತೆ. ಮಗನಿಗೋಸ್ಕರ

ಒಪ್ಕೊಂಡಿದಾಳೆ....."

"ಹಾಗಾದ್ರೆ ಬೇಡ ಬಿಡಿ.... ಚಿನ್ಮಯಿ ಖಂಡಿತಾ ಅಲ್ಲಿ ಸುಖವಾಗಿರುಲ್ಲ."

"ಸದ್ಯಕ್ಕೆ ಚಿನ್ಮಯಿ ಇಲ್ಲೇ ನಮ್ಮ ಮನೇಲೇ ಇರ್ತಾಳೆ....."

"ಮದುವೆ ಎಲ್ಲಿ.....?"

"ಸಬ್ ರಿಜಿಸ್ಟ್ರಾರರ ಆಫೀಸ್‌ನಲ್ಲಿ.... ನೆಂಟರಿಷ್ಟರನ್ನು ಕರೆದು ಅದ್ದೂರಿಯಾಗಿ ಮದುವೆ ಮಾಡುವ ಮನಸ್ಸಿಲ್ಲ ನನಗೆ."

"ಕಾಮಾಕ್ಷಿಗೆ ಈ ವಿಷಯ ಗೊತ್ತಾ......?"

"ಇಲ್ಲ. ಅವಳು ಈ ಕಡೆ ಬಂದೇ ಇಲ್ಲ. ಅವಳಿಗೆ ಹೇಳಿ ಕಳಿಸಿ, ಅವಳ ಹತ್ರ ಮಾತನಾಡು..... ಅದನ್ನ ಹೇಳೋಕೆ ಅಂತಲೇ ಬಂದದ್ದು...." ಎನ್ನುತ್ತಾ ಹೊರಬಂದ. ಪ್ರೇಮಾ ಮಲಗಿದ್ದಲ್ಲಿಂದಲೇ ಶಾರದಮ್ಮನನ್ನು ಕರೆದಳು.

"ಇದೇನು ಶಾರದಮ್ಮ ನಂಗೆ ಗೊತ್ತಾಗ್ಲೇ ಇಲ್ಲ... ಚಿನ್ಮಯೀ..... ಗರ್ಭಿಣಿ ಯಾಗಿದಾಳಂತೆ. ನಿಮಗೂ ಗೊತ್ತಾಗ್ಲಿಲ್ವಾ?" ಆಕೆ ತಲೆತಗ್ಗಿಸಿದಳು.

"ನನಗ್ಯಾಕೆ ಹೇಳ್ಲಿಲ್ಲ ಶಾರದಮ್ಮ..... ನಾನಿನ್ನೂ ಬದುಕಿದೀನಿ."

"ನಿಮ್ಮ ಮನಸ್ಸಿಗೆ ನೋವಾಗುತ್ತೆ ಅಂತ..... ಹೇಳ್ಲಿಲ್ಲ....."

"ಎಲ್ಲಿ ಅವಳನ್ನು ಕರೀರಿ....."

"ಅವಳು ಮನೇಲಿಲ್ಲ. ಪ್ರಶಾಂತನ ಮನೆಗೆ ಹೋಗಿದಾಳೆ."

"ಪ್ರಶಾಂತಂಗೆ ಈ ವಿಷಯ ಗೊತ್ತಾ? ನಮ್ಮ ಯಜಮಾನ್ರಿಗೆ ಯಾರು ಹೇಳಿದ್ರು?"

"ಹೂಂ ಗೊತ್ತಿದೆ..... ರಾಯ್ರಿಗೆ ನಾನೇ ಹೇಳ್ದೆ. ನಾನು ಚಿನ್ಮಯಿಗೆ ಔಷಧಿ ಕೊಡಿಸೋಣ ಅಂತಂದ್ಕೊಂಡೆ. ಆದರೆ ಅವಳು ಒಪ್ಪಲಿಲ್ಲ."

"ಯಾರದ್ದೋ ಮಗುವಿಗೆ ತಾಯಿಯಾಗುವ ಸಂಭ್ರಮ ಯಾಕಂತೆ? ಅವಳು ಬಂದ ಕೂಡ್ಲೇ ಹೇಳಿ. ನಾನು ಅವಳ್ಗೆ ತಿಳುವಳಿಕೆ ಹೇಳ್ತೀನಿ." ಅಷ್ಟು ಮಾತನಾಡಿ ಸುಸ್ತಾಗಿತ್ತು. ಕಣ್ಣು ಮುಚ್ಚಿ ಮಲಗಿದಳು. "ಶಾರದಮ್ಮ ಸ್ವಲ್ಪ ನೀರು ಕೊಡ್ತೀರಾ.....?"

ಶಾರದಮ್ಮ ಎಬ್ಬಿಸಿ ಕೂರಿಸಿ, ಸ್ವಲ್ಪ ನೀರನ್ನು ಕುಡಿಸಿದಳು...... "ಶಾರದಮ್ಮ ನೀವಾದ್ರೂ ನಮ್ಮ ಯಜಮಾನ್ರಿಗೆ ಹೇಳಿ..... ದೇವಸ್ಥಾನದಲ್ಲಾದ್ರೂ ಮದ್ವೆ ಮಾಡ್ಸಿ ಅಂತ....."

"ಯಾರ ಮದುವೆ?"

"ಯಾಕೆ ನಿಮಗ್ಗೊತ್ತಿಲ್ವ? ಚಿನ್ಮಯಿ ಮದುವೇನ ಗೊತ್ತು ಮಾಡಿದಾರಂತೆ......"

"ಹೌದಾ? ಯಜಮಾನ್ರು ನಂಗೆ ಹೇಳ್ಲೇ ಇಲ್ಲ. ಹುಡ್ಗ ಯಾರು? ಎಲ್ಲಿದಾನೆ?"

"ಹುಡ್ಗ ನಮ್ಮ ಕಾಮಾಕ್ಷಿಯ ಮಗ ಕಿಶೋರ.... ಕಾಮಾಕ್ಷಿಗೂ ಗೊತ್ತಿಲ್ಲ

ಅಂತಂದ್ರು."

"ಅದ್ಹೇಗೆ ಸಾಧ್ಯ ಪ್ರೇಮಕ್ಕ.....?"

"ನಮ್ಮ ಯಜಮಾನ್ರ ವರ್ತನೆಯೇ ಹಾಗೆ..... ಯಾರ್ಗೂ ಏನೂ ಹೇಳುಲ್ಲ. ವಿದ್ಯಾಳ ಮದ್ವೆ ಸಮಯದಲ್ಲಿ ನೋಡಿದ್ರೋ ಇಲ್ವೋ...... ಆದ್ರೂ ನಂಗೆ ಏನೋ ಆತಂಕವಾಗುತ್ತೆ ಶಾರದಮ್ಮ. ಅವ್ರಿಗೆ ಕಿಶೋರನ್ನ ಕಂಡ್ರೆ ಅಷ್ಟಕಷ್ಟೇ...... ವಿದ್ಯಾಳ ಮದ್ವೆ ಸಮಯದಲ್ಲಿ ಏನೇನು ರಂಪ ನಡೀತು..... ಅಂಥಾದ್ರಲ್ಲಿ...."

"ಈಗ ಚಿನ್ಮಯಿಯ ಪರಿಸ್ಥಿತೀನ ನೋಡಿ ಕಿಶೋರನ್ನ ಒಪ್ಪಿಸಿರಬಹುದು.."

"ಚಿನ್ಮಯೀನಾದ್ರೂ ಕೇಳ್ಬೇಡ್ವಾ? ಅವಳ್ಗೆ ಇಷ್ಟವಿಲ್ಲದಿದ್ರೆ ಅವನ್ಜೊತೆ ಹೇಗೆ ಸಂಸಾರ ಮಾಡ್ತಾಳೆ? ಒಟ್ನಲ್ಲಿ ಏನೇನೋ ನಡೆದ್ಹೋಯ್ತು...."

"ಅಗೋ ಚಿನ್ಮಯಿ ಬಂದ್ಲು..... ಚಿನ್ಮಯೀ ಬಾಯಿಲ್ಲಿ...." ಶಾರದಮ್ಮ ಕರೆದರು. ಪ್ರೇಮಾ ಮೇಲಿನಿಂದ ಕೆಳಗೆ ಮಗಳನ್ನು ನೋಡಿದಳು. ನೋಟದಲ್ಲಿ ವ್ಯಥೆಯಿತ್ತು....

"ಚಿನ್ಮಯೀ, ನಾನು ನಿನ್ನ ತಾಯಿ ಕಣೇ..... ನನಗೂ ಹೇಳ್ಬಾರ್ದಾಗಿತ್ತಾ..... ಆದಷ್ಟು ಬೇಗ ಆ ಅನಿಷ್ಟಾನ ತೆಗೆಸ್ಬಾಕು..... ಇಲ್ದಿದ್ರೆ ಮರ್ಯಾದೆ ಬರುಲ್ಲ."

"ಅದನ್ನು ತೆಗೆಸಿ ಬಿಟ್ರೆ ಮರ್ಯಾದೆ ವಾಪಸ್ಸು ಬರುತ್ತೇನಮ್ಮ."

"ತಲೆಹರಟೆ ಮಾತಾಡ್ಬೇಡ. ನೀನಿನ್ನೂ ಚಿಕ್ಕೋಳು. ಪ್ರಪಂಚ ಜ್ಞಾನ ಏನೂಂತ ನಿಂಗೆ ಗೊತ್ತಿಲ್ಲ. ಕಾಲೇಜ್ಗೆ ಹೇಗೆ ಹೋಗ್ತೀಯಾ? ಕೇಳ್ದೋರ್ಗೆ ಏನು ಹೇಳ್ತೀಯ?"

"ಯಾಕೆ ಚಿಂತಿಸ್ತೀಯ. ಹೇಗೋ ಆಗುತ್ತೆ...."

"ಏನು ಹೇಗೋ ಆಗುತ್ತೆ.....? ನಿಮ್ಮಪ್ಪ ನಿನ್ನ ಮದ್ವೇನ ಗೊತ್ತು ಮಾಡಿದಾರೆ..... ಅವನ್ಗೆ ನೀನು ಮದ್ವೆಗ್ಮುಂಚೇನೇ ಬಸ್ರಿಯಾಗಿದ್ದೆ ಅಂತ ತಿಳಿದ್ರೆ..... ನಿನ್ನನ್ನ ಇಟ್ಕೋತಾನಾ?"

"ಅಪ್ಪ ಮದ್ವೆ ಗೊತ್ತು ಮಾಡಿದಾರಾ......? ನಾನು ಮದುವೆಯಾಗುಲ್ಲ....."

"ಮದ್ವೆ ಇಲ್ಲದೇ ತಾಯಿಯಾಗ್ತೀಯಾ? ನಾಚಿಕೆಗೇಡು. ಮೊದಲು ಶಾರದಮ್ಮನ ಜತೆ ಹೋಗಿ ಔಷದ ತಗೋ..... ಎಲ್ಲಾ ಸರಿ ಹೋಗುತ್ತೆ."

"ಇಲ್ಲಮ್ಮ. ನಂಗೆ ಭಯ ಆಗುತ್ತೆ.....ನನಗೆ ಯಾವ ಔಷಧಿಯೂ ಬೇಡ..."

"ಹಠ ಮಾಡ್ಬೇಡ ಚಿನ್ಮಯೀ.... ಕಾಮಾಕ್ಷಿ ತುಂಬಾ ಸೂಕ್ಷ್ಮ. ಯಾರೂ ಹೇಳ್ದೇನೇ ಅವಳ್ಗೆ ಎಲ್ಲಾ ಗೊತ್ತಾಗುತ್ತೆ. ಕಿಶೋರ ಕೇಳಿದ್ರೆ ಏನ್ಹೇಳ್ತೀಯ.....?"

"ಕಿಶೋರ..... ಅವನ್ಗ್ಯಾಕೆ ಹೇಳ್ಬೇಕು.....?"

"ಯಾಕೇಂದ್ರೆ ನಿಮ್ಮಪ್ಪ ಅವನ್ಜೊತೇನೇ ನಿನ್ನ ಮದ್ವೇನ ಗೊತ್ಮಾಡಿರೋದು." ಅವಳು ಮಾತು ಮುಗಿಸುವ ಮೊದಲೇ, ಚಿನ್ಮಯೀ ತನ್ನ ರೂಮ್‌ಗೆ ಹೋಗಿ, ಬಾಗಿಲನ್ನು ಹಾಕಿಕೊಂಡು ಬಾಗಿಲಿಗೆ ಒರಗಿ ಸಮಾಧಾನದ ಉಸಿರನ್ನು ಬಿಟ್ಟಳು.

ಅಂತೂ ಕಿಶೋರ ಅಪ್ಪನನ್ನು ಒಪ್ಪಿಸಿದಾನೆ. ಇನ್ನು ಯಾವ ಆತಂಕವೂ ಇಲ್ಲ.... ನಯವಾಗಿ ತನ್ನ ಹೊಟ್ಟೆಯ ಮೇಲೆ ಕೈಯಾಡಿಸಿಕೊಂಡಳು..... ನಿರಾತಂಕದ ನಿಟ್ಟುಸಿರು ಹೊರ ಬಂತು. ಆದರೆ ಇದೆಲ್ಲಾ ಹೇಗಾಯ್ತು? ಅಪ್ಪ ಹಾಗೂ ಕಿಶೋರನ ನಡುವೆ ಏನು ಮಾತುಕತೆಗಳು ನಡೆದವು..... ಕಿಶೋರನ್ನ ಕೇಳಿದ್ರೆ ತಿಳಿಯುತ್ತೆ. ಕಾಮಾಕ್ಷಿ ಅತ್ತೆ ಒಪ್ಪಿಕೊಂಡರೇ.... ಕಿಶೋರ ತಾಯಿಯನ್ನು ಒಪ್ಪಿಸಿರಬಹುದು....

"ಚಿನ್ಮಯೀ..... ಚಿನ್ಮಯೀ....." ಹೊರಗಿನಿಂದ ಶಾರದಮ್ಮನ ಧ್ವನಿ ಕೇಳಿಸಿತ್ತು. ಬಾಗಿಲನ್ನು ತೆರೆದಳು. ಚಿನ್ಮಯಿ ಅಳುತ್ತಿರಬಹುದೆಂದುಕೊಂಡಿದ್ದ ಶಾರದಮ್ಮನಿಗೆ ಆಶ್ಚರ್ಯವಾಗಿತ್ತು..... ಅವಳ ಮುಖದ ನಿರ್ಮಲತೆಯನ್ನು ಗಮನಿಸಿದರು.

"ಚಿನ್ಮಯೀ... ಹುಷಾರಾಗಿದೀಯ ತಾನೇ... ಹಾಗ್ಯಾಕೆ ಓಡಿ ಬಂದೆ.... ಬಾಗಿಲನ್ನು ಹಾಕಿಕೊಂಡು ಏನ್ಮಾಡ್ತಿದ್ದೆ..... ನಂಗಂತೂ ವಿಪರೀತ ಗಾಬರಿಯಾಗಿತ್ತು....."

"ಇಲ್ಲ ಶಾರದಮ್ಮ. ನಾನು ಜೀವಕ್ಕೆ ಏನೂ ಅಪಾಯ ಮಾಡಿಕೊಳ್ಳಲ್ಲ."

"ಕಿಶೋರ ನಿನಗೆ ಒಪ್ಪಿಗೇನಾ ಚಿನ್ಮಯೀ....."

"ಅಪ್ಪ ಗೊತ್ತು ಮಾಡಿದಾರೆ ಅಂತ ಅರಿದ್ಮೇಲೆ ಇನ್ನೇನು ಮಾಡೋಕಾಗುತ್ತೆ? ಈಗ ನನಗೆ ಬೇರೆ ಉಪಾಯವೇ ಇಲ್ಲವಲ್ಲ." ಮನಸ್ಸಿನ ನೆಮ್ಮದಿಯನ್ನು ಹೊರ ಗೆಡವಲಿಲ್ಲ.

"ಹಾಗಲ್ಲ ಚಿನ್ಮಯೀ..... ನಿನಗೆ ಇಷ್ಟವಿಲ್ಲದಿದ್ರೆ ಒಪ್ಕೋಬೇಡ.... ಕಿಶೋರ ನಿನಗೆ ತಕ್ಕವನಲ್ಲ ಅಂತ ನಿಮ್ಮಮ್ಮಂಗೆ ಚಿಂತೆ."

"ಇದೇ ಕಿಶೋರನ್ನ ವಿದ್ಯಾ ಮದುವೆಯಾಗಬಯಸಿದ್ದಳು. ಆಗ ಅಮ್ಮನಿಗೂ ಒಪ್ಪಿಗೆ ಇತ್ತು. ಈಗ್ಯಾಕೆ ಒಪ್ಗೆ ಇಲ್ಲ?"

"ಆ ಮಾತನ್ನು ಬಿಡು. ನಿನಗೂ ನಿನ್ನ ಭಾವನಂಥ ಒಳ್ಳೆ ಗಂಡನ್ನ ಹುಡು ಕೋಣ. ನಾನು ನಿಮ್ಮ ತಂದೆ ಹತ್ರ ಮಾತಾಡ್ತೀನಿ."

"ಏನೂ ಬೇಡ ಶಾರದಮ್ಮ.... ಭಾವನಂಥವರು ನನಗೆಲ್ಲಿ ಸಿಗ್ತಾರೆ? ನನ್ನ ಯೋಗ್ಯತೆಗೆ ಕಿಶೋರನೇ ಸರಿ..... ಈಗ ಅವ್ನು ಹೇಗೂ ಓದ್ತಾ ಇದಾನೆ.... ಅವನು ಲಾ ಓದಿ ಲಾಯರ್ರಾದರೆ ಅಪ್ಪನಿಗೂ ಸಂತೋಷವಾಗುತ್ತೆ."

"ಮುದುಕಿ ಥರ ವೈರಾಗ್ಯ ಆಡ್ಬೇಡ ಚಿನ್ಮಯೀ..... ನಿಧಾನವಾಗಿ ಯೋಚಿಸು.... ದುಡುಕಿ ನಿರ್ಧಾರ ತಗೋಬೇಡ." ಚಿನ್ಮಯಿ ಉತ್ತರಿಸಲಿಲ್ಲ. ಶಾರದಮ್ಮ ಅವಳನ್ನೇ ವಿಚಿತ್ರವಾಗಿ ನೋಡಿ ಕೆಳಗಿಳಿದು ಹೋದರು.

* * *

ಕಾಮಾಕ್ಷಿ ಸಿವಿಲ್ ಮದುವೆ ಎಂದೊಡನೆ ಮೂಗು ಮುರಿದಳು. "ಮದುವೆಗೂ ನಿನ್ನ ಕಾನೂನನ್ನು ತರಬೇಡ. ನಂಗೆ ಅಸಹ್ಯ ಆಗುತ್ತೆ."

"ವಾಲಗ ಊದಿಸಿ, ಮೆರವಣಿಗೆ ಮಾಡಿಸಿ ಮದುವೆ ಮಾಡುವ ಮನಸ್ಸಿಲ್ಲ

ನನಗೆ. ಕಿಶೋರ ಒಪ್ಕೊಂಡಿದಾನಲ್ಲ. ಇನ್ನು ನಿಂದೇನು ತಂಟೆ?"

"ಕಿಶೋರ ಚಿನ್ಮಯೀನ ಒಪ್ಕೊಂಡಿದಾನಲ್ಲ ಅಂತ ನಾನೂ ಒಪ್ಕೊಂಡಿದೀನಿ. ..... ನಿನ್ನ ಅಂತಸ್ತಿಗೆ ತಕ್ಕಂತೆ ಮದುವೆ ಮಾಡಿಕೊಡು ಅಂತ ನಾನೇನೂ ಕೇಳುಲ್ಲ. ಲಕ್ಷಣವಾಗಿ ದೇವಸ್ಥಾನದಲ್ಲಾದರೂ ಮದುವೆ ಮಾಡಿಕೊಡು. ಕೋರ್ಟ್‌ನಲ್ಲಿ ಎಂಥಾ ಮದುವೆ.....?"

"ನಿನ್ನಕಡೆಯ ನೆಂಟರಿಷ್ಟರು ಯಾರಾದ್ರೂ ಬರೋರಿದಾರಾ?"

"ಕರೆದ್ರೆ ಬರ್ತಾರೆ. ನನಗೂ ಒಬ್ಬನೇ ಮಗ. ನಮ್ಮ ಮನೇಲಿ ನಡೆಯುತ್ತಿರುವುದು ಮೊದಲನೆಯ ಮದುವೆ. ನಿನಗಂತೂ ಯಾವ ಅಕ್ಕರಾಸ್ತೆಯೂ ಬೇಡಾಂತಾದ್ರೆ... ನಮ್ಮ ಕಡೆಯವ್ರು ಆಡ್ಕೊಳ್ಳಲ್ವಾ......?"

"ಸರಿ ಹಾಗಾದ್ರೆ, ಮದುವೆ ಖರ್ಚಿನ ಬಾಬ್ತು ಕೊಡ್ತೀನಿ. ನೀವುಗಳೇ ಅದೇನೇನು ಮಾಡ್ತೀರೋ ಮಾಡಿ..... ನಾನಂತೂ ಏನೂ ಮಾಡಲು ಸಿದ್ಧನಿಲ್ಲ."

"ಹಾಗಂದ್ರೆ ಹೇಗೋ ಭಟ್ಟ, ನಾವು ಗಂಡಿನವರು, ನಮಗೂ ಮರ್ಯಾದೆ ಬೇಡ್ವಾ....! ಪ್ರಶಾಂತಂಗೆ ಹೇಳು, ಅವನು ಎಲ್ಲಾ ರೆಡಿ ಮಾಡ್ತಾನೆ. ನಿನಗೆ ಅವನ್ಹತ್ರ ಮಾತಾಡೋಕೆ ಇಷ್ಟವಿಲ್ಲದಿದ್ರೆ ಶಾರದಮ್ಮನ ಹತ್ರ ಹೇಳಿ ಕಳ್ಸು."

"ಸರಳವಾಗಿ ಮದುವೆಯಾದ್ರೆ ಖರ್ಚು ಉಳಿಯುತ್ತೆ. ಆ ಖರ್ಚಿನ ಹಣವನ್ನು ಕಿಶೋರನಿಗೇ ಕೊಡ್ತೀನಿ. ಅವನು ಬ್ಯಾಂಕ್‌ನಲ್ಲಿ ಹಾಕಲಿ. ಬಡ್ಡಿ ಬರುತ್ತೆ. ಅವನಿಗೂ ಆದಾಯ ಆಗುತ್ತೆ."

"ಸರಿ. ಕಿಶೋರನ್ನ ಕೇಳ್ತೀನಿ. ಅವನಗೆ ಹಣ ಬೇಕಿದ್ದರೆ ತೆಗೆದುಕೊಳ್ಳಲಿ. ಆದರೆ ನಮಗೆ ಊಟ, ಉಡುಗೊರೆಗೆ ಖೋತಾ ಹಾಕ್ಬೇಡ್ವೋ ಮಾರಾಯ......"

"ವ್ಯಂಗ್ಯದ ಮಾತು ಬೇಡ ಕಾಮಾಕ್ಷಿ..... ಕಿಶೋರ ಒಪ್ಕೊಂಡಿದ್ದಕ್ಕೇ ನಾನೂ ಒಪ್ಗೆ ಕೊಟ್ಟಿದ್ದು. ಈಗ ನಿನ್ನ ಕೈ ಮೇಲಿದೆ ಅಂತ ಬಾಯಿಗೆ ಬಂದದ್ದು ಮಾತಾಡಬೇಡ. ತಿಳೀತಾ?"

"ತಿಳೀತು. ಆದರೆ ನೀನೇನು ಅಂತ ನಿನಗೆ ತಿಳಿಸೋಕೆ ನಾನೇ ಸರಿ....."

ಕಿಶೋರನಿನಗೆ ತಾಯಿಯ ವರ್ತನೆ ಇಷ್ಟವಾಗಲಿಲ್ಲ. ಆದರೂ ಅವಳ ಮನಸ್ಸಿಗೆ ನೋವಾಗದಿರಲಿ ಎಂದುಕೊಂಡು ಭಟ್ಟ ಕೊಟ್ಟ ಹಣದಲ್ಲಿ ತಾಯಿಗೆ ಒಳ್ಳೆಯ ರೇಷ್ಮೆ ಸೀರೆ, ತಂದೆಗೆ ಶರ್ಟ್, ಪಂಚೆ, ತಂಗಿಗೆ ಜರತಾರಿಯ ಲಂಗದ ಬಟ್ಟೆಗಳನ್ನು ತಂದ. ಚಿನ್ಮಯಿಗೆ ಎರಡು ರೇಷ್ಮೆ ಸೀರೆಗಳನ್ನು ತಂದ. ಆಹ್ವಾನ ಪತ್ರಿಕೆಯನ್ನು ಪ್ರಿಂಟ್ ಹಾಕಿಸಿ, ತನ್ನ ಹತ್ತಿರದ ಬಂಧುಗಳಿಗೆ ಕಳಿಸಿಕೊಟ್ಟ. ಹಾಗೇ ವಿದ್ಯಾಳಿಗೆ ಮರೆಯದೇ ಆಹ್ವಾನ ಪತ್ರಿಕೆಯನ್ನು ಕಳಿಸಿದ.

* * *

ಆಹ್ವಾನ ಪತ್ರಿಕೆ ತಲುಪಿದ ಕೂಡಲೇ ವಿದ್ಯಾ ದಿನೇಶನೊಂದಿಗೆ ಹೊರಟು

ಬಂದಿದ್ದಳು. ಚಿನ್ಮಯಿಗೆ ಮದುವೆ! ಅದೂ ಈ ಕಿಶೋರನ ಜತೆ! ಅವಳಿಗೆ ಬಿಡಿಸಲಾಗದ ಒಗಟಿನಂತೆ ಕಾಡಿತ್ತು. ತೀರಾ ನಿತ್ರಾಣವಾಗಿ ಮಲಗಿದ್ದ ತಾಯಿಯನ್ನು ಕಂಡು ಅಳು ಬರುವಂತಾಗಿತ್ತು. ಆ ನಿತ್ರಾಣದಲ್ಲೂ ಪ್ರೇಮಾ ಮಗಳನ್ನು ಕಣ್ತುಂಬಾ ನೋಡಿ ತಬ್ಬಿಕೊಂಡು ಅತ್ತಳು.

"ಯಾಕಮ್ಮಾ..... ಹೀಗಾಗಿದೀಯ..... ಇದೆಲ್ಲಾ ಏನು? ನಿಂಗೆ ಹುಷಾರಿಲ್ಲ ಅಂತ ತಿಳಿಸ್ಬಾರ್ದಾಗಿತ್ತಾ..... ಏನಾಗಿದೆ......?"

"ನನಗೆ ಸಕ್ಕರೆ ಕಾಯಿಲೆ. ಜತೆಗೆ ನಾನಾ ಚಿಂತೆಗಳು.... ನನಗೆ ಬದುಕುವ ಆಸೆಯೇ ಇಲ್ಲ ವಿದ್ಯಾ....."

"ಹಾಗೆಲ್ಲಾ ಮಾತಾಡ್ಬೇಡಮ್ಮ. ಈಗೆಂಥ ಚಿಂತೆ...... ಪ್ರಶಾಂತ ಇಲ್ಲೇ ಬಂದಿದಾನಲ್ಲ...."

"ಬಂದ್ರೇನು! ಅವನ ಹೆಂಡ್ತಿ, ಮಗು, ಅವನ ಸಂಸ್ಸಾರ ಅವನಿಗೆ ಹೆಚ್ಚು. ಮನೆಯೊಳಗೆ ಕಾಲಿಟ್ಟಿಲ್ಲ. ನನ್ನ ಕೈಲಾದಾಗ ನಾನೇ ಕಂಪೌಂಡ್ ಮೂಲೇಲಿ ನಿಂತು ಮಾತಾಡ್ತಿದ್ದೆ. ಈಗ ಅದೂ ಇಲ್ಲ. ಅಲ್ಲದೇ ಈ ಚಿನ್ಮಯಿಯ ದೆಸೆಯಿಂದ ನನಗೆ ಮಾತು ಸಹ ಬೇಡವಾಗಿದೆ."

"ಏನಾಗಿದೆಯಮ್ಮ ಚಿನ್ಮಯಿಗೆ? ಅವಳಿಗೇನು ಅವಸರ ಮದುವೆಗೆ? ಅಲ್ದೇ ಈ ಕಿಶೋರನ ಜತೆ? ಅಪ್ಪನೇ ಗೊತ್ತು ಮಾಡಿದ್ರಾ ಹೇಗೆ......?"

"ನಂಗೆ ಮಾತಾಡಿದ್ರೆ ಆಯಾಸ ಆಗುತ್ತೆ. ಕೆಮ್ಮು ಬರುತ್ತೆ. ಹೆಚ್ಚು ಮಾತಾಡ್ಬೇಡಿ ಅಂತ ಡಾಕ್ಟ್ರು ಹೇಳಿದಾರೆ. ಶಾರದಮ್ಮ ಎಲ್ಲಾ ಹೇಳ್ತಾರೆ. ಚಿನ್ಮಯಿ ಒಂದು ಕತೆಯಾಗಿದಾಳೆ......"

"ಚಿನ್ಮಯಿ ಎಲ್ಲಿ, ನಾನು ಅವಳನ್ನೇ ಕೇಳ್ತೀನಿ."

"ಬೇಡ, ಚಿನ್ಮಯಿಯ ಹತ್ತಿರ ಏನ್ಮಾತು! ಒಂದೊಂದ್ಸಾರಿ ಒಂದೊಂದು ಥರ ಮಾತಾಡ್ತಾಳೆ."

"ಅವಳಿಗ್ಯಾಕೆ ಹೆದರ್ಬೇಕು? ನಳಿನಿ ಯಾಕೆ ಹೀಗೆ ಮಂಕಾಗಿದಾಳೆ....."

"ನಳಿನಿ, ಶ್ರೀಕರ ಇಬ್ರೂ ನಮ್ಮ ಮನೆಯ ವಾತಾವರಣದಿಂದ ಸಪ್ಪಗಾಗಿದಾರೆ. ನಡೆಯಬಾರದ್ದು ನಡೆದ್ರೆ ಇನ್ನೇನಾಗುತ್ತೆ?" ಪ್ರೇಮಾ ಕೆಮ್ಮಲು ಶುರು ಮಾಡಿದಾಗ, ವಿದ್ಯಾ ಎದ್ದು ಅಡುಗೆಮನೆಗೆ ಬಂದಳು. ಶಾರದಮ್ಮ ಅವಳಿಗೆ ಕುಳಿತುಕೊಳ್ಳಲು ಮಣೆಯನ್ನು ಹಾಕಿದರು.

"ಹುಷಾರಾಗಿದೀಯ ವಿದ್ಯಾ? ಈಗ ಎಷ್ಟನೇ ತಿಂಗಳು?"

"ಏಳು ತಿಂಗಳು ಇನ್ನೂ ತುಂಬಿಲ್ಲ..... ನಾನು ಇಲ್ಲಿಗೆ ಬರೋದೇ ಬೇಡಾಂತ ಅಂದ್ಕೊಂಡಿದ್ದೆ. ಚಿನ್ಮಯಿ ಮದುವೆಯ ಆಹ್ವಾನ ಪತ್ರಿಕೆ ಬಂತು..... ತತ್‌ಕ್ಷಣವೇ ಬಂದ್ಬಿಟ್ಟೆ...."

"ಯಜಮಾನ್ರು ಆಹ್ವಾನ ಪತ್ರಿಕೆ ಕಳ್ಸಿದ್ರಾ.....? ಯಾರನ್ನೂ ಕರೆಯೋಲ್ಲ ಅಂತಿದ್ರು....."

"ಅಪ್ಪ ಕಳಿಸಿಲ್ಲ. ಕಿಶೋರ ಕಳ್ಸಿದಾನೆ..... ಕಿಶೋರನ ಜತೆ ಚಿನ್ಮಯಿಯಮದ್ವೆ ಅಂದ್ರೆ ನಂಗೆ ನಂಬೋಕೇ ಆಗ್ತಿಲ್ಲ..... ಇದೆಲ್ಲಾ ಹೇಗಾಯ್ತು?"

"ಅದೆಲ್ಲಾ ಒಂದು ದೊಡ್ಡ ಕಥೆ." ಎಂದು, ಚಿನ್ಮಯಿ ಒಂದು ರಾತ್ರಿ ಮನೆಯಿಂದ ಹೊರಗೆಲ್ಲೋ ಇದ್ದು ಬಂದುದು, ಅವಳೀಗ ಗರ್ಭಿಣಿಯಾಗಿರುವುದನ್ನು ತಿಳಿಸಿದಳು.

"ಹೌದಾ? ಯಾರವನು? ಚಿನ್ಮಯಿಗೇಕೆ ಹಾಗೆ ಅನ್ಯಾಯ ಮಾಡಿದರು?"

"ಯಾರೋ ನಿಮ್ಮ ತಂದೆಗೆ ಆಗದವರು ಹೀಗೆ ಮಾಡಿದಾರೆ. ಯಾರು ಅಂತ ಇನ್ನೂ ಪತ್ತೆಯಾಗಿಲ್ಲ. ಚಿನ್ಮಯಿಗೆ ಒದಗಿದ ಕಷ್ಟಕ್ಕೆ ಮರುಗಿ, ಕಿಶೋರ ಅವಳನ್ನು ಮದುವೆಯಾಗಲು ಒಪ್ಕೊಂಡಿದಾನೆ....."

'ಇದೆಲ್ಲಾ ಏನೋ ಕುತಂತ್ರ, ಕಿಶೋರ ನಂಬಿಕಸ್ಥನಲ್ಲ' ಎಂದೆನಿಸಿತ್ತು ವಿದ್ಯಾಳಿಗೆ. ಚಿನ್ಮಯಿಯ ಹತ್ತಿರ ಮಾತಾಡಲೆಂದು ಮಹಡಿಯ ರೂಮ್‌ಗೆ ಬಂದಳು.

"ಏನೇ ಅಕ್ಕಾ ಯಾವಾಗ್ಬಂದ್ಯೇ......" ಎನ್ನುತ್ತಾ ಅವಳ ಉಬ್ಬಿದ ಹೊಟ್ಟೆಯನ್ನೇ ವಿಸ್ಮಯದಿಂದ ನೋಡಿದಳು. "ತುಂಬಾ ಚೆನ್ನಾಗಿ ಕಾಣ್ತಿದೀಯ ಕಣೇ ಅಕ್ಕಾ. ಭಾವನೂ ಬಂದಿದಾರಾ?"

"ಅದೆಲ್ಲಾ ಇರಲಿ. ಅದೇನು ನಿನ್ನ ಕಥೆ. ಹೇಗಾಯ್ತು?" ಮೇಲಿನಿಂದ ಕೆಳಗೆ ಅವಳನ್ನೇ ನೋಡಿದಳು.

"ಈಗ ನಾನೂ ಬಸುರಿ..... ಇನ್ನೊಂದೆರಡು ಮೂರು ತಿಂಗಳ ಅನಂತರ ನಾನೂ ನಿನ್ನ ಹಾಗೇ ಕಾಣ್ತೇನಿ." ಎನ್ನುತ್ತಾ ತನ್ನ ಹೊಟ್ಟೆಯ ಮೇಲೆ ಕೈಯನ್ನಾಡಿಸಿಕೊಂಡಳು.

"ನಿನ್ನ ತಲೆ ಕೆಟ್ಟಿಲ್ಲ ತಾನೇ.... ಇದೆಲ್ಲಾ ತಮಾಷೇನಾ? ಬಸುರಿಯಂತೆ. ಈ ಬಸಿರು ನಿನಗ್ಯಾಕೆ ಬೇಕು? ತೆಗೆಸಿ ಹಾಕು..... ಆಮೇಲೆ ಅದೇನದು ಕಿಶೋರನ ಜತೆ ಮದುವೆ? ಅವನು ಎಂಥೋನು ಅಂತ ನಿಂಗೆ ಗೊತ್ತಿಲ್ವಾ......?"

"ಕಿಶೋರ ಎಂಥೋನಾದ್ರೆ ನಿಂಗೇನು? ಅವನು ನನ್ನ ಗಂಡನಾಗುವವನು. ಅವನು ಈ ಮಗುವಿನ ತಂದೆ."

"ಖಂಡಿತಾ ನಿನಗೇನೋ ಆಗಿದೆ.... ನಿನ್ನ ತಲೆ ಸರಿ ಇಲ್ಲ. ನಾಳೇನೇ ಡಾಕ್ಟರ್ ಹತ್ರ ಕರ್ಕೊಂಡು ಹೋಗ್ತೀನಿ. ಮೊದಲು ಈ ಪಿಂಡವನ್ನು ತೆಗೆಸಿ ಹಾಕು....."

"ನಾನು ಈ ಮೊದಲೇ ಎಲ್ಲರಿಗೂ ಹೇಳಿಯಾಗಿದೆ. ನನಗೆ ಭಯ.... ನಿಂಗೇ ಗೊತ್ತಲ್ಲ ಅಬಾರ್ಷನ್ ಅಂದ್ರೆ ಎಷ್ಟು ನೋವನ್ನನುಭವಿಸಬೇಕೂಂತ.... ಇರಲಿ ಬಿಡು.... ಈ ಮಗು ನಂದು. ನಾನೇ ತಾಯಿ....."

"ತಾಯಿಯಾಗೋ ಆಸೆ ಅಷ್ಟು ಇದ್ರೆ..... ಮದ್ವೆ ಆದ್ಮೇಲೆ ನಾಲ್ಕು ಮಕ್ಕಳನ್ನು ಹೆರು. ಈಗ ಈ ಮಗು ಬೇಡ."

"ಕಿಶೋರನೇ ಒಪ್ಕೊಂಡಿದಾನೆ. ಅವನೇ ಹೇಳಿದ್ರೂ ನಾನು ಅಬಾರ್ಷನ್‌ಗೆ ಒಪ್ಪಲ್ಲ. ನನ್ನ ಸುದ್ದಿಗೆ ಬರಬೇಡ. ನನ್ನ ಪಾಡಿಗೆ ನನ್ನನ್ನು ಬಿಡು."

ವಿದ್ಯಾಳಿಗೆ, ಚಿನ್ಮಯಿಯ ಮಾತುಗಳನ್ನು ಕೇಳಿ ಸಂಕಟವಾಯಿತು. ಆ ದುರಂತ ದಿಂದ ಅವಳಿಗೆ ಬಲವಾದ ಆಘಾತವಾಗಿದೆ. ಅದಕ್ಕೆ ಹೀಗೆಲ್ಲಾ ಮಾತನಾಡುತ್ತಿದ್ದಾಳೆಂದುಕೊಂಡಳು. ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು.

ಅನಂತರ ದಿನೇಶನ ಹತ್ತಿರ ಮಾತನ್ನಾಡಿದಳು. "ಚಿನ್ಮಯೀನ ನೋಡಿದ್ರೆ ನಂಗೆ ಸಂಕಟ ಆಗುತ್ತೆ. ತನಗೇನಾಗಿದೆ ಅನ್ನುವ ಅರಿವೇ ಇಲ್ಲದೆ ಮಾತಾಡ್ತಾಳೆ. ನಾನು ಇಲ್ಲೇ ಇದ್ದರೆ ನನ್ನ ಆರೋಗ್ಯ ಕೆಟ್ಟು ಹೋಗುತ್ತೆ ಅಷ್ಟೇ. ಆದಷ್ಟು ಬೇಗ ಇಲ್ಲಿಂದ ಹೊರಟು ಹೋಗೋಣ....."

"ಹೇಗೂ ಬಂದುದಾಗಿದೆ. ಮದುವೆಗೆ ಇದ್ದು ಹೋಗೋಣ. ಕಿಶೋರನಲ್ಲಿ ಇಂಥ ಒಂದು ಮಾನವೀಯತೆ ಇದೆ ಅಂತ ನನಗೆ ಗೊತ್ತಿರಲಿಲ್ಲ." ಎಂದು ಕಿಶೋರನನ್ನು ಹೊಗಳಿದಾಗ ವಿದ್ಯಾಳ ಮೈಯೆಲ್ಲಾ ಉರಿದು ಹೋಯಿತು.

"ಇಲ್ಲಾರೀ..... ನಾವು ಇಲ್ಲಿ ಇಲ್ಲದೇ ಇದ್ರೂ ಮದುವೆ ನಡೆಯುತ್ತೆ. ಅಮ್ಮನ್ನ ನೋಡಿದ್ರೆ ಹಾಗೆ ಮಲಗಿದಾಳೆ. ಚಿನ್ಮಯಿ ರಂಪ ಮಾಡಿಕೊಂಡಿದಾಳೆ. ಪ್ರಶಾಂತನಿಗೆ ಮನೆಯ ಕಡೆ ಯಾವ ಆಸಕ್ತಿಯೂ ಇಲ್ಲವಂತೆ. ಇದನ್ನೆಲ್ಲ ನೋಡಿದರೆ, ನನ್ನ ತಲೆ ತಿರುಗಿದ ಹಾಗಾಗುತ್ತೆ. ಹೋದ ಸಾರಿ ನಡೆದ ಆಕಸ್ಮಿಕ ನೆನಪಿಗೆ ಬರುತ್ತೆ...... ನನಗೆ ನನ್ನ ಮಗು ಮುಖ್ಯ..... ನಾವು ಇವತ್ತೇ ಊರಿಗೆ ವಾಪಸ್ಸು ಹೊರಟು ಹೋಗೋಣ....."

"ಇವತ್ತೇ ಎಲ್ಲಿ ಹೋಗೋಕಾಗುತ್ತೆ? ನಿನಗೆ ಆಯಾಸವಾದರೆ, ಅದು ಇನ್ನೂ ಕಷ್ಟ. ಈ ರಾತ್ರಿ ನೀನು ಪ್ರಶಾಂತನ ಮನೇಲಿರು. ಅವನ ಹತ್ರ ಮಾತಾಡಿದರೆ, ನಿನ್ನ ಹೃದಯವೂ ಹಗುರವಾಗಬಹುದು." ಆ ಮಾತು ಸರಿ ಎನಿಸಿತು ಅವಳಿಗೆ. ರಾತ್ರಿಯ ಊಟದ ಅನಂತರ ಇಬ್ಬರೂ ಪ್ರಶಾಂತನ ಮನೆಗೆ ಬಂದರು.

ವಿದ್ಯಾ ಸುಗುಣಳ ಕೈಯಲ್ಲಿದ್ದ ಮಗುವನ್ನೇ ಬೆರಗಾಗಿ ನೋಡಿದಳು. ಮುದ್ದಾದ ಬೊಂಬೆಯಂತಿತ್ತು. ಕೈ ಚಾಚಿ ಎತ್ತಿಕೊಂಡು ಕೆನ್ನೆಗೆ ಮುತ್ತಿಟ್ಟಳು.

"ಅತ್ಗೇ ನಿಮ್ಮ ಮಗ ತುಂಬಾ ಮುದ್ದಾಗಿದಾನೆ...."

"ನಿಮ್ಮಣ್ಣ ಚಿಕ್ಕ ಮಗುವಾಗಿದ್ದಾಗ ಹೀಗೇ ಇದ್ರಂತೆ."

"ಇರಬಹುದು ನಂಗೊತ್ತಿಲ್ಲ. ಅಮ್ಮ ಮಗೂನ ಎತ್ಕೊಂಡಿದ್ಲಾ....."

"ಇಲ್ಲ ವಿದ್ಯಾ..... ನಾವೆಂದೂ ಮಗೂನ ಮನೆಗೆ ಕರ್ಕೊಂಡು ಹೋಗಿಲ್ಲ. ದೂರದಿಂದ ನೋಡ್ತಿದಾರೆ ಅಷ್ಟೇ......"

"ಅಮ್ಮ ತೀರಾ ನಿತ್ರಾಣವಾಗಿದಾಳೆ. ನೋಡಿದ್ರೆ ಬೇಸರವಾಗುತ್ತೆ. ಮೊದಲ್ನಿಂದ ಲೂ ಅಷ್ಟೇ ಅವಳಿಗೆ ಸುಖವಿಲ್ಲ. ಮೊಮ್ಮಗೂನ ಎತ್ತಿ ಆಡಿಸೋ ತಾಕತ್ತು ಇಲ್ಲ ಅವಳಿಗೆ...."

"ಇಲ್ಲೇ ನಮ್ಮನೇಗೇ ಬಾ ಅಂತ ಎಷ್ಟೋ ಸಲ ಕರೆದ್ರೂ ಬಂದಿಲ್ಲ. ನಾನೇನ್ಮಾಡ್ಲೀ?"

"ಈಗ್ಲಾದ್ರೂ ನೀನು ಮನೆಗೆ ಹೋಗಿರಬಾರ್ದಾ ಪ್ರಶಾಂತ..... ನೀನು ಅಲ್ಲೇ ಇದ್ದಿದ್ರೆ ಈ ಪ್ರಕರಣ ಖಂಡಿತಾ ನಡೆಯುತ್ತಿರಲಿಲ್ಲ..."

"ಯಾವ ಪ್ರಕರಣ?"

"ಅದೇ ಚಿನ್ಮಯಿ ವಿಷಯ..... ಅಪ್ಪನ ಮೇಲಿನ ದ್ವೇಷಕ್ಕೆ ಅವನ್ಯಾರೋ ಚಿನ್ಮಯಿಗೆ ಅನ್ಯಾಯ ಮಾಡೋದಾ? ಅಪ್ಪ ಯಾಕೆ ಸುಮ್ನಿದಾರೆ? ಯಾರೂಂತ ಗೊತ್ತಾಗಿಲ್ವಾ ಇನ್ನೂ......"

"ವಿದ್ಯಾ ಮತ್ತೆ ಮತ್ತೆ ಅದೇ ಮಾತನ್ನಾಡಿ ಮನಸ್ಸನ್ನು ಕೆಡಿಸ್ಕೋತೀಯ..... ಸುಮ್ನೆ ಮಲಗ್ಬಾರ್ದಾ..... ಈಗ ನಿನ್ನ ಆರೋಗ್ಯವೂ ಮುಖ್ಯ." ಮಧ್ಯೆ ದಿನೇಶ ನುಡಿದಾಗ, ವಿದ್ಯಾ ಸುಮ್ಮನಾದಳು. ನಿಜವಾಗಿ ಏನು ನಡೆದಿದೆ ಅಂತ ಇವಳಿಗೆ ತಿಳಿಯಬಾರದು. ತಿಳಿದರೆ ಮತ್ತೂ ಚಿಂತೆ ಮಾಡ್ತಾಳೆ. ತಿಳಿಯದಿರುವುದೇ ಒಳ್ಳೆಯದು ಎಂದುಕೊಂಡ ಪ್ರಶಾಂತ.

ಬೆಳಗ್ಗಿನ ಜಾವದ ಹೊತ್ತಿಗೆ ವಿದ್ಯಾಳಿಗೆ ಸಣ್ಣಗೆ ನೋವು ಪ್ರಾರಂಭವಾಗಿತ್ತು. ಅವಳು ಭಯದಿಂದ ದಿನೇಶನನ್ನು ಎಬ್ಬಿಸಿದಳು. ತತ್‌ಕ್ಷಣವೇ ಪ್ರಶಾಂತ ಒಂದು ಟ್ಯಾಕ್ಸಿಯನ್ನು ಗೊತ್ತು ಮಾಡಿಕೊಂಡು ಬಂದ. ಸಮೀಪದಲ್ಲಿದ್ದ ಒಂದು ನರ್ಸಿಂಗ್ ಹೋಮ್‌ಗೆ ಅವಳನ್ನು ಸೇರಿಸಿದರು. ಸುಗುಣಳನ್ನು ವಿದ್ಯಾಳ ಜತೆಯಲ್ಲಿ ಬಿಟ್ಟು ದಿನೇಶ, ಪ್ರಶಾಂತ ಮನೆಗೆ ವಾಪಸ್ಸು ಬಂದರು. ಪ್ರಶಾಂತ ತನ್ನ ಮನೆಗೆ ಹೋದ. ದಿನೇಶ, ಅವನ ಮಗುವನ್ನು ಎತ್ತಿಕೊಂಡು ಭಟ್ಟನ ಮನೆಗೆ ಬಂದ. ಭಟ್ಟ ಮೊತ್ತ ಮೊದಲ ಬಾರಿಗೆ ಮೊಮ್ಮಗುವನ್ನು ನೋಡಿದ. ಪ್ರಶಾಂತನ ಪಡಿಯಚ್ಚು. ಅವನು ಮಗುವಾಗಿದ್ದಾಗ ಹೀಗೇ ಇದ್ದನೆಂಬ ನೆನಪು ಬಂತು. ಅವನು ಬಂದಿರಬಹುದೆಂದು ಅತ್ತಿತ್ತ ನೋಡಿದ. ಅವನು ಕಾಣಲಿಲ್ಲ.

"ವಿದ್ಯಾಗೆ ಹೆರಿಗೆ ನೋವು ಶುರುವಾಗಿದೆ. ಅವಳನ್ನು ನರ್ಸಿಂಗ್ ಹೋಮ್‌ಗೆ ಸೇರಿಸಿದೀನಿ. ಸುಗುಣಾ ಅವಳ ಜತೆಗೆ ಇದಾರೆ."

"ಮಗೂನ ನಳಿನಿಯ ಕೈಗೆ ಕೊಡಿ....." ನಳಿನಿ ಮಗುವನ್ನು ಎತ್ತಿಕೊಂಡು ಒಳಗೆ ಹೋದಳು.

"ಅಮ್ಮಾ..... ನೋಡು ಯಾರು ಬಂದಿದಾರೆ? ಎನ್ನುತ್ತಾ ಮಗುವನ್ನು ಪ್ರೇಮಳಿಗೆ ತೋರಿಸಿದಳು.

"ಅರೇ ಪುಟ್ಟಾ...... ಯಾವಾಗ್ಬಂದ್ಯೋ..... ಬಾ" ಎನ್ನುತ್ತಾ ಪ್ರೇಮಾ ಮಗುವನ್ನು ತನ್ನ ತೊಡೆಯ ಮೇಲೆ ಮಲಗಿಸಿಕೊಂಡಳು.

"ಯಾರು ಕರ್ಕೊಂಡ್ಬಂದ್ರೇ ಮಗೂನ...... ಪ್ರಶಾಂತನೂ ಬಂದಿದಾನಾ?" ದನ ಕುಣಿದಿತ್ತು.

"ಇಲ್ಲಮ್ಮ ಭಾವ ಕರ್ಕೊಂಡ್ಬಂದ್ರು. ಅಕ್ಕನ್ನ ನರ್ಸಿಂಗ್ ಹೋಮ್‌ಗೆ ಸೇರಿಸಿದಾರಂತೆ?"

"ಯಾಕೆ ಏನಾಯ್ತು ನಿಮ್ಮಕ್ಕಂಗೆ..... ಅಯ್ಯೋ ದೇವ್ರೇ ಇನ್ನೂ ದಿನ ತುಂಬಿಲ್ಲ ವಲ್ಲ..... ಏನು ಗತಿಯೋ ಭಗವಂತಾ..... ಅಲ್ಲಿ ಅವಳ ಜತೇಲಿ ಯಾರಿದಾರಂತೆ?" ಹಳಹಳಿಸಿದಳು.

"ಅತ್ಗೆ ಅಲ್ಲೇ ಇದಾರಂತೆ...."

"ಅಲ್ಲ ನಮಗೊಂದ್ಮಾತು ತಿಳಿಸ್ಬಾರ್ದಾಗಿತ್ತಾ. ಶಾರದಮ್ಮನ್ನ ಕಳಿಸ್ತಿದ್ದೆ. ನಿಮ್ಮ ಭಾವ ಎಲ್ಲಿ ಕರಿ ಅವರನ್ನ......"

"ಭಾವ..... ಅಮ್ಮ ಕರೀತಿದಾಳೆ ಬರ್ಬೇಕಂತೆ....." ದಿನೇಶ ಬಂದು, ಸಂಕೋಚ ದಿಂದ ರೂಮ್‌ನ ಬಾಗಿಲ ಬಳಿ ನಿಂತ.

"ಯಾಕೆ ಹೀಗಾಯ್ತು? ವಿದ್ಯಾ ಹುಷಾರಾಗಿದಾಳೆ ತಾನೇ?" ಕಳಕಳಿಯಿಂದ ಪ್ರಶ್ನಿಸಿದಳು.

"ಹೂಂ. ಹುಷಾರಾಗಿದಾಳೆ. ಪ್ರಯಾಣದ ಆಯಾಸದಿಂದ ನೋವು ಶುರುವಾಗಿದೆ ಎಂದಿದಾರೆ."

"ನಾನೇ ಬರಬಹುದಾಗಿತ್ತು. ನನ್ನ ಆರೋಗ್ಯ ಚೆನ್ನಾಗಿಲ್ಲ. ಶಾರದಮ್ಮನ್ನ ಕಳಿಸ್ತೀನಿ. ಸುಗುಣಾ ಕೂಡ ಚಿಕ್ಕವಳು. ಅವಳಿಗೇನು ಅನುಭವವಿದೆ.....? ಪ್ರಶಾಂತ ಎಲ್ಲಿ?"

"ಪ್ರಶಾಂತ ಮನೆಗೆ ಹೋಗಿದಾರೆ. ಮತ್ತೆ ನಾವಿಬ್ರೂ ಅಲ್ಲಿಗೇ ಹೋಗ್ತೀವಿ. ಮಗೂನ ಬಿಟ್ಟು ಹೋಗೋಕೆ ಬಂದ್ವಿ......"

ಭಟ್ಟ ಕಾರನ್ನು ಹೊರತೆಗೆಸಿ, ಡ್ರೈವರ್‌ನ್ನು ಕರೆಸಿದ. ದಿನೇಶನೊಂದಿಗೆ ಶಾರದಮ್ಮನೂ ಹೊರಟಳು. ಪ್ರಶಾಂತ ತಾನು ಬೈಕ್‌ನಲ್ಲಿ ಬರುವುದಾಗಿ ಹೇಳಿದ...... ಪ್ರೇಮಾ ಆತಂಕ, ಭಯಗಳಿಂದ ತತ್ತರಿಸಿದಳು. ಇದೆಂಥ ಪರೀಕ್ಷೆ? ವಿದ್ಯಾಳಿಗೆ ಮದುವೆಯ ವಿಷಯವನ್ನು ತಿಳಿಸಿದವರು ಯಾರು? ಇವಳು ಬರದಿದ್ದರೂ ಆಗುತ್ತಿತ್ತು ಎಂದೆಲ್ಲಾ ಚಡಪಡಿಸಿದಳು.

*   *   *

ಅಧ್ಯಾಯ – ಮೂವತ್ತೆರಡು

ಚಿನ್ಮಯಿಯ ಮದುವೆ

ಕಾಮಾಕ್ಷಿಗೆ ವಿಷಯ ತಿಳಿದು ಓಡಿ ಬಂದಳು.

"ಕಾಮಾಕ್ಷಿ ನೀವು ಬಂದದ್ದು ಒಳ್ಳೇದಾಯ್ತು...... ವಿದ್ಯಾ ಈಗಾಗ್ಲೇ ಒಂದು ಬಾರಿ ಕೈ ಸುಟ್ಟು ಕೊಂಡಿದಾಳೆ...... ನೀವು ಆಸ್ಪತ್ರೆಗೆ ಹೋಗಿ ಶಾರದಮ್ಮನ್ನ ಕಳಿಸಿ. ಬೆಳಗ್ನಿಂದ ಒಂದು ತಿಂಡಿ ಸಹ ಮಾಡಿಲ್ಲ....."

"ನಾನೇ ಮಾಡ್ತೀನಿ. ಏನ್ಮಾಡ್ಲಿ ಹೇಳಿ ಪ್ರೇಮಕ್ಕ.... ತಿಂಡಿ ಮಾಡಿಕೊಟ್ಟು ಆಮೇಲೆ ನಾನೇ ಹೋಗ್ತೀನಿ...... ಚಿನ್ಮಯೀ ಏನ್ಮಾಡ್ತಿದಾಳೆ....."

"ಅವಳಿನ್ನೂ ಎದ್ದಿಲ್ಲ ಅಂತ ಕಾಣುತ್ತೆ. ಅವಳ ಮೈಗೂ ಆರಾಮವಿಲ್ಲ......" ಪ್ರೇಮಾ ಮುಜುಗರದಿಂದ ಹೇಳಿದಳು.

"ನಾನು ಹೋಗಿ ನೋಡಿ ಮಾತನಾಡಿಸಿ ಬರ್ತೀನಿ." ಎನ್ನುತ್ತಾ ಕಾಮಾಕ್ಷಿ ಚಿನ್ಮಯಿಯ ರೂಮ್‌ಗೆ ಬಂದಳು. ಮುಸುಕು ಹೊದ್ದು ಮಲಗಿದ್ದ ಚಿನ್ಮಯಿಯನ್ನು ಎಬ್ಬಿಸುವ ಮನಸ್ಸಾಗಲಿಲ್ಲ. ಒಂದುಗಳಿಗೆ ನಿಂತು ಅವಳನ್ನೇ ನೋಡಿದಳು. ನನ್ನ ಮೊಮ್ಮಗನ ತಾಯಿಯಾಗುವವಳು ಎಂಬ ಅಭಿಮಾನ ಮೂಡಿತು. ಆದರೆ ಹೀಗೆ ಕದ್ದು ಮುಚ್ಚಿ ಹುಟ್ಟಿ ಬರುವ ಅವಾಂತರ ಯಾಕೆ ಈ ಮಗುವಿಗೆ.....? ಎಂದು ನಿಂತಲ್ಲಿಂದಲೇ ಗಾಳಿಯಲ್ಲಿ ಕೈಗಳನ್ನು ಚಾಚಿ, ಬೆರಳುಗಳನ್ನು ತನ್ನ ಕೆನ್ನೆಗೆ ಒತ್ತಿಕೊಂಡು ನೆಟಿಗೆಯನ್ನು ತೆಗೆದಳು. ಲಟಲಟನೆ ನೆಟಿಗೆ ಮುರಿದ ಸದ್ದಿಗೆ ಚಿನ್ಮಯಿಗೆ ಎಚ್ಚರ ವಾಯಿತು. ಕಣ್ಣು ಬಿಟ್ಟಳು – ಎದುರಿಗೆ ಕಾಮಾಕ್ಷಿ... ಭಯದಿಂದ ಕಣ್ಣರಳಿಸಿದಳು...

"ಅತ್ತೆ..... ನೀವು....."

"ಹೂಂ. ನಾನೇ ಕಣೇ..... ನನ್ನ ಮುದ್ದಿನ ಸೊಸೆ. ನಿದ್ದೆ ಸಾಕು ಎದ್ದು ಬಾ...... ಅಡುಗೆ ಮನೇಲಿ ಎಲ್ಲೆಲ್ಲಿ ಏನೇನಿದೆ ಅಂತ ಹೇಳು ಬಾ....."

"ಯಾಕೆ? ಶಾರದಮ್ಮ ಎಲ್ಲಿಗೆ ಹೋದ್ರು?"

"ವಿದ್ಯಾಳಿಗೆ ಹೆರಿಗೆ ನೋವು ಪ್ರಾರಂಭವಾಗಿದೆ. ಶಾರದಮ್ಮ ಅವಳ ಜತೆಗೆ ಹೋಗಿದಾರೆ. ಎಲ್ರಿಗೂ ತಿಂಡಿ ಮಾಡ್ಬೇಕು. ಬೇಗ ಎದ್ದು ಮುಖ ತೊಳೆದು ಬಾ....." ಅತ್ತೆಯ ಹಕ್ಕನ್ನು ಪೂರ್ವಭಾವಿಯಾಗಿ ಚಲಾಯಿಸಿದಳು. ಚಿನ್ಮಯಿ ಹೊದಿಕೆ ಯನ್ನು ಸರಿಸಿ ಎದ್ದು ನಿಂತಳು.

"ಈಗ ನಿಂಗೆ ಎಷ್ಟು ತಿಂಗಳು ಚಿನ್ಮಯೀ....?"

"ಆಂ....." ಅರ್ಥವಾಗದವಳಂತೆ ಮುಖ ಮಾಡಿದಳು.

"ಈಗ ಎಷ್ಟು ತಿಂಗಳು ಅಂತ ಕೇಳ್ದೆ.... ನಿನಗೆ ಬಯಕೆ ಸಂಕಟ ಆಗುಲ್ಲವಾ?"

"ಇಲ್ಲ. ಯಾವ ತೊಂದರೆಯೂ ಇಲ್ಲ.... ಎರಡು ತಿಂಗಳು ತುಂಬಿತು....." ಅವಳು ನಾಚಿಕೆಯಿಂದ ನುಡಿದಳು.

"ಯಾವುದಕ್ಕೂ ಸಂಕೋಚ ಪಟ್ಕೋಬೇಡ..... ನಿನಗೆ ಏನು ಬೇಕೋ ಅದನ್ನು ಹೇಳಿಮಾಡಿಸ್ಕೊಂಡು ತಿನ್ನು. ಸರಿಯಾಗಿ ಊಟ ಮಾಡು. ನಿದ್ದೆ ಮಾಡು. ಆಯಾಸ ಪಟ್ಕೋಬೇಡ. ಭಾರ ಹೊರಬೇಡ. ನನ್ನ ಮೊಮ್ಮಗು ಆರೋಗ್ಯವಾಗಿರ ಬೇಕು....."

"ಅತ್ತೆ ಇದನ್ನೆಲ್ಲ ಯಾಕೆ ಹೇಳ್ತಿದೀರಿ......?"

"ಮದುವೆಯಾದ್ಮೇಲೂ ನೀನು ಇಲ್ಲೇ ಇರೋಳು. ನಿನ್ನ ಅಮ್ಮಂಗೆ ಹುಷಾರಿಲ್ಲ. ಶಾರದಮ್ಮ ಎಷ್ಟಾಗಲೀ ಅಡುಗೆಯವರು..... ವಿದ್ಯಾ ಬಾಣಂತನ ಮಾಡಿಸ್ಕೊಳ್ತಾಳೆ. ನಿನ್ನ ಯೋಗಕ್ಷೇಮವನ್ನು ಯಾರು ವಿಚಾರಿಸಿಕೊಳ್ತಾರೆ. ಅದಕ್ಕೇ ಹೇಳ್ದೆ."

"ಅಂದ್ರೇ...... ಮದ್ವೆ ಆದ್ಮೇಲೆ ನಾನು ನಿಮ್ಮ ಮನೇಲಿ ಇರಬೇಕಾಗಿಲ್ವಾ.....!"

"ಬೇಡ. ಆ ಮನೇಲಿ ಜಾಗ ಕಡಿಮೆ..... ಹೀಗೆ ಬೇರೆ ರೂಮ್ ಎಲ್ಲಿದೆ. ದಿನಾ ರಾತ್ರಿ ಕಿಶೋರ ಇಲ್ಲಿಗೆ ಬರುತ್ತಾನೆ....."

"ನಿಮ್ಗೆ ಬೇಜಾರಾ ಅತ್ತೆ....."

"ಮುಂಚೆ ಬೇಜಾರಾಯ್ತು ನಿಜ..... ಆದರೇನು ಮಾಡ್ಲೀ.... ಕಿಶೋರ ಎಲ್ಲಾ ಹೇಳ್ದ.... ಈಗ ನಿಮ್ಮಿಬ್ಬರ ಮದುವೆಯೇ ಈ ಸಮಸ್ಯೆಗೆ ಪರಿಹಾರ...... ನನ್ನ ಮಗನ್ನ ನಿನ್ನ ಮನೆಯವರ ಕೈಗೆ ಒಪ್ಪಿಸ್ತಿದೀನಿ..... ಅವನನ್ನು ಚೆನ್ನಾಗಿ ನೋಡ್ಕೋ." ಅವಳ ಕಣ್ಣುಗಳು ತುಂಬಿದ ಕೊಳಗಳಾಗಿದ್ದವು.

"ಅಳ್ಬೇಡಿ ಅತ್ತೆ. ಕಿಶೋರಂಗೆ ಏನೂ ತೊಂದ್ರೆ ಆಗದ ಹಾಗೆ ನಾನು ನೋಡ್ಕೋಳ್ತೀನಿ."

"ಮದ್ವೆ ಆದ್ಮೇಲೆ ಅವನನ್ನು ಕಿಶೋರ ಅಂತ ಕೂಗೋ ಹಾಗಿಲ್ಲ ತಿಳೀತಾ... ಸೊಸೆ ಮುದ್ದೇ." ಎನ್ನುತ್ತಾ ಅವಳ ಕೆನ್ನೆಗಳನ್ನು ಸವರಿದಳು.

"ಅತ್ತೇ ನೀವು ತುಂಬಾ ಒಳ್ಳೆಯವರು" ಎನ್ನುತ್ತಾ ಚಿನ್ಮಯಿ ಅವಳನ್ನು ತಬ್ಬಿಕೊಂಡಳು. ಕಾಮಾಕ್ಷಿ ಸೊಸೆಯ ಬೆನ್ನ ಮೇಲೆ ಕೈಯಾಡಿಸಿದಳು.

"ನಿನ್ಹತ್ರ ಮಾತಿಗೆ ನಿಂತ್ರೆ ಹೊತ್ತಾಗುತ್ತೆ..... ನಿಂಗೇನು ತಿಂಡಿ ಬೇಕು ಹೇಳು. ಅದನ್ನೇ ಮಾಡೋಣ....."

"ದೋಸೆ ಹಿಟ್ಟನ್ನು ರುಬ್ಬಿ ಇಟ್ಟಿದ್ದರು. ಚಟ್ನಿ ಮಾಡಿದರೆ, ಎಲ್ಲರಿಗೂ

ದೋಸೆ ಆಗುತ್ತೆ."

"ಸರಿ. ಬೇಗ ಬಾ..... ಚಟ್ನಿಗೆ ರುಬ್ಬಿ ಕೊಡೂವಂತೆ." ಕಾಮಾಕ್ಷಿ ಕೆಳಗಿಳಿದು ಹೋದಳು. ಸರಸರನೆ ತೆಂಗಿನಕಾಯಿಯನ್ನು ತುರಿದು ಇಟ್ಟಳು.

"ಅತ್ತೆ, ಮೊದಲು ನಂಗೆ ಕಾಫೀನ ಕೊಟ್ಬಿಡಿ....."

"ಕಾಫಿ ಪಿತ್ತ. ಹೆಚ್ಗೆ ಕುಡೀಬಾರ್ದು......" ಎನ್ನುತ್ತಾ ಅರ್ಧ ಕಪ್‌ನಷ್ಟು ಕೊಟ್ಟಳು. ಇಬ್ಬರೂ ಸೇರಿ ಬಿಸಿ ಬಿಸಿ ದೋಸೆಯನ್ನು ಹೊಯ್ದು, ಕಾಯಿ ಚಟ್ನಿ, ಬೆಣ್ಣೆಯೊಂದಿಗೆ ಎಲ್ಲರಿಗೂ ತಿನ್ನಲು ಕೊಟ್ಟರು. ಚಿನ್ಮಯಿ ಕಾಮಾಕ್ಷಿಯೊಡನೆ ಬೆರೆತು ತಿಂಡಿ ಕೆಲಸವನ್ನು ಮಾಡುತ್ತಿರುವುದನ್ನು ಕಂಡು ಪ್ರೇಮಳಿಗೆ ಮೂಗಿನ ಮೇಲೆ ಬೆರಳನ್ನಿಟ್ಟುಕೊಳ್ಳುವಂತಾಗಿತ್ತು.

ನಳಿನಿ, ಶ್ರೀಕರ ಇಬ್ಬರೂ ಸ್ಕೂಲ್‌ಗೆ ಹೊರಟು ಹೋಗಿದ್ದರು. ಚಿನ್ಮಯಿ ಕಾಲೇಜಿಗೆ ಹೊರಡಲು ಸಿದ್ಧಲಾಗುತ್ತಿದ್ದಳು. "ನೀನು ಇವತ್ತು ಕಾಲೇಜಿಗೆ ಹೋಗಬೇಡ ಚಿನ್ಮಯೀ..... ವಿದ್ಯಾಳಿಗೆ ಯಾವ ಗಳಿಗೇಲಿ ಹೆರಿಗೆ ಆಗುತ್ತೋ ಏನೋ..... ಮನೇಲಿ ನಿಮ್ಮಮ್ಮ ಒಬ್ಬಳೇ..... ನಾನು ಮನೆಗೆ ಹೋಗಿ, ಅಲ್ಲಿಂದ ಆಸ್ಪತ್ರೆಗೆ ಹೋಗ್ತೀನಿ....." ಎನ್ನುತ್ತಾ ಕೈ ಒರೆಸಿಕೊಂಡು ಹೊರಬಂದಳು.

"ಕಾಮಾಕ್ಷೀ..... ಇಲ್ಬನ್ನಿ..... ನಮ್ಮ ಚಿನ್ಮಯಿ ನಿಮ್ಗೆ ಹೊಂದಿಕೊಂಡಿ ರ್ತಾಳಾ.....? ನನಗ್ಯಾಕೋ ಆತಂಕವಾಗುತ್ತೆ......"

"ಇನ್ಮುಂದೆ ಅವಳು ನಮ್ಮ ವಸ್ತು. ಅವಳ ಚಿಂತೆ ನಿಮಗೆ ಬೇಡ ಪ್ರೇಮಕ್ಕ... ನಿಮ್ಮ ಆರೋಗ್ಯ ನೋಡ್ಕೊಳ್ಳಿ...... ಇನ್ನೂ ಚಿಕ್ಕದಲ್ವಾ..... ಹಠ, ಮೊಂಡುತನ ಇದ್ದೇ ಇರುತ್ತೆ. ಹಾಗಂತ ನಾವೂ ಹಠ ಸಾಧಿಸೋಕೆ ಆಗುತ್ತಾ?"

"ಕಾಮಾಕ್ಷಿ, ನಿಮ್ಮ ಉಪಕಾರಾನಾ ಹೇಗೆ ತೀರಿಸ್ಬೇಕೋ ತಿಳೀತಿಲ್ಲ.... ಎಲ್ಲಾ ತಿಳಿದೂ ನೀವು ದೊಡ್ಡ ಮನಸ್ಸು ಮಾಡಿದೀರಿ....."

"ನಾವು ದೊಡ್ಡ ಮನಸ್ಸು ಮಾಡದಿದ್ರೆ ಮಗನ ದ್ವೇಷ ಕಟ್ಕೋಬೇಕಾಗುತ್ತೆ...... ತಿಳುವಳ್ಕೆ ಇಲ್ಲದೇ ಅವಿವೇಕ ಮಾಡಿಕೊಂಡಿದೆ. ಅದನ್ನ ಸರಿ ಮಾಡಬೇಕಾದದ್ದು ನಮ್ಮ ಕರ್ತವ್ಯ ಅಲ್ವಾ ಪ್ರೇಮಕ್ಕ."

"ನಿಮ್ಮಷ್ಟು ತಿಳುವಳಿಕೆ, ಅನುಭವ ನನಗಿಲ್ಲ ಕಾಮಾಕ್ಷಿ.... ಚಿನ್ಮಯಿ ದುಡುಕು. ಅವಳ ತಪ್ಪು ಏನೇ ಇದ್ರೂ ಹೊಟ್ಟೆಗೆ ಹಾಕ್ಕೊಳ್ಳಿ. ಇದು ಒಬ್ಬ ತಾಯಿಯ ಪ್ರಾರ್ಥನೆ." ಪ್ರೇಮಾ ಕಾಮಾಕ್ಷಿಗೆ ಕೈ ಮುಗಿದಳು. ಅವಳ ಕೈಗಳನ್ನು ಕಾಮಾಕ್ಷಿ ಹಿಡಿದಳು.

"ಛೇ ಛೇ ಹೀಗೆಲ್ಲಾ ಮಾತಾಡ್ಬೇಡಿ ಪ್ರೇಮಕ್ಕ. ನಮ್ಮಿಬ್ಬರ ಸ್ನೇಹಕ್ಕೆ ಚ್ಯುತಿ ಬರದಿದ್ರೆ ಸಾಕು. ಸಂಬಂಧ ಬೆಳೆದ್ಮೇಲೆ ಅಂತರ ಹೆಚ್ಚಾಗಬಾರದು.... ನೀವು ಮಲಕ್ಕಳಿ, ಆಯಾಸ ಮಾಡ್ಕೋಬೇಡಿ. ನಾನಿನ್ನು ಬರ್ತೀನಿ..... ಮದ್ವೆಗೆ ಇನ್ನೂ ಐದೇ ದಿನ ಬಾಕಿ ಇರೋದು..... ನಿಮಗೇನು ಬೇಕೋ ಕೇಳಿ, ನಾನು ಬಂದು

ಮಾಡ್ಕೊಡ್ತೀನಿ."

"ನೀವಲ್ಲದೇ ನಮ್ಮ ಮನೆಯ ಯಾವ ಕೆಲಸ ನಡೆಯುತ್ತೆ ನೀವೇ ಹೇಳಿ ಕಾಮಾಕ್ಷಿ. ಈಗ ಇದು ನಿಮ್ಮ ಮನೆಯ ಕೆಲಸ. ನೀವೇ ನಿಂತು ನೆರವೇರಿಸಬೇಕು." ಪ್ರೇಮಳ ಕಣ್ಣುಗಳು ತುಂಬಿ ಬಂದಿದ್ದವು.

"ಅಳಬೇಡಿ ಪ್ರೇಮಕ್ಕ..... ಎಲ್ಲಾ ನಡೆಸೋನು ಆ ಭಗವಂತ....ಅವನ ಇಚ್ಛೆ ಚೆನ್ನು ನನ್ನ ಸೊಸೆಯಾಗಬೇಕು ಅಂತ. ಅದನ್ನು ನಾನೂ ತಪ್ಪಿಸುಕ್ಕೆ ಆಗಲಿಲ್ಲ. ಭಟ್ಟನಿಗೂ ತಪ್ಪಿಸುಕ್ಕೆ ಆಗಲಿಲ್ಲ. ಭಟ್ಟ ಇನ್ನಾದ್ರೂ ಬದಲಾಗಬೇಕು." ಅಷ್ಟರಲ್ಲಿ ಚಿನ್ಮಯಿ ಬಂದು ನಿಂತಳು. ಕಾಮಾಕ್ಷಿ ಅವಳ ಕಡೆ ನೋಡಿ ಮುಗುಳ್ನಕ್ಕು ಹೊರ ಹೊರಟಳು.

* * *

ಅದೇ ದಿನದ ಸಾಯಂಕಾಲದ ಹೊತ್ತಿಗೆ ವಿದ್ಯಾ ಹೆಣ್ಣು ಮಗುವನ್ನು ಹೆತ್ತಳು. ವಿದ್ಯಾ ಹೆರಿಗೆ ನೋವನ್ನು ಅನುಭವಿಸಿ ಸುಸ್ತಾಗಿದ್ದಳು. ತನಗೆ ಹುಟ್ಟಿದ್ದು ಹೆಣ್ಣು ಮಗು ಅಂತ ತಿಳಿದಾಗ ಮನಸ್ಸಿಗೆ ಪಿಚ್ಚೆನ್ನಿಸಿತ್ತು. ಅತ್ತಿಗೆಗೆ ಗಂಡು ಮಗು ಹುಟ್ಟಿತು. ತನಗೂ ಗಂಡು ಮಗು ಹುಟ್ಟಬಾರದಾಗಿತ್ತೇ ಅಂತೆನ್ನಿಸಿತ್ತು. ಆದರೆ ಮಗುವಿನ ಮುಖವನ್ನು ನೋಡಿ, ಅವಳು ಬೇರೆಲ್ಲವನ್ನೂ ಮರೆತಳು. ದಿನೇಶ ಬಂದು ಮಾತನ್ನಾಡಿಸಿದ್ದ. ಮಗುವನ್ನು ಇನ್‌ಕ್ಯುಬೇಟರ್‌ನಲ್ಲಿಟ್ಟಿದ್ದರು.

"ಮಗಳು, ನಿನ್ನ ಹಾಗೆ ತುಂಬಾ ಮುದ್ದಾಗಿದ್ದಾಳೆ ವಿದ್ಯಾ......"

"ಹೆಣ್ಣು ಮಗು ಹುಟ್ತು ಅಂತ ನಿಮಗೆ ಬೇಸರವೇನೂ ಇಲ್ಲ ತಾನೇ....."

"ಛೇ....ಛೇ ಬೇಸರ ಯಾಕೆ? ಮುಂದಿನ ಸಾರಿ ಗಂಡು ಮಗುವಾಗುತ್ತೆ ಬಿಡು." ಎಂದು ಹೇಳಿ ಕಣ್ಣು ಹೊಡೆದ. ವಿದ್ಯಾ ನಾಚಿದಳು.

"ಥೂ ಈಗಾಗ್ಲೇ ಮುಂದಿನ ಮಗುವಿನ ಚಿಂತೇನ.... ಹೆರಿಗೆ ನೋವನ್ನು ನೀವೂ ಅನುಭವಿಸಿದ್ರೆ ಗೊತ್ತಾಗ್ತಿತ್ತು ಆ ಕಷ್ಟ....."

"ಆ ಕಷ್ಟಾನೆಲ್ಲ ತಾಯಿಯೊಬ್ಬಳಿಗೆ ಮಾತ್ರ ಕೊಟ್ಟಿದಾನೆ ಭಗವಂತ. ನಾನೇನ್ಮಾಡ್ಲೀ?"

"ಅತ್ತೆ, ಮಾವಂಗೆ ತಿಳಿಸಿದ್ದಾಯ್ತಾ...."

"ಇಲ್ಲ. ಈಗಲೇ ಟೆಲಿಗ್ರಾಮ್ ಕಳಿಸ್ತೀನಿ. ಮನೆಯಿಂದ ಫೋನ್ ಮಾಡಿ, ನಿಮ್ಮ ಚಿಕ್ಕಮ್ಮಂಗೆ ತಿಳಿಸ್ತೀನಿ."

"ಏಳನೆಯ ತಿಂಗಳಿಗೆ ಹುಟ್ಟಿದೆ ಮಗು...... ಡಾಕ್ಟರ್ ಹೇಳೋವರೆಗೂ, ನಾವು ಊರಿಗೆ ಹೋಗುಕ್ಕಾಗುಲ್ಲ. ನನಗೆ ಅದೇ ಬೇಜಾರು."

"ಆ ಚಿಂತೆಯೆಲ್ಲಾ ಬೇಡ. ಡಾಕ್ಟರ್ ಒಪ್ಪಿದರೆ, ನಾನು ನಾಳೇನೇ ನಿನ್ನನ್ನು ಊರಿಗೆ ಕರ್‍ಕೊಂಡು ಹೋಗ್ತೀನಿ. ಮೊದಲು ನಿಮ್ಮಿಬ್ಬರ ಆರೋಗ್ಯ ಸುಧಾರಿಸಲಿ....."

ಅವನು ಅವಳ ಕೈಯನ್ನು ಒತ್ತಿ ಧೈರ್ಯವನ್ನು ತುಂಬಿದ.

* * *

ವಿದ್ಯಾ ಮಲಗಿದ್ದಲ್ಲೇ ಕಿಶೋರನ ಬಗ್ಗೆ ಚಿಂತಿಸುತ್ತಿದ್ದಳು. ಕಿಶೋರನ ಹೆಸರು ಕೇಳಿದೊಡನೆ ತನ್ನ ಮನದಲ್ಲಿ ಕೋಲಾಹಲ ಹುಟ್ಟುತ್ತೆ. ಅದೇ ಕಾರಣದಿಂದ ಈ ಸಾರಿಯೂ ಹೀಗಾಯಿತು ಎಂದುಕೊಂಡರೂ, ಕಿಶೋರ ತನ್ನ ಮೇಲಿನ ಕೋಪದಿಂದ ಚಿನ್ಮಯಿಯನ್ನು ಪಡೆಯಲು ಹೀಗೆ ಮಾಡುತ್ತಿರಬಹುದು ಎಂದೇ ಅನ್ನಿಸಿತ್ತು. ಆದರೆ ಅದನ್ನು ಪ್ರಶಾಂತ ಹೇಳುವ ಮೊದಲೇ ಹೀಗಾಗಿತ್ತು. ಈಗ ತಾನು ಮದುವೆಯನ್ನು ನಿಲ್ಲಿಸುವುದಂತೂ ಸಾಧ್ಯವಿಲ್ಲ. ಅಪ್ಪನಿಗೂ ಅನುಮಾನ ಬರಲಿಲ್ಲವೇ......? ಅಪ್ಪ ನೊಡನೆ ಹೇಳಿದರೂ ಅವರು ಅವಳ ಮಾತನ್ನು ಕೇಳುವರೆಂಬ ನಂಬಿಕೆ ಇಲ್ಲ. ಅದೇ ಆಲೋಚನೆಯಲ್ಲಿ ನಿದ್ದೆ ಹತ್ತಿದಂತಾಗಿತ್ತು..... ಹತ್ತಿರದಲ್ಲಿ ಯಾರೋ ಪಿಸುದನಿ ಯಲ್ಲಿ ಮಾತನಾಡಿದಂತಾಗಿತ್ತು. ಕಣ್ಣು ಬಿಟ್ಟಳು. ಕಾಮಾಕ್ಷಿ ನಿಂತಿದ್ದಳು. ಯಾಕೋ ಏನೋ ಅವಳೊಡನೆ ಮಾತನಾಡುವ ಮನಸ್ಸಾಗಲಿಲ್ಲ. ಇದರಲ್ಲಿ ಕಾಮಾಕ್ಷಿಯ ಕುತಂತ್ರವೂ ಇರಬಹುದೇ ಅಂತನ್ನಿಸಿದಾಗ, ಬಹುಶಃ ಇದಕ್ಕೆಲ್ಲ ಕಾರಣ ತಾನೇ... ಕಿಶೋರನೊಡನೆ ತಾನು ಸ್ನೇಹವನ್ನಿಟ್ಟುಕೊಂಡಿದ್ದೇ ತಪ್ಪು ಎನ್ನಿಸತೊಡಗಿತ್ತು. ವಿದ್ಯಾ ನಿದ್ರಿಸುತ್ತಿದ್ದುದನ್ನು ಗಮನಿಸಿ ಹಾಗೇ ಹೊರಟು ಹೋಗಿದ್ದಳು.

* * *

ಅವಳು ಇನ್ನೂ ಆಸ್ಪತ್ರೆಯಿಂದ ಮನೆಗೆ ಬಂದಿರಲಿಲ್ಲ.

ಚಿನ್ಮಯಿಯ ಮದುವೆ ಕಿಶೋರನೊಂದಿಗೆ ಸರಳವಾಗಿ ನೆರವೇರಿತು. ಭಟ್ಟ ತನ್ನ ಕಡೆಯವರ್‍ಯಾರಿಗೂ ಆಮಂತ್ರಣ ಪತ್ರಿಕೆಯನ್ನು ಕಳಿಸಿರಲಿಲ್ಲ. ಬರೀ ಮನೆಯವರೇ. ದೇವಸ್ಥಾನದಲ್ಲಿ ಮದುವೆ ಜರುಗಿತ್ತು. ಕಾಮಾಕ್ಷಿಯ ಕಡೆಯ ಕೆಲವು ನೆಂಟರು ಬಂದಿದ್ದರು. ಭಟ್ಟ ತನ್ನ ಮಾತನ್ನು ಉಳಿಸಿಕೊಳ್ಳುವವನಂತೆ, ಕಾಮಾಕ್ಷಿಗೆ ಭಾರೀ ರೇಷ್ಮೆ ಸೀರೆಯನ್ನು ಉಡುಗೊರೆಯಾಗಿ ಕೊಟ್ಟ.

ಭೋಜನ ಫಲ, ತಾಂಬೂಲಾದಿಗಳ ಅನಂತರ, ಚಿನ್ಮಯಿ ಗಂಡನ ಮನೆಗೆ ಹೋಗುವ ಬದಲು, ಕಿಶೋರ ಮಾವನ ಮನೆಯನ್ನು ಸೇರಿಕೊಂಡ. ಕಿಶೋರ ಒಂಟಿಯಾಗಿ ಸಿಕ್ಕ ಚಿನ್ಮಯಿಯನ್ನು ತನ್ನ ಬಾಹುಗಳಲ್ಲಿ ಸೆಳೆದುಕೊಂಡ.

"ಹ್ಞಾಂ..... ಈ ದಿನಕ್ಕಾಗಿ ನಾವಿಬ್ಬರೂ ಎಷ್ಟು ಕಷ್ಟಪಟ್ಟೆವು ಅಲ್ವಾ..... ಇನ್ನು ನಮಗೆ ಯಾವ ಭಯವೂ ಇಲ್ಲ." ಅವಳ ಮೇಲೆ ಮುತ್ತಿನ ಮಳೆಯನ್ನು ಸುರಿಸಿದ.

"ಅಪ್ಪ ಒಪ್ಪಬಹುದು ಎನ್ನೋ ಧೈರ್ಯವೇ ನನಗಿರಲಿಲ್ಲ. ಅವರನ್ನ ಏನಂತ ಹೆದರಿಸಿದೆ.....?" ನಗುತ್ತಾ ಪ್ರಶ್ನಿಸಿದಳು.

"ವಿದ್ಯಾ ನನಗೆ ಬರೆದ ಪತ್ರಗಳು ನನ್ನ ಹತ್ರ ಇವೆ ಅಂತ ಸುಳ್ಳು ಹೇಳ್ದೆ...

ಇನ್ನು ಅವಳ ಜೀವನವೂ ಹಾಳಾದೀತು ಅಂತ ಯೋಚಿಸಿರಬಹುದು...... ಐವತ್ತು ಅರವತ್ತು ಸಾವಿರ ರೂಪಾಯಿಗಳನ್ನು ಕೂಡ ಕೊಡಲು ಸಿದ್ಧರಾಗಿದ್ದರು. ಆದರೆ ಅದರ ಬದಲಿಗೆ ನಾನು ನಿನ್ನನ್ನು ಮದುವೆಯಾಗುವುದಾಗಿ ಹೇಳಿದೆ."

"ಅಪ್ಪ ನಿನ್ನ ಬಲೆಗೆ ಬೀಳುವಷ್ಟು ಮೂರ್ಖರಲ್ಲ ಕಿಶೋರ. ಬಹುಶಃ ಅವರಿಗೆ ನಾವು ಆಡಿದ ನಾಟಕ ಗೊತ್ತಾಗಿರಬೇಕು."

"ಗೊತ್ತಾಗಿದ್ದಿದ್ರೆ ನನ್ನನ್ನು ಜೈಲ್‌ಗೆ ಕಳಿಸಿರುತ್ತಿದ್ದರು. ಇಲ್ಲಿ ನಿನ್ನ ರೂಮ್‌ಗೆ ನನ್ನನ್ನು ಕರೆಸುತ್ತಿರಲಿಲ್ಲ..... ಏನಂತಾನೆ ನಮ್ಮ ಪುಟ್ಟು" ಎನ್ನುತ್ತಾ ಅವಳ ಹೊಟ್ಟೆಯ ಬಳಿ ತಲೆಯನ್ನಿಟ್ಟ.

"ಏನಂತಾನೆ? ಎಲ್ಲರ ಹತ್ರಾನೂ ಬೈಸಿಕೊಳ್ತಿದಾನೆ... ಅವನಿಗೇನು ಅವಾಂತರ ವಿತ್ತು ಹುಟ್ಟಿ ಬರೋಕೆ ಅಂತ....."

"ಯಾರಿಗೂ ಹುಟ್ಟಿ ಬರೋಕೆ ಅವಾಂತರ ಇರುಲ್ಲ.... ಅದ್ಸರಿ, ವಿದ್ಯಾ ಏಳನೆಯ ತಿಂಗಳಿಗೆ ಮಗುವನ್ನು ಹೆತ್ತಳಲ್ಲ. ಅದು ಅವಸರಪಟ್ಟು ಹುಟ್ಟಿದ್ದು..... ನನ್ನ ಮಗು ಮಾತ್ರ ಪೂರಾ ಒಂಬತ್ತು ತಿಂಗಳು ನಿನ್ನ ಹೊಟ್ಟೆಯಲ್ಲಿ ಬೆಳೆಯಬೇಕು. ಆಮೇಕೆ ಹುಟ್ಟಬೇಕು......"

"ಎಲ್ಲರೂ ನನಗೆ ಉಪದೇಶ ಮಾಡುವವರೇ.... ಈ ಮಗೂನ ತೆಗೆಸಿ ಬಿಡು ಅಂತ....."

"ಹಾಗೇನಾದ್ರೂ ಮಾಡಿದ್ದಿದ್ರೆ ನಾನೂ ನೀನು ಒಂದಾಗಲು ಸಾಧ್ಯವಿರುತ್ತಿರಲಿಲ್ಲ. ಈ ವಿಷಯ ತಿಳಿದ ಮೇಲೇ ಅಮ್ಮ ಒಪ್ಪಿಗೆ ಕೊಟ್ಟದ್ದು....."

"ಹಾಗಾದ್ರೇ ಅತ್ತೆಗೆ ಎಲ್ಲಾ ಹೇಳಿ ಬಿಟ್ಯಾ......?"

"ಹೂಂ. ಹೇಳಬೇಕಾಯ್ತು. ಅಮ್ಮ ಈಗ ಮನಸಾರ ಒಪ್ಪಿಕೊಂಡಿದಾಳೆ. ಇನ್ನು ನಮಗೆ ಯಾರ ಭಯವೂ ಇಲ್ಲ." ಎನ್ನುತ್ತಾ ಆಲಿಂಗನವನ್ನು ಬಿಗಿಗೊಳಿಸಿದ.

* * *

ಆಸ್ಪತ್ರೆಯಿಂದ ಸೀದಾ ಮನಸ್ಸಿಲ್ಲದಿದ್ದರೂ, ವಿದ್ಯಾ ಮಗುವಿನೊಂದಿಗೆ ಮನೆಗೆ ಬಂದಳು.

"ಏನೇ ವಿದ್ಯಾ ಹೇಗಿದೀಯೇ? ಏನಂತಾಳೆ ಮಗಳು?" ಕಿಶೋರ ಮಗುವಿನ ಕೆನ್ನೆಯನ್ನು ಸವರಿದ.

"ನನ್ನ ಮಗೂನ ಮುಟ್ಟೇಡ" ವಿದ್ಯಾ ಗದರಿದಳು.

"ಯಾಕೇ? ನಾನು ನಿನ್ನನ್ನು ಬಿಟ್ಟು ಚಿನ್ಮಯೀನ ಮದ್ವೆ ಆದೆ ಅಂತ ಕೋಪಾನ?" ಗೇಲಿ ಮಾಡಿದ.

"ಯಾಕೆ ಹೀಗ್ಮಾಡ್ದೇ! ಚಿನ್ಮಯೀನ ಏನು ಮರುಳು ಮಾಡ್ದೆ....?"

"ನಾನು ಏನೂ ಮಾಡಲಿಲ್ಲಮ್ಮಾ..... 'ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ'

ಎನ್ನುವಂತೆ ನಿನ್ನ ದಾರೀನೇ ಹಿಡಿದಳು. ಸೀದಾ ನನ್ನ ಬಳಿಗೆ ಬಂದಳು. ಒಂದಂತೂ ನಿಜ. ನೀವು ಅಕ್ಕ – ತಂಗೀರು ಒಬ್ಬರಿಗಿಂತ ಒಬ್ಬರು ಚೆನ್ನಾಗಿದೀರಿ.... ಆದರೆ ನೀನು ಮಧ್ಯದಲ್ಲೇ ಕೈ ಕೊಟ್ಟೆ. ಇಲ್ಲದಿದ್ರೆ ನೀನು ನನ್ನ ಹೆಂಡತಿಯಾಗಿರುತ್ತಿದ್ದೆ.... ಈ ಮಗು ನನ್ನದಾಗಿರುತ್ತಿತ್ತು....."

"ಸಾಕು ನಿಲ್ಲಿಸು. ಹೀಗೆ ಮಾತಾಡೋಕೆ ನಿನಗೆ ನಾಚ್ಕೆ ಆಗುಲ್ಲ?"

"ನಾಚ್ಕೊಂಡಿದ್ದಿದ್ರೆ, ನಿಮ್ಮಪ್ಪನ ಮನೆ ಅಳಿಯನಾಗಿ ಈ ಮನೆ ಸೇರುತ್ತಿರಲಿಲ್ಲ."

"ಅಪ್ಪಂಗೆ ನಿಜ ಏನೂಂತ ತಿಳಿದ್ರೆ ಈಗ್ಲೂ ನಿನ್ನನ್ನ ಮನೆಯಿಂದಾಚೆ ದಬ್ತಾರೆ."

"ನೀನು ಬರೆದ ಪತ್ರಗಳನ್ನು ದಿನೇಶಂಗೆ ತೋರ್ಸಿದ್ರೆ..... ಅವನೂ ನಿನ್ನನ್ನ ಮನೆಯಿಂದಾಚೆ ದಬ್ತಾನೆ. ನಿಮ್ಮಪ್ಪನ ಮನೆ ತುಂಬಾ ದೊಡ್ಡದಾಗಿದೆ. ನಾನೂ ಇಲ್ಲೇ ಇರ್ತೀನಿ..... ನಿನಗೂ ನನ್ನ ಸಹವಾಸ ಬೇಕೆನಿಸಿದರೆ ನಾನು ಸಿದ್ಧ....."

"ನೀನೊಬ್ಬ ಹಲ್ಕಾ..... ನಿನ್ಹತ್ರ ನಂಗೇನು ಮಾತು?" ಅತ್ತ ಮುಖವನ್ನು ತಿರುಗಿಸಿದಳು.

"ಯಾಕೆ ಹೆದರಿ ಬಿಟ್ಯೇನೇ? ವಿದ್ಯಾ.... ಅವತ್ತೇನಾದ್ರೂ ನಾನು ಆಸಿಡ್ ಎರಚಿದ್ದರೇ, ನೀನು ಇಷ್ಟು ಸುಂದರವಾಗಿರುತ್ತಿರಲಿಲ್ಲ. ಇಂಥ ಮುದ್ದಾದ ಮಗುವೂ ಹುಟ್ಟುತ್ತಿರಲಿಲ್ಲ..... ಇನ್ನೊಂದು ನಿಜವಾದ ವಿಷಯ ಹೇಳ್ಲಾ..... ಆ ಬಾಟಲಿಯಲ್ಲಿ ಇದ್ದುದು ಬರೀ ಸೀಮೆಎಣ್ಣೆ. ನಿನ್ನ ಸುಂದರವಾದ ಮುಖವನ್ನು ಕುರೂಪಗೊಳಿಸಲು ನನಗೆ ಇಷ್ಟವಿರಲಿಲ್ಲ. ಬರೀ ಹೆದರಿಸಿದೆ ಅಷ್ಟೇ..... ನಿನಗಿಂತ ಅಪ್ಪಟವಾದ ಚಿನ್ನ ನನ್ನ ಕೈ ಸೇರಿದೆ..... ನಿಮ್ಮಪ್ಪನೂ ನನ್ನನ್ನು ಮನಸಾರೆ ನಂಬಿದಾರೆ. ಇನ್ನೇನು ಬೇಕು ನಂಗೆ?" ವಿದ್ಯಾ ಇತ್ತ ತಿರುಗಿರಲಿಲ್ಲ. ಕಿಶೋರ ಹೊರ ಬಂದ.

ಅಪ್ಪನಿಗೆ ಎಲ್ಲವನ್ನೂ ಹೇಳಿ ಬಿಡುವ ಮನಸ್ಸಾಗಿತ್ತು. ಆದರೆ ಯಾಕೋ ಏನೋ ಮಾತನಾಡಲು ಧೈರ್ಯವಿಲ್ಲ. ತಾಯಿಗೆ ಹೇಳಿ ಅವಳ ಆರೋಗ್ಯವನ್ನು ಮತ್ತೂ ಹದಗೆಡಿಸುವ ಇಚ್ಛೆಯಾಗಲಿಲ್ಲ. ಪ್ರಶಾಂತನೋ, ಸಂತೋಷನೋ ಎದುರಿಗೆ ಇದ್ದಿದ್ದರೆ ಅವರೊಡನೆ ಹೇಳಬಹುದಾಗಿತ್ತೆನಿಸಿತ್ತು. ಪ್ರಶಾಂತ, ಆಸ್ಪತ್ರೆಯಲ್ಲಿ ಮಾತನಾಡಿಸಿದ್ದು ಅಷ್ಟೇ. ಮನೆಗೆ ಬಂದಿರಲಿಲ್ಲ. ಸಂತೋಷ ಮದುವೆಗೆ ಬಂದಿರ ಲಿಲ್ಲ. ಮದುವೆಯ ವಿಷಯವನ್ನು ಅಪ್ಪ ಅವನಿಗೆ ತಿಳಿಸಿದ್ದರೋ ಇಲ್ಲವೋ..... ಇನ್ನು ಶ್ರೀಕರ..... ನಳಿನಿ..... ಚಿಕ್ಕವರು.

ನಳಿನಿಯ ಹೆಸರು ಬಾಯಿಗೆ ಬಂದ ಕೂಡಲೇ ಏನೋ ಕಾರಣದಿಂದ ಎದೆ ಢವಗುಟ್ಟಿತು. 'ನಳಿನಿ ವಯಸ್ಸಿನಲ್ಲಿ ಚಿಕ್ಕವಳೇನಲ್ಲ. ಯೌವನಕ್ಕೆ ಕಾಲಿಟ್ಟಾಗಿದೆ. ಈಗ ಈ ಕಿಶೋರನೂ ಇಲ್ಲಿ ಸೇರಿಕೊಂಡಿದಾನೆ. ನಳಿನಿಯ ಮೇಲೆ ಅವನ ಕಣ್ಣು ಬಿದ್ದರೇ..... ಅವಳನ್ನು ತನ್ನ ಬಲೆಗೆ ಬೀಳಿಸಿಕೊಂಡು ಕೆಡಿಸಿ ಬಿಟ್ಟರೇ..... ಈ ಅನಿಸಿಕೆಯೇ ಅವಳನ್ನು ನಡುಗಿಸಿತು. ಏನಾದರೂ ಎಡವಟ್ಟು ಆಗುವ ಮೊದಲೇ

ಎಚ್ಚರವಾಗಿರುವಂತೆ ತಿಳಿಸಬೇಕು. ಆದರೆ ಯಾರಿಗೆ? ಅಪ್ಪನಿಗೆ ನನ್ನ ಮಾತಿನ ಮೇಲೆ ಬೆಲೆ ಇಲ್ಲ..... ಅಮ್ಮನಿಗೆ ಹೇಳಿದರೆ, ಅವಳನ್ನು ಹೆದರಿಸಿದಂತಾಗುತ್ತದೆ. ಚಿನ್ಮಯಿಯ ಹತ್ತಿರ ಮಾತನಾಡಲು ಮನಸ್ಸಿಲ್ಲ... ನಳಿನಿಗೇ ಹೇಳುವುದು ಸರಿಯಲ್ಲ. ಶ್ರೀಕರನಿಗೆ ಇದೆಲ್ಲ ಅರ್ಥಹಾಗುಲ್ಲ..... ಸಂತೋಷ ಊರಲ್ಲಿಲ್ಲ. ಪ್ರಶಾಂತ ಊರಿನಲ್ಲಿದ್ದರೂ, ಎಲ್ಲರಿಂದ ದೂರವಿದಾನೆ.' ಮಗು ಎಚ್ಚರಗೊಂಡು ಅಳತೊಡಗಿದಾಗ ಅವಳ ಆಲೋಚನೆ ನಿಂತಿತು.

ಹದಿನೈದು ಇಪ್ಪತ್ತು ದಿನಗಳು ಕಳೆಯುವಷ್ಟರಲ್ಲಿ ಅವಳಿಗೆ ತಾನು ಊರಿಗೆ ಹೋದರೆ ಸಾಕು ಎನಿಸಿತ್ತು. ದಿನೇಶನಿಗೆ ಪತ್ರ ಬರೆದಳು. ದಿನೇಶ ಕರೆದುಕೊಂಡು ಹೋಗಲು ಊರಿಗೆ ಬಂದಿದ್ದ.

"ಎಲ್ಲರೂ ತಾಯಿಯ ಮನೆಯಲ್ಲಿ ಇರಬೇಕು ಅಂತ ಆಸೆ ಪಡ್ತಾರೆ. ನಿನಗ್ಯಾಕೆ ಆತುರ? ಯಾಕೆ? ನನ್ನನ್ನು ಬಿಟ್ಟು ಇರುಕ್ಕೆ ಆಗ್ತಿಲ್ವಾ!" ತಮಾಷೆಯಾಗಿ ಕೇಳಿದ್ದ.

"ಅಮ್ಮನ ಮನೆಯ ವಾತಾವರಣವೇ ಸರಿಯಾಗಿಲ್ಲ ರೀ... ಅಮ್ಮ ಮಲಗಿಬಿಟ್ಟಿದಾಳೆ. ಅವಳಿಗೆ ನನ್ನಿಂದ ಯಾವ ಸಹಾಯವೂ ಇಲ್ಲ. ಕಿಶೋರ ಬೇರೆ ಇಲ್ಲೇ ಬಂದು ಸೇರ್‍ಕೊಂಡಿದಾನೆ. ನನಗೆ ಮುಜುಗರವಾಗುತ್ತೆ. ಈ ಮನೇಲಿ ನಾನು ಪರಕೀಯಳು ಅಂತ ಅನ್ನಿಸುತ್ತೆ."

"ಅದೆಲ್ಲ ನಿನ್ನ ಭ್ರಮೆ. ಚಿನ್ಮಯೀ ಆರಾಮವಾಗಿಲ್ವಾ?"

"ಚಿನ್ಮಯಿ ವಿಷಯ ಬೇರೆ. ಅವಳ್ಗಂಡಂಗೆ ಕೆಲ್ಸ ಇಲ್ಲ. ಸಂಪಾದ್ನೆ ಇಲ್ಲ. ಇಲ್ಲಿದಾನೆ..... ಅವನ ಮುಖ ನೋಡೋಕೇ ಬೇಜಾರು...." ದಿನೇಶ ಅವಳ ಕೆನ್ನೆ ಹಿಂಡಿದ.

"ಇದೆಲ್ಲ ನೆವಗಳು ಅಷ್ಟೇ....." ಹಾಗೆ ತಮಾಷೆಯಾಗಿ ಹೇಳಿದರೂ, ಕಿಶೋರ ಅಲ್ಲಿರುವುದು ವಿದ್ಯಾಳಿಗೆ ಸರಿ ಹೋಗುತ್ತಿಲ್ಲ ಎನ್ನುವುದನ್ನು ಬಲ್ಲ. ಒಂದೆರಡು ದಿನಗಳಲ್ಲೇ ಅಲ್ಲಿಂದ ಹೊರಟರು. ಅವಳಿಗೆ ಪ್ರಶಾಂತನೊಡನೆ ಪ್ರತ್ಯೇಕವಾಗಿ ಮಾತನಾಡಲು ಆಗಿರಲೇ ಇಲ್ಲ.

* * *

ಅಧ್ಯಾಯ – ಮೂವತ್ತಮೂರು

ತಂದೆ ಸತ್ತರೂ ವೈರ ಸಾಯಲಿಲ್ಲ

ಮಗುವನ್ನು ನೋಡಲು ಬಂದ ಭವಾನಿಯೊಡನೆ ವಿದ್ಯಾ ಎಲ್ಲಾ ಹೇಳಿಕೊಂಡು ವ್ಯಥೆ ಪಟ್ಟಳು. "ಕಿಶೋರ ಒಳ್ಳೆಯವನಾಗಿದಾನೆ ಅಂತ ಹೇಗೆ ನಂಬೋದು? ನಳಿನಿ ಇನ್ನೂ ಮುಗ್ಧೆ. ಅವಳಿಗೇನಾದ್ರೂ ತೊಂದ್ರೆ ಆದರೆ..... ಈ ಕಿಶೋರ ನಮ್ಮನ್ನೆಲ್ಲಾ ಹಾಳು ಮಾಡಲೆಂದೇ ಈ ಮನೆಗೆ ಬಂದು ಸೇರ್‍ಕೊಂಡಿದಾನೇನೋ ಅಂತನ್ನಿಸುತ್ತೆ....."

"ಭಾವ ದುಡುಕಿ ಬಿಟ್ರೂಂತ ಕಾಣುತ್ತೆ..... ಚಿನ್ಮಯೀನ ಇಲ್ಲಿ ನಮ್ಮನೆಗೆ ಕಳಿಸಿದ್ರೆ ನಾನು ಅವಳಿಗೆ ತಿಳುವಳಿಕೆ ಹೇಳ್ತಿದ್ದೆ..... ಎಲ್ಲಾ ಸರಿ ಹೋಗ್ತಿತ್ತು....."

"ಈಗಂತೂ ಅಲ್ಲಿ ಎಲ್ಲಾ ಹದಗೆಟ್ಟು ಹೋಗಿದೆ. ಅಮ್ಮನ್ನಂತೂ ನೋಡುಕ್ಕಾಗುಲ್ಲ. ಯಾವಾಗ ನಿದ್ದೇಲೇ ಹೊರಟು ಹೋಗ್ತಾಳೋ ಅನ್ನೋ ಹಾಗಾಗಿದಾಳೆ....."

"ಯಾಕೆ, ಡಾಕ್ಟರ್ಸ್ ಸರಿಯಾಗಿ ಔಷಧಿ ಕೊಡ್ತಿಲ್ಲವಾ?"

"ಡಯಾಬಿಟೀಸ್‌ಗೆ, ಬಿ.ಪಿ.ಗೆ, ಅಸಿಡಿಟಿಗೆ ಅಂತ ಬಗೆಬಗೆ ಮಾತ್ರೆಗಳನ್ನು ನುಂಗ್ತಾಳೆ. ಎಲ್ಲಕ್ಕಿಂತ ಹೆಚ್ಚಾಗಿ ಮನೋವ್ಯಾಧಿ. ಅಪ್ಪ ಎಂದೂ ಅವಳನ್ನು ಚೆನ್ನಾಗಿ ನೋಡಿಕೊಳ್ಳಲಿಲ್ಲ. ಅಮ್ಮನಂತೂ ಕೊರಗಿ ಕೊರಗಿ ಕೃಶವಾಗಿ ಹೋಗಿದಾಳೆ.... ನೀವು ಒಂದ್ಸಾರಿ ಹೋಗಿ ನೋಡ್ಕಂಬನ್ನಿ ಚಿಕ್ಕಮ್ಮ. ಅಮ್ಮಂಗೂ ಖುಶಿಯಾಗುತ್ತೆ."

"ಹುಂ. ಹೋಗ್ಬರ್ತೀನಿ. ಪ್ರಶಾಂತ ಈಗ್ಲಾದ್ರೂ ಬದಲಾಗಬೇಕು... ಅಪ್ಪನ ಮೇಲಿನ ಸಿಟ್ಟಿಗೆ ಅಮ್ಮನಿಗೆ ನೋವನ್ನು ಕೊಟ್ರೆ ನ್ಯಾಯಾನಾ!"

"ಅವ್ನೂ ಒಂದೊಂದ್ಸಾರಿ ಅಪ್ಪನ ಥರಾನೇ ಆಡ್ತಾನೆ. ಎಲ್ಲಾ ತಿಳಿದೂ ಅವನು ಕಿಶೋರ ಆ ಮನೆಯೊಳ್ಗೆ ಸೇರ್‍ಕೊಳ್ಳೋಕೆ ಬಿಡಬಾರ್‍ದಾಗಿತ್ತು."

"ಇಬ್ಬರ ಜಗಳ ಮೂರನೆಯವರ ಲಾಭ ಅನ್ನೋ ಹಾಗಾಯ್ತು. ಚಿನ್ಮಯೀಗಾದ್ರೂ ತಿಳುವಳ್ಕೆ ಬೇಡ್ವಾ.....?"

"ನಿನ್ನ ಮದುವೆ ಸಮಯದಲ್ಲಿ ಅಷ್ಟು ರಂಪ ಆಗಿದೆ. ಅಷ್ಟಾದ್ರೂ ಗೊತ್ತಾಗ್ಬೇಡ್ವಾ?"

"ಅವನು ಮಾಟ ಮಾಡ್ಸಿ ಬಿಟ್ಟಿದಾನೆ ಅಂತ ಕಾಣುತ್ತೆ. ಯಾವ ಸಂಕೋಚ ಭಯ ಏನೂ ಇಲ್ಲ ಅವಳ್ಗೆ.... ಅವನ್ಜತೆ ಏನು ಚೆಲ್ಲಾಟ... ನೋಡಿ ನೋಡಿ

ಸಾಕಾಯ್ತು....."

"ಹೌದು. ನಿಮ್ಮಪ್ಪಂಗೆ, ಅವಳ್ಗೆ ಏನೋ ಖಂಡಿತಾ ಮಾಡ್ಸಿರಬೇಕು. ಇಲ್ಲ ದಿದ್ರೆ ನಿಮ್ಮಪ್ಪನಂಥೋರ್ನ್ನ ಅವ್ಳು ಒಲಿಸಿಕೊಳ್ಳಬೇಕಾದ್ರೇ......."

"ಅಮ್ಮ ಆರೋಗ್ಯವಾಗಿದ್ದಿದ್ರೆ ಖಂಡಿತಾ ಹೀಗಾಗ್ತಿರಲಿಲ್ಲ."

"ಭಾವ ನಾಸ್ತಿಕರು. ಮನೇಲಿ ಒಂದು ದೇವರ ಮನೆ, ದೇವರ ಮುಂದೆ ನಂದಾದೀಪ ಬೆಳಗಿದರೆ, ಖಂಡಿತಾ ಹೀಗೆಲ್ಲಾ ಆಗ್ತಿರಲಿಲ್ಲ."

"ನೀವಾದ್ರೂ ಒಂದ್ಮಾತು ಹೇಳಿ ಚಿಕ್ಕಮ್ಮ....."

"ಮುಂದಿನ ವಾರ ಅಕ್ಕನ್ನ ನೋಡ್ಕೊಂಡು ಬರೋಕೆ ಹೋಗ್ತೀನಿ. ಆಗ ಮಾತಾಡ್ತೀನಿ..... ಮಗೂಗೆ ಏನು ಹೆಸರನ್ನಿಡ್ಬೇಕೂಂತ ಇದೀರಿ......?"

"ಸ್ವಾತಿ ಅಂತ...... ಅತ್ತೇನೇ ಈ ಹೆಸರನ್ನು ಆಯ್ಕೆ ಮಾಡಿದ್ದು......"

"ಹೆಸರು ತುಂಬಾ ಚೆನ್ನಾಗಿದೆ." ಮಗುವನ್ನು ಮುದ್ದಿಸಿ, ಸುಶೀಲಳಿಗೆ ಹೇಳಿ ಮನೆಗೆ ಹೊರಟಳು.

* * *

ಇದ್ದಕ್ಕಿದ್ದಂತೆ ಭವಾನಿ, ಗೌತಮನೊಡನೆ ಬಂದಿಳಿದಾಗ ಪ್ರೇಮಳಿಗೆ ಆಶ್ಚರ್ಯ, ಸಂತೋಷ ಎರಡೂ ಏಕಕಾಲದಲ್ಲಿ ಉಂಟಾಗಿತ್ತು.

"ಏನೇ ಅಕ್ಕಾ ಚೆನ್ನಾಗಿದಿಯೇನೇ." ಎಂದು ಭವಾನಿ ಅವಳನ್ನೇ ನೋಡುತ್ತಾ ಕೇಳಿದಳು.

"ಈಗ ನಿನಗೆ ನೆನಪು ಬಂತಾ?" ಎಂದು ಪ್ರೇಮಾ ಗಳಗಳನೆ ಅತ್ತಿದ್ದಳು. ಅಕ್ಕ – ತಂಗಿಯರು ತುಸು ಹೊತ್ತು ಕಣ್ಣೀರು ಹರಿಸಿ, ಮನಸ್ಸನ್ನು ಹಗುರ ಮಾಡಿ ಕೊಂಡರು.

"ನಿಮ್ಮ ಮನೆಯ ಕಥೆಗಳೆಲ್ಲಾ ಏನು? ನನಗೆ ತಿಳಿಸ್ಬಾರ್ದಾಗಿತ್ತಾ?" ಅಕ್ಕನನ್ನು ಆಕ್ಷೇಪಿಸಿದಳು.

"ಏನೂಂತ ತಿಳಿಸ್ಲಿ.... ನೀನೇ ಹೇಳು. ನಿಂಗ್ಹೇಗೆ ತಿಳೀತು?"

"ವಿದ್ಯಾಳಿಂದ ತಿಳೀತು... ಚಿನ್ಮಯಿಗೆ ಮದ್ವೆ ಆಯ್ತಂತೆ. ನನಗೊಂದು ಆಹ್ವಾನ ಪತ್ರಿಕೆ ಇಲ್ಲ..... ಭಾವಂಗೆ ಈಗ ನಾನು ಬೇಡವಾದ್ನಾ?"

"ನಿಮ್ಮ ಭಾವ ಏನ್ಮಾಡ್ತಾರೆ? ಯಾಕೆ ಮಾಡ್ತಾರೆ? ಒಂದೂ ನನ್ನ ತನಕ ಬರೂದಿಲ್ಲ. ನಾನೇನು ಹೇಳ್ಲೀ.....? ಕೊರಗೋದು ಒಂದೇ ನನ್ನ ಭಾಗಕ್ಕೆ ಒದಗಿರೋ ಕೆಲಸ....."

"ಕೊರಗಿ ಕೊರಗಿ ಹೇಗಾಗಿದೀಯ... ಇಷ್ಟಾದರೂ ಭಾವಂಗೆ ಗೊತ್ತಾಗಿಲ್ವಾ ...?"

"ಡಾಕ್ಟ್ರು ಬರ್ತಾರೆ. ಔಷಧಿ ಕೊಡ್ತಾರೆ..... ಇನ್ನೇನಾಗ್ಬೇಕು? ಅಡುಗೆಗೆ

ಶಾರದಮ್ಮ ಇದಾರೆ. ಮನೆ ಕೆಲಸಕ್ಕೆ ಒಕ್ಕಲಗಿತ್ತಿ ಇದಾಳೆ.....ನ ಂಗಂತೂ ಯಾವುದೂ ಗೊತ್ತಿಲ್ಲ."

"ಇದೆಂಥಾ ಜೀವನವೇ ಅಕ್ಕಾ.... ಪ್ರಶಾಂತಂಗಾದ್ರೂ ತಿಳೀಬೇಡ್ವಾ?"

"ಮಕ್ಳು ನನ್ನ ಹೊಟ್ಟೇಲಿ ಹುಟ್ಟಿದ್ವು, ನನ್ನ ಎದೆ ಹಾಲು ಕುಡಿದ್ವು. ಅಷ್ಟೇ ನನ್ನ ಭಾಗದ್ದು.... ನಾನು ಬೆಳೆಸಲಿಲ್ಲ; ಓದಿಸಲಿಲ್ಲ. ಯಾರ್‍ಯಾರು ಏನಾದ್ರು ಅಂತ ನಿಂಗೇ ಗೊತ್ತಲ್ಲ...... ಪ್ರಶಾಂತ ಅಪ್ಪನ ಜತೆ ಜಗಳ ಆಡಿ ಮನೆ ಬಿಟ್ಟು ಹೋದ. ಮದ್ವೆಯಾಗಿ ಹೋದ ವಿದ್ಯಾಗೆ ತವರಿನ ಹಂಬಲವಿಲ್ಲ. ಸಂತೋಷ ಓದುವ ನೆವದಲ್ಲಿ ದೂರ ಹೊರಟು ಹೋದ...... ಈ ಚಿನ್ಮಯಿ ನನ್ನ ಕಣ್ಣೆದುರಿಗೆ ಇದ್ಕೊಂಡು ನನ್ನ ಚಿಂತೇನ ಹೆಚ್ಚಿಸ್ತಾ ಇದಾಳೆ. ಇನ್ನು ಈ ನಳಿನಿ, ಶ್ರೀಕರ ಯಾವ ದಾರಿ ಹಿಡೀತಾರೋ ದೇವರೇ ಬಲ್ಲ."

"ದೇವರು ಅನ್ನೊತ್ಲೂ ನೆನಪ್ಗೆ ಬಂತು. ಈಗ್ಲಾದ್ರೂ ಮನೇಲಿ ಒಂದು ದೇವರ ಪಟಾನ ಗೋಡೆಗೆ ತಗುಲಿ ಹಾಕಿ..... ಮನೇಲಿ ಅಡಗಿರುವ ಅನಿಷ್ಟವೆಲ್ಲ ಪಾರಾಗುತ್ತೆ." ಪ್ರೇಮಾ ನಕ್ಕಳು.

"ದೇವ್ರು ಅಂದರೆ ಏನು ಅನ್ನೋದೇ ಮರೆತು ಹೋಗಿದೆ ನನಗೆ ಈ ಮನೆಗೆ ಬಂದ್ಮೇಲೆ. ಇದುವರೆಗೂ ನಿಮ್ಮ ಭಾವನ ಮಾತನ್ನ ಮೀರಿಲ್ಲ ನಾನು. ಇನ್ಯಾಕೆ ಮೀರಲಿ. ಅವರಿಗೆ ಬೇಡವಾದದ್ದು ನನಗೂ ಬೇಡ......"

"ಈ ವೈರಾಗ್ಯದಿಂದ ನೀನು ಏನನ್ನೂ ಸಾಧಿಸೋಕೆ ಆಗುಲ್ಲ. ನಿನಗೇನು ಮಹಾ ವಯಸ್ಸಾಗಿರೋದು. ಈಗ್ಲಾದ್ರೂ ಸಿಡಿದು ನಿಲ್ಲು." ಪ್ರೇಮಾ ಕ್ಷೀಣವಾಗಿ ನಕ್ಕಳು.

"ಇದನ್ನು ನೀನು ನನಗೆ ಈಗ ಹೇಳಿಕೊಟ್ಟರೆ, ನಾನೇನು ಸಾಧಿಸಬಲ್ಲೆ ಹೇಳು? ಕೈಕಾಲುಗಳಲ್ಲಿ ಶಕ್ತಿ ಇದ್ದಾಗ ಒಂದ್ಕಡೆಗೆ ಹೋಗ್ಲಿಲ್ಲ ಬರ್‍ಲಿಲ್ಲ. ಮನಸ್ನಲ್ಲಿ ನಾನಾ ಆಸೆಗಳು ತುಂಬಿಕೊಂಡಿದ್ದಾಗ ಎಲ್ಲವನ್ನು ಒಳಗೆ ಅದುಮಿಟ್ಟು ಮುದುಕಿಯಂತೆ ಕಾಲ ತಳ್ಳಿದೆ. ಈಗ ನನಗೆ ಶಕ್ತಿಯೂ ಇಲ್ಲ; ಉತ್ಸಾಹವೂ ಇಲ್ಲ. ಬದುಕಿರುವಷ್ಟು ದಿನ ಇದೇ ನನ್ನ ಜೀವನ. ಈಗ ಸಿಡಿದೆದ್ದು ಎಲ್ಲಿಗೆ ಹೋಗಲಿ? ಏನು ಮಾಡಲಿ?"

"ನನ್ನ ಮನೇಲಿ ಒಂದು ತಿಂಗಳು ಇರೂವಂತೆ ಬಾ.... ಹಾಗೇ ವಿದ್ಯಾಳ ಮನೇಲೂ ಒಂದೆರಡು ದಿನ ಇರೂವಂತೆ..... ಇಲ್ಲೇ ಹತ್ತಿರದಲ್ಲೇ ಪ್ರಶಾಂತ ಇದಾನೆ. ದಿನಕ್ಕೆರಡು ಸಾರಿ ಹೋಗಿ ಬರಬಹುದು."

"ಇಷ್ಟು ವಯಸ್ಸಾದ್ರೂ ನಿಮ್ಮ ಭಾವನ ಆಕ್ಷೇಪಣೆ ತಪ್ಪಿಲ್ಲ. ಇನ್ನು ಹೊರಗೆ ತಿರುಗಿದ್ರೆ ಅಪವಾದವೂ ಬರುತ್ತೆ."

"ಅಂತೂ ನಿನಗೆ ನೀನೇ ದಂಡನೆ ವಿಧಿಸಿಕೊಳ್ತಿದೀಯ. ಭಾವನ ಮೇಲೆ

ಯಾಕೆ ಆರೋಪ ಹೊರಿಸ್ತೀಯ?"

"ನನಗೆ ಇದೇ ಅಭ್ಯಾಸವಾಗಿ ಹೋಗಿದೆ. ಹೇಗೂ ಬಂದಿದೀಯ. ನೀನೇ ಒಂದ್ಹತ್ತು ದಿನ ಇದ್ದು ಹೋಗು. ನಮ್ಮ ಮನೆ ಪುರಾಣ ಇದ್ದದ್ದೇ. ನಿಮ್ಮ ಮನೆ ವಿಷಯಾನ ಹೇಳು. ನಿನ್ನ ಗಂಡ, ಮಕ್ಳು ಹೇಗಿದಾರೆ? ಗೌತಮ ಬಂದೋನು ಎಲ್ಲಿ ಹೋದ. ನನ್ಹತ್ರ ಮಾತಾಡ್ಲೇ ಇಲ್ಲ."

"ಪ್ರಶಾಂತನ ಮನೆಗೆ ಹೋಗಿದಾನೆ. ಮಗೂನ ಆಟ ಆಡಿಸ್ತಾ ಅಲ್ಲೇ ಕೂತ್ಬಿಟ್ಟ ಅಂತ ಕಾಣುತ್ತೆ.... ಅಂದ್ಹಾಗೆ ಮಗೂಗೆ ಏನು ಹೆಸರಿಟ್ಟಿದ್ದಾರೆ?"

"ಪ್ರದೀಪ ಅಂತ ಹೆಸರಿಟ್ಟಿದ್ದಾರೆ. ಮುದ್ದಿಗೆ ಪುಟ್ಟ, ಭಟ್ಟ ಅಂತ ಏನೇನೋ ಕರೀತಾರೆ. ಈಗ ಮಗು ಗೋಡೆ ಹಿಡ್ಕೊಂಡು ನಡೆಯೋದನ್ನು ಕಲೀತಿದೆ. ತುಂಬಾ ಮುದ್ದಾಗಿದೆ. ಪ್ರಶಾಂತ ಚಿಕ್ಕ ವಯಸ್ನಲ್ಲಿ ಹೀಗೇ ಇದ್ದ. ಆ ದಿನಗಳೆಲ್ಲ ನೆನಪಿಗೆ ಬರುತ್ತೆ."

"ಭಾವ, ಮಗೂನ ಎತ್ತಿ ಆಡಿಸ್ತಾರಾ?"

"ನಾನಂತೂ ನೋಡಿಲ್ಲ, ಕೇಳಿಲ್ಲ. ಅವ್ರು ಅವ್ರ ಮಕ್ಕಳ್ನೇ ಎತ್ತಿ ಆಡಿಸ್ಲಿಲ್ಲ. ಇನ್ನು ಪ್ರಶಾಂತನ ಮಗೂನ ಕಣ್ಣೆತ್ತಿ ಸಹ ನೋಡಿದಾರೋ ಇಲ್ವೋ......"

"ಚಿನ್ಮಯೀ ಎಲ್ಲಿ ಕಾಣ್ತಿಲ್ಲವಲ್ಲ?"

"ಮೇಲ್ಗಡೆ ರೂಮಿನಲ್ಲಿದಾಳೆ. ಅದೇನು ಮಲಗಿದಾಳೋ ಓದುತ್ತಿದಾಳೋ ಗೊತ್ತಿಲ್ಲ."

"ನಾನು ಹೋಗಿ ಮಾತಾಡ್ಸಿಕೊಂಡು ಬರ್ತೀನಿ."

"ಇರಲಿ ಬಿಡು. ಅವ್ಳೇ ಕೆಳಗೆ ಬಂದು ಮಾತಾಡಿಸ್ಲೀ."

"ಪರ್ವಾಗಿಲ್ಲ ಅಕ್ಕ. ನಾನು ಅವಳ್ಹತ್ರ ಸ್ವಲ್ಪ ಮಾತಾಡಬೇಕಾಗಿತ್ತು." ಎನ್ನುತ್ತಾ ಮಹಡಿಯನ್ನೇರಿದಳು. ಬಾಗಿಲನ್ನು ಓರೆ ಮಾಡಿ ಮಲಗಿದ್ದ ಚಿನ್ಮಯಿ, ಬಾಗಿಲು ಸದ್ದಾದಾಗ ಇತ್ತ ತಿರುಗಿದಳು.

"ಓ.... ಚಿಕ್ಕಮ್ಮ ಯಾವಾಗ್ಬಂದ್ರೀ?" ಎನ್ನುತ್ತಾ ಎದ್ದು ನಿಂತಳು. ಭವಾನಿ ಅವಳನ್ನೇ ಮೇಲ್ನಿಂದ ಕೆಳಗೆ ನೋಡಿದಳು. ಅವಳ ತುಸು ಉಬ್ಬಿದ ಹೊಟ್ಟೆಯ ಮೇಲೆ ದೃಷ್ಟಿ ನಿಂತಿತು. ಚಿನ್ಮಯಿ ಲಜ್ಜೆಯಿಂದ ಮುಗುಳ್ನಕ್ಕಳು.

"ಇದೇನೇ ಚಿನ್ನು ಇಷ್ಟು ದಪ್ಪಗಾಗಿದೀಯ ಒಂದು ತಿಂಗ್ಳಲ್ಲಿ..... ಖುಶಿ ಬಹಳ ಹೆಚ್ಚಾಗಿದೆ ಅಂತ ಕಾಣಿಸುತ್ತೆ."

"ಹೌದು ಚಿಕ್ಕಮ್ಮ..... ನಾನು ತುಂಬಾ ಖುಶಿಯಾಗಿದೀನಿ....."

"ನನಗ್ಯಾಕೆ ನಿನ್ನ ಮದ್ವೆ ವಿಷಯ ತಿಳಿಸ್ಲೇ ಇಲ್ಲ."

"ನಾವು ಯಾರಿಗೂ ತಿಳಿಸ್ಲಿಲ್ಲ. ನಿಮಗೆ ವಿದ್ಯಾ ತಿಳಿಸಿರ್ಬೇಕು ಅಲ್ವಾ.....!"

"ಹುಂ..... ಅವಳಿಂದ್ಲೇ ತಿಳಿದದ್ದು...... ಕಿಶೋರನ್ನ ಮದ್ವೆಯಾಗಿದೀಯಂತೆ.......

ಭಾವ ಕಿಶೋರನನ್ನ ಹೇಗೆ ಒಪ್ಕೊಂಡ್ರು......?"

"ಆದ್ರೂ ಮದ್ವೇನು ಅರ್ಜೆಂಟಿತ್ತು. ನೀನಿನ್ನೂ ಪಿ.ಯು.ಸಿ. ನ ಸಹ ಮುಗಿಸಿಲ್ಲ."

ಚಿನ್ಮಯಿ ಮಾತಾಡಲಿಲ್ಲ. ಅವಳ ಹೊಟ್ಟೆಯ ಮೇಲೆ ಕೈಯಾಡಿಸಿಕೊಂಡಳು. ಎಲ್ಲಾ ಅರ್ಥವಾಗಿತ್ತು. ಆದರೆ ಕಿಶೋರನ ಒಳ್ಳೆಯತನಕ್ಕೂ ಚಿನ್ಮಯಿ ಗರ್ಭವತಿಯಾಗಿರುವುದಕ್ಕೂ ಏನು ಸಂಬಂಧ? ಎಲ್ಲೋ ಏನೋ ಎಡವಟ್ಟಾಗಿದೆ ಎಂದು ಅರ್ಥವಾಗಿತ್ತು.

* * *

ಸೀತಾರಾಮ ಭಟ್ಟನ ತಂದೆ ಹಿರಯಣ್ಣ ಭಟ್ಟರು ತೀರಿಕೊಂಡರೆಂಬ ವರ್ತಮಾನ ಬಂತು. ಭಟ್ಟ ಯಾರೊಡನೆಯೂ ಮಾತನಾಡದೆ ಸುಮ್ಮನೇ ಕುಳಿತಿದ್ದ. ಅವನ ಮನಸ್ಸಿನಲ್ಲಿ ಏನಿತ್ತು ಅಂತ ಅವನೇ ಬಲ್ಲ. ಅಷ್ಟರಲ್ಲಿ ಕಾಮಾಕ್ಷಿ ಅವಸರವಸರವಾಗಿ ಬಂದಳು.

"ಏನೋ ಭಟ್ಟ..... ಹಿರೀ ಭಟ್ಟರು ತೀರಿಕೊಂಡ್ರಂತೆ....... ಇಲ್ಲೇ ಕೂತಿದೀಯಲ್ಲ. ಊರಿಗೆ ಹೋಗುಲ್ವಾ?"

"ನಾನು ಹೋಗಿ ಏನ್ಮಾಡ್ಬೇಕಾಗಿದೆ.... ಅಲ್ಲಿ ಚಿಕ್ಕಮ್ಮ, ಅವ್ರ ಮಕ್ಳು ಇದಾರಲ್ಲ."

"ಹಾಗಂದ್ರೆ ಹೇಗೆ? ನೀನು ಅವರ ಹಿರಿ ಮಗ. ನೀನು ಹೋಗ್ಲೇ ಬೇಕು. ನೀನು ಹೋಗ್ದೇ ಹೆಣಾನ ಜರುಗಿಸುಲ್ಲ, ಏಳು. ಒಬ್ನೇ ಹೋಗೋಕೆ ಕಷ್ಟ ಅನ್ನಿಸಿದ್ರೆ, ನಾನೂ ನಿಂಜೊತೆಗೆ ಬರ್ತೀನಿ ನಡೆ." ಎನ್ನುತ್ತಾ ಅವನಿಗೆ ಮರು ಮಾತಾಡಲು ಅವಕಾಶ ಕೊಡದೇ ಎಬ್ಬಿಸಿದಳು. ಉಳಿದವರಿಗೂ ವಿಷಯವನ್ನು ತಿಳಿಸಲೆಂದು ಒಳಗೆ ಬಂದಳು.

"ಓ.... ಭವಾನಿ ಬಂದಿದಾಳೆ. ಒಳ್ಳೇದೇ ಆಯ್ತು. ಪ್ರೇಮಕ್ಕಂಗೆ ಜತೆ ಆಯ್ತು. ನಾನೂ ಭಟ್ಟನೊಟ್ಟಿಗೆ ಹೋಗ್ತೀನಿ. ಎಷ್ಟೊತ್ತಾಗುತ್ತೋ ಬರಲು. ಯಾರೂ ಕಾಯ್ತಾ ಕೂರಬೇಡಿ. ಊಟ ಮಾಡಿ ಮಲಗಿ." ಎಂದು ಹೇಳಿ ಭಟ್ಟನನ್ನು ಹೊರಡಿಸಿದಳು. ಡ್ರೈವರ್ ಕಾರನ್ನು ಶೆಡ್‌ನಿಂದ ಹೊರ ತೆಗೆದ. ಪ್ರಶಾಂತನಿಗೂ ವಿಷಯ ತಿಳಿದು ಅವನೂ ಹೊರಟ. ಅವನೊಂದಿಗೆ ಗೌತಮನೂ ಹೊರಟ. ಇಬ್ಬರೂ ಬೈಕ್ ಹತ್ತಿದರು. "ಸುಗುಣಾ ಒಬ್ಬಳೇ ಇದ್ದಾಳೆ. ಶ್ರೀಕರಂತಗೆ ಹೋಗಿರು ಅಂತ ಹೇಳಿ" ಎಂದು ಕೂಗಿ ಹೇಳಿ, ಬೈಕನ್ನು ಓಡಿಸಿದ. ಶಾರದಮ್ಮನೂ ಕೆಲಸವನ್ನು ಮುಗಿಸಿ, ಅವರಿಬ್ಬರೊಂದಿಗೆ ಮಾತಿಗೆ ಕೂತಳು. ಕಾಲೇಜಿನಿಂದ ಬಂದ ಕಿಶೋರ, ಸೀದಾ ಮಹಡಿಯನ್ನು ಹತ್ತಿದ. ಅವನು ಮತ್ತೆ ಕೆಳಗಿಳಿದು ಬರುವಷ್ಟರಲ್ಲಿ ಶಾರದಮ್ಮ ಎರಡು ತಟ್ಟೆಗಳಲ್ಲಿ ತಿಂಡಿಯನ್ನು, ಎರಡು ಬಟ್ಟಲಿಗೆ ಕಾಫಿಯನ್ನು ಬಗ್ಗಿಸಿಟ್ಟಳು. ಎರಡನ್ನು ಎತ್ತಿಕೊಂಡು ಕಿಶೋರ ಮತ್ತೆ ಮಹಡಿ ಹತ್ತಿದ.

"ಚಿನ್ಮಯೀ ಕೆಳಗಿಳಿದೇ ಬರುಲ್ವಾ?" ಶಾರದಮ್ಮನನ್ನು ಕೇಳಿದಳು.

"ಡಾಕ್ಟ್ರು ಅವಳಿಗೆ ರೆಸ್ಟ್‌ನಲ್ಲಿರೋಕೆ ಹೇಳಿದಾರೆ. ಕಿಶೋರ ಅವಳಿಗೆ ಕೂತ ಜಾಗಕ್ಕೆ ಎಲ್ಲಾ ಸರಬರಾಜು ಮಾಡ್ತಾನೆ. ಅವಳೀಗ ಮೂರು ತಿಂಗಳ ಬಸುರಿ. ನಿಮಗೆ ಗೊತ್ತಿಲ್ವಾ....?" ಭವಾನಿ ಅಕ್ಕನ ಕಡೆ ನೋಡಿದಳು. ಪ್ರೇಮಾ ತಲೆ ತಗ್ಗಿಸಿದಳು. ಅಕ್ಕನ ಮನಸ್ಸಿಗೆ ನೋವಾಗಬಾರದೆಂದು ಭವಾನಿ ಆ ಮಾತನ್ನು ಅಷ್ಟಕ್ಕೇ ಬಿಟ್ಟಳು.

ಮಧ್ಯರಾತ್ರಿಯ ಹೊತ್ತಿಗೆ ಭಟ್ಟ ವಾಪಸ್ಸಾದ. ಕಾಮಾಕ್ಷಿ ಅಲ್ಲೇ ಉಳಿದುಕೊಂಡಿದ್ದಳು. ಪ್ರಶಾಂತ ಗೌತಮನನ್ನು ಇಲ್ಲಿ ಬಿಟ್ಟು ತನ್ನ ಮನೆಗೆ ಹೋದ. ಭಟ್ಟ, ಗೌತಮ ಇಬ್ಬರೂ ಸ್ನಾನ ಮಾಡಿದರು. ಶಾರದಮ್ಮ ಇಬ್ಬರನ್ನೂ ಕೂರಿಸಿ ಬಡಿಸಿದಳು. ಭಟ್ಟ ಮಾತಿಲ್ಲದೇ ಊಟ ಮಾಡಿ ಎದ್ದ. ಅವನೂ ಏನನ್ನೂ ಹೇಳಲಿಲ್ಲ. ಇವರೂ ಯಾರೂ ಕೇಳಲಿಲ್ಲ. ಗೌತಮನೇ ತನಗೆ ತಿಳಿದಷ್ಟನ್ನು ತಾಯಿಗೆ ಹೇಳಿದ.

ಆದರೆ ಆ ರಾತ್ರಿ ಭಟ್ಟನಿಗೆ ಬಹಳ ಹೊತ್ತಿನವರೆಗೆ ನಿದ್ದೆ ಬಂದಿರಲಿಲ್ಲ. ಎಷ್ಟೋ ವರ್ಷಗಳ ಅನಂತರ ಅವನ ಬಾಲ್ಯ ಅವನಿಗೆ ನೆನಪಾಗಿತ್ತು. ಈಗ ಆ ತಂದೆ ಬದುಕಿಲ್ಲ. ಆದರೆ ಅವನ ಕಣ್ಣಿನಿಂದ ಒಂದೇ ಒಂದು ಹನಿ ಉದುರಲಿಲ್ಲ.

ಮಾರನೆಯ ದಿನ ಬೆಳಗ್ಗೆ ಊರಿನಿಂದ ಬಂದ ಕಾಮಾಕ್ಷಿ ಬಣ್ಣಬಣ್ಣವಾಗಿ ಅಲ್ಲಿಯ ವಿಷಯಗಳನ್ನು ತಿಳಿಸಿದಳು. ಕಡೆಯಲ್ಲಿ ತಿಳಿಸಿದ ಸುದ್ದಿ ಅತ್ಯಂತ ಮುಖ್ಯವಾಗಿತ್ತು. ಹಿರಿ ಭಟ್ಟರು ತಮ್ಮ ಆಸ್ತಿಯನ್ನು ಎರಡು ಸಮ ಭಾಗಮಾಡಿ ಹಂಚಿದಾರೆ. ಒಂದು ಭಾಗ ಮೊದಲನೆಯ ಹೆಂಡ್ತಿ ಮಗ ಸೀಭಟ್ಟನಿಗೆ, ಎರಡನೆಯ ಭಾಗ ಚಿಕ್ಕಮ್ಮನಿಗೆ. ಈ ವಿಷಯ ತಿಳಿದೂ ಭಟ್ಟ ಅಂತ್ಯಕ್ರಿಯೆ ಮಾಡಲು ಒಪ್ಪಿಕೊಳ್ಳಲಿಲ್ಲ. "ನಾನು ಇದನ್ನೆಲ್ಲ ಮಾಡುಲ್ಲ. ಚಿಕ್ಕಮ್ಮನ ಮಗನೇ ಮಾಡಲಿ." ಅಂತ ಖಂಡಿತವಾಗಿ ಹೇಳಿಬಿಟ್ಟ. ಭವಾನಿ, ಪ್ರೇಮಾ ಮುಖ ಮುಖ ನೋಡಿಕೊಂಡರು.

"ಅಂತೂ ಈ ಭಟ್ಟಂದು ಒಂದೇ ಹಠ ಕಡೆಗೂ, ಹಿರೀಭಟ್ಟರ ಶವಕ್ಕೆ ಕೊಳ್ಳಿ ಇಡಲಿಲ್ಲವಲ್ಲ..... ಪಾಪ, ಆ ಮಂಜು ಭಟ್ಟನೇ ಎಲ್ಲಾ ಮಾಡ್ತು..... ಅಪ್ಪನ ಋಣಾನ ಈಗ್ಲಾದ್ರೂ ತೀರಿಸ್ಬೋದಾಗಿತ್ತು......" ಕಾಮಾಕ್ಷಿ ನಿಟ್ಟುಸಿರುಬಿಟ್ಟಳು.

"ಇವ್ರ ಚಿಕ್ಕಮ್ಮ ಏನಂದ್ರು?"

"ಅವ್ರೇನಂತಾರೆ? ಅವ್ರು ಕಾಲಿಟ್ಟ ದಿನದಂದೇ ಇವ ಆ ಮನೆಯಿಂದ ಹೊರಕ್ಕೆ ಕಾಲಿಟ್ಟವ. ಮಗ ಅನ್ನೋ ಸಂಬಂಧ ಆಕೆಗೆ ತಿಳೀದು.... ಚಿಕ್ಕಮ್ಮ ಅನ್ನೋ ಗೌರವ ಇವನಿಗಿಲ್ಲ. ಮಧ್ಯೆ ಇದ್ದ ಒಂದು ಕೊಂಡಿಯೂ ಬಿದ್ದು ಹೋಯಿತು. ಇನ್ನೇನುಳಿದಿದೆ ಅಲ್ಲಿ?"

"ಆಸ್ತಿ ವಿಷಯ ಯಾಕೆ ಬಂತು......?"

"ಇವತ್ತಲ್ಲ ನಾಳೆ ಆ ವಿಷಯ ಬಂದೇ ಬರುತ್ತೆ ಅಲ್ವಾ. ಭಟ್ಟ ಏನೂ

ಕೇಳಲಿಲ್ಲ. ಭಟ್ಟನ ಸೋದರ ಮಾವ ಬಂದಿದ್ದೋರು ಆ ಮಾತನ್ನು ಎತ್ತಿದರು. ಭಟ್ಟ ಮಾತಾಡ್ಲಿಲ್ಲ."

"ನೀವು ಹೋಗಿದ್ರಿಂದ ಇಷ್ಟು ವಿಷಯ ತಿಳೀತು ಕಾಮಾಕ್ಷಿ. ಇಲ್ದಿದ್ರೆ ಏನೂ ತಿಳೀತಿರಲಿಲ್ಲ. ಮತ್ತೆ ಮುಂದಿನ ಕೆಲಸ ಎಲ್ಲಾ ಯಾರು ಮಾಡ್ತಾರೆ......?"

"ಮಂಜು ಭಟ್ಟನೇ ಮಾಡ್ತದೆ..... ಚಿಕ್ಕಮ್ಮನೂ ಬಲವಂತ ಮಾಡ್ಲಿಲ್ಲ. ಇವನ್ಗೂ ಬೇಕಿಲ್ಲ. ನೀವು ಹೋಗಿ ಚಿಕ್ಕಮ್ಮನ ಮಾತಾಡ್ಸಿಕೊಂಡು ಬರಬೇಕಲ್ಲ."

"ಇವ್ರು ಕರ್ಕೊಂಡು ಹೋದ್ರೆ ಹೋಗ್ಬಹುದು."

"ನೀನೆಲ್ಲಿಗೆ ಹೋಗ್ತೀಯೇ ಅಕ್ಕಾ. ನಿಂಗೇ ಹುಶಾರಿಲ್ಲ..... ವಿದ್ಯಾಳ ಮದುವೇಲಿ ಅವರನ್ನೆಲ್ಲ ನೋಡಿದ್ದು ಆಗಿದೆ...... ಭಾವಂಗೆ ಬೇಡವಾಗಿರುವಾಗ ನಿಂಗ್ಯಾಕೆ?"

"ಅದೂ ನಿಜ ಪ್ರೇಮಕ್ಕ. ಹೋಗ್ದಿದ್ರೆ ಸಂಬಂಧ ಬಿಟ್ಟು ಹೋಗುತ್ತೆ ಅನ್ನೋದು ಏನೂ ಇಲ್ಲ. ಅತ್ಲಾಗೆ ಸುಮ್ಮನಿದ್ದು ಬಿಡಿ." ಎನ್ನುತ್ತಾ ಚಿನ್ಮಯಿಯನ್ನು ಮಾತನಾಡಿಸಿ ಬರಲೆಂದು ಮೇಲೆ ಹೋದಳು.

"ನಿಮ್ಮನೆ ವಿಷಯ ನಂಗೆ ಅರ್ಥ ಆಗುಲ್ಲ ಕಣೇ ಅಕ್ಕಾ.... ಈ ಕಿಶೋರ, ಕಾಮಾಕ್ಷಿ ಇಲ್ಲೇ ಬಂದು ಸ್ಸೇರ್ಕೊಂಡಿದಾರಲ್ಲ. ಭಾವಂಗೆ ಗೊತ್ತಾಗುಲ್ವಾ?"

"ಅವರೇ ಇವ್ರನ್ನೆಲ್ಲ ಸೇರಿಸ್ಕೊಂಡಿರೋದು. ಕಿಶೋರನ್ನ ಕಾಲೇಜಿಗೆ ಸೇರಿಸಿದಾರೆ. ಮಗಳನ್ನು ಮದ್ವೆ ಮಾಡಿಕೊಟ್ಟಿದಾರೆ. ಅರ್ಧಭಾಗ ಆಸ್ತೀನೂ ಕೊಡ್ತಾರೆ ಅಂತ ಕಾಣುತ್ತೆ. ಇದೆಲ್ಲ ಪ್ರಶಾಂತನ ಮೇಲಿನ ಕೋಪಕ್ಕೆ ಮಾಡ್ತಿದಾರೇನೋ ಅಂತ ಅನ್ನಿಸ್ತಿದೆ....."

"ಏನೇ ಆದರೂ ಮಗ ಮಗನೇ, ಅಳಿಯ ಮಗನಾಗೋಕೆ ಸಾಧ್ಯಾನಾ?"

"ಆಗ ವಿದ್ಯಾ ಕಿಶೋರನ್ನ ಮದ್ವೆ ಆಗ್ತೀನಿ ಅಂತ ಹೇಳ್ದಾಗ ಅದನ್ನು ತಪ್ಪಿಸಿದವರೂ ಇವರೇ. ಈಗ ಮಗಳನ್ನು ಕೊಟ್ಟು ಅವನನ್ನು ಸಾಕುತ್ತಿರುವವರೂ ಇವರೇ..... ಇದೆಲ್ಲಾ ಯಾವುದೋ ಭೂತದ ಚೇಷ್ಟೆಯೇ ಇರಬೇಕು....." ಪ್ರೇಮಾ ನಕ್ಕಾಗ, ಭವಾನಿಯೂ ತನ್ನ ನಗುವನ್ನು ಸೇರಿಸಿದಳು.

* * *

ಚೊಚ್ಚಲು ಬಸುರಿ, ಚಿನ್ಮಯಿಗೆ ಸೀಮಂತ ಮಾಡಬೇಕೆಂದು ಕಾಮಾಕ್ಷಿ ಆಸೆಪಟ್ಟಳು. ಆದರೆ ಭಟ್ಟ ನಿರಾಕರಿಸಿದ. "ಅದನ್ನೆಲ್ಲಾ ಎಂದೂ ನಮ್ಮ ಮನೆಯಲ್ಲಿ ಮಾಡಿಲ್ಲ. ನಿನಗೆ ಆಸೆ ಇದ್ದರೆ, ನಿನ್ನ ಮನೇಲಿ ಮಾಡ್ಕೋ......" ಎಂದು ಬಿಟ್ಟ. ಕಾಮಾಕ್ಷಿ ಪೆಚ್ಚಾದಳು. ಅದ್ದೂರಿಯಾಗಿ ಒಂದು ಸಮಾರಂಭವನ್ನು ಮಾಡಬೇಕೆಂಬ ಆಸೆ ಅಲ್ಲೇ ಅಡಗಿತು.

"ಬಿಡಮ್ಮ ಅದಕ್ಯಾಕೆ ಚಿಂತೆ ಮಾಡ್ತೀಯ?" ಎಂದು ಸಂತೈಸಿದ್ದ. ಆದರೆ ಚಿನ್ಮಯಿಗೆ ಆಸೆ ಇತ್ತು. ಹಸುರು ರೇಶಿಮೆ ಸೀರೆಯನ್ನುಟ್ಟು ಹಸುರು ಕುಪ್ಪಸ

ತೊಟ್ಟು, ಹಸುರು ಬಳೆಗಳನ್ನು ಧರಿಸಿ ಬೀಗಬೇಕೆಂಬ ಆಸೆ ಇತ್ತು.

"ನೋಡು, ನಾವು ಹಾಗೆ ಸಂಭ್ರಮ ಪಟ್ಟರೆ ನಿಮ್ಮಪ್ಪನಿಗೆ ಅನುಮಾನ ಬರುತ್ತೆ. ನನ್ನನ್ನ ಈ ಮನೆಯಿಂದ ಆಚೆ ತಳ್ತಾರೆ. ನಿನಗೆ ಅದು ಇಷ್ಟಾನಾ?"

"ಥೂ ಎಲ್ರೂ ಸೇರಿ, ನನ್ನ ಆಸೆಗಳನ್ನೇ ತುಳಿದು ಹಾಕ್ತಿದೀರಿ...." ಮುನಿಸಿ ಕೊಂಡು ಕುಳಿತವಳನ್ನು ರಮಿಸಿದ.

"ನಿಂಗೆ ಸೀರೆ, ರವಿಕೆ, ಬಳೆ ಎಲ್ಲಾ ತಂದುಕೊಡ್ತೀನಿ. ನೀನು ಕೋಪಿಸಿ ಕೊಳ್ಳಬೇಡ ನಂಗೆ ಕಷ್ಟವಾಗುತ್ತೆ." ಎಂದಿದ್ದ.

"ಹಾಗಾದ್ರೆ ನಾವುಗಳು ಎಲ್ಲಾದ್ರೂ ತಿರುಗಾಡಿ ಬರೋಣ....." ಅವಳ ಕೆನ್ನೆಯನ್ನು ಹಿಂಡಿದ.

"ಹೂಂ. ತಿರುಗಾಡಿ ಬರೋಣ! ಇಷ್ಟು ಗಾತ್ರ ಹೊಟ್ಟೆ ಇಟ್ಕೊಂಡು ಹೇಗೆ ತಿರುಗಾಡ್ತೀಯ. ಜನರೆಲ್ಲಾ ನಿನ್ನನ್ನೆ ವಿಚಿತ್ರವಾಗಿ ನೋಡ್ತಾರೆ."

"ಥೂ ಹೀಗೆ ಅಂತ ಗೊತ್ತಿದ್ದಿದ್ರೆ..... ನಾನು ನಿನ್ನನ್ನು ಮದ್ವೇನೇ ಆಗ್ತಿರಲಿಲ್ಲ."

"ಈಗ್ಲೂ ನಿಂಗೆ ನಾನು ಬೇಡ್ವಾದ್ರೆ ಹೇಳಿ ಬಿಡು. ನಾನು ನಮ್ಮ ಮನೆಗೆ ಹೋಗ್ತೀನಿ."

"ನನ್ನನ್ನು ಇಲ್ಲಿಂದ ಕರ್ಕೊಂಡ್ಹೋಗು ಕಿಶೋರ. ನಂಗ್ಯಾಕೋ ಈ ಅಪ್ಪನ ಹಂಗಿನಲ್ಲಿರುವುದು ಬೇಡಾಂತ ಅನ್ನಿಸ್ತಿದೆ."

"ಇನ್ನೊಂದ್ವರ್ಷ ತಡ್ಕೋ ಚಿನ್ನಾ...... ಕೆಲ್ಸಕ್ಕೆ ಸೇರಿದ್ಕೂಡ್ಲೇ ಬೇರೆ ಮನೆ ಮಾಡಿ ಕರ್ಕೊಂಡು ಹೋಗ್ತೀನಿ. ಆದರೆ ಮನೆ ಕೆಲಸೆಲ್ಲಾ ನಿನ್ನ ತಲೆ ಮೇಲೆ ಬೀಳುತ್ತಲ್ಲ..... ಇಲ್ಲದ್ರೆ ಆರಾಮವಾಗಿ ಕೂತ್ಕೊಂಡು ತಿಂದ್ಕೊಂಡು ಮಜವಾಗಿ ದೀಯ....."

"ಶಾರದಮ್ಮನ್ನ ನಮ್ಮನೆಗೆ ಕರ್ಕೊಂಡು ಹೋಗೋಣ..." ಕಿಶೋರ ಅವಳ ಕೆನ್ನೆ ಹಿಂಡಿದ.

"ಹೂಂ. ಶಾರದಮ್ಮನ್ನ ಕರ್ಕೊಂಡ್ಹೋಗೋಣ.......! ಅವರಿಗೆ ಸಂಬಳ ನಿಮ್ಮಪ್ಪ ಕೊಡ್ತಾರಾ......? ನೀನು ಇಲ್ಲಿರುವಾಗ್ಲೇ ಅಡ್ಗೆ ಕೆಲ್ಸಾನ ಕಲಿತ್ಕೋ......"

"ನಂಗೆ ಅಡ್ಗೆ ಮಾಡೋಕೇ ಭಯ....... ಬೆಂಕಿ ಹತ್ಕೊಂಡು ಬಿಟ್ರೆ...... ಮೈ ಸುಟ್ಟು ಹೋದ್ರೆ....."

"ಅಡ್ಗೆ ಮಾಡೋರೆಲ್ಲ ಸುಟ್ಕೊಳ್ಳಲ್ಲ. ಸಧ್ಯಕ್ಕೆ ಆ ಯೋಚ್ನೆ ಬೇಡ. ಏನಂತಾರೆ ನಮ್ಮ ಪುಟ್ಟು." ಎನ್ನುತ್ತಾ ಅವಳ ಹೊಟ್ಟೆಯ ಮೇಲೆ ಕೈಯನ್ನಿಟ್ಟ.

"ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ತುಂಬಾ ಓಡಾಡ್ತಾನೆ. ಒಂದೊಂದ್ಸಲವಂತೂ ತುಂಬಾ ಕಷ್ಟ ಆಗುತ್ತೆ..... ಬೇಗ ಹೆರಿಗೆ ಆದ್ರೆ ಸಾಕು ಅಂತ ಕಾಯ್ತಾ ಇದೀನಿ....."

"ಆ ಪುಟ್ಟನ್ನ ನನ್ನ ಹೊಟ್ಟೇಲಿಟ್ಕೊಂಡು ಬೆಳೆಸುವ ಹಾಗಿದ್ದಿದ್ರೆ...... ಅದನ್ನೂ

ಮಾಡ್ತಿದ್ದೆ. ಆದರೇನು ಮಾಡ್ಲೀ...... ಆ ಕೆಲ್ಸ ಬರೀ ಹೆಂಗಸರಿಗೇ ಮಾತ್ರ....."

"ಥತ್ ನಾಚ್ಕೆ ಇಲ್ದೆ ಏನೇನೋ ಮಾತಾಡ್ತೀಯಪ್ಪಾ......"

"ನಾನು ನಾಚ್ಕೊಂಡಿದ್ದಿದ್ರೆ...... ಇವತ್ತು ನಿನ್ನ ಹೊಟ್ಟೆ ಒಳಗೆ ಪುಟ್ಟ ಬೆಳೀತಿರೆಲಿಲ್ಲ, ತಿಳ್ಕೋ." ಎನ್ನುತ್ತಾ ಮುಗುಳ್ನಕ್ಕು ಅವಳ ತೊಡೆಯ ಮೇಲೆ ತಲೆಯನ್ನಿರಿಸಿ ಮಲಗಿದ.

"ಅಕ್ಕಾ ನಿನ್ನನ್ನು ಇವತ್ತೂ ಕೆಟ್ಟೋನು ಅಂತ್ಲೇ ತಿಳ್ಕೊಂಡಿದಾಳೆ. ಅವ್ಳೇ ಕೆಟ್ಟೋಳು."

"ನಿಮ್ಮಕ್ಕನಿಗೆ ತುಂಬಾ ಜಂಭ ಬಂದು ಬಿಟ್ಟಿದೆ."

"ಹೌದು ಭಾವ ಇಂಜಿನಿಯರ್. ಕೈ ತುಂಬಾ ಸಂಪಾದಿಸ್ತಾರೆ. ಅವಳನ್ನು ತುಂಬಾ ಪ್ರೀತಿಸ್ತಾರೆ. ನೀನೂ ಇಂಜಿನಿಯರ್ ಆಗೋಕೆ ಆಗುಲ್ವಾ ಕಿಶೋರ....."

"ಈಗ ಇಂಜಿನಿಯರಿಂಗ್ ಓದಬೇಕೂಂತಾದ್ರೆ ಇನ್ನೂ ನಾಲ್ಕೈದು ವರ್ಷ ಓದಬೇಕಾಗುತ್ತೆ. ಅಲ್ಲೀವರೆಗೂ ನೀನು ಇಲ್ಲೇ ಇರಬೇಕಾಗುತ್ತೆ..... ನಿಮ್ಮಪ್ಪ ಏನಂತಾರೋ....."

"ಬಿ.ಎಸ್ಸಿ. ಓದಿದ್ಮೇಲೆ ಲಾ ಕಾಲೇಜ್ಗೆ ಸೇರ್ಕೋತೀನಿ ಅಂತ ನಮ್ಮಪ್ಪಂಗೆ ಹೇಳು. ಅವರಿಗೆ ಖುಶಿಯಾಗುತ್ತೆ. ಖಂಡಿತಾ ಓದಿಸ್ತಾರೆ....."

"ಲಾ ಕಾಲೇಜ್ಗೆ ಸೇರ್ಕೋಬೇಕಾ? ನನಗೆ ಈ ಕಾನೂನು ಗೀನೂನು ಅಂದ್ರೆ ಹಿಡಿಸುಲ್ಲ."

"ಲಾಯರಾದ್ರೆ ಅಪ್ಪನ ಹಾಗೆ ಬಂಗ್ಲೆ ಕೊಂಡ್ಕೊಳ್ಳಬಹುದು. ಕಾರನ್ನಿಟ್ಟುಕೊಳ್ಳಬಹುದು. ಈ ಆಸೆ ನಿನಗೂ ಇತ್ತು ಅಲ್ವಾ.....!"

"ಕಾರು, ಬಂಗ್ಲೆ ಆಸೆ ಈಗ್ಲೂ ಇದೆ. ಹಾಗಂತ ಲಾ ಮಾತ್ರ ಓದುಲ್ಲ....."

"ನಂಗೂ ಲಾಯರ್ರನ್ನ ಕಂಡ್ರೆ ಅಷ್ಟಕ್ಕಷ್ಟೇ."

"ಕಿಶೋರ..... ಕಿಶೋರ....." ಕೆಳಗ್ನಿಂದ ಕಾಮಾಕ್ಷಿ ಏರು ಧ್ವನಿಯಲ್ಲಿ ಕರೆದಾಗ, ಕಿಶೋರನಿಗೆ ರಸಭಂಗವಾಗಿತ್ತು.

"ಈ ಅಮ್ಮಂಗೆ ಒಂದು ಚೂರೂ ತಿಳಿಯುಲ್ಲ. ಮಗಂಗೆ ಮದ್ವೆ ಆಗಿದೆ..... ಹೆಂಡ್ತಿ ಜತೆ ಸಲ್ಲಾಪದಲ್ಲಿದಾನೆ ಅಂತ ತಿಳೀಬೇಡ್ವಾ?" ಗೊಣಗಿದ. ಚಿನ್ಮಯಿ ಕಿಲ ಕಿಲ ನಕ್ಕಳು.

"ನಗ್ತೀಯಾ ನಗು. ನಗು. ಮತ್ತೆ ಬಂದು ವಿಚಾರಿಸಿಕೊಳ್ತೀನಿ ನಿನ್ನ......" ಆಚೆ ನಡೆದ.

* * *

ಅಧ್ಯಾಯ - ಮೂವತ್ತನಾಲ್ಕು

ಪ್ರೇಮಳಿಗೆ ಹೃದಯಾಘಾತ

ಚಿನ್ಮಯಿಗೆ ಸಕಾಲದಲ್ಲಿ ಗಂಡು ಮಗುವಾಯಿತು. ಕಾಮಾಕ್ಷಿ ಸಡಗರದಿಂದ ಸೊಸೆಯನ್ನು ಚೆನ್ನಾಗಿ ವಿಚಾರಿಸಿಕೊಂಡಳು. ಚಿನ್ಮಯಿಯಂತೂ ಆನಂದದಿಂದ ಮೆರೆದಿದ್ದಳು. ತಾನು ಅಕ್ಕನಿಗಿಂತ ಒಂದು ಕೈ ಮೇಲು ಎಂದು ಜಂಭಪಟ್ಟಳು.

"ವಿದ್ಯಾ ನನ್ನ ಕೈಲ್ಲಿ ಬಾಣಂತನವನ್ನು ಮಾಡಿಸ್ಕೊಳ್ಳಲಿಲ್ಲ. ನೀನಾದ್ರೂ ನಾನು ಹೇಳಿದ ಹಾಗೆ ಕೇಳಬೇಕು." ಸೊಸೆಗೆ ತಾಕೀತು ಮಾಡಿದಳು. ಪ್ರೇಮಳಿಗೆ ಅವಳ ಸಡಗರ ಅರ್ಥವಾಗಲಿಲ್ಲ. ಕಾಮಾಕ್ಷಿಯ ವರ್ತನೆ ವಿಚಿತ್ರವಾಗಿ ಕಂಡಿತ್ತು. ಆದರೆ ಅದನ್ನು ಯಾರೊಡನೆ ಹೇಳಿಕೊಳ್ಳಬೇಕು.

ಚಿನ್ಮಯಿ ಆಸ್ಪತ್ರೆಯಲ್ಲಿದ್ದರೂ, ಕಿಶೋರ ಇಲ್ಲೇ ಬಂದು ಮಲಗುತ್ತಿದ್ದ. ಕಾಮಾಕ್ಷಿ ಆಸ್ಪತ್ರೆಯಲ್ಲಿ ಮಲಗುತ್ತಿದ್ದಳು. ಈಗ ಕಿಶೋರ ಎಲ್ಲಾದಕ್ಕೂ ನಳಿನಿಯನ್ನು ಕರೆಯುತ್ತಿದ್ದ. ಅದು ಅವಳಿಗೆ ಹಿಡಿಸಿರಲಿಲ್ಲ. "ಅಕ್ಕ ಮನೆಗೆ ಬರೋವರೆಗೂ ನಾನು ಅಣ್ಣನ ಮನೇಲಿರ್ತೀನಿ. ಕಿಶೋರ ಏನೇನೋ ಕೇಳ್ತಾನೇ ಇರ್ತಾನೆ. ನಂಗೆ ಬೇಜಾರು."

"ಏನು ಕೇಳ್ತಾನ್ಯೇ....." ಪ್ರೇಮಾ ಆತಂಕದಿಂದ ಕೇಳಿದಳು.

"ಅಡುಗೆ, ತಿಂಡಿ ವಿಷಯವನ್ನೆಲ್ಲ ನನ್ಹತ್ರ ಕೇಳ್ತಾನೆ. ಯಾಕೆ ಶಾರದಮ್ಮ ಇಲ್ವಾ?"

"ಸರಿ, ನೀನು ಪ್ರಶಾಂತನ ಮನೆಗೆ ಹೋಗು. ನಿಮ್ಮಪ್ಪ ಕೇಳಿದ್ರೆ ನಾನ್ಹೇಳ್ತೀನಿ." ನಳಿನಿ ಸಡಗರದಿಂದ ಬ್ಯಾಗು ಹಿಡಿದು ಅಣ್ಣನ ಮನೆಗೆ ಹೊರಟು ಹೋದಳು. ಈಗ ಶ್ರೀಕರ ಸಿಕ್ಕಿ ಬಿದ್ದ. ಶ್ರೀಕರ ಕೂಗು ತನಗೆ ಕೇಳಿಸಲಿಲ್ಲವೆಂಬಂತೆ ಓದಿ ಕೊಳ್ಳುತ್ತಿದ್ದ.

ಹೀಗೆ ಕಿಶೋರ ಆಕ್ರಮಿಸಿಕೊಂಡರೆ ಮುಂದೆ ಏನು ಗತಿ ಎಂದು ಪ್ರೇಮಳಿಗೆ ಆತಂಕವಾಯ್ತು. ಬಹುಶಃ ಕಿಶೋರ ಇದನ್ನೆಲ್ಲ ಮುಂಚೆಯೇ ಆಲೋಚಿಸಿರಬೇಕು. ವಿದ್ಯಾ ಅವನ ಕೈಗೆ ಸಿಗಲಿಲ್ಲ. ಚಿನ್ಮಯಿಯನ್ನು ಒಲಿಸಿಕೊಂಡಿರಬಹುದೆಂಬ ಅನುಮಾನ ಇಷ್ಟು ದಿನಗಳ ಅನಂತರ ಕಾಡಿತು. ಯಾರೂ ಇಲ್ಲದ ಸಮಯ ನೋಡಿ ಭಟ್ಟನ ಹತ್ರ ಮಾತನಾಡಲೆಂದು ಬಂದಳು.

"ಈಗ ನಳಿನಿಯೂ ದೊಡ್ಡವಳಾಗಿದಾಳೆ. ಕಿಶೋರನ ಎದುರಿಗೆ ಓಡಾಡಲು ಅವಳಿಗೆ ಸಂಕೋಚವಾಗುತ್ತೆ. ಕಿಶೋರ ಯಾಕೆ ಇಲ್ಲೇ ಇದಾನೆ? ನೀವ್ಯಾಕೆ

ಸುಮ್ಮನಿದ್ದೀರಿ?"

"ಕಿಶೋರ ಮನೆಯ ಮರ್ಯಾದೆಯನ್ನು ಉಳಿಸಿದಾನೆ. ಅವನ ವಿದ್ಯಾಭ್ಯಾಸ ಮುಗಿದ ಅನಂತರ, ನಾನೇ ಅವನಿಗೆ ಬೇರೆ ವ್ಯವಸ್ಥೆ ಮಾಡ್ತೀನಿ."

"ಅಲ್ಲಿಯವರೆಗೂ ನಳಿನಿ ಏನ್ಮಾಡ್ಬೇಕು.....?"

"ಹಾಗಂತ ಕಿಶೋರನ್ನ ಮನೆ ಬಿಟ್ಟು ಹೋಗು ಅಂತ ಹೇಳ್ಲಾ?"

"ನಿಮಗೆ ಮನೆ ಮಕ್ಕಳಿಗಿಂತ ಕಾಮಾಕ್ಷಿ ಮಗ ಹೆಚ್ಚಾದ್ನಾ...... ಕಾಮಾಕ್ಷಿ ಏನೋ ಮಾಟ ಮಾಡಿಸಿರಬೇಕು ನಿಮಗೆ."

"ಸುಮ್ನೇ ನನ್ನನ್ನ ರೇಗಿಸ್ಬೇಡ. ನಾನು ಮಾಡಿದ್ದೆಲ್ಲಾ ಮಕ್ಕಳ ಒಳ್ಳೆಯ ದಕ್ಕೇ. ಅದು ನಿನಗೂ ಅರ್ಥವಾಗಲಿಲ್ಲ. ನಿನ್ನ ಮಕ್ಕಳಿಗೂ ತಿಳಿಯಲಿಲ್ಲ. ಅದಕ್ಕೆ ನಾನೇನ್ಮಾಡ್಩ಲೀ?"

"ಹಾಗಾದ್ರೆ ಅವನು ಇಲ್ಲಿ ಇರೋ ತನಕ, ನಳಿನೀನ ಭವಾನಿ ಮನೇಲಿ ಬಿಟ್ಟಿರ್ಹೋಣ. ಇಲ್ಲೇ ಇದ್ದರೆ ಅವಳ ಓದು ಬರಹಕ್ಕೂ ತೊಂದರೆ ಆಗುತ್ತೆ."

"ಯಾರ ಮನೆಗೂ ಬೇಡ...... ಇನ್ನೊಂದ್ವರ್ಷ ಅಷ್ಟೇ...... ಕಿಶೋರನ ವಿದ್ಯಾಭ್ಯಾಸ ಮುಗಿಯುತ್ತೆ. ಅರ್ಧದಲ್ಲೇ ಕಳಿಸಿ ನಾನು ಕೆಟ್ಟವನಾಗ್ಲಾರೆ..... ಕಾಮಾಕ್ಷಿಗೆ ಇದನ್ನೆಲ್ಲ ಹೇಳ್ಬೇಡ, ನೊಂದ್ಕೋತಾಳೆ ಅಷ್ಟೇ."

ಈಗ ಪ್ರೇಮಳಿಗೆ ಭಟ್ಟನ ಮೇಲೆ ಬೇರೆ ರೀತಿಯ ಸಂಶಯವೂ ಹುಟ್ಟಿಕೊಂಡಿತು. ಗಂಡ ಕಾಮಾಕ್ಷಿಯ ಮಗನಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡ್ತಿದಾನೆ. ಮೊದಲ್ನಿಂದಲೂ ಕಾಮಾಕ್ಷಿ ಭಟ್ಟನೊಡನೆ ಸಲುಗೆಯಿಂದ ಮಾತನಾಡುತ್ತಿದ್ದಳು. ಎಷ್ಟೋ ಬಾರಿ ಭಟ್ಟ ಅವಳ ಮಾತನ್ನು ಕೇಳುತ್ತಿದ್ದುದುಂಟು..... ನನ್ನ ಅನಾರೋಗ್ಯದ ನೆವ ಮಾಡಿಕೊಂಡು ಭಟ್ಟ ಕಾಮಾಕ್ಷಿಯೊಡನೆ ಬೇರೆ ರೀತಿಯ ಸಂಬಂಧವನ್ನಿಟ್ಟು ಕೊಂಡಿರಬಹುದೇ..... ಈ ಅನಿಸಿಕೆ ಮನದಲ್ಲಿ ಹೊಕ್ಕ ಕೂಡಲೇ ಪ್ರೇಮಳ ಎದೆಯಲ್ಲಿ ಚಳುಕು ಹೊಡೆಯಿತು. ಮೈ ಬೆವೆತಿತು. ಕೈ – ಕಾಲುಗಳು ನಿತ್ರಾಣಗೊಂಡವು. ನಿಲ್ಲಲು ಶಕ್ತಿ ಇಲ್ಲದವಳಂತೆ ಕುಸಿದಳು. ಇದ್ದಕ್ಕಿದ್ದಂತೆ ಹೆಂಡತಿ ಕುಸಿದು ಬಿದ್ದಾಗ ಭಟ್ಟ ಗಾಬರಿಗೊಂಡು ಶಾರದಮ್ಮನನ್ನು ಕರೆದ. ಆಕೆ ಗಾಬರಿಯಿಂದ ಧಾವಿಸಿದಳು.

"ನೋಡಿ..... ಮಾತಾಡ್ತಾ ಇದ್ದವಳು ಹಾಗೇ ಬಿದ್ದು ಬಿಟ್ಟಿದ್ದಾಳೆ...... ನಾನು ಡಾಕ್ಟರ್‌ಗೆ ಫೋನ್ ಮಾಡ್ತೀನಿ." ಶಾರದಮ್ಮ ಪ್ರೇಮಳ ಮೈ ಮುಟ್ಟಿದಳು.

"ಪ್ರೇಮಕ್ಕ ಏನಾಯ್ತು..... ಏನಾಗ್ತಿದೆ?" ಪ್ರೇಮಾ ಕಣ್ಣು ಬಿಡಲಿಲ್ಲ. ಭಟ್ಟ ಡಾಕ್ಟರ್‌ಗೆ ತತ್‌ಕ್ಷಣ ಬರುವಂತೆ ಫೋನ್‌ನಲ್ಲಿ ತಿಳಿಸಿದ. ಅವರು ಬರುವುದಕ್ಕೆ ಐದು – ಹತ್ತು ನಿಮಿಷಗಳು ಹಿಡಿಯಿತು. ಬಂದು ಪರೀಕ್ಷಿಸಿದರು. ಒಂದು ಇಂಜೆಕ್ಷನ್ ಕೊಟ್ಟರು.

"ಮೈಲ್ಡ್ ಆಗಿ ಹಾರ್ಟ್ ಅಟ್ಯಾಕ್ ಆಗಿದೆ. ಈಗಲೇ ನರ್ಸಿಂಗ್ ಹೋಮ್‌ಗೆ

ಸೇರಿಸುವುದು ಒಳ್ಳೆಯದು." ಎಂದು ಸಲಹೆಯನ್ನಿತ್ತರು. ತತ್‌ಕ್ಷಣವೇ ಸಮೀಪದಲ್ಲಿದ್ದ ನರ್ಸಿಂಗ್ ಹೋಮ್‌ಗೆ ಸೇರಿಸಿದರು. ಇದ್ದಕ್ಕಿದ್ದಂತೆ ಅವಳಿಗೇನಾಯ್ತು ಎಂದು ಭಟ್ಟನಿಗೆ ಅರ್ಥವಾಗಲಿಲ್ಲ. ಆ ಕ್ಷಣವೇ ಶ್ರೀಕರ ಹೋಗಿ ಪ್ರಶಾಂತನಿಗೆ ಸುದ್ದಿಯನ್ನು ಮುಟ್ಟಿಸಿದ್ದ. ಅವನು ಸೀದಾ ನರ್ಸಿಂಗ್ ಹೋಮ್‌ಗೆ ಬಂದ.

"ನಲವತ್ತೆಂಟು ಗಂಟೆಗಳ ಕಾಲ ಐ.ಸಿ.ಯು.ನಲ್ಲಿ ಇಡಬೇಕಾಗುತ್ತದೆ. ಈಗಲೇ ಏನೂ ಹೇಳುಕ್ಕಾಗುಲ್ಲ." ಎಂದು ಹೇಳಿಬಿಟ್ಟರು ಡಾಕ್ಟರ್. ಭಟ್ಟ ಪೆಚ್ಚಾದ. ವಿಷಯ ತಿಳಿದ ಕಾಮಾಕ್ಷಿ ಗಡಬಡಿಸಿ ಬಂದಳು.

"ಹೀಗೇನೋ ಆಗುತ್ತೆ ಅಂತ ನಂಗೊತ್ತಿತ್ತು....." ಬಡಬಡಿಸಿದಳು. ಒಳಗೆ ಯಾರನ್ನೂ ಬಿಡುತ್ತಿರಲಿಲ್ಲವಾದುದರಿಂದ ಹೊರಗೇ ನಿಂತು ಮಾತನಾಡುತ್ತಿದ್ದಳು. ಕಾಮಾಕ್ಷಿಯ ಮಾತುಗಳು ಬೇಡವೆನಿಸಿತ್ತು.

"ಸ್ವಲ್ಪ ಸುಮ್ನಿರು ಕಾಮಾಕ್ಷಿ.... ಇದು ಆಸ್ಪತ್ರೆ. ಅದೆಷ್ಟು ಮಾತಾಡ್ತೀಯ?" ಗದರಿದ್ದ. ಕಾಮಾಕ್ಷಿ ಪೆಚ್ಚಾದಳು. ಭಟ್ಟ ಬೆಂಗಳೂರಿಗೆ ವಿಷಯ ತಿಳಿಸಿದ. ಬೆಳಗ್ಗಿನ ಹೊತ್ತಿಗೆ ಭವಾನಿ, ವಿದ್ಯಾ, ದಿನೇಶ ಬಂದಿಳಿದರು.

ವಿದ್ಯಾ ಅಪ್ಪನ ಮೇಲೇ ಆಕ್ಷೇಪಣೆ ಹೊರಿಸಿದಳು. "ಇಷ್ಟಕ್ಕೆಲ್ಲಾ ನೀವೇ ಕಾರಣ ಅಪ್ಪಾ...... ಅಮ್ಮಂಗೆ ಸರಿಯಾಗಿ ಚಿಕಿತ್ಸೆ ಕೊಡಿಸ್ಲಿಲ್ಲ...." ಅಂತ ಭಟ್ಟ ಮಾತಾಡಲಿಲ್ಲ.

"ಭಾವ, ಡಾಕ್ಟರ್ ಏನಂದ್ರು?" ಭವಾನಿ ವಿಚಾರಿಸಿದಳು. ಡಾಕ್ಟರ್ ಹೇಳಿದ್ದನ್ನು ಭಟ್ಟ ಹೇಳಿದ. ಪ್ರಶಾಂತ, ವಿದ್ಯಾ ಕೆಳದನಿಯಲ್ಲಿ ತಮ್ಮ ತಮ್ಮಲ್ಲೇ ಮಾತನಾಡಿ ಕೊಳ್ಳುತ್ತಿದ್ದರು. ಕಾಮಾಕ್ಷಿ ತನ್ನ ಮೊಮ್ಮಗನ ವಿಷಯವನ್ನು ಭವಾನಿಗೆ ಹೇಳುತ್ತಿದ್ದಳು. ದಿನೇಶ ತನ್ನ ಮಗುವನ್ನೆತ್ತಿಕೊಂಡು ಮುದ್ದಾಡುತ್ತಿದ್ದ. ಭಟ್ಟ ಒಬ್ಬನೇ ನಿಂತು ಎಲ್ಲರನ್ನೂ ನೋಡಿದ. ಮನದಲ್ಲಿ ನಾನಾ ಆಲೋಚನೆಗಳು ಮೂಡಿದವು. ಅಷ್ಟರಲ್ಲಿ ವಿಷಯ ತಿಳಿದ ಸಂತೋಷನೂ ಬಂದು ತಂದೆಯ ಬಳಿ ಮಾತನಾಡಿದ. ಅಲ್ಲಿ ಹೆಚ್ಚು ಹೊತ್ತು ಇರಲು ಸಾಧ್ಯವಿಲ್ಲವಾದುದರಿಂದ ಎಲ್ಲರೂ ಮನೆಗೆ ವಾಪಸ್ಸಾದರು. ಕಾಮಾಕ್ಷಿ ಚಿನ್ಮಯಿಯೊಡನೆ ಉಳಿದುಕೊಂಡಳು. ಕಿಶೋರ ಮಹಡಿಯ ಮೇಲೆ ಹೋಗಿದ್ದ. ಊಟದ ಅನಂತರ ಭವಾನಿ ಪ್ರೇಮಳ ರೂಮ್‌ನಲ್ಲಿ, ನಳಿನಿಯೊಂದಿಗೆ ಮಲಗಿದಳು. ದಿನೇಶ, ವಿದ್ಯಾ ತಮ್ಮ ರೂಮ್‌ನಲ್ಲಿ ಮಲಗಿದರು. ಸಂತೋಷ, ಶ್ರೀಕರ ತಮ್ಮ ತಮ್ಮ ರೂಮ್‌ಗೆ ಹೋಗಿದ್ದರು. ಮನೆಯಲ್ಲಿ ಜನರು ಯಾರಾದರೂ ವಾಸವಾಗಿದ್ದಾರೆಯೇ ಎನ್ನುವಷ್ಟು ನಿಶ್ಶಬ್ದ ಅಡಗಿತ್ತು. ಭಟ್ಟ ಕುರ್ಚಿಯ ಮೇಲೆ ಕುಳಿತು ಟೇಬಲ್‌ನ ಮೇಲೆ ಕೈಯೂರಿ ಏನೋ ಚಿಂತಿಸುತ್ತಿದ್ದ. ಇಲ್ಲಿ ಭಟ್ಟ ಒಂಟಿಯಾಗಿ ಕುಳಿತು ಚಿಂತಿಸುತ್ತಿದ್ದರೆ, ಅಲ್ಲಿ ಪ್ರೇಮಾ ಒಂಟಿಯಾಗಿ ಮಲಗಿದ್ದಳು. ಔಷಧಿಯ ಪರಿಣಾಮದಿಂದ ಅವಳಿಗೆ ಅರೆ ಎಚ್ಚರ. ಪಕ್ಕದಲ್ಲಿ ಕುಳಿತಿದ್ದ ನರ್ಸ್

ಆಗಾಗ್ಗೆ ಅವಳ ಕಡೆ ಗಮನ ಹರಿಸುತ್ತಿದ್ದಳು. ಪ್ರೇಮಾ ಅವಳನ್ನು ಸಂಜ್ಞೆ ಮಾಡಿ ಬಳಿಗೆ ಕರೆದಳು. "ಡೈರಿ.....ಡೈರಿ....." ಎಂದು ಮೆಲುದನಿಯಲ್ಲಿ ಹೇಳಿದಳು.

"ಡೈರಿ? ಯಾವ ಡೈರಿ? ಎಲ್ಲಿದೆ.....?"

"ಮನೇಲಿದೆ...." ಅಷ್ಟು ಹೇಳಿ ಆಯಾಸವಾದವಳಂತೆ ಕಣ್ಣು ಮುಚ್ಚಿದಳು. ನರ್ಸ್ ಹೊದಿಕೆ ಸರಿಪಡಿಸಿ, ತನ್ನ ಜಾಗಕ್ಕೆ ಬಂದು ಕುಳಿತಳು. ಆ ರಾತ್ರಿ ಯಾವ ಹೊತ್ತಿನಲ್ಲಿ ಪ್ರೇಮಳ ಪ್ರಾಣ ಪಕ್ಷಿ ಹಾರಿಹೋಯಿತೋ ಅವಳಿಗೆ ತಿಳಿಯಲಿಲ್ಲ..... ಮಲಗಿ ನಿದ್ರಿಸುತ್ತಿದ್ದಾಳೆಂದೇ ಭಾವಿಸಿದಳು. ಬೆಳಗ್ಗೆ ಅವಳಿಗೆ ಎಚ್ಚರವಾದಾಗ, ಮತ್ತೊಮ್ಮೆ ಹತ್ತಿರ ಬಂದು ಪರೀಕ್ಷಿಸಿದಾಗ ಪ್ರೇಮಳ ಉಸಿರಾಟ ನಿಂತಿರುವುದು ತಿಳಿಯಿತು. ಡ್ಯೂಟಿ ಡಾಕ್ಟರ್ ಬಂದು ಮತ್ತೊಮ್ಮೆ ಪರೀಕ್ಷಿಸಿ ಪ್ರೇಮಾ ಬದುಕಿಲ್ಲವೆನ್ನು ವುದನ್ನು ಖಚಿತಪಡಿಸಿದ. ಭಟ್ಟರ ಮನೆಗೆ ಫೋನ್ ಮಾಡಿ ತತ್‌ಕ್ಷಣವೇ ಬರುವಂತೆ ತಿಳಿಸಿದರು.

ನಿಶ್ಚಿಂತೆಯಿಂದ ಮಲಗಿ ನಿದ್ರಿಸುತ್ತಿದ್ದ ಹೆಂಡತಿಯ ಮುಖವನ್ನೇ ಅನೇಕ ಬಾರಿ ನೋಡಿದ. ರತಿಯಂತಿಲ್ಲದೇ ಇದ್ದರೂ, ಸುಂದರವಾಗಿದ್ದವಳು, ಅನಾ ರೋಗ್ಯದಿಂದ ಬಳಲಿ ಕಂಗೆಟ್ಟಿದ್ದಳು. ಸೋತು ಆಯಾಸವಾಗಿದ್ದವಳಂತೆ ಕಣ್ಣು ಮುಚ್ಚಿ ಮಲಗಿದ್ದವಳನ್ನೇ ಕಣ್ತುಂಬಾ ನೋಡಿದ. ತನ್ನ ಹೆಂಡತಿ ಬದುಕಿಲ್ಲ ಎಂದು ಅರ್ಥವಾಗಲು ಸಾಕಷ್ಟು ಸಮಯ ಹಿಡಿಯಿತು. ಡಾಕ್ಟರ್ ಎದುರಿಗೆ ಭಾವುಕತೆ ಯನ್ನು ಮುಚ್ಚಿಟ್ಟ. ಮನೆಗೆ ಫೋನ್ ಮಾಡಿಸಿದ. ಆಗ ನರ್ಸ್, ರಾತ್ರಿ ಒಂದು ಹೊತ್ತಿನಲ್ಲಿ ಪ್ರೇಮಾ ಮನೇಲಿ ಡೈರಿ ಇದೆ ಎಂದು ಹೇಳಿದ ವಿಷಯವನ್ನು ನೆನಪಿಸಿಕೊಂಡು ತಿಳಿಸಿದಳು.

"ಡೈರಿ? ಯಾವ ಡೈರಿ? ಅದನ್ಯಾಕೆ ಕೇಳಿದಳು!" ಎಂದು ಅವನಿಗೆ ಅರ್ಥವಾಗಲಿಲ್ಲ. "ನಾನು ಈಗ ಬರ್ತೀನಿ" ಎನ್ನುತ್ತಾ ಮನೆಗೆ ಬಂದು, ಪ್ರೇಮಳ ರೂಮ್‌ನಲ್ಲಿ ಡೈರಿಗಾಗಿ ತಡಕಾಡಿದ. ಒಂದು ಚಿಕ್ಕ ಡೈರಿ ಅವಳ ದಿಂಬಿನಡಿಯಲ್ಲಿ ಸಿಕ್ಕಿತು. ಅದರಲ್ಲಿ ಹೆಚ್ಚೇನೂ ಬರೆದಿರಲಿಲ್ಲ. ಮಕ್ಕಳು ಹುಟ್ಟಿದ ದಿನಾಂಕವನ್ನು, ವಾರವನ್ನು, ಸಮಯವನ್ನು ಬರೆದಿಟ್ಟಿದ್ದಳು. ಮತ್ತೆ ಮತ್ತೆ ಪುಟವನ್ನು ತಿರುವಿದಾಗ ಕಡೆಯ ಪುಟದಲ್ಲಿ ಅಂತಿಮ ಇಚ್ಛೆ ಎಂದು ಬರೆದಿದ್ದುದು ಕಾಣಿಸಿತು. ಅದು ಇತ್ತೀಚೆಗೆ ಚಿನ್ಮಯಿಯ ಮದುವೆಯಾದ ಮೇಲೆ ಬರೆದದ್ದು. ಆದರೆ ಯಾರನ್ನೂ ಸಂಬೋಧಿಸಿರಲಿಲ್ಲ. ಸುಮ್ಮನೆ ಎಂಬಂತೆ ಬರೆದಿದ್ದಳು. ಭಟ್ಟ ನಿಧಾನವಾಗಿ ಓದಿಕೊಂಡ. "ನನ್ನ ದೇಹಕ್ಕೆ ಯಾರೂ ಅಂತ್ಯಕ್ರಿಯೆಯನ್ನು ಮಾಡಕೂಡದು. ನನ್ನ ದೇಹವನ್ನು ಮೆಡಿಕಲ್ ಕಾಲೇಜಿನ ಲ್ಯಾಬೋರೇಟರಿಗೆ ಕೊಟ್ಟು ಬಿಡಬೇಕು." ಎಂದು ಬರೆದಿದ್ದಳು. ಅವನ ಉಸಿರು ನಿಂತಂತಾಯಿತು. ಹೀಗೆ ಅವಳು ಬರೆ ದಿರಬೇಕಾದರೆ ಅವಳ ಹೃದಯ ಎಷ್ಟು ಗಟ್ಟಿಯಾಗಿರಬೇಕು! ಅವಳು ಎಷ್ಟು ಬಾರಿ

ಆಲೋಚಿಸಿರಬಹುದು ಎಂದು ಅವನಿಂದ ಊಹಿಸಲಾಗಲಿಲ್ಲ. ಡೈರಿಯನ್ನು ಹಿಡಿದು ಹೊರಬಂದ.

"ಅಪ್ಪಾ ಏನಾಯ್ತುಪ್ಪಾ....." ಸಂತೋಷ ಕೇಳಿದ. ಡೈರಿಯನ್ನು ಮಗನ ಕೈಗಿತ್ತ. ಸಂತೋಷನಿಗೆ ಕ್ಷಣ ಮಾತ್ರದಲ್ಲಿ ಎಲ್ಲಾ ಅರ್ಥವಾಗಿತ್ತು. ತಾಯಿ ತಮ್ಮನ್ನೆಲ್ಲಾ ಬಿಟ್ಟು ಹೊರಟು ಹೋದಳು ಎನ್ನುವ ಸತ್ಯವನ್ನು ಅರಗಿಸಿಕೊಳ್ಳಲು ಸಾಕಷ್ಟು ಸಮಯ ಹಿಡಿಯಿತು. ತಾನು ಡಾಕ್ಟರಾಗಿ ಬಂದು ಅಮ್ಮನಿಗೆ ಶುಶ್ರೂಷೆ ಕೊಡಿಸುವ ಆಸೆಯನ್ನು ಇಟ್ಟುಕೊಂಡಿದ್ದ. ಅಲ್ಲಿದ್ದವರಿಗೆಲ್ಲ ವಿಷಯ ತಿಳಿಯಿತು. ಶಾರದಮ್ಮ ಬಿಕ್ಕಿ ಬಿಕ್ಕಿ ಅತ್ತಳು. ಭವಾನಿ ನಳಿನಿಯನ್ನು ತಬ್ಬಿಕೊಂಡು ಕಣ್ಣೀರು ಹರಿಸಿದಳು. ವಿದ್ಯಾ ದಿನೇಶನ ಭುಜಕ್ಕೆ ತಲೆ ಒರಗಿಸಿ ಮೌನವಾಗಿ ಅತ್ತಳು. ಶ್ರೀಕರ ಪೆಚ್ಚಾಗಿ ಸಂತೋಷನ ಕೈ ಹಿಡಿದು ನಿಂತಿದ್ದ.

"ನಾನು ಹೋಗಿ ಪ್ರಶಾಂತನ್ನ ಕರ್ಕೊಂಡು ಬರ್ಲಾ....." ಕಿಶೋರ ಕೇಳಿ, ಯಾರ ಉತ್ತರಕ್ಕೂ ಕಾಯದೆ ಸೀದಾ ಪ್ರಶಾಂತನಿಗೆ ಸುದ್ದಿಯನ್ನು ಮುಟ್ಟಿಸಿದ. ಪ್ರಶಾಂತನಿಗೆ ಮೈಯೆಲ್ಲಾ ಮರಗಟ್ಟಿದರಿತಾಗಿತ್ತು. ಸೀದಾ ನರ್ಸಿಂಗ್ ಹೋಮ್‌ಗೆ ಬಂದ.

"ಭಾವ, ಬಾಡಿ ಎಷ್ಟು ಹೊತ್ಗೆ ಮನೆಗೆ ಬರುತ್ತೆ?" ಭವಾನಿ ಕೇಳಿದಳು. ಭಟ್ಟ, ಸಂತೋಷನಿಗೆ ಹೇಳು ಎನ್ನುವಂತೆ ಸಂಜ್ಞೆ ಮಾಡಿದ. ತಾನು ಡಾಕ್ಟರ್‌ಗೆ ಫೋನ್ ಮಾಡಿದ.

"ಇಲ್ಲ ಚಿಕ್ಕಮ್ಮ. ಬಾಡೀನ ಮನೆಗೆ ತರುಲ್ಲ. ನಾವೆಲ್ಲಾ ಅಲ್ಲಿಯೇ ಹೋಗಿ ನೋಡೋಣ. ಈಗಾಗ್ಲೇ ಡಾಕ್ಟರ್‌ಗೆ ಗೊತ್ತಾಗಿದೆ."

"ಯಾಕೆ..... ಅಲ್ಲಿಂದ್ಲೇ ಸೀದಾ ಚಿತಾಗಾರಕ್ಕೆ ತಗೊಂಡು ಹೋಗ್ತಾರಂತಾ?"

"ಇಲ್ಲ ಚಿಕ್ಕಮ್ಮ" ಎನ್ನುತ್ತಾ ಸಂತೋಷ ತನ್ನ ತಾಯಿಯ ಅಂತಿಮ ಇಚ್ಛೆಯ ವಿಷಯವನ್ನು ತಿಳಿಸಿದ.

"ಅವಳು ಹಾಗೆ ಬರೆದಿಟ್ಟರೇನಾಯ್ತು! ಯಾವ ಲ್ಯಾಬ್‌ಗೂ ಕೊಡೋದು ಬೇಡ. ಅಂತಿಮ ಸಂಸ್ಕಾರ ಮಾಡ್ಲೇ ಬೇಕು." ವಿದ್ಯಾ ಒತ್ತಿ ಹೇಳಿದಳು.

"ಇಲ್ಲ. ಅವಳ ಇಚ್ಛೆ ಹೇಗಿತ್ತೋ ಹಾಗೇ ಮಾಡೋಣ. ಇಲ್ಲದಿದ್ರೆ ಅವಳ ಆತ್ಮಕ್ಕೆ ಶಾಂತಿ ಸಿಗೋಲ್ಲ." ಸಂತೋಷನೆಂದ.

"ಅವಳಿಗೆ ನಿಮ್ಮ ಯಾರ ಕೈಲೂ ಸಂಸ್ಕಾರ ಮಾಡಿಸ್ಕೊಳ್ಳೋಕೆ ಇಷ್ಟವಿರಲಿಲ್ಲ. ಅದಕ್ಕೇ ಹಾಗೆ ಬರೆದಿದ್ದಾಳೆ."

"ಅವಳು ಜೀವಮಾನವೆಲ್ಲಾ ಕೊರಗಿ, ನರಳಿ ಸತ್ತಳು. ಅದರ ಪರಿಣಾಮ ದೇಹದ ಮೇಲೂ ಮಿದುಳಿನ ಮೇಲೂ ಆಗಿರುತ್ತೆ. ಅದನ್ನು ವಿದ್ಯಾರ್ಥಿಗಳು ಅಭ್ಯಾಸ ಮಾಡಲಿ ಅಂತ ಅವಳ ಆಸೆ ಇರಬಹುದು."

"ಇದೆಂಥಾ ಆಸೆ ಚಿಕ್ಕಮ್ಮ.....? ಅವಳಿಗೆ ಅಪ್ಪನ ಮೇಲಾಗಲೀ, ಮಕ್ಕಳ ಮೇಲಾಗಲೀ ನಂಬಿಕೆ ಇರಲಿಲ್ಲ. ಒಬ್ಬೊಬ್ಬರಾಗಿ ಅವಳ ಕೈ ಬಿಟ್ಟಿದ್ದರು. ಅದೇ ದುಃಖ ಅವಳಿಗೆ."

"ನೀವು ಹೆಣ್ಣು ಮಕ್ಕಳು ಕಮ್ಮಿ ದುಃಖ ಕೊಟ್ರಾ ಅಮ್ಮಂಗೆ. ನೀನು ಹಿರಿ ಮಗಳು ಅಂತ ನಿನಗೆಷ್ಟು ಮಾಡಿದಳು..... ಅವಳ ಸುಖಕ್ಕೋಸ್ಕರ ನೀನೇನು ಮಾಡಿದೆ.....?"

"ನಾನೇನೂ ಮಾಡ್ಲಿಲ್ಲ. ಎಲ್ಲಾ ಚಿನ್ಮಯಿಂದ್ಲೇ ಆದದ್ದು....."

"ಸುಮ್ಮನಿರು ವಿದ್ಯಾ. ಈಗ ಕಚಕಚೆ ಆಡಿದ್ರೆ ನಿಮ್ಮಮ್ಮನ ಆತ್ಮಕ್ಕೆ ಶಾಂತಿ ಸಿಗೋಲ್ಲ. ಕಡೇ ಪಕ್ಷ ಅವಳ ಆಸೆಯನ್ನಾದ್ರೂ ಪೂರೈಸಿದರೆ ಅವಳ ಆತ್ಮಕ್ಕೆ ಶಾಂತಿ ಸಿಗುತ್ತೆ."

"ಇದೆಂಥಾ ಆಸೆ ಚಿಕ್ಕಮ್ಮ. ನಾನು ಇದಕ್ಕೆ ಒಪ್ಪಲ್ಲ."

"ಯಾರು ಒಪ್ಪಲಿ ಬಿಡಲಿ, ಅವಳ ಅಂತಿಮ ಇಚ್ಛೆಯ ಪ್ರಕಾರವೇ ನಡೆಯೋದು." ಭಟ್ಟ ನುಡಿದಾಗ ಎಲ್ಲಾ ಇತ್ತ ತಿರುಗಿದರು.

"ನಿಮಗೂ ಇಂಥದೊಂದು ನೆವ ಬೇಕಿತ್ತು ಅಲ್ವೇನಪ್ಪಾ? ಬದುಕಿದ್ದಾಗ ಅವಳ ಆಸೆ ಏನೆಂದು ಎಂದೂ ನೀವು ವಿಚಾರಿಸಿದೋರಲ್ಲ. ಈಗ್ಯಾಕೆ ಅಷ್ಟು ಆತುರ."

"ಹೆಣ ಕೊಳೆಯೋಕೆ ಮುಂಚೆ ಅದನ್ನು ಲ್ಯಾಬ್‌ಗೆ ವಹಿಸಿ ಕೊಡಬೇಕು."

"ಈಗ ಅವಳು ನಿಮ್ಮ ಹೆಂಡತಿ ಅಲ್ಲ. ಬರೀ ಒಂದು ಹೆಣ......"

"ಸುಮ್ಮನೇ ವಾದಮಾಡಬೇಡಿ..... ಅವಳನ್ನು ಕಡೇಬಾರಿ ನೋಡ್ಬೇಕು ಅನ್ನೋ ಆಸೆ ಇರೋರು ಬನ್ನಿ. ತಡಮಾಡಬೇಡಿ." ಎಂದು ಹೇಳಿ ಡೈರಿಯನ್ನು ತೆಗೆದುಕೊಂಡು ಮುಂದಾಗಿ ಹೊರಟ.

ಅಲ್ಲಿ ಕಾಮಾಕ್ಷಿ ಬಂದು ನಿಂತಿದ್ದಳು. ಭಟ್ಟನನ್ನು ಕಂಡೊಡನೆ, "ಅಂತೂ ನಿನ್ನ ಹೆಂಡ್ತಿ ಕತೆಯನ್ನು ಮುಗಿಸಿಬಿಟ್ಯಲ್ಲಾ..... ಪಾಪಿ." ಎಂದು ಬೈದಳು.

"ಸುಮ್ನಿರು. ಅವಳು ಹೃದಯಾಘಾತದಿಂದ ಸತ್ತರೆ ಅದಕ್ಕೆ ನಾನು ಜವಾಬ್ದಾರನೇ......"

"ಅವರ ಹೃದಯ ಲಡ್ಡಾದದ್ದೇ ನಿನ್ನಿಂದ......"

"ಆ ಮಾತೆಲ್ಲಾ ಬೇಡ. ನಾನು ಡಾಕ್ಟರನ್ನ ನೋಡ್ಬೇಕು. ಜಾಗ ಬಿಡು." ಎನ್ನುತ್ತಾ ಅವರುಗಳ ಮಧ್ಯೆ ದಾರಿ ಮಾಡಿಕೊಂಡು ಹೊರಟು ಹೋಗಿದ್ದ. ಸಂತೋಷ ಪ್ರಶಾಂತನಿಗೂ ವಿಷಯ ತಿಳಿಸಿದ. "ಅಮ್ಮ ಬರೆದ ಮಾತ್ರಕ್ಕೆ ಹಾಗೇ ಮಾಡ್ಬೇಕು ಅಂತ ಏನಿಲ್ಲ. ನಾನು ಹಿರಿ ಮಗ...... ನನಗೆ ಎಲ್ಲಾ ಹಕ್ಕೂ ಇದೆ. ನಾನು ಸಂಸ್ಕಾರ ಮಾಡ್ತೀನಿ." ಎಂದ.

"ಅಪ್ಪ ಈಗಾಗ್ಲೇ ಡಾಕ್ಟರ್ ಹತ್ತಿರ ಮಾತಾಡಿದಾರೆ. ಅಮ್ಮನಿಗೆ ಆ ಇಚ್ಛೆ ಇಲ್ಲದೇ ಇದ್ದಿದ್ರೆ ಬರೆದಿಡುವ ಅಗತ್ಯವೇನಿತ್ತು! ಅವಳ ದೇಹದ ಅಭ್ಯಾಸದಿಂದ ಹತ್ತಾರು ಜನ ವಿದ್ಯಾರ್ಥಿಗಳಿಗೆ ಜ್ಞಾನ ಸಿಗುತ್ತೆ."

"ನೀನಾಗಲೇ ಡಾಕ್ಟರ್ ಥರಾ ಯೋಚಿಸ್ತಿದೀಯ. ನಾನು ಮಗನ ಥರ ಯೋಚಿಸ್ತಿದೀನಿ. ಅಮ್ಮನ ಋಣ ತೀರಿಸಬೇಡ್ವಾ ನಾವು?"

"ಯಾವ ಋಣದ ಬಗ್ಗೆ ಮಾತಾಡ್ತಿದೀಯ ನೀನು! ಅವಳು ಕೊರಗಿ, ನಿನಗಾಗಿ ಹಂಬಲಿಸಿದಾಗ, ನೀನು ಎಲ್ಲಿದೀಯ ಅಂತ ಸಹ ತಿಳಿಯದೇ ನಿನಗಾಗಿ ಕಣ್ಣೀರು ಹರಿಸಿದಳು. ಆ ಕಣ್ಣೀರಿನ ಋಣವನ್ನು ನೀನು ಯಾವ ಜನ್ಮದಲ್ಲಿ ಹುಟ್ಟಿ ಬಂದ್ರೂ ತೀರಿಸಲಾರೆ....."

"ನಿನ್ನಿಂದ ಏನು ಸುಖ ಸಿಕ್ತು! ಅವಳು ಸುಖವಾಗಿಲ್ಲ ಅಂತ ತಿಳಿದೂ, ನೀನು ಸ್ವಾರ್ಥತನದಿಂದ, ಓದೋಕೆ ಬೇರೆ ಊರ್ಗೆ ಹೋದ್ಯಲ್ಲಾ ಅದು ಸರೀನಾ?"

"ನಾನು ಮೆಡಿಕಲ್‌ಗೆ ಸೇರಿದ್ದೇ ಅಮ್ಮನಿಗೋಸ್ಕರ. ಡಾಕ್ಟರಾಗಿ ಬಂದ ಮೇಲೆ, ಅವಳಿಗೆ ಬೇಕಾದ ಚಿಕಿತ್ಸೆಯನ್ನು ನಾನೇ ಕೊಡಬೇಕು ಅಂತ ಅಂದ್ಕೊಂಡಿದ್ದೆ. .... ಆ ನನ್ನ ಆಸೆ ಪೂರೈಸಲಿಲ್ಲ." ಸಂತೋಷ ಅತ್ತ.

ಅಷ್ಟರಲ್ಲಿ ಆಸ್ಪತ್ರೆಯ ಸಿಬ್ಬಂದಿ ಒಬ್ಬ ಬಂದು ನುಡಿದ. "ಬಾಡೀನ ಅಲ್ಲಿ ಲ್ಯಾಬ್ ಮುಂದೆ ಕಾರಿಡಾರಿನಲ್ಲಿಟ್ಟಿದ್ದಾರೆ. ಯಾರ್‍ಯಾರು ನೋಡ್ಬೇಕೋ ಬೇಗ ಹೋಗಿ ನೋಡ್ಬೇಕಂತೆ." ಎಲ್ಲರೂ ವಿಧೇಯರಂತೆ, ದುಃಖ ತಪ್ತರಾಗಿ ಕಾರಿಡಾರಿಗೆ ಬಂದರು. ಎಲ್ಲರೂ ಪ್ರೇಮಳ ಮುಖವನ್ನು ಕಡೆಯ ಬಾರಿಗೆ ನೋಡಿದರು. ಇನ್ನೇನು ಎಲ್ಲರೂ ನೋಡಿದ್ದಾಯಿತು ಎನ್ನುವ ಹೊತ್ತಿಗೆ ಕಿಶೋರ ಚಿನ್ಮಯಿಯನ್ನು ಕರೆ ತಂದ. ಚಿನ್ಮಯಿ "ಅಮ್ಮಾ ಅಮ್ಮಾ....." ಎಂದು ಬಿಕ್ಕಿ ಬಿಕ್ಕಿ ಅತ್ತಾಗ ಉಳಿದವರ ಕಣ್ಣುಗಳಲ್ಲೂ ಧಾರಾಕಾರವಾಗಿ ನೀರು ಹರಿದಿತ್ತು.

* * *

ಅಧ್ಯಾಯ – ಮೂವತ್ತೈದು

ಕಾಮಾಕ್ಷಿಯ ಕುಟಿಲೋಪಾಯ

ಪ್ರೇಮಳ ಪಾರ್ಥಿವ ಶರೀರವನ್ನು ಅವಳ ಇಚ್ಛೆಯಂತೆ, ಆಸ್ಪತ್ರೆಯ ವಶಕ್ಕೆ ಒಪ್ಪಿಸಿ, ಸರ್ಟಿಫಿಕೇಟ್‌ನ್ನು ಪಡೆದು ಭಟ್ಟ ಮನೆಗೆ ವಾಪಸ್ಸಾದ. ಮೊತ್ತ ಮೊದಲ ಬಾರಿಗೆ ತಾನು ಎಲ್ಲವನ್ನೂ ಕಳೆದುಕೊಂಡು ಒಂಟಿಯಾದೆ ಎನ್ನುವ ಅನುಭವ ಅವನಿಗಾಯಿತು. ಅಳಲೂ ಆಗದ ಅನುಭವಿಸಲೂ ಆಗದ ಸಂಕಟದಲ್ಲಿ ಚಡಪಡಿಸಿದ. ಅಂತ್ಯಕ್ರಿಯೆಯೇ ಇಲ್ಲದ ಮೇಲೆ ಇನ್ನು ಅಪರಕರ್ಮಗಳ ಮಾತು ಬೇಡ ಎಂದುಕೊಂಡು ಸುಮ್ಮನಾಗಿದ್ದ.

ಆದರೆ ಕಾಮಾಕ್ಷಿ ಬಿಡಲಿಲ್ಲ. "ಪ್ರೇಮಕ್ಕಂಗೇನೋ ಮುಕ್ತಿ ಸಿಕ್ಕಿತು. ಆದರೆ ಅವಳ ಆತ್ಮಕ್ಕೆ ಶಾಂತಿ ಸಿಗಬೇಡವೇ? ಅವಳ ಹೆಸರಿನಲ್ಲಿ ಅನ್ನದಾನಾನಾದ್ರೂ ಮಾಡಲೇಬೇಕು. ಇಲ್ಲದಿದ್ರೆ ಎಂಥ ನ್ಯಾಯ?" ಎಂದು ಜೋರು ಮಾಡಿದಳು.

"ಸರಿ. ಅದಕ್ಕೆ ಏನೇನು ಮಾಡಬೇಕೋ ನಂಗೊತ್ತಿಲ್ಲ. ಎಲ್ಲಾ ಜವಾಬ್ದಾರಿ ನಿನಗೇ ವಹಿಸ್ತೀನಿ. ಅದೇನೇನು ಮಾಡಬೇಕೂಂತ ನೀನೇ ಸರಿಯಾಗಿ ವಿಚಾರಿಸಿ ತಿಳಿದುಕೋ."

ಕಾಮಾಕ್ಷಿ ಯಾರನ್ನು ಕೇಳಿದಳೋ ಬಿಟ್ಟಳೋ, ಆದರೆ ಪ್ರಶಾಂತ, ಸಂತೋಷ ಇಬ್ಬರೂ ಮಾತನಾಡಿಕೊಂಡು ಒಂದು ಮಹಿಳಾಶ್ರಮದ ಮಹಿಳೆಯರಿಗೆ, ಒಂದು ದಿನದ ಊಟದ ವ್ಯವಸ್ಥೆಯನ್ನು ಮಾಡಿಸಿದರು. ನೆಂಟರಿಷ್ಟರಿಗೆ ಪ್ರೇಮಳ ನಿಧನದ ವಿಷಯ ತಿಳಿದು ಮಾತನಾಡಿಸುವುದಕ್ಕೆಂದು ಬಂದಿದ್ದರು. ಆದರೆ ಯಾರಿಗೂ ತಾವು ಈ ವ್ಯವಸ್ಥೆಯನ್ನು ಮಾಡಿರುವ ವಿಷಯವನ್ನು ತಿಳಿಸಲಿಲ್ಲ. ಕೆಲವರಿಗೆ ಅಂತ್ಯಕ್ರಿಯೆ ಸಹ ನಡೆಸಲಿಲ್ಲವೆಂದು ತಿಳಿದಾಗ, ತಮತಮಗೆ ತಿಳಿದಂತೆ ಮಾತನಾಡಿಕೊಂಡಿದ್ದರು. ಸುಶೀಲಾ, ಗೋಪಾಲ ಸಹ ಬಂದು ಭಟ್ಟನನ್ನು ಮಾತನಾಡಿಸಿಕೊಂಡು ಹೋಗಿದ್ದರು.

ಪ್ರಶಾಂತನ ಮಾವ, ಶಾಸ್ತ್ರಿ ಅಳಿಯನ ಮನೆಗೆ ಬಂದವನು, ಭಟ್ಟನನ್ನು ಮಾತನಾಡಿಸಬೇಕೋ ಬೇಡವೋ ಎಂದು ಅನುಮಾನಿಸುತ್ತಿದ್ದ. ಇಂಥ ಸಮಯದಲ್ಲಿ ಯಾರಿಗೆ ಬೇಕಿರಲಿ, ಬೇಡವಾಗಿರಲಿ, ಮಾತನಾಡಿಸಿಕೊಂಡು ಬರುವುದು ಉಚಿತ ಎಂದು ನಿರ್ಧರಿಸಿ, ಅನುಮಾನಿಸುತ್ತಲೇ ಭಟ್ಟನ ಮನೆಗೆ ಬಂದ. ಭಟ್ಟ ಎಲ್ಲೋ ಹೊರಗೆ ಹೋಗಿದ್ದ. ಎಲ್ಲರಿಗಿಂತ ಹಿರಿಯಳಾದ ಭವಾನಿಯೇ ಮಾತನಾಡಿದಳು.

"ಸಮಾಜದಲ್ಲಿ ನಾಲ್ಕು ಜನರಂತೆ ಇದ್ದರೆ, ಯಾವ ಗೋಜಲೂ ಇರುವುದಿಲ್ಲ. ಭಿನ್ನವಾಗಿ ವರ್ತಿಸಿದರೆ ಎಲ್ಲಾ ವಿಚಿತ್ರವಾಗಿ ಕಾಣುತ್ತೆ. ಸಾವಿತ್ರಿಯಂತೆ ಬಾಳಿದ ಹೆಂಗಸು, ಮುತ್ತೈದೆಯ ಸಾವನ್ನು ಕಂಡಿದ್ದಾಳೆ. ಪುಣ್ಯವಂತೆ..... ಆದರೇನು ಅಂತಿಮ ಸಂಸ್ಕಾರ ಇಲ್ಲ. ಯಾವ ಕರ್ಮಗಳೂ ಇಲ್ಲ ಅಂದರೇನು ಅರ್ಥ? ಅವರ ಆತ್ಮಕ್ಕೆ ಶಾಂತಿ ಸಿಗಬೇಡವೇ?"

"ಅಕ್ಕನ ಅಂತಿಮ ಇಚ್ಛೆಯಂತೆ, ಭಾವ ದೇಹವನ್ನು ಆಸ್ಪತ್ರೆಗೇ ವಹಿಸಿದರು. ಬಹುಶಃ ಭಾವಂಗೆ ಇದರಲ್ಲೆಲ್ಲಾ ನಂಬಿಕೆ ಇಲ್ಲ ಅಂತಲೇ ಅಕ್ಕ ಹೀಗೆ ಬರೆದಿಟ್ಟಿದ್ದಳು ಅಂತ ಕಾಣಿಸುತ್ತೆ. ಪ್ರಶಾಂತ ಹಿರಿ ಮಗ, ಬೇರೆ ಇದಾನೆ. ಸಂತೋಷ ಹೊರಗೆಲ್ಲೋ ಇದಾನೆ. ಶ್ರೀಕರ ತುಂಬಾ ಚಿಕ್ಕವನು. ತನ್ನ ಸಾವಿನಿಂದ ಅವರ‍್ಯಾರಿಗೂ ತೊಂದರೆ ಬರಬಾರದು ಅಂತ ಅಕ್ಕ ಯೋಚಿಸಿರಬಹುದು....."

"ಇದೆಲ್ಲಕ್ಕಿಂತ ಹೆಚ್ಚಾಗಿ ಆಕೆ ಭಟ್ಟನನ್ನು ದ್ವೇಷಿಸುತ್ತಿದ್ದಳು.... ಅಂತ ನನಗನ್ನಿಸುತ್ತೆ." ಶಾಸ್ತ್ರಿಯ ಈ ಮಾತು ಯಾರಿಗೂ ಹಿಡಿಸಲಿಲ್ಲ. "ಭಟ್ಟ ಈಗಲಾದರೂ ಬದಲಾಗಬಹುದಾಗಿತ್ತು. ಮಕ್ಕಳನ್ನು ಒಂದುಗೂಡಿಸಬಹುದಾಗಿತ್ತು.... ಹಾಗೇಕೆ ಮಾಡಲಿಲ್ಲ?"

"ಹಿಂದೆಂದೂ ಹೆಂಡತಿಯ ಇಚ್ಛೆಯನ್ನು ಪೂರೈಸದಿದ್ದವನು, ಈ ಅಂತಿಮ ಇಚ್ಛೆಯನ್ನು ಪೂರೈಸುವ ಅಗತ್ಯವಿದೆ. ಇಲ್ಲೊಂದು ಸೂಕ್ಷ್ಮವಿದೆ. ಅದು ಯಾರಿಗೂ ಅರ್ಥವಾಗಿಲ್ಲ. ಗಂಡ ತನ್ನ ಇಚ್ಛೆಗೆ ಎಂದೂ ಬೆಲೆ ಕೊಟ್ಟವನಲ್ಲ. ಈ ಇಚ್ಛೆಗೂ ಬೆಲೆ ಕೊಡದಿದ್ದಲ್ಲಿ, ಅಂತ್ಯಕ್ರಿಯೆ, ಕರ್ಮಾಂತರಗಳು ನೆರವೇರಲಿ ಎಂಬ ಅಂತರ್ಯ ಇರಬಹುದು ಅಲ್ಲವೇ?"

ಶಾಸ್ತ್ರಿಯ ಈ ತರ್ಕ ಸರಿಯಲ್ಲ ಅಂತ ಅನ್ನಿಸಿದರೂ, ಈ ಮಾತಿನಲ್ಲಿ ನಿಜವಿರಬಹುದೇ ಎಂಬ ಅನುಮಾನವೂ ಮೂಡಿತು.

"ಇಲ್ಲ ಶಾಸ್ತ್ರಿಗಳೇ, ಭಾವನಿಗೆ ಈ ಧಾರ್ಮಿಕ ವಿಷಯಗಳಲ್ಲಿ ನಂಬಿಕೆ ಇಲ್ಲ ಅಂತ ಅಕ್ಕನಿಗೆ ಚೆನ್ನಾಗಿ ಗೊತ್ತಿತ್ತು. ಸುಮ್ಮನೇ ಅದರ ಬಗ್ಗೆ ಚರ್ಚೆಯೇ ಬೇಡ ಅಂತ ಅಂದುಕೊಂಡಿರಬಹುದು."

"ಒಬ್ಬ ವ್ಯಕ್ತಿ ಬದುಕಿದ್ದಾಗ ಅವನ ಬೆಲೆ ಗೊತ್ತಾಗುವುದಿಲ್ಲ. ಆ ವ್ಯಕ್ತಿ ಸತ್ತ ಮೇಲೆ ಅದು ತುಂಬಲಾಗದ ನಷ್ಟವಾಗುತ್ತದೆ. ಇದುವರೆಗೂ ಮೆರೆದಂತೆ ಇನ್ನು ಮುಂದೆ ಭಟ್ಟ ದುರಹಂಕಾರದಿಂದ ಮೆರೆಯಲಾರ..." ಸಂತೋಷನಿಗೆ ಆ ಮಾತುಗಳು ಬೇಡವೆನಿಸಿದವು. ಮೆಲ್ಲಗೆ ಎದ್ದು ಪ್ರಶಾಂತನ ಮನೆಗೆ ಬಂದ.

"ನಿಮ್ಮ ಮಾವ, ಏನೇನೋ ಮಾತಾಡ್ತಾರೆ. ನಮಗೆಲ್ಲ ಅಮ್ಮನ್ನ ಕಳಕೊಂಡು ದುಃಖವೇ ಆಗಿಲ್ಲವೇನೋ ಅನ್ನೋ ಥರಾ ಆಡ್ತಾರೆ....."

"ಅವರಿಗೆ ಅಮ್ಮನ ಮೇಲೆ ಅಸಮಾಧಾನ. ಏನೋ ಆಡ್ಕೋತಾರೆ ಬಿಡು.....

ಅಮ್ಮನ ಸೀರೆ, ಒಡವೆ ಎಲ್ಲಾ ಏನೇನಿದೆ ಏನೇನಿಲ್ಲ ಅಂತ ನನಗೆ ತಿಳೀದು. ಚಿಕ್ಕಮ್ಮ ಇರೋವಾಗ್ಲೇ ಅದನ್ನೆಲ್ಲ ಹಂಚಿಕೊಂಡ್ರೆ ಒಳ್ಳೇದಲ್ವಾ....."

"ಅದೇನಿದ್ಯೋ ನಂಗೇನು ಗೊತ್ತು? ವಿದ್ಯಾಗೆ ಗೊತ್ತಿರಬಹುದು. ಅಪ್ಪನ್ನ ಒಂದ್ಮಾತು ಕೇಳ್ಬೇಕು ಅಲ್ವಾ? ಚಿಕ್ಕಮ್ಮಂಗೆ ಹೇಳ್ತೀನಿ ನೋಡೋಣ."

ಅದೇ ರಾತ್ರಿ ಚಿಕ್ಕಮ್ಮನೊಡನೆ ಪ್ರಸ್ತಾವ ಮಾಡಿದ. "ಚಿಕ್ಕಮ್ಮ ನೀವೇ ಅಪ್ಪನ ಹತ್ರ ಮಾತನಾಡಿ. ನನಗೆ ಇದೆಲ್ಲ ತಿಳಿಯೋಲ್ಲ." ಎಂದ.

"ಅದನ್ನು ನಿಮ್ಮಪ್ಪನನ್ನೇನು ಕೇಳೋದು. ಅಕ್ಕನ ಸೀರೆ, ಒಡವೆ ಅದೇನಿದೆಯೋ ಅದೆಲ್ಲ ಹೆಣ್ಣು ಮಕ್ಕಳಿಗೆ, ಸೊಸೆಯರಿಗೆ ಸೇರ್ಬೇಕು..... ನೀವು ನೀವೇ ಹಂಚಿಕೊಳ್ಳಿ. ಅದರಲ್ಲೇನು?"

"ಇಲ್ಲ ಚಿಕ್ಕಮ್ಮ. ನೀವೇ ನಿಂತು ಹಂಚಿ ಬಿಡಿ." ಎಂದ. ವಿದ್ಯಾ, ಭವಾನಿ ಸೇರಿಕೊಂಡು ಅಮ್ಮನ ಆಸ್ತಿಯನ್ನು ಕೆದಕಿದರು. ಅಲ್ಲಿ ಹೆಚ್ಚಿಗೆ ಏನೂ ಇರಲಿಲ್ಲ. ಭವಾನಿಗೆ ಕೆಡುಕೆನಿಸಿತು. ಮೈ ತುಂಬಾ ಒಡವೆ ಇರಲಿಲ್ಲ. ಬೀರು ತುಂಬಾ ಸೀರೆ ಇಲ್ಲ. "ಎಲ್ಲಾ ಹಾಗೇ ಇರಲಿ. ನಳಿನಿ, ಶ್ರೀಕರ ಇನ್ನೂ ಚಿಕ್ಕವರು...... ಅವರ ಪಾಲಿಗೆ ಇರಲಿ."

ಈ ಮಾತು ಚಿನ್ಮಯಿಗೆ ಹಿಡಿಸಲಿಲ್ಲ. "ಒಂದೊಂದು ಸೀರೆನಾದ್ರೂ ನಮಗೆ ಕೊಡಿ ಚಿಕ್ಕಮ್ಮ. ಅಮ್ಮನ ಹೆಸರಲ್ಲಿ ಉಟ್ಕೋತೀವಿ....." ವಿದ್ಯಾ ಅವಳನ್ನೇ ಹರಿತವಾಗಿ ನೋಡಿದಳು.

"ಅಮ್ಮ ಸತ್ತಿದ್ದೇ ನಿನ್ನಿಂದ. ಅವಳ ಸೀರೇನ ಉಟ್ಕೊಳ್ಳೋಕೆ ನಾಚ್ಕೆಯಾಗುಲ್ವಾ?"

"ನೋಡಿ ಚಿಕ್ಕಮ್ಮಾ ಹೇಗೆ ಮಾತಾಡ್ತಾಳೆ? ಇದೆಲ್ಲಕ್ಕೂ ಇವಳೇ ಕಾರಣ..... ನಾನು ಎಲ್ಲಾ ಹೇಳಿದ್ರೆ ನಿನಗೇ ನಾಚ್ಕೆಯಾಗಬೇಕು." ಸಂತೋಷ ಇಬ್ಬರ ಮಧ್ಯೆ ಬಂದ.

"ಹೋಗ್ಲಿ ಬಿಡಕ್ಕಾ. ಹಳೆಯ ಮಾತೆಲ್ಲಾ ಈಗ್ಯಾಕೆ? ನಾವುಗಳೆಲ್ಲ ನಮ್ಮ ನಮ್ಮ ಪಾಡಿಗೆ ಹೊರಟು ಹೋಗ್ತೀವಿ. ನಳಿನಿ, ಶ್ರೀಕರನ ಬಗ್ಗೆ ಯೋಚಿಸು. ಚಿನ್ಮಯೀನೂ ಬಾಣಂತನ ಮುಗಿಸ್ಕೊಂಡು ಹೊರಟು ಹೋದ್ರೆ ನಳಿನಿ ಈ ಮನೆಯಲ್ಲಿ ಒಂಟಿಯಾಗಿಬಿಡ್ತಾಳೆ." ವಿದ್ಯಾ ಚಿನ್ಮಯಿಯ ಕಡೆ ಪ್ರಶ್ನಾರ್ಥಕವಾಗಿ ನೋಡಿದಳು.

"ಶಾರದಮ್ಮ ಇದಾರಲ್ಲ. ಅಮ್ಮ ಇದ್ದಾಗ್ಲೂ ನಾವೆಲ್ಲ ಬೆಳೆದದ್ದು ಒಂಟಿಯಾಗಿಯೇ. ಅವಳು ನಳಿನೀನ ನೋಡ್ಕೊಂಡಿದ್ದು ಅಷ್ಟರಲ್ಲೇ ಇದೆ."

"ಅಮ್ಮನ ಬಗ್ಗೆ ಅಷ್ಟು ಹಗುರವಾಗಿ ಮಾತಾಡ್ಬೇಡ. ಅವಳ ಆರೋಗ್ಯವೇ ಚೆನ್ನಾಗಿರ್ಲಿಲ್ಲ. ನೀನೆಂದಾದ್ರೂ ಅಮ್ಮನ ಬಗ್ಗೆ ಯೋಚಿಸಿದ್ಯಾ?"

"ನಾನು ನಾಲ್ಕನೆಯವಳು. ನೀವು ಮೂರು ಜನ ದೊಡ್ಡೋರಿದ್ರಲ್ಲ.....

ನೀನು ಮದುವೆಗೆ ಮೊದಲೇ ಈ ಮನೆಯಿಂದ ಹೊರಗೆ ಹೋದೋಳು. ನಾನಾದ್ರೆ ಅಮ್ಮ ಸಾಯೋವರೆಗೂ ಅಮ್ಮನ ಎದುರಿಗೇ ಇದ್ದೆ. ಪ್ರಶಾಂತ, ಹಿಂದುಗಡೆ ರಸ್ತೇಲೇ ಇದ್ರೂ ಒಂದು ದಿನ ಬಂದು ಅಮ್ಮನ್ನ ಮಾತಾಡಿಸ್ತಿರಲಿಲ್ಲ. ಸಂತೋಷ ಓದುವ ನೆವದಲ್ಲಿ ಈ ಊರಿಂದ್ಲೇ ಹೊರಟ್ಹೋದ. ಈಗ ನನಗೆ ಯಾರೂ ಏನೂ ಹೇಳಬೇಡಿ."

"ಬಿಡು ಚಿನ್ಮಯೀ, ಈಗ ಅನಾವಶ್ಯಕ ಚರ್ಚೆ ಯಾಕೆ? ಹಾಗಾದ್ರೆ ಸದ್ಯಕ್ಕೆ ನಳಿನಿ ಹಾಗೂ ಶ್ರೀಕರನ ಜವಾಬ್ದಾರಿಯನ್ನು ನೀನೇ ವಹಿಸ್ಕೋ......" ವಿದ್ಯಾ ಸಂತೋಷನ ಮಾತನ್ನು ಮುರಿದಳು. "ಬೇಡ ಸಂತೋಷ, ಕಿಶೋರನ ಮೇಲೆ ನನಗೆ ನಂಬಿಕೆ ಇಲ್ಲ."

ಚಿನ್ಮಯಿಯ ಮುಖ ಬೆಳ್ಳಗಾಯಿತು. "ಹಾಗಾದ್ರೆ ನಿಮ್ಮನೆಗೇ ಕರ್ಕೊಂಡು ಹೋಗು."

"ನಾನು ಅತ್ತೆ – ಮಾವನ ಮನೇಲಿದೀನಿ. ಜತೆಗೆ ನಾದಿನಿ ಇದಾಳೆ. ನನಗೆ ಸ್ವತಂತ್ರವಿಲ್ಲ. ಇಲ್ದಿದ್ರೆ ಹಾಗೇ ಮಾಡ್ತಿದ್ದೆ."

"ಹಾಗಾಪ್ರೆ ನೀನು ಯಾವ ಮಾತನ್ನೂ ಆಡ್ಬೇಡ." ಚಿನ್ಮಯಿ ಅಣಕಿಸಿ ನುಡಿದಳು.

ಇದೇ ವಿಷಯವನ್ನು ಸಂತೋಷ, ಪ್ರಶಾಂತನೊಡನೆ ಚರ್ಚಿಸಿದಾಗ, ಪ್ರಶಾಂತನೂ ಗಂಭೀರವಾಗಿ ಪರಿಗಣಿಸದೇ ನುಡಿದ. "ನಮ್ಮ ಮನೆ ಚಿಕ್ಕದು. ಇರೋದು ಒಂದೇ ರೂಮು. ಇಲ್ಲಿ ಅವಳಿಗೆ ಓದಿ ಬರೆಯೋಕೆ ಕಷ್ಟ ಆಗುತ್ತೆ. ಆಗ ಈಗ ಬರ್ಲಿ. ಏನಾದ್ರೂ ಬೇಕಿದ್ರೆ ಹೇಳಲಿ. ಹೇಗೂ ಶಾರದಮ್ಮ ಇರ್ತಾರಲ್ಲ. ಅವರಿಗೆ ಚೆನ್ನಾಗಿ ನೋಡ್ಕೊಳ್ಳಿ ಅಂತ ಹೇಳಿದ್ರಾಯ್ತು."

ಊರಿಗೆ ಹೊರಟವರೆಲ್ಲಾ ಶಾರದಮ್ಮನಿಗೇ ನಳಿನಿಯ ಜವಾಬ್ದಾರಿಯನ್ನು ಒಪ್ಪಿಸಿದರು. "ಈಗ ಈ ಮನೆಗೆ ನೀವು ದೊಡ್ಡವರು. ಅಪ್ಪನಿಗೆ ಒಳಗಿನ ವಿಚಾರ ಯಾವುದೂ ಗೊತ್ತಾಗುಲ್ಲ. ನಳಿನಿ ಅರೆ ತಿಳುವಳಿಕೆಯ ಹುಡುಗಿ. ಅವಳ ಕಡೆ ಹೆಚ್ಚು ನಿಗಾ ಇಡಬೇಕಾಗುತ್ತದೆ." ಎಂದರು.

"ನನಗೇನೂ ಕಷ್ಟವಿಲ್ಲ. ಆದರೆ ನಳಿನಿಗೂ ತಿಳುವಳಿಕೆ ಹೇಳಿಬಿಟ್ಟು ಹೋಗಿ. ಎಷ್ಟಾಗಲೀ ನಾನು ಅಡುಗೆಯವಳು. ನಾನು ಏನಾದ್ರೂ ಹೇಳಿದ್ರೆ ಸರಿ ಹೋಗದಿರ ಬಹುದು."

ಎಲ್ಲರೂ ನಳಿನಿಗೆ ತಿಳುವಳಿಕೆ ಹೇಳಿದಾಗ, ಅವಳು ಅಸಹನೆಯಿಂದ ನುಡಿದಳು. "ಎಲ್ರೂ ನಂಗೇ ಯಾಕೆ ಹೇಳ್ತೀರಿ. ಶ್ರೀಕರ ನಂಗಿಂತ ಚಿಕ್ಕವನು. ಅವನಿಗ್ಯಾಕೆ ಯಾರೂ ಏನೂ ಹೇಳುಲ್ಲ."

"ಅವನು ಹುಡುಗ. ಹೇಗೂ ನಡೆಯುತ್ತೆ. ನೀನು ಹುಡುಗಿ. ನೀನು

ತುಂಬಾ ಎಚ್ಚರಿಕೆಯಿಂದ ಇರಬೇಕಾಗುತ್ತದೆ." ಭವಾನಿ ನುಡಿದಳು. ವಿದ್ಯಾ ಅವಳನ್ನು ಒಂದು ಪಕ್ಕಕ್ಕೆ ಕರೆದು ಗುಟ್ಟಾಗಿ ನುಡಿದಳು.

"ನೀನು ನಿನ್ನ ರೂಮ್ನಲ್ಲಿ ಒಬ್ಬೇ ಮಾತ್ರ ಮಲಗಬೇಡ. ಶಾರದಮ್ಮನೂ ನಿನ್ನ ಜತೆ ಮಲಗಲಿ. ಕಿಶೋರನ ಹತ್ರ ಹೆಚ್ಚಿಗೆ ಮಾತಾಡ್ಬೇಡ. ಆದಷ್ಟು ಅವನಿಂದ ದೂರ ಇರು."

"ನನಗೆ ಕಿಶೋರನ್ನ ಕಂಡ್ರೇ ಆಗುಲ್ಲ. ಈ ಪರೀಕ್ಷೆ ಮುಗಿದ ಮೇಲೆ, ನಾನೂ ಯಾವುದಾದ್ರೂ ಬೇರೆ ಊರ್ಗೆ ಹೋಗಿ, ಹಾಸ್ಟೆಲ್‌ನಲ್ಲಿದ್ದುಕೊಂಡು ಓದ್ತೀನಿ."

"ಹಾಗೇ ಮಾಡೂವಂತೆ. ಈಗ್ಲಿಂದ ಆ ಯೋಚನೆ ಬೇಡ. ಮೊದ್ಲು ಚೆನ್ನಾಗಿ ಓದಿ, ಫಸ್ಟ್ ಕ್ಲಾಸ್‌ನಲ್ಲಿ ಪಾಸಾಗ್ಬೇಕು. ಆಗ್ಲೇ ಒಳ್ಳೇ ಕಾಲೇಜ್ನಲ್ಲಿ ಸೀಟು ಸಿಗೋದು."

ಎಲ್ಲರೂ ಅವರವರ ಊರಿಗೆ ಹೊರಟು ಹೋದರು. ಈಗ ಕಾಮಾಕ್ಷಿ ಇಲ್ಲೇ ಬಂದು ಇರತೊಡಗಿದಳು. ಚಿನ್ಮಯಿಯ ಬಾಣಂತನದ ನೆವ ಮಾಡಿಕೊಂಡು, ಅವಳು ಬಂದು ಸೇರಿಕೊಂಡದ್ದು ಶಾರದಮ್ಮನಿಗೆ ಹಿತವೆನಿಸಲಿಲ್ಲ. ಅಡುಗೆ ಕೆಲಸದ ವಿಷಯದಲ್ಲಿ ಅವಳ ಸಲಹೆ, ಸಹಾಯ ಆಕೆಗೆ ಬೇಡವೆನಿಸುತ್ತಿತ್ತು. ಪ್ರೇಮಾ ಎಂದೂ ಅಡುಗೆ ಮನೆಯೊಳಗೆ ಕಾಲಿಟ್ಟದ್ದೇ ಇಲ್ಲ. "ಭಟ್ಟಂಗೆ ಅದು ಇಷ್ಟ. ಕಿಶೋರನಿಗೆ ಇದು ಇಷ್ಟ." ಎಂದು ಹೇಳುತ್ತಾ ತನಗೆ ಬೇಕೆನಿಸಿದ ಅಡುಗೆಯನ್ನು ಮಾಡುವಂತೆ ಹೇಳುತ್ತಿದ್ದಳು. ತನ್ನ ಗಂಡನಿಗೆ ಇಲ್ಲಿಂದಲೇ ಊಟದ ಸರಬರಾಜು ನಡೆಯುತ್ತಿತ್ತು. ಯಜಮಾನರಿಗೆ ತಿಳಿಯುವಂತೆ ಹೇಳಬೇಕೆಂದುಕೊಂಡರೂ ಹೇಳಲಾಗಿರಲಿಲ್ಲ. ಪ್ರಶಾಂತನಿಗೆ ತಿಳಿಸಬೇಕೆಂದರೆ, ಮನೆಯಿಂದ ಹೊರ ಹೋಗಲೂ ಆಗುತ್ತಿರಲಿಲ್ಲ. ಅವನೂ ಮತ್ತೆ ಬಂದಿರಲಿಲ್ಲ.

ಈ ಮಧ್ಯೆ ಶಾರದಮ್ಮ ನಾಲ್ಕುದಿನಗಳ ಮಟ್ಟಿಗೆ ಮಗಳ ಊರಿಗೆ ಹೋಗಿ ಬರಬೇಕಾಗಿ ಬಂದಿತ್ತು. ಭಟ್ಟರಿಗೆ ಹೇಳಿ, ಅವರ ಒಪ್ಪಿಗೆಯನ್ನು ಪಡೆದು ಹೊರಟು ಹೋಗಿದ್ದಳು. ಈಗ ಕಾಮಾಕ್ಷಿಯೇ ಮನೆಗೆ ಯಜಮಾನಿ. ದೊಡ್ಡ ಬಂಗಲೆಯಂಥ ಮನೆಯಲ್ಲಿ ಯಜಮಾನಿಕೆ ಕೈಗೆ ಸಿಕ್ಕಾಗ, ಅವಳಲ್ಲಿ ಹೊಸ ಆಸೆ ಹುಟ್ಟಿಕೊಂಡಿತು. ತಾನು ಮನಸ್ಸು ಮಾಡಿದ್ದರೆ, ಭಟ್ಟನ ಹೆಂಡತಿಯಾಗಿ, ಈ ಮನೆಯ ಯಜಮಾನಿಯಾಗಿರುತ್ತಿದ್ದೆ. ಅದನ್ನು ತಾನಾಗಿಯೇ ಕಳೆದುಕೊಂಡಿದ್ದೆ. ಈಗ ಈ ಆಸ್ತಿಯಲ್ಲಿ ಅರ್ಧ ಭಾಗವನ್ನಾದರೂ ತನ್ನದಾಗಿಸಿಕೊಳ್ಳಬೇಕೆಂಬ ಹಂಬಲ ಹುಟ್ಟಿತು.

"ಭಟ್ಟ ನಿಮ್ಮಪ್ಪನ ಆಸ್ತಿ ವಿಷಯ ಏನ್ಮಾಡ್ತೆ! ಅದನ್ನೆಲ್ಲ ನಿಮ್ಮ ಚಿಕ್ಕಮ್ಮಂಗೇ ಮಾರ್ತೀಯೋ? ಅಥವಾ ನೀನೇ ವ್ಯವಸಾಯ ಮಾಡಿಸ್ತೀಯೋ....!"

"ನಾನು ಆ ವಿಷಯ ಏನೂ ಯೋಚಿಸಿಲ್ಲ......"

"ಇನ್ಯಾವಾಗ ಯೋಚಿಸ್ತೀಯ. ನಿನಗೇನು ವಯಸ್ಸು ಕಡಿಮೇನಾ! ನಿಂಗಿಂತ

ಚಿಕ್ಕೋಳು ಪ್ರೇಮಕ್ಕ. ಹರಹರಾ ಅಂತಂದು ಮೂರು ತಿಂಗಳಾಯ್ತು. ಅದು ಪಿತ್ರಾರ್ಜಿತ ಆಸ್ತಿ. ಅದರ ಮೇಲೆ ನಿನ್ನ ಮಕ್ಕಳಿಗೆ ಹಕ್ಕು ಜಾಸ್ತಿ. ನಾಳೆ ಅವರವರಲ್ಲಿ ಜಗಳ ಕದನ ಆಗುವ ಮೊದಲು ನೀನೇ ಎಲ್ಲಾ ಮಾಡ್ಬೇಕು. ನಿಂಗೇನು ಕಾನೂನು ಗೊತ್ತಿಲ್ವಾ?"

"ನಂಗೆಲ್ಲಾ ಗೊತ್ತಿದೆ. ನಾನು ಮಾಡ್ತೀನಿ..... ನಿಂಗ್ಯಾಕೆ ಚಿಂತೆ?"

"ನಮ್ಮ ಕಿಶೋರನ ಬಗ್ಗೆ ಏನು ಯೋಚ್ನೆ ಮಾಡಿದೀಯ.....? ಕಿಶೋರನೂ ನಿನಗೆ ಮಗನ ಸಮಾನ.... ಅವನ್ಗೂ ನೀನು ಒಂದು ಭಾಗ ಆಸ್ತಿ ಕೊಡಬೇಕು....." ಭಟ್ಟ ಅವಳನ್ನೇ ತೀಕ್ಷ್ಣವಾಗಿ ನೋಡಿದ. ಅವಳ ಮನಸ್ನಲ್ಲಿ ಏನಿದೆ ಅಂತ ಅರ್ಥ ವಾಗತೊಡಗಿತ್ತು. ಕಾಮಾಕ್ಷಿ ಇಲ್ಲಿಯೇ ಬಂದು ಇರತೊಡಗಿದ್ದ ಉದ್ದೇಶ ಸ್ಪಷ್ಟವಾಗಿತ್ತು.

"ಮೊದಲು ನಿನ್ನ ಮಗನ ವಿದ್ಯಾಭ್ಯಾಸ ಮುಗಿಯಲಿ. ಅವನಿಗೆ ಇಷ್ಟವಿದ್ದರೆ ಲಾ ಓದಲಿ. ನನ್ನ ಕೈ ಕೆಳಗೆ ಪ್ರಾಕ್ಟೀಸ್ ಮಾಡಲಿ."

"ಅವನೇನು ಓದ್ತಾನೋ ಬಿಡ್ತಾನೋ ಅದು ಅವನಿಗೆ ಬಿಟ್ಟದ್ದು. ಕೆಟ್ಟು ಹೋದ ನಿನ್ನ ಮಗಳ ಕೈ ಹಿಡಿದು ಉದ್ಧಾರ ಮಾಡಿದಾನೆ. ಅದಕ್ಕಾದ್ರೂ ಬೆಲೆ ಬೇಡ್ವಾ!"

"ಚಿನ್ಮಯೀನ ಅವನೇ ಆಸೆ ಪಟ್ಟು ಮದ್ವೆಯಾಗಿದಾನೆ. ನಾನೇನೂ ಕೇಳ್ಕೊಂಡಿರಲಿಲ್ಲ. ಹೊಸ ಹೊಸ್ದಾಗಿ ಏನೇನನ್ನೋ ಎತ್ಬೇಡ..... ನಿನ್ನ ಮಗನನ್ನು ಕಾಲೇಜಿಗೆ ಸೇರಿಸಿದೆ. ಓದಿಸಿದೆ. ನನ್ನ ಮನೇಲೇ ಇಟ್ಕೊಂಡಿದೀನಿ. ಇನ್ನೇನಾಗಬೇಕು?"

"ಇದನ್ನೆಲ್ಲ ನೀನು ನಿನ್ನ ಮಗಳ ಭವಿಷ್ಯಕ್ಕಾಗಿ ಮಾಡ್ತಿದೀಯ. ನನ್ನ ಮಗನ್ನ ಮುಂದೆ ತರುಕ್ಕಲ್ಲ. ಇದರಲ್ಲಿ ನಿನ್ನ ಸ್ವಾರ್ಥ ಅಡಗಿದೆ. ಕಿಶೋರ ನಿನ್ನ ಮಗಳನ್ನು ಮದ್ವೆ ಆಗ್ದೇ ಇದ್ದಿದ್ರೆ, ಈ ದಿನ ನೀನು ತಲೆ ಎತ್ತಿ ತಿರುಗಾಡುಕ್ಕೇ ಆಗ್ತಿರಲಿಲ್ಲ."

"ಆಯ್ತು. ನಿನ್ನಿಂದ, ನಿನ್ನ ಮಗನಿಂದ ನನಗೆ, ನನ್ನ ಮಗಳಿಗೆ ತುಂಬಾ ಉಪಕಾರವಾಗಿದೆ. ಈ ಉಪಕಾರಾನ ಹೇಗೆ ತೀರಿಸ್ಬೇಕೂಂತ ನನಗೆ ಚೆನ್ನಾಗಿ ಗೊತ್ತು. ನನ್ನ ಮನೆಯ ವ್ಯವಹಾರದಲ್ಲಿ ತಲೆ ಹಾಕಬೇಡ." ಎಂದು ಒರಟಾಗಿ ಹೇಳಿದಾಗ, ಅವಳಿಗೆ ಮುಖಭಂಗವಾದಂತಾಗಿತ್ತು. ಅವನನ್ನೇ ವಿಚಿತ್ರವಾಗಿ ನೋಡಿ, ಅಲ್ಲಿಂದ ಸರಿದಿದ್ದಳು.

ಭಟ್ಟನಿಗೆ ಅವಳ ಮನದ ಇಂಗಿತ ತಿಳಿಯಿತು. ಅವಳಿಂದ ತನಗೆ ತೊಂದರೆ ಉಂಟಾಗಬಹುದು ಎಂಬ ಅನುಮಾನ ಮೂಡಿತು. ತನ್ನ ಮನೆಯ ಪರಿಸ್ಥಿತಿಯ ಲಾಭವನ್ನು ಪಡೆಯುತ್ತಿರುವ ಕಾಮಾಕ್ಷಿಯ ಬಗ್ಗೆ ಅವನಲ್ಲಿ ಅಸಹ್ಯ ಮೂಡಿತು. ಪ್ರೇಮಾ ಬದುಕಿದ್ದಾಗ ಕಾಮಾಕ್ಷಿ ಎಂದೂ ಹೀಗೆ ಮಾತನಾಡಿರಲಿಲ್ಲವೆಂದು ಕೊಂಡ. ನಿಟ್ಟುಸಿರು ಹೊರಬಂತು.

* * *

ಅಧ್ಯಾಯ – ಮೂವತ್ತಾರು

ಭಟ್ಟನ ಮರುಮದುವೆ

"ನಾನು ನಾಲ್ಕು ದಿನ ಊರ್ನಲ್ಲಿ ಇರುಲ್ಲ. ಮನೆ ಕಡೆ ಜೋಪಾನ" ಎಂದು ಶಾರದಮ್ಮನಿಗೆ ಮಾತ್ರ ಹೇಳಿ, ಭಟ್ಟ ಹೊರಟಿದ್ದ. ಎಲ್ಲಿಗೆ ಹೋಗ್ತೀನಿ ಅಂತ ಅವನೂ ಹೇಳಿರಲಿಲ್ಲ. ಆಕೆಯೂ ಕೇಳಲಿಲ್ಲ.

"ಅಪ್ಪಾ, ನಾನೂ ಶ್ರೀಕರ ಇಬ್ಬರೂ ಚಿಕ್ಕಮ್ಮನ ಮನೆಗೆ ಹೋಗಿ ಬರ್ತೀವಪ್ಪಾ " ನಳಿನಿ ಉತ್ಸಾಹದಿಂದ ಕೇಳಿದಾಗ, ಭಟ್ಟ ಗದರಿದ.

"ಏನೂ ಬೇಡ....." ನಳಿನಿ ಮುಖ ಊದಿಸಿಕೊಂಡು ಶಾರದಮ್ಮನ ಬೆನ್ನ ಹಿಂದೆ ನಿಂತಳು. ಶಾರದಮ್ಮನಿಗೂ ಪಿಚ್ಚೆನಿಸಿತ್ತು. ಮಕ್ಕಳಿಬ್ಬರಿಗೂ ಪರೀಕ್ಷೆ ಮುಗಿದಿದೆ. ಮನೆಯಲ್ಲಿ ಬೇಸರ, ಎಲ್ಲಿಯಾದರೂ ಹೋಗಿ ಬಂದರೆ ಮನಸ್ಸು ಉಲ್ಲಾಸಗೊಳ್ಳುತ್ತೆ ಅಂತ ಅನ್ನಿಸಿದರೂ ಭಟ್ಟನ ಎದುರು ನಿಂತು ಮಾತನಾಡಲು ಆಕೆಗೂ ಧೈರ್ಯವಿಲ್ಲ. ಆದರೆ ಅದೇ ರಾತ್ರಿ ನವೀನ ಹಾಗೂ ಸುಹಾಸ ಬಂದು ಇಳಿದಾಗ, ನಳಿನಿ, ಶ್ರೀಕರನ ಮುಖ ಅರಳಿದವು.

ಭವಾನಿ ಮಕ್ಕಳಿಗೆಂದು ಹೊಸ ಬಟ್ಟೆಗಳನ್ನು ತಿಂಡಿಗಳನ್ನು ಕಳಿಸಿದ್ದಳು. ಅವರಿಬ್ಬರೂ ಬೆಂಗಳೂರಿನ ವಿಷಯಗಳನ್ನು ಬಣ್ಣಿಸಿ ಹೇಳುತ್ತಿದ್ದರೆ, ಇವರಿಬ್ಬರೂ ಬಾಯಿ ಬಿಟ್ಟುಕೊಂಡು ಕೇಳಿಕೊಳ್ಳುತ್ತಿದ್ದರು. ಪ್ರಶಾಂತನ ಮನೆಗೆ ಹೋಗಿ, ಅಲ್ಲಿಯೂ ಹರಟಿದರು. ಚಿನ್ಮಯಿ ಬಂದು ಅವರೊಡನೆ ಸೇರಿಕೊಳ್ಳಲಿಲ್ಲ.

"ಕಿಶೋರ, ನಿನ್ನ ಪರೀಕ್ಷೆ ಮುಗಿದ ಕೂಡ್ಲೇ ನಾವು ಬೇರೆ ಮನೆ ಮಾಡಿಕೊಂಡು ಹೊರಟು ಹೋಗೋಣ. ನಂಗ್ಯಾಕೋ ಇಲ್ಲಿ ಇರುಕ್ಕೇ ಭಯ ಆಗುತ್ತೆ." ಎಂದಿದ್ದಳು ಚಿನ್ಮಯಿ.

"ಭಯ ಯಾಕೆ? ನಾನು ಜತೇಲಿರ್ತೀನಿ. ಅಮ್ಮ ಇದಾಳೆ. ಯಾರಾದ್ರೂ ಏನಾದ್ರೂ ಅಂದ್ರಾ?"

"ಇಲ್ಲ. ಅಮ್ಮ ಕನಸ್ನಲ್ಲಿ ಬರ್ತಾಳೆ. ನನ್ನನ್ನ ಕನಸ್ನಲ್ಲಿ ಬೈತಾಳೆ. ನಾನು ಅಮ್ಮಂಗೆ ಅನ್ಯಾಯ ಮಾಡಿಬಿಟ್ಟೆ ಅಂತ ನನಗೆ ಅದೇ ಕೊರಗು...."

"ನಿನಗೆ ಭ್ರಮೆ. ನೀನೇ ಏನೇನೋ ಕಲ್ಪಿಸಿಕೊಳ್ತಿದೀಯ.. ನನಗೆ ಕೆಲಸ ಸಿಗದೇ ಎಲ್ಲಿಗೆ ಹೋಗೋದು? ಕೈಯಲ್ಲಿ ದುಡ್ಡು ಬೇಡ್ವಾ?"

"ಅಪ್ಪನ್ನ ಕೇಳೋಣ. ಕೊಡಬಹುದು."

"ನೀನೇ ಕೇಳು.... ಅವರು ಹಣ ಕೊಡ್ತೀನಿ ಅಂತ ಅಂದಾಗ ನಾನು ಬೇಡ ಅಂತ ಹೇಳಿದ್ದೆ. ಈಗ ಹೇಗೆ ಕೇಳೋದು?"

"ನೋಡು ಕಿಶೋರ, ನಾನು ನಿನ್ನನ್ನು ಪ್ರೀತಿಸಿ, ಮದ್ವೆ ಆದ್ರೂ, ನನಗೆ ನನ್ನದೇ ಆದ ಕೆಲವು ಆಸೆಗಳಿವೆ. ಅದನ್ನೆಲ್ಲ ಪೂರೈಸುಕ್ಕೆ ನಿನ್ಹತ್ರ ಸಾಕಷ್ಟು ಹಣ ಇಲ್ಲ ಅಂತ ನಂಗೂ ಗೊತ್ತು. ನಿಮ್ಮಮ್ಮ ಬೇರೆ ಇಲ್ಲೇ ಬಂದು ಸೇರಿಕೊಂಡಿದಾರೆ. ನಾನು ಅತ್ತೆ ಮನೇಲಿದೀನೋ, ತಾಯಿ ಮನೇಲಿದೀನೋ ಅಂತ ನಂಗೇ ಸಂಶಯ ಬರ್ತಿದೆ."

"ಅಮ್ಮ ಬಂದಿರೋದು ನಿನ್ನ ಬಾಣಂತನ ಮಾಡೋಕೆ. ಬೇಡಾಂತಿದ್ರೆ ಹೊರಟು ಹೋಗ್ತಾಳೆ."

"ನೀವು ಇಲ್ಲಿರಬೇಡಿ, ಹೋಗಿ ಅಂತ ಹೇಗೆ ಹೇಳೋದು! ನಾವು ಬೇರೆ ಮನೆ ಮಾಡಿಕೊಂಡು ನಮ್ಮ ಪಾಡಿಗೆ ನಾವು ಹೋದ್ರೆ ಅವ್ರೂ ಅವರ ಮನೆಗೆ ಹೋಗ್ತಾರೆ."

"ಸರಿ. ನಿಮ್ಮ ತಂದೆ ಊರಿಗೆ ವಾಪಸ್ಸು ಬರಲಿ. ಅವರ ಹತ್ರ ಮಾತಾಡ್ತೀನಿ. ಅವರು ಹಣದ ವ್ಯವಸ್ಥೆ ಮಾಡಿದ್ರೇ ನಾವು ಇಲ್ಲಿಂದ ಹೋಗೋಕೆ ಆಗೋದು....."

"ಅಪ್ಪ ನಮಗೆ ದುಡ್ಡು ಕೊಡೋದಿಲ್ಲ.... ನಮಗೆ ಕೊಟ್ರೆ ಎಲ್ರೂ ಪಾಲು ಕೇಳ್ತಾರೆ."

"ಯಾರು ಏನ್ಬೇಕಾದ್ರೂ ಮಾಡಲಿ. ನಮ್ಮ ಪಾಲು ಕೊಟ್ರೇ ನಾವು ಇಲ್ಲಿಂದ ಹೋಗೋದು ಅಂತ ಎಲ್ರಿಗೂ ಹೇಳಿದ್ರಾಯ್ತು."

"ಅಮ್ಮ ಬದುಕಿದ್ದಿದ್ರೆ ಹೀಗೆಲ್ಲಾ ಆಗ್ತಿರಲಿಲ್ಲ. ನಾವು ಇಲ್ಲೇ ಇರಬಹುದಾಗಿತ್ತು...... ಆಗ ಎಲ್ಲಾ ಸರಿಯಾಗಿತ್ತು. ಈಗ್ಯಾಕೋ ತುಂಬಾ ಬೇಜಾರಾಗುತ್ತೆ." ಚಿನ್ಮಯಿ ಅಳತೊಡಗಿದಾಗ ಕಿಶೋರ ಅವಳನ್ನು ಸಂತೈಸಿದ.

"ನಿಮ್ಮಪ್ಪಂಗೆ ಇವತ್ತೂಗ್ಗ ಮದುವೆಗೆ ಮುಂಚೆ ನಮ್ಮಿಬ್ಬರಲ್ಲಿ ಸಂಬಂಧ ಇತ್ತು ಅನ್ನೋ ಅನುಮಾನ ಬಂದಿಲ್ಲ. ನಾನು ನಿನ್ನನ್ನ ಮದುವೆಯಾಗಿ ಅವ್ರಿಗೆ ಉಪಕಾರ ಮಾಡಿದೀನೀಂತ ಅಂದ್ಕೊಂಡಿದಾರೆ. ಸ್ವಲ್ಪ ಏನಾದ್ರೂ ತಕರಾರು ತೆಗೆದ್ರೆ, ಖಂಡಿತಾ ನಾನು ಕೇಳಿದಷ್ಟು ಹಣ ಕೊಡ್ತಾರೆ. ಈಗಲೂ ನಿಮ್ಮಪ್ಪನ್ನ ಹೆದರಿಸುವ ಅಸ್ತ್ರಗಳು ನನ್ನ ಬಳಿ ಇವೆ." ಅವನು ನಕ್ಕಾಗ ಅವಳಿಗೆ ನಗಬೇಕೆನಿಸಲಿಲ್ಲ. ಆದರೆ ಬೇರೆ ಮಾರ್ಗವೂ ಇರಲಿಲ್ಲ.

* * *

ಊರಿಗೆ ಭಟ್ಟ ವಾಪಸ್ಸಾದ. ಒಬ್ಬನೇ ಬಂದಿರಲಿಲ್ಲ. ಅವನ ಜತೆಯಲ್ಲಿ ಒಬ್ಬಳು ಹೆಂಗಸೂ ಇದ್ದಳು. ಅವಳು ಯಾರಿರಬಹುದು ಎಂದು ಕುತೂಹಲದಿಂದ ಎಲ್ಲರೂ ಅವರಿಬ್ಬರನ್ನೇ ನೋಡಿದರು. ಭಟ್ಟ ಅವಳನ್ನು ಒಳಗೆ ಕರೆತಂದು,

ಕೂತ್ಕೊಳ್ಳುವಂತೆ ಹೇಳಿ, ಕೆಳ ದನಿಯಲ್ಲಿ ಏನೋ ಹೇಳಿದ. ಒಳಬಾಗಿಲಲ್ಲಿ ನಿಂತು ಒಬ್ಬೊಬ್ಬರೇ ಇಣುಕಿದರು. ಭಟ್ಟ ಅಧಿಕಾರವಾಣಿಯಲ್ಲಿ ಎಲ್ಲರನ್ನೂ ಹೊರಕ್ಕೆ ಕರೆದ. ಒಬ್ಬೊಬ್ಬರನ್ನೇ ಆ ಹೆಂಗಸಿಗೆ ಪರಿಚಯಿಸಿದ.

"ಇವರು ಶಾರದಮ್ಮ, ನಮ್ಮ ಮನೆಯಲ್ಲಿ ಅಡುಗೆಯವರಾಗಿದ್ದಾರೆ, ಇವಳು ಕಾಮಾಕ್ಷಿ ನಮ್ಮ ಬಳಗದವಳು, ಇವಳು ಚಿನ್ಮಯೀ, ನನ್ನ ಎರಡನೆಯ ಮಗಳು, ಇವನು ಕಿಶೋರ ನನ್ನ ಅಳಿಯ, ಇವಳು ನಳಿನಿ ನನ್ನ ಚಿಕ್ಕ ಮಗಳು, ಇವನು ನನ್ನ ಕೊನೆಯ ಮಗ ಶ್ರೀಕರ" ಆ ಹೆಂಗಸು ಎಲ್ಲರನ್ನೂ ನೋಡಿ ಮುಗುಳ್ನಕ್ಕಳು. ಎಲ್ಲರಲ್ಲೂ ಏನೋ ಕುತೂಹಲ, ಈ ಹೆಂಗಸು ಯಾರು.....? ಭಟ್ಟ ಪರಿಚಯ ಮಾಡಿಕೊಟ್ಟ. ಆಸ್ಫೋಟದಂತೆ ಎಲ್ಲರ ಕಿವಿಯನ್ನು ಅಪ್ಪಳಿಸಿತು. "ಇವಳು ನನ್ನ ಪತ್ನಿ ಶಾಂಭವಿ....." ಎಲ್ಲರೂ ಬೆಚ್ಚಿ ಬಿದ್ದು ಪರಸ್ಪರ ಮುಖ ಮುಖ ನೋಡಿ ಕೊಂಡರು.

"ನಾನು ಇವಳನ್ನು ಮದುವೆಯಾಗಿದೀನಿ. ಇಂದಿನಿಂದ ಇವಳು ಈ ಮನೆಯ ಯಜಮಾನಿತಿ" ಯಾರೂ ಯಾವ ಭಾವನೆಯನ್ನೂ ತೋರಗೊಡಲಿಲ್ಲ.

"ನಳಿನಿ, ನಿನ್ನ ಚಿಕ್ಕಮ್ಮನಿಗೆ ಮನೆಯನ್ನು ತೋರಿಸು" ನಳಿನಿ ಬೆಪ್ಪಾಗಿ ನಿಂತಿದ್ದಳು. "ಪುಸ್ಸೀ..... ನಾನು ಹೇಳಿದ್ದು ಕೇಳಿಸಲಿಲ್ವಾ?" ಅಬ್ಬರಿಸಿದ. ನಳಿನಿ ಚಿಕ್ಕಮ್ಮನ ಕಡೆ ನೋಡಿ ಬನ್ನಿ ಎನ್ನುವಂತೆ ಒಳಕ್ಕೆ ಕರೆದೊಯ್ದಳು. ಅವರಿಬ್ಬರ ಹಿಂದೆ ಶಾರದಮ್ಮ ನಡೆದಳು. ಭಟ್ಟ ತನ್ನ ಆಫೀಸ್ ರೂಮ್‌ಗೆ ಹೋದ. ಆ ಸಮಯಕ್ಕೆ ಕಾಯುತ್ತಿದ್ದವಳಂತೆ ಕಾಮಾಕ್ಷಿ ಅವನ ಹಿಂದೆ ನಡೆದಳು.

"ಇದೇನೋ ಸೀಭಟ್ಟ, ಈ ವಯಸ್ನಲ್ಲಿ ಮತ್ತೆ ಮದ್ವೆ ಯಾಕೆ ಬೇಕಿತ್ತು?" ಕೆಳ ದನಿಯಲ್ಲಿ ಕೇಳಿದಳು.

"ಮದುವೆಗೂ ವಯಸ್ಸಿಗೂ ಎಲ್ಲಿಂದ ಎಲ್ಲಿಗೆ ಸಂಬಂಧ?"

"ಮಕ್ಕಳಿಗೆ ಮದುವೆಯಾಗಿ ಮೊಮ್ಮಕ್ಕಳು ಹುಟ್ಟಿವೆ..... ಈಗ್ಯಾಕೆ ನಿನಗೆ ಮದುವೆಯಾಗುವ ಹುಚ್ಚು ಹಿಡಿಯಿತು!"

"ಇದು ನನ್ನ ಸ್ವಂತ ವಿಷಯ; ಕೇಳುವ ಹಕ್ಕು ನಿನಗಿಲ್ಲ."

"ನೀನು ತಪ್ಪು ಮಾಡಿದರೆ ಅದನ್ನು ಪ್ರಶ್ನಿಸುವ ಹಕ್ಕು ಎಲ್ಲರಿಗೂ ಇದೆ....."

"ನಾನು ಯಾವ ತಪ್ಪನ್ನೂ ಮಾಡಿಲ್ಲ. ನಿನಗಂತೂ ಯಾವ ಹಕ್ಕನ್ನೂ ಕೊಟ್ಟಿಲ್ಲ ನಾನು."

"ನಿಮ್ಮಪ್ಪ ಎರಡನೆಯ ಮದುವೆಯಾದಾಗ, ಅದನ್ನೇ ಒಂದು ದೊಡ್ಡ ಗುಡ್ಡ ಮಾಡಿ ಮನೆ ಬಿಟ್ಟು ಓಡಿ ಹೋಗಿದ್ದೆ. ಆಗ ನಿಮ್ಮಪ್ಪ ಮಾಡಿದ್ದು ತಪ್ಪು..... ಈಗ?"

"ಇಲ್ಲ. ನಾನು ಯಾವ ತಪ್ಪನ್ನೂ ಮಾಡಿಲ್ಲ. ಜನ ನನ್ನ ನಿನ್ನ ಬಗ್ಗೆ ಆಡಿ

ಕೊಳ್ಳುವುದಕ್ಕೆ ಆಸ್ಪದ ಕೊಡದಂತೆ, ಮತ್ತೆ ಮದುವೆಯಾಗಿದೀನಿ."

"ನಮ್ಮ ಬಗ್ಗೆ ಯಾಕೆ ಆಡಿಕೊಳ್ತಾರೆ.....! ನೀನೊಬ್ಬ....."

"ನನ್ನ ಹೆಂಡ್ತಿ ಸತ್ತು ಹೋಗಿದಾಳೆ..... ನೀನು ನಿನ್ನ ಗಂಡನನ್ನು, ಆ ಮನೆಯನ್ನು ಬಿಟ್ಟು ಬಂದು ಇಲ್ಲಿ ಯಾವ ಹಕ್ಕಿನಿಂದ ಇದೀಯ? ಹೆಂಡ್ತಿ ಇದ್ದರೆ ಯಾರೂ ಹಿಂದೆ ಆಡಿಕೊಳ್ಳುವಂತಿಲ್ಲ. ಅದಕ್ಕೆ ಮದುವೆಯಾದೆ."

"ನನಗೆ ಒಂದ್ಮಾತು ಇಲ್ಲಿರಬೇಡ ಹೋಗು ಅಂತ ಹೇಳಿದ್ದಿದ್ರೇ ಹೋಗಿರುತ್ತಿದ್ದೆ."

"ನಾನು ಬಾಯಿ ಬಿಟ್ಟು ಹೇಳ್ಬೇಕಾ ಕಾಮಾಕ್ಷಿ. ನಿನಗೇ ಗೊತ್ತಾಗಬೇಕು..... ಹೋಗು..... ಕಿಶೋರನ್ನ ಕಳಿಸು, ನಾನು ಅವನ ಹತ್ರ ಮಾತಾಡ್ಬೇಕು." ಕಾಮಾಕ್ಷಿ ಪೆಚ್ಚು ಮೋರೆ ಹಾಕಿಕೊಂಡು ಹೊರಬಂದು, ಕಿಶೋರನನ್ನು ಕಳಿಸಿದಳು.

"ಏನ್ಮಾವ ಕರೆದ್ರಂತೆ.....?"

"ನಿನ್ನ ಪರೀಕ್ಷೆ ಆಯ್ತಾ......? ಫಲಿತಾಂಶ ಯಾವಾಗ......?"

"ಇನ್ನೊಂದೆರಡು ತಿಂಗಳಲ್ಲಿ ಬರಬಹುದು. ಪಾಸಂತೂ ಆಗ್ತೀನಿ."

"ನಿಂಗೆ ಮುಂದೆ ಲಾ ಓದೋಕೆ ಆಸೆ ಇದ್ರೆ ಓದಿಸ್ತೀನಿ. ಆದರೆ......"

"ಇಲ್ಲ. ನಾನು ಕೆಲಸಕ್ಕೆ ಸೇರಿಕೊಳ್ಳೋಣ ಅಂತಿದೀನಿ....."

"ಸರಿ. ನಿನ್ನಿಷ್ಟ. ಚಿನ್ಮಯಿಯ ಬಾಣಂತನ ಮುಗಿದಿದೆ. ಇನ್ನು ನೀನು ಬೇರೆ ಮನೆ ಮಾಡಿಕೊಂಡು ಹೋಗುವುದು ಒಳ್ಳೆಯದು."

"ಎಲ್ಲಿಗೆ ಹೋಗಲಿ.....? ನಮಗೆಲ್ಲಿದೆ ಮನೆ? ಹಣ ಎಲ್ಲಿದೆ?"

"ಹಾಗಂತ ನೀನು ಜೀವಮಾನವೆಲ್ಲಾ ಇಲ್ಲಿರುಕ್ಕೆ ಆಗುಲ್ಲ. ನಾನು ಈ ಮನೆಯನ್ನು ಮಾರಿಬಿಟ್ಟಿದೀನಿ. ಬಂದ ಹಣದಲ್ಲಿ ನಿನಗೆ ಒಂದು ಭಾಗ ಕೊಡ್ತೀನಿ....."

"ನಮಗೆಲ್ಲ ತಿಳಿಸದೇ ಮನೆ ಮಾರಿದ್ರಾ....?"

"ಈ ಮನೆ ನನ್ನದು. ನನ್ನ ಸ್ವಂತ ಆಸ್ತಿ. ಯಾರನ್ನೂ ಕೇಳಬೇಕಾಗಿಲ್ಲ. ನಿನ್ನ ಭಾಗದ ಹಣವನ್ನು ತೆಗೆದುಕೊಂಡು ನಿನ್ನ ಪಾಡಿಗೆ ನೀನು ಹೊರಟು ಹೋಗು....." ಕಿಶೋರ ಪೆಚ್ಚಾದ. ಹೊರ ಬಂದು ಕಾಮಾಕ್ಷಿಗೆ ಆ ವಿಷಯವನ್ನು ತಿಳಿಸಿದ. ಅವಳು ಮತ್ತೆ ಒಳಬಂದಳು.

"ಮನೇನ ಮಾರಿ ಬಿಟ್ಟೆಯಂತೆ? ನಿನಗ್ಯಾಕೆ ಈ ದುರ್ಬುಧ್ಧಿ ಬಂತು! ನೀನೆಲ್ಲಿರ್ತೀಯ?"

"ನಾನು ನನ್ನ ಹೆಂಡತಿಯ ಮನೆಯಲ್ಲಿ ಇರ್ತೀನಿ. ಕಿಶೋರನಿಗೂ ಒಂದು ಪಾಲು ಕೊಡ್ತೀನಲ್ಲ. ಇನ್ನೇನು?"

"ಆದ್ರೂ ನೀನು ಈ ಮನೇನ ಮಾರಬಾರದಾಗಿತ್ತು. ನಳಿನಿ ಇನ್ನೂ ಮದುವೆ ಗಿದಾಳೆ."

"ವಿದ್ಯಾ ಆಗಲಿ, ಚಿನ್ಮಯಿ ಆಗಲಿ ನನಗೆ ಯಾವ ವಿಷಯವನ್ನೂ

ಹೇಳುತ್ತಿರಲಿಲ್ಲ. ಆದರೂ ನಾನು ನನ್ನ ಕರ್ತವ್ಯ ಮಾಡಿದೆ. ನಳಿನಿ ಏನು ಮಾಡುತ್ತಾಳೋ ನನಗೇನು ಗೊತ್ತು."

"ನಿನ್ನಂಥ ಬೇಜವಾಬ್ದಾರಿ ಮನುಷ್ಯ ಇನ್ನೊಬ್ಬ ಇಲ್ಲ. ಆದರಿಂದಲೇ ನಿನ್ನ ಮಕ್ಕಳು ನಿನ್ನನ್ನು ದ್ವೇಷಿಸುತ್ತಿದ್ದರು......"

"ನನ್ನನ್ನು ದ್ವೇಷಿಸುವ ಮಕ್ಕಳಿಗೆ ನಾನೇಕೆ ಮಾಡಬೇಕು? ಅವರವರ ಜೀವನವನ್ನು ಅವರೇ ರೂಪಿಸಿಕೊಳ್ಳುತ್ತಾರೆ. ಜನ್ಮಕೊಟ್ಟ ತಪ್ಪಿಗೆ ನನ್ನ ಕರ್ತವ್ಯ ನಾನು ಮಾಡ್ತೀನಿ. ನನ್ನ ಆಸ್ತಿಯಲ್ಲಿ ನಿನಗೂ ಏನಾದರೂ ಪಾಲು ಬೇಕಿದ್ರೆ ಹೇಳಿಬಿಡು ದಾನ ಅಂತ ಕೊಡ್ತೀನಿ....."

"ನೀನು ಕೊಡೋ ದಾನ ನನಗ್ಯಾಕೆ......? ಕಿಶೋರನಿಗೆ ಏನೇ ಕೊಟ್ಟರೂ, ಅದು ಚಿನ್ಮಯಿಯ ಭವಿಷ್ಯಕ್ಕೆ ತಾನೇ?"

"ಅದಕ್ಕೇ ತಾನೇ ಕಿಶೋರನಿಗೂ ಒಂದು ಪಾಲು ಕೊಡುತ್ತಿರುವುದು. ಇನ್ನು ನೀನು ಹೆಚ್ಚು ಮಾತನಾಡಿದರೆ, ಅದೂ ಇಲ್ಲ ಆಗುತ್ತೆ. ಚಿನ್ಮಯಿ ನಮ್ಮ ಮನೇಲೇ ಇರುತ್ತಾಳೆ. ನನಗೆ ನನ್ನ ಮಗಳು ಭಾರವಲ್ಲ."

"ನಿನಗೇ ಇರುಕ್ಕೆ ಠಿಕಾಣಿ ಇಲ್ಲ. ಚಿನ್ಮಯೀನ ಕರ್ಕೊಂಡು ನಿನ್ನ ಹೆಂಡ್ತಿ ಮನೇಲಿ ಇರ್ತೀಯಾ ನಾಚ್ಕೆ ಆಗುಲ್ವಾ.....?"

"ಸಂಬಂಧದ ಪ್ರಕಾರ, ಚಿನ್ಮಯಿನೂ ಶಾಂಭವಿಗೆ ಮಗಳೇ ಆಗುತ್ತಾಳೆ. ಚಿನ್ಮಯೀನ ಕಳಿಸು. ನಾನು ಅವಳ ಹತ್ರ ಮಾತಾಡ್ತೀನಿ."

"ಏನಪ್ಪಾ ಕರೆದ್ರಂತೆ?" ಅಂಜುತ್ತಾ ಒಳ್ಗ ಬಂದು ನಿಂತಳು ಚಿನ್ಮಯೀ.

"ಅಪ್ಪನ ಮನೆಯಲ್ಲಿ ಇದ್ದುದು ಸಾಕು. ಇನ್ನು ನಾವು ಬೇರೆ ವ್ಯವಸ್ಥೆ ಮಾಡ್ಕೊಂಡು ಹೋಗ್ಬೇಕು ಅಂತ ಅಷ್ಟೂ ಗೊತ್ತಾಗುಲ್ವಾ ನಿಮಗೆ?" ಅವಳ ಮುಖ ಕೆಂಪಾಯಿತು.

"ಯಾಕಪ್ಪಾ ಹೀಗೆಲ್ಲಾ ಹೇಳ್ತಿದೀರಿ! ನಾನೇನು ಮಾಡ್ದೆ?"

"ನೀನೇನೇನು ಮಾಡ್ದೆ ಅಂತೆ ನನಗೆಲ್ಲಾ ಗೊತ್ತಾಗಿದೆ. ಕಿಶೋರನ ಜತೆ ಚೆಲ್ಲಾಟ ಆಡಿ, ನಾಟಕ ಆಡಿ ನನ್ನ ಮುಖಕ್ಕೆ ಮಸಿ ಬಳಿಯುವ ಪ್ರಯತ್ನ ಮಾಡಿದೀಯ. ನಾನು ಎಲ್ಲವನ್ನೂ ಪತ್ತೆಹಚ್ಚಿದೀನಿ. ನನ್ನ ಹತ್ತಿರ ಆಧಾರಗಳಿವೆ. ಇದೇ ಕೊರಗಿನಲ್ಲಿ ನಿಮ್ಮಮ್ಮ ಸತ್ತು ಹೋದಳು. ನಾನು ಕಿಶೋರನನ್ನು ಓದಿಸಿದೆ. ಮುಂದೆ ಕೆಲಸವನ್ನು ಕೊಡಿಸುವ ತಾಕತ್ತಿದೆ. ಇನ್ನು ಮರ್ಯಾದೆಯಾಗಿ ಹೊರಟು ಹೋಗು. ಅಥವಾ ಹೋಗುಕ್ಕೆ ಇಷ್ಟವಿಲ್ಲದಿದ್ರೆ ಕಿಶೋರನ್ನ ಮರೆತು ಬಿಡು. ನಿನ್ನನ್ನ, ನಿನ್ನ ಮಗನ್ನ ಸಾಕುವ ಜವಾಬ್ದಾರಿ ನನಗೇ ಇರಲಿ."

"ಬೇಡಪ್ಪಾ, ಆದಷ್ಟು ಬೇಗ ಇಲ್ಲಿಂದ ಹೊರಟು ಹೋಗ್ತೀವಿ. ಚಿಕ್ಕಮ್ಮನ ಜತೆಯಲ್ಲಿ ಮಾತ್ರ ಇರುವುದಿಲ್ಲ."

"ಚಿಕ್ಕಮ್ಮ ಆದ್ರೇನಂತೆ. ಅವಳೂ ನಿನಗೆ ತಾಯೀನೇ...."

"ತಾಯಿ ತಾಯೀನೇ. ಚಿಕ್ಕಮ್ಮ ತಾಯಿಯಾಗಲು ಸಾಧ್ಯವಿಲ್ಲ." ಎಂದು ಬಿಕ್ಕಿಬಿಕ್ಕಿ ಅಳುತ್ತಾ ಹೊರಗೋಡಿದಳು. ಭಟ್ಟ ತನ್ನಲ್ಲೇ ನಕ್ಕ. ಮನೆಯಿಂದ ಮಗಳು; ಅಳಿಯನನ್ನು ಕಳುಹಿಸಲು ಒಂದು ಅನುಮಾನದ ಅಸ್ತ್ರವನ್ನು ಎಸೆದಿದ್ದ. ಸ್ವಲ್ಪ ಹೊತ್ತಿನಲ್ಲೇ ಕಾಮಾಕ್ಷಿ ದುಗುಡದಿಂದ ತನ್ನ ಮನೆಗೆ ಹೊರಟು ಹೋದಳು. ಕಿಶೋರ ಹೊರಗೆಲ್ಲೋ ಹೊರಟು ಹೋಗಿದ್ದ.

ಎಷ್ಟು ಕರೆದರೂ ಚಿನ್ಮಯಿ ಊಟಕ್ಕೆ ಇಳಿದು ಬರಲಿಲ್ಲ. ನಳಿನಿ ಹಾಗೂ ಶ್ರೀಕರ ಅಪ್ಪನಿಗೆ ಹೆದರಿ ಊಟಕ್ಕೆ ಬಂದು ಕುಳಿತರು. ಊಟದ ಅನಂತರ, ಶ್ರೀಕರನನ್ನು, ನಳಿನಿಯನ್ನು ತನ್ನ ರೂಮ್‌ಗೆ ಬರುವಂತೆ ಹೇಳಿದ.

"ಇಲ್ಲೇ ಚಿಕ್ಕಮ್ಮನ ಜತೆಯಲ್ಲಿದ್ದುಕೊಂಡು ಇಲ್ಲಿಯ ಕಾಲೇಜಿಗೆ ಹೋಗ್ತೀಯೋ ಅಥವಾ ಮೈಸೂರಿನಲ್ಲಿ ಕಾಲೇಜಿಗೆ ಸೇರ್ಕೋತೀಯೋ?" ನಳಿನಿ ಗೊಂದಲಕ್ಕೊಳಗಾದಳು. ಇದ್ದಕ್ಕಿದ್ದಂತೆ ಹೀಗೆ ಕರೆಸಿ, ಅಪ್ಪ ಕೇಳಬಹುದೆಂದುಕೊಂಡಿರಲಿಲ್ಲ ಅವಳು.

"ಅವಸರವೇನಿಲ್ಲ. ನಿಧಾನವಾಗಿ ಯೋಚಿಸಿ ಹೇಳು." ಮಗಳಿಗೆ ಅವಕಾಶವನ್ನು ಕೊಟ್ಟ. ಭಟ್ಟ ಶ್ರೀಕರನ ಕಡೆ ನೋಡಿದ.

"ನಳಿನಿ ಎಲ್ಲಿರ್ತಾಳೋ ಅಲ್ಲಿ ನಾನು ಅವಳ ಜತೇಲಿರ್ತೀನಿ. ನಳಿನಿಗೆ ಈಗ ನನ್ನ ಹೊರತು ಬೇರೆ ಯಾರೂ ಇಲ್ಲ. ಒಂಟಿಯಾಗಿ ಬಿಟ್ಟಿದ್ದಾಳೆ." ಶ್ರೀಕರ ಧೈರ್ಯಮಾಡಿ ಇಷ್ಟನ್ನು ಅಪ್ಪನ ಎದುರಿಗೆ ಹೇಳಿದ.

"ಸರಿ, ನಿಮ್ಮ ನಿಮ್ಮ ಇಷ್ಟ. ನಾನೂ ಯಾರಿಗೂ ಬಲವಂತ ಮಾಡುವುದಿಲ್ಲ."

ಆಗಲೇ ಕುಳಿತು ನಳಿನಿ, ಅಕ್ಕ ವಿದ್ಯಾಳಿಗೊಂದು, ಸಂತೋಷನಿಗೊಂದು ವಿವರವಾಗಿ ಪತ್ರವನ್ನು ಬರೆದಳು. ಶ್ರೀಕರ ತತ್‌ಕ್ಷಣವೇ ಪ್ರಶಾಂತನ ಮನೆಗೆ ಹೋಗಿ ಎಲ್ಲಾ ವಿಷಯವನ್ನು ತಿಳಿಸಿದ. ಅವನಿಗೂ ಅಪ್ಪ ಮಾಡಿದುದು ತಪ್ಪು ಎಂದೇ ಅನ್ನಿಸಿತು. ಅಪ್ಪ ಅಮ್ಮನನ್ನು ಇಷ್ಟು ಬೇಗ ಮರೆತು ಬಿಟ್ಟರೇ...... ಅವಳು ಸತ್ತರೆ ಸಾಕೆಂದು ಕಾಯುತ್ತಿದ್ದರೇ..... ಈ ಕ್ಷಣವೇ ಹೋಗಿ ಅಪ್ಪನೊಡನೆ ಜಗಳವಾಡಬೇಕೆಂದೆ ನಿಸಿತ್ತು. ಆದರೆ ಅಪ್ಪನ ಮನೆಗೆ ಕಾಲಿಡದೇ ವರ್ಷಗಳೇ ಕಳೆದಿವೆ. ಈಗ ಜಗಳವಾಡಲು ನಾನ್ಯಾರು ಎಂದುಕೊಂಡು ಸುಮ್ಮನಾದ.

* * *

ಅಧ್ಯಾಯ – ಮೂವತ್ತೇಳು

ನಾಟಕವೇ ನಿಜವಾಯಿತು

ಎಂದಿನಂತೆ ಶಾರದಮ್ಮ ಅಡುಗೆ ಮನೆಯ ಕೆಲಸಗಳನ್ನು ಮುಗಿಸಿ ಮಲಗಲೆಂದು ಬಂದಳು. ನಳಿನಿಯ ರೂಮ್‌ನಲ್ಲಿ ಶಾಂಭವಿಯೂ ಮಲಗಿರುವುದನ್ನು ಕಂಡಳು. ಎಬ್ಬಿಸುವ ಮನಸ್ಸಾಗದೇ ಊಟದ ಮನೆಗೆ ಹೋಗಿ ಮಲಗಿದಳು. ಅಲ್ಲಿಗೆ ಒಂದು ವಿಷಯ ಖಚಿತವಾಗಿತ್ತು. ಭಟ್ಟ ಯಾವುದೋ ಹೆಣ್ಣಿನ ಆಸೆಗೆ ಮದುವೆಯಾಗಿಲ್ಲವೆಂದು ಅರ್ಥವಾಗಿತ್ತು. ಅಲ್ಲದೇ ಕಾಮಾಕ್ಷಿಯೂ ತನ್ನ ಮನೆಗೆ ಹೊರಟು ಹೋಗಿದ್ದುದು ಸಮಾಧಾನಕರವಾಗಿತ್ತು.

ವಿದ್ಯಾ ತಂದೆಗೆ ನೇರವಾಗಿ ಪತ್ರವನ್ನು ಬರೆದು ದೂಷಿಸಿದ್ದಳು. "ಈ ವಯಸ್ಸಲ್ಲಿ ನಿಮಗೆ ಮರು ಮದುವೆಯಾಗುವ ಆಸೆ ಯಾಕೆ ಹುಟ್ಟಿತು! ಅಮ್ಮ ಬದುಕಿದ್ದಾಗ ಅವಳನ್ನು ಸುಖವಾಗಿಟ್ಟುಕೊಳ್ಳದ ನೀವು, ಈಗ ಸುಖವನ್ನು ಬಯಸಿ, ಮದುವೆಯಾಗುತ್ತಿರುವುದು ಅಮ್ಮನಿಗೆ ದ್ರೋಹ ಬಗೆದಂತೆ" ಎಂದೆಲ್ಲಾ ಬರೆದಿದ್ದಳು. ಭಟ್ಟ ಕಾಗದವನ್ನು ಓದಿ ಸೊಟ್ಟ ನಗೆ ನಕ್ಕ.

ಸಂತೋಷ ನಳಿನಿಗೆ ಪತ್ರ ಬರೆದಿದ್ದ. ಚಿಕ್ಕಮ್ಮನ ಬಗ್ಗೆ ವಿಚಾರಿಸಿದ್ದ. ಹಾಗೇ ನಳಿನಿ ಆಸೆ ಪಡುವುದಾದರೆ, ಮೈಸೂರಿನ ಕಾಲೇಜಿನಲ್ಲಿ ಹಾಸ್ಟೆಲ್‌ನಲ್ಲಿ ಅವಳ ಪ್ರವೇಶಕ್ಕೆ ಪ್ರಯತ್ನ ಪಡುವುದಾಗಿ ಬರೆದಿದ್ದ.

ಕಿಶೋರ ಭರದಿಂದ ಬೇರೆ ಮನೆಯನ್ನು ಹುಡುಕುತ್ತಿದ್ದ. ಚಿನ್ಮಯಿಗೆ ಯಾವ ಮನೆಯೂ ಹಿಡಿಸುತ್ತಿರಲಿಲ್ಲ. ಕಿಶೋರನಿಂದ ಅಪ್ಪ ಈ ಮನೆಯನ್ನು ಮಾರಿಬಿಟ್ಟಿರುವರೆಂಬ ವಿಷಯ ತಿಳಿದು ಅವಳಿಗೆ ದುಃಖವಾಗಿತ್ತು. ನಳಿನಿಯೊಂದಿಗೆ ಹೇಳಿಕೊಂಡು ಅತ್ತಿದ್ದಳು. ಬೇರೆ ಯಾವುದೋ ಚಿಕ್ಕ ಮನೆಯಲ್ಲಿ ಚಿಕ್ಕಮ್ಮನೊಂದಿಗೆ, ಇರುವುದಕ್ಕಿಂತ ಮೈಸೂರಿನಲ್ಲಿ ಹಾಸ್ಟೆಲ್‌ನಲ್ಲಿರುವುದು ವಾಸಿ ಎಂದು ತಂಗಿಗೆ ಬುದ್ಧಿವಾದವನ್ನು ಹೇಳಿದ್ದಳು.

ಶ್ರೀಕರ, ತಾನೂ ಹಾಗೂ ನಳಿನಿ ಇಬ್ಬರೂ ಮೈಸೂರಿನಲ್ಲಿ ಹೋಗಿರಲು ಸಿದ್ಧರಾಗಿರುವ ವಿಚಾರವನ್ನು ತಿಳಿಸಿದಾಗ ಭಟ್ಟನ ಮುಖ ಕಪ್ಪಾಯಿತು. ಅಂತೂ ತನ್ನ ಬಗ್ಗೆ ಯಾರಿಗೂ ಯಾವುದೇ ಭಾವನೆಗಳಿಲ್ಲ ಎನ್ನುವ ವಿಷಯ ಅರ್ಥವಾಗಿತ್ತು.

ತನ್ನ ತಾಯಿ ಸತ್ತಾಗ, ಅಪ್ಪ ಒಂಟಿತನವನ್ನು ಮರೆಯಲು, ಮನೆಯನ್ನು, ಆಸ್ತಿಯನ್ನು ಉಳಿಸಿಕೊಳ್ಳಲು ಮರು ಮದುವೆಯಾಗಿದ್ದರು. ಅಲ್ಲದೇ ಆಗ ಅವರಿಗೆ

ವಯಸ್ಸು ಚಿಕ್ಕದು, ಸಂಗಾತಿಯ ಅಗತ್ಯವಿತ್ತು. ಆದರೆ ಅದನ್ನು ಅಪರಾಧವೆಂದೇ ಭಾವಿಸಿದೆ. ಶ್ರೀಕರ ಹುಟ್ಟಿದ ಮೇಲೆ ತಾನಾಗಿಯೇ ಪ್ರೇಮಳೊಂದಿಗೆ ಹೆಚ್ಚು ಸಂಬಂಧ ವನ್ನಿಟ್ಟುಕೊಂಡಿರಲಿಲ್ಲ. ಆದರೆ ತಾನೆಂದೂ ಪ್ರೇಮಳ ಆಸೆ ಏನೆಂದು ತಿಳಿಯಲು ಪ್ರಯತ್ನಿಸಿರಲಿಲ್ಲ. ಆದರೆ ಈಗ ನನ್ನನ್ನು ಒಂಟಿಯಾಗಿ ಮಾಡಿ, ಒಂಟಿತನದ ಶಿಕ್ಷೆಯನ್ನು ಅನುಭವಿಸು ಅಂತ ಬಿಟ್ಟು ಹೊರಟು ಹೋಗಿಬಿಟ್ಟಳು. ಮಕ್ಕಳಿಗೂ ನನ್ನ ಮೇಲೆ ಗೌರವ ಆದರಗಳಿಲ್ಲ. ಆದರೂ ನನ್ನ ಕರ್ತವ್ಯವನ್ನು ನಾನು ಪೂರೈಸುತ್ತಿದ್ದೇನೆ ಎಂಬ ಅರಿವಿದೆ. ಮಕ್ಕಳಿಗಂತೂ ಯಾವ ಕೊರತೆಯೂ ಉಂಟಾಗಿಲ್ಲ ಅಂತ ನನ್ನ ಭಾವನೆ..... ಎಂದುಕೊಂಡು ಮೇಲ್ಭಾವಣಿಯನ್ನು ದಿಟ್ಟಿಸಿದ. ಅಲ್ಲಿ ಎಲ್ಲವೂ ಖಾಲಿ..... ಅಲ್ಲಿ ಏನೂ ಇಲ್ಲ..... ಯಾಕೋ ಏನೋ ಆ ಖಾಲಿ ಅವನನ್ನು ಹೆದರಿಸಿತು.

ಆ ದಿನ ಮುಖ ದಪ್ಪಗೆ ಮಾಡಿಕೊಂಡು ಹೋದ ಕಾಮಾಕ್ಷಿ ಮತ್ತೆ ಬಂದಿರ ಲಿಲ್ಲ. ಅವಳಿಗೆ ಏನೋ ಅಸಮಾಧಾನವಾಗಿದೆಯೆಂದು ಎಲ್ಲರಿಗೂ ಅರಿವಾಗಿತ್ತು. ಶಾಂಭವಿಯ ಚಲನವಲನಗಳನ್ನು ಶಾರದಮ್ಮ ಗಮನಿಸಿದ್ದರು. ಏನೋ ರಹಸ್ಯವಿರ ಬಹುದೇ ಅಂತೆನಿಸಿತ್ತು.

ಶಾಂಭವಿ ಹೆಚ್ಚು ಮಾತನಾಡುತ್ತಿರಲಿಲ್ಲ. ಹೆಚ್ಚು ಸಮಯವನ್ನು ಏನನ್ನೋ ಓದುವುದು, ಬರೆಯುವುದರಲ್ಲಿ ಕಳೆಯುತ್ತಿದ್ದಳು. ಕೆಲವು ವಿಷಯಗಳನ್ನು ಶಾರ ದಮ್ಮನಿಂದ ಕೇಳಿ ತಿಳಿದುಕೊಳ್ಳುತ್ತಿದ್ದಳು. ಹೇಳುವುದೋ ಬಿಡುವುದೋ ಎಂಬ ಅನುಮಾನವಿದ್ದರೂ, ಒಮ್ಮೊಮ್ಮೆ ಕೆಲವನ್ನು ಹೇಳಬೇಕಾಗುತ್ತಿತ್ತು. ಎಷ್ಟಾಗಲೀ, ಈಗ ಈಕೆಯೇ ಮನೆಯ ಯಜಮಾನಿತಿ, ತಿಳಿದೂ ಹೇಳದಿದ್ದರೆ ತಪ್ಪಾಗುತ್ತೇನೋ ಅಂತೆನ್ನಿಸುತ್ತಿತ್ತು.

* * *

ಕಿಶೋರನಿಗೆ, ಬಾಡಿಗೆಗೆ ಒಂದು ಮನೆ ಸಿಕ್ಕಿತ್ತು. ಕೆಲವೇ ದಿನಗಳಲ್ಲಿ ಆ ಮನೆಗೆ ಹೊರಟು ಹೋದ. ಈ ವಿಷಯ ಶಾರದಮ್ಮನಿಂದ ಭಟ್ಟನಿಗೆ ತಿಳಿಯಿತು. ಅವನು ಮನದಲ್ಲೇ ನಕ್ಕ. ಕಿಶೋರನೂ ಹೇಳಲಿಲ್ಲ ಅನ್ನುವುದು ಅವನ ಗಮನಕ್ಕೆ ಬಂದಿತ್ತು.

ನಳಿನಿ, ಶ್ರೀಕರ ಮೈಸೂರಿಗೆ ಹೊರಡುವ ಸಿದ್ಧತೆಗಳನ್ನು ಪೂರೈಸಿಕೊಂಡರು. ಭಟ್ಟ ತನ್ನ ಕಾರಿನಲ್ಲೇ ಅವರಿಬ್ಬರನ್ನು ಬಿಟ್ಟು ಬರಲು, ಡ್ರೈವರ್‌ನೊಡನೆ ಕಳುಹಿಸುವ ಏರ್ಪಾಟನ್ನು ಮಾಡಿದ. "ಹೋಗ್ಬರ್ತೀವಪಾ" ಎಂದು ಭಟ್ಟನಿಗೆ ಮಾತ್ರ ಹೇಳಿ ಅವರಿಬ್ಬರೂ ಕಾರನ್ನು ಹತ್ತಿದ್ದರು. ಇನ್ನು ತನ್ನ ಕರ್ತವ್ಯ ಮುಗಿಯಿತು ಅಂತಂದು ಕೊಂಡ.

ಈಗ ಮನೆಯಲ್ಲಿ ತಾವು ಮೂರು ಜನ ಮಾತ್ರ. ಉಳಿದಂತೆ ಎಲ್ಲಾ

ಖಾಲಿ. ಹಿಂದೊಮ್ಮೆ ಹುಟ್ಟಿದ ಮನೆಯನ್ನು ಬಿಟ್ಟು ತಾನು ದೂರ ಹೋಗಿದ್ದೆ...... ಈಗ ನನ್ನ ಮಕ್ಕಳೂ ಅದೇ ದಾರಿಯನ್ನು ಹಿಡಿದಿದ್ದಾರೆ...... ಇದರಲ್ಲಿ ಯಾರದು ತಪ್ಪು ಹೆಚ್ಚು ಎಂದು ಹೇಳುವುದು ಹೇಗೆ......? ಯಾರೋ ಕಕ್ಷಿದಾರರು ಬಂದುದ ರಿಂದ ಅವನ ಆಲೋಚನೆ ನಿಂತಿತು. ಯಾರಿಲ್ಲದಿದ್ದರೂ ಈ ಕಕ್ಷಿದಾರರು ಸದ್ಯಕ್ಕಂತೂ ಇದ್ದಾರೆ...... ಅವರಿಗೆ ನಾನು ಬೇಕು...... ಅವರಿದ್ದರೇ ನನ್ನ ಜೀವನ..... ಎಂದು ಕೊಂಡು ಅವರು ಬಂದ ವಿಷಯವನ್ನು ತಿಳಿದುಕೊಳ್ಳತೊಡಗಿದ.

ಯಾವುದೋ ಆಸ್ತಿಗೆ ಸಂಬಂಧಪಟ್ಟ ಕೇಸು. ಸ್ವಂತ ಮಕ್ಕಳೇ ತಂದೆಯನ್ನು ಆಸ್ತಿಯಲ್ಲಿ ಪಾಲು ಕೊಡಬೇಕೆಂದು ಪೀಡಿಸುತ್ತಿದ್ದರು. ಈ ತಂದೆಗೆ ಈಗಲೇ ಪಾಲನ್ನು ಕೊಡಲು ಇಷ್ಟವಿರಲಿಲ್ಲ. ಕೊಟ್ಟುಬಿಟ್ಟರೆ ಮುಂದೆ ಮಕ್ಕಳು ನಿರ್ಲಕ್ಷ್ಯ ಮಾಡುತ್ತಾರೆಂದು ಅಂಜಿಕೆ.

"ಪಾಲು ಸಿಕ್ಕಿದರೂ ನಿರ್ಲಕ್ಷ್ಯ ಮಾಡ್ತಾರೆ..... ಎಷ್ಟು ಮಕ್ಕಳಿಗೆ ತಂದೆ – ತಾಯಿಯ ಮೇಲೆ ನಿಜವಾದ ಪ್ರೀತಿ, ಗೌರವ ಇರುತ್ತದೆ?" ಎಂದು ಹೇಳಬೇಕೆಂದು ಕೊಂಡರೂ ಹೇಳಲಿಲ್ಲ. ಆ ಮಾತು ತನ್ನ ಅನುಭವಕ್ಕೆ ಬಂದುದೇ ಆದರೂ, ಇಲ್ಲಿ ಆ ವಿಷಯ ಅನಾವಶ್ಯಕ ಎಂದುಕೊಂಡು, ವಿವರಗಳನ್ನು ಕೇಳಿ ತಿಳಿದು ಕೊಂಡ. "ನಿಮ್ಮ ಸ್ಥಿರಾಸ್ತಿ ನಿಮ್ಮ ಸ್ವಯಾರ್ಜಿತವಾದರೆ, ನೀವು ಪಾಲು ಕೊಡಲೇ ಬೇಕೆಂದೇನಿಲ್ಲ...... ಈ ವಿಷಯವನ್ನು ನಿಮ್ಮ ಮಕ್ಕಳಿಗೆ ಮೊದಲು ತಿಳಿಸಿ.... ನೀವು ನಿಮ್ಮ ಇಚ್ಛೆಯಂತೆ ಯಾವುದೇ ಆಶ್ರಮ, ಮಠ, ಸ್ಕೂಲು ಇತ್ಯಾದಿಗಳಿಗೆ ನಿಮ್ಮ ಆಸ್ತಿಯನ್ನು ವಿಲ್ ಮೂಲಕ ಬರೆಯಬಹುದು. ಅದಕ್ಕೆ ಮುಂಚೆ ನಿಮ್ಮ ನಿಮ್ಮಲ್ಲೇ ಒಂದು ಇತ್ಯರ್ಥಕ್ಕೆ ಬನ್ನಿ. ಯಾವುದೂ ಇತ್ಯರ್ಥವಾಗದಿದ್ದರೆ ಮಕ್ಕಳು ಕಿರುಕುಳ ಕೊಡ್ತಿದಾರೆ ಅಂತ ಕೇಸು ಹಾಕಬಹುದು. ಕೆಲವು ದಿನಗಳನ್ನು ಬಿಟ್ಟು ಬನ್ನಿ" ಎಂದು ಹೇಳಿ ಕಳಿಸಿದ್ದ.

ಈ ತಂದೆ – ಮಕ್ಕಳ ಬಾಂಧವ್ಯ, ಕೇವಲ ಆಸ್ತಿಯ ಅಡಿಪಾಯದ ಮೇಲೆ ನಿಂತಿರುವುದು ಎಷ್ಟು ಹಾಸ್ಯಾಸ್ಪದ ಎಂದೆನಿಸಿತ್ತು. ಆ ಸಮಯದಲ್ಲಿ ತಾನು ಮಾಡಿದ್ದು ಸರಿ ಎನಿಸಿತ್ತು. ತನ್ನ ತಂದೆಯಿಂದ ಸಿಕ್ಕ ಆಸ್ತಿಯ ಭಾಗವನ್ನು ಮಾರಿ, ಬಂದ ಹಣವನ್ನು ಸಮನಾಗಿ ಆರು ಭಾಗ ಮಾಡಿ ಆರು ಜನ ಮಕ್ಕಳ ಹೆಸರಿನಲ್ಲಿ ಫಿಕ್ಸೆಡ್ ಡಿಪಾಸಿಟ್ ಮಾಡಿ ಬಡ್ಡಿಯ ಹಣ ಅವರ ಅಕೌಂಟ್‌ಗೆ ಸೇರುವ ವ್ಯವಸ್ಥೆಯನ್ನು ಮಾಡಿದ್ದ. ಈ ವಿಷಯವನ್ನು ತಾನಾಗಿಯೇ ಯಾರಿಗೂ ತಿಳಿಸಲಿಲ್ಲ.

ಕಿಶೋರನನ್ನು ಮತ್ತೆ ಎದುರು ಹಾಕಿಕೊಳ್ಳಲು ಇಷ್ಟಪಡದೇ, ಉಪಾಯವಾಗಿ ಅವನನ್ನು ಬೇರೆ ಕಳಿಸುವುದೇ ಸರಿ ಎಂದು ಅವನಿಗೆ ಮಾತ್ರ ಅನುಕೂಲ ಮಾಡಿ ಕೊಟ್ಟ. ಚಿನ್ಮಯಿಯನ್ನು ಅವಳ ವಿಷಯ ಎಲ್ಲಾ ತಿಳಿದಿದೆ ಎನ್ನುವಂತೆ ಹೆದರಿಸಿದ. ಈಗ ನಡೆದದ್ದೇನು ಎಂದು ತಿಳಿದರೂ ಒಂದೇ, ತಿಳಿಯದಿದ್ದರೂ ಒಂದೇ......

ಇಲ್ಲದಿದ್ದರೆ ಚಿನ್ಮಯಿ, ಕಾಮಾಕ್ಷಿ ಹಾಗೂ ಕಿಶೋರ ಇಷ್ಟು ಬೇಗ ಬೇರೆ ಮನೆ ಮಾಡಿಕೊಂಡು ಹೋಗುತ್ತಿರಲಿಲ್ಲ. ಕಾಮಾಕ್ಷಿಗೆ ಯಾಕೆ ಇಂಥ ದುರಾಸೆ ಮೂಡಿತು? ಅವಳಿಗೇಕೆ ನನ್ನ ಆಸ್ತಿಯ ಚಿಂತೆ......?

ಆಗ ಶಾರದಮ್ಮನಿಗೆ ಏನಾದರೂ ಸಹಾಯ ಮಾಡಬೇಕೆಂದು ಅನ್ನಿಸಿತು. ಆಕೆ ಎಂದೂ ತನ್ನ ಮನೆಯ ಕಷ್ಟಗಳನ್ನಾಗಲೀ, ತಾಪತ್ರಯಗಳನ್ನಾಗಲೀ ಹೇಳಿಕೊಂಡು ಸಹಾಯವನ್ನು ಕೇಳಿರಲಿಲ್ಲ. ಮನೆಯವರಲ್ಲಿ ಒಬ್ಬರಾಗಿ, ಎಲ್ಲರಿಗೂ ಬೇಕಾದವ ರಾಗಿದ್ದುಕೊಂಡು, ನಿಸ್ವಾರ್ಥವಾಗಿ ಕೆಲಸ ಮಾಡಿದ್ದಾರೆಂದು ನೆನಪಿಗೆ ಬಂತು. ತಾನೇ ಎದ್ದು ಅಡುಗೆಮನೆಯ ಬಾಗಿಲಿಗೆ ಬಂದ.

"ತಿಂಡಿ ಆಯ್ತಾ ಶಾರದಮ್ಮ?" ಶಾರದಮ್ಮ ಸಂಕೋಚಗೊಂಡಳು.

"ಆಗಿದೆ. ಕೆಲಸದವಳ ಹತ್ರ ಹೇಳಿಕಳಿಸಬಹುದಾಗಿತ್ತು. ನೀವ್ಯಾಕೆ ತೊಂದ್ರೆ ತಗೊಂಡ್ರಿ?"

"ತೊಂದ್ರೆ ಏನು! ನನ್ನ ಕೆಲಸವನ್ನು ನಾನೇ ಮಾಡಿಕೊಳ್ಳುವ ಅಭ್ಯಾಸ ವನ್ನು ಮಾಡಿಕೊಳ್ಳಬೇಕು. ಕೂತಲ್ಲೇ ಕೂಗಿದ್ರೆ ಓ ಅಂತ ಬರೋಕೆ, ಮನೇಲಿ ನನ್ನವರು ಯಾರಿದಾರೆ......?" ಭಟ್ಟನ ಮನದ ನೋವು ಹೊರ ಬಂದಿತ್ತು.

"ಕೂತ್ಕೊಳ್ಳಿ ಯಜಮಾನ್ರೇ...... ನಾನು ತಿಂಡಿ ತರ್ತೀನಿ....."

"ಶಾಂಭವಿ ಎಲ್ಲಿ? ಕಾಣ್ತಿಲ್ಲ....."

"ಮಹಡಿ ಮೇಲಿರಬಹುದು. ನಾನೊಂದು ಮಾತು ಕೇಳ್ಲಾ ಯಜಮಾನ್ರೇ..... ಈ ಮನೇನ ಮಾರಿ ಬಿಟ್ರಂತೆ ಹೌದಾ......? ಬೇರೆ ಮನೆ ಎಲ್ಲಿ ಮಾಡಿದೀರಿ.....!" ಭಟ್ಟ ನಕ್ಕ.

"ಇಲ್ಲ ಶಾರದಮ್ಮ..... ನಾನು ಈ ಮನೇನ ಮಾರಿಲ್ಲ. ನನ್ನ ಜೀವನ, ನನ್ನ ಸಂಸಾರ ಪ್ರಾರಂಭವಾದದ್ದು ಈ ಮನೆಯಲ್ಲಿ. ನಾನು ಬದುಕಿರುವವರೆಗೂ ಈ ಮನೆಯನ್ನು ಮಾರುವುದಿಲ್ಲ. ಹಾಗಂತ ಯಾರು ಹೇಳಿದ್ರು.....?"

"ಚಿನ್ಮಯಿ ಹೇಳಿದ್ಲು..... ನೀವು ಚಿಕ್ಕ ಯಜಮಾನಿತಿ ಮನೆಗೇ ಹೊರಟು ಹೋಗ್ತೀರಿ ಅಂತ ಸಹ ಹೇಳಿದ್ಲು..... ಹೌದಾ ಯಜಮಾನ್ರೇ?"

"ನಾನು ಮೊದಲ್ನಿಂದ ಸ್ವತಂತ್ರವಾಗಿ ಬದುಕಿದೋನು. ನಾನು ಯಾರ ಮನೆಯಲ್ಲೂ ಹೋಗಿ ಇರುವ ಮಾತು ಸುಳ್ಳು...... ನಾನು ಈ ಸುಳ್ಳು ಹೇಳ್ದೇ ಇದ್ದಿದ್ರೆ ಕಿಶೋರ, ಚಿನ್ಮಯೀ ಈ ಮನೆಯಿಂದ ಖಂಡಿತಾ ಹೋಗುತ್ತಿರಲಿಲ್ಲ. ಕಾಮಾಕ್ಷಿಯೂ ಇಲ್ಲೇ ಝುಂಡಾ ಹೂಡಿರುತ್ತಿದ್ದಳು. ಅದಕ್ಕೆಲ್ಲ ಒಂದು ಕೊನೆ ಕಾಣಿಸಲು ಈ ಉಪಾಯ ಹೂಡಿದೆ. ಇದಲ್ಲದೆ ಇನ್ನೂ ಒಂದು ಭಾರಿ ಸುಳ್ಳು ಹೇಳಿದೀನಿ. ಆ ವಿಷಯ ತಿಳಿದರೆ ನನ್ನ ಮಕ್ಕಳಿಗೆ ಸಂತೋಷವಾಗಬಹುದು...... ಆದರೂ ಕಡಿದು ಹೋದ ಸಂಬಂಧ ಮತ್ತೆ ಸೇರಲಾರದು....." ಯಾವ ವಿಷಯ

ಅಂತ ತಿಳೀದೇ ಶಾರದಮ್ಮ ಪೆಚ್ಚಾದಳು.

"ಶಾಂಭವಿಯನ್ನು ಕರೆದು ಬನ್ನಿ ಶಾರದಮ್ಮ. ಹಾಗೇ ಇಬ್ಬರಿಗೂ ತಿಂಡಿ ಕೊಡಿ. ಇವತ್ತು ಕೋರ್ಟ್‌ನಲ್ಲಿ ಸ್ವಲ್ಪ ಕೆಲಸವಿದೆ. ಬಂದ ಮೇಲೆ ನಾನು ಊರಿಗೆ ಹೋಗಬೇಕಾಗಿದೆ." ಶಾರದಮ್ಮ ಶಾಂಭವಿಯನ್ನು ಕರೆದು ಬಂದಳು. ಇಬ್ಬರಿಗೂ ತಿಂಡಿಯನ್ನು ತಂದಿತ್ತಳು.

ಇಬ್ಬರೂ ಕೆಳದನಿಯಲ್ಲಿ ಯಾವುದೋ ವಿಚಾರವನ್ನು ಕುರಿತು ಮಾತನಾಡುತ್ತಿದ್ದರು. ಅದೇನೆಂದು ಶಾರದಮ್ಮನಿಗೆ ಅರ್ಥವಾಗಲಿಲ್ಲ. ಕಾಫಿ ಕುಡಿದು ಭಟ್ಟ ಹೊರಗೆ ಹೊರಟುಹೋಗಿದ್ದ. ಶಾಂಭವಿ ತನ್ನ ಬಟ್ಟೆಗಳನ್ನು ಸೂಟ್‌ಕೇಸ್‌ಗೆ ತುಂಬಿಟ್ಟುಕೊಂಡಳು.

"ಅಮ್ಮಾ..... ನೀವೂ ಊರಿಗೆ ಹೊರಟಿದೀರಾ?" ಶಾರದಮ್ಮ ಕೇಳಿದಳು.

"ಹುಂ...... ಬಂದ ಕೆಲಸ ಆಯ್ತಲ್ಲ. ಇಲ್ಲಿ ನನಗೇನು ಕೆಲಸ?" ಮುಗುಳ್ನಕ್ಕಳು.

"ಅಂದ್ರೇ......? ನಂಗೆ ಗೊತ್ತಾಗ್ಲಿಲ್ಲ."

"ಯಾಕೆ? ಭಟ್ಟರು ನಿಮಗೆ ಹೇಳಲಿಲ್ವಾ?"

"ಇಲ್ಲವಲ್ಲ. ಯಾವ ವಿಷಯ?"

"ಕೇಳಿಕೊಂಡಿದ್ದರಿಂದ ನಾನು ಅವರ ಪತ್ನಿಯಂತೆ ನಟಿಸಬೇಕಾಯ್ತು....."

"ಅಂದ್ರೇ..... ಯಾಕೆ?"

"ಈ ಮನೇಲಿ ಏನೇನು ನಡೆದಿದೆ ಅನ್ನೋ ವಿಚಾರ ನನಗಿಂತ ನಿಮಗೆ ಚೆನ್ನಾಗಿ ಗೊತ್ತು. ಒಂದು ಇತ್ಯರ್ಥ ಮಾಡಬೇಕಾಗಿತ್ತು. ಭಟ್ಟರಿಗೆ ಮಕ್ಕಳ ಸಹಕಾರ ಇರಲಿಲ್ಲ. ಕಾಮಾಕ್ಷಿ ಅನ್ನೋರ ಮೇಲೆ ವಿಶ್ವಾಸವಿರಲಿಲ್ಲ. 'ನಾನು ಮದುವೆಯಾದರೆ ಮನೆಯಲ್ಲಿ ವಾತಾವರಣ ಬದಲಾಗುತ್ತೆ. ನಳಿನಿ, ಶ್ರೀಕರ ಇಬ್ಬರೂ ಚಿಕ್ಕವರು..... ಅವರಿಬ್ಬರನ್ನೂ ಒಂದು ನೆಲೆಗೆ ತರಬೇಕಾಗಿದೆ...... ನನ್ನ ಹೆಂಡತಿ ಬದುಕಿದ್ದಿದ್ರೆ ಈ ರೀತಿ ಆಗುತ್ತಿರಲಿಲ್ಲ." ಅಂತ ನನ್ನ ಕೈಲಿ ಹೇಳಿದರು... ಆಗ, ನಾನು ಮತ್ತೆ ಮದುವೆ ಯಾಗಬಹುದಲ್ಲ ಅನ್ನುವ ಸಲಹೆಯನ್ನು ಕೊಟ್ಟೆ. ಅವರಿಗೆ ಮರುಮದುವೆಯಾಗುವ ಆಸೆ ಇರಲಿಲ್ಲ. ಆದರೂ ಆ ನಾಟಕವನ್ನಾಡಬಹುದು ಅಂತನ್ನಿಸಿತ್ತು. ಹಾಗಾಗಿ ನನ್ನನ್ನು ಕರೆದುಕೊಂಡು ಬಂದರು......"

"ನಿಮಗೂ ಅವರಿಗೂ ಎಷ್ಟು ವರ್ಷದ ಸ್ನೇಹ?"

"ನಾನು ಸ್ಕೂಲ್‌ನಲ್ಲಿ ಟೀಚರ್ ಆಗಿದ್ದೆ. ಸಂಸ್ಥೆಯವರಿಂದ ಸಂಬಳ ಸರಿಯಾಗಿ ಸಿಗುತ್ತಿರಲಿಲ್ಲ. ಆಗ ನಾನು ಕಾನೂನು ಸಲಹೆ ತೆಗೆದುಕೊಳ್ಳಲು ಇವರ ಬಳಿಗೆ ಬಂದಿದ್ದೆ."

"ಹಾಗಾದ್ರೆ ಈ ಮನೆಗೆ ಮುಂಚೇನೂ ಬಂದಿದ್ರಾ.....?"

"ಹೂಂ ಹಿಂದೊಮ್ಮೆ ಬಂದಿದ್ದೆ. ಆದರೆ ಆಫೀಸ್ ರೂಮ್ನಲ್ಲಿ ಕುಳಿತು

ಮಾತಾಡಿಕೊಂಡು ಹೋಗಿದ್ದೆ......"

"ಈ ರೀತಿ ನಾಟಕ ಆಡೋಕೆ, ನಿಮ್ಮ ಮನೆಯವರು ಒಪ್ಪಿಗೆ ಕೊಟ್ರಾ.....?"

"ನನಗೆ ಯಾರೂ ಇಲ್ಲ ಶಾರದಮ್ಮ. ವಯಸ್ಸಾದ ಅತ್ತೆ ಇದ್ದರು. ಈಗ ಕೆಲವು ದಿನಗಳ ಹಿಂದೆ ಅವರೂ ತೀರಿ ಹೋದರು. ಅವರು ಬದುಕಿದ್ದಾಗಲೇ ನಾನು ಸ್ಕೂಲ್ ಕೆಲಸವನ್ನು ಬಿಟ್ಟು ಬಿಟ್ಟಿದ್ದೆ..... ನಿಮ್ಮ ಭಟ್ಟರಂತೆ ನಾನೂ ಏಕಾಂಗಿ..... ಅವರಿಗೆ ಮಕ್ಕಳಿದಾರೆ..... ಸಂಸಾರ ಇದೆ..... ನನಗೆ ಮಕ್ಕಳು, ಮರಿ ಯಾರೂ ಇಲ್ಲ....." ಶಾರದಮ್ಮ ಕನಿಕರದಿಂದ ಲೊಚಗುಟ್ಟಿದಳು. "ಇದನ್ನೆಲ್ಲ ನಾನು ಹೇಳ್ದೆ ಅಂತ ಭಟ್ಟರಿಗೆ ಹೇಳಬೇಡಿ. ಅವರಿಗೆ ಇಷ್ಟವಾಗುವುದಿಲ್ಲ."

"ಎಂಟು ಹತ್ತು ದಿನದಿಂದ ನೀವು ಇದ್ದದ್ದು ಮನೆ ತುಂಬಿದ ಹಾಗಿತ್ತು....."

"ಈ ಮನೆ ನನ್ನೊಬ್ಬಳಿಂದ ಹೇಗೆ ತುಂಬುತ್ತೆ! ಮಕ್ಕಳು, ಮೊಮ್ಮಕ್ಕಳು ಬಂದು ಹೋಗಿ ಮಾಡ್ತಿದ್ದರೆ ತುಂಬಿದ ಹಾಗಾಗುತ್ತೆ. ಆದರೆ ಅದು ಕನಸು......"

"ನೀವಾದ್ರೂ ಆಗ ಈಗ ಬರ್ತಾ ಇರಿ......"

"ಇಲ್ಲ ಶಾರದಮ್ಮ. ನಾನು ಪದೇ ಪದೇ ಬರೋಕೆ ಆಗುಲ್ಲ. ಇಲ್ಲಿಂದ ಒಂದು ಐವತ್ತು ಕಿಲೋಮೀಟರು ದೂರದಲ್ಲಿ ಮಹಿಳಾ ಆಶ್ರಮವಿದೆ. ಅಲ್ಲಿಗೆ ಹೋಗಿ ಸೇರ್ಕೊಳ್ಳೋಣ ಅಂತ ಅಂದುಕೊಂಡಿದೀನಿ. ಭಟ್ಟರನ್ನು ಚೆನ್ನಾಗಿ ನೋಡ್ಕೊಳ್ಳಿ. ನೀವು ಇಲ್ಲಿ ಇದ್ರೆ ಅವರ ಮಕ್ಕಳು ಆಗ ಈಗ ಬಂದು ಹೋಗ ಬಹುದು." ಶಾರದಮ್ಮ ಪೆಚ್ಚು ನಗೆ ನಕ್ಕಳು.

ಭಟ್ಟ ಮನೆಗೆ ಬಂದ. ಇಬ್ಬರೂ ಕುಳಿತು ಊಟ ಮಾಡಿದರು. "ಶಾಂಭವಿ ಹೊರಡೋಣ್ವಾ?" ಭಟ್ಟನ ಮಾತಿಗೆ ಆಕೆ ಹೂಂಗುಟ್ಟಿದಳು. "ಶಾರದಮ್ಮ ಒಬ್ಬರಿಗೇ ಇರೋಕೆ ಭಯ ಆದ್ರೆ ಪ್ರಶಾಂತನ ಮನೆಗೆ ಹೋಗಿರಿ." ಭಟ್ಟ ಹೇಳಿದ.

"ಎಷ್ಟು ಹೊತ್ತಿಗೆ ವಾಪಸ್ಸು ಬರ್ತೀರಿ.....? ನಾನು ನಿಮ್ಮಿಬ್ಬರಿಗೋಸ್ಕರ ಅಡುಗೆ ಮಾಡಿಟ್ಟುಕೊಂಡು ಕಾಯ್ತಾ ಇರ್ತೀನಿ." ಶಾಂಭವಿ ಭಟ್ಟನ ಕಡೆ ನೋಡದೇ ನುಡಿದಳು –

"ಇಲ್ಲ ಶಾರದಮ್ಮ, ನಾನು ಮತ್ತೆ ಬರುಲ್ಲ. ನಾನು ಬಂದ ಕೆಲಸ ಮುಗಿಯಿತು."

"ಹಾಗಾದ್ರೆ ಭಟ್ಟರು ಒಬ್ಬರೇ ಬರ್ತಾರಾ....? ಮತ್ತೆ ನೀವು ಎಲ್ಲಿರ್ತೀರಿ..?" ಆಗ ಭಟ್ಟ ಸಂಕ್ಷಿಪ್ತವಾಗಿ ಶಾಂಭವಿ ಹೇಳಿದ್ದನ್ನೇ ಹೇಳಿದ.... ಶಾರದಮ್ಮ ಶಾಂಭವಿಯ ಕೈ ಹಿಡಿದುಕೊಂಡಳು. ಕಣ್ಣುಗಳು ನೀರಾಡಿದವು.

"ಮನೆಯಲ್ಲಿ ಒಬ್ಬ ಯಜಮಾನಿತಿ ಇಲ್ಲದೇ ಈ ಮನೆಯಲ್ಲಿ ನಾನು ಹೇಗೆ ಇರುಕ್ಕೆ ಆಗುತ್ತೆ? ಜನ ಆಡಿಕೊಳ್ಳುವುದಿಲ್ಲವೇ? ನನಗೂ ಅಪ್ಪಣೆ ಕೊಡಿ. ನಾನೂ ಹೊರಟು ಹೋಗ್ತೀನಿ."

"ಇಲ್ಲ ಶಾರದಮ್ಮ. ನೀವು ನನಗೆ ಅಕ್ಕನ ಸಮಾನ. ನಾನು ಬದುಕಿರುವವ

ರೆಗೂ ನೀವು ನನ್ನ ಮನೆಯಲ್ಲಿರಬೇಕು....."

"ಆಡ್ಕೊಳ್ಳೋ ಜನಕ್ಕೆ ಈ ಸಂಬಂಧ ಏನು ಅರ್ಥವಾಗುತ್ತೆ.....? ನೀವೇ ಹೇಳಿ."

"ನಾನು ಯಾರಿಗೂ ಹೆದರುಲ್ಲ...... ನೀವು ಹೋಗಕೂಡದು."

"ಹಾಗಾದ್ರೆ ನನ್ನದೂ ಒಂದ್ಮಾತನ್ನು ನಡೆಸಿಕೊಡಿ..... ನಾಟಕದ ರೂಪದಲ್ಲೇ ಆದರೂ ಪರವಾಗಿಲ್ಲ. ನಾನು ಇವರನ್ನು ನಿಮ್ಮ ಪತ್ನಿ ಅಂತ ನಿಜವಾಗಿಯೂ ಅಂದುಕೊಂಡಿದ್ದೆ. ಅದನ್ನು ನಿಜ ಮಾಡಬೇಕು..... ಇವರು ಈ ಮನೆಯ ಯಜ ಮಾನಿತಿಯಾಗಿ ಸದಾ ಕಾಲಕ್ಕೂ ಇಲ್ಲಿರಬೇಕು."

"ಇಲ್ಲ ಶಾರದಮ್ಮ ಅದು ಸಾಧ್ಯವಿಲ್ಲ....." ಭಟ್ಟ ಅಡ್ಡಡ್ಡ ತಲೆಯಾಡಿಸಿದ.

"ಯಾಕೆ ಸಾಧ್ಯವಿಲ್ಲ? ನನ್ನನ್ನ ನಿಮ್ಮ ಅಕ್ಕ ಅಂತ ಭಾವಿಸಿದ ಮೇಲೆ, ನನಗೆ ಇದನ್ನು ಹೇಳುವ ಹಕ್ಕು ಇದೆ ಅಂತ ಭಾವಿಸಿದೀನಿ. ಮಕ್ಕಳು ಬೆಳೆದು ದೊಡ್ಡವರಾದ ಮೇಲೆ ಅವರವರ ದಾರಿ ಹಿಡಿದು ಹೋಗುವುದು ಸಹಜ...... ಆದರೆ ತುಂಬಿದಂಥ ಮನೆ ಈಗ ಬಿಕೋ ಅಂತನ್ನುತ್ತಿದೆ..... ಇವರು ಇಲ್ಲಿ ಇರಲು ಒಪ್ಪದಿದ್ದರೆ, ನಾನೂ ಖಂಡಿತಾ ಇಲ್ಲಿ ಇರುವುದಿಲ್ಲ....."

"ಶಾರದಮ್ಮಾ ಹೀಗೆಲ್ಲಾ ಮಾತಾಡ್ಬೇಡಿ.... ಭಟ್ಟರಿಗೆ ಊಟ – ತಿಂಡಿಗೆ ತೊಂದರೆ ಆಗುತ್ತೆ."

"ಅವರ ಊಟ–ತಿಂಡಿಯ ಕೆಲಸವನ್ನು ನೀವೇ ಯಾಕೆ ವಹಿಸಿಕೊಳ್ಳ ಬಾರದು?" ಶಾಂಭವಿ ಭಟ್ಟರ ಕಡೆ ನೋಡಿದಳು. ಭಟ್ಟನ ಕಣ್ಣಿನಲ್ಲೂ ಅದೇ ಆಸೆಯನ್ನು ಗುರುತಿಸಿದಳು. ಕಣ್ಣುಗಳು ಒಪ್ಪಿಗೆಯನ್ನು ಸೂಚಿಸಿದವು. ಶಾರದಮ್ಮನ ಮುಖದಲ್ಲಿ ಮಂದಹಾಸ ಮಿನುಗಿತು.

ಬಾಳಸಂಜೆಯ ಬಾನಿನಲ್ಲಿ ಹೊನ್ನಿನ ಕಿರಣಗಳು ಹರಡಿದವು. ತಂಗಾಳಿ ಬೀಸಿತು.

o o o o o

o o o o o

* * * * *

* * *

ರೆಗೂ ನೀವು ನನ್ನ ಮನೆಯಲ್ಲಿರಬೇಕು....."

"ಆಡ್ಕೊಳ್ಳೋ ಜನಕ್ಕೆ ಈ ಸಂಬಂಧ ಏನು ಅರ್ಥವಾಗುತ್ತೆ.....? ನೀವೇ ಹೇಳಿ."

"ನಾನು ಯಾರಿಗೂ ಹೆದರುಲ್ಲ...... ನೀವು ಹೋಗಕೂಡದು."

"ಹಾಗಾದ್ರೆ ನನ್ನದೂ ಒಂದ್ಮಾತನ್ನು ನಡೆಸಿಕೊಡಿ..... ನಾಟಕದ ರೂಪದಲ್ಲೇ ಆದರೂ ಪರವಾಗಿಲ್ಲ. ನಾನು ಇವರನ್ನು ನಿಮ್ಮ ಪತ್ನಿ ಅಂತ ನಿಜವಾಗಿಯೂ ಅಂದುಕೊಂಡಿದ್ದೆ. ಅದನ್ನು ನಿಜ ಮಾಡಬೇಕು..... ಇವರು ಈ ಮನೆಯ ಯಜಮಾನಿತಿಯಾಗಿ ಸದಾ ಕಾಲಕ್ಕೂ ಇಲ್ಲಿರಬೇಕು."

"ಇಲ್ಲ ಶಾರದಮ್ಮ ಅದು ಸಾಧ್ಯವಿಲ್ಲ....." ಭಟ್ಟ ಅಡ್ಡಡ್ಡ ತಲೆಯಾಡಿಸಿದ.


"ಯಾಕೆ ಸಾಧ್ಯವಿಲ್ಲ? ನನ್ನನ್ನ ನಿಮ್ಮ ಅಕ್ಕ ಅಂತ ಭಾವಿಸಿದ ಮೇಲೆ, ನನಗೆ ಇದನ್ನು ಹೇಳುವ ಹಕ್ಕು ಇದೆ ಅಂತ ಭಾವಿಸಿದೀನಿ. ಮಕ್ಕಳು ಬೆಳೆದು ದೊಡ್ಡವರಾದ ಮೇಲೆ ಅವರವರ ದಾರಿ ಹಿಡಿದು ಹೋಗುವುದು ಸಹಜ...... ಆದರೆ ತುಂಬಿದಂಥ ಮನೆ ಈಗ ಬಿಕೋ ಅಂತನ್ನುತ್ತಿದೆ..... ಇವರು ಇಲ್ಲಿ ಇರಲು ಒಪ್ಪದಿದ್ದರೆ, ನಾನೂ ಖಂಡಿತಾ ಇಲ್ಲಿ ಇರುವುದಿಲ್ಲ....."

"ಶಾರದಮ್ಮಾ ಹೀಗೆಲ್ಲಾ ಮಾತಾಡ್ಬೇಡಿ.... ಭಟ್ಟರಿಗೆ ಊಟ - ತಿಂಡಿಗೆ ತೊಂದರೆ ಆಗುತ್ತೆ."

"ಅವರ ಊಟ-ತಿಂಡಿಯ ಕೆಲಸವನ್ನು ನೀವೇ ಯಾಕೆ ವಹಿಸಿಕೊಳ್ಳಬಾರದು?" ಶಾಂಭವಿ ಭಟ್ಟರ ಕಡೆ ನೋಡಿದಳು. ಭಟ್ಟನ ಕಣ್ಣಿನಲ್ಲೂ ಅದೇ ಆಸೆಯನ್ನು ಗುರುತಿಸಿದಳು. ಕಣ್ಣುಗಳು ಒಪ್ಪಿಗೆಯನ್ನು ಸೂಚಿಸಿದವು. ಶಾರದಮ್ಮನ ಮುಖದಲ್ಲಿ ಮಂದಹಾಸ ಮಿನುಗಿತು.

ಬಾಳಸಂಜೆಯ ಬಾನಿನಲ್ಲಿ ಹೊನ್ನಿನ ಕಿರಣಗಳು ಹರಡಿದವು. ತಂಗಾಳಿ ಬೀಸಿತು.

ಂ ಂ ಂ ಂ ಂ
ಂ ಂ ಂ ಂ ಂ
* * * * *
* * *





'ತರಂಗ' ವಾರಪತ್ರಿಕೆಯಲ್ಲಿ ಮೂವತ್ತೇಳು ಕಂತುಗಳಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡ 'ಮುಸ್ಸಂಜೆಯ ಮುನ್ನ' ಎಂಬ ಕಾದಂಬರಿಯು ಈಗ ಪುಸ್ತಕ ರೂಪದಲ್ಲಿ ಪ್ರಕಟಗೊಂಡಿದೆ.

ದರ್ಪವನ್ನು ಸಾಧನವಾಗಿಟ್ಟುಕೊಂಡು, ಮನೆ ಮಂದಿಯನ್ನೆಲ್ಲಾ ತನ್ನ ಹದ್ದುಬಸ್ತಿನಲ್ಲಿಟ್ಟುಕೊಳ್ಳಬಲ್ಲೆ ಎಂಬ ಅಹಂಕಾರದಿಂದ ಮೆರೆದ ವ್ಯಕ್ತಿ ವೃತ್ತಿಯಲ್ಲಿ ವಕೀಲ. ಕಾನೂನು ಬದ್ಧವಾಗಿ, ನ್ಯಾಯ ನಿಷ್ಠೆಗಳಿಗೆ ಕೋರ್ಟಿನಲ್ಲಿ ವಾದಿಸಿ, ಹೆಸರನ್ನು ಹಣವನ್ನು ಗಳಿಸಿದವನಾದರೂ, ಮಡದಿ ಮನಸಾರೆ ಮೆಚ್ಚುವ ಪತಿಯಾಗಲಿಲ್ಲ, ಸ್ವಂತ ಮಕ್ಕಳಿಗೆ ಹೆಮ್ಮೆಯ ತಂದೆಯಾಗಲಿಲ್ಲ. ಗಂಡನ ಬಗ್ಗೆ ಎಂದೂ ಸುಮಧುರ ಭಾವನೆಗಳು ಮೂಡಲೇ ಇಲ್ಲ. ಮಕ್ಕಳಿಗೆ ತಂದೆಯ ಬಗ್ಗೆ ಭಯಮಿಶ್ರಿತ ಉದಾಸೀನ. ತನ್ನ ಇಚ್ಛೆಯಂತೆಯೇ ಎಲ್ಲವೂ ನಡೆಯಲೇಬೇಕೆಂಬ ಹಠದ ಹುನ್ನಾರದಲ್ಲಿ ಅವನು ಯಾರಿಗೂ ಹತ್ತಿವಾಗಲೇ ಇಲ್ಲ. ಗಂಡಹೆಂಡಿರ ಭಾವನೆಗಳಲ್ಲಿ ಬಿರುಕು... ತಂದೆಮಕ್ಕಳಲ್ಲಿ ಬೀಡುಬಿಟ್ಟ ಅಂತರ... ಈ ದೆಸೆಯಲ್ಲೇ ದಿನಗಳು ಉರುಳಿಹೋಗುತ್ತವೆ. ಹಗಲು ಕಳೆದು ಸಂಜೆಯ ಕಡೆಗೆ ದಿನಗಳು ಸರಿಯುವಾಗ ಅವನ ಜವಾಬ್ದಾರಿಗಳು ಹೆಚ್ಚುತ್ತವೆ... ಆದರೆ ತುಮುಲಗಳನ್ನು ಹೊರಗೆಡಹುವುದಿಲ್ಲ. ಆದರೆ ಸಂಜೆಯ ಬಾನಿನಲ್ಲಿ ಅವನಿಗಾಗಿ ಏನೂ ಉಳಿದಿಲ್ಲವೆಂಬ ಅರಿವು ಮೂಡಿದಾಗ, ಕೆಂಪು ಕಿರಣಗಳ ಮಬ್ಬು ಬೆಳಕಿನಲ್ಲಿ ಹುಡುಕಾಟವನ್ನು ನಡೆಸುತ್ತಾನೆ. ಸ್ವಾರ್ಥಿಯಾಗುತ್ತಾನೆ. ಆದರೆ ವ್ಯಥೆಯು, ಪರಿತಾಪದ ನಿಟ್ಟುಸಿರು ಹೊರಬರುವುದಿಲ್ಲ. ಆಸೆ ನಿರಾಸೆಗಳ ನಡುವೆ ತೂಗುವಾಗ ಸೋಲುವ ಅನುಭವವನ್ನು ವ್ಯಕ್ತಗೊಳಿಸುವುದಿಲ್ಲ.

– ಪದ್ಮಾ ಶ್ರೀಧರ್